# ಆಟಿಕೆ

## ಪ್ರಿಸ್ಕೂಲ್ ಚಟುವಟಿಕಾ ಪುಸ್ತಕ

## ಅಧ್ಯಾಪಕ ಕೈಪಿಡಿ



ಕೇರಳ ಸರಕಾರ
ಶಿಕ್ಷಣ ಇಲಾಖೆ

*ತಯಾರಿಸಿದವರು*

**ರಾಜ್ಯ ಶಿಕ್ಷಣ ಸಂಶೋಧನೆ ತರಬೇತಿ ಸಮಿತಿ (SCERT)**

**ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ – 695012**

Phone: 0471 - 2341883, 2340323, e-mail: scertkerala@gmail.com



*Prepared by:*
State Council of Educational
Research & Training (SCERT)
Poojappura, Thiruvananthapuram -12,
Kerala. E-mail:scertkerala@gmail.com

*Type setting by:*
SCERT Computer Lab.

©
Government of Kerala
Education Department
2016

# ಮುನ್ನುಡಿ

ಶೈಶವಾವಸ್ಥೆಯನ್ನು ಜೀವನದ ವಿಶಿಷ್ಟವಾದ ಹಂತವಾಗಿ ಕಾಣಬೇಕಾಗಿದೆ. ಇದು ಕ್ಷಿಪ್ರಗತಿಯಿರುವ ಮೆದುಳಿನ ವಿಕಾಸ ಮತ್ತು ಶಾರೀರಿಕ ಬೆಳವಣಿಗೆ ನಡೆಯುವ ಸಮಯವಾಗಿದೆ. ಈ ಹಂತದಲ್ಲಿ ಮಕ್ಕಳ ಪರಿಪಾಲನೆ, ಸಂರಕ್ಷಣೆ ಮತ್ತು ವಿದ್ಯಾಭ್ಯಾಸವನ್ನು ಬಹಳ ಶ್ರದ್ಧೆಯಿಂದ ಕಾರ್ಯಗತಗೊಳಿಸಬೇಕಾಗಿದೆ. ಸೃಜನಾತ್ಮಕವೂ, ಕ್ರಿಯಾಶೀಲವೂ, ಪರಿಸರ ಸಂಬಂಧಿಯೂ, ಜೀವನ ಸಂಬಂಧಿಯೂ ಆದ ಒಂದು ಚಟುವಟಿಕಾಧಾರಿತ ಕಾರ್ಯಕ್ರಮವು ನಮಗೆ ಅಗತ್ಯವಾಗಿದೆ. ಈ ಶಿಕ್ಷಣ ಪದ್ಧತಿಯು ಬದಲಾಗುತ್ತಿರುವ ಸಮಾಜದ ಅಗತ್ಯಗಳೊಂದಿಗೆ ಮಕ್ಕಳ ವಿಕಾಸಕ್ಕೆ ಸಂಬಂಧಪಟ್ಟ ವೈಜ್ಞಾನಿಕ ಸಂಶೋಧನೆಗಳ ಆಧಾರದಲ್ಲಿ ಹೊಸ ದೃಷ್ಟಿಕೋನಗಳನ್ನು ಒಳಗೊಂಡಿರಬೇಕು.

ಈ ಗುರಿಯೊಂದಿಗೆ SCERT ಯ ನೇತೃತ್ವದಲ್ಲಿ ಒಂದು ಸಮೀಪನ ರೂಪರೇಖೆಯನ್ನು ಮತ್ತು ಪಠ್ಯಪದ್ಧತಿಯನ್ನು ರೂಪೀಕರಿಸಲಾಯಿತು. ಅದರ ಆಧಾರದಲ್ಲಿ ಪ್ರಿಸ್ಕೂಲ್ ಅಧ್ಯಾಪಿಕೆಯರಿಗಿರುವ ಕೈಪಿಡಿ ಸಿದ್ಧವಾಗಿದೆ.

ಶಿಶು ವಿಕಾಸ ಎಂಬುದು ಹಲವು ಮಂಡಲಗಳಲ್ಲಿ ನಡೆಯುವ ಕ್ಲಿಷ್ಟಕರವಾದ ಬದಲಾವಣೆಗಳ ಸಂಯೋಜಿತ ಫಲಿತಾಂಶವಾಗಿದೆ. ಶಾರೀರಿಕ, ವೈಜ್ಞಾನಿಕ, ಭಾಷೆ, ಭಾವನಾತ್ಮಕ, ಆಸ್ವಾದನೆ, ಸೃಜನಾತ್ಮಕ ಮೊದಲಾದ ಮಂಡಲಗಳಲ್ಲಿ ಉಂಟಾಗುವ ಗುಣಾತ್ಮಕ ಬದಲಾವಣೆಗಳು ಭವಿಷ್ಯದಲ್ಲಿ ಸಾಮಾಜಿಕ ಜೀವನದ ವಿಭಿನ್ನ ವಲಯಗಳಲ್ಲಿ ಅಪಾರವಾದ ಕೊಡುಗೆಗಳನ್ನು ನೀಡಲು ವ್ಯಕ್ತಿಗಳನ್ನು ಸಮರ್ಥರನ್ನಾಗಿಸುವುದು. ಅನುಭವಗಳ ಮೂಲಕ ಹಾದುಹೋಗಿ ನಿರೀಕ್ಷಣೆ – ಪ್ರಯೋಗಾತ್ಮಕ – ವಿಶ್ಲೇಷಣೆ ಪ್ರಕ್ರಿಯೆಗಳಲ್ಲಿ ವ್ಯಾಪ್ತರಾಗುವಾಗ ಮಕ್ಕಳಲ್ಲಿ ಜ್ಞಾನ, ಸಾಮರ್ಥ್ಯ ಮತ್ತು ಮನೋಭಾವ ರೂಪುಗೊಳ್ಳುತ್ತದೆ. ಈ ರೂಪೀಕರಣವು ಮಕ್ಕಳ ಪ್ರಾಯ, ಸ್ವಭಾವ ಎಂಬಿವುಗಳನ್ನು ಗಣನೆಗೆ ತೆಗೆದುಕೊಂಡು ಬದುಕುವ ಪರಿಸರವನ್ನು ಕೂಡಾ ಪರಿಗಣಿಸಿಕೊಂಡು ನಡೆಯುತ್ತದೆ. ಪ್ರೋತ್ಸಾಹದಾಯಕ ದೃಷ್ಟಿಕೋನವನ್ನು ಇಟ್ಟುಕೊಂಡು ಪ್ರಿಸ್ಕೂಲ್ ಅಧ್ಯಾಪಿಕೆಯರು ಇದಕ್ಕೆ ಬೇಕಾಗಿರುವ ವಾತಾವರಣವನ್ನು ಸೃಷ್ಟಿ ಮಾಡಬೇಕು. ಶಿಶು ಸ್ನೇಹಿ ವಾತಾವರಣದಲ್ಲಿ ಮಗು ನಿರಂತರವಾಗಿ ಕೇಳಲು ಮತ್ತು ಹೇಳಲಿರುವ ಭಾಷಾ ಪರವಾದ ವಿನಿಮಯವು ಇದಕ್ಕೆ ಅತಿ ಅಗತ್ಯವಾಗಿದೆ.

ಸ್ವಯಂ ವಿಕಾಸ ಹೊಂದಲು ಮತ್ತು ಸಮಾಜದಲ್ಲಿ ವಿಶೇಷವಾದ ರೀತಿಯಲ್ಲಿ ಕ್ರಿಯಾಶೀಲರಾಗಲು ಪ್ರತಿಯೊಂದು ಮಗುವಿಗೆ ಹಕ್ಕು ಇದೆ. ಆರ್ಥಿಕ ಪರಿಸ್ಥಿತಿ, ಕುಟುಂಬದ ಹಿನ್ನೆಲೆ, ಸಾಂಸ್ಕೃತಿಕ ಪರಿಸರ ಎಂಬಿವುಗಳ ಅಂತರ ಒಂದು ಮಗುವಿನ ಬೆಳವಣಿಗೆ ಮತ್ತು ವಿಕಾಸಕ್ಕೆ ತಡೆಗೋಡೆಯಾಗಬಾರದು. ನಿರ್ದಿಷ್ಟ ಪ್ರಾಯದಲ್ಲಿರುವ ಎಲ್ಲಾ ಮಕ್ಕಳನ್ನು ಪರಿಗಣಿಸಿಕೊಂಡು ಈ ಪುಸ್ತಕವನ್ನು ತಯಾರಿಸಲಾಗಿದೆ. ಇದನ್ನು ಅರ್ಥೈಸಿ ಸ್ವತಃ ಚಟುವಟಿಕಾ ಟಿಪ್ಪಣಿಗಳನ್ನು ತಯಾರಿಸಿ ಪ್ರಿಸ್ಕೂಲ್ ಅಧ್ಯಾಪಿಕೆಯರು ಮಕ್ಕಳೊಂದಿಗೆ ಮುನ್ನಡೆಯಬೇಕಾಗಿದೆ. ವಿದ್ಯಾಭ್ಯಾಸ, ಶಿಶು ಪರಿಪಾಲನಾ ವಲಯಗಳಲ್ಲಿ ಅನುಭವ ಸಂಪತ್ತನ್ನು ಹೊಂದಿರುವ ಹಲವು ವ್ಯಕ್ತಿಗಳು ಈ ಚಟುವಟಿಕಾ ಪುಸ್ತಕವನ್ನು ತಯಾರಿಸುವುದರಲ್ಲಿ ನಿಸ್ವಾರ್ಥವಾಗಿ ಶ್ರಮ ವಹಿಸಿರುತ್ತಾರೆ. ಈ ಕೈಪಿಡಿಯನ್ನು ಪ್ರಯೋಜನಕರವಾಗಿ ಉಪಯೋಗಿಸುವಿರಲ್ಲವೇ?

ಶುಭಾಶಯಗಳೊಂದಿಗೆ,

**ಡಾ. ಜೆ. ಪ್ರಸಾದ್**
**ನಿರ್ದೇಶಕರು**





# ಅನುಕ್ರಮಣಿಕೆ

## ಭಾಗ 1


1. ಚಟುವಟಿಕೆಯ ಕೈಪಿಡಿ – ಸಮೀಪನ ಮತ್ತು ಪ್ರಯೋಜನಗಳು 05–07
2. ವಿಕಾಸದ ಮಂಡಲಗಳು ಮತ್ತು ಬಹುಮುಖ ಬುದ್ಧಿ 08–11
3. ವಿಕಾಸದ ಮಂಡಲಗಳು ಮತ್ತು ಸಾಮರ್ಥ್ಯಗಳು 12–41


## ಭಾಗ 2


4. ಮಕ್ಕಳ ಚಟುವಟಿಕೆ – ತಾಂತ್ರಿಕತೆ ಮತ್ತು ವಿಧಾನ 42–81
5. ಆಶಯಗಳು – ಕಲಿಕೆಯ ಅನುಭವಗಳು 82–160
6. ವಿಷಯ – ಯೋಜನೆ 161–177
7. ಜೊತೆಗೂಡಿಸುವ 178–182
   (ಪ್ರತ್ಯೇಕ ಪರಿಗಣನೆಗೆ ಅರ್ಹರಾದ ಮಕ್ಕಳು)
8. ನಿರಂತರ ಮೌಲ್ಯಮಾಪನ 183–185
9. ರಕ್ಷಕರಿಗೆ ಪ್ರೀತಿಪೂರ್ವಕ 186–190


## ಭಾಗ 3


10. ಸಂಪನ್ಮೂಲಗಳು 191–245







# ಚಟುವಟಿಕಾ ಪುಸ್ತಕ – ಸಮೀಪನ ಮತ್ತು ಪ್ರಯೋಗ

ಮಗುವಿನ ಕುರಿತು ಮತ್ತು ಕಲಿಕೆಯ ಕುರಿತಾಗಿರುವ ವೈಜ್ಞಾನಿಕ ದೃಷ್ಟಿಕೋನದ ಆಧಾರದಲ್ಲಿ ಈ ಚಟುವಟಿಕಾ ಪುಸ್ತಕವನ್ನು ತಯಾರಿಸಲಾಗಿದೆ. ಮೂರು, ನಾಲ್ಕು ವರ್ಷ ಪ್ರಾಯದ ಮಕ್ಕಳ ವಿಕಾಸಕ್ಕೆ ಹೊಂದಿಕೊಂಡಿರುವ ಸಮೀಪನವನ್ನು ಸ್ವೀಕರಿಸಲಾಗಿದೆ. ಮೇಲಿನ ತರಗತಿಗಳಲ್ಲಿ ನಡೆಯುವ ಕಲಿಕಾ ರೀತಿಯ ಅನುಕರಣೆ ಪ್ರಿಸ್ಕೂಲ್‌ನ ಮಕ್ಕಳಿಗೆ ಸೂಕ್ತವಲ್ಲ. ಆಟಗಳ ಮೂಲಕ ಅನುಭವಗಳನ್ನು ಗಳಿಸುವುದು, ಅನುಭವಗಳ ಮೂಲಕ ಜ್ಞಾನ, ನೈಪುಣ್ಯ ಮತ್ತು ಮೌಲ್ಯಗಳನ್ನು ಪಡೆಯುವುದು, ಮೂರ್ತವಾದ ಹಾಗೂ ಪರಿಚಿತವಾದ ವಸ್ತುಗಳನ್ನು, ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಅನುಭವಗಳನ್ನು ನೀಡುವುದು, ಎಂಬಿವುಗಳಿಗೆ ಪ್ರಿಸ್ಕೂಲ್ ಹಂತದಲ್ಲಿ ಪ್ರಾಧಾನ್ಯ ನೀಡಬೇಕಾಗಿದೆ.

ಶಿಶು ವಿಕಾಸ ಮಂಡಲಗಳು, ಬಹುಮುಖ ಪ್ರತಿಭೆಯ ಮಟ್ಟಗಳು ಎಂಬಿವುಗಳನ್ನು ಪರಿಗಣಿಸಿ ಕಲಿಕಾ ಚಟುವಟಿಕೆಗಳನ್ನು ತಯಾರಿಸಲು ಸಹಾಯಕವಾದ ವಿಷಯಗಳನ್ನು ಈ ಪುಸ್ತಕದಲ್ಲಿ ನೀಡಲಾಗಿದೆ. ವಿಷಯವನ್ನು (ಪ್ರಮೇಯ) ಆಧಾರವಾಗಿರಿಸಿ ಹೆಚ್ಚು ಪರಿಚಿತವಾದ ವಿಷಯದಿಂದ ಆರಂಭಿಸಿ ಕ್ರಮೇಣ ಅದು ವಿಕಾಸಗೊಂಡು ಇತರ ವಿಷಯಗಳ ಕಡೆಗೆ ಸಾಗುವ ರೀತಿಯನ್ನು ಇದರಲ್ಲಿ ಸ್ವೀಕರಿಸಲಾಗಿದೆ. ವಿಷಯಗಳಿಗೆ ಸಂಬಂಧಿಸಿದ ಜ್ಞಾನವನ್ನು ಮಗುವಿನ ಬೆಳವಣಿಗೆಯ ಹಂತಕ್ಕೆ ಅನುಸರಿಸಿ ನೀಡಬೇಕಾಗಿದೆ. ಚಟುವಟಿಕೆಗಳ ಮೂಲಕ ಗಳಿಸುವ ಜ್ಞಾನದ ಪ್ರಾಥಮಿಕ ಹಂತಕ್ಕೆ ಪ್ರಾಧಾನ್ಯ ನೀಡಬೇಕಾಗಿದೆ. ಮಳೆ ಎಂಬ ವಿಷಯವು ಮಳೆಯ ಅನುಭವ, ಮಳೆ ಹಾಡುಗಳು, ಕಥೆಗಳೊಂದಿಗೆ ಸಂಪನ್ನಗೊಂಡಿರುತ್ತದೆ. ಮಳೆ ಉಂಟಾಗುವುದು ಹೇಗೆ ಎಂಬುದು ಮಗುವಿನ ದೃಷ್ಟಿಯಲ್ಲಿ ಅಮೂರ್ತವಾದ ವಿಷಯವಾಗಿದೆ. ಅದನ್ನು ನೇರವಾಗಿ ತಿಳಿಯಪಡಿಸಲು ಪ್ರಯತ್ನಿಸಬಾರದು. ಪ್ರತಿಯೊಂದು ವಿಷಯದಲ್ಲೂ ಈ ರೀತಿಯ ವಿವೇಕಪೂರ್ಣ ಮನೋಭಾವವನ್ನು ಸ್ವೀಕರಿಸಬೇಕು. ಮೂರು, ನಾಲ್ಕು ವಯಸ್ಸಿನ ಮಕ್ಕಳಿಗೆ ಒಂದೇ ವಿಷಯವಿರುವ ಚಟುವಟಿಕೆಗಳನ್ನು ತಯಾರಿಸುವಾಗ ಅದರ ಬೆಳವಣಿಗೆಯನ್ನು ನಿಖರಗೊಳಿಸಬೇಕು. ವಿವಿಧ ಅನುಭವಗಳ ಮೂಲಕ ಮತ್ತು ಸೂಕ್ಷ್ಮವಾದ ನಿರೀಕ್ಷಣೆಗೆ ಅವಕಾಶವನ್ನು ನೀಡುವುದರ ಮೂಲಕ ಇದು ಸಾಧ್ಯವಾಗುವುದು. ಒಂದೇ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳು ಒಂದಕ್ಕಿಂತ ಹೆಚ್ಚು ಸಲ ಆವರ್ತನೆಯಾಗಬಹುದು. ಉದಾ : ಸಸ್ಯಗಳು ಎಂಬ ವಿಷಯದ ನಂತರ ಹೂಗಳು, ಹಣ್ಣುಗಳು, ಹೂದೋಟ ಎಂಬಿವುಗಳಾಗಿಯೂ, ಜೀವಿಗಳು ಎಂಬ ವಿಷಯವೂ ಸಾಕು ಪ್ರಾಣಿಗಳು, ಪಕ್ಷಿಗಳು, ಸಣ್ಣ ಜೀವಿಗಳು , ಕಾಡು ಪ್ರಾಣಿಗಳು, ಜಲ ಜೀವಿಗಳು, ಕೀಟಗಳು, ಉರಗಗಳು ಎಂಬಿವುಗಳಾಗಿ ಆವರ್ತನೆಯಾಗಿ ಬರುವುದು. ಕ್ರಮೇಣ ವಿಶೇಷವೂ ಸೂಕ್ಷ್ಮವು ಆದ ವಿಷಯಗಳಿಗೆ ಮಕ್ಕಳ ಅನುಭವ ಮಂಡಲವನ್ನು ತಲುಪಿಸಬೇಕು. ಆದುದರಿಂದ ವಿಷಯಗಳ ವಿನ್ಯಾಸವು ಯುಕ್ತಿ ಯುಕ್ತವಾಗಿರಬೇಕು. ಮಗುವಿನ ಅನುಭವ ಮಟ್ಟಕ್ಕೆ ಒಳಗೊಳ್ಳದ ಯಾವುದೇ ವಿಷಯವನ್ನು ಈ ಚಟುವಟಿಕಾ ಪುಸ್ತಕವು ನಿರ್ದೇಶಿಸುವುದಿಲ್ಲ.

ಮೂರು ಮತ್ತು ನಾಲ್ಕು ವರ್ಷದ ಮಕ್ಕಳು ಗಳಿಸಬೇಕಾದ ಸಾಮರ್ಥ್ಯಗಳನ್ನು ಈ ಪುಸ್ತಕದಲ್ಲಿ ನೀಡಲಾಗಿದೆ. ಅವುಗಳನ್ನು ವ್ಯತ್ಯಸ್ತವಾದ ವಿಷಯಗಳ ಮೂಲಕ ಕ್ರಮಾನುಗತವಾಗಿ ವಿಕಾಸಗೊಳ್ಳುವ ರೀತಿಯಲ್ಲಿ ಕ್ರಮೀಕರಿಸಿ ಚಟುವಟಿಕಾ ಯೋಜನೆಯನ್ನು ನಡೆಸಬೇಕಾಗಿದೆ. ಎಲ್ಲಾ ನೈಪುಣ್ಯಗಳನ್ನು ಒಂದು ಸಲದ ಚಟುವಟಿಕೆಯಿಂದ ಒಟ್ಟಿಗೆ ಪಡೆಯಲು ಸಾಧ್ಯವಿಲ್ಲ, ನಿರಂತರ ಅನುಭವ ಸಾಧ್ಯತೆಗಳನ್ನು ಆಲೋಚಿಸಬೇಕಾಗಿದೆ. ಪ್ರತಿಯೊಂದು ಮಗುವೂ ನಿರ್ದಿಷ್ಟ ಸಾಮರ್ಥ್ಯವನ್ನು ಪಡೆಯುತ್ತಾನೆ ಎಂಬುದನ್ನು ಖಾತರಿಪಡಿಸಲು ನಿರಂತರ ಮೌಲ್ಯಮಾಪನವು ಅಗತ್ಯವಾಗಿದೆ. ಚಟುವಟಿಕೆಯಲ್ಲಿ ಭಾಗವಹಿಸುವ ಮಗುವಿಗೆ ಎದುರಿಸಬೇಕಾದ ತಡೆಗಳನ್ನು ದಾಟಲು ಬೆಂಬಲ ನೀಡುವುದು ಕೂಡಾ ನಿರಂತರ ಮೌಲ್ಯಮಾಪನದ ಉದ್ದೇಶವಾಗಿದೆ. ಬಾಳೆಯ ಪೂಂಬೆಯನ್ನು ಬಾಗಿಸಿ ಜೇನು ಕುಡಿಯಲು ಆಸೆಪಡುವ ಮಗುವಿಗೆ ಬಾಳೆಗಿಡದ ಎತ್ತರ ಒಂದು ಸಮಸ್ಯೆಯಾಗಿದೆ.

ಕೋಲನ್ನು ಎತ್ತಿ ಬಲ ಪ್ರಯೋಗಿಸಿ ಬಾಗಿಸಲು ಸಾಧ್ಯವಾಗಬೇಕೆಂದಿಲ್ಲ, ಆಗ ಪೂಂಬೆಯನ್ನು ಬಾಗಿಸಿ ಕೊಡಬೇಕಾಗಬಹುದು. ಆದರೆ ಪೂಂಬೆಯ ದಳಗಳನ್ನು ಬಿಡಿಸಿ ಹೂವಿನಿಂದ ಜೇನನ್ನು ತೆಗೆಯಲು ಮಗುವಿಗೆ ಅವಕಾಶ ನೀಡಬೇಕು. ಸ್ವತಃ ಮಾಡಲು ಸಾಧ್ಯವಿರುವ ಕೆಲಸಗಳನ್ನು ಮಗು ಮಾಡಲೇ ಬೇಕು. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮಗುವಿಗೆ ಸಹಾಯ ಮಾಡಬಹುದು. ಪೂರ್ಣತೆಗಾಗಿ ಒತ್ತಡ ಹಾಕಬಾರದು. ಈ ರೀತಿಯ ವಿಷಯಗಳನ್ನು ಚಟುವಟಿಕೆ ನೀಡುವಾಗ ಗಮನಿಸಬೇಕು.

ವಿಭಿನ್ನವಾದ ಕಲಿಕಾ ತಂತ್ರಗಳನ್ನು ಈ ಚಟುವಟಿಕಾ ಪುಸ್ತಕದಲ್ಲಿ ಉದಾಹರಣೆ ಸಹಿತ ನೀಡಲಾಗಿದೆ. ಕಲಿಕಾ ತಂತ್ರಗಳ ವಿಭಿನ್ನತೆಯಂತೆ ಅವುಗಳನ್ನು ಹೇಗೆ ಮಂಡಿಸಲಾಗುತ್ತದೆ ಎಂಬುವುದು ಒಂದು ಪ್ರಧಾನ ಘಟಕವಾಗಿದೆ. ಅವುಗಳಿಗೆ ಸಂಬಂಧಪಟ್ಟ ಸೂಚನೆಗಳನ್ನು ಕೂಡಾ ಸೇರಿಸಲಾಗಿದೆ. ಅಧ್ಯಾಪಕರ ಸಾಮರ್ಥ್ಯವನ್ನು ಹೆಚ್ಚಿಸಿದರೆ ಮಾತ್ರ ಮಗುವಿನ ಆಸಕ್ತಿ ಮತ್ತು ಶ್ರದ್ಧೆಯನ್ನು ಸೇರಿಸಿ ಕಲಿಕಾ ತಂತ್ರಗಳನ್ನು ನಿರ್ವಹಿಸಲು ಸಾಧ್ಯವಿದೆ. ಆಸಕ್ತಿದಾಯಕ ವಿಷಯಗಳಿಗೆ ಹೆಚ್ಚಿನ ಗಮನಕೊಡುವುದು ಮಕ್ಕಳ ಸಾಮಾನ್ಯ ಗುಣವಾಗಿದೆ.

*ಅಧ್ಯಾಪಕರು ಮಂಡಿಸುವ ರೀತಿ, ಮಗುವಿನ ಆಸಕ್ತಿಗೆ ಹೊಂದಿಕೆಯಾಗದಿದ್ದರೆ ಆ ವಿಷಯಕ್ಕಿಂತ ಹೆಚ್ಚು ಆಸಕ್ತಿಯಿರುವ ಇತರ ವಿಷಯಗಳು ಗಮನಕ್ಕೆ ಬಂದರೆ ಮಗುವಿನ ಗಮನವು ಆ ಕಡೆಗೆ ಸಾಗುವುದು. ಈ ಸವಾಲನ್ನು ಸೃಜನಾತ್ಮಕ ರೀತಿಯಲ್ಲಿ ತೆಗೆದುಕೊಳ್ಳಬೇಕು. ಕಲಿಕಾ ತಂತ್ರಗಳು ಯಶಸ್ವಿಯಾಗಲು ಉತ್ತಮ ಯೋಜನೆ ಅನಿವಾರ್ಯವಾಗಿದೆ. ನಿರಂತರ ಮೌಲ್ಯಮಾಪನದ ಮೂಲಕ ಎಲ್ಲರಿಗೂ ಎಲ್ಲವೂ ಲಭಿಸಲಿರುವ ಸೂಕ್ಷ್ಮಯೋಜನೆಯನ್ನು ತಯಾರಿಸಲು ಸಾಧ್ಯವಾಗಬೇಕು. ಕೈಪಿಡಿಯಲ್ಲಿ ನೀಡಿರುವುದಕ್ಕಿಂತ ಹೆಚ್ಚಿನ ಸೂಕ್ಷ್ಮತೆಯೊಂದಿಗೆ ಚಟುವಟಿಕೆಯ ಯೋಜನೆ ತಯಾರಿಸಬೇಕು. ಅಧ್ಯಾಪಿಕೆಯು ಕೇಳುವ ಪ್ರತಿಯೊಂದು ಪ್ರಶ್ನೆಯೂ ಮಗುವಿನ ಜಿಜ್ಞಾಸೆಯನ್ನು ಉದ್ದೀಪನಗೊಳಿಸುವಂತಿರಬೇಕು.*

ಕಲಿಕಾ ಸಾಮಗ್ರಿಗಳ ಸಮಗ್ರ ಸಂಗ್ರಹವು ಅಧ್ಯಾಪಕರ ಕೈಯಲ್ಲಿರಲೇಬೇಕು. ಎಲ್ಲವನ್ನು ಹಣಕೊಟ್ಟು ಪಡೆಯಬೇಕಾಗಿಲ್ಲ. ಮಕ್ಕಳು ಆ ಸಾಮಗ್ರಿಗೆ ನೀಡುವ ಮಹತ್ವವು ಪ್ರಧಾನವಾಗಿದೆ. ಎಲೆಯ ಬುಗರಿ, ಚೆಂಡುಪೊಳೆಯ ಗಾಡಿ, ಹಾಳೆಯಿಂದ ತಯಾರಿಸಿದ ಮುಖವಾಡ ಮೊದಲಾದವುಗಳು ಕಡಿಮೆ ಖರ್ಚಿನ ವಸ್ತುಗಳಾಗಿದ್ದರೂ ಮಕ್ಕಳಿಗೆ ಸಂಬಂಧಿಸಿ ಇದು ಬೆಲಬಾಳುವ ಆಟದ



ಸಾಮಗ್ರಿಗಳಾಗಿರುತ್ತವೆ. ಪ್ರಾಕೃತಿಕ ಸಂಪನ್ಮೂಲಗಳು ಆಟದ ವಸ್ತುಗಳಾಗಿಯೂ ಕಲಿಕೋಪಕರಣಗಳಾಗಿಯೂ ಬದಲಾಗುವುದರಿಂದ ಮಕ್ಕಳಲ್ಲಿ ಪರಿಸರ ಪ್ರೇಮ ಬೆಳೆಸಲು ಮತ್ತು ಪ್ರಕೃತಿಯ ವೈವಿಧ್ಯತೆಯ ಅರಿವು ಮೂಡಿಸಲು ಮಾತ್ರವಲ್ಲದೆ, ಮಾನವನ ಬದುಕಿನಲ್ಲಿ ಪ್ರಕೃತಿಯ ಪ್ರಭಾವವನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಆದುದರಿಂದ ಇಂತಹ ಕಲಿಕೋಪಕರಣಗಳ ಸಾಧ್ಯತೆಯನ್ನು ಮನಗಾಣಬೇಕು. ಪ್ರದೇಶಕ್ಕೆ ಸಂಬಂಧಿಸಿದ ಮತ್ತು ನೈಜತೆಯಿಂದ ಕೂಡಿದ ಕಲಿಕಾ ಪಠ್ಯಕ್ರಮವನ್ನು ಇಲ್ಲಿ ನಿರ್ದೇಶಿಸಲಾಗಿದೆ. ರಾಜ್ಯ ಮಟ್ಟದಲ್ಲಿ ತಯಾರಿಸಿರುವ ಈ ಚಟುವಟಿಕಾ ಪುಸ್ತಕವು ನಿರ್ದೇಶಿಸುವ ಸಮೀಪನವನ್ನು ಮನಗಂಡು ಕಾರ್ಯಪ್ರವೃತ್ತರಾಗಬೇಕು. ಈ ವಿಷಯದಲ್ಲಿ ಸೃಜನಾತ್ಮಕತೆಯು ಸ್ವಾತಂತ್ರ್ಯವನ್ನು ಉಪಯೋಗಿಸಬೇಕು. ಪ್ರಿಸ್ಕೂಲ್ ಇರುವ ಪ್ರದೇಶದ ಭೌಗೋಳಿಕ ಪ್ರತ್ಯೇಕತೆಗಳು, ಜೀವಜಾಲಗಳು, ಆಟಗಳು, ಆಚರಣೆಗಳು, ನುಡಿಮುತ್ತುಗಳು, ಸಾಮಗ್ರಿಗಳು ಮೊದಲಾದವುಗಳನ್ನು ಉಪಯೋಗಿಸಿಕೊಳ್ಳಬೇಕು.



ಉದಾ : ತೀರ ಪ್ರದೇಶದಲ್ಲಿ ವಾಸಿಸುವವರು, ಗೆರಟೆಗಳು, ತೆಂಗಿನ ಇತರ ಭಾಗಗಳು, ಮೀನು ಹಿಡಿಯಲು ಉಪಯೋಗಿಸುವ ಸಾಮಗ್ರಿಗಳನ್ನು ಕಲಿಕೋಪಕರಣಗಳ ನಿರ್ಮಾಣಕ್ಕಾಗಿ ಉಪಯೋಗಿಸಲು ಮತ್ತು ಉಪ ವಿಷಯಗಳಾಗಿ ಪರಿಗಣಿಸಲು ಪ್ರಯತ್ನಿಸಬೇಕು..

ಈ ಕೈಪಿಡಿಯಲ್ಲಿ ಕೊಟ್ಟಿರುವ ಕೆಲವು ಚಟುವಟಿಕೆಗಳು ಮೊದಲೇ ನಡೆಸಿ (ಟ್ರೈಔಟ್) ಪ್ರಾಯೋಗಿಕವಾಗಿ ಪರೀಕ್ಷಿಸಲ್ಪಟ್ಟವುಗಳಾಗಿವೆ. ಏನಿದ್ದರೂ ವ್ಯತ್ಯಸ್ತ ಸಾಮಾಜಿಕ – ಸಾಂಸ್ಕೃತಿಕ

ಹಿನ್ನೆಲೆ ಇರುವ ಮಕ್ಕಳಲ್ಲಿ ಈ ಚಟುವಟಿಕೆಗಳು ಒಂದೇ ರೀತಿಯಲ್ಲಿ ಕಾರ್ಯಗತವಾಗಬೇಕೆಂದಿಲ್ಲ. ಆದುದರಿಂದ ಅಗತ್ಯ ಬದಲಾವಣೆಯೊಂದಿಗೆ ಅವುಗಳನ್ನು ತೆಗೆದುಕೊಳ್ಳಬೇಕು. ಒಂದು ಚಟುವಟಿಕೆ ನಿರ್ದಿಷ್ಟ ರೀತಿಯಲ್ಲಿ ನಡೆಸಿದರೆ ಉದ್ದೇಶಿತ ಫಲಿತಾಂಶ ಲಭಿಸಬಹುದೆಂಬ ನಂಬಿಕೆಯ ಆಧಾರದಲ್ಲಿ ಎಲ್ಲಾ ಚಟುವಟಿಕೆಗಳನ್ನು ನೀಡುತ್ತಾರೆ. ಆದರೆ ಪ್ರತಿಸಲವೂ ಉದ್ದೇಶಿಸಿದ ಫಲಿತಾಂಶ ಸಿಗಬೇಕೆಂದಿಲ್ಲ. ಆದುದರಿಂದ ಚಟುವಟಿಕೆ ನಡೆಸುವಾಗ ಲಭಿಸುವ ತಿಳುವಳಿಕೆಗಳು ಪ್ರಧಾನವಾಗಿರುವುದು. ಅವುಗಳನ್ನು ಉಪಯೋಗಿಸಿಕೊಂಡು ಸಂಬಂಧಪಟ್ಟ ಯೋಜನೆಗಳನ್ನು ರೂಪಿಸಿಕೊಂಡು ಮುಂದುವರಿಯಬೇಕು. ಯೋಜನೆಯ ಟಿಪ್ಪಣಿಗಳನ್ನು ಪರಿಶೀಲಿಸುವುದರಿಂದ ಸಂಶೋಧನಾತ್ಮಕ ಮನೋಭಾವದಿಂದ ಸ್ವಯಂ ಮತ್ತು ನಿರಂತರವಾಗಿ ಹೊಸತನ್ನು ಕಾಯ್ದುಕೊಳ್ಳುವ ಅಧ್ಯಾಪಕರನ್ನು ಗುರುತಿಸಲು ಸಾಧ್ಯವಾಗಬೇಕು. ಒಂದು ವರ್ಷ ನಡೆಸಿದ ಚಟುವಟಿಕೆಗಳು ಮುಂದಿನ ವರ್ಷದ ಯೋಜನೆಯನ್ನು ನಡೆಸುವಾಗ ಪೂರ್ವಜ್ಞಾನದ ತಿಳುವಳಿಕೆಗಳು ಅದರಲ್ಲಿ ಪ್ರತಿಫಲಿಸುವಂತಿರಬೇಕು. ಇದು ಖಂಡಿತವಾಗಿಯೂ ಕಲಿಕಾ ಮಟ್ಟವನ್ನು ಹೆಚ್ಚಿಸುವುದು.

*ಈ ಕೈಪಿಡಿಯನ್ನು ಮೂರು ಭಾಗಗಳಾಗಿ ತಯಾರಿಸಲಾಗಿದೆ. ಭಾಗ – 1ರಲ್ಲಿ ಪ್ರಿಸ್ಕೂಲ್ ವಿದ್ಯಾಭ್ಯಾಸ ಅನಿವಾರ್ಯತೆ, ವೈಜ್ಞಾನಿಕವಾದ ಪ್ರಿಸ್ಕೂಲ್ ವಿದ್ಯಾಭ್ಯಾಸದ ಪ್ರಾಧಾನ್ಯ, ವಿಕಾಸ ಮಂಡಲಗಳು, ಬಹುಮುಖ ಬೌದ್ಧಿಕ ಹಂತಗಳು, ಮಕ್ಕಳ ಗಳಿಸಬೇಕಾದ ಸಾಮರ್ಥ್ಯ ಎಂಬಿವುಗಳನ್ನು ಸಮಗ್ರವಾಗಿ ಪ್ರತಿಪಾದಿಸಲಾಗಿದೆ. ಭಾಗ–2ರಲ್ಲಿ ಶಿಶು ಕೇಂದ್ರಿತ ಸಂಕೇತಗಳು, ತಂತ್ರಗಳು, ವಿಷಯಗಳು, ಕಲಿಕಾ ಅನುಭವಗಳು, ವಿಷಯದ ಯೋಜನಾ ರೀತಿ, ಪ್ರತ್ಯೇಕ ಪರಿಗಣನೆಯ ಅರ್ಹವಿರುವ ಮಕ್ಕಳಿಗಾಗಿರುವ ಅನುರೂಪೀಕರಣ ಚಟುವಟಿಕೆಗಳು, ನಿರಂತರ ಮೌಲ್ಯಮಾಪನದಲ್ಲಿ ಹೆತ್ತವರ ಜವಾಬ್ದಾರಿಗಳು, ಎಂಬಿವುಗಳನ್ನು ಸೇರಿಸಲಾಗಿದೆ. ಭಾಗ – 3 ರಲ್ಲಿ ಅಧ್ಯಾಪಕರಿಗೆ ವಿಷಯಗಳನ್ನು ಮಕ್ಕಳಿಗೆ ವರ್ಗಾವಣೆ ಮಾಡಲು ಉಪಯೋಗಿಸಬಹುದಾದ ಸಂಪನ್ಮೂಲಗಳನ್ನು (ಕಥೆ, ಪದ್ಯ, ನಿರ್ಮಾಣ, ಆಟಗಳು ರೋಲ್ ಪ್ಲೇ, ಪಾತ್ರ ಅಭಿನಯ, ಗೊಂಬೆಯಾಟ) ಸೇರಿಸಲಾಗಿದೆ.*

ಸಂಶೋಧನಾತ್ಮಕ ಮನೋಭಾವವಿರುವ ಪ್ರಿಸ್ಕೂಲ್ ಅಧ್ಯಾಪಕರನ್ನು ಈ ಪಠ್ಯಕ್ರಮವು ಸೃಷ್ಟಿಸುವುದು. ಬಾಹ್ಯ ಒತ್ತಡಗಳನ್ನು ಎದುರಿಸಬೇಕಾಗಿ ಬಂದರೂ, ಅದಕ್ಕೆ ಹೆದರಿ ಕಲಿಕಾ ಸಮೀಪನದಲ್ಲಿ ಬದಲಾವಣೆಗಳನ್ನು ತಂದು ವೈಜ್ಞಾನಿಕ ರೀತಿಯ ಪ್ರಿಸ್ಕೂಲ್ ವಿದ್ಯಾಭ್ಯಾಸ ಪದ್ಧತಿಯನ್ನು ನಿರಾಕರಿಸುವ ಮನೋಭಾವ ಉಂಟಾಗಬಾರದು. ಶಿಕ್ಷಣದ ವ್ಯಾಪಾರವನ್ನು ಮಾಡುವ ಸಂಸ್ಥೆಗಳ ಆಮಿಷಗಳಿಗೆ ಬಲಿಯಾಗಬಾರದು. ಈ ವಿಷಯದಲ್ಲಿ ಹೆತ್ತವರ ಮತ್ತು ಸಮಾಜದ ಬೆಂಬಲ ಅಗತ್ಯವಾಗಿದೆ. ಈ ಬೆಂಬಲವನ್ನು ಯಾವ ರೀತಿ ಪಡೆಯಬಹುದು ಎಂಬುದರ ಕುರಿತು ಸೂಚನೆಗಳನ್ನು ನೀಡಲಾಗಿದೆ. ಪ್ರಿಸ್ಕೂಲಿನಲ್ಲಿ ಕಲಿಕಾ ಮಾಧ್ಯಮ ಮಾತೃಭಾಷೆಯಾಗಿದೆ. ಇವತ್ತು ವಿಶ್ವದಲ್ಲಿ ಮುಂಚೂಣಿಯಲ್ಲಿರುವ ಎಲ್ಲಾ ರಾಜ್ಯಗಳಲ್ಲಿಯೂ ಕಲಿಕಾ ಮಾಧ್ಯಮವಾಗಿ ಮಾತೃಭಾಷೆಯನ್ನು ಬಳಸಲಾಗುತ್ತಿದೆ. ಆದುದರಿಂದ ಮಕ್ಕಳ ಮತ್ತು ಸಮಾಜ ಬೆಳವಣಿಗೆ

ಎಂಬುದನ್ನು ತಿಳಿಯಪಡಿಸಲಿರುವ ಚಟುವಟಿಕೆಗಳನ್ನು ತನ್ನದೇ ರೀತಿಯಲ್ಲಿ ನಡೆಸಲು ಪ್ರೀಸ್ಕೂಲ್ ಅಧ್ಯಾಪಕರು ಗಮನಿಸಬೇಕಾಗಿದೆ.

ಎಲ್ಲಾ ಪ್ರಿಸ್ಕೂಲ್ ಅಧ್ಯಾಪಕರು ಶೈಕ್ಷಣಿಕ ಕಾರ್ಯಕರ್ತರಾಗಿ ಬದಲಾಗಬೇಕು. ಮಗುವಿನ ಮನೆಯ ವಾತಾವರಣವನ್ನು ಕಲಿಕೆಗೆ ಪೂರಕವಾಗುವಂತೆ ಮಾಡಲು ಪ್ರಯತ್ನಿಸಬೇಕು. ಪ್ರಿಸ್ಕೂಲ್ ಅಧ್ಯಾಪಕರು ಹಲವು ಪಾತ್ರಗಳನ್ನು ನಿರ್ವಹಿಸಬೇಕಾಗುವುದು. ಮಕ್ಕಳ ಜೊತೆಯಲ್ಲಿ ತಾಯಿಯಾಗಿ, ಗೆಳತಿಯಾಗಿ, ವರ್ತಿಸಬೇಕಾಗಬಹುದು. ಮನೆಯಿಂದ ಪ್ರಿಸ್ಕೂಲಿಗೆ ಬರುವ ಮಗುವಿಗೆ ಅದು ತನ್ನ ಮನೆಯಾಗಿ ಬದಲಾಗಬೇಕು. ಸಂರಕ್ಷಣೆ, ಪರಿಗಣನೆ, (ಅವಶ್ಯಕತೆ/ಆದ್ಯತೆ), ಪ್ರೋತ್ಸಾಹ, ಪ್ರೀತಿ ವಿಶ್ವಾಸ ಲಭಿಸಬೇಕು.

ಪ್ರಿಸ್ಕೂಲಿನ ಕಲಿಕಾ ಸಮೀಪನವನ್ನು ಅರ್ಥೈಸಿಕೊಂಡು ಯೋಗ್ಯವಾಗಿ ಕಾರ್ಯಪ್ರವರ್ತರಾಗುವ ಅಧ್ಯಾಪಕರಿಂದ ಮಾತ್ರ ಈ ಪಠ್ಯಕ್ರಮವನ್ನು ಯಶಸ್ವಿಗೊಳಿಸಲು ಸಾಧ್ಯ. ಪ್ರಿಸ್ಕೂಲ್ ವಿದ್ಯಾಭ್ಯಾಸದ ಚಟುವಟಿಕೆಗಳಲ್ಲಿ ಸೃಜನಾತ್ಮಕ ರೀತಿಯಲ್ಲಿ ಭಾಗಿಯಾದರೆ ಮಾತ್ರ ನಮಗೆ ಮೇಲೆ ಹೇಳಿದ ರೀತಿಯಲ್ಲಿ ಬೆಳೆಯಲು ಸಾಧ್ಯ.




# ವಿಕಾಸದ ಮಂಡಲಗಳು ಮತ್ತು ಬಹುಮುಖ ಬುದ್ಧಿ

ವಿಶ್ವದೆಲ್ಲೆಡೆ ನಡೆದ ಸಂಶೋಧನೆಗಳಿಂದ ಪ್ರೀಸ್ಕೂಲ್ ವಿದ್ಯಾಭ್ಯಾಸ ಚೌಕಟ್ಟನ್ನು ರೂಪಿಸುವಾಗ ಪಾಲಿಸಬೇಕಾದ ಪ್ರಧಾನ ತತ್ವಗಳ ಕುರಿತು ಸೂಚನೆಗಳನ್ನು ನೀಡುತ್ತಿವೆ.

ಅವುಗಳಲ್ಲಿ ಅತಿ ಪ್ರಧಾನವಾದ ನಾಲ್ಕು ವಿಷಯಗಳು ಇವುಗಳಾಗಿವೆ:

1) ಮಗುವಿನ ವಿಕಾಸವು ನಿರಂತರವೂ ಸಮಗ್ರವೂ ಆದ ಪ್ರಕ್ರಿಯೆಯಾಗಿದೆ. ಮೊದಲು ಲಭಿಸುವ ಅನುಭವಗಳು ನಂತರ ಲಭಿಸುವ ಅನುಭವಗಳ ಮೇಲೆ ಪ್ರಭಾವ ಬೀರುವುದು. ಜನನ ಪೂರ್ವ ಹಂತದಿಂದ ಪ್ರಾರಂಭಿಸಿ ಪ್ರಾಥಮಿಕ ಹಂತದವರರೆಗಿರುವ ಪ್ರತಿಯೊಂದು ಉಪಹಂತಗಳಲ್ಲಿ ವಿಕಾಸದ ಅಗತ್ಯಗಳು ನೇರವೇರಿಸಲ್ಪಡಬೇಕು.

2) ಶಾರೀರಿಕ (ಆರೋಗ್ಯ, ಪೋಷಕಾಂಶ) ವೈಜ್ಞಾನಿಕ, ಮಾನಸಿಕ ವಿಕಾಸಗಳು ಪರಸ್ಪರ ಒಂದಕ್ಕೊಂದು ಹೊಂದಿಕೊಂಡು ಕಾರ್ಯವೆಸಗುತ್ತವೆ. ಇವುಗಳನ್ನೆಲ್ಲ ಪರಿಗಣಿಸುವ ಸಮಗ್ರ ಸಮೀಪನವು ಅನಿವಾರ್ಯವಾಗಿದೆ.

3) ಆಟಗಳ ಮೂಲಕ ಪಾಠಯೋಜನೆಗಳು ನಡೆಯಬೇಕು.

4) ಮಗು ಜೀವಿಸುವ ವಾತಾವರಣದ ಎಲ್ಲಾ ಅಂಶಗಳನ್ನು ಪರಿಗಣಿಸಿಕೊಂಡು ಅವನೊಂದಿಗೆ ವರ್ತಿಸುವಾಗ ಅವನ ವಿಕಾಸವು ಗರಿಷ್ಠ ಮಟ್ಟಕ್ಕೆ ಏರುತ್ತದೆ.

ಪ್ರಿಸ್ಕೂಲ್ ಪಠ್ಯಕ್ರಮವನ್ನು ಈ ಮೇಲಿನ ಎಲ್ಲಾ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ತಯಾರಿಸಲಾಗಿದೆ. ಪ್ರಿಸ್ಕೂಲ್ ವಿದ್ಯಾಭ್ಯಾಸವು ಮಗುವಿನ ಸಮಗ್ರ ವಿಕಾಸಕ್ಕಾಗಿ ಸಾಮರ್ಥ್ಯವನ್ನು ಗರಿಷ್ಟವಾಗಿ ಬೆಳೆಸಲು ಸಹಾಯಕವಾಗಿದೆ. ಮಗುವನ್ನು ಔಪಚಾರಿಕ ಕಲಿಕೆಗೆ ಸಜ್ಜುಗೊಳಿಸುವುದು, ಮಗುವಿನ ತಾಯಿಗೆ ಮತ್ತು ಮಗುವಿಗೆ ಅಗತ್ಯವಾದ ಬೆಂಬಲ ಮತ್ತು ಸಹಾಯವನ್ನು ಒದಗಿಸುವುದು ಇತ್ಯಾದಿ ಉದ್ದೇಶಗಳು ಈಡೇರಬೇಕು.

ಪ್ರಿಸ್ಕೂಲ್ ಕಲಿಕಾ ಚಟುವಟಿಕೆಗಳು ಮಗುವಿನ ಮಟ್ಟಕ್ಕೆ ಸೂಕ್ತವಾಗಿರಬೇಕು. ಅದು ಸಮಗ್ರ ಸಮೀಪನದಿಂದ ಕೂಡಿರಬೇಕು. ಸಂಯೋಜಿತ ಸ್ವಭಾವ ಒಳಗೊಂಡಿರಬೇಕು. ಆಟಗಳನ್ನು ಆಧಾರವಾಗಿಟ್ಟುಕೊಂಡು ತಯಾರಾಗಿರಬೇಕು. ಪಠ್ಯಕ್ರಮದ ವಿಷಯದಲ್ಲಿ ಈ ಕೆಳಗಿನ ವಿಷಯಗಳು ಅತೀ ಪ್ರಧಾನವಾಗಿವೆ.

- ಆಟಗಳು, ಕಲೆಗಳು ಕಲಿಕೆಯ ಮೂಲ ಆಧಾರವಾಗಿರಬೇಕು.
- ಮಕ್ಕಳ ವಿಶೇಷವಾದ ಚಿಂತನ ಸಾಮರ್ಥ್ಯವನ್ನು ಪರಿಗಣಿಸಿಕೊಂಡಿರಬೇಕು.
- ಸ್ವ ಅನುಭವಕ್ಕೆ ಹೆಚ್ಚು ಪರಿಗಣನೆ ನೀಡುವಂತಿರಬೇಕು
- ದೈನಂದಿನ ಜೀವನದಲ್ಲಿ ಪರಿಚಿತ ಹಾಗೂ ಸವಾಲುಗಳನ್ನು ಎದುರಿಸುವ ಸಂದರ್ಭಗಳನ್ನು ಉಪಯೋಗಿಸಿಕೊಳ್ಳುವುದು.
- ಔಪಚಾರಿಕವೂ ಅನೌಪಚಾರಿಕವೂ ಆದ ಪಾಲ್ಗೊಳ್ಳುವಿಕೆಯ ರೀತಿಯನ್ನು ಸಂಯೋಜಿಸಿ ಉಪಯೋಗಿಸುವುದು.
- ಪ್ರಾದೇಶಿಕವಾಗಿ ಲಭಿಸುವ ಸಾಮಗ್ರಿಗಳು, ಪ್ರಾದೇಶಿಕ ಕಲೆಗಳು, ಪ್ರಾದೇಶಿಕ ತಿಳುವಳಿಕೆಗಳು ಎಂಬಿವುಗಳನ್ನು ಉಪಯೋಗಿಸಿಕೊಳ್ಳುವುದು.
- ವಿವಿಧತೆಗೆ ಪ್ರಾಧಾನ್ಯ ನೀಡುವುದು. (ಮಕ್ಕಳು, ಚಟುವಟಿಕೆಗಳು).
- ಆರೋಗ್ಯ, ಆರೋಗ್ಯ ಅಭ್ಯಾಸಗಳು, ಮಗುವಿನ ಕ್ಷೇಮ ಎಂಬಿವುಗಳಿಗೆ ಪ್ರಾಧಾನ್ಯ ನೀಡುವುದು.

## ವಿಕಾಸ ಮಂಡಲಗಳು

ಮಗುವಿನ ಸಮಗ್ರ ವಿಕಾಸದ ಕುರಿತು ಚಿಂತಿಸುವಾಗ ಎರಡು ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಅವುಗಳೆಂದರೆ ವಿಕಾಸ ಮಂಡಲಗಳು ಮತ್ತು ಬಹುಮುಖ ಬುದ್ಧಿ ಸಿದ್ಧಾಂತ ಆದುದರಿಂದ ಬಹುಮುಖ ಬುದ್ಧಿಯನ್ನೂ ವಿಕಾಸ ಮಂಡಲಗಳನ್ನೂ ಸಮನ್ವಯಗೊಳಿಸಿ ಚಟುವಟಿಕಾ ಯೋಜನೆಯನ್ನು ನಡೆಸಬೇಕಾಗಿದೆ. ವಿಕಾಸ ಮಂಡಲಗಳನ್ನು ಪ್ರಿಸ್ಕೂಲ್ ಶಿಕ್ಷಣದೊಂದಿಗೆ ಹೊಂದಿಸಿ ಪರಿಶೋಧನೆ ನಡೆಸಬೇಕು.

1. ಶಾರೀರಿಕ ಚಲನಾತ್ಮಕ ವಿಕಾಸ ಮಂಡಲ (Psychomotor development domain)
2. ಭಾಷಾ ವಿಕಾಸ ಮಂಡಲ (Language development domain)
3. ವೈಜ್ಞಾನಿಕ ವಿಕಾಸ ಮಂಡಲ (Cognitive development domain)
4. ಸಾಮಾಜಿಕವೂ ಮಾನಸಿಕವೂ ಆದ ವಿಕಾಸ ಮಂಡಲ (Socio Emotional development domain)
5. ಸೃಜನಾತ್ಮಕವೂ ಸೌಂದರ್ಯಾತ್ಮಕವೂ ಆದ ವಿಕಾಸ ಮಂಡಲ (Creative, aesthetic development domain)

ಈ ಮೇಲಿನ ವಿಕಾಸ ಮಂಡಲಗಳು ಪರಸ್ಪರ ಒಂದಕ್ಕೊಂದು ಸಂಬಂಧಪಟ್ಟಿವೆ. ಅವುಗಳು ಪ್ರತ್ಯೇಕ ಪ್ರತ್ಯೇಕವಾಗಿ ನಿಲ್ಲುವುದಿಲ್ಲ. ಉದಾ : ಮೂರು ವರ್ಷ ಪ್ರಾಯದ ಮಗುವಿಗೆ ಕಥೆ ಹೇಳಿ ಕೊಡುವ ಸಂದರ್ಭವನ್ನು ಗಮನಿಸುವ, ಬೊಂಬೆಗಳನ್ನು ಉಪಯೋಗಿಸಿಕೊಂಡು ತಾಳ ಬದ್ಧವಾದ ವಾಕ್ಯಗಳು, ಪದಗಳು ಮತ್ತು ಪದ್ಯಗಳನ್ನು ಉಪಯೋಗಿಸಿಕೊಂಡು ಕಥೆ ಹೇಳುವಾಗ ಮಗುವಿನ ಆಸಕ್ತಿ ಮತ್ತು ಏಕಾಗ್ರತೆಯು ಬೆಳೆಯುವುದು. ಕಥೆಯ ಘಟನೆಗಳ ಕ್ರಮವನ್ನು ತಿಳಿದುಕೊಳ್ಳುವುದಕ್ಕೂ ಭಾಷಾ ಪರವಾದ ಪ್ರತ್ಯೇಕತೆಗಳನ್ನು ಆರ್ಜಿಸುವುದಕ್ಕೂ ಇದು ಸಹಾಯಕವಾಗಿದೆ. ಮಕ್ಕಳು ಕಥೆಯಲ್ಲಿ ಬರುವ ಮನಮುಟ್ಟುವ ಸಂದರ್ಭಗಳೊಂದಿಗೆ ತನ್ನ ಮಾನಸಿಕ ಸ್ಥಿತಿಗಳನ್ನು ಹೊಂದಿಸಿಕೊಳ್ಳುತ್ತಾರೆ. ಕಥೆಯಲ್ಲಿರುವ ಕಥಾ ಪಾತ್ರಗಳು, ಘಟನೆಗಳು ಮತ್ತು ಸಂದರ್ಭಗಳು ಎಂಬಿವುಗಳು ಮಗುವಿನ ಜ್ಞಾನವನ್ನು ಹೆಚ್ಚಿಸುತ್ತವೆ. ಕಥಾಪಾತ್ರಗಳ ಪರವಾಗಿ, ಚಿಂತನೆ ಮತ್ತು ಪ್ರತಿಕ್ರಿಯೆಗಳು ಉಂಟಾಗುತ್ತವೆ. ಹೀಗೆ ಪ್ರಿಸ್ಕೂಲ್‌ನ ಯಾವುದೇ ಚಟುವಟಿಕೆಗಳು ಒಂದಕ್ಕಿಂತ ಹೆಚ್ಚು ವಿಕಾಸ ಮಂಡಲಗಳ ಬೆಳವಣಿಗೆಗೆ ಸಹಾಯಕವಾಗುವುದೆಂಬ ಅರಿವು ಅಧ್ಯಾಪಕನಲ್ಲಿ ಉಂಟಾಗಬೇಕು. ಪ್ರತಿಯೊಂದು ಚಟುವಟಿಕೆಗಳಲ್ಲಿ ಯಾವುದಾದರೂ ಒಂದು ವಿಕಾಸ ಮಂಡಲಕ್ಕೆ ಪ್ರಾಧಾನ್ಯ ನೀಡಬೇಕು. ಇತರ ಸಾಧ್ಯತೆಗಳನ್ನು ಕೂಡಾ ಪರಿಗಣಿಸಿಕೊಂಡಿರಬೇಕು.

## ಬಹುಮುಖ ಬುದ್ಧಿ

ಹಾವರ್ಡ್ ಗಾರ್ಡ್ನರ್‌ರ ಅಭಿಪ್ರಾಯದಂತೆ ಬುದ್ಧಿ ಎಂಬುದು ನಿಜವಾದ ಜೀವನದಲ್ಲಿ ಬರುವಂತಹ ಸಮಸ್ಯೆಗಳನ್ನು ಪರಿಹರಿಸಲಿರುವ ಸಾಮರ್ಥ್ಯವಾಗಿದೆ. ಸಮಸ್ಯೆ ಪರಿಹಾರಕ್ಕಿರುವ ದಾರಿಗಳನ್ನು ಚಿಂತನೆಯ ಮೂಲಕ ಕಂಡುಕೊಳ್ಳಲಿರುವ ಸಾಮರ್ಥ್ಯ, ನೂತನ ಆಶಯಗಳನ್ನು ಸೃಷ್ಟಿಸಲಿರುವ ಸಾಮರ್ಥ್ಯ, ಹೊಸ ವಸ್ತುಗಳನ್ನು ತಯಾರಿಸಲಿರುವ ಸಾಮರ್ಥ್ಯ ಎಂಬಿವುಗಳೆಲ್ಲ ಸಮಸ್ಯಾ ಪರಿಹಾರಕ್ಕಿರುವ ಚಿಂತನೆಯ ಭಾಗವಾಗಿದೆ. ಸಾಮಾಜಿಕವೂ ಮನೋವೈಜ್ಞಾನಿಕವೂ ಆದ ಪ್ರಕ್ರಿಯೆಗಳ ಮೂಲಕ ಮಗುವಿನ ಕಲಿಕೆಯು ನಡೆಯುವುದು. ವಿಕಾಸ ಮಂಡಲಗಳ ಬೆಳವಣಿಗೆಯನ್ನು ಹಾವರ್ಡ್ ಗಾರ್ಡ್ನರ್‌ನೆಂಬ ಮನೋವಿಜ್ಞಾನಿಯು 1983ರಲ್ಲಿ ಕೆಳಗಿನಂತೆ ಮಂಡಿಸಿದನು. ಬುದ್ಧಿಯೆಂಬುದು ಏಕಮುಖಿಯಲ್ಲ, ಅದಕ್ಕೆ ಬಹುಮುಖಗಳಿವೆ.

1 ಭಾಷಾ ಪರವಾದ ಬುದ್ಧಿ (Verbal-Linguistic Intelligence)
2 ಯುಕ್ತಿಪರವೂ ಸಂಖ್ಯಾಪರವೂ ಆದ ಬುದ್ಧಿ (Logical and Mathematical Intelligence)
3 ದೃಶ್ಯ – ಸ್ಥಳಪರವೂ ಆದ ಬುದ್ಧಿ (Visual-Spatial Intelligence)
4 ಶಾರೀರಿಕ ಚಲನಾ ಪರವಾದ ಬುದ್ಧಿ (Bodily-Kinaesthetical Intelligence)
5 ಸಂಗೀತ, ತಾಳತ್ಮಕವಾದ ಬುದ್ಧಿ (Musical-Rhythmical Intelligence)
6 ವ್ಯಕ್ತ್ಯಾಂತರ ಬುದ್ಧಿ (Interpersonal Intelligence)
7 ಆಂತರಿಕ ವೈಯಕ್ತಿಕ ಬುದ್ಧಿ (Intrapersonal Intelligence)
8 ಪ್ರಕೃತಿಪರವಾದ ಬುದ್ಧಿ (Naturalistic Intelligence)

ಬುದ್ಧಿಯ ಈ ಎಲ್ಲಾ ಮಂಡಲಗಳು ಪ್ರತಿಯೊಂದು ವ್ಯಕ್ತಿಯಲ್ಲಿ ವ್ಯತ್ಯಸ್ತ ರೀತಿಯಲ್ಲಿ ಇರಬಹುದು. ಎಲ್ಲಾ ಬೌದ್ಧಿಕ ಮಂಡಲಗಳನ್ನು ಪೋಷಿಸಲು ವ್ಯತ್ಯಸ್ತ ಅನುಭವಗಳನ್ನು ಪ್ರತಿಯೊಂದು ಮಗುವಿಗೆ ನೀಡಬೇಕಾಗಿದೆ. ಇಲ್ಲಿ ಮಗುವಿನ ಚಿಂತನೆ ಮತ್ತು ಪ್ರಯತ್ನಕ್ಕೆ ಅವಕಾಶ ನೀಡಬೇಕು ಎಂಬುದು ಪ್ರಧಾನವಾಗಿದೆ.

ಒಂದು ವಿಷಯವನ್ನು ಬಹುಮುಖ ಬುದ್ಧಿಯ ವಿವಿಧ ಹಂತಗಳ ಮೂಲಕ ವೀಕ್ಷಿಸುವಾಗ ಪ್ರಸ್ತುತ ವಿಷಯಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುವುದು. ಅನುಭವದ ವೈವಿಧ್ಯ, ಆಶಯಗ್ರಹಣದ ಆಳವನ್ನು ಹೆಚ್ಚಿಸುವುವು. ವ್ಯತ್ಯಸ್ತ ಕಲಿಕಾ ರೀತಿಯನ್ನು ಹೊಂದಿರುವ ಮಕ್ಕಳಿಗೆ ಬಹುಮುಖ ಬುದ್ಧಿಯನ್ನು ಆಧಾರವಾಗಿರಿಸಿ ಕಲಿಕಾನುಭವಗಳನ್ನು ನೀಡಿದರೆ ಉತ್ತಮವಾಗಿರುವುದು.

ಪ್ರಿಸ್ಕೂಲಿನಲ್ಲಿ ವೈಜ್ಞಾನಿಕ ವಿಕಾಸಕ್ಕಾಗಿ ಎಂಬ ನೆಲೆಯಲ್ಲಿ ಔಪಚಾರಿಕ ಕಲಿಕಾ ರೀತಿಗಳು ಮತ್ತು ಚೌಕಟ್ಟುಗಳನ್ನು ನಿರ್ಬಂಧಿಸಲಾಗುತ್ತಿದೆಯಲ್ಲದೆ ಇತರ ಮಂಡಲಗಳಿಗೆ ಅರ್ಹವಾದ ಪ್ರಾಧಾನ್ಯವನ್ನು ನೀಡಲಾಗುವುದಿಲ್ಲ. ಇದು ಪರಿಹರಿಸಲ್ಪಡಬೇಕಾದ ಸಮಸ್ಯೆಯಾಗಿದೆ. ಬುದ್ಧಿಯ ಕುರಿತಾಗಿರುವ ತಪ್ಪಾದ ದೃಷ್ಟಿಕೋನದ ಆಧಾರದಿಂದಾಗಿ ಹಾಗೂ ತಪ್ಪಾದ ವ್ಯಾಖ್ಯಾನದಿಂದಾಗಿ ಈ ರೀತಿ ಸಂಭವಿಸುವುದು. ಬಹುಮುಖ ಬುದ್ಧಿಗೆ ಪ್ರಥಮವಾಗಿ ಪರಿಗಣನೆಯನ್ನು ನೀಡಿ ತಯಾರಿಸಲ್ಪಟ್ಟ ಪಾಠ ಯೋಜನೆಗೆ ಎಲ್ಲಾ ವಿಕಾಸ ಮಂಡಲಗಳು ಒಳಗೊಂಡಿರುತ್ತವೆ. ಮಾತ್ರವಲ್ಲದೆ, ಬುದ್ಧಿಗೆ ಸಂಬಂಧಪಟ್ಟ ಹೆತ್ತವರ ಮನೋಭಾವ ತಿದ್ದವುದಕ್ಕೂ ಕೂಡಾ ಸಹಕಾರಿಯಾಗಿರುತ್ತದೆ. ವಿಶ್ವವನ್ನು ತಿಳಿಯಲು ಮತ್ತು ವ್ಯಾಖ್ಯಾನಿಸಲು ಮತ್ತು ಪಾಲ್ಗೊಳ್ಳಲು ಮಕ್ಕಳನ್ನು ಪ್ರಾಪ್ತರನ್ನಾಗಿಸುವ ಒಂದು ನಿರಂತರ ಪ್ರಕ್ರಿಯೆಯಾಗಿದೆ ವಿದ್ಯಾಭ್ಯಾಸ, ಅದಕ್ಕಾಗಿ ವಿಷಯಗಳನ್ನು ಆಧಾರವಾಗಿರಿಸಿಕೊಂಡು ಬಹುಮುಖ ಬುದ್ಧಿ ಸಿದ್ಧಾಂತ, ವಿಕಾಸ ಪರವಾದ ಅಗತ್ಯಗಳು ಸಂಯೋಜಿತ ರೀತಿ ಎಂಬಿವುಗಳನ್ನು ಪರಿಗಣಿಸಿಕೊಂಡಿರುವ ಚಟುವಟಿಕೆಗಳಿಗೆ ಅವಕಾಶ ನೀಡಬೇಕು. ಬಹುಮುಖಬುದ್ಧಿ ಮತ್ತು ವಿಕಾಸ ಮಂಡಲಗಳನ್ನು ಹೇಗೆ ಪರಸ್ಪರ ಹೊಂದಿಸಬಹುದೆಂದು ಕೆಳಗೆ ಕೊಡಲಾಗಿದೆ.




## ಪ್ರಾಯಕ್ಕೆ ಹೊಂದಿಕೊಂಡಿರುವ ಅನುಭವಗಳು

ವ್ಯತ್ಯಸ್ತ ವಯಸ್ಸಿನ ಮಕ್ಕಳ ಅಗತ್ಯಗಳು ಮತ್ತು ಸಾಮರ್ಥ್ಯಗಳು ವ್ಯತ್ಯಸ್ತವಾಗಿರುತ್ತವೆ. ವ್ಯಕ್ತಿ ವಿಕಾಸವು ನಿರಂತರವಾಗಿ ಮುಂದುವರಿಯುವುದು. ಉದಾಹರಣೆಯಾಗಿ ಮೂರು ವಯಸ್ಸಿನ ಮಗು ಕೇಳಲು ಮತ್ತು ಮಾತನಾಡಲು ಹೆಚ್ಚು ಇಷ್ಟಪಡುತ್ತಾನೆ. ಕ್ರಿಯಾಶೀಲನಾಗಲು ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡಲು ಇಷ್ಟಪಡುತ್ತಾನೆ. ನಿರ್ಮಾಣ ಚಟುವಟಿಕೆಗಳು, ಓಟ, ಜಿಗಿತ, ಮೊದಲಾದ ಚಲನೆಗೆ ಸಂಬಂಧಪಟ್ಟ ಚಟುವಟಿಕೆಗಳಲ್ಲಿ ಆನಂದವನ್ನು ಕಂಡುಕೊಳ್ಳುತ್ತಾನೆ.

ನಾಲ್ಕು ವಯಸ್ಸಾಗುವಾಗ ಸೂಕ್ಷ್ಮ ಪೇಶಿ ಚಲನೆಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಇಷ್ಟಪಡುತ್ತಾನೆ. ಸೂಕ್ಷ್ಮವಾಗಿ ಚಿತ್ರ ರಚಿಸಲು, ಕತ್ತರಿ ಉಪಯೋಗಿಸಿ ತುಂಡರಿಸಲು ಮಗು ಪ್ರಯತ್ನಿಸುತ್ತಾನೆ. ನಿಜಸ್ಥಿತಿಗಳನ್ನು ನಿರೀಕ್ಷಣೆ ಮಾಡಲು ಅವುಗಳ ವಿಶೇಷತೆಗಳಲ್ಲಿ (ಬಣ್ಣ, ಆಕೃತಿ, ವಿಸ್ತಾರ) ತನ್ನ ಗಮನವನ್ನು ಕೇಂದ್ರೀಕರಿಸಲು ಮತ್ತು ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಮಗುವಿಗೆ ಸಾಧ್ಯ. ಗಣಿತ ಆಶಯಕ್ಕೆ ಸಂಬಂಧಿಸಿದ ತಿಳುವಳಿಕೆಗಳನ್ನು ಉಪಯೋಗಿಸಲು ಮತ್ತು ಸಮಸ್ಯಾ ಪರಿಹಾರಕ್ಕೆ ಬೇಕಾಗುವ ಚಟುವಟಿಕೆಗಳಲ್ಲಿ ನಿರತನಾಗಲು ಸಾಧ್ಯವಾಗುವುದು.

ಮೂರು ವಯಸ್ಸಿನ ಮಕ್ಕಳು ಸ್ವತಃ ಸಮಾಂತರ ಆಟಗಳಲ್ಲಿ ತೊಡಗಿಕೊಳ್ಳಲು ಇಷ್ಟಪಡುತ್ತಾರೆ. ಆದರೆ ನಾಲ್ಕು ವಯಸ್ಸಿನ ಮಕ್ಕಳು ಗುಂಪುಗಳಾಗಿ ಸಹಕಾರ ಮನೋಭಾವದೊಂದಿಗೆ ಆಟವಾಡಲು ಇಷ್ಟಪಡುತ್ತಾರೆ. ಒದಕ್ಕೊಂದನ್ನು ಹೊಂದಿಸಿಕೊಳ್ಳಲು, ಅನುಭವಗಳನ್ನು ಮತ್ತು ಘಟನೆಗಳನ್ನು ನೆನಪಿಸಿಕೊಳ್ಳಲು ಇರುವ ಸಾಮರ್ಥ್ಯ ಮೂರು ವಯಸ್ಸಿನ ಮಕ್ಕಳಿಗಿಂತ ಹೆಚ್ಚಾಗಿರುವುದು. ಅಕ್ಷರಗಳು, ವಾಕ್ಯಗಳು ಎಂಬಿವುಗಳನ್ನು ಕಲಿಸುವುದಕ್ಕಿಂತ ಭಾಷಾ ಪರವಾದ ಕಲಿಕಾ ವಾತಾವರಣ ಸೃಷ್ಟಿಸಿ ಭಾಷೆಯನ್ನು ಕರಗತ ಮಾಡುವುದಕ್ಕೆ ಪ್ರಾಧಾನ್ಯತೆ ನೀಡಬೇಕು. ಆಸಕ್ತಿದಾಯಕವಾದವುಗಳನ್ನು ಬರೆಯಲು ಮಗು ಇಷ್ಟಪಡುತ್ತಾನೆ. ಸ್ವಂತ ಹೆಸರನ್ನು ಬರೆಯಲು ಮಕ್ಕಳು ಇಚ್ಛಿಸುತ್ತಾರೆ. ಸಿದ್ಧತೆಯೊಂದಿಗೆ ಬರವಣಿಗೆಗೂ ಓದುವಿಕೆಗೂ ಪ್ರಯತ್ನಿಸುವಾಗ ಇದಕ್ಕೆ ಅವಕಾಶ ನೀಡಬಹುದು. ಆಶಯ ವಿನಿಮಯಕ್ಕೆ ಮಗು ಇಚ್ಛಿಸುವ ರೀತಿಗಳನ್ನು ಪ್ರೋತ್ಸಾಹಿಸಬೇಕು.

## ಮಗುವಿನ ಅವಶ್ಯಕತೆಗಳು

ಮಗುವಿನ ಅಗತ್ಯಗಳ ಪ್ರತ್ಯೇಕತೆಗಳನ್ನು ಗಮನಿಸಿರುವಿರಾ?

ಅವುಗಳನ್ನು ಈ ಕೆಳಗಿನಂತೆ ಹೇಳಬಹುದು.

- ಆಟಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿರುತ್ತಾನೆ.
- ನಿರೀಕ್ಷಣೆಗೂ, ಪ್ರಯೋಗಗಳಲ್ಲಿ ಏರ್ಪಡುವುದಕ್ಕೂ, ಸವಾಲುಗಳನ್ನು ಕೈಗೆತ್ತಿಕೊಳ್ಳುವುದಕ್ಕೂ ಸ್ವಾತಂತ್ರ್ಯವನ್ನು ಮಕ್ಕಳು ಇಚ್ಛಿಸುತ್ತಾರೆ.
- ಅವಕಾಶಗಳು, ಸೂಚನೆಗಳು, ಸೂಕ್ತವಾದ ಸಹಾಯ, ಸುರಕ್ಷತೆ ಎಂಬಿವುಗಳ ಮೂಲಕ ಪಡೆಯುವ ಗೆಲುವುಗಳಲ್ಲಿ ಆನಂದಿಸಲು ಇಚ್ಛಿಸುತ್ತಾನೆ.
- ಪರಸ್ಪರ ಸಹಕಾರ ಮನೋಭಾವದ ಲೋಕವನ್ನು ಸೃಷ್ಟಿಸಲು ಸ್ವತಃ ತನ್ನ ಇಷ್ಟಾನಿಷ್ಟಗಳನ್ನು ಬದಲಾಯಿಸಲು ತಯಾರಾಗುವನು.
- ಇನ್ನೊಬ್ಬರ ಅಭಿಪ್ರಾಯಗಳನ್ನು ಕೇಳಲು, ವಿನಿಮಯ ಮಾಡಲು ಗೆಳೆಯರ ಸ್ಥಿತಿಗೆ ಹೊಂದಿಕೊಂಡು, ಪರಸ್ಪರ ಹೊಂದಾಣಿಕೆಯಿಂದ ಸಂತೋಷವನ್ನು ಕಂಡುಕೊಳ್ಳಲು ಇಚ್ಛಿಸುತ್ತಾನೆ.

ಇವುಗಳೆಲ್ಲ ಬಹಳ ಪ್ರಾಧಾನ್ಯದಿಂದ ಕೂಡಿವೆ. ಗುಣಾತ್ಮಕವಾದ ಬದಲಾವಣೆಗೆ ಆಧಾರವೂ ಆಗಿದೆ. ಇಂತಹ ಸಂದರ್ಭಗಳನ್ನು ಉತ್ತೇಜಿಸಲಿರುವ ಅನುಭವಗಳು ಸೃಷ್ಟಿಸಲ್ಪಡಬೇಕಾಗಿದೆ.

ಈ ಪಠ್ಯಕ್ರಮವನ್ನು ವಿನಿಮಯ ಮಾಡುವ ಅಧ್ಯಾಪಕರು ಗಮನಿಸಬೇಕಾದ ಇತರ ವಿಷಯಗಳು.

- ಆಟದ ಮೂಲಕ ಕಲಿಕೆಗಿರುವ ಚಟುವಟಿಕೆಗೆ ಹೆಚ್ಚಿನ ಒತ್ತು ನೀಡಿ ಪಾಠ ಯೋಜನೆಯನ್ನು ತಯಾರಿಸಬೇಕು.
- ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ಬಂಧಿಸುವ ಬದಲು ಸಹಾಯವನ್ನು ವಾಗ್ದಾನ ಮಾಡಿಕೊಂಡು ಪ್ರಚೋದನೆ ನೀಡಿ, ಪ್ರೋತ್ಸಾಹ ಮತ್ತು ಅಂಗೀಕಾರವನ್ನು ನೀಡಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಮಕ್ಕಳನ್ನು ಸಮರ್ಥರನ್ನಾಗಿಸಬೇಕು.
- ಮಗುವಿನ ಮನಸ್ಸಿನಲ್ಲಿರುವ ಆಶಯಗಳು ಮತ್ತು ಚಿಂತನೆಗಳನ್ನು ಪ್ರಕಟಪಡಿಸಲು ಅವಕಾಶ ನೀಡಬೇಕು. ಸಂಭಾಷಣೆಗಳಿಗೂ ವಿವರಣೆಗಳಿಗೂ ಹೆಚ್ಚಿನ ಪ್ರಾಧಾನ್ಯ ಸಿಗಬೇಕು.
- ಅಭಿವ್ಯಕ್ತಿ ಮತ್ತು ನೂತನ ಸೃಷ್ಟಿಗಳ ವಿವಿಧ ಸಾಧ್ಯತೆಗಳನ್ನು ತೆಗೆದುಕೊಡಬೇಕು.
- ಚಟುವಟಿಕೆಗಳನ್ನು ಯಶಸ್ವಿಯಾಗಿ ಪೂರ್ತಿಗೊಳಿಸಲು ಸಹಾಯ ನೀಡಬೇಕು.
- ಇತರರೊಂದಿಗೆ ಬೆರೆಯಲು ಅವಕಾಶ ನೀಡಿ ತನ್ನ ಅರಿವಿನ ವಿಕಾಸಕ್ಕೆ ದಾರಿ ಮಾಡಿಕೊಡಬೇಕು.
- ಭಯ ರಹಿತವೂ, ಸಂತೃಪ್ತವೂ ಆದ, ಸೌಹಾರ್ದ ವಾತಾವರಣ ಸೃಷ್ಟಿಸಬೇಕು.
- ಮಗುವಿನ ಚಿಂತನೆಯನ್ನು ವಿಶ್ಲೇಷಿಸಿ ಪ್ರೋತ್ಸಾಹ ನೀಡಬೇಕು.

ವಿಷಯಗಳೊಂದಿಗೆ ಸಂಯೋಜಿತ ಚಟುವಟಿಕೆಗಳನ್ನು ತಯಾರಿಸುವಾಗ ಮಗುವಿನ ಪ್ರಾಯ, ಅವಶ್ಯಕತೆ, ಮಗುವಿನೊಂದಿಗಿರುವ ಮನೋಭಾವ ಎಂಬಿವು ಪ್ರಧಾನವಾಗಿವೆ. ಮುಂದಿನ ಅಧ್ಯಾಯಗಳಲ್ಲಿ ಬರುವ ಪಾಠಗಳಲ್ಲಿ ಇದರ ವಿವರವಾದ ಮಾಹಿತಿಗಳಿವೆ. ಪ್ರಾಯೋಗಿಕ ಚಟುವಟಿಕೆಗಳಿಗೆ ಬೇಕಾದ ಸೂಚನೆಗಳೂ ಇವೆ. ಜ್ಞಾನವನ್ನು ನಿರ್ಮಿಸುವ ಅಧ್ಯಾಪಕ ಎಂಬ ನೆಲೆಯಲ್ಲಿ ಇವುಗಳನ್ನು ಸ್ವಾಯತ್ತಗೊಳಿಸಿ ಸ್ವತಃ ತನ್ನ ಸೃಜನಾತ್ಮಕತೆ ಮತ್ತು ಸಂಶೋಧನೆಗಳ ಕಂಡುಕೊಳ್ಳುವಿಕೆಗಳನ್ನು ಉಪಯೋಗಿಸಿ ಆಂತರಿಕ ದೃಷ್ಟಿಕೋನದೊಂದಿಗೆ ಕ್ರಿಯಾಶೀಲರಾಗಬೇಕಾಗಿದೆ.








# ವಿಕಾಸದ ವಲಯಗಳು ಮತ್ತು ಸಾಮರ್ಥ್ಯಗಳು

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ(2005) ಪ್ರಕಾರ ಆರಂಭದ 8 ವರ್ಷಗಳು ಮಕ್ಕಳ ಜೀವನ ಪರ್ಯಂತವಾದ ವಿಕಾಸಕ್ಕೆ ಮತ್ತು ಅವರ ನೈಪುಣ್ಯಗಳ ಪೂರ್ಣತೆಗಾಗಿ ಅಡಿಪಾಯ ನೀಡುವ ನಿರ್ಣಾಯಕ ಘಟ್ಟವಾಗಿದೆ. ಮೆದುಳಿನ ಬೆಳವಣಿಗೆಯು 85% ನಡೆಯುವುದು ಮೊದಲಿನ 3 ವರ್ಷದೊಳಗಾಗಿ ಆಗಿದೆ. ಮಗುವಿನ ಬೆಳವಣಿಗೆ ಮತ್ತು ವಿಕಾಸವು ಒಂದು ನಿರಂತರ ಪ್ರಕ್ರಿಯೆಯಾಗಿದೆ. ಶೈಶವ ಹಂತದಲ್ಲಿ ತೀವ್ರಗತಿಯ ಬೆಳವಣಿಗೆ ಮತ್ತು ವಿಕಾಸವು ಉಂಟಾಗುವುದು. ಆದುದರಿಂದ ಅದಕ್ಕೆ ಅಗತ್ಯವಿರುವ ಎಲ್ಲಾ ಬೆಂಬಲಗಳನ್ನು ನೀಡಲಿರುವ ವ್ಯವಸ್ಥೆಯನ್ನು ಖಾತರಿಪಡಿಸಬೇಕು. ಮೆದುಳಿನ ಬೆಳವಣಿಗೆ ಅತಿ ವೇಗವಾಗಿ ನಡೆಯುವ ಹಂತವಾದುದರಿಂದ ಈ ಪ್ರಾಯದಲ್ಲಿ ಕಲಿಕೆಯ ಅನುಭವಗಳಿಗೆ ಹೆಚ್ಚು ಪ್ರಾಧಾನ್ಯವನ್ನು ನೀಡಬೇಕು.

## ಶಿಶು ಸ್ವಭಾವ

ಮಕ್ಕಳು ತುಂಬಾ ಚಲನಶೀಲರು, ಪ್ರಕೃತಿಯ ವಿದ್ಯಮಾನಗಳಲ್ಲಿ ಸುತ್ತಮುತ್ತಲಿರುವ ಮನುಷ್ಯರನ್ನು ಒಳಗೊಂಡ ಸರ್ವಜೀವಜಾಲಗಳಲ್ಲಿ ಜಿಜ್ಞಾಸೆಗೊಳ್ಳುವವರೂ ಆಗಿರುತ್ತಾರೆ. ಸುತ್ತಮುತ್ತಲಿನ ಪರಿಸರದ ಕುರಿತು ತಿಳಿಯುವುದಕ್ಕೂ ನಿರಂತರ ಪ್ರಶ್ನೆಗಳನ್ನು ಕೇಳುವುದಕ್ಕೂ ಉತ್ಸುಕರಾಗಿರುತ್ತಾರೆ. ಈ ಪ್ರಾಯದಲ್ಲಿರುವ ಮಕ್ಕಳ ವಿಶೇಷತೆಗಳನ್ನು ಸರಿಯಾಗಿ ಅರ್ಥೈಸಿಕೊಂಡರೆ ಮಾತ್ರ ಅವರಿಗೆ ನೀಡಬೇಕಾದ ಅನುಭವ ಚಟುವಟಿಕೆಗಳನ್ನು ರೂಪಿಸಲು ಸಾಧ್ಯ.

ಮಗುವಿನ ಸ್ವಭಾವದ ಕುರಿತು ಸ್ಪಷ್ಟವಾದ ಅಭಿಪ್ರಾಯವನ್ನು ಮಂಡಿಸಿದವರು ರುಸ್ಸೋ, ಸ್ವಭಾವವನ್ನು ಪರಿಗಣಿಸಿಕೊಂಡು ನೈಜ ರೀತಿಯ ವಿಕಾಸವನ್ನು ಖಾತರಿಪಡಿಸಲಿರುವ ವಿದ್ಯಾಭ್ಯಾಸಕ್ಕಾಗಿ ರುಸ್ಸೋ ವಾದಿಸಿದರು. ಜೋನ್‌ಡ್ಯೂಯಿ ಕೂಡಾ ವಿದ್ಯಾಭ್ಯಾಸದಲ್ಲಿ ಮಕ್ಕಳ ಸ್ವಭಾವ ಮತ್ತು ಸಹಜವಾದ ಸಾಮರ್ಥ್ಯಗಳನ್ನು ಪರಿಗಣಿಸಬೇಕೆಂದು ಶಕ್ತವಾಗಿ ವಾದಿಸಿದ ದಾರ್ಶನಿಕರಾಗಿರುವರು. ಜ್ಞಾನ ನಿರ್ಮಾಣಕ್ಕೆ ಮತ್ತು ಸ್ವಯಂ ನಿಯಂತ್ರಿಸುವುದಕ್ಕಿರುವ ಮಗುವಿನ ಸಾಮರ್ಥ್ಯವನ್ನು ಅಂಗೀಕರಿಸಿ ಪೋಷಿಸುವ ಜ್ಞಾನ ನಿರ್ಮಾಣವು ಮಗುವಿನ ಸ್ವಭಾವವನ್ನು ಪರಿಗಣಿಸಿಕೊಂಡು ಅನುಭವಗಳನ್ನು ರೂಪಿಸುವುದಕ್ಕೆ ಪ್ರತ್ಯೇಕ ಒತ್ತು ನೀಡುತ್ತಿದೆ.

**ಪ್ರಿ ಸ್ಕೂಲ್ ಹಂತದಲ್ಲಿ ಮಗುವಿನ ಸ್ವಭಾವದ ವಿಶೇಷತೆಗಳು**

- ನಾನು, ನನ್ನದು ಎಂಬ ಮನೋಭಾವ
- ಆಟಗಳಲ್ಲಿರುವ ಅತೀವ ಆಸಕ್ತಿ
- ಅತಿಯಾದ ಜಿಜ್ಞಾಸೆ
- ಚಲನಾಶೀಲ ಸ್ವಭಾವ
- ಪ್ರೀತಿ, ಅಂಗೀಕಾರವನ್ನು ಇಷ್ಟಪಡುವುದು.
- ಸ್ವಾತಂತ್ರ್ಯ ಇಷ್ಟಪಡುವುದು, ಸ್ವಾತಂತ್ರ್ಯ ಇಲ್ಲದಾಗ ಪ್ರತಿಭಟಿಸುವುದು.
- ಭಾವನೆ ಮತ್ತು ಸೃಜನಾತ್ಮಕತೆ.
- ಗುಂಪಾಗಿ ಆಟಗಳಲ್ಲೂ ಚಟುವಟಿಕೆಗಳಲ್ಲೂ ಭಾಗವಹಿಸುತ್ತಾನೆ.
- ಅನುಕರಣ ಸ್ವಭಾವ
- ಎಲ್ಲಾ ವಿಷಯಗಳನ್ನು ತನ್ನದೇ ದೃಷ್ಟಿಕೋನದಿಂದ ನೋಡುವುದು.
- ಏಕಾಗ್ರತೆ (Attention span) ಕಡಿಮೆ.
- ಸ್ವತಂತ್ರವಾಗಿ ಚಿಂತಿಸಲು ಮತ್ತು ಭಯರಹಿತವಾದ ವಾತಾವರಣದಲ್ಲಿ ಓಡಾಡಲು ಆಸಕ್ತಿ
- ಕಥೆ ಮತ್ತು ಪದ್ಯದಲ್ಲಿ ಇಷ್ಟ
- ಸುತ್ತಮುತ್ತಲಿರುವ ವಸ್ತುಗಳನ್ನು ಜೀವ ಇರುವವುಗಳಾಗಿ ಕಲ್ಪಿಸಿ ಅವುಗಳೊಂದಿಗೆ ಬೆರೆಯುವುದು.

- ಮುಂದೇನಾಗುವುದೆಂಬ ಚಿಂತನೆಯಿಲ್ಲದೆ ದುಡುಕಿ ವ್ಯವಹರಿಸುವುದು
- ಕೈಗೆ ಸಿಗುವ ಸಾಮಗ್ರಿಗಳನ್ನು ತೆರೆದು ನೋಡುವುದಕ್ಕೂ ಮತ್ತು ಪುನಃಕ್ರಮೀಕರಿಸುವುದಕ್ಕೂ ಹೊಸ ಸೃಷ್ಟಿಗಳನ್ನು ತಯಾರಿಸುವುದಕ್ಕೂ ಆಸಕ್ತಿ ವಹಿಸುವುದು.
- ಪ್ರಶ್ನೆಗಳನ್ನು ಕೇಳುವ ಮತ್ತು ಸಂಶೋಧನಾತ್ಮಕ ಮನೋಭಾವ ಇರುವುದು.
- ಸೂಕ್ಷ್ಮ ಸ್ಥೂಲಪೇಶಿಗಳ ಮಿತವಾದ ಚಲನೆ.
- ಅಂಗಾಂಗಗಳ ಹೊಂದಾಣಿಕೆಯ ಸಾಮರ್ಥ್ಯದ ಕೊರತೆ
- ಭಾವೋದ್ವೇಗಗಳನ್ನು ನಿಯಂತ್ರಿಸುವ ಸಾಮರ್ಥ್ಯ ಕಡಿಮೆ. (ಸಂಕಟ, ಕೋಪ, ಸಂತೋಷ ಮೊದಲಾದ ಭಾವನೆಗಳ ತೀವ್ರವೂ ಕ್ಷಣಿಕವೂ ಆದ ಪ್ರಕಟಣೆ)

ಅಮೂರ್ತವಾದ ಆಶಯಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ ಕಡಿಮೆ. ಪ್ರತಿಯೊಬ್ಬರಲ್ಲೂ ಅಂತರ್ಲೀನವಾಗಿರುವ ಸಾಮರ್ಥ್ಯಗಳನ್ನು ಗರಿಷ್ಠ ಮಟ್ಟಕ್ಕೆ ಏರಿಸುವಂತಹ ಚಟುವಟಿಕೆಗಳು ತಯಾರಾಗಬೇಕು. ಮಗುವಿನ ಸ್ವಭಾವವನ್ನರಿತುಕೊಂಡರೆ ಮಾತ್ರ ವಿದ್ಯಾರ್ಥಿಕೇಂದ್ರಿತ ಕಲಿಕಾ ಚಟುವಟಿಕೆಗಳನ್ನು ತಯಾರಿಸುವುದಕ್ಕೆ ಸಾಧ್ಯವಾಗಬಹುದು. ಶಿಶುಕೇಂದ್ರೀಕೃತವೂ ಪ್ರಜಾಪ್ರಭುತ್ವ ಪರವೂ ಜೀವನಗಂಧಿಯೂ ಆದ ಕಲಿಕಾ ಚಟುವಟಿಕೆಗಳನ್ನು ತಯಾರಿಸುವುದಕ್ಕೆ ಮಗುವಿನ ಕುರಿತು ಸರಿಯಾದ ತಿಳುವಳಿಕೆ ಲಭಿಸಿರಬೇಕು.

## ಮೂರು, ನಾಲ್ಕು ವಯಸ್ಸಿನವರಿಗೆ ನೈಪುಣ್ಯ ಪ್ರಸ್ತಾವನೆಗಳು ತಯಾರಿಸುವುದರ ಪ್ರಾಧಾನ್ಯ

ಶಿಶುಕೇಂದ್ರಿತ ಕಲಿಕಾ ವಾತಾವರಣದಲ್ಲಿ ಮಕ್ಕಳ ಬೆಳವಣಿಗೆ ಹಾಗೂ ವಿಕಾಸವನ್ನು ಪರಿಗಣಿಸಿರುವ ಸಾಮಾನ್ಯ ಕಲಿಕಾ ಸಮೀಪನವಾಗಿರಬೇಕು. ಪ್ರತಿಯೊಂದು ವಯಸ್ಸಿನ ಮಕ್ಕಳು ವ್ಯತ್ಯಸ್ತವಾದ ವಿಕಾಸದ ಅಗತ್ಯವುಳ್ಳವರಾಗಿದ್ದಾರೆ. ಆದುದರಿಂದ ಮೂರು, ನಾಲ್ಕು ವಯಸ್ಸಿನವರಿಗೆ ಪ್ರತ್ಯೇಕವಾದ ಚಟುವಟಿಕೆಗಳ ಅಗತ್ಯ ಬರುವುದು. ಈ ವಯಸ್ಸಿನವರ ಪ್ರತ್ಯೇಕತೆಗಳನ್ನು ಗುರುತಿಸಿದರೆ ಇದರ ಪ್ರಾಧಾನ್ಯವನ್ನು ತಿಳಿಯಬಹುದು. ಪ್ರಕ್ರಿಯಾನುಭವಗಳು ನೈಪುಣ್ಯಕ್ಕೆ ಸಂಬಂಧಿಸಿದ್ದು ಮಗುವಿಗೆ ಸ್ವತಂತ್ರವಾಗಿ ಭಾಗವಹಿಸಲು ಸಾಧ್ಯವಾಗಿರುವುದಾಗಿರ ವಿಕಾಸಕ್ಕೆ ಉಪಯೋಗಿಸುವ ಕಲಿಕಾ ಚಟುವಟಿಕೆಗಳು ಮೂರು ವಯಸ್ಸಿನವರು ಮತ್ತು ನಾಲ್ಕು ವಯಸ್ಸಿನವರು ಕೈಗೊಳ್ಳುವುದು ವ್ಯತ್ಯಸ್ತ ಮಟ್ಟಗಳಲ್ಲಾಗಿರಬಹುದು.

## ಮೂರು ವಯಸ್ಸಿನವರು [3+]

- ಸಾಮಾನ್ಯ ಸ್ಥಾಯಿಯಾದ ಒಂದು ಸ್ವಭಾವ ರೀತಿಯನ್ನು ಮೂರು ವರ್ಷ ಪ್ರಾಯದೊಳಗೆ ಮಕ್ಕಳು ಗಳಿಸಿರುತ್ತಾರೆ.
- ತನ್ನ ಪ್ರಾಯ, ಲಿಂಗ ಪದವಿ ಎಂಬಿವುಗಳಿಗೆ ಸಂಬಂಧಿಸಿ ಮಗುವಿಗೆ ತಿಳುವಳಿಕೆ ವಿಕಾಸಗೊಂಡಿರಬಹುದು.
- ಕುಟುಂಬ ಪರಿಸರದಿಂದ ಸುತ್ತಮುತ್ತಲ ಕುರಿತು ನೆರೆಕರೆಗಳ ಬಗ್ಗೆ ಸಮಪ್ರಾಯದವರಾದ ಮಕ್ಕಳ ಕುರಿತು ಮೂರು ವಯಸ್ಸಿನವರ ಗಮನ ಮತ್ತು ಆಸಕ್ತಿ ವಿಕಾಸಗೊಳ್ಳುವುದು.
- ಈ ಹಂತದಲ್ಲಿ ಕೇವಲ ಕೌಟುಂಬಿಕ ವಾತಾವರವು ಮಗುವಿಗೆ ಪ್ರಚೋದನೆಯಾಗಿರುವುದಿಲ್ಲ.
- ಈ ಹಂತವು ತನ್ನ ಸುತ್ತಮುತ್ತಲಿನ ಮೇಲೆ ಮಗುವಿನ ಸ್ವಾತಂತ್ರ್ಯ ಘೋಷಿಸುವ ಹಂತವಾಗಿದೆ. ಸ್ವತಂತ್ರವಾಗಿ ಹಾಡಲು, ಮೆಟ್ಟಿಲುಗಳನ್ನು ಏರಿಳಿಯಲು ಮಗು ಸಾಮರ್ಥ್ಯ ಗಳಿಸಿರುವುದು.
- ಹೊಸತಾಗಿ ಗಳಿಸಿದ ಸಾಮರ್ಥ್ಯಗಳನ್ನು ಉಪಯೋಗಿಸುವುದರಲ್ಲಿ ತಡೆಯನ್ನು ಸೃಷ್ಟಿಸುವುದನ್ನು ಮಕ್ಕಳು ಇಷ್ಟಪಡುವುದಿಲ್ಲ.
- ಮಗು ತನ್ನ ಪ್ರತಿಭಟನೆಯನ್ನು ಸಂದರ್ಭ ಸಮಯ ನೋಡದೆಯೇ ಪ್ರಕಟಪಡಿಸುವುದು. ಚಲಿಸುವ ವಸ್ತುಗಳನ್ನು ಉಪಯೋಗಿಸಲು ಮಗು ಆಸಕ್ತಿ ತೋರಿಸುವುದು.

- ವಿಶೇಷವಾದ ಸೂಕ್ಷ್ಮಪೇಶಿ ವಿಕಾಸವೂ ಸಂಬಂಧಿಸಿದ ನೈಪುಣ್ಯಗಳೂ ಈ ಹಂತದಲ್ಲಿ ವಿಕಾಸಗೊಳ್ಳುವುದು. ಬಟ್ಟೆಯ ಗುಂಡಿಗಳನ್ನು ಹಾಕಲು, ಚಪ್ಪಲಿ ಧರಿಸಲು, ಕೈ ತೊಳೆಯಲು ಮಗುವಿಗೆ ಸಾಧ್ಯವಾಗುವುದು.
- ಕ್ರಯೋನ್, ಪೆನ್ಸಿಲ್ ಎಂಬಿವುಗಳನ್ನು ಉಪಯೋಗಿಸಲು ಮಗುವಿಗೆ ಆಸಕ್ತಿಯುಂಟಾಗುವುದು. ಲಂಬ ಭೂಸಮಾಂತರ ವೃತ್ತ ಎಂಬೀ ಜ್ಯಾಮಿತಿಯ ಆಕೃತಿಗಳನ್ನು ರಚಿಸಲು ಮಗುವಿಗೆ ಸಾಧ್ಯವಾಗುವುದು.
- ವೃತ್ತ ಬರೆದು ಅದರಲ್ಲಿ ಮನುಷ್ಯ ಮುಖ, ಕಣ್ಣು, ಮೂಗು ಇತ್ಯಾದಿಗಳನ್ನು ರಚಿಸಲು ಸಾಮಾನ್ಯವಾಗಿ ಆಸಕ್ತಿ ಪ್ರಕಟಪಡಿಸುವುದು.
- ಈ ಹಂತದಲ್ಲಿ ಪ್ರೋತ್ಸಾಹವಿರುವ ವಾತಾವರಣ ಲಭಿಸಿದರೆ ಮಗು ತುಂಬಾ ಬೆಳೆಯುವುದು.
- ಈ ಹಂತದಲ್ಲಿ ಮಗುವಿನಲ್ಲಿ ಮಾತನಾಡುವ ಸಾಮರ್ಥ್ಯ ಎರಡುಪಟ್ಟು ಹೆಚ್ಚುತ್ತದೆ. ಮೂರು ವಸ್ತುಗಳನ್ನು ಎಣಿಸಲು, ಪೂರ್ಣವಾಗಿ ಒಂದು ವಾಕ್ಯ ಹೇಳಲು ಸಾಧ್ಯವಾಗುತ್ತದೆ. ಕಥೆಗಳನ್ನು ಆಲಿಸಲು ಮಗುವಿಗೆ ಆಸಕ್ತಿ ಹೆಚ್ಚುವುದು.
- ಚಿತ್ರ ತೋರಿಸಿ ಕಥೆ ಹೇಳಿಕೊಡುವುದು ಹೆಚ್ಚು ಪ್ರಚೋದನಕಾರಿಯಾಗಿದೆ. ಇದು ಮಗುವಿನ ನಿರೀಕ್ಷಣಾ ಸಾಮರ್ಥ್ಯವನ್ನೂ ಮಾತನಾಡುವ ಸಾಮರ್ಥ್ಯವನ್ನೂ ಹೆಚ್ಚಿಸುತ್ತದೆ.
- ಈ ಹಂತದಲ್ಲಿ ಸಮಪ್ರಾಯದವರ ಆಟಗಳನ್ನು ನಿರೀಕ್ಷಿಸಿ ಅದೇ ರೀತಿಯಲ್ಲಿ ಸ್ವಂತ ಆಟಿಕೆಯನ್ನು ಇಟ್ಟು ವೈಯಕ್ತಿಕವಾದ ಸಮಾಂತರ ಆಟದಲ್ಲಿ ಏರ್ಪಡಲು ಮಗುವಿಗೆ ಇಷ್ಟವಾಗುವುದು. ತನ್ನ ಆಟಿಕೆಗಳನ್ನು ಗೆಳೆಯರಿಗೆ ಕೊಟ್ಟು, ಪಡೆದು ಆಡಲಿರುವ ಸ್ವಭಾವ ಸಾಮರ್ಥ್ಯ ಬೆಳವಣಿಗೆಯಾಗಿರುವುದಿಲ್ಲ.
- ಈ ಹಂತವು ತನ್ನ ಆಸೆಗಳು ಆಸಕ್ತಿಗಳನ್ನೂ ಸಾಧಿಸಲು ಹೆಚ್ಚು, ಹಠ ಸ್ವಭಾವವನ್ನು ನೋಡದೆ ಪ್ರಕಟಿಸುವ ಹಂತವಾಗಿದೆ.

## ನಾಲ್ಕು ವಯಸ್ಸಿನವರು [4+]

- ಶಾರೀರಿಕ ವಿಕಾಸ ಇನ್ನೂ ಹೆಚ್ಚುತ್ತಾ ಒಂದು ಕಾಲಲ್ಲಿ ನಿಲ್ಲಲೂ ಜಿಗಿಯಲೂ ಇರುವ ಆಸಕ್ತಿಯನ್ನೂ ಈ ಹಂತದಲ್ಲಿ ಮಕ್ಕಳು ಪ್ರಕಪಡಿಸುವುದು.
- ಕತ್ತರಿ ಉಪಯೋಗಿಸಿ ಪೇಪರ್ ತುಂಡು ಮಾಡಲು ಸಾಧ್ಯವಾಗುವುದು. ಚಿತ್ರಗಳನ್ನು ಕತ್ತರಿಸಿ ತೆಗೆಯಲು ಆಸಕ್ತಿಯುಂಟಾಗುತ್ತದೆ.
- 3+ರಲ್ಲಿ ಸೂಚಿಸಿದ ಮಾನವ ಮುಖಕ್ಕೆ ಹೆಚ್ಚು ಅವಯವಗಳನ್ನು ಸೇರಿಸಿ ಚಿತ್ರ ಬಿಡಿಸುವುದ ಪಡಿಸುವುದರೊಂದಿಗೆ ಆಯತವೇ ಮುಂತಾದ ಜ್ಯಾಮಿತಿಯ ರೂಪಗಳನ್ನು ಚಿತ್ರಿಸುವ ಸಾಮರ್ಥ್ಯ ವಿಕಾಸಗೊಳ್ಳುವುದು.
- ಸರಿಯಾದ ರೀತಿಯಲ್ಲಿ ಪೆನ್ಸಿಲ್, ಕ್ರಯೋನ್ ಎಂಬಿವುಗಳನ್ನು ಹಿಡಿಯಲು, ಉಪಯೋಗಿಸಲು ಸಾಧ್ಯವಾಗುವುದು. ಮಾನವ ರೂಪವಲ್ಲದೆ ತನ್ನ ಪರಿಸರದಲ್ಲಿ ತನಗೆ ಇಷ್ಟವಿರುವ ಇತರ ರೂಪಗಳನ್ನು ಚಿತ್ರಿಸಲು ಸಾಮಾನ್ಯವಾಗಿ ಉತ್ಸಾಹ ಉಂಟಾಗುವುದು. ಪ್ರಾಣಿ – ಪಕ್ಷಿಗಳ ಚಿತ್ರವಿರುವ ಪುಸ್ತಕಗಳನ್ನು, ಚಿತ್ರ ಮಾಡಲಿರುವ ಸಾಮಗ್ರಿಗಳನ್ನು ಈ ಹಂತದಲ್ಲಿ ನೀಡಬಹುದಾಗಿದೆ.
- ಚಿತ್ರಗಳಿರುವ ಪುಸ್ತಕಗಳೊಂದಿಗೆ ಚಿತ್ರಕಥೆಗಳನ್ನು ಓದಿ ಆರಿಸಲು ಹೆಚ್ಚು ಆಸಕ್ತಿ ಪ್ರಕಟಪಡಿಸುತ್ತಾರೆ.
- ಮಗು ಚಿತ್ರ ನೋಡಿಯೂ ಅಲ್ಲದೆಯೂ ಪ್ರಶ್ನೆಗಳನ್ನು ಕೇಳಲು ಆರಂಭಿಸುವುದು. ಇದು ಅನುಭವಗಳನ್ನು ಗಳಿಸಲಿರುವ ಮಕ್ಕಳ ಸ್ವಭಾವವವಾಗಿದೆ.
- ಹೇಳಿ/ಓದಿ ಆರಿಸಿದ ಕಥೆಯನ್ನೇ ಪುನಃ ಪುನಃ ಆಲಿಸಲು ಆಸಕಿ ತೋರಿಸುವುದರೊಂದಿಗೆ ಕಥೆ ಹೇಳಲಿರುವ ಸಾಮರ್ಥ್ಯವೂ ಯುಕ್ತಿ ಕಂಡುಹಿಡಿಯಲಿರುವ ಸಾಮರ್ಥ್ಯವೂ ವೃದ್ಧಿಯಾಗುವುದು.
- ಮಗುವಿನ ಸ್ವತಂತ್ರವಾದ ಅನ್ವೇಷಣಾತ್ಮಕ ಸ್ವಭಾವ ಹೆಚ್ಚು ವಿಕಾಸಗೊಳ್ಳುವ ಹಂತವಾಗಿದೆ.
- ವ್ಯಕ್ತಿ ಕೇಂದ್ರಿತ ಆಟದಿಂದ ಇತರ ಮಕ್ಕಳೊಂದಿಗೆ ಸೇರಿರುವ ಕೊಡು ಕೊಳ್ಳುವಿಕೆಯ ಆಟಗಳನ್ನೊಳಗೊಂಡಿರುವ ಆಟಗಳ ಚಟುವಟಿಕೆ ವಿಕಾಸಗೊಳ್ಳುವುದು. ಇತರ ಮಕ್ಕಳೊಂದಿಗೆ ಸೇರಿ ಪಾತ್ರಾಭಿನಯ ಆಟಗಳಲ್ಲಿ ತೊಡಗಲು ಹೆಚ್ಚು ಆಸಕ್ತಿ ತೋರುವುದು.

- ತನ್ನ ಈ ಹಂತದಲ್ಲಿ ಆಸೆಗಳು ಮತ್ತು ಆಸಕ್ತಿಗಳನ್ನು ಸಾಧಿಸಲು ಹೆಚ್ಚು ಹಠ ಸ್ವಭಾವವನ್ನು ಪ್ರಕಟಪಡಿಸುತ್ತಾರೆ/ಹಠ ಈ ಹಂತದಲ್ಲಿ ಹೆಚ್ಚಾಗಿರುತ್ತದೆ.
- ಪಾಯಿಖಾನೆ ಸ್ವಂತವಾಗಿ ಉಪಯೋಗಿಸಲಿರುವ ಸಾಮರ್ಥ್ಯವನ್ನು ಪ್ರಕಟಿಸುವುದು.

ಮೇಲೆ ಸೂಚಿಸಿರುವವುಗಳಿಂದ ಮೂರು ವಯಸ್ಸಿನ ಮತ್ತು ನಾಲ್ಕು ವಯಸ್ಸಿನವರೊಳಗೆ ಹಲವು ವಿಚಾರಗಳಲ್ಲಿ ವ್ಯತ್ಯಾಸವುಂಟೆಂದು ತಿಳಿದುಕೊಂಡಿರಲ್ಲವೇ. ಆದುದರಿಂದ ಅವರಿಗೆ ಒದಗಿಸುವ ಕಲಿಕಾ ಚಟುವಟಿಕೆಗಳಲ್ಲಿ ಉದ್ದೇಶಿಸುವ ಸಾಮರ್ಥ್ಯಗಳಲ್ಲಿಯೂ ಕ್ರಮವಾದ ಬೆಳವಣಿಗೆಯು ಪ್ರತಿಫಲಿಸಬೇಕು. ಪ್ರಿಪ್ರೈಮರಿಗೆ ಪರಿಗಣಿಸಲಿರುವ ಸಾಮರ್ಥ್ಯಗಳು, ವಿಕಾಸಮಂಡಲಗಳು ಬಹುಮುಖಬುದ್ಧಿ ಮಟ್ಟವನ್ನು ಪರಿಗಣಿಸಿ ನೀಡಬೇಕು. ಮೂರು ವಯಸ್ಸಿನವರನ್ನು ಉದ್ದೇಶಿಸಿ ನೀಡುವ ಹಲವು ಸಾಮರ್ಥ್ಯಗಳು ನಾಲ್ಕು ವಯಸ್ಸಿನವರಿಗೂ ಬಾಧಕವಾಗಿದೆ. ಆದರೆ ನಾಲ್ಕು ವಯಸ್ಸಿನವರಿಗೆ ನಿರ್ದೇಶಿಸುವ ಕಲಿಕಾನುಭವಗಳು ಮೂರು ವಯಸ್ಸಿನವರಿಗೆ ಪರಿಗಣಿಸುವ ಅಗತ್ಯವಿಲ್ಲ.

## ವಿಕಾಸ ಮಂಡಲಗಳು – ಸಾಮರ್ಥ್ಯಗಳು

### 4+ ವಯಸ್ಸಿನಲ್ಲಿ ಪೂರ್ತಿಯಾಗುವ ವಿಕಾಸ ಸಾಮರ್ಥ್ಯಗಳು

**ಶಾರೀರಿಕಚಾಲಕ ವಿಕಾಸ**

1. ಶರೀರದ ಗರಿಷ್ಠ ಪೇಶಿಗಳನ್ನು ಪ್ರಯೋಜನಪಡಿಸಿ ಸ್ವತಂತ್ರವಾಗಿ ಚಟುವಟಿಕೆಯನ್ನು ಮಾಡಲು ಸಾಧ್ಯವಾಗುತ್ತದೆ.
2. ಶರೀರದ ಗರಿಷ್ಠ ಪೇಶಿಗಳನ್ನುಪಯೋಗಿಸಿ ಸ್ವತಂತ್ರವೂ ನಿಯಂತ್ರಿತವೂ ಆದ ಸೂಚನೆಗಳನ್ನು ಪಾಲಿಸಿ ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. ಉದಾಹರಣೆಗೆ ಮುಖ, ಭುಜ, ಮಣಿಗಂಟು, ಬೆರಳುಗಳು, ಮೊಣಕಾಲು, ಪಾದ ಎಂಬಿವುಗಳ ಸೂಕ್ಷ್ಮ ಪೇಶಿಗಳನ್ನು ಉಪಯೋಗಿಸಿಕೊಂಡು ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುತ್ತದೆ.
3. ಅಡುಗೆಗೆ ಸಂಬಂಧಿಸಿದ ಉಪಕರಣಗಳು, ಆಹಾರ ಪದಾರ್ಥಗಳು ಎಂಬಿವುಗಳನ್ನು ಉಪಯೋಗಿಸಿ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುವುದು.
4. ಕೈಬೆರಳು, ಮಡಲಕಡ್ಡಿ, ಪೆನ್ಸಿಲ್, ನೀರು, ಚೋಕು, ಕ್ರಯೋನ್, ಸ್ಕೆಚ್‌ಪೆನ್ ಎಂಬಿವುಗಳನ್ನು ಉಪಯೋಗಿಸಿ ಸ್ವತಂತ್ರವಾಗಿ ಚಿತ್ರಗಳನ್ನು ರಚಿಸಲು ಸಾಧ್ಯವಾಗುವುದು.
5. ಸ್ವತಂತ್ರವಾಗಿ ಚಿತ್ರಗಳನ್ನು ರಚಿಸಿ ಬಣ್ಣ ನೀಡಲು ಸಾಧ್ಯವಾಗುವುದು. (ಕ್ರಯೋನ್, ಸ್ಕೆಚ್‌ಪೆನ್, ಪೆನ್ಸಿಲ್, ವಾಟರ್‌ಕಲರ್, ಮರದ ಹುಡಿ, ಪೇಪರ್, ಬಟ್ಟೆ........)
6. ಕಾಗದ, ಬಟ್ಟೆ ಎಂಬಿವುಗಳನ್ನು ಮಡಚಲು, ಕತ್ತರಿಸಲು, ಅಂಟಿಸಲು ಸಾಧ್ಯವಾಗುತ್ತದೆ.
7. ಕತ್ತರಿ ಉಪಯೋಗಿಸಿ ಕತ್ತರಿಸಲು ಸಾಧ್ಯವಾಗುವುದು.
8. ಸುತ್ತಮುತ್ತಲಿರುವ ವಿವಿಧ ತರದ ವಸ್ತುಗಳನ್ನು ಉಪಯೋಗಿಸಿ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದು.
9. ತಾಳಾತ್ಮಕವಾದ ಶಬ್ದ ಉಂಟುಮಾಡಲು ಶರೀರದ ಅಂಗಗಳನ್ನು ಸಾಧ್ಯವಾದಷ್ಟು ಚಲಿಸುವಂತೆ ಮಾಡಲು ಸಾಧ್ಯವಾಗುತ್ತದೆ.
10. ಸಂದರ್ಭಕ್ಕನುಸರಿಸಿ ಬಗ್ಗಿ, ಓರೆಯಾಗಿ, ತೆವಳಿ, ಮೊಣಕಾಲಿನಲ್ಲಿ ನಡೆದು, ಕುಗ್ಗಿಸಿ, ಹಿಗ್ಗಿಸಿ ದೇಹವನ್ನು ಉಪಯೋಗಿಸಲು ಸಾಧ್ಯವಾಗುವುದು.
11. ಸೂಕ್ಷ್ಮ – ಸ್ಥೂಲಪೇಶಿಗಳನ್ನು ಸಂಯೋಜಿಸಿಕೊಂಡು ದೈನಂದಿನ ಜೀವನದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.
12. ಸರಳ ಯಂತ್ರಗಳನ್ನು ಉಪಯೋಗಿಸಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.
13. ಲೇಖನಪೂರ್ವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾನೆ.

**ಭಾಷಾ ವಿಕಾಸ**

14. ಚಿತ್ರಗಳು, ವಸ್ತುಗಳು, ಪ್ರಕೃತಿ ಇತ್ಯಾದಿಗಳನ್ನು ಕಂಡು (ವಾಚನಾಪೂರ್ವ) ಆಶಯಗಳನ್ನು ಹೇಳಲು ಸಾಧ್ಯವಾಗುತ್ತದೆ.
15. ಸುತ್ತಮುತ್ತಲಿರುವ ವಸ್ತುಗಳು, ಘಟನೆಗಳು, ಅನುಭವಗಳು, ಕಥೆಗಳು ಇತ್ಯಾದಿಗಳನ್ನು ಗಮನಿಸಲು, ಕಾಣಲು, ಕೇಳಲು ಸಾಧ್ಯವಾಗುತ್ತದೆ.
16. ನೋಡಿ, ಕೇಳಿ ತಿಳಿದ ಘಟನೆಗಳು, ವಿವರಣೆಗಳು, ಕಥೆಗಳು ಇತ್ಯಾದಿಗಳನ್ನು ಆಶಯವು ಸೋರಿ ಹೋಗದಂತೆ ಇತರರೊಂದಿಗೆ ಹಂಚಲು ಸಾಧ್ಯವಾಗುವುದು.

17. ಭಾವನೆಯನ್ನು ಗ್ರಹಿಸಿ ತಿಳಿದುಕೊಂಡು ಕಥೆಗಳು, ಹಾಡುಗಳು, ಘಟನೆಗಳು ಎಂಬಿವುಗಳನ್ನು ಮಂಡಿಸಲು ಸಾಧ್ಯವಾಗುವುದು. (ಸ್ವರಭಾರ, ಭಾವನೆ, ತಾಳ, ರಾಗ, ಚಲನೆ, ಆಂಗಿಕ ಚಲನೆ)

18. ಚಿತ್ರಕಥೆಗಳನ್ನು ನಿರೀಕ್ಷಣೆ ಮಾಡಿ ಕಥೆಯನ್ನು ಊಹಿಸಿ ಹೇಳಲು ಸಾಧ್ಯವಾಗುವುದು.

19. ಓದಿ ಕೇಳಿದ ಆಧಾರದಲ್ಲಿ ಚಿತ್ರಗಳನ್ನು ಕ್ರಮೀಕರಿಸಿ ಕಥೆ ಹೇಳಲು ಸಾಧ್ಯವಾಗುತ್ತದೆ.

20. ಕಥನಕವನದಲ್ಲಿರುವ ಸಾಲುಗಳನ್ನೂ ಚಿತ್ರಗಳೊಂದಿಗೆ ಸೇರಿಸಿ ಹೇಳಲು ಸಾಧ್ಯವಾಗುವುದು.

21. ವಸ್ತುಗಳ, ಘಟನೆಗಳ ಚಿತ್ರಗಳನ್ನು ನಿರೀಕ್ಷಣೆ ಮಾಡಿ ವಿವರಗಳನ್ನು ಕಂಡುಹಿಡಿಯಲೂ ಮಂಡಿಸಲು ಸಾಧ್ಯವಾಗುವುದು

22. ಸುತ್ತಮುತ್ತಲಿರುವ ವಸ್ತುಗಳು, ಘಟನೆಗಳು, ತನ್ನ ಅನುಭವಗಳು, ಸ್ಥಿತಿಗಳು ಎಂಬಿವುಗಳ ವಿಶೇಷತೆಗಳನ್ನು ಸ್ವಅನುಭವಗಳಾಧಾರದಲ್ಲಿ ಪರಸ್ಪರ ಸಂಬಂಧ ಕಲ್ಪಿಸಿ ಹೇಳಲು ಸಾಧ್ಯವಾಗುವುದು.

23. ವೈವಿಧ್ಯಮಯವಾದ ನಿತ್ಯಜೀವನದ ಸಂದರ್ಭಗಳಲ್ಲಿ (ಮನೆ, ಶಾಲೆ, ಆಟಗಳು, ಆಚರಣೆಗಳು) ತನಗೆ ಆಸಕ್ತಿ ಇರುವ ವಿಷಯಗಳಲ್ಲಿ ಗರಿಷ್ಠ ವಿಚಾರಗಳನ್ನು ಹೇಳಲು ಕೇಳಿ ತಿಳಿದುಕೊಳ್ಳಲು ಸಾಧ್ಯವಾಗುವುದು.

24. ವಿವಿಧ ಸಂದರ್ಭಗಳಲ್ಲಿ ಸ್ವಂತ ನಿರೀಕ್ಷಣೆಗಳು, ಅಭಿಪ್ರಾಯಗಳು, ಸೂಚನೆಗಳು ಎಂಬಿವುಗಳನ್ನು ಸಹಪಾಠಿಗಳಲ್ಲಿ ಹಿರಿಯರಲ್ಲಿ, ಸಭೆಗಳಲ್ಲಿ ಹೇಳಲು ಸಾಧ್ಯವಾಗುವುದು.

25. ಇನ್ನೊಂದಾಗಿ ಕಲ್ಪಿಸಿ ಗೊಂಬೆ ನಾಟಕ, ಪಾತ್ರಾಭಿನಯ (ರೋಲ್‌ಪ್ಲೇ) ಇತ್ಯಾದಿ ಉದ್ವೇಗಗಳ ಸಂದರ್ಭಗಳಲ್ಲಿ ಅಭಿನಯಿಸಲು ಸಾಧ್ಯವಾಗುವುದು.

26. ತನ್ನ ಚಿಂತನೆಗಳು, ಭಾವನೆಗಳು ಎಂಬಿವುಗಳನ್ನು ಇತರರಿಗೆ (ಸಹಪಾಠಿಗಳು, ಹಿರಿಯರು...) ತಿಳಿಯುವ ರೀತಿಯಲ್ಲಿ ವಿನಿಮಯ ಮಾಡಲು ಸಾಧ್ಯವಾಗುವುದು.

27. ಗುಂಪಿನ ಸದಸ್ಯ ಎಂಬ ನೆಲೆಯಲ್ಲಿ ಇತರರಿಗೆ ಅವಕಾಶ ನೀಡಿ ತನ್ನ ಸರದಿಯನ್ನು ತಿಳಿದು ಸಂಭಾಷಣೆಗಳಲ್ಲಿ ಏರ್ಪಡಲು ಸಾಧ್ಯವಾಗುವುದು.

28. ವಿವಿಧ ವಿಷಯಗಳಿಗೆ ಸಂಬಂಧಿಸಿ ಗಳಿಸಿದ ಪದ ಸಂಪತ್ತನ್ನೂ, ಮಾದರಿಗಳನ್ನೂ ವಿವಿಧ ಸಂದರ್ಭಗಳಲ್ಲಿ ಆಶಯ ವಿನಿಮಯಕ್ಕಾಗಿ ಆತ್ಮವಿಶ್ವಾಸದೊಂದಿಗೆ ಪ್ರಯೋಗಿಸಲು ಸಾಧ್ಯವಾಗುವುದು.

29. ಸರಳ, ಮಕ್ಕಳ ಸಂಚಿಕೆಗಳನ್ನು ಓದಿ ಆಲಿಸಲು, ಓದಿ ಆಲಿಸಿದ ವಿಷಯಗಳನ್ನು ವಿವಿಧ ರೀತಿಗಳಲ್ಲಿ (ವಾಚಿಕ, ಅಭಿನಯ, ಚಿತ್ರ...) ಆವಿಷ್ಕರಿಸಲು ಸಾಧ್ಯವಾಗುವುದು.

### ವೈಜ್ಞಾನಿಕ ವಿಕಾಸ

30. ಪಂಚೇಂದ್ರಿಯಗಳನ್ನು ಉಪಯೋಗಿಸಿ ವಸ್ತುಗಳು/ಜೀವಜಾಲಗಳು ಎಂಬಿವುಗಳನ್ನು ನಿರೀಕ್ಷಣೆ ಮಾಡಿ ಪ್ರತ್ಯೇಕತೆಗಳನ್ನು ಕಂಡುಹಿಡಿಯಲು ವಾಚಿಕವಾಗಿ, ಮಂಡಿಸಲು ಸಾಧ್ಯವಾಗುವುದು (ಬಣ್ಣ, ಗಾತ್ರ, ಆಕೃತಿ, ವಾಸನೆ, ಶಬ್ದ, ರುಚಿ, ನುಣುಪು)

31. ಕಂಡುಹಿಡಿಯುವ ಚಟುವಟಿಕೆಗಳಲ್ಲಿ ತೊಡಗಲು, ಅನುಭವದ ಆಧಾರದಲ್ಲಿ ನಿಗಮನಗಳನ್ನು ಮಂಡಿಸಲು ಸಾಧ್ಯವಾಗುವುದು.

32. ವಸ್ತುಗಳು, ಜೀವಿಗಳು, ಸಸ್ಯಗಳು ಇವುಗಳಿಗೆ ಸಂಬಂಧಿಸಿ ಕಾರ್ಯಕಾರಣ ಸಂಬಂಧಿಸಿ ಪ್ರಶ್ನೆಗಳನ್ನು ಹೇಳಲು ಸಾಧ್ಯವಾಗುವುದು.

33. ವಸ್ತುಗಳು, ಚಿತ್ರಗಳನ್ನು ನಿರೀಕ್ಷಣೆ ಮಾಡಿ ಗುಂಪಿಗೆ ಸೇರದವುಗಳನ್ನು ಬೇರ್ಪಡಿಸಿ ಕಂಡುಹಿಡಿದು ಹೇಳಲು, ಗುಂಪಿಗೆ ಸೇರದಿರಲು ಕಾರಣವನ್ನು ಹೇಳಲು ಸಾಧ್ಯವಾಗುವುದು.

34. ಜೀವಿಗಳು, ಚಿಟ್ಟೆಗಳು, ಸಾಕು ಪ್ರಾಣಿಗಳು, ಕಾಡು ಪ್ರಾಣಿಗಳು, ಹಕ್ಕಿಗಳು ಎಂಬಿವುಗಳನ್ನು ಗುರುತಿಸಿಕೊಂಡು ಹೇಳಲು ಸಾಧ್ಯವಾಗುವುದು.

35. ಮಳೆ, ಬೇಸಿಗೆ/ಚಳಿ ಎಂಬಿವುಗಳನ್ನು ನಿರೀಕ್ಷಣೆ ಮಾಡಿ ತಿಳಿಯುವುದು, ಅನುಭವಗಳನ್ನು ಹಂಚಿಕೊಳ್ಳುವುದು.

36. ಆರೋಗ್ಯ ಅಭ್ಯಾಸಗಳು, ಶುಚಿತ್ವ ಎಂಬಿವುಗಳ ಕುರಿತು ತಿಳಿಯುವುದು.

37. ಸುತ್ತಮುತ್ತಲು ನಿರೀಕ್ಷಣೆ ಮಾಡಿ ವ್ಯತ್ಯಸ್ತ ಆಕೃತಿಗಳಲ್ಲಿರುವ ವಿವಿಧ ವಸ್ತುಗಳನ್ನು (ವೃತ್ತ, ಆಯತ, ಉರುಟು, ಚಪ್ಪಟೆ, ಉದ್ದದ) ಕಂಡುಹಿಡಿದು ನಿರ್ಮಾಣಗಳಲ್ಲಿ ಏರ್ಪಡಲು, ಚಿತ್ರ ರಚಿಸಲು ಪ್ರಯತ್ನಿಸುವುದು.

38. ಗಣಿತ ತಿಳುವಳಿಕೆಯ ಆಧಾರದಲ್ಲಿ ನಿರೀಕ್ಷಣೆ ಮಾಡಿ ಸ್ಥಾನವನ್ನು ಹೇಳುವುದು.

39. ವಸ್ತುಗಳನ್ನು ಹೋಲಿಸಿ ನೋಡಲು ಗಣಿತಭಾಷೆ ಉಪಯೋಗಿಸಲು ಸಾಧ್ಯವಾಗುವುದು.

40. ವಸ್ತುವಿನ ಭಾಗಗಳು ಪೂರ್ಣವಾಗಿ ವಸ್ತುಗಳೊಳಗಿರುವ ಸಂಬಂಧ ವಿವರಿಸಲು ಸಾಧ್ಯವಾಗುವುದು.

41. ಬಣ್ಣ, ಆಕೃತಿ, ಉದ್ದ, ಗಾತ್ರ ಇತ್ಯಾದಿ ಒಂದಕ್ಕಿಂತ ಹೆಚ್ಚು ಮಾನದಂಡಗಳನ್ನು ಪರಿಗಣಿಸಿ ವಸ್ತುಗಳನ್ನು ವರ್ಗೀಕರಿಸಿ ಕ್ರಮೀಕರಿಸಲು ಸಾಧ್ಯವಾಗುವುದು.

42. ಗಣಿತ ಮಾದರಿಗಳನ್ನು ಪ್ರದರ್ಶಿಸಿ ಅವುಗಳನ್ನು ಸೌಂದರ್ಯಾತ್ಮಕವಾಗಿ ಕ್ರಮೀಕರಿಸಲು ಸಾಧ್ಯವಾಗುವುದು.

43. ಸಮಯವನ್ನೂ ಪ್ರಾಯವನ್ನೂ ಹೊಂದಿಕೊಂಡು ನಿರೀಕ್ಷಣೆಗಳನ್ನು ಹೇಳಲು ಸಾಧ್ಯವಾಗುವುದು.

44. 1 ರಿಂದ 5 ರವರೆಗಿನ ಸಂಖ್ಯೆಗಳನ್ನು ಎಣಿಸಲು, ಸಂಖ್ಯೆಗಳ ವಸ್ತುಗಳ ಸಂಖ್ಯೆಗಳೊಂದಿಗೆ ಪರಸ್ಪರ ಹೊಂದಿಸಲು ಸಾಧ್ಯವಾಗುತ್ತದೆ.

45. ಸರಳವಾದ ಗಣಿತ ಪ್ರೊಜೆಕ್ಟುಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದು.

46. ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು.

47. ಒಂದು ಮಾದರಿಯನ್ನು (Pattern) ನಿರೀಕ್ಷಣೆ ಮಾಡಿ ಮುಂದಿನದ್ದನ್ನು ಊಹಿಸಿ ಹೇಳಲು ಸಾಧ್ಯವಾಗುವುದು.

**ಸಾಮಾಜಿಕ – ಭಾವನಾತ್ಮಕ ವಿಕಾಸ**

47. ಆರೋಗ್ಯ –ಶುಚಿತ್ವ ಅಭ್ಯಾಸದ ಕುರಿತು ತಿಳಿಯುವುದು.

48. ತನ್ನ ಸರಳವಾದ ಅಗತ್ಯಗಳುನ್ನು (ಪ್ರಾಯಕ್ಕನುಸರಿಸಿ ಮಾಡಲು ಆಗುವ)ಸ್ವತಂತ್ರವಾಗಿ ಮಾಡಲು ಸಾಧ್ಯವಾಗುವುದು.

49. ತನ್ನ ಹೆಸರು, ಹೆತ್ತವರ ಹೆಸರು ಎಂಬಿವುಗಳನ್ನು ಇತರರಲ್ಲಿ ಹೇಳಲು ಸಾಧ್ಯವಾಗುವುದು.

50. ಆಟಿಕೆಗಳು, ಆಹಾರ, ಇತರ ವಸ್ತುಗಳು ಇತ್ಯಾದಿಗಳನ್ನು ಇತರರೊಂದಿಗೆ ಹಂಚಲು, ಸರದಿ ಕಾಯಲು ಸಾಧ್ಯವಾಗುವುದು (ಸಹವರ್ತಿತ್ವ ಮನೋಭಾವ)

51. ಆಟದಲ್ಲಿ, ನಿರ್ಮಾಣ ಚಟುವಟಿಕೆಗಲ್ಲಿ, ಇತರ ಚಟುವಟಿಕೆಗಳಲ್ಲಿ ಒಂಟಿಯಾಗಿಯೂ ಗುಂಪಾಗಿಯೂ, ಹಿರಿಯರೊಂದಿಗೆ ಸೇರಿ ಸಹಕಾರ ಮನೋಭಾವದೊಂದಿಗೆ ನಾಯಕತ್ವ ವಹಿಸಿ ಜವಾಬ್ದಾರಿಯುತವಾಗಿ ವರ್ತಿಸಲು ಸಾಧ್ಯವಾಗುವುದು.

52. ಇತರರ ಸಾಮರ್ಥ್ಯಗಳು, ಸತ್ಕಾರ್ಯ ಎಂಬಿವುಗಳನ್ನು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವುದು.

53. ಸಂಕೋಚವಿಲ್ಲದೆ ಸಹಪಾಠಿಗಳೊಂದಿಗೆ/ಹಿರಿಯರೊಂದಿಗೆ ನೇರವಾಗಿ ಸಂತೋಷದಿಂದ ಮಾತನಾಡಲು, ಹೊಸ ಸಹಪಾಠಿಗಳು/ಹಿರಿಯುರು ಎಂಬಿವರೊಂದಿಗೆ ಪರಿಚಯಿಸಿಕೊಳ್ಳಲುಸಾಧ್ಯವಾಗುವುದು.

54. ಮುಖಭಾವನೆಗಳಿಂದ/ಸಂಜ್ಞೆಗಳ ಮೂಲಕ ಸ್ವರಭಾರದ ಮೂಲಕ ಇತರರೊಂದಿಗೆ ಆಶಯ ವಿನಿಮಯ ಮಾಡಲು ಸಾಧ್ಯವಾಗುವುದು.

55. ವ್ಯತ್ಯಸ್ತ ಸಂಬಂಧಗಳನ್ನು ತಿಳಿದುಕೊಳ್ಳಲು, ಒಳ್ಳೆಯ ರೀತಿಯಲ್ಲಿ ವರ್ತಿಸಲು ಸಾಧ್ಯವಾಗುವುದು (ಅಪ್ಪ, ಅಮ್ಮ, ಅಣ್ಣ, ಅಕ್ಕ, ತಮ್ಮ, ತಂಗಿ, ಅಜ್ಜ, ಅಜ್ಜಿ, ಮಾವ, ಅತ್ತೆ)

56. ಹಬ್ಬಗಳು/ಆಚರಣೆಗಳು (ಓಣಂ, ಕ್ರಿಸ್‌ಮಸ್, ರಂಜಾನ್) ಎಂಬೀ ಸಂದರ್ಭಗಳಲ್ಲಿ ತಯಾರಿಸುವ ಆಹಾರಗಳನ್ನು (ಊಟ, ಬಿರಿಯಾಣಿ, ಕೇಕ್)ಪರಿಚಯಿಸಿಕೊಳ್ಳಲು ಮತ್ತು ಪರಸ್ಪರ ಹಂಚಲು ಸಾಧ್ಯವಾಗುವುದು.

57. ತನ್ನ ಕುಟುಂಬದಲ್ಲಿ ಸುತ್ತಮುತ್ತಲಿರುವ ವ್ಯಕ್ತಿಗಳ ಪ್ರಾಯ ತಿಳಿದುಕೊಂಡು ಗೌರವದಿಂದ ಮಾತನಾಡಲು, ನಿರ್ಭಯವಾಗಿ ವರ್ತಿಸಲು ಸಾಧ್ಯವಾಗುವುದು.

58. ಕಥೆಗಳು, ಘಟನೆಗಳು, ಸಂದರ್ಭಗಳು ಇತ್ಯಾದಿಗಳನ್ನು ಹೇಳಿ ಇತರರಿಗೆ ಸಂತೋಷವನ್ನುಂಟು ಮಾಡುವ ಚಟುವಟಿಕೆಗಳಲ್ಲಿ ಭಾಗಿಗಳಾಗಲು ಸಾಧ್ಯವಾಗುವುದು.

59. ಸಸ್ಯಗಳನ್ನು, ಜೀವಿಗಳನ್ನು, ಪ್ರೀತಿಸಲು, ಪೋಷಿಸಲು ಸಾಧ್ಯವಾಗುವುದು.

60. ಗುಂಪು ಆಟಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದು.

61. ಇತರರೊಡನೆ ಅನುಕಂಪದಿಂದಲೂ ಸಹಾನುಭೂತಿಯಿಂದಲೂ ಬೆರೆತು ವ್ಯವಹರಿಸಲು ಸಾಧ್ಯವಾಗುವುದುಟ.

62. ಕರ್ತವ್ಯ ನಿಷ್ಠೆಯನ್ನು ಪಾಲಿಸಲು ಸಾಧ್ಯವಾಗುವುದು.

**ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ**

63. ವಿವಿಧ ರೀತಿಯ ಹಾಡುಗಳನ್ನು (ಗುಂಪುಹಾಡು, ಬಾಯ್ದೆರೆಹಾಡು, ಪ್ರಶ್ನೋತ್ತರ ಹಾಡುಗಳು, ಕಥನಕವನಗಳು) ಶ್ರದ್ಧೆಯಿಂದ ಕೇಳಲು, ಆಸ್ವಾದಿಸಲು ಸಾಧ್ಯವಾಗುವುದು.

64. ಆಲಿಸಿ ಹಾಡುಗಳನ್ನು ತಾಳಾತ್ಮಕವಾಗಿ ಹಾಡಲು ಸಾಧ್ಯವಾಗುವುದು.

65. ವಿವಿಧ ಸಂದರ್ಭಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಹೊಸ ಪದ್ಯಗಳನ್ನು ಕಂಡುಹಿಡಿಯಲು, ಪದಗಳು, ಸಾಲುಗಳು ಎಂಬಿವುಗಳನ್ನು ಸೇರಿಸಿಕೊಂಡು ಹಾಡಲು ಸಾಧ್ಯವಾಗುತ್ತದೆ.

66. ಗೆಳೆಯರ ಸಾಮರ್ಥ್ಯಗಳನ್ನು ಪ್ರೋತ್ಸಾಹಿಸಲು ಸಾಧ್ಯವಾಗುವುದು.

67. ವಿವಿಧ ಸಂದರ್ಭಗಳನ್ನು ಹಾಡು ಆಲಿಸಲಾದವುಗಳನ್ನು ಇಷ್ಟಪಟ್ಟು ಮಂಡಿಸಲು ಸಾಧ್ಯವಾಗುವುದು.

68. ಸಂಗೀತೋಪಕರಣಗಳನ್ನು ಒಂಟಿಯಾಗಿ, ಗುಂಪಾಗಿ ಆಸ್ವಾದನಕರವಾಗಿ ಬಳಸಲು ಮತ್ತು ಆಸ್ವಾದಿಸಲು ಸಾಧ್ಯವಾಗುವುದು.

69. ಆಟಿಕೆಗಳನ್ನು ನಿರ್ಮಿಸಲು ಸಾಧ್ಯವಾಗುವುದು.

70. ಕವಚಿ ಹಾಕಿದ ವಿವಿಧ ಪಾತ್ರೆಗಳನ್ನು ಕೋಲನಿಂದ ತಾಳಾತ್ಮಕವಾಗಿ ಬಡಿದು ಶಬ್ದ ಹೊರಡಿಸಲು ಸಾಧ್ಯವಾಗುವುದು.

71. ಕಥೆಗಳನ್ನು ಆಲಿಸಲು, ಆಸ್ವಾದಿಸಲು ಸಾಧ್ಯವಾಗುವುದು.

72. ಕಥೆಯನ್ನು ಭಾವಪೂರ್ಣವಾಗಿ ಆಸ್ವಾದನೆಯೊಂದಿಗೆ ಹೇಳಲು ಸಾಧ್ಯವಾಗುವುದು.

73. ಸ್ವತಃ ಕಥೆಗಳನ್ನು ರಚಿಸಲು, ಹೇಳಲು, ಕಥಾಪಾತ್ರಗಳನ್ನು ಅಭಿನಯಿಸಿ ತೋರಿಸಲು ಸಾಧ್ಯವಾಗುವುದು.

74. ಕಥೆಗಳು, ಅನುಭವಗಳು, ಸಂದರ್ಭಗಳು ಎಂಬಿವುಗಳ ಕಥಾ ಪಾತ್ರಗಳನ್ನು ಅಭಿನಯಿಸಲು ಸಾಧ್ಯವಾಗುವುದು.

75. ಒಂದನ್ನು ಇನ್ನೊಂದಾಗಿ ಕಲ್ಪಿಸಿಯೂ (ಸುತ್ತಮುತ್ತಲು ಇರುವ ಜೀವಿಗಳು, ವಸ್ತುಗಳು)ಇನೊಬ್ಬ ವ್ಯಕ್ತಿಯೂ ಸ್ವತಃ ಕಲ್ಪಿಸಿಯೂ ಭಾವನೆಯೊಂದಿಗೆ ಆಶಯ ಪ್ರಕಟಣೆ ಮಾಡಲು ಸಾಧ್ಯವಾಗುವುದು.

76. ಸಭೆಗಳಲ್ಲಿ ತನ್ನ ಕಲಾ ನೈಪುಣ್ಯವನ್ನು ಆತ್ಮವಿಶ್ವಾಸದಿಂದ ಪ್ರಕಟಿಸಲು ಸಾಧ್ಯವಾಗುವುದು.

77. ಲಘು ಆಶಯಗಳನ್ನು ವಿವಿಧ ಕಲಾ ರೂಪಗಳಲ್ಲಿ ಆವಿಷ್ಕರಿಸಲು ಸಾಧ್ಯವಾಗುವುದು.

78. ಸುತ್ತಲಿರುವ ಜೀವಿಗಳ, ವಸ್ತುಗಳ, ವ್ಯಕ್ತಿಗಳ ಶಬ್ದ, ಚಲನೆ ಮುಂತಾದವುಗಳನ್ನು ಅನುಕರಿಸಲು ಸಾಧ್ಯವಾಗುವುದು.

79. ಪ್ರಕೃತಿಯನ್ನು ಆಸ್ವಾದಿಸಲು ಚಿತ್ರದ ಮೂಲಕ ಪ್ರಕಟಪಡಿಸಲು, ಬಣ್ಣ ಕೊಡಲು ಸಾಧ್ಯವಾಗುವುದು.

80. ಚಿತ್ರ ಪುಸ್ತಕಗಳನ್ನು ಓದಿ ಆಲಿಸಲು, ಚಿತ್ರ ಆಸ್ವಾದಿಸಲು, ಆಸ್ವಾದನೆಯಿಂದ ಹೇಳಲು ಸಾಧ್ಯವಾಗುವುದು.

81. ಬೇರೆ ಬೇರೆ ರೀತಿಯ ವಸ್ತುಗಳನ್ನುಪಯೋಗಿಸಿ ಪ್ರಿಂಟಿಂಗ್, ಸ್ಪ್ರೆವರ್ಕ್ ಮಾಡಲು ಸಾಧ್ಯವಾಗುತ್ತದೆ.

82. ನೀರು ಆಟಗಳಲ್ಲಿ ಏರ್ಪಡಲು ಸಾಧ್ಯವಾಗುತ್ತದೆ.

83. ವಸ್ತುಗಳನ್ನು (ಪ್ರಕೃತಿಯಿಂದ ಲಭಿಸುವ/ಉಪಯೋಗ ಶೂನ್ಯ ವಸ್ತುಗಳು) ಉಪಯೋಗಿಸಿ ಆಟಿಕೆಗಳನ್ನು , ಕೌತುಕ ವಸ್ತುಗಳನ್ನು ಕೊಲಾಶ್ ಎಂಬಿವುಗಳನ್ನು ನಿರ್ಮಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುವುದು.

84. ಚಿತ್ರಗಳು, ಎಲೆಗಳು, ಗರಿಗಳು, ಕೌತುಕ ವಸ್ತುಗಳು, ಕಲಾವಿದರ ಚಿತ್ರಗಳು, ಇವುಗಳನ್ನು ಸಂಗ್ರಹಿಸಿ, ಕ್ರಮೀಕರಿಸಿ ಜೋಪಾನವಾಗಿರಿಸುವುದು.

85. ವಿವಿಧ ರೀತಿಯ ಕಲೆಗಳು (ಚಿತ್ರ, ಹಾಡು, ನೃತ್ಯ...) ನಿರೀಕ್ಷಣೆ ಮಾಡಲು, ಆಸ್ವಾದಿಸಲು ಸಾಧ್ಯವಾಗುವುದು.

86. ದ್ವಿಮಾನ, ತ್ರಿಮಾನ ನಿರ್ಮಾಣ ಚಟುವಟಿಕೆಗಳಿಂದ ಆಶಯಗಳನ್ನು ಆವಿಷ್ಕರಿಸಲು ಸಾಧ್ಯವಾಗುವುದು.

## ಸಾಮರ್ಥ್ಯಗಳನ್ನು ಪರಿಗಣಿಸಿ 3+, 4+ ಮಕ್ಕಳಿಗೆ ನೀಡಬಹುದಾದ ಚಟುವಟಿಕೆಗಳ ಸೂಚನೆಗಳು

1. **ವಿಕಾಸ ಮಂಡಲ** – **ಶಾರೀರಿಕ ಚಲನಾತ್ಮಕ ವಿಕಾಸ**

**ಬುದ್ಧಿಯ ಬಹುಮುಖಗಳು** - ಶಾರೀರಿಕ ಚಲನ ಪರವಾದ ಬುದ್ಧಿ

- ದೃಶ್ಯ ಸ್ಥಳ ಪರವಾದ ಬುದ್ಧಿ

**ಶರೀರದಲ್ಲಿರುವ ಪರಮಾವಧಿ ಪೇಶಿಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾಗಿ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು**

| ಚಟುವಟಿಕೆಗಳು (3 +) | ಚಟುವಟಿಕೆಗಳು 4 + |
|---|---|
| **ಸ್ವತಂತ್ರವಾಗಿ ಆಟಗಳಲ್ಲಿ ತೊಡಗುವುದು**<br>• ಸ್ವತಂತ್ರವಾಗಿ ನಡೆಯುವುದು<br>• ಸ್ವತಂತ್ರವಾಗಿ ಓಡುವುದು<br>• ಹಾರುವುದು<br>• ಇಟ್ಟಿಗೆಗಳ ಮೇಲಿನಿಂದ ಹಾರುವುದು<br>• ನಡೆಯುವುದು<br><br>• ಎಳೆಯುವುದು<br>• ಮೆಟ್ಟಿಲುಗಳನ್ನು ಹತ್ತುವುದು, ಇಳಿಯುವುದು<br>• ಎತ್ತುವುದು<br>• ತೆವಳುವುದು<br>• ಆಟದ ಮೂಲೆಗಳಲ್ಲಿ ಆಡುವುದು<br>• ಮೂರು ಚಕ್ರದ ಸೈಕಲು ಓಡಿಸುವುದು<br>• ಚೆಂಡು ಉರುಳಿಸಿ ಆಡುವುದು<br><br>• ಉಯ್ಯಾಲೆ ಆಟ<br>• ಆಟದ ಸಾಮಾನುಗಳನ್ನುಪಯೋಗಿಸಿ ಆಡುವುದು | **ಸ್ವತಂತ್ರವಾಗಿ ಆಟಗಳಲ್ಲಿ ತೊಡಗುವುದು**<br>• ಇಟ್ಟಿಗೆಯ ಮೇಲೆ ನಡೆಯುವುದು<br>• ಗೆರೆಯಲ್ಲಿ ನಡೆಯುವುದು<br>• ಹಗ್ಗದಲ್ಲಿ ನಡೆಯುವುದು<br>• ಸ್ವತಂತ್ರವಾಗಿ ಓಡುವುದು<br>• ಎರಡುಕಾಲುಗಳನ್ನು ಎತ್ತಿ ಹಾರುವುದು<br>• ಹಾರಿ ದಾಟುವುದು<br>• ನಿಶ್ಚಿತ ದೂರಕ್ಕೆ ಹಾರುವುದು<br><br>• ತೆವಳುವುದು<br>• ಏಣಿಯಲ್ಲಿ ಹತ್ತುವುದು, ಇಳಿಯುವುದು<br>• ಹಗ್ಗದ ಏಣಿಯಲ್ಲಿ ಹತ್ತುವುದು, ಇಳಿಯುವುದು<br>• ಮರ ಹತ್ತುವುದು<br><br>• ಆಟದ ಮೂಲೆಗಳಲ್ಲಿ ಆಡುವುದು<br>• ಮೂರು ಚಕ್ರದ ಸೈಕಲು ಓಡಿಸುವುದು<br>• ಚೆಂಡು ಮತ್ತೊಬ್ಬರಿಗೆ ಎಸೆದುಕೊಡುವುದು<br>• ಕಾಲಿನಿಂದ ಚೆಂಡು ತಟ್ಟುವುದು<br><br>• ಉಯ್ಯಾಲೆಯಾಟ<br>• ಆಟದ ಸಾಮಗ್ರಿಗಳು (ಸೀಸೋ, ಮೇರಿಗೋ ರೌಂಡ್) ಉಪಯೋಗಿಸಿ ಆಡುವ ಆಟಗಳು |

**ಶರೀರದ ಪರಮಾವಧಿ ಪೇಶಿಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವೂ, ನಿಯಂತ್ರಿತವೂ ಆದ (ಸೂಚನೆಗಳನ್ನು ಪಾಲಿಸಿ) ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. ಉದಾಹರಣೆಗೆ ಮುಖ, ತೋಳು, ಮಣಿಗಂಟು, ಬೆರಳುಗಳು, ಮೊಣಕಾಲು, ಪಾದ ಇವುಗಳ ಸೂಕ್ಷ್ಮ ಪೇಶಿಗಳನ್ನು ಉಪಯೋಗಿಸಿ ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು.**

| ಚಟುವಟಿಕೆಗಳು (3 +) | ಚಟುವಟಿಕೆಗಳು (4 +) |
|---|---|
| • ಬಣ್ಣ ಮಿಶ್ರಮಾಡಿದ ಅಂಟು/ಮೈದಾ ಪೇಪರಲ್ಲಿ ಅಂಟಿಸುವುದು. ಬೆರಳು ಉಪಯೋಗಿಸಿ ಚಿತ್ರ ರಚಿಸುವುದು<br>• ಆವೆಮಣ್ಣು, ಮೈದಾ, ಪ್ಲಾಸ್ಟಿಸೀನ್ ಎಂಬಿವುಗಳನ್ನು ಮಿಶ್ರಮಾಡುವುದು, ಉಂಡೆ ಮಾಡುವುದು, ಆಕೃತಿಗಳನ್ನು ತಯಾರಿಸುವುದು.<br>• ಬಣ್ಣದಲ್ಲಿ ಕೈಯನ್ನು ಮುಳುಗಿಸಿ ಪೇಪರಲ್ಲಿ ಒತ್ತುವುದು<br>• ಕ್ರಯೋನ್ ಉಪಯೋಗಿಸಿ ಚಿತ್ರಕ್ಕೆ ಬಣ್ಣ ಕೊಡುವುದು<br>• ಪ್ರಿಂಟಿಂಗ್ ( ಬೆರಳು, ತರಕಾರಿ, ಹಗ್ಗ ಉಪಯೋಗಿಸಿ)<br>• ಬೋರ್ಡಿನಲ್ಲೂ, ನೆಲದಲ್ಲೂ ಗೆರೆ ಗೀಚುವುದು.<br>• ಪೇಪರ್ ಸುತ್ತುವುದು<br>• ಪೇಪರ್ ಹರಿಯುವುದು (ಸಣ್ಣ ತುಂಡುಗಳಾಗಿ)<br>• ಹರಿದ ಪೇಪರ್ ತುಂಡುಗಳನ್ನು ಇನ್ನೊಂದು ಪೇಪರಿನಲ್ಲಿ ಅಂಟಿಸುವುದು<br>• ಭಾವಾಭಿನಯ<br>(ಬೆರಳು ಬೊಂಬೆಗಳನ್ನು ಉಪಯೋಗಿಸುವುದು)<br>• ಚಕ್ರ ತಿರುಗಿಸುವುದು<br>  • ಬೆರಳು ಬೊಂಬೆಗಳನ್ನು ಉಪಯೋಗಿಸಿ<br>• ಕೈಗಳನ್ನು ಉಪಯೋಗಿಸಿ ಮಾಡುವ ಸೂಕ್ಷ್ಮ ಚಟುವಟಿಕೆಗಳು<br>  • ಮಡಲಕಡ್ಡಿಯಲ್ಲಿ ಹೂವು ಪಪ್ಪಾಯಿ ದಂಟಿನ ತುಂಡುಗಳನ್ನು ಪೋಣಿಸುವುದು<br>  • ಮಿಠಾಯಿ ಹೆಕ್ಕುವುದು<br>• ಪೇಪರ್/ಅಜ್ಜನಗಡ್ಡ/ಎಲೆಬುಗ್ಗೆಗಳು ಎಂಬಿವುಗಳನ್ನು ಊದಿ ಹಾರಿಸುವುದು. | • ಪೇಪರಲ್ಲಿ ಬಣ್ಣ ಸೇರಿಸಿ ಮಿಶ್ರಮಾಡಿದ ಮೈದಾ ಅಂಟಿಸಿ ಅದರಲ್ಲಿ ಮತ್ತೊಂದು ಪೇಪರಿಟ್ಟು ಪ್ರಿಂಟ್ ತೆಗೆಯುವುದು<br>• ಆವೆಮಣ್ಣು, ಮೈದಾ, ಪ್ಲಾಸ್ಟಿಸೀನ್ ಎಂಬಿವುಗಳನ್ನು ಮಿಶ್ರ ಮಾಡುವುದು, ಉಂಡೆ ಮಾಡಿ ಆಕೃತಿಗಳನ್ನು ಮಾಡುವುದು<br>• ಬಣ್ಣದಲ್ಲಿ ಬೆರಳು ಮುಳುಗಿಸಿ ಚಿತ್ರದಲ್ಲಿ ತುಂಬಾ ಒತ್ತುವುದು, ಚಿತ್ರಗಳನ್ನು ರಚಿಸುವುದು<br>• ಚಿತ್ರಗಳಿಗೆ ಕ್ರಯೋನ್ ಉಪಯೋಗಿಸಿ ಬಣ್ಣ ಕೊಡುವುದು<br>• ತೆಂಗಿನ ಹೂವಿನ ಬ್ರಶ್ ಬಣ್ಣದಲ್ಲಿ ಮುಳುಗಿಸಿ ಇಷ್ಟಾನುಸಾರ ಬಣ್ಣ ಹಚ್ಚುವುದು<br>• ಪ್ರಿಂಟಿಂಗ್ (ಬೆರಳು, ತರಕಾರಿ, ಹಗ್ಗ, ಎಲೆ....... ಕಾಗದ ಮಡಚಿದ್ದು)<br>• ಬೋರ್ಡಿನಲ್ಲೂ, ನೆಲದಲ್ಲೂ ಚಿತ್ರ ರಚಿಸುವುದು<br>• ಚಿತ್ರಗಳನ್ನು ಹರಿದು ತೆಗೆಯುವುದು.<br>ಹರಿದು ತೆಗೆದ ಚಿತ್ರಗಳನ್ನು ಪೇಪರಲ್ಲಿ ಅಂಟಿಸುವುದು.<br>• ಪೇಪರ್ ಚಿಕ್ಕದಾಗಿ ತುಂಡು ಮಾಡಿ ಔಟ್‌ಲೈನ್ ಚಿತ್ರಗಳಲ್ಲಿ ಅಂಟಿಸುವುದು<br>• ಕಾಲುಗಳು ಮತ್ತು ಕೈಗಳು ಚಲಿಸುವ ತರದಲ್ಲಿರುವ ವ್ಯಾಯಾಮಗಳು<br>• ಎರೋಬಿಕ್ಸ್<br>• ಬುಗರಿ ತಿರುಗಿಸುವುದು/ಬತ್ತಿ ತಯಾರಿಸುವುದು<br>• ಪೇಪರ್ ಮಡಚಿ ಬೀಸಣಿಗೆ ತಯಾರಿಸುವುದು<br>• ಕೈಗಳ ಸಹಾಯದಿಂದ ಮಾಡುವ ಸೂಕ್ಷ್ಮ ಚಟುವಟಿಕೆಗಳು<br>  • ಮುತ್ತುಗಳನ್ನು ನೂಲಿನಲ್ಲಿ ಪೋಣಿಸುವುದು<br>  • ಮುತ್ತುಗಳನ್ನು ಹೆಕ್ಕುವುದು<br>  • ಹೂಗಳನ್ನು ಪೋಣಿಸುವುದು<br>  • ಧಾನ್ಯಗಳನ್ನು ಬೇರ್ಪಡಿಸುವುದು<br>  • ಮೇಣದ ಬತ್ತಿ ಊದಿ ನಂದಿಸುವುದು<br>  • ಪೇಪರ್/ಅಜ್ಜನಗಡ್ಡ /ಬಲೂನ್, ಊದಿ ಹಾರಿಸುವುದು |

| ಚಟುವಟಿಕೆಗಳು (3 +) | ಚಟುವಟಿಕೆಗಳು (4 +) |
|---|---|
| **ಅಡುಗೆಗೆ ಸಂಬಂಧಿಸಿದ ಉಪಕರಣಗಳು, ಆಹಾರ ವಸ್ತುಗಳು ಎಂಬಿವುಗಳನ್ನು ಉಪಯೋಗಿಸುವ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುವುದು** | |
| • ಹಣ್ಣಿನ ಸಿಪ್ಪೆ ತೆಗೆಯುವುದು<br>• ಹಣ್ಣನ್ನು ತುಂಡು ಮಾಡುವುದು<br>• ಆಹಾರಗಳನ್ನು ಒಂದರಿಂದ ಮತ್ತೊಂದು ಪಾತ್ರೆಗೆ ವರ್ಗಾಯಿಸುವುದು.<br>• ಬಾಟ್ಲಿಯ ಮುಚ್ಚಳ ತೆಗೆಯುವುದು<br>• ಸ್ಪೂನ್ ಉಪಯೋಗಿಸಿ ಸಕ್ಕರೆ/ಉಪ್ಪು ಕರಗಿಸುವುದು. | • ಹಣ್ಣಿನ ಸಿಪ್ಪೆ ತೆಗೆದು ತುಂಡುಗಳಾಗಿ ಮಾಡಿ ಫೋರ್ಕ್ ಉಪಯೋಗಿಸಿ ತಿನ್ನುವುದು.<br>• ನೀರು ತುಂಬಿಸುವುದು<br>• ಸಲಾಡ್ ಮಾಡುವುದು |
| **ಬೆರಳು, ಮಡಲುಕಡ್ಡಿ, ಪೆನ್ಸಿಲ್, ನೀರು, ಸ್ಕೆಚ್‌ಪೆನ್ ಎಂಬಿವುಗಳನ್ನು ಉಪಯೋಗಿಸಿ ಸ್ವತಂತ್ರವಾಗಿ ಚಿತ್ರಗಳನ್ನು ರಚಿಸಲು ಸಾಧ್ಯವಾಗುವುದು.** | |
| • ಕೈಬೆರಳು, ನೀರು, ಚೋಕ್, ಕ್ರಯೋನ್ಸ್ ಎಂಬಿವುಗಳನ್ನು ಉಪಯೋಗಿಸಿ ಚಿತ್ರ ರಚಿಸುವುದು<br>• ಬೆರಳು ಉಪಯೋಗಿಸಿ ಹೊಗೆಯಲ್ಲಿ ಚಿತ್ರ ಬರೆಯುವುದು | • ಚೋಕ್, ಸ್ಕೆಚ್‌ಪೆನ್, ಕ್ರಯೋನ್ಸ್, ಪೆನ್ಸಿಲ್, ಮಡಲಕಡ್ಡಿ ಎಂಬಿವುಗಳನ್ನು ಉಪಯೋಗಿಸಿ ಚಿತ್ರ ರಚಿಸುವುದು.<br>• ಇಯರ್‌ಬಡ್ಸ್ ಬಣ್ಣದಲ್ಲಿ ಮುಳುಗಿಸಿ ಚಿತ್ರ ರಚಿಸುವುದು. |
| **ಸ್ವತಂತ್ರವಾಗಿ ಚಿತ್ರಗಳನ್ನು ರಚಿಸಿ ಬಣ್ಣ ಕೊಡಲು ಸಾಧ್ಯವಾಗುವುದು. (ಕ್ರಯೋನ್ಸ್, ಸ್ಕೆಚ್‌ಪೆನ್, ವಾಟರ್‌ಕಲರ್, ಮರದಹುಡಿ, ಪೇಪರ್, ಬಟ್ಟೆ...)** | |
| • ಚಿತ್ರದಲ್ಲಿ, ಕ್ರಯೋನ್, ಸ್ಕೆಚ್‌ಪೆನ್ ಎಂಬಿವುಗಳನ್ನು ಉಪಯೋಗಿಸಿ ಬಣ್ಣ ಕೊಡುವುದು | • ಚಿತ್ರ ರಚಿಸಿ ಕ್ರಯೋನ್, ಪೆನ್ಸಿಲ್, ವಾಟರ್‌ಕಲರ್, ಪೇಪರ್, ಬಟ್ಟೆ ಎಂಬಿವುಗಳನ್ನು ಉಪಯೋಗಿಸಿ ಬಣ್ಣ ಕೊಡುವುದು. |
| **ಕಾಗದ, ಬಟ್ಟೆ, ಮೊದಲಾದವುಗಳನ್ನು ಮಡಚಲು, ಹರಿಯಲು ಅಂಟಿಸಲು ಸಾಧ್ಯವಿದೆ.** | |
| • ಕಾಗದವನ್ನು ಮಡಚುವುದು<br>• ಕಾಗದವನ್ನು ದೊಡ್ಡ ತುಂಡುಗಳಾಗಿ ಹರಿಯುವುದು<br>• ಹರಿದ ತುಂಡುಗಳನ್ನು ಅಂಟಿಸುವುದು | • ಕಾಗದ, ಬಟ್ಟೆ ಮುಂತಾದವುಗಳನ್ನು ಮಡಚುವುದು<br>• ಕಾಗದ ಅವಶ್ಯಕತೆಗನುಸಾರವಾಗಿ ಹರಿಯುವುದು<br>• ಹರಿದ ತುಂಡುಗಳನ್ನು ಅಂಟಿಸುವುದು. |

| ಚಟುವಟಿಕೆಗಳು (3 +) | ಚಟುವಟಿಕೆಗಳು (4 +) |
|---|---|
| **ಕತ್ತರಿ ಉಪಯೋಗಿಸಿ ಕತ್ತರಿಸಲು ಸಾಧ್ಯವಾಗುವುದು.** | |
| | • ಕತ್ತರಿ ಉಪಯೋಗಿಸಿ ಕತ್ತರಿಸುವುದು. |
| **ಸುತ್ತಮುತ್ತಲು ಇರುವ ವಿವಿಧ ರೀತಿಯ ವಸ್ತುಗಳನ್ನು ಉಪಯೋಗಿಸಿ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುವುದು.** | |
| • ಮರದ ತುಂಡುಗಳು, ಬಿಲ್ಡಿಂಗ್ ಬ್ಲೋಕ್ಸ್, ಬೆಂಕಿಪೆಟ್ಟಿಗೆ, ಕಾರ್ಡ್‌ಬೋರ್ಡ್ ಪೆಟ್ಟಿಗೆಗಳು ಮುಂತಾದವುಗಳನ್ನು ಉಪಯೋಗಿಸಿರುವ ನಿರ್ಮಾಣ ಚಟುವಟಿಕೆಗಳು | • ಚಿಕ್ಕ ಕಲಿಕಾ ಆಟಿಕೆಗಳನ್ನು ನಿರ್ಮಿಸುವುದು (ಚೆಂಡುಪೋಳೆಗಾಡಿ, ಬೆಂಕಿಪೆಟ್ಟಿಗೆ ವಾಹನ)<br>• ಪೇಪರ್, ಆವೆ ಮಣ್ಣು, ಎಲೆ, ಗೆಲ್ಲುಗಳು, ನೂಲು, ಹೂಗಳು, ಮುತ್ತುಗಳು, ಬೀಜಗಳು, ಮೈದಾ ಮುಂತಾದವುಗಳನ್ನು ಉಪಯೋಗಿಸಿ ವಿವಿಧ ಆಕೃತಿಗಳನ್ನು ತಯಾರಿಸುತ್ತಾರೆ. |
| **ತಾಳಾತ್ಮಕವಾಗಿ ಶಬ್ದವನ್ನುಂಟುಮಾಡಲು, ಶರೀರ ಅವಯವ ಯಥೇಷ್ಟವಾಗಿ ಚಲಿಸುವಂತೆ ಮಾಡಲು ಸಾಧ್ಯವಾಗುವುದು.** | |
| • ಅಭಿನಯಗೀತೆ<br>• ತಾಳಕ್ಕೆ ಸರಿಯಾಗಿ ಬಡಿಯುವುದು | • ನೃತ್ಯ/ಏರೋಬಿಕ್ಸ್<br>• ತಾಳ, ಡ್ರಮ್ ಮುಂತಾದವುಗಳಿಂದ ತಾಳಾತ್ಮಕವಾಗಿ ಶಬ್ದವನ್ನುಂಟುಮಾಡಿ ಆಡುವುದು. |
| **ಸಂದರ್ಭಕ್ಕನುಸಾರವಾಗಿ ಕುಣಿದು/ತೆವಳಿ/ಬಗ್ಗಿ/ಮೊಣಕಾಲಿನಿಂದ ನಡೆದು/ಹಿಗ್ಗಿಸಿ/ವಿಕಸಿಸಿ ಶರೀರದ ಪ್ರಯೋಜನ ಪಡೆಯಲು ಸಾಧ್ಯವಾಗುವುದು.** | |
| • ಬಗ್ಗುವುದು, ತೆವಳುವುದು ಎಂಬೀ ಶಾರೀರಿಕ ಚಲನೆಗಳನ್ನು ಪ್ರೋತ್ಸಾಹಿಸುವ ರೀತಿಯ , ಕಥೆಯನ್ನು ಹೇಳುವುದು, ಪ್ರಕಟ ಪಡಿಸುವುದು.<br>• ಬೊಗಸೆಯಲ್ಲಿ ನೀರು ತೆಗೆಯುವುದು<br>• ಸಣ್ಣ ಬಾಯಿಯ ಬಾಟ್ಲಿಗಳಿಗೆ ನೀರು ತುಂಬಿಸುವುದು.<br>• ನೀರಲ್ಲಿ ಬೀಳದಂತೆ (ಕಲ್ಪಿಸಿ)ಇಟ್ಟಿಗೆಯಲ್ಲಿ ನಡೆಯುವುದು. | • ಬಗ್ಗುವುದು, ತೆವಳುವುದು, ಮೊಣಕಾಲಿನಿಂದ ನಡೆಯುವ ಶಾರೀರಿಕ ಚಲನೆಗಳನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಕಥೆ ಹೇಳುವುದು. ಪ್ರಕಟಣೆಪಡಿಸುವುದು.ೊ<br>• ಬೊಗಸೆಯಲ್ಲಿ ನೀರು ತೆಗೆದುಕೊಂಡು ಬೇರೆ ಪಾತ್ರೆಗಳಲ್ಲಿ ತುಂಬಿಸುವುದು.<br>• ಮೇಜು, ಕುರ್ಚಿ ಮುಂತಾದ ಪೀಠೋಪಕರಣಗಳ ಅಡಿಭಾಗದ ಮೂಲಕ ಹೊರಗೆ ಬರುವುದು. |

**ಸೂಕ್ಷ್ಮ ಸ್ಥೂಲಪೇಶಿಗಳನ್ನು ಸೇರಿಸಿಕೊಂಡು ದೈನಂದಿನ ಜೀವನದಲ್ಲಿ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗುವುದು.**

| | |
|---|---|
| • ಆಹಾರವನ್ನು ಸೇವಿಸುವುದು<br>• ಹಲ್ಲುಜ್ಜುವುದು<br>• ಉಡುಪು ಕಳಚುವುದು<br>• ಧರಿಸುವುದು | • ಆಹಾರ ಕೆಳಗೆ ಬೀಳದೆ ಸೇವಿಸುವುದು<br>• ಹಲ್ಲುಜ್ಜುವುದು<br>• ಉಡುಪು ಕಳಚುವುದು<br>• ಬಟ್ಟೆ ಧರಿಸುವುದು<br>• ಅಂಗಿಯ ಬಟನ್ ಹಾಕುವುದು, ತೆಗೆಯುವುದು<br>• ಶೂವಿನ ಲೇಸನ್ನು ಕಟ್ಟುವುದು |

**ಸರಳ ಯಂತ್ರಗಳನ್ನು ಉಪಯೋಗಿಸಿಕೊಂಡು ಚಟುವಟಿಕೆಗಳಲ್ಲಿ ನಿರತನಾಗಲು ಸಾಧ್ಯವಾಗುವುದು**

| | |
|---|---|
| • ಚರ್ಮದಿಂದ ಡಬ್ಬದ ಮುಚ್ಚಳವನ್ನು ತೆಗೆಯುವುದು. | • ಸ್ಕ್ರೂ ಡ್ರೈವರ್‌ನಿಂದ  ಸ್ಕ್ರೂವನ್ನು ತೆಗೆಯುವುದು, ಹಾಡುವುದು. |

**ಲೇಖನಪೂರ್ವ ಚಟುವಟಿಕೆಯಲ್ಲಿ ನಿರತನಾಗಲು ಸಾಧ್ಯವಾಗುವುದು.**

| | |
|---|---|
| • ಗೆರೆಗಳೆಡೆಯಲ್ಲಿ ಬಣ್ಣವನ್ನು ಕೊಡುವುದು.<br>• ದಾರಿ ತೋರಿಸುವುದು<br>• ಅಕ್ಷರ ನಮೂನೆಗಳಲ್ಲಿ ಚಿತ್ರ ರಚಿಸುವುದು | • ಗೆರೆಗಳ ಎಡೆಯಲ್ಲಿ ಬಣ್ಣವನ್ನು ಕೊಡುವುದು. |

2. **ವಿಕಾಸ ಮಂಡಲಗಳು** – **ಭಾಷಾ ವಿಕಾಸ**

**ಬುದ್ಧಿಯ ಬಹುಮುಖಗಳು** - ಭಾಷಾ ಪರವಾದ ಬುದ್ಧಿ

- ಸಂಗೀತ ಪರವಾದ ಬುದ್ಧಿ

**ಚಿತ್ರಗಳು, ವಸ್ತುಗಳು, ಪ್ರಕೃತಿ ಎಂಬಿವುಗಳನ್ನು ಓದಿ (ವಾಚನ ಪೂರ್ವ) ಆಶಯಗಳನ್ನು ಹೇಳಲು ಸಾಧ್ಯವಾಗುವುದು.**

**ತನ್ನ ಸುತ್ತುಮುತ್ತಲ ವಸ್ತುಗಳು, ಘಟನೆಗಳು, ಅನುಭವಗಳು, ಕಥೆಗಳು ಎಂಬಿವುಗಳನ್ನು ಗಮನಿಸಿಕೊಂಡು ಆಲಿಸಲು, ನೋಡಲು ಸಾಧ್ಯವಾಗುವುದು.**

| | |
|---|---|
| • ಶಬ್ದವನ್ನು ತಿಳಿಯುವ ಆಟ (ಪಕ್ಷಿಗಳು, ಮೃಗಗಳು, ವಾಹನಗಳು)<br>• ಅಭಿನಯ ಗೀತೆಗಳನ್ನು ಗಮನಿಸುವುದು.<br>• ಪದ್ಯ ಆಲಿಸುವುದು (ICT)<br>• ಕಥೆ ಆಲಿಸುವುದು (ICT) | • ಶಬ್ದಾನುಕರಣೆ ಆಟಗಳು (ಪಕ್ಷಿಗಳು)<br>• ಪದ್ಯ, ನಾಟಕ, ಕಥೆಗಳನ್ನು ಆಲಿಸುವುದು (ICT) |

**ಕಂಡು, ಕೇಳಿ, ತಿಳಿದ ಘಟನೆಗಳನ್ನು ವಿವರಣೆಗಳು, ಕಥೆಗಳು ಎಂಬಿವುಗಳನ್ನು ಆಶಯ ಸೋರದಂತೆ ಇತರರೊಂದಿಗೆ ಹಂಚಿಕೊಳ್ಳಲು**

| | |
|---|---|
| • ನೋಡಿದ, ಆಲಿಸಿದ ವಿಚಾರಗಳ ಕುರಿತು ಹೇಳುವುದು. | • ಆಟದ ರೀತಿ, ಪ್ರಕ್ರಿಯೆಯನ್ನು ಸರಿಯಾಗಿ ಹೇಳುವುದು<br>• ಕಥೆಯ ಆಶಯಗಳನ್ನು ಕ್ರಮೀಕರಿಸಿ ಹೇಳುವುದು<br>• ಘಟನೆಗಳನ್ನು ವಿವರವಾಗಿ ಹೇಳುವುದು. |

**ಭಾವ ಪೂರ್ಣವಾಗಿ ಕಥೆಗಳು, ಪದ್ಯಗಳು, ಘಟನೆಗಳನ್ನು ಎಂಬಿವುಗಳನ್ನು ಮಂಡಿಸಲು ಸಾಧ್ಯವಾಗುವುದು (ಸ್ವರಭಾರ, ಆಂಗಿಕ ಚಲನೆ, ರಾಗ, ತಾಳ, ಚಲನೆ)**

| | |
|---|---|
| • ಅಭಿನಯ ಗೀತೆ ಹಾಡುವುದು<br>• ಕಥೆ ಹೇಳುವುದು. | • ರಾಗದಿಂದ ತಾಳಾತ್ಮಕವಾಗಿ ಹಾಡಿ ಅಭಿನಯಿಸುವುದು.<br>• ಭಾವ ಪೂರ್ಣವಾಗಿ ಸ್ವರ ಭಾರದೊಂದಿಗೆ ಕಥೆಗಳನ್ನು ಘಟನೆಗಳನ್ನು ಹೇಳುವುದು. |

**ಚಿತ್ರಕಥೆಗಳನ್ನು ನಿರೀಕ್ಷಣೆ ಮಾಡಿ ಕಥೆಯನ್ನು ಊಹಿಸಿ ಹೇಳಲು ಸಾಧ್ಯವಾಗುವುದು.**

| | |
|---|---|
| | • ಚಿತ್ರ ನಿರೀಕ್ಷಣೆ ಮಾಡಿ ಊಹಿಸಿ ಹೇಳುವುದು |

**ಓದಿ ಆಲಿಸಿದ ಆಧಾರದಲ್ಲಿ ಚಿತ್ರಗಳನ್ನು ಕ್ರಮೀಕರಿಸಿ ಕಥೆ ಹೇಳಲು ಸಾಧ್ಯವಾಗುವುದು**

| | |
|---|---|
| • ಓದಿ ಆಲಿಸಿದ ಕಥೆಗಳಲ್ಲಿ ತಾನು ಮೆಚ್ಚಿದ ಭಾಗವನ್ನು ಹೇಳುವುದು | • ಕಥೆಯನ್ನು ಕ್ರಮೀಕರಿಸಿ ಹೇಳುವುದು<br>• ಚಿತ್ರವನ್ನು ಕ್ರಮೀಕರಿಸಿ ಹೇಳುವುದು |

| | |
|---|---|
| **ಕಥನಕವನ ಸಾಲುಗಳನ್ನು ಚಿತ್ರಗಳೊಂದಿಗೆ ಹೊಂದಿಸಿ ಹೇಳಲು ಸಾಧ್ಯವಾಗುವುದು.** | |
| • ಕಥನಕವನವನ್ನು ಹಾಡುವುದು. | • ಕಥನ ಕವನ ಹಾಡುವುದು, ಹಾಡುಗಳ ಸಾಲುಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಕಂಡುಕೊಳ್ಳುವುದು. |
| **ವಸ್ತುಗಳ ಹಾಗೂ ಸಂದರ್ಭಗಳ ಚಿತ್ರಗಳನ್ನು ನಿರೀಕ್ಷಣೆ ಮಾಡಿ ಕಂಡುಕೊಂಡ ವಿವರಗಳನ್ನು ಮತ್ತು ಕಂಡುಕೊಂಡವುಗಳನ್ನು ಮಂಡಿಸಲು ಪ್ರದರ್ಶಿಸಲು ಸಾಧ್ಯವಾಗುವುದು.** | |
| • ಚಿತ್ರ ನೋಡಿ ಹೇಳುವುದು.<br>• ಇಷ್ಟವಾದ ವಸ್ತುಗಳ ಕುರಿತು ಹೇಳುವುದು. | • ಚಿತ್ರಗಳ ಘಟನೆಗಳನ್ನು ಹೇಳುವುದು.<br>• ಚಿತ್ರದ ಕುರಿತು ವಿಶ್ಲೇಷಿಸುವುದು.<br>• ಚಿತ್ರವನ್ನೂ ಆಲಿಸಿದ ವಿವರಣೆಯನ್ನೂ ತಮ್ಮೊಳಗೆ ಹೊಂದಿಸುವುದು.<br>• ಕಥೆ ಕಟ್ಟಿ ಹೇಳುವುದು. |
| **ಸುತ್ತಲಿರುವ ವಸ್ತುಗಳು, ಘಟನೆಗಳು, ಅವಸ್ಥೆಗಳು ಎಂಬಿವುಗಳ ವಿಶೇಷತೆಗಳನ್ನು ಸ್ವ ಅನುಭವದ ಆಧಾರದಲ್ಲಿ ಪರಸ್ಪರ ಹೊಂದಿಸಿ ಹೇಳಲು ಸಾಧ್ಯವಾಗುವುದು.** | |
| • ಇಷ್ಟವಿರುವ ಊಟ, ಆಟ, ಪ್ರವಾಸ ಇವುಗಳ ಕುರಿತು ಹೇಳುವುದು. | • ಇಷ್ಟವಿರುವ ಊಟ, ಆಟ, ಪ್ರವಾಸ ಲಎಂಬಿವುಗಳ ಕುರಿತು ವಿವರವಾಗಿ ಹೇಳುವುದು.<br><br>**ಬಿಸ್ಕೆಟ್ ತಿಂದ ಅನುಭವ**<br>**ಉರುಟಾದ ಬಿಸ್ಕೆಟ್**<br>**ಬಿಸ್ಕೆಟ್‌ಗೆ ಹಳದಿ ಬಣ್ಣ**<br>**ಬೇಗನೆ ತಿನ್ನಲು ಸಾಧ್ಯವಿದೆ**<br>**ಗಟ್ಟಿಯಿಲ್ಲ**<br><br>**ಅಡುಗೆ ಉಪಕರಣಗಳು**<br>**ಕಿಚನ್‌ಸೆಟ್‌ನ ಉಪಯೋಗ ಹೇಳುವುದು** |
| **ವೈವಿಧ್ಯವಾದ ನಿತ್ಯ ಜೀವನ ಸಂದರ್ಭಗಳಲ್ಲಿ (ಮನೆ, ಶಾಲೆ, ಆಟಗಳು, ಉತ್ಸವಗಳು) ಇಷ್ಟವಿರುವ ವಿಷಯಗಳಲ್ಲಿ ಪರಮಾವಧಿ ಕಾರ್ಯಗಳನ್ನು ಹೇಳಲು, ಕೇಳಿ ತಿಳಿಯಲು ಸಾಧ್ಯವಾಗುವುದು.** | |
| • ಬಯಲು ಪ್ರವಾಸದಲ್ಲಿ ಕಂಡ ವಸ್ತುಗಳು/ಗಿಡ/ಬೀಜ/ಹೂಗಳು/ಆಕರ್ಷಿಸಿದ ವಸ್ತುಗಳು ಎಂಬಿವುಗಳ ಕುರಿತು ಅಧ್ಯಾಪಕರಲ್ಲಿಯೂ ಮಕ್ಕಳಲ್ಲಿಯೂ ಪ್ರಶ್ನಿಸುವುದು. | • ಬಯಲು ಪ್ರವಾಸದಲ್ಲಿ ಕಂಡ ವಸ್ತುಗಳು/ಗಿಡ/ಬೀಜ/ಹೂಗಳು ಆಕರ್ಷಿಸಿದ ವಸ್ತುಗಳು ಎಂಬಿವುಗಳ ವಿಶೇಷತೆಗಳು ತಂದೆ ತಾಯಿಗಳು, ಅಧ್ಯಾಪಕರು, ಹಿರಿಯರು, ಎಂಬಿವರಲ್ಲಿ ಕೇಳುವುದು.<br>• ತಿಳಿದ ವಿಶೇಷತೆಗಳನ್ನು ಇನ್ನೊಂದು ಸಂದರ್ಭದಲ್ಲಿ ವಿವರಿಸುವುದು. |

| | |
|---|---|
| **ವಿವಿಧ ಸಂದರ್ಭಗಳಲ್ಲಿನ ಸ್ವಂತ ನಿರೀಕ್ಷಣೆಗಳು, ಅಭಿಪ್ರಾಯಗಳು, ನಿರ್ದೇಶಗಳು ಎಂಬಿವುಗಳನ್ನು ಸಹಪಾಠಿಗಳಲ್ಲಿ, ಹಿರಿಯರಲ್ಲಿ, ಸಾರ್ವಜನಿಕ ಸಭೆಗಳಲ್ಲಿ ಹೇಳಲು ಸಾಧ್ಯವಾಗುವುದು.** | |
| • ತರಗತಿಯ ಕೋಣೆ ಅಲಂಕರಿಸುವುದು, ಶುಚೀಕರಣ ಚಟುವಟಿಕೆಗಳು, ಹೂದೋಟ ತಯಾರಿಸುವುದು, ಗುಂಪಾಗಿ ಮಾಡುವ ಇನ್ನಿತರ ಚಟುವಟಿಕೆಗಳು ಎಂಬೆಡೆಗಳಲ್ಲಿ ತನ್ನ ಅಭಿಪ್ರಾಯ ಹೇಳುವುದು (ಹೇಗೆ, ಯಾವಾಗ?, ಯಾವೆಲ್ಲ ಸಿದ್ಧತೆಗಳು) | • ತರಗತಿ ಕೋಣೆ ಅಲಂಕರಿಸುವುದು, ಶುಚೀಕರಣ ಚಟುವಟಿಕೆಗಳು ಹೂದೋಟ ತಯಾರಿಸುವುದು, ಗುಂಪಾಗಿ ಮಾಡುವ ಇನ್ನಿತರ ಚಟುವಟಿಕೆಗಳು ಎಂಬೆಡೆಗಳಲ್ಲಿ ತನ್ನ ನಿರೀಕ್ಷಣೆಗಳು, ಅಭಿಪ್ರಾಯಗಳು, ನಿರ್ದೇಶಗಳು ಎಂಬಿವುಗಳನ್ನು ಹೇಳುವುದು.<br>ಉದಾ : ಪೂವಲಿ ಹಾಕುವುದು.<br>ಹೇಗೆ ತಯಾರಿಸಬಹುದು? ಏನೆಲ್ಲಾ ಮಾಡಬೇಕು? (ಅಭಿಪ್ರಾಯಗಳು) ಪೂವಲಿಯಲ್ಲಿ ಹೂಗಳೆಲ್ಲಿ? ಹೇಗೆ ಸಿದ್ಧಪಡಿಸುವುದು? (ನಿರ್ದೇಶಗಳು) ಪೂವಲಿ ಇಷ್ಟವಾಯಿತೇ? ಯಾಕಾಗಿ? (ನಿಗಮನ) |
| **ಇನ್ನೊಂದಾಗಿ ಕಲ್ಪಿಸಿ ಬೊಂಬೆನಾಟಕ, ರೋಲ್‌ಪ್ಲೇ, ಪಾತ್ರಾಭಿನಯ ಮೊದಲಾದ ಸಂದರ್ಭಗಳಲ್ಲಿ ಅಭಿನಯಿಸಲು ಸಾಧ್ಯವಾಗುವುದು** | |
| • ವಿಶೇಷತೆಗಳನ್ನು ಹೇಳುವುದು, ಹೆಗ್ಗಳಿಕೆ ಹೇಳುವುದು (ಹಣ್ಣುಗಳು, ತರಕಾರಿಗಳು).<br>• ಪಾತ್ರಾಭಿನಯ | • ರೋಲ್‌ಪ್ಲೇ, ಬೊಂಬೆನಾಟಕ, ಪಾತ್ರಾಭಿನಯ ಎಂಬಿವುಗಳ ಸಂಭಾಷಣೆಗಳನ್ನು ಹೇಳುವುದು. |
| **ತನ್ನ ಚಿಂತನೆ, ಭಾವನೆಗಳು, ಉದ್ವೇಗ ಎಂಬಿವುಗಳನ್ನು ಇತರರಿಗೆ (ಗೆಳೆಯರು, ಹಿರಿಯರು....)ತಿಳಿಯುವಂತೆ ಹಂಚಿಕೊಳ್ಳಲು ಸಾಧ್ಯವಾಗುವುದು.** | |
| • ನಿಗಧಿತ ಸಂದರ್ಭಗಳಲ್ಲಿ ತನ್ನ ಉದ್ವೇಗಗಳನ್ನು ಪ್ರಕಟಪಡಿಸುವುದು. | • ಭಾವನಾತ್ಮಕವಾಗಿ ಕಥೆ ಹೇಳುವುದು/ಹಂಚಿಕೊಳ್ಳುವುದು.<br>• ನಿಗಧಿತ ಸಂದರ್ಭಗಳಲ್ಲಿ (ಸಂತೋಷ, ದುಃಖ, ಕೌತುಕ) ಉದ್ವೇಗಗಳನ್ನು ಪ್ರಕಟಪಡಿಸುವುದು.<br>ಉದಾ : ಕಥೆ ಹೇಳುವ ಸಂದರ್ಭದಲ್ಲಿ ಟೀಚರ್ –<br>'ಆನೆಗೊಂದು ಚಪ್ಪಲಿ ಬೇಕು'<br>- ಯಾವೆಲ್ಲ ವಸ್ತುಗಳಿಂದ ಚಪ್ಪಲಿ ತಯಾರಿಸಬಹುದು?<br>- ಚಪ್ಪಲಿ ಹಾಕಿದ ಆನೆ ನಡೆಯುವುದು ಹೇಗಾಗಿರಬಹುದು? |

**ಗುಂಪಿನ ಸದಸ್ಯ ಎಂಬ ನೆಲೆಯಲ್ಲಿ ಇತರರಿಗೆ ಅವಕಾಶ ನೀಡಿಯೂ ತನ್ನ ಸರದಿಯನ್ನು ತಿಳಿದುಕೊಂಡೂ – ಸಂಭಾಷಣೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದು.**

| | |
|---|---|
| • ನಿಗದಿತ ಸಂದರ್ಭದಲ್ಲಿ ಸಂಭಾಷಣೆಯಲ್ಲಿ ತೊಡಗುವುದು. | • ನಿಗದಿತ ಸಂದರ್ಭದಲ್ಲಿ ಆಶಯ ಮುಂದುವರಿಕೆಯೊಂದಿಗೆ ಸಂಭಾಷಣೆಯಲಿ ತೊಡಗುವುದು<br>• ಚರ್ಚೆಯಲ್ಲಿ ಭಾಗವಹಿಸುವುದು |

**ವಿವಿಧ ವಿಷಯಗಳಿಗೆ ಸಂಬಂಧಿಸಿ ಗಳಿಸಿದ ಪದಸಂಪತ್ತನ್ನು, ವಾಕ್ಯ ಮಾದರಿಗಳನ್ನು, ವಿವಿಧ ಸಂದರ್ಭಗಳಲ್ಲಿ ಆಶಯ ವಿನಿಮಯಕ್ಕಾಗಿ ಆತ್ಮವಿಶ್ವಾಸದೊಂದಿಗೆ ಬಳಸಲು ಸಾಧ್ಯವಾಗುವುದು.**

| | |
|---|---|
| ಗಳಿಸಿದ ಪದಸಂಪತ್ತನ್ನು ಸೂಕ್ತವಾದ ಸಂದರ್ಭಗಳಲ್ಲಿ ಬಳಸುವುದು. | • ಗಳಿಸಿದ ಪದಸಂಪತ್ತು, ವಾಕ್ಯಮಾದರಿ (ಎಷ್ಟು ಚಂದ, ಹಾಯ್ ಸೇರಿಸಿ ಬರುವ ವಾಕ್ಯಗಳು) ಎಂಬಿವುಗಳನ್ನು ಬಳಸುವುದು. |

**ಸರಳವಾದ ಮಕ್ಕಳ ಸಂಚಿಕೆಗಳನ್ನು ಓದಿ ಆಲಿಸುವುದಕ್ಕೂ, ತಿಳಿದ ವಿಷಯಗಳನ್ನು ವಿವಿಧ ರೀತಿಯಲ್ಲಿ (ವಾಚಿಕ, ಅಭಿನಯ, ಚಿತ್ರ .....) ಆವಿಷ್ಕರಿಸಲು ಸಾಧ್ಯವಾಗುವುದು.**

| | |
|---|---|
| • ಓದಿ ತಿಳಿದ ವಿಚಾರಗಳನ್ನು ಅಭಿನಯಿಸಿ, ಚಿತ್ರ ರಚಿಸಿ ಪ್ರಕಟಪಡಿಸುವುದು | • ಓದಿ ತಿಳಿದ ವಿಚಾರಗಳನ್ನು ರೋಲ್‌ಪ್ಲೇ, ಸಂಭಾಷಣೆ, ಚಿತ್ರರಚನೆ, ಅಭಿನಯ, ಎಂಬಿವುಗಳೊಂದಿಗೆ ಪ್ರಕಟಪಡಿಸುವುದು |

| | | |
|---|---|---|
| 3. **ವಿಕಾಸ ಮಂಡಲ** | **-** | **ವೈಜ್ಞಾನಿಕ ವಿಕಾಸ ಮಂಡಲ** |
| **ಬುದ್ಧಿಯ ಬಹುಮುಖಗಳು** | - | ಯುಕ್ತಿಚಿಂತನೆ ಮತ್ತು ಗಣಿತ ಪರವಾದ ಬುದ್ಧಿ |
| | - | ಪ್ರಕೃತಿಪರವಾದ ಬುದ್ಧಿ |

**ಪಂಚೇಂದ್ರಿಯಗಳನ್ನು ಉಪಯೋಗಿಸಿ ವಸ್ತುಗಳು, ಜೀವಜಾಲಗಳು ಎಂಬಿವುಗಳನ್ನು ನಿರೀಕ್ಷಣೆ ಮಾಡಿ ಪ್ರತ್ಯೇಕತೆಗಳನ್ನು ಕಂಡುಕೊಳ್ಳಲೂ ಮಾತಿನಲ್ಲಿ ಹೇಳಲೂ ಸಾಧ್ಯವಾಗುವುದು (ಬಣ್ಣ, ಗಾತ್ರ, ಆಕೃತಿ, ಪರಿಮಳ, ಶಬ್ದ, ರುಚಿ, ನುಣುಪು)**

| | |
|---|---|
| • ಶಬ್ದಗಳನ್ನು ಗುರುತಿಸಿಕೊಳ್ಳುವ ಆಟ (ಕಾಗೆ ಕೂಗುವ ಶಬ್ದ, ಕೆಮ್ಮುವ ಶಬ್ದ........)<br>• ಬಣ್ಣಗಳನ್ನು ಗುರುತಿಸುವುದು<br>• ಬಣ್ಣಗಳಿಗೆ ಸಂಬಂಧಿಸಿದ ಹಾಡುಗಳು, ಕಥೆಗಳನ್ನು ಆಲಿಸುವುದು.<br>• ವಿವಿಧ ವಸ್ತುಗಳನ್ನು ಬಣ್ಣದ ಆಧಾರದಲ್ಲಿ ವರ್ಗೀಕರಿಸುವುದು (ಕಾರ್ಡುಗಳು, ಮುತ್ತುಗಳು, ಹೂಗಳು..........)<br><br>• ಮೂಸಿ ಹೇಳುವುದು<br>• ಪರಿಮಳವಿರುವ ಮತ್ತು ಪರಿಮಳವಿಲ್ಲದ ಹೂವುಗಳನ್ನು ವರ್ಗೀಕರಿಸುವುದು<br>• ರುಚಿ ನೋಡಿ ತಿಳಿಯುವುದು.<br><br>• ನಯವಾದ ಹಾಗೂ ದೊರಗಾದ ವಸ್ತುಗಳನ್ನು ಗುರುತಿಸಿ ಹೇಳುವುದು (ವಿವಿಧ ಎಲೆಗಳು, ಬಟ್ಟೆ, ಕಲ್ಲುಗಳು)<br>• ಆಕೃತಿಗಳನ್ನು ಗುರುತಿಸುವ ಆಟ (ವೃತ್ತ, ಚೌಕ.......) | • ಶಬ್ದ ಗುರುತಿಸುವ ಆಟ (ವಿವಿಧ ಜೀವಿಗಳು ಕೂಗುವ ಶಬ್ದಗಳು, ಕೆಮ್ಮುವ ಶಬ್ದ........)<br>• ಬಣ್ಣಗಳಿಗೆ ಸಂಬಂಧಿಸಿದ ಹಾಡುಗಳನ್ನು, ಕಥೆಗಳನ್ನು ಆಲಿಸುವುದು<br>• ಬಣ್ಣಗಳನ್ನು ಗುರುತಿಸುವ ಆಟ<br>• ಬಣ್ಣ ಕೊಡುವುದು<br>• ಬಣ್ಣಗಳನ್ನು ಹಲವು ರೀತಿಯಲ್ಲಿ ಕ್ರಮೀಕರಿಸುವುದು<br><br>• ಮೂಸಿ ಹೇಳುವುದು<br>• ಹೂ, ಎಲೆ, ಕಾಯಿ ಎಂಬಿವುಗಳ ಪರಿಮಳವನ್ನು ಗುರುತಿಸುವುದು<br>• ರುಚಿಸಿ ನೋಡಿ ಗುರುತಿಸುವುದು.<br><br>• ನಯವಾದ ಹಾಗೂ ದೊರಗಾದ ವಸ್ತುಗಳನ್ನು ಗುರುತಿಸಿ ಹೇಳುವುದು<br>• ಆಕೃತಿಗಳನ್ನು ಗುರುತಿಸುವ ಆಟ<br>• ಪರಿಚಿತವಾದ ಆಕೃತಿಗಳನ್ನು ಹೇಳುವುದು |

**ಕಂಡುಕೊಳ್ಳುವಿಕೆಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲೂ ಅನುಭವದ ಹಿನ್ನಲೆಯಲ್ಲಿ ನಿಗಮನಗಳನ್ನು ಮಂಡಿಸಲೂ ಸಾಧ್ಯವಾಗುವುದು**

| | |
|---|---|
| • | • ಸರಳ ಪ್ರಯೋಗಗಳಿಂದ ಕಂಡುಹಿಡಿದುದನ್ನು ಹೇಳುವುದು<br>ಉದಾ : ಮುಳುಗುವುದೇ? ತೇಲುವುದೇ? |

**ವಸ್ತುಗಳು/ಜಂತುಗಳು/ಸಸ್ಯಗಳು ಎಂಬಿವುಗಳಿಗೆ ಸಂಬಂಧಿಸಿದ ಕಾರ್ಯಕಾರಣ ಸಂಬಂಧೀ ಪ್ರಶ್ನೆಗಳನ್ನು ಕೇಳಲು ಸಾಧ್ಯವಾಗುವುದು.**

| | |
|---|---|
| • ಸುತ್ತಮುತ್ತಲ ವಸ್ತುಗಳ ಕುರಿತಾದ ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು.<br>ಉದಾ : ಯಾಕಾಗಿ? ಯಾಕಾಗಿ? | • ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು<br>• ಪ್ರಕೃತಿಯ ವಿದ್ಯಮಾನಗಳು/ವಸ್ತುಗಳು/ಜಂತುಗಳು/ಸಸ್ಯಗಳು ಎಂಬಿವುಗಳ ಒಗಟುಗಳನ್ನು ಹೇಳುವುದು |

**ವಸ್ತುಗಳು ಹಾಗೂ ಚಿತ್ರಗಳನ್ನು ನಿರೀಕ್ಷಣೆ ಮಾಡಿ ಗುಂಪುಗಳಲ್ಲಿ ಸೇರದವುಗಳನ್ನು ಬೇರ್ಪಡಿಸಿ ಕಂಡುಹಿಡಿದು ಹೇಳಲೂ ಗುಂಪಿಗೆ ಸೇರದುದಕ್ಕೆ ಕಾರಣವನ್ನು ಹೇಳಲೂ ಸಾಧ್ಯವಾಗುವುದು.**

| | |
|---|---|
| • ಸಂಬಂಧವಿರುವವುಗಳನ್ನು ಕಂಡುಕೊಳ್ಳುವುದು (ಲಂಗ, ರವಿಕೆ)<br>• ಪಕ್ಷಿಗಳು/ಮೃಗಗಳನ್ನು ಗುರುತಿಸುವುದು<br>• ಫಲಗಳನ್ನು/ತರಕಾರಿಗಳನ್ನು ವರ್ಗೀಕರಿಸುವುದು | • ಚಿತ್ರಗಳು, ವಸ್ತುಗಳು – ಸಾಮ್ಯ ವ್ಯತ್ಯಾಸಗಳನ್ನು ಕಂಡುಹಿಡಿದು ಹೇಳುವುದು. |

**ಪ್ರಾಣಿಗಳು, ಚಿಟ್ಟೆಗಳು, ಸಾಕು ಪ್ರಾಣಿಗಳು, ಕಾಡುಮೃಗಗಳು, ಪಕ್ಷಿಗಳು ಎಂಬಿವುಗಳನ್ನು ಗುರುತಿಸಿ ಹೇಳಲು ಸಾಧ್ಯವಾಗುವುದು.**

| | |
|---|---|
| • ಬಯಲು ಪ್ರವಾಸ (ಕಾಣುವ ಜೀವಿಗಳನ್ನು ಗುರುತಿಸಿ ಹೆಸರು ಹೇಳುವುದು, ವಿಶೇಷತೆಗಳನ್ನು ಹೇಳುವುದು)<br>• ಚಿತ್ರಓದು | • ಬಯಲು ಪ್ರವಾಸ<br>(ಪ್ರಾಣಿಗಳು, ಚಿಟ್ಟೆಗಳು, ಮೃಗಗಳು, ಪಕ್ಷಿಗಳು ಎಂಬಿವುಗಳನ್ನು ಗುರುತಿಸುವುದು/ ವಿಶೇಷತೆಗಳನ್ನು ಹೇಳುವುದು/ವಾಸಸ್ಥಳಗಳನ್ನು ಗುರುತಿಸುವುದು.<br>• ವಿವಿಧ ಜೀವಿಗಳನ್ನು ನೇರವಾಗಿ ಕಾಣುವುದು |

**ಮಳೆ, ಬೇಸಿಗೆ, ಚಳಿಗಾಲವನ್ನು ನಿರೀಕ್ಷಣೆ ಮಾಡಿ ತಿಳಿಯುವುದು, ಅನುಭವಗಳನ್ನು ಹಂಚಿಕೊಳ್ಳುವುದು**

| | |
|---|---|
| • ಬಯಲು ಪ್ರವಾಸ<br>• ಅನುಭವಗಳನ್ನು ಹೇಳುವುದು | • ಬಯಲು ಪ್ರವಾಸ<br>• ಅನುಭವಗಳನ್ನು ಹಂಚುವುದು<br>• ಪ್ರಕೃತಿಯಲ್ಲಿ ನಡೆಯುವ ಬದಲಾವಣೆ ಹೇಳುವುದು. |

| | |
|---|---|
| **ಆರೋಗ್ಯ ಅಭ್ಯಾಸಗಳು, ಶುಚಿತ್ವ ಅಭ್ಯಾಸಗಳು ಎಂಬಿವುಗಳ ಕುರಿತು ತಿಳಿಯುವುದು** | |
| • ಆರೋಗ್ಯದ ಕುರಿತಾದ ಹಾಡುಗಳನ್ನು/ಶುಚಿತ್ವಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುವುದು (ಕೈತೊಳೆಯುವುದು, ಸರಿಯಾದ ರೀತಿಯಲ್ಲಿ ಆಹಾರ ಸೇವಿಸುವುದು, ಹಲ್ಲುಜ್ಜುವುದು, ಸ್ನಾನ, ಕೂದಲು ಬಾಚುವುದು, ಉಗುರು ತೆಗೆಯುವುದು)<br>• ಶೌಚಾಲಯ ಬಳಕೆಯ ತರಬೇತಿ | • ಆರೋಗ್ಯ/ಶುಚಿತ್ವ ಎಂಬಿವುಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುವುದು<br>• ಶುಚೀಕರಣ ಚಟುವಟಿಕೆಗಳು (ತರಗತಿ/ಆಟದ ಮೈದಾನ ಶುಚೀಕರಿಸುವುದು) ಕಲಿಕೋಪಕರಣಗಳನ್ನು ಯಥಾ ಸ್ಥಾನದಲ್ಲಿ ಇಡುವುದು) |
| **ಸುತ್ತಮುತ್ತಲು ನಿರೀಕ್ಷಣೆ ಮಾಡಿ ವಿವಿಧ ಆಕೃತಿಗಳಲ್ಲಿರುವ ವಸ್ತುಗಳು (ವೃತ್ತ, ಚೌಕ, ಗೋಲ, ಅಗಲವಾಗಿರುವ, ಉದ್ದವಾಗಿರುವ) ಕಂಡುಹಿಡಿದು ಉದಾಹರಣೆ ನೀಡುವುದಕ್ಕೂ, ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದಕ್ಕೂ ಚಿತ್ರಿಸುವುದಕ್ಕೂ ಪ್ರಯತ್ನಿಸುವುದು.** | |
| • ಆಕೃತಿಗಳನ್ನು ಗುರುತಿಸುವ ಆಟ (ವೃತ್ತ, ಚೌಕ)<br>• ವೃತ್ತದಲ್ಲೇನಿದೆ?<br>ಚೌಕದಲ್ಲೇನಿದೆ?<br>ವೃತ್ತದಲ್ಲಿ ಹಪ್ಪಳ, ಚೌಕದಲ್ಲಿ ಬೆಂಕಿಪೆಟ್ಟಿಗೆ<br>..........................................................................<br>..........................................................................<br>• ಪರಿಚಿತವಾದ ಆಕೃತಿಗಳನ್ನು ಹೇಳುವುದು<br>• ವೃತ್ತ, ಚೌಕ ಎಂಬಿವುಗಳನ್ನು ಗುರುತಿಸುವುದು | • ಹಾಡುಗಳು, ಕಥೆಗಳು, ರೋಲ್‌ಪ್ಲೇ ಎಂಬಿವುಗಳಿಂದ ವಿವಿಧ ಆಕೃತಿಯಲ್ಲಿರುವ ವಸ್ತುಗಳನ್ನು ಸಂಗ್ರಹಿಸುವುದು<br>• ಜ್ಯಾಮಿತೀಯ ಆಕೃತಿಗಳನ್ನು ಪೂರ್ತಿಗೊಳಿಸುವುದು (ವೃತ್ತ, ಚೌಕ)<br>• ಚೌಕಕಾರದ ಪೇಪರಿನಿಂದ ಒರಿಗಾಮಿ<br>• ವಿವಿಧ ಜ್ಯಾಮಿತೀಯ ಆಕೃತಿಗಳನ್ನು ನಿರ್ಮಿಸುವುದು (ಚೌಕ, ವೃತ್ತ)<br>• ವಿವಿಧ ಆಕೃತಿಯಲ್ಲಿರುವ ತುಂಡುಗಳನ್ನು ಉಪಯೋಗಿಸಿ ಆಕೃತಿಗಳನ್ನು ನಿರ್ಮಿಸುವುದು |
| **ಗಣಿತ ಜ್ಞಾನದ ಆಧಾರದಲ್ಲಿ ನಿರೀಕ್ಷಿಸಿದ ಸ್ಥಾನವನ್ನು ಹೇಳಲು ಸಾಧ್ಯವಾಗುವುದು** | |
| • ಗಣಿತ ಆಟಗಳು<br>• ಗಣಿತದ ಕಥೆಗಳು<br>• ಚಿತ್ರಓದು<br>ಮೇಲೆ – ಕೆಳಗೆ<br>ಹತ್ತಿರ –ದೂರ<br>ಮುಂದೆ –ಹಿಂದೆ | • ಗಣಿತದ ಆಟಗಳು<br>• ಗಣಿತದ ಕಥೆಗಳು<br>• ಚಿತ್ರಓದು<br>ಮೇಲೆ –ಕೆಳಗೆ<br>ಹತ್ತಿರ – ದೂರ<br>ಹಿಂದೆ – ಮುಂದೆ<br>ಎಡ – ಬಲ<br>ಆರಂಭ – ಮುಕ್ತಾಯ<br>ಎಡೆಯಲ್ಲಿ – ನಡುವಿನಲ್ಲಿ<br>ಆಚೆ – ಈಚೆ, ಆದಕ್ಕಿಂತಲೂ ಆಚೆ |

**ವಸ್ತುಗಳನ್ನು ಹೋಲಿಸಲು ಗಣಿತಭಾಷೆಯನ್ನು ಉಪಯೋಗಿಸಲು ಸಾಧ್ಯವಾಗುವುದು.**

| | |
|---|---|
| • ಗಣಿತದ ಹಾಡುಗಳು<br>• ಕಥೆ ಆಲಿಸುವುದು<br>• ಗಣಿತದಾಟಗಳು<br>• ಚಿತ್ರ ಓದು<br>• ಎಲೆಗಳು, ವಸ್ತುಗಳು, ಮುತ್ತುಗಳು ಎಂಬಿವುಗಳನ್ನುಪಯೋಗಿಸಿದ ಚಟುವಟಿಕೆಗಳು (ಹೆಚ್ಚು, ಕಡಿಮೆ, ಸ್ವಲ್ಪ, ಧಾರಾಳ, ಅಂದಾಜು, ಆಗಸದೆತ್ತರ) | • ಗಣಿತದ ಹಾಡುಗಳು<br>• ಕಥೆ ಆಲಿಸುವುದು<br>• ಗಣಿತದಾಟಗಳು<br>• ಗಣಿತ ಚಟುವಟಿಕೆಗಳು (ಹೆಚ್ಚು, ಕಡಿಮೆ, ಸ್ವಲ್ಪ, ಧಾರಾಳ, ತುಂಬಾ, ಅಂದಾಜು, ಹೆಚ್ಚು, ಸಮಾನ, ಒಟ್ಟು, ಸರಾಸರಿ ಇಲ್ಲಿಯವರೆಗೆ, ಆನೆಯಷ್ಟು ದೊಡ್ಡದು, ಸಾಸಿವೆಯಷ್ಟು) |

**ವಸ್ತುವಿನ ಭಾಗಗಳು ಮತ್ತು ಪೂರ್ಣ ವಸ್ತುವು ತಮ್ಮೊಳಗಿರುವ ಸಂಬಂಧವನ್ನು ವಿವರಿಸಲು ಸಾಧ್ಯವಾಗುವುದು**

| | |
|---|---|
| • ಚಿತ್ರವನ್ನು ಪೂರ್ತಿಗೊಳಿಸುವುದು (ಹೂ, ಮನೆ)<br>• ಸಮಸ್ಯಾ ಚಿತ್ತಗಳನ್ನು ಪೂರ್ತಿಗೊಳಿಸುವುದು. | • ಚಿತ್ರಗಳನ್ನು ಪೂರ್ತಿಗೊಳಿಸುವುದು (ಹೂ, ವಾಹನಗಳು, ಶರೀರಭಾಗಗಳು, ನಮೂನೆಗಳು)<br>• ಸಮಸ್ಯಾ ಚಿತ್ರಗಳನ್ನು ಪೂರ್ತಿಗೊಳಿಸುವುದು. |

**ಬಣ್ಣ, ಆಕೃತಿ, ಅಗಲ, ಉದ್ದ, ತೊಡಗಿ ಒಂದಕ್ಕಿಂತ ಹೆಚ್ಚು ಮಾನದಂಡಗಳನ್ನು ಪರಿಗಣಿಸಿ ವಸ್ತುಗಳನ್ನು ವರ್ಗೀಕರಿಸಿ ಕ್ರಮೀಕರಿಸಲು ಸಾಧ್ಯವಾಗುವುದು.**

| | |
|---|---|
| • ಗಣಿತದ ಆಟಗಳು<br>• ಚಿತ್ರ ಓದು<br>• ಚಟುವಟಿಕೆಗಳು (ಬಣ್ಣ, ಅಗಲ, ಉದ್ದ) | • ಗಣಿತದ ಆಟಗಳು<br>• ಚಟುವಟಿಕೆಗಳು (ಬಣ್ಣ, ಆಕೃತಿ, ಅಗಲ, ಭಾರ, ಉದ್ದ, ದಪ್ಪ) |

**ಗಣಿತದ ನಮೂನೆಗಳನ್ನು ಪ್ರದರ್ಶಿಸಿ ಅವುಗಳನ್ನು ಸೌಂದರ್ಯಾತ್ಮಕವಾಗಿ ಕ್ರಮೀಕರಿಸಲು ಸಾಧ್ಯವಾಗುವುದು.**

| | |
|---|---|
| • ಫಿಂಗರ್ ಪ್ರಿಂಟಿಂಗ್<br>• ವೆಜಿಟೇಬಲ್ ಪ್ರಿಂಟಿಂಗ್<br>• ವಿವಿಧ ಬಣ್ಣದಲ್ಲಿರುವ ಮುತ್ತುಗಳನ್ನು ಪೋಣಿಸುವುದು. | • ವೆಜಿಟೇಬಲ್ ಪ್ರಿಂಟಿಂಗ್<br>• ಮುತ್ತು ಪೋಣಿಸುವುದು.<br>• ಕುಸುರಿ ಕೆಲಸ |

**ಸಮಯ ಹಾಗೂ ಪ್ರಾಯದ ಆಧಾರದಲ್ಲಿ ನಿರೀಕ್ಷಣೆಗಳನ್ನು ಹೇಳಲು ಸಾಧ್ಯವಾಗುವುದು**

| | |
|---|---|
| • ರಾತ್ರಿ, ಹಗಲು ಆಟ (ಬೆಳಿಗ್ಗೆ, ಮಧ್ಯಾಹ್ನ, ರಾತ್ರಿ)<br>• ಕಥೆಗಳು, ಹಾಡುಗಳು<br>(ನಿನ್ನೆ, ಇವತ್ತು, ನಾಳೆ<br>ಹಳೆಯದು– ಹೊಸತು<br>ಅಕ್ಕ – ಅಣ್ಣ<br>ತಮ್ಮ – ತಂಗಿ<br>ಅಜ್ಜ – ಅಜ್ಜಿ | • ರಾತ್ರಿ – ಹಗಲು ಆಟ<br>(ಬೆಳಿಗ್ಗೆ, ಮಧ್ಯಾಹ್ನ, ಸಂಜೆ, ಸಂಧ್ಯಾಕಾಲ, ರಾತ್ರಿ, ಮುಂಜಾನೆ)<br>• ಕಥೆಗಳು/ಹಾಡುಗಳು<br>(ನಿನ್ನೆ – ಈವತ್ತು, ನಾಳೆ, ಕಡಿಮೆ ಪ್ರಾಯದವರು – ಹೆಚ್ಚಾದವರು, ಹಳತು – ಹೊಸತು)<br>• ಕಳೆದ ಘಟನೆಗಳನ್ನು ಕ್ರಮೀಕರಿಸಿ ಹೇಳುವುದು. (ಆ ಬಳಿಕ ............) |

**1 ರಿಂದ 5ರವರೆಗಿನ ಸಂಖ್ಯೆಗಳನ್ನು ಎಣಿಸಲೂ ಎಣಿಕಾ ಸಂಖ್ಯೆಗಳು ಹಾಗೂ ವಸ್ತುಗಳ ಸಂಖ್ಯೆಯನ್ನು ಪರಸ್ಪರ ಹೊಂದಿಸಲೂ ಸಾಧ್ಯವಾಗುವುದು.**

| | |
|---|---|
| • ಸಂಖ್ಯಾಹಾಡುಗಳನ್ನು ಆಲಿಸುವುದು.<br>• ಸಂಖ್ಯೆಗಳಿಗೆ ಸಂಬಂಧಿಸಿದ ಕಥೆಗಳನ್ನು ಆಲಿಸುವುದು.<br>• ಮನೆಯ/ನೆರೆಕರೆಯಲ್ಲಿರುವ ಮನೆಯ ಸದಸ್ಯರ ಸಂಖ್ಯೆ ಹೇಳುವುದು | • ಸಂಖ್ಯಾಹಾಡುಗಳನ್ನು ಆಲಿಸುವುದು, ಹಾಡುವುದು.<br>• ಸಂಖ್ಯೆಗಳಿಗೆ ಸಂಬಂಧಿಸಿದ ಕಥೆಗಳನ್ನು ಆಲಿಸುವುದು, ಹೇಳುವುದು<br>• ಸಂಖ್ಯೆ ಹಾಗೂ ಚಿತ್ರವನ್ನು ಹೊಂದಿಸುವುದು.<br>• ಬೆಂಕಿಪೆಟ್ಟಿಗೆ, ಬ್ಲೋಕುಗಳು ಸಂಖ್ಯೆಗನುಸಾರವಾಗಿ ಕ್ರಮೀಕರಿಸುವುದು, ಗುಂಪುಗಳಾಗಿಸುವುದು. |

**ಸರಳ ಗಣಿತ ಪ್ರೊಜೆಕ್ಟುಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುವುದು.**

| | |
|---|---|
| • ಸಂಗ್ರಹ (ಉದಾ : ವೃತ್ತಾಕಾರದಲ್ಲಿರುವ ವಸ್ತುಗಳ ಸಂಗ್ರಹ) | • ಸಂಗ್ರಹ (ವಿವಿಧ ಜ್ಯಾಮಿತೀಯ ಆಕೃತಿಗಳು) |

**ಒಂದು ನಮೂನೆಯನ್ನು ನಿರೀಕ್ಷಣೆ ಮಾಡಿ ಮುಂದಿನದನ್ನು ಊಹಿಸಿ ಹೇಳಲು ಸಾಧ್ಯವಾಗುವುದು**

| | |
|---|---|
| | • ○ • ○ •<br>• ∧ • ∧ • |

**ಗಣಿತದ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು**

| | |
|---|---|
| • ಸರಳವಾದ ಸಮಸ್ಯಾ ಚಿತ್ರಗಳನ್ನು ಪೂರ್ತಿಗೊಳಿಸುವುದು<br>• ಜಿಗ್ಸೋ ಫಸಿಲ್‌ಗಳು (ಪರಮಾವಧಿ 4 ತುಂಡುಗಳು)<br>• ವಿವಿಧ ಜ್ಯಾಮಿತೀಯ ಆಕೃತಿಗಳನ್ನು ನಿರ್ಮಿಸುವುದು<br>• ದಾರಿ ಕಂಡುಹಿಡಿಯುವುದು | • ಸಮಸ್ಯಾ ಚಿತ್ರಗಳನ್ನು ಪೂರ್ತಿಗೊಳಿಸುವುದು<br>• ಜಿಗ್ಸೋ ಫಸಿಲ್‌ಗಳು (ಪರಮಾವಧಿ 5 ತುಂಡುಗಳು)<br>• ಜ್ಯಾಮಿತಿಯ ಆಕೃತಿಗಳನ್ನು ಪೂರ್ತಿಗೊಳಿಸುವುದು<br>• ದಾರಿ ಕಂಡು ಹಿಡಿಯುವುದು |

3. ವಿಕಾಸ ಮಂಡಲಗಳು - ಸಾಮಾಜಿಕ – ವೈಜ್ಞಾನಿಕ ವಿಕಾಸ ಮಂಡಲಗಳು

ಬುದ್ಧಿಯ ಬಹುಮುಖಗಳು - ಆಂತರಿಕ, ವೈಯಕ್ತಿಕ ಬುದ್ಧಿ

ವ್ಯಕ್ತ್ಯಾಂತರ ಬುದ್ಧಿ

**(1) ವೈಯಕ್ತಿಕ**

**ಆರೋಗ್ಯ ಶುಚಿತ್ವ ಅಭ್ಯಾಸಗಳ ಕುರಿತು ತಿಳಿಯುವುದು**

| | |
|---|---|
| • ಶರೀರದ ಶುಚಿತ್ವವನ್ನು ಪಾಲಿಸುವುದು (ಕೈಗಳನ್ನು ತೊಳೆಯುವುದು, ಹಲ್ಲುಜ್ಜುವುದು, ಸ್ನಾನ ಮಾಡುವುದು, ಉಗುರು ತೆಗೆಯುವುದು, ಕೂದಲು ಬಾಚುವುದು).<br>• ವಸ್ತ್ರ ಶುಚಿತ್ವವನ್ನು ಪಾಲಿಸುವುದು.<br>• ಪರಿಸರ ಶುಚಿತ್ವ (ವೇಸ್ಟ್‌ಬಿನ್ ಸರಿಯಾಗಿ ಉಪಯೋಗಿಸುವುದು, ಆಟದ ಸಾಮಾನುಗಳನ್ನು ಯಥಾ ಸ್ಥಾನದಲ್ಲಿ ಇಡುವುದು).<br>• ಸರಿಯಾದ ಆಹಾರ ಅಭ್ಯಾಸ (ಆಹಾರಕ್ಕೆ ಮೊದಲು ಮತ್ತು ಬಳಿಕ ನಂತರವು ಕೈ ಮತ್ತು ಬಾಯಿ ತೊಳೆಯುವುದು).<br>• ಸರಿಯಾದ ಶೌಚಾಲಯ ಅಭ್ಯಾಸ. | • ಶರೀರ ಶುಚಿತ್ವವನ್ನು ಪಾಲಿಸುವುದು.<br>• ವಸ್ತ್ರ ಶುಚಿತ್ವವನ್ನು ಪಾಲಿಸುವುದು.<br>• ಪರಿಸರ ಶುಚಿತ್ವವನ್ನು ಪಾಲಿಸುವುದು. (ತರಗತಿಯನ್ನು ಶುಚಿಯಾಗಿರಿಸುವುದು, ತರಗತಿಯ ಉಪಕರಣಗಳು, ಕಲಿಕೋಪಕರಣಗಳು ಎಂಬಿವುಗಳನ್ನು ಶುಚಿಯಾಗಿಡುವುದು).<br>• ಅಚ್ಚುಕಟ್ಟಾಗಿ ವಸ್ತುಗಳನ್ನು ಕ್ರಮೀಕರಿಸುವುದು.<br>• ಸರಿಯಾದ ಆಹಾರ ಅಭ್ಯಾಸ (ಆಹಾರವನ್ನು ಚೆಲ್ಲದೆ ಸೇವಿಸುವುದು).<br>• ಸರಿಯಾದ ಶೌಚಾಲಯದ ಅಭ್ಯಾಸ. |

**ತನ್ನ ದೈನಂದಿನ ಅಗತ್ಯಗಳನ್ನು (ಪ್ರಾಯಕ್ಕೆ ಅನುಸರಿಸಿ ಮಾಡಲು ಸಾಧ್ಯವಿರುವವುಗಳು) ಪರರ ಆಶ್ರಯವಿಲ್ಲದೆ ಮಾಡಲು ಸಾಧ್ಯವಾಗುವುದು.**

| | |
|---|---|
| • ಹಲ್ಲುಜ್ಜುವುದು<br>• ಕೈತೊಳೆಯುವುದು<br>• ಒರೆಸುವುದು<br>• ಚಪ್ಪಲಿ ಧರಿಸುವುದು<br>• ತಲೆ ಬಾಚುವುದು<br>• ಬಟ್ಟೆ ತೊಳೆಯುವುದು, ಧರಿಸುವುದು<br>• ಶೌಚಾಲಯದ ಉಪಯೋಗ<br>• ಸ್ನಾನ ಮಾಡುವುದು | • ಹಲ್ಲುಜ್ಜುವುದು<br>• ಕೈ ತೊಳೆಯುವುದು<br>• ಚಪ್ಪಲಿ ಧರಿಸುವುದು<br>• ಒರೆಸುವುದು<br>• ತಲೆ ಬಾಚುವುದು<br>• ವಸ್ತ್ರ ತೊಳೆಯುವುದು, ಧರಿಸುವುದು, ಮಡಚುವುದು<br>• ಸ್ನಾನ ಮಾಡುವುದು<br>• ಅಚ್ಚುಕಟ್ಟಾಗಿ ವಸ್ತುಗಳನ್ನು ಇರಿಸುವುದು<br>• ಸರಿಯಾದ ಶೌಚಾಲಯದ ಉಪಯೋಗ |

**ತನ್ನ ಹೆಸರು, ತಂದೆತಾಯಿಯರ ಹೆಸರು ಎಂಬಿವುಗಳನ್ನು ಇನ್ನಿತರರಲ್ಲಿ ಹೇಳಲು ಸಾಧ್ಯವಾಗುವುದು**

| | |
|---|---|
| • ತನ್ನ ಹೆಸರು ಹೇಳುವುದು<br>• ತಂದೆ/ತಾಯಿ/ಅಣ್ಣ/ಅಕ್ಕ ಎಂಬಿವರ ಹೆಸರು ಹೇಳುವುದು<br>• ವಾಸಸ್ಥಳ | • ತನ್ನ ಹೆಸರು ಹೇಳುವುದು<br>• ತಂದೆ– ತಾಯಿಗಳು, ಅಣ್ಣ, ಅಕ್ಕ ಎಂಬಿವರ ಹೆಸರು ಹೇಳುವುದು<br>• ಮನೆಯ ವಿಳಾಸ, ಫೋನ್ ನಂಬರ್ ಹೇಳುವುದು. |

**(2) ಸಾಮಾಜಿಕ**

**ಆಟಿಕೆಗಳು, ಆಹಾರ, ಇನ್ನಿತರ ವಸ್ತುಗಳು ಎಂಬಿವುಗಳನ್ನು ಇನ್ನಿತರರೊಂದಿಗೆ ಹಂಚಿಕೊಳ್ಳಲೂ ಸರದಿ ಕಾಯಲೂ ಸಾಧ್ಯವಾಗುವುದು (ಸಹವರ್ತಿತ್ವ ಮನೋಭಾವ)**

| | |
|---|---|
| • ಕಥೆಗಳನ್ನು ಕೇಳುವುದು<br>• ಸ್ವತಂತ್ರ ಆಟಗಳು<br>• ಗುಂಪಾಗಿರುವ ಆಟಗಳು<br>• ಸರದಿ ಕಾಯುವ ಆಟ<br>• ಒಟ್ಟಿಗೆ ಆಹಾರ ಸೇವಿಸುವುದು | • ಕಥೆಗಳನ್ನು ಕೇಳುವುದು<br>• ಗುಂಪಾಗಿರುವ ಚಟುವಟಿಕೆಗಳು<br>• ಸರದಿ ಕಾಯುವ ಆಟ<br>• ಒಟ್ಟಿಗೆ ಆಹಾರ ಸೇವಿಸುವುದು<br>• ಕಲಿಕೆಯ ಆಟಿಕೆಗಳನ್ನು ಹಂಚುವುದು<br>• ಹುಟ್ಟುಹಬ್ಬ ಆಚರಿಸುವುದು |

**ಆಟಗಳಲ್ಲಿ, ನಿರ್ಮಾಣ ಚಟುವಟಿಕೆಗಳಲ್ಲಿ ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ , ವೈಯಕ್ತಿಕವಾಗಿಯೂ ಗುಂಪಾಗಿಯೂ ಹಿರಿಯರೊಂದಿಗೆ ಸೇರಿಯೂ ಸಹಕಾರಿ ಮನೋಭಾವದೊಂದಿಗೆ ಜವಾಬ್ದಾರಿಯಿಂದ ನೇತೃತ್ವವನ್ನು ಕೈಗೆತ್ತಿಕೊಂಡು ಭಾಗವಹಿಸಲು ಸಾಧ್ಯವಾಗುವುದು.**

| | |
|---|---|
| • ಗುಂಪಾಗಿರುವ ಚಟುವಟಿಕೆಗಳು<br>• ಸಮೂಹಗೀತೆ<br>• ಹುಟ್ಟುಹಬ್ಬ ಆಚರಣೆ<br>• ಹಿರಿಯರು ಹಾಗೂ ಇನ್ನಿತರರನ್ನು ಸ್ವಾಗತಿಸುವುದು | • ಗುಂಪು ಚಟುವಟಿಕೆಗಳು<br>• ಹುಟ್ಟುಹಬ್ಬ ಆಚರಣೆ<br>• ತರಗತಿ ಕೋಣೆ ಶುಚೀಗೊಳಿಸುವುದು ಮಾಡುವುದು<br>• ಹಿರಿಯರನ್ನು ಗೌರವಿಸುವುದು, ಸ್ವಾಗತಿಸುವುದು<br>• ಆಟಗಳಲ್ಲಿ ನೇತೃತ್ವ ವಹಿಸಿ ಜವಾಬ್ದಾರಿಯನ್ನು ಕೈಗೆತ್ತಿಕೊಳ್ಳುವುದು |

**ಇನ್ನಿತರರ ಸಾಮರ್ಥ್ಯಗಳು, ಸತ್ಕಾರ್ಯಗಳು ಎಂಬಿವುಗಳನ್ನು ಚಪ್ಪಾಳೆಯಿಂದ ಪ್ರೋತ್ಸಾಹಿಸುವುದು**

| | |
|---|---|
| • ಹಾಡು ಹಾಡಿ ಮುಗಿಸಿದ ಗೆಳೆಯರಿಗೆ ಚಪ್ಪಾಳೆಯಿಂದ ಪ್ರೋತ್ಸಾಹ ನೀಡುವುದು | • ಹಾಡು/ಕಥೆ/ನಿರ್ಮಾಣ ಚಟುವಟಿಕೆಗಳು ಮುಂತಾದವುಗಳನ್ನು ಮಾಡಿದ ನಂತರ ಚಪ್ಪಾಳೆಯಿಂದ ಪ್ರೋತ್ಸಾಹ ನೀಡುವುದು. |

**ಸಂಕೋಚವಿಲ್ಲದೆ, ಸಂತೋಷದಿಂದ ಸಹಪಾಠಿಗಳ/ಹಿರಿಯರಲ್ಲಿ ನೇರವಾಗಿ ಮಾತನಾಡಲು ಹೊಸ ಸಹಪಾಠಿಗಳನ್ನು/ಹಿರಿಯರನ್ನು ಪರಿಚಯಮಾಡಿಕೊಳ್ಳಲು ಸಾಧ್ಯವಾಗುವುದು.**

| | |
|---|---|
| • ಹಿರಿಯರೊಂದಿಗೆ ಮಾತನಾಡುವುದು<br>• ಹಿರಿಯರನ್ನು ಹಾಗೂ ಇತರರನ್ನು ಸ್ವಾಗತಿಸುವುದು | • ಪರಿಚಯ ಮಾಡುವುದು<br>• ಸ್ವಾಗತ ಮಾಡುವುದು<br>• ಗೌರವಿಸುವುದು<br>• ಗುಂಪು ಚಟುವಟಿಕೆಗಳು<br>• ರೋಲ್‌ಪ್ಲೇ |

**ಮುಖಭಾವಗಳೊಂದಿಗೆ, ಅಂಗಿಕಚಲನೆಗಳೊಂದಿಗೆ, ಸೂಕ್ತ ಸ್ವರಭಾರದೊಂದಿಗೆ ಇತರಲ್ಲಿ ಆಶಯ ವಿನಿಮಯ ಮಾಡಲು ಸಾಧ್ಯವಾಗುವುದು.**

| | |
|---|---|
| • ಅಭಿನಯಗೀತೆ<br>• ಕಥೆ ಹೇಳುವುದು | • ಪಾತ್ರಾಭಿನಯ<br>• ರೋಲ್‌ಪ್ಲೇ<br>• ಕಥೆ ಹೇಳುವುದು |

**ಸಂಬಂಧಗಳನ್ನು (ತಂದೆ , ತಾಯಿ, ಅಕ್ಕ, ಅಣ್ಣ, ತಮ್ಮ, ತಂಗಿ, ಅಜ್ಜ, ಅಜ್ಜಿ, ಮಾವ, ಅತ್ತೆ) ಗುರುತಿಸಲು ಹಾಗೂ ಒಳ್ಳೆಯ ರೀತಿಯಲ್ಲಿ ಮುಂದುವರಿಸಲು (ವರ್ತಿಸಲು) ಸಾಧ್ಯವಾಗುವುದು.**

| | |
|---|---|
| • ಪಾತ್ರಾಭಿನಯ<br>• ಹಾಡುಗಳು<br>• ಕಥೆಗಳು | • ಹಾಡುಗಳು<br>• ಕಥೆಗಳು<br>• ರೋಲ್‌ಪ್ಲೇ |

**ಉತ್ಸವಗಳು/ಆಚರಣೆಗಳು (ಓಣಂ, ಕ್ರಿಸ್‌ಮಸ್, ರಂಜಾನ್....) ಮುಂತಾದ ಸಂದರ್ಭಗಳಲ್ಲಿ ತಯಾರಿಸುವ ಆಹಾರಗಳ (ಔತಣ, ಬಿರಿಯಾಣಿ, ಕೇಕ್....) ಪರಿಚಯ ಮಾಡಿಕೊಳ್ಳಲು ಮತ್ತು ಅವುಗಳನ್ನು ಪರಸ್ಪರ ಹಂಚಿಕೊಳ್ಳಲು ಸಾಧ್ಯವಾಗುವುದು.**

| | |
|---|---|
| • ವಿಶೇಷ ಆಹಾರಗಳ ಹೆಸರುಗಳನ್ನು ಹೇಳುವುದು.<br>• ಕಥೆಗಳನ್ನು ಆಲಿಸುವುದು.<br>• ಚಿತ್ರಗಳನ್ನು ಕಾಣುವುದು.<br>• ಆಹಾರವನ್ನು ಹಂಚಿಕೊಳ್ಳುವುದು. | • ವಿಶೇಷ ಆಹಾರಗಳ ಹೆಸರನ್ನು ಹೇಳುವುದು<br>• ಅನುಭವಗಳನ್ನು ಹೇಳುವುದು<br>• ಆಹಾರ ಹಂಚಿಕೊಳ್ಳುವುದು |

**ತನ್ನ ಕುಟುಂಬದಲ್ಲಿಯೂ ಸುತ್ತಮುತ್ತಲೂ ಇರುವ ವ್ಯಕ್ತಿಗಳ ಪ್ರಾಯವನ್ನೂ ಗುರುತಿಸಿ ಗೌರವದಿಂದ ಸಂಬೋಧನೆ ಮಾಡಿ ಮಾತನಾಡಲು ಹಾಗೂ ನಿರ್ಭಯವಾಗಿ ವ್ಯವಹರಿಸಲು ಸಾಧ್ಯವಾಗುವುದು.**

| | |
|---|---|
| • ಕಥೆಗಳನ್ನು ಆಲಿಸುವುದು.<br>• ಹಿರಿಯರನ್ನು, ಇನ್ನಿತರರನ್ನು ಸ್ವಾಗತಿಸುವುದು, ಗೌರವಿಸುವುದು. | • ಕಥೆಗಳನ್ನು ಆಲಿಸುವುದು.<br>• ರೋಲ್‌ಪ್ಲೇ<br>• ಇನ್ನಿತರರನ್ನು ಗೌರವಿಸುವುದು , ಪರಿಚಯ ಮಾಡಿಕೊಳ್ಳುವುದು. |

**ಕಥೆಗಳು, ಘಟನೆಗಳು, ಸಂದರ್ಭಗಳು ಎಂಬಿವುಗಳನ್ನು ಹೇಳಿ ಇತರರಿಗೆ ಸಂತೋಷ ಉಂಟುಮಾಡುವ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುವುದು.**

| | |
|---|---|
| • ಸಂದರ್ಭಗಳನ್ನು ವಿಶ್ಲೇಷಣೆ ಮಾಡುವುದು<br>(ಉದಾ : ಮನೆಯ ಅಣ್ಣ, ಅಕ್ಕ, ತಮ್ಮ, ತಂಗಿ ಆಟಿಕೆಗಳಿಗಾಗಿ ಹೊಡದಾಡುವುದು. | • ಸಂದರ್ಭಗಳನ್ನು ವಿವರಿಸುವುದು<br>• ಕಥೆಗಳನ್ನು ವಿವರಿಸುವುದು<br>(ಉದಾ : ಕಾಗೆ ಮತ್ತು ನರಿ–ರೊಟ್ಟಿ ಕಸಿದ ಕಥೆ<br>'ನರಿ ಮಾಡಿದ್ದು ಸರಿಯೇ? ') |

**(3) ಭಾವನಾತ್ಮಕ**

**ಸಸ್ಯಗಳನ್ನು , ಜಂತುಗಳನ್ನು ಪ್ರೀತಿಸಲೂ ಪರಿಪಾಲಿಸಲೂ ಸಾಧ್ಯವಾಗುವುದು**

| | |
|---|---|
| • ಬಯಲು ಪ್ರವಾಸ<br>• ಸಸ್ಯಗಳ/ಜಂತುಗಳ ಹಾಡುಗಳು/ಕಥೆಗಳನ್ನು ಆಲಿಸುವುದು<br>• ಸಸ್ಯಗಳಿಗೆ ನೀರುಣಿಸುವುದು<br>• ಮೀನು, ಪಕ್ಷಿಗಳು ಎಂಬಿವುಗಳಿಗೆ ಆಹಾರ ನೀಡುವುದು | • ಬಯಲು ಪ್ರವಾಸ<br>• ಸಸ್ಯಗಳನ್ನು ಹಾಗೂ ಜಂತುಗಳನ್ನು ಪ್ರೀತಿಸಲು, ಸಂರಕ್ಷಿಸಲು ಬೇಕಾದ ಹಾಡುಗಳು/ ಕಥೆಗಳನ್ನು ಆಲಿಸುವುದು.<br>• ಹೂದೋಟ ನಿರ್ಮಾಣ, ಪರಿಪಾಲನೆ<br>• ಸಾಕುಪಕ್ಷಿಗಳು/ಮೃಗಗಳು ಎಂಬಿವುಗಳಿಗೆ ಆಹಾರ ನೀಡುವುದು. |

**ಇನ್ನಿತರರೊಂದಿಗೆ ಸಹಾನುಭೂತಿಯಿಂದಲೂ, ಅನುಕಂಪದಿಂದಲೂ ವ್ಯವಹರಿಸಲು ಸಾಧ್ಯವಾಗುವುದು.**

| | |
|---|---|
| • ಸಹಾನುಭೂತಿ ಪ್ರಕಟಿಸುವ ಕಥೆಗಳನ್ನು ಆಲಿಸುವುದು. | • ಭಿನ್ನ ಸಾಮರ್ಥ್ಯದವರಿಗೆ ಸಹಾಯ ಮಾಡುವುದು. |

**ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದು.**

| | |
|---|---|
| • ಸರಿಯಾದ ಸಮಯಕ್ಕೆ ಶಾಲೆಗೆ ತಲುಪುವುದು.<br>• ಟೈಮ್‌ಟೇಬಲ್ ಪ್ರಕಾರವಿರುವ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು. | • ಸರಿಯಾದ ಸಮಯಕ್ಕೆ ಶಾಲೆಗೆ ತಲುಪುವುದು.<br>• ತರಗತಿ ಚಟುವಟಿಕೆಗಳನ್ನು ಸರಿಯಾದ ಸಮಯಕ್ಕೆ ಮಾಡಿ ಪೂರ್ತಿಗೊಳಿಸುವುದು.<br>• ಟೈಮ್‌ಟೇಬಲ್ ಪ್ರಕಾರವಿರುವ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು. |

**ಗುಂಪಾಗಿ ಆಡುವ ಆಟಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುವುದು**

| | |
|---|---|
| • ಗುಂಪು ಆಟಗಳು | • ಗುಂಪು ಆಟಗಳು<br>• ಗುಂಪು ಚಟುವಟಿಕೆಗಳು |

5. **ವಿಕಾಸ ಮಂಡಲ** – **ಸೃಜನಾತ್ಮಕ – ಸೌಂದರ್ಯಾತ್ಮಕ ವಿಕಾಸ**

**ಬುದ್ಧಿಯ ಬಹುಮುಖಗಳು** - ಸಂಗೀತ ಪರವಾದ ಬುದ್ಧಿ

- ದೃಶ್ಯಸ್ಥಳ ಪರವಾದ ಬುದ್ಧಿ

**ವಿವಿಧ ರೀತಿಯ ಹಾಡುಗಳು (ಗುಂಪು ಹಾಡು, ಬಾಯ್ತಾಳ, ಪ್ರಶ್ನೋತ್ತರ ಹಾಡು, ಕಥನ ಕವನ, ಸಂಭಾಷಣೆಗಳು...)ಮುಂತಾದವುಗಳನ್ನು ಶ್ರದ್ಧೆಯಿಂದ ಕೇಳಲೂ ಆಸ್ವಾದಿಸಲೂ ಸಾಧ್ಯವಾಗುವುದು.**

| | |
|---|---|
| • ಕಥನಕವನಗಳನ್ನು, ಸಂಭಾಷಣಾ ಹಾಡುಗಳನ್ನು ಆಲಿಸುವುದು(ಓಡಿಯೋ). | • ಕಥನ ಕವನಗಳು, ಸಂಭಾಷಣಾ ಹಾಡುಗಳು, ಪ್ರಶ್ನೋತ್ತರ ಹಾಡು, ಗುಂಪು ಹಾಡು, ಬಾಯ್ತಾಳ ಎಂಬಿವುಗಳನ್ನೂ ಆಲಿಸುವುದು (ಓಡಿಯೋ) |

**ಆಲಿಸಿದ ಹಾಡುಗಳನ್ನು ತಾಳಾತ್ಮಕವಾಗಿ ಹಾಡಲು ಸಾಧ್ಯಾವಾಗುವುದು**

| | |
|---|---|
| • ಗುಂಪಾಗಿ, ವೈಯಕ್ತಿಕವಾಗಿ ಹಾಡುವುದು | • ಆಲಿಸಿದ ಹಾಡುಗಳನ್ನು ಗುಂಪಾಗಿಯೂ ವೈಯಕ್ತಿಕವಾಗಿಯೂ ತಾಳಾತ್ಮಕವಾಗಿ ಹಾಡುವುದು |

**ವಿವಿಧ ಸಂದರ್ಭಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿ ಹೊಸ ಹಾಡುಗಳನ್ನು ಕಂಡುಕೊಂಡು ಪದಗಳನ್ನು ಸಾಲುಗಳನ್ನು ಸೇರಿಸಿ ಹಾಡಲು ಸಾಧ್ಯವಾಗುವುದು.**

| | |
|---|---|
| • ವಿವಿಧ ವಿಷಯಗಳಿಗೆ ಸಂಬಂಧಿಸಿದ ಹಾಡುಗಳಿಗೆ ಪದಗಳು, ಸಾಲುಗಳನ್ನು ಸೇರಿಸಿ ಹಾಡುವುದು. | • ವಿವಿಧ ವಿಷಯಗಳಿಗೆ ಸಂಬಂಧಿಸಿದ ಹಾಡುಗಳಿಗೆ ಪದಗಳು ಹಾಗೂ ಸಾಲುಗಳನ್ನು ಸೇರಿಸಿ ಹಾಡುವುದು<br>• ಹೊಸ ಹಾಡುಗಳನ್ನು ಕಂಡುಹಿಡಿದು ಹಾಡುವುದು.<br>• ಹೊಸ ಹಾಡುಗಳನ್ನು ರಚಿಸಿ ಹಾಡುವುದು. |

**ಸಹಪಾಠಿಗಳ ಮಂಡನೆಗಳನ್ನು ಪ್ರೋತ್ಸಾಹಿಸಲು ಸಾಧ್ಯವಾಗುವುದು.**

| | |
|---|---|
| • ಚಿಕ್ಕ ಗುಂಪುಗಳಲ್ಲಿ ಹಾಡುವುದು ಚಪ್ಪಾಳೆಯಿಂದ ಪ್ರೋತ್ಸಾಹಿಸುವುದು. | • ಗುಂಪುಗಳಾಗಿ ಹಾಡುವುದು.<br>• ಚಪ್ಪಾಳೆಯಿಂದ, ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುವುದು. |

**ವಿವಿಧ ಸಂದರ್ಭಗಳಲ್ಲಿ ಹಾಡುಗಳನ್ನು ಆಲಿಸುವುದಕ್ಕೂ, ಇಷ್ಟವಾದವುಗಳನ್ನು ಮಂಡಿಸುವುದಕ್ಕೂ ಸಾಧ್ಯವಾಗುವುದು.**

| | |
|---|---|
| • ಅಭಿನಯ ಗೀತೆ, ಜೋಗುಳ ಹಾಡು, ಸಿನಿಮಾಹಾಡು (ಓಡಿಯೋ) ಆಲಿಸುವುದು.<br>• ಕಾರ್ಯಕ್ರಮಗಳಲ್ಲಿ ಮಂಡಿಸುವುದು. | • ವಿವಿಧ ತರದ ಹಾಡುಗಳನ್ನು ಆಲಿಸುವುದು (ಓಡಿಯೋ).<br>• ವಿವಿಧ ಕಾರ್ಯಕ್ರಮಗಳಲ್ಲಿ ಮಂಡಿಸುವುದು. |

**ಸಂಗೀತೋಪಕರಣಗಳನ್ನು ಒಂಟಿಯಾಗಿಯೂ ಗುಂಪಿನಲ್ಲಿಯೂ ಆಸ್ವಾದ್ಯಕರವಾಗಿ ಬಳಸುವುದಕ್ಕೂ, ಆಸ್ವಾದಿಸುವುದಕ್ಕೂ ಸಾಧ್ಯವಾಗುವುದು.**

| | |
|---|---|
| • ಡ್ರಂ, ಗಂಜೀರ ಎಂಬಿವುಗಳನ್ನು ಉಪಯೋಗಿಸಿ ಗುಂಪಾಗಿ ಹಾಡುವುದು<br>• ಸಂಗೀತೋಪಕರಣಗಳನ್ನು ಉಪಯೋಗಿಸಿ ಹಾಡುವುದನ್ನು ಆಲಿಸುವುದು. | • ಸಂಗೀತೋಪಕರಣಗಳನ್ನು ಉಪಯೋಗಿಸಿ ಹಾಡುವುದನ್ನು ಆಲಿಸುವುದು ಮತ್ತು ನೋಡುವುದು.<br>• ಸಂಗೀತೋಪಕರಣಗಳನ್ನು ಉಪಯೋಗಿಸಿ ಒಂಟಿಯಾಗಿಯೂ ಗುಂಪಿನಲ್ಲಿಯೂ ಹಾಡುವುದು. |

**ಆಟಿಕೆಗಳನ್ನು ನಿರ್ಮಿಸಲು ಸಾಧ್ಯವಾಗುವುದು**

| | |
|---|---|
| • ಬೆಂಕಿಪೊಟ್ಟಣ ಗಿಜಿ ಗಿಜಿ<br>• ಬೆಂಕಿಪೆಟ್ಟಿಗೆ ಬೊಂಬೆ | • ಮಡಲ ಪೀಪಿ<br>• ಚೆಂಡುಪೊಳೆಗಾಡಿ<br>• ವಿವಿಧ ಆಟಿಕೆಗಳು |

**ಕವಚ ಹಾಕಿದ ವಿವಿಧ ಸ್ಟೀಲ್ ಪಾತ್ರಗಳನ್ನು ಚಿಕ್ಕ ಕೋಲುಗಳಿಂದ ಬಡಿದು ತಾಳಾತ್ಮಕವಾಗಿ ಶಬ್ದ ಉಂಟುಮಾಡಲು ಸಾಧ್ಯವಾಗುವುದು.**

| | |
|---|---|
| • ಪಾತ್ರೆಗಳಿಗೆ ಚಿಕ್ಕಕೋಲುಗಳಿಂದ ಬಡಿದು ಶಬ್ದ ಉಂಟು ಮಾಡುವುದು | • ಪಾತ್ರೆಗಳಿಗೆ ಚಿಕ್ಕಕೋಲುಗಳಿಂದ ಬಡಿದು ತಾಳಾತ್ಮಕವಾಗಿ ಶಬ್ದ ಉಂಟು ಮಾಡುವುದು |

**ಕಥೆಗಳನ್ನು ಆಲಿಸಲು, ಆಸ್ವಾದಿಸಲು ಸಾಧ್ಯವಾಗುವುದು**

| | |
|---|---|
| • ಕಥೆಗಳನ್ನು ಆಲಿಸುವುದು(ಓಡಿಯೋ) | • ಕಥೆಗಳನ್ನು ಆಲಿಸುವುದು (ಓಡಿಯೋ)<br>• ರೋಲ್‌ಪ್ಲೇ, ಬೊಂಬೆಯಾಟ ಎಂಬಿವುಗಳ ಮೂಲಕ ಕಥೆಗಳನ್ನು ಆಲಿಸುವುದು. |

**ಕಥೆಗಳು ಭಾವಪೂರ್ಣತೆಯೊಂದಿಗೆ ರಂಜನೀಯವಾಗಿ ಹೇಳಲು ಸಾಧ್ಯವಾಗುವುದು**

| | |
|---|---|
| • ಕಥೆಯಲ್ಲಿ ಇಷ್ಟವಾದ ವಿಚಾರಗಳ ಕುರಿತು ಹೇಳುವುದು | • ಭಾವಪೂರ್ಣವಾಗಿ ಕಥೆಯ ಘಟನೆಗಳನ್ನು ಹೇಳುವುದು |

**ಸ್ವಂತವಾಗಿ ಕಥೆಗಳನ್ನು ರಚಿಸಲು, ಹೇಳಲು ಹಾಗೂ ಕಥಾಪಾತ್ರಗಳನ್ನು ಅಭಿನಯಿಸಿ ತೋರಿಸಲು ಸಾಧ್ಯವಾಗುವುದು**

| | |
|---|---|
| • ಅಧ್ಯಾಪಿಕೆಯ ಸಹಾಯದೊಂದಿಗೆ ಕಥೆಗಳನ್ನು ರಚಿಸಿ ಹೇಳುವುದು | • ಕಥೆಯನ್ನು ರಚಿಸಿ ಭಾವಪೂರ್ಣವಾಗಿ ಹೇಳುವುದು<br>• ಕಥಾಪಾತ್ರಗಳನ್ನು ಅಭಿನಯಿಸಿ ತೋರಿಸುವುದು |

| | |
|---|---|
| **ಕಥೆಗಳು, ಅನುಭವಗಳು, ಘಟನೆಗಳು ಎಂಬಿವುಗಳಲ್ಲಿ ಬರುವ (ರೋಲ್ ಪ್ಲೇ) ಪಾತ್ರಗಳನ್ನು ಅಭಿನಯಿಸಲು ಸಾಧ್ಯವಾಗುವುದು** | |
| • ರೋಲ್‌ಪ್ಲೇ ಪ್ರದರ್ಶಿಸುವುದು (ತಂದೆ/ತಾಯಿ) | • ರೋಲ್‌ಪ್ಲೇ ಪ್ರದರ್ಶಿಸುವುದು (ಶಾಲೆ) |
| **ಒಂದನ್ನು ಇನ್ನೊಂದಾಗಿ ಕಲ್ಪಿಸಿ (ಸುತ್ತಲಿರುವ ಜೀವಿಗಳು, ವಸ್ತುಗಳು), ಇನ್ನೊಬ್ಬರಾಗಿ ಸ್ವಯಂ ಕಲ್ಪಿಸಿ ಆಶಯ ಪ್ರಕಟಣೆ ನಡೆಸಲು ಸಾಧ್ಯವಾಗುವುದು.** | |
| • ಪಾತ್ರಾಭಿನಯ<br>• ಮೃಗಗಳ ಹಾಗೂ ಪಕ್ಷಿಗಳ ಮುಖವಾಡವನ್ನು ಧರಿಸಿ ಆಡುವುದು | • ಮುಖವಾಡ ಧರಿಸಿ ಆಡುವುದು<br>• ಹೆಗ್ಗಳಿಕೆ ಹೇಳುವುದು<br>• ಕೋಲು ಮುಂತಾದ ವಸ್ತುಗಳನ್ನು ವಿವಿಧ ವಸ್ತುಗಳಾಗಿ ಕಲ್ಪಿಸಿ ಪ್ರದರ್ಶಿಸುವುದು<br>• ಕಿಚನ್‌ಸೆಟ್ (ಓರ್ಕೆಸ್ಟ್ರಾ) |
| **ಸಭೆಗಳಲ್ಲಿ ತನ್ನ ಕಲಾ ಸಾಮರ್ಥ್ಯಗಳನ್ನು ಆತ್ಮವಿಶ್ವಾಸದೊಂದಿಗೆ ಪ್ರಕಟಪಡಿಸಲು ಸಾಧ್ಯವಾಗುವುದು.** | |
| • ಹಾಡು ಹಾಡುವುದು<br>• ಅಭಿನಯಗೀತೆ ಹಾಡುವುದು<br>• ಕಥೆ ಹೇಳುವುದು | • ಹಾಡು ಹಾಡುವುದು<br>• ಕಥೆ ಹೇಳುವುದು<br>• ರೋಲ್‌ಪ್ಲೇ<br>• ಅಭಿನಯಗೀತೆಗಳು |
| **ಸರಳ ಆಶಯಗಳನ್ನು ವಿವಿಧ ಕಲಾಪ್ರಕಾರಗಳಲ್ಲಿ ಆವಿಷ್ಕರಿಸಲು ಸಾಧ್ಯವಾಗುವುದು.** | |
| • ಆಶಯಗಳನ್ನು ವಿವಿಧ ಕಲಾಪ್ರಕಾರಗಳ ಮೂಲಕ ಪ್ರಕಟಪಡಿಸುವುದು. | • ಆಶಯಗಳನ್ನು ವಿವಿಧ ಕಲಾಪ್ರಕಾರಗಳಲ್ಲಿ ಪ್ರಕಟಿಸುವುದು. |
| **ಸುತ್ತಲಿರುವ ಜೀವಿಗಳು, ವಸ್ತುಗಳು, ವ್ಯಕ್ತಿಗಳು ಎಂಬಿವುಗಳ ಶಬ್ದ, ಚಲನೆ ಮುಂತಾದವುಗಳನ್ನು ಅನುಕರಿಸಲು ಸಾಧ್ಯವಾಗುವುದು.** | |
| • ಶಬ್ದಾನುಕರಣ ಆಟಗಳು | • ಶಬ್ದಾನುಕರಣ ಆಟಗಳು<br>• ಗುಂಪು ಆಟಗಳು |

**ಪ್ರಕೃತಿಯನ್ನು ಆಸ್ವಾದಿಸುವುದ್ಕೂ ಚಿತ್ರದ ಮೂಲಕ ಪ್ರಕಟಪಡಿಸುವುದ್ಕೂ ಬಣ್ಣ ಕೊಡುವುದಕ್ಕೂ ಸಾಧ್ಯವಾಗುವುದು.**

| | |
|---|---|
| • ಕ್ರಯೋನ್ ಉಪಯೋಗಿಸಿ ಬಣ್ಣ ನೀಡುವುದು<br>• ಚಿತ್ರ ರಚಿಸಿ ಬಣ್ಣ ಹಚ್ಚುವುದು | • ವಿವಿಧ ವಸ್ತುಗಳನ್ನು ಉಪಯೋಗಿಸಿ ಬಣ್ಣ ಹಚ್ಚುವುದು<br>• ಚಿತ್ರ ಬಿಡಿಸಿ ಬಣ್ಣ ಕೊಡುವುದು<br>• ಚಿತ್ರಮೂಲೆ ತಯಾರಿಸುವುದು |

**ಚಿತ್ರಪುಸ್ತಕಗಳನ್ನು ಓದಿ ಆಲಿಸುವುದಕ್ಕೂ, ಚಿತ್ರವನ್ನು ಆಸ್ವಾದಿಸುವುದಕ್ಕೂ, ಆಸ್ವಾದನೆಯನ್ನು ಹೇಳುವುದಕ್ಕೂ ಸಾಧ್ಯವಾಗುವುದು.**

| | |
|---|---|
| • ಚಿತ್ರಪುಸ್ತಕಗಳನ್ನು ಓದುವುದನ್ನು ಆಲಿಸುವುದು.<br>• ಚಿತ್ರದ ಕುರಿತು ಹೇಳುವುದು | • ಚಿತ್ರ ಪುಸ್ತಕಗಳನ್ನು ಓದುವುದನ್ನು ಆಲಿಸುವುದು.<br>• ಚಿತ್ರದಿಂದ ಕಥೆ ಕಟ್ಟಿ ಹೇಳುವುದು |

**ಕೆಲವು ವಸ್ತುಗಳ್ನು ಉಪಯೋಗಿಸಿ ಪ್ರಿಂಟಿಂಗ್, ಸ್ಪ್ರೇವರ್ಕ್ ಎಂಬಿವುಗಳನ್ನು ಮಾಡಲು ಸಾಧ್ಯವಾಗುವುದು**

| | |
|---|---|
| • ಎಲೆ ಪ್ರಿಂಟಿಂಗ್<br>• ಕಾಗದ ಸುರುಟಿ ಪ್ರಿಂಟಿಂಗ್<br>• ತರಕಾರಿ ಪ್ರಿಂಟಿಂಗ್ | • ನೂಲು, ತರಕಾರಿ, ಸ್ಟಿಕ್, ಮೇಣ, ಎಲೆ ಪ್ರಿಂಟಿಂಗ್<br>• ಸ್ಪ್ರೇ ವರ್ಕ್ |

**ನೀರಾಟಗಳಲ್ಲಿ ತೊಡಗಿಸಿ ಕೊಳ್ಳಲು ಸಾಧ್ಯವಾಗುವುದು**

| | |
|---|---|
| • ಕಾಗದ ದೋಣಿ, ಬಾಟ್ಲಿಯ ಮುಚ್ಚಳ, ಪಾತ್ರೆಯ ಮುಚ್ಚಳ ಎಂಬಿವುಗಳನ್ನು ಉಪಯೋಗಿಸಿರುವ ಆಟಗಳು | • ವಿವಿಧ ವಸ್ತುಗಳನ್ನು ಉಪಯೋಗಿಸಿ ನೀರಾಟಗಳಲ್ಲಿ ತೊಡಗಿಸಿಕೊಳ್ಳುವುದು. |

**ವಸ್ತುಗಳನ್ನು (ಪ್ರಕೃತಿಯಿಂದ ಸಿಗುವವುಗಳು/ಉಪಯೋಗ ಶೂನ್ಯ ವಸ್ತುಗಳು) ಉಪಯೋಗಿಸಿ ಆಟಿಕೆಗಳು, ಕೌತುಕ ವಸ್ತುಗಳು, ಕೊಲೇಷ್ ಎಂಬಿವುಗಳ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುವುದು.**

| | |
|---|---|
| • ಒರಿಗಾಮಿ<br>• ಆಟಿಕೆಗಳು | • ಒರಿಗಾಮಿ<br>• ಆಟಿಕೆಗಳು<br>• ಕೌತುಕ ವಸ್ತುಗಳು<br>• ಕೊಲೇಷ್<br>• ವಿವಿಧ ಆಕೃತಿಗಳನ್ನು ನಿರ್ಮಿಸುವುದು<br>• ಒರಿಗಾಮಿ ಆಕೃತಿಗಳನ್ನು ಕ್ರಮೀಕರಿಸಿ ಅಂಟಿಸುವುದು |

**ಚಿತ್ರಗಳು, ಎಲೆಗಳು, ಗರಿಗಳು ಕೌತುಕ ವಸ್ತುಗಳು, ಕಲಾವಿದರ ಚಿತ್ರಗಳು ಎಂಬಿವುಗಳನ್ನು ಸಂಗ್ರಹಿಸಿ, ಕ್ರಮೀಕರಿಸಿ ಇಡುವುದು**

| | |
|---|---|
| • ಎಲೆಗಳು, ಗರಿಗಳನ್ನು ಅಂಟಿಸುವುದು | • ಆಲ್ಬಂ ನಿರ್ಮಿಸುವುದು |

**ವಿವಿಧ ಕಲೆಗಳನ್ನು (ಚಿತ್ರ, ಹಾಡು, ನೃತ್ಯ...)ನಿರೀಕ್ಷಣೆ ಮಾಡುವುದಕ್ಕೂ ಆಸ್ವಾದಿಸುವುದಕ್ಕೂ ಸಾಧ್ಯವಾಗುವುದು.**

| | |
|---|---|
| • ಚಿತ್ರ, ನೃತ್ಯ, ಬೊಂಬೆಯಾಟ ಮುಂತಾದವುಗಳನ್ನು ವೀಕ್ಷಿಸುವುದು. | • ಚಿತ್ರ, ನೃತ್ಯ, ಬೊಂಬೆಯಾಟ ಮುಂತಾದವುಗಳನ್ನು ವೀಕ್ಷಿಸುವುದು, ಆಸ್ವಾದಿಸುವುದು. |

**ದ್ವಿಮಾನ, ತ್ರಿಮಾನ ಆಕೃತಿಗಳ ಮೂಲಕ ಆಶಯಗಳನ್ನು ಆವಿಷ್ಕರಿಸಲು ಸಾಧ್ಯವಾಗುವುದು**

| | |
|---|---|
| • ಬೆಂಕಿಕಡ್ಡಿ, ಹಿಡಿಕಡ್ಡಿ, ಚೆಂಡುಪೊಳೆ ಮುಂತಾದವುಗಳನ್ನು ಉಪಯೋಗಿಸಿ ದ್ವಿಮಾನ ಆಕೃತಿಗಳನ್ನು (ಮನೆ, ಆಟಿಕೆಗಳು) ನಿರ್ಮಿಸುವುದು. | • ಆವೆಮಣ್ಣು, ಕಲಸಿದ ಹಿಟ್ಟು, ಪ್ಲಾಸ್ಟಿಸಿನ್ ಎಂಬಿವುಗಳನ್ನು ಉಪಯೋಗಿಸಿ ಆಕೃತಿನ್ನು ನಿರ್ಮಿಸುವುದು<br>• ಬೆಂಕಿ ಪೆಟ್ಟಿಗೆ, ಖಾಲಿಪೆಟ್ಟಿಗೆಗಳು, ಹಿಡಿಕಡ್ಡಿ, ಚೆಂಡುಪೊಳೆ ಎಂಬಿವುಗಳನ್ನು ಉಪಯೋಗಿಸಿ ಆಟಿಕೆಗಳನ್ನು ನಿರ್ಮಿಸುವುದು. |




# ಶಿಶು ಚಟುವಟಿಕಾ ತಂತ್ರಗಳು ಮತ್ತು ವಿಧಾನಗಳು

## ಮುನ್ನುಡಿ

ಪ್ರಿಸ್ಕೂಲ್ ವಿದ್ಯಾಲಯಕ್ಕೆ ತಲುಪುವ ಮಕ್ಕಳು ಪೂರ್ವಜ್ಞಾನದಲ್ಲೂ, ಸಾಮರ್ಥ್ಯದಲ್ಲೂ ಆಸಕ್ತಿಯಲ್ಲೂ ವಿಕಾಸ ಮಂಡಲಗಳಲ್ಲೂ ವಿಭಿನ್ನರಾಗಿರುತ್ತಾರೆ. ಅವರಿಗಾಗಿ ಪಂಚೇಂದ್ರಿಯಗಳ ಮೂಲಕ ಜ್ಞಾನ ನಿರ್ಮಾಣಕ್ಕೆ ಸಹಾಯಕವಾಗುವ ಚಟುವಟಿಕೆಗಳನ್ನು ತಯಾರಿಸಿ ಕಾರ್ಯಗತಗೊಳಿಸಬೇಕು. ಹೆತ್ತವರ ಬೆಂಬಲ, ಕುಟುಂಬ ವಾತಾವರಣ, ಸಾಮಾಜಿಕ – ಸಾಂಸ್ಕೃತಿಕ ಹಿನ್ನಲೆ ಮೊದಲಾದವುಗಳು ಮಗುವಿನ ನೈಪುಣ್ಯ ವಿಕಾಸದ ಮೇಲೆ ಪ್ರಭಾವ ಬೀರುವ ಘಟಕಗಳಾಗಿವೆ.

ಶಿಶುವಿಕಾಸವೂ ಜ್ಞಾನ ಸಂಪಾದನೆಯೂ ಪ್ರಿಸ್ಕೂಲ್ ಕಲಿಕಾ ಹಂತದಲ್ಲಿ ಮಾತ್ರ ನಡೆಯುವ ಪ್ರಕ್ರಿಯೆಯಲ್ಲ. ವ್ಯವಹರಿಸಲು ಲಭಿಸಿದ ಅವಕಾಶಗಳು, ದೃಶ್ಯ ಮಾಧ್ಯಮಗಳ ಪ್ರಭಾವ, ಗೆಳೆಯರೊಂದಿಗಿನ ಆಟಗಳು ಮೊದಲಾದವುಗಳು ಜ್ಞಾನ ನಿರ್ಮಾಣಕ್ಕೆ ಮತ್ತು ಸಾಮರ್ಥ್ಯ ವಿಕಾಸಕ್ಕೆ ಸಂದರ್ಭಗಳಾಗಿವೆ.



ವಿಕಾಸ ಮಂಡಲಗಳನ್ನೂ ಬುದ್ಧಿಯ ಬಹುಮುಖಗಳನ್ನೂ ಪರಿಗಣಿಸುವಾಗ ಮಗುವಿನ ವಿಕಾಸದ ಅಗತ್ಯಗಳು ಹಲವು ವಿಧಗಳಾಗಿರುವುದೆಂದು ಗುರುತಿಸಲು ಸಾಧ್ಯವಿದೆ. ಆದುದರಿಂದ ಮಕ್ಕಳ ಸಮಗ್ರ ವಿಕಾಸಕ್ಕಾಗಿ ವಿಭಿನ್ನ ಕಲಿಕಾ ತಂತ್ರಗಳನ್ನು ಬಳಸಬೇಕಾಗಬಹುದು. ಮಗುವಿನ ಪ್ರಾಯ ಸ್ವಭಾವ, ಅಗತ್ಯಗಳು ಸಾಮರ್ಥ್ಯಗಳು ಆಸಕ್ತಿ ಮೊದಲಾದವುಗಳನ್ನು ಪರಿಗಣಿಸಿಕೊಂಡು ಕಲಿಕಾ ತಂತ್ರಗಳನ್ನು ಆರಿಸಬೇಕಾಗಿದೆ. ವಾಸಿಸುವ ಪರಿಸರ, ಸಾಮಾಜಿಕವೂ ಸಾಂಸ್ಕೃತಿಕವೂ ಭಾಷಾಪರವೂ ಆದ ಹಿನ್ನಲೆ ಎಂಬಿವುಗಳು ಮಗುವಿನ ಆಸಕ್ತಿಯ ಮೇಲೆ ಪ್ರಭಾವವನ್ನು ಬೀರುವುದು. ಪ್ರಿಸ್ಕೂಲಿನ ಚಟುವಟಿಕೆಗಳು ಪ್ರತಿಯೊಂದು ಮಗುವಿನ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ಸಮಗ್ರವಾಗಿರಬೇಕು. ಅದಕ್ಕಾಗಿ ಅಧ್ಯಾಪಕರನ್ನು ಸಮರ್ಥರನ್ನಾಗಿಸುವ ವಿವಿಧ ಕಲಿಕಾ ತಂತ್ರಗಳನ್ನು ಉದಾಹರಣೆ ಸಮೇತ ಈ ಅಧ್ಯಾಯದಲ್ಲಿ ಪ್ರತಿಪಾದಿಸಲಾಗಿದೆ.

*ಮಕ್ಕಳಿಗೆ ಬೇಕಾಗಿರುವುದು ಭಾಷಣವಲ್ಲ ಚಟುವಟಿಕೆಗಳಾಗಿವೆ. ಮಕ್ಕಳ ಕಲಿಕಾ ಚಟುವಟಿಕೆಗಳ ಪೂರ್ಣತೆಗಿಂತಲೂ ಅವರ ಭಾಗವಹಿಸುವಿಕೆಯು ಪ್ರಧಾನವಾಗಿದೆ. ಕಥೆ, ಪದ್ಯ ನಾಟಕೀಕರಣ, ಬೊಂಬೆಯಾಟ, ಕಥನ ಕವನ, ಅಭಿನಯಗೀತೆಗಳು, ಸಮೂಹ ಗೀತೆಗಳು, ಬಯಲು ಪ್ರವಾಸ, ಗಣಿತಾನುಭವಗಳು, ವೈಜ್ಞಾನಿಕ ಅನುಭವಗಳು, ಸಮಸ್ಯಾ ಪರಿಹಾರ ಚಟುವಟಿಕೆಗಳು, ತರಗತಿಯ ಒಳಗೂ ಹೊರಗೂ ನಡೆಯುವ ಚಟುವಟಿಕೆಗಳು, ಕಾಲ್ಪನಿಕ ಆಟಗಳು, ಪಾತ್ರಾಭಿನಯ ಮೊದಲಾದ ವಿವಿಧತೆಯಿಂದ ಕೂಡಿದ ಕಲಿಕಾ ತಂತ್ರಗಳನ್ನು, ಮಕ್ಕಳ ಸಾಮರ್ಥ್ಯವನ್ನು ಪರಿಗಣಿಸಿ ವಿಷಯಕ್ಕೆ ಹೊಂದಿಕೊಂಡು ಅಧ್ಯಾಪಿಕೆಯು ಮಕ್ಕಳಿಗೆ ನೀಡಬೇಕು. ಚಟುವಟಿಕೆಗಳು ವೈವಿಧ್ಯಮಯವಾಗಿದ್ದು ಅನುಭವ ಸಂಪತ್ತನ್ನವೂ ಸಂದರ್ಭೋಚಿತವೂ, ಅನೌಪಚಾರಿಕವೂ ಆಗಿರುವಂತೆ ಗಮನಿಸಬೇಕು.*

## ಅಯ್ಯೋ.....ನನ್ನ ಗಾಳಿಪಟ

### ಕಥಾ ಮಂಡನೆ : ಸಾಧ್ಯತೆಗಳೂ ರೀತಿಗಳೂ

ಕಥೆಗಳೆಂದರೆ ಎಲ್ಲರಿಗೂ ಇಷ್ಟವಾಗಿರುವುದು. ಸಣ್ಣ ಮಕ್ಕಳಿಂದ ಹಿಡಿದು ಮುದುಕರ ವರೆಗೆ ಎಲ್ಲರೂ ಕಥೆ ಕೇಳಲು ಆಸಕ್ತಿ ಹೊಂದಿದವರಾಗಿರುತ್ತಾರೆ. ಸಣ್ಣ ಮಕ್ಕಳು ಕಥೆ ಆಲಿಸಲು ಮತ್ತು ಆಲಿಸಿದ ಕಥೆಯನ್ನೇ ಮತ್ತೊಮ್ಮೆ ಆಲಿಸಲು ಆಸಕ್ತಿ ಹೊಂದಿದವರಾಗಿರುವರು. ಸ್ವಂತವಾಗಿ ಕಥೆಯನ್ನು ರಚಿಸಲು ಮತ್ತು ತನ್ನ ಭಾವನೆಗೆ ಹೊಂದಿಕೊಂಡು ಭಾವನಾತ್ಮಕವಾಗಿ ಕಥೆ ಹೇಳಲು ಎಲ್ಲಾ ಮಕ್ಕಳಿಗೂ ಸಾಧ್ಯ. ಕಥೆ ಆಲಿಸುವುದು, ಕಥೆ ಹೇಳುವುದು ಎಂಬಿವುಗಳ ಮೂಲಕ ಭಾಷಾಪರವಾದ ಬುದ್ಧಿ ವಿಕಾಸವು ಸಾಧ್ಯವಾಗುವುದು. ಇತರ ವಿಕಾಸ ಮಂಡಲಗಳ ಬೆಳವಣಿಗೆ ಮತ್ತು ವಿಕಾಸಕ್ಕೆ ಕಥೆಯನ್ನು ಉಪಯೋಗಿಸಬಹುದಾಗಿದೆ. ಕಥೆಯ ಆಯ್ಕೆ, ಅವುಗಳ ಮಂಡನೆ, ಮಂಡನೆಗೆ ಉಪಯೋಗಿಸುವ ವಿವಿಧ ತಂತ್ರಗಳು, ರೀತಿಗಳು, ಕಥೆಗಳಿಗಿರುವ ಪ್ರಾಧಾನ್ಯ ಎಂಬಿವುಗಳನ್ನು ಎಲ್ಲಾ ಶಿಶು ವಿದ್ಯಾಭ್ಯಾಸ ಕಾರ್ಯಕರ್ತರು ಮತ್ತು ಹೆತ್ತವರು ತಿಳಿದಿರಬೇಕಾಗಿದೆ.




- ಕಥೆಗಳನ್ನು ಹೇಗೆಲ್ಲ ವರ್ಗೀಕರಿಸಬಹುದೆಂದು ಯೋಚಿಸಿರುವಿರಾ?
  - ಮಕ್ಕಳ ಭಾವನೆಗಳನ್ನು ಉತ್ತೇಜಿಸುವ ಕಥೆಗಳು
  - ಭಾಗವಹಿಸುವಿಕೆಯ ಮೂಲಕ ಹೇಳಬಹುದಾದ ಕಥೆಗಳು
  - ಚಿತ್ರಗಳು, ಚಿತ್ರ ಪುಸ್ತಕಗಳು ಎಂಬಿವುಗಳನ್ನು ಉಪಯೋಗಿಸಿ ಹೇಳಬಹುದಾಗಿದೆ.
  - ಶಬ್ದಾನುಕರಣೆಯ ಸಾಧ್ಯತೆ ಇರುವ ಕಥೆಗಳು
  - ಪ್ರಕೃತಿಗೆ ಸಂಬಂಧಿಸಿದ ಕಥೆಗಳು
  - ಪದ್ಯಗಳಿಗಿರುವ ಕಥೆಗಳು
  - ಬೊಂಬೆಗಳನ್ನು ಉಪಯೋಗಿಸಿ ಹೇಳಬಹುದಾದ ಕಥೆಗಳು
  - ಮುಖವಾಡ ಸೇಂಡ್ ಟ್ರೇ, ಬಿಗ್ ಕ್ಯಾನ್ವಾಸ್ ಎಂಬಿವುಗಳ ಸಾಧ್ಯತೆಗಳನ್ನು ಉಪಯೋಗಿಸಿ ಹೇಳಬಹುದಾದ ಕಥೆಗಳು

ಇದರ ಆಧಾರದಲ್ಲಿ ಕಥಾ ಸಂಗ್ರಹ ಪುಸ್ತಕವನ್ನು ಕ್ರಮೀಕರಿಸಬಹುದೇ?

**ಕಥೆ ಪ್ರಾರಂಭಿಸುವುದಕ್ಕಿಂತ ಮೊದಲು ಏನೆಲ್ಲಾ ಪೂರ್ವ ತಯಾರಿ ನಡೆಸಬೇಕು?**

- ಮಕ್ಕಳ ಮಟ್ಟಕ್ಕನುಸರಿಸಿ ಕಥೆಗಳನ್ನು ಆರಿಸಬೇಕು
- ಆರಿಸಿದ ಕಥೆಗಳನ್ನು ಮಂಡಿಸಲಿರುವ ತಯಾರಿ ನಡೆಸಬೇಕು
- ಕಥೆಗೆ ಸೂಕ್ತವಾದ ತಂತ್ರ/ರೀತಿಗಳನ್ನು ತೀರ್ಮಾನಿಸಬೇಕು
- ಯಾವ ತಂತ್ರಗಳನ್ನು ಉಪಯೋಗಿಸಿಕೊಂಡು ಕಥೆಯನ್ನು ಮಂಡಿಸಲಾಗುವುದೋ ಅದಕ್ಕೆ ಬೇಕಾದ ತಯಾರಿ ನಡೆಸಬೇಕು

ಉದಾ : ಸೇಂಡ್ ಟ್ರೇ
  - ಸೇಂಡ್ ಟ್ರೇ ಕ್ರಮೀಕರಿಸಬೇಕು
  - ಸೇಂಡ್ ಟ್ರೇಯಲ್ಲಿ ಇರಿಸಬೇಕಾದ ಕಥಾ ಪಾತ್ರಗಳನ್ನು ತಯಾರಿಸಬೇಕು
  - ದೃಶ್ಯ-ಶ್ರಾವ್ಯ ಮಾಧ್ಯಮದ ಅಗತ್ಯವಿದ್ದರೆ ಅವುಗಳನ್ನು ಸಿದ್ಧಪಡಿಸಿರಬೇಕು.

- ಸಿದ್ಧತೆಗಳು ಪೂರ್ತಿಯಾದರೆ ಕಥೆಗೆ ಪ್ರವೇಶಿಸಲಿರುವ ಪ್ರಾರಂಭ ಚಟುವಟಿಕೆಗಳನ್ನು ಕಂಡುಕೊಳ್ಳಬೇಕು. ಕಥೆಗಿರುವ ಪ್ರವೇಶ ಚಟುವಟಿಯು ಮಕ್ಕಳಿಗೆ ಆಸಕ್ತಿಯನ್ನೂ ಕುತೂಹಲವನ್ನು ಹುಟ್ಟಿಸುವ ಮತ್ತು ಕಥೆಯೊಂದಿಗೆ ಸಂಚರಿಸಲು ಸಾಧ್ಯವಾಗುವವುಗಳಾಗಿರಬೇಕು.

## ಒಂದು ಕಥೆಯನ್ನು ಓದಿ ನೋಡುವ

**ಸುಂದರಿ ಗಾಳಿಪಟ**

ಊಂ.....ಊಂ....

"ಯಾರಪ್ಪ ಅಳುತ್ತಾ ಇರೋದು?" ದೀಪಾ ಮೂಲೆಗೆ ನೋಡಿದಳು.

ಓ....ನೀನಾ?

ಕೆಂಪು ಉಡುಪು, ಸಣ್ಣ ಬಾಲಗಳು – ನನ್ನ ಸುಂದರಿ ಗಾಳಿಪಟ!

ಯಾಕಮ್ಮ ಅಳುತ್ತಾ ಇದ್ದೀಯಾ.....ದೀಪಾ, ಸುಂದರಿ ಗಾಳಿಪಟವನ್ನು ಮೆಲ್ಲನೆ ಕೈಗೆತ್ತಿಕೊಂಡಳು.

ಅವಳು ಗಾಳಿಪಟಕ್ಕೆ ನೂಲನ್ನು ಕಟ್ಟಿದಳು.

ಮನೆಯಿಂದ ಹೊರ ಬಂದಳು.



ಹಾಯ್ ನೀಲಾಕಾಶ!

ಸುಂದರಿ ಗಾಳಿಪಟ ಎತ್ತರೆತ್ತರಕ್ಕೆ

ಏರುತ್ತಾ ಹಾರಾಡಿತು. ಸಂತೋಷದಿಂದ ಕೆಳಗೆ ನೋಡಿತು.

ತಲೆಯಾಡಿಸುತ್ತಾ ನಕ್ಕಿತು.

ಆ ಸಮಯಕ್ಕೆ ಸರಿಯಾಗಿ ಮಿನ್ನಿ ಗಿಡುಗನಿಗೆ

ಸುಂದರಿ ಗಾಳಿಪಟ ಕಣ್ಣಿಗೆ ಬಿತ್ತು.

ಅವಳಿಗೆ ಒಂದು ತುಂಟತನ ಮನಸಿನಲ್ಲಿ ಮೂಡಿತು.

ಅವಳು ಕೆಳಗೆ ಹಾರಿ ಬಂದು ಸುಂದರಿಯನ್ನು

ಕಟ್ಟಿರುವ ನೂಲಿಗೆ ಜೋರಾಗಿ ಕುಕ್ಕಿದಳು.

ಸುಂದರಿ ಗಾಳಿಪಟ ಸುತ್ತಿ, ಸುತ್ತಿ, ಸುತ್ತಿ

ತಿರುಗಿ ತಿರುಗಿ ತಿರುಗಿ ಸುತ್ತಲೂ ತಿರುಗಿ ತಲೆ ಕೆಳಗಾಗಿ ಕೆಳಕ್ಕೆ......ಕೆಳಕ್ಕೆ.....ಕೆಳಕ್ಕೆ....

ಆಗ ಗಾಳಿ ಬೀಸಿತು.

ಗಾಳಿ ತಾಗಿ ಗಾಳಿಪಟವು ದೂರಕ್ಕೆ ದೂರಕ್ಕೆ ದೂರಕ್ಕೆ..........

ಅಯ್ಯೋ ನನ್ನ ಗಾಳಿಪಟ!

ದೀಪಾ ಜೋರಾಗಿ ಅತ್ತಳು

ಬೊಬ್ಬೆ ಕೇಳಿ ಗಿಳಿಮರಿ ಹಾರಿ ಬಂತು

ದೀಪಾ ಆಕಾಶವನ್ನು ನೋಡುತ್ತಾ ಅಳುತ್ತಿದ್ದಾಳೆ

ಆಕಾಶದಲ್ಲಿ ನೂಲು ಕಡಿದ ಗಾಳಿಪಟ. ಇದನ್ನು ನೋಡಿದ ಪುಟ್ಟ ಗಿಳಿಗೆ ಬೇಸರವಾಯಿತು ಗಾಳಿಪಟದ ಹತ್ತಿರಕ್ಕೆ ಹೋಯಿತು.

ಆ ನೂಲನ್ನು ಕಚ್ಚಿ ಹಿಡಿದು ದೀಪಾಳ ಹತ್ತಿರಕ್ಕೆ ಹಾರಿ ಬಂತು.

### ಕಥೆ ಓದಿದರಲ್ಲವೇ?

ಪ್ರಿಸ್ಕೂಲ್ ಮಕ್ಕಳಿಗೆ ಬೇಕಾಗಿ ಈ ಕಥೆಯನ್ನು

ಹೇಗೆಲ್ಲಾ ಮಂಡಿಸಬಹುದು?

**ಒಂದು ರೀತಿಯನ್ನು ನಾವು ನೋಡುವ**

'ಟೀಚರ್ ಟೀಚರ್ ಕಥೆ ಹೇಳಿ ಟೀಚರ್'

'ಓ ಅದಕ್ಕೇನಂತೆ ಕಥೆ ಹೇಳುವಾ...'

'ಯಾವ ಕಥೆಯಾಗಬಹುದು ಹೇಳಿ'......?

'ಟೀಚರಿಗೆ ಇಷ್ಟವಿರುವ ಕಥೆ ಸಾಕು'

'ಸರಿ ಕಥೆ ಕೇಳಲು ಎಲ್ಲರೂ ತಯಾರಾಗಿ'

ಅಧ್ಯಾಪಿಕೆಯು ಬಿಗ್ ಕ್ಯಾನ್ವಾಸಿನಲ್ಲಿ ದೀಪಾಳ ಕಟೌಟ್‌ನ್ನು ಅಂಟಿಸುವರು.

'ಇದು ದೀಪಾ. ಅವಳು ಆಟವಾಡುತ್ತಿರುವಾಗ ಒಂದು ಅಳು ಕೇಳಿಸಿತು.' ಯಾರಪ್ಪಾ ಅಳುತ್ತಿರುವುದು?

ಅವಳು ಸುತ್ತಲೂ ನೋಡಿದಳು. ಓ ನೀನಾ ? ಕೆಂಪು ಅಂಗಿ. ಸಣ್ಣ ಬಾಲವನ್ನು ಹೊತ್ತಿರುವ ನನ್ನ ಸುಂದರಿ ಗಾಳಿಪಟ... ಯಾಕಮ್ಮಾ ಅಳುತ್ತಿರುವೆ? ದೀಪಾ ಸುಂದರಿ ಗಾಳಿಪಟವನ್ನು ಮೆಲ್ಲನೆ ಕೈಗೆತ್ತಿದಳು.
ಅವಳು ಗಾಳಿಪಟಕ್ಕೆ ನೂಲನ್ನು ಕಟ್ಟಿದಳು. (ಒಂದು ಮಗು ಗಾಳಿಪಟದಿಂದ ಪ್ರಾರಂಭಿಸಿ ದೀಪಾಳ ಕೈಯವರೆಗೆ ನೂಲನ್ನು ಅಂಟಿಸುವಳು). ಗಾಳಿಪಟ ಹೊರಕ್ಕೆ ಬಂತು. ಹಾಯ್ ನಿಲಾಕಾಶ.... ಸುಂದರಿ ಗಾಳಿಪಟ ಹಾರುತ್ತಾ ಹಾರುತ್ತಾ ಮೇಲೇರಿತು. ಮೇಲೇರಿ ಮೇಲೇರಿ ಹಾರಿತು. ಅಧ್ಯಾಪಿಕೆಯು ಅಭಿನಯಿಸುತ್ತಾ ಹೇಳುವರು.
ಸುಂದರಿ ಗಾಳಿಪಟ ಸಂತೋಷದಿಂದ ಕೆಳಕ್ಕೆ ನೋಡಿತು. ದೀಪಾಳನ್ನು ನೋಡಿ ತಲೆ ಆಡಿಸಿ ನಕ್ಕಿತು.
ಆ ಸಮಯದಲ್ಲಿ ಮಿನ್ನಿ ಗಿಡುಗ ಅಲ್ಲಿಗೆ ಹಾರಿ ಬಂತು.

ಟೀಚರ್ ಮಿನ್ನು ಗಿಡುಗನ ಚಿತ್ರವನ್ನು ಬಿಗ್ ಕ್ಯಾನ್ವಾಸಿನಲ್ಲಿ ಅಂಟಿಸುವರು.

'ಇದು ಯಾರು?

ಮಕ್ಕಳು ಗಿಡುಗ ಎಂದು ಹೇಳಿದರು'

'ಮಿನ್ನಿಯು ಇದನ್ನು ನೋಡಿತು.

ಅವಳಿಗೆ ಒಂದು ತುಂಟುತನ ಮನಸ್ಸಿನಲ್ಲಿ ಮೂಡಿತು'

ಅವಳು ಕೆಳಗೆ ಹಾರಿ ಹೋದಳು.

ನೂಲಿಗೆ ಜೋರಾಗಿ ಕುಕ್ಕಿದಳು....

ನೂಲು ತುಂಡಾಯಿತು.

'ಮುಂದೇನಾಗಬಹುದು? '

ಮಕ್ಕಳಿಗೆ ಹೇಳಲು ಅವಕಾಶ ನೀಡುವುದು.

*'ಸುಂದರಿ ಗಾಳಿಪಟ ಸುತ್ತ ತಿರುಗುತ್ತಾ'*

*ತಿರುಗುತ್ತಾ ಸುತ್ತಮುತ್ತಲೂ ತಿರುಗುತ್ತಾ ತಲೆ ಕೆಳಗಾಗಿ*

*ಕೆಳಕ್ಕೆ ಕೆಳಕ್ಕೆ ಕೆಳಕ್ಕೆ*

*ಗಾಳಿ ಬಂತು. ಗಾಳಿಪಟ ದೂರಕ್ಕೆ ದೂರಕ್ಕೆ ದೂರಕ್ಕೆ*



ಅಯ್ಯೋ....ನನ್ನ.... ಗಾಳಿಪಟ....ದೀಪಾ ಜೋರಾಗಿ ಅತ್ತಳು.
ಜೋರು ಜೋರಾಗಿ ಅತ್ತಳು.
'ಗಾಳಿಪಟಕ್ಕೆ ಏನಾಗಿರಬಹುದು?' ಮಕ್ಕಳಿಗೆ ಹೇಳಲು ಅವಕಾಶ
ಗಿಳಿಮರಿಯ ಕಟೌಟ್ ಬಿಗ್ ಕ್ಯಾನ್ವಾಸಿನಲ್ಲಿ ಅಂಟಿಸುವುದು.
'ಬೊಬ್ಬೆ ಕೇಳಿ ಮರಿಗಿಳಿ ಹಾರಿ ಬಂತು'
ದೀಪ ಆಕಾಶವನ್ನು ನೋಡಿ ಅಳುತ್ತಿದ್ದಾಳೆ. ಆಕಾಶದಲ್ಲಿ ನೂಲು ಕಡಿದ ಗಾಳಿಪಟ. ಅವಳಿಗೆ ಬೇಸರವಾಯಿತು. ಮರಿಗಿಳಿ ಹೋಗಿ ಗಾಳಿಪಟದ ನೂಲನ್ನು ಕುಕ್ಕಿ ದೀಪಾಳ ಬಳಿಗೆ ಹಾರಿತು.

**ಬಿಗ್ ಕ್ಯಾನ್ವಾಸನ್ನು ಉಪಯೋಗಿಸಿ ಇತರ ಯಾವೆಲ್ಲಾ ರೀತಿಯಲ್ಲಿ ಕಥೆಗಳನ್ನು ಮಂಡಿಸಬಹುದು?**

- ಕಥೆ ಹೇಳುವ ಸಮಯದಲ್ಲಿಯೇ ಕಥಾಪಾತ್ರಗಳನ್ನು ಪ್ರದರ್ಶಿಸುತ್ತಾ ಕಥೆ ಹೇಳುವುದು (3+, 4+).
- ಅಧ್ಯಾಪಿಕೆಯ ಕಥಾ ಮಂಡನೆಯ ಸಮಯದಲ್ಲಿ ಮಕ್ಕಳು ಕಥಾಪಾತ್ರಗಳನ್ನು ಬಿಗ್ ಕ್ಯಾನ್ವಾಸಿನಲ್ಲಿ ಪ್ರದರ್ಶಿಸುವುದು (3+, 4+)
- ತಯಾರಿಸಿದ ಕಥಾಪಾತ್ರಗಳನ್ನು/ಕಟೌಟ್‌ಗಳನ್ನು ಬಿಗ್ ಕ್ಯಾನ್ವಾಸಿನಲ್ಲಿ ಪ್ರದರ್ಶಿಸಿ ಕಥೆಯನ್ನು ನಿರ್ಮಿಸುವುದು (4+)
- ಕಥೆಯ ಸಂದರ್ಭಗಳನ್ನು ಮಾತ್ರ ಪ್ರದರ್ಶಿಸಿ ಕಥೆಯನ್ನು ಪೂರ್ತಿಗೊಳಿಸಲು (4+)
- ಕಥೆಯ ನಂತರ ಕಥಾಪಾತ್ರಗಳನ್ನು ಕಂಡುಹಿಡಿದು ಬಿಗ್ ಕ್ಯಾನ್ವಾಸಿನಲ್ಲಿ ಪ್ರದರ್ಶಿಸಲು ಮಕ್ಕಳಿಗೆ ಅವಕಾಶ ನೀಡುವುದು. (3+)

## ಬಿಗ್ ಕ್ಯಾನ್ವಾಸ್ ಮತ್ತು ಕಟೌಟ್

ಪ್ರಿಸ್ಕೂಲ್‌ಗಳಲ್ಲಿ ತುಂಬ ಫಲಪ್ರದವಾಗಿ ಉಪಯೋಗಿಸಬಹುದಾದ ಒಂದು ರೀತಿ ಇದಾಗಿದೆ. ಹಲವು ಕಲಿಕಾ ಚಟುವಟಿಕೆಗಳ ಮಧ್ಯದಲ್ಲಿಯೂ ಈ ಬಿಗ್ ಕ್ಯಾನ್ವಾಸನ್ನು ಉಪಯೋಗಿಸಬಹುದು. ಮಗುವಿಗೆ ದೃಶ್ಯಪರವಾದ ಪೂರ್ಣತೆ ಲಭಿಸುವುದಕ್ಕೆ ಇದು ಸಹಾಯಕವಾಗಿದೆ. ಟೀಚರ್ ಚಿತ್ರಗಳು, ಕಟೌಟ್‌ಗಳು ಮೊದಲಾದವುಗಳನ್ನು ಪ್ರದರ್ಶಿಸಲು ಉಪಯೋಗಿಸಿಕೊಳ್ಳಬಹುದು. ಮಾತ್ರವಲ್ಲ ಮಗು ತಯಾರಿಸುವ ಉತ್ಪನ್ನಗಳನ್ನು ಕೂಡ ಇದರಲ್ಲಿ ಪ್ರದರ್ಶಿಸಬಹುದು.



**ತಯಾರಿಸುವ ವಿಧಾನ**

ದೊಡ್ಡ ಥರ್ಮೋಕೋಲ್ ಶೀಟನ್ನು ಪ್ಲಾನಲ್ ಬಟ್ಟೆಯಿಂದ ಮುಚ್ಚಿ/ಹೀಟ್ ಲೋನ್‌ಪಫ್ ಬಟ್ಟೆಯಲ್ಲಿ ಇದನ್ನು ಅಂಟಿಸಿ ತರಗತಿಯಲ್ಲಿ ತೂಗು ಹಾಕಬಹುದು. ಗೋಡೆಯಲ್ಲಿ ನೇರವಾಗಿ ಆಣಿ ಹೊಡೆದು ನಿಲ್ಲಿಸಬಹುದು. ಚಿತ್ರಗಳನ್ನು ಮತ್ತು ಕಟೌಟ್‌ಗಳನ್ನು ಬೋರ್ಡಿನಲ್ಲಿ ನಿಲ್ಲುವಂತೆ ಮಾಡಲು ಪ್ರತ್ಯೇಕ ರೀತಿಯ

ಪಿನ್ ಉಪಯೋಗಿಸಬಹುದು. (ಹರಿತವಾದ ವಸ್ತುವಾದುದರಿದ ಬಹಳ ಜಾಗ್ರತೆಯಿಂದ ಉಪಯೋಗಿಸಬೇಕು)

ಚಿತ್ರಗಳು, ರಚಿಸಿದ ಅಥವಾ ಕತ್ತರಿಸಿ ತೆಗೆದ ಚಿತ್ರಗಳೂ ಆಗಿರಬಹುದು. ಅವುಗಳನ್ನು ಕಾರ್ಡಿನಲ್ಲಿ ಅಂಟಿಸಿ ಚಿತ್ರದ ಆಕೃತಿಯಲ್ಲಿ ತುಂಡರಿಸಿದರೆ ಕಟೌಟ್ ಆಗುವುದು. ಒರಿಗಾಮಿ ರೂಪಗಳನ್ನು ಕೂಡ ಉಪಯೋಗಿಸಬಹುದಾಗಿದೆ.

ಕಥಾಪಾತ್ರಗಳನ್ನು ಅವುಗಳ ನಿರ್ದಿಷ್ಟ ಸ್ಥಾನದಲ್ಲಿ

ಅಂಟಿಸಲಾಗುವುದು. (4+) ಗಾಳಿಪಟ ಆಕಾಶದಲ್ಲಿ, ಮಗು ಕೆಳಗೆ, ಗಿಡುಗ ನೂಲಿನ ಸಮೀಪದಲ್ಲಿ, ಗಿಳಿ ಮರದ ಕೊಂಬೆಯಲ್ಲಿ, ನೀಲಾಕಾಶ ಕ್ಯಾನ್ವಾಸಿನ ಮೇಲ್ಭಾಗದಲ್ಲಿ ಕಥಾ ಮಂಡನೆಯಲ್ಲಿ ವಿವಿಧ ರೀತಿಗಳನ್ನು ಉಪಯೋಗಿಸಬಹುದು

**ಕಥಾ ಮಂಡನೆಗೆ ವಿವಿಧ ವಿಧಾನಗಳನ್ನು ಉಪಯೋಗಿಸಬಹುದು**




## ■ ಸ್ಯಾಂಡ್ ಟ್ರೇ

ಪ್ರಿಸ್ಕೂಲಿನ ಇನ್ನೊಂದು ಫಲಪ್ರದವಾದ ಕಲಿಕೋಪಕರಣವಾಗಿದೆ ಸ್ಯಾಂಡ್ ಟ್ರೇ. ಎಲ್ಲಾ ವಿಷಯಗಳಲ್ಲೂ ಈ ಸ್ಯಾಂಡ್ ಟ್ರೇಯನ್ನು ಉಪಯೋಗಿಸಿಕೊಂಡು ಚಟುವಟಿಕೆಯನ್ನು ನೀಡಲು ಸಾಧ್ಯ.

**ಸ್ಯಾಂಡ್ ಟ್ರೇ ಉಪಯೋಗಿಸಿಕೊಂಡು ನಡೆಸುವ ಕಥಾ ಮಂಡನೆಯ ಸಾಧ್ಯತೆಗಳು ಯಾವುವೆಂದು ನೋಡೋಣ.**

ಕಥಾ ಪಾತ್ರಗಳನ್ನು ಮೊದಲು ತಯಾರಿಸಬೇಕು. ಚಿತ್ರ ಕಟೌಟ್‌ಗಳು (ಚುಚ್ಚಿ ನಿಲ್ಲಿಸಲು ಸಾಧ್ಯವಾಗುವವುಗಳು) ಕಥೆಗೆ ಅಗತ್ಯವಾದ ಕಥಾ ಪಾತ್ರಗಳನ್ನಾಗಿ ಬದಲಾಯಿಸಬೇಕು. ಕಥೆಗೆ ಸೂಕ್ತವಾದ ರೀತಿಯ ಸ್ಯಾಂಡ್ ಟ್ರೇ ಕ್ರಮೀಕರಿಸಬೇಕು. ಹೇಗೆಲ್ಲಾ ಕಥಾ ಮಂಡನೆ ಸಾಧ್ಯ?

- ಕಥಾ ಮಂಡನೆಯ ಸಮಯದಲ್ಲಿ ಸ್ಯಾಂಡ್ ಟ್ರೇಯಲ್ಲಿ ಕಥಾ ಪಾತ್ರಗಳನ್ನು ಆಯಾಯ ಯಥಾ ಸ್ಥಾನ ಕ್ರಮೀಕರಿಸುವುದು.
- ಟೀಚರ್ ಕಥೆ ಹೇಳುವಾಗ ಮಕ್ಕಳು ಕಥಾಪಾತ್ರಗಳನ್ನು ಕಂಡುಹಿಡಿದು ಸೇಂಡ್ ಟ್ರೇಯಲ್ಲಿ ಕ್ರಮೀಕರಿಸುವುದು. (3+ 4+ ಮಕ್ಕಳು ಯಥಾ ಸ್ಥಾನದಲ್ಲಿ ಕ್ರಮೀಕರಿಸುವುದು)
- ಕಥಾ ಪಾತ್ರಗಳನ್ನು ಮೊದಲೇ ಸ್ಯಾಂಡ್ ಟ್ರೇಯಲ್ಲಿ ಕ್ರಮೀಕರಿಸಿಡುವುದು ಮಕ್ಕಳೂ ಅಧ್ಯಾಪಿಕೆಯೂ ಸೇರಿ ಕಥೆಯನ್ನು ರಚಿಸುವುದು (3+, 4+)
- ಸ್ಯಾಂಡ್ ಟ್ರೇಯನ್ನು ಕ್ರಮೀಕರಿಸಿ ಸ್ವಂತವಾಗಿ ಕಥಾ ರಚನೆ ನಡೆಸುವುದು (4+)
- ಸ್ಯಾಂಡ್ ಟ್ರೇಯಲ್ಲಿ ಕ್ರಮೀಕರಿಸಿದ ಕಥಾ ಸಂದರ್ಭಗಳ ಆಧಾರದಲ್ಲಿ ಕಥೆ ರಚಿಸುವುದು (4+)

  ಉದಾ : ಕೊಳದ ಬದಿಯಲ್ಲಿರುವ ಮರ, ಮರದ ಮೇಲಿರುವ ಕೊಕ್ಕರೆ, ಕೊಳದಲ್ಲಿ ಮೀನು

ಸ್ಯಾಂಡ್ ಟ್ರೇಯಲ್ಲಿ ನಿರ್ಮಿಸಿ ಇಟ್ಟಿರುವ ಕಥಾ ಸಂದರ್ಭಗಳ ಆಧಾರದಲ್ಲಿ ಸಣ್ಣ ಸಣ್ಣ ಪ್ರಶ್ನೆಗಳನ್ನು ಅಧ್ಯಾಪಿಕೆಯು ಕೇಳುವರು. ಮಕ್ಕಳ ಪ್ರತಿಕ್ರಿಯೆಗಳ ಆಧಾರದಲ್ಲಿ ಕಥೆ ವಿಸ್ತರಿಸುವುದು. (4+)

**ಮರಳಿನ ಟ್ರೇಯನ್ನು ತಯಾರಿಸುವಾ**

ಒಂದು ಆಯತಾಕೃತಿಯ ಪೆಟ್ಟಿಗೆ (ಬಟ್ಟೆ ಖರೀದಿಸುವಾಗ ದೊರೆಯುವ ಪೆಟ್ಟಿಗೆ/ಮರದಿಂದ ತಯಾರಿಸಿದ ಟ್ರೇ) ಸಿದ್ಧಪಡಿಸಿ ಅದರಲ್ಲಿ ತೊಳೆದು ಶುಚಿ ಮಾಡಿದ ಮರಳನ್ನು (ಹೊಯಿಗೆ) ತುಂಬಿಸಿದರೆ ಮರಳಿನ ಟ್ರೇ ರೆಡಿ.



(ಉದಾ : ಕರುವಿನ ಕಿವಿಗೆ ತಾಗಿರುವಂತೆ ಕರುವಿನ ತಲೆಯಲ್ಲಿ ಕುಳಿತಿರುವ ಗಿಳಿಮರಿ. ಸಮೀಪದಲ್ಲಿ ತಾಯಿ ದನ ಬೈ ಹುಲ್ಲು ತಿನ್ನುತ್ತಿದೆ)

ಅಧ್ಯಾಪಿಕೆಯು ಮಕ್ಕಳೊಂದಿಗೆ ಸಂಭಾಷಣೆ ನಡೆಸುತ್ತಾರೆ

- ತಾಯಿ ದನ ಏನು ಮಾಡುತ್ತಿದೆ? (3+)
- ಕರುವಿನ ಬೆನ್ನಿನ ಮೇಲೆ ಕುಳಿತಿರುವುದು ಯಾರು? (3+)
- ಗಿಳಿಮರಿ ಕರುವಿನ ಬೆನ್ನಿನ ಮೇಲೆ ಕುಳಿತಿರುವುದು ಯಾಕಾಗಿರಬಹುದು? (3+)
- ಕರುವಿನ ಕಿವಿಯಲ್ಲಿ ಗಿಳಿಮರಿ ಏನು ಹೇಳಿರಬಹುದು? (4+)



ಮಕ್ಕಳ ಪಾಲ್ಗೊಳ್ಳುವಿಕೆಯೊಂದಿಗೆ ಕಥೆಯು ಬೆಳೆಯುವುದು. (3+, 4+)

## ■ ಚಿತ್ರಗಳನ್ನುಪಯೋಗಿಸಿ ಕಥಾ ಮಂಡನೆ

ಚಿತ್ರಗಳ ಸಹಾಯದಿಂದ ಕಥಾ ಮಂಡನೆ ಸಾಧ್ಯವೇ?

- ಚಿತ್ರ ಕಥೆಗಳಿಂದ ಕಥೆ ರೂಪಿಸುವುದು
- ಚಿತ್ರಗಳ್ಳೊಳಗೊಂಡ ಸಣ್ಣ ಪುಸ್ತಕಗಳ ಸಹಾಯದಿಂದ
- ಕಥೆಯ ಆರಂಭ ಮಾತ್ರ ಇರುವ ಚಿತ್ರ
- ಕಥೆಯ ಅಂತ್ಯ ಮಾತ್ರ ಇರುವ ಚಿತ್ರ
- ಕಥೆಯ ಎಡೆಯಲ್ಲಿ ಬರುವ ಯಾವುದಾದರೂ

  ಒಂದು ಸಂದರ್ಭದ ಚಿತ್ರ
- ಕಥೆಗೆ ಸಾಧ್ಯತೆ ಇರುವ ಚಿತ್ರ

  ಉದಾ : ಸುಂದರಿ ಗಾಳಿಪಟ ಎಂಬ ಕಥೆಯ ಕಥಾ ಸಂದರ್ಭಗಳ ಚಿತ್ರಗಳನ್ನು ಪ್ರದರ್ಶಿಸಿ ಕಥೆಯನ್ನು ಹೇಳಲೂ, ಹೇಳಿ ಕೊಡಲೂ ಅವಕಾಶವನ್ನು ಉಂಟುಮಾಡಬೇಕು..

## ■ ಮುಖವಾಡವನ್ನು ಉಪಯೋಗಿಸಿ ಕಥಾ ಮಂಡನೆ

ಜೀವಿಗಳ ಮತ್ತು ಇತರ ಕಥಾ ಪಾತ್ರಗಳ (ರಾಜ, ರಾಣಿ....) ಮುಖವಾಡ ನಿರ್ಮಿಸಬಹುದು. ಮುಖದ ಚಿತ್ರ ಬಿಡಿಸಿ ಚಾರ್ಟ್ ಪೇಪರಿಗೆ ಅಂಟಿಸಿರಿ. ನಂತರ ಅದನ್ನು ಕತ್ತರಿಸಿ ತೆಗೆದರೆ ಮುಖವಾಡ ತಯಾರಾಯಿತು. ಬಣ್ಣ ಕೊಟ್ಟು ಅಂದವಾಗಿಸಬಹುದು. ಮುಖವಾಡವನ್ನು ಹೆಚ್ಚು ಕಾಲ ಹಾಳಾಗದಂತೆ ಕಾಪಾಡಲು ಹಿಂಭಾಗದಲ್ಲಿ ಕಾಟನ್ ಬಟ್ಟೆಯನ್ನು ಫೆವಿಕಾಲ್ ಉಪಯೋಗಿಸಿ ಅಂಟಿಸಿದರೆ ಸಾಕು.

ಕಥೆಯಲ್ಲಿ ಬರುವ ಕಥಾ ಪಾತ್ರಗಳ ಮುಖವಾಡವನ್ನು ಮಕ್ಕಳಿಗೆ ಕಟ್ಟಿ ಕೊಡಲಾಗುವುದು. ಕಥೆಯಲ್ಲಿ ಬರುವ ವಿಚಾರಗಳನ್ನು ಹೇಳುತ್ತಾ ಅವರು ಅಭಿನಯಿಸಿ ತೋರಿಸುವರು.

- ಟೀಚರ್ ಮುಖವಾಡ ಧರಿಸಿ ಕಥೆಯನ್ನು ಅಭಿನಯಿಸುತ್ತಾ ಹೇಳುವರು.

## ■ ಐ.ಸಿ.ಟಿ ಉಪಯೋಗಿಸಿ ಕಥೆ ಹೇಳಬಹುದು

ಐ.ಸಿ.ಟಿ ಸಾಧ್ಯತೆಯನ್ನು ಕಥಾ ಮಂಡನೆಗೆ ಹೇಗೆಲ್ಲಾ ಉಪಯೋಗಿಸಿಕೊಳ್ಳಬಹುದು?

- ಕಥೆಯ ದೃಶ್ಯಾವಿಷ್ಕಾರ ನಡೆಸಿರುವುದನ್ನು ತೋರಿಸಬಹುದು.
- ಕಥೆಯ ಹಿನ್ನಲೆ, ಶಬ್ದಗಳು ಎಂಬಿವುಗಳನ್ನು ಆಲಿಸುವಂತೆ ಮಾಡಬಹುದು
- ಸಂಭಾಷಣೆ ಇಲ್ಲದೆ ಕಥೆಯ ದೃಶ್ಯಗಳನ್ನು ತೋರಿಸುವರು. ಅವರು ಏನು ಹೇಳುತ್ತಿದ್ದಾರೆಂದು ಮಗು ಹೇಳುವುದು.
- ನಿಜವಾದ ಶಬ್ದವನ್ನು ಕೇಳಿಸುವುದು.
- ಹೀಗೆ ಶ್ರಾವ್ಯ ಮಾಧ್ಯಮಗಳನ್ನೂ ಬಳಸಬಹುದು.
- ತಾಳಬದ್ಧವಾಗಿ ಆಖ್ಯಾನ ರೀತಿ ಕೇಳಿಸಲು
- ಶಬ್ದಗಳನ್ನು ಕೇಳಿಸಲು

ಹೀಗೆ ಹಲವಾರು ಸಾಧ್ಯತೆಗಳು...

**ಕಥಾಮಂಡನೆಯ ಹೆಚ್ಚಿನ ಸಾಧ್ಯತೆಗಳನ್ನೂ, ರೀತಿಗಳನ್ನು ತಿಳಿದುಕೊಳ್ಳೋಣ !**

- ಸಹಭಾಗಿತ್ವದೊಂದಿಗೆ ಕಥೆ ಹೇಳಬಹುದಲ್ಲವೇ
- ಕಥೆಯನ್ನು ಪ್ರತ್ಯೇಕ ಸಂದರ್ಭದಲ್ಲಿ ನಿಲ್ಲಿಸಿ ಮುಂದುವರಿದ ಭಾಗವನ್ನು ಮಕ್ಕಳು ಹೇಳುವುದು
- ಕಥೆಯ ಸಂಭಾಷಣೆಯನ್ನು ಮಾತ್ರ ಮಕ್ಕಳು ಹೇಳುವುದು

- ಕಥೆಯ ಚಿಕ್ಕ ಭಾಗವನ್ನು ಅಭಿನಯಿಸುವುದು
- ಕಥಾಪಾತ್ರಗಳನ್ನು ಬಿಗ್ ಕ್ಯಾನ್ವಾಸಿನಲ್ಲಿ ಕ್ರಮೀಕರಿಸುವುದು

ಇವು ಮಕ್ಕಳೊಂದಿಗೆ ಕಥೆ ಹೇಳುವ ವಿಧಾನಗಳಾಗಿವೆ.

ಇನ್ನು, 3+, 4+ ಮಕ್ಕಳಿಗೆ ಸೂಕ್ತವಾದ ರೀತಿಯಲ್ಲಿ ಕಥೆ ಮಂಡಿಸುವುದಕ್ಕೆ ಸಾಧ್ಯವಾಗಬಹುದಲ್ಲವೇ?

**ಕಥೆಯ ಮಂಡನೆಯಲ್ಲಿ ಗಮನಿಸಬೇಕಾದ ಇತರ ವಿಷಯಗಳು ಯಾವುವು?**




**ಕಥೆ ಮಂಡಿಸಿದರಲ್ಲವೆ? ಇನ್ನೇನು ಮಾಡಬಹುದು? ಏನೆಲ್ಲಾ ಮಾಡಲು ಸಾಧ್ಯ?**

- ಚಿಕ್ಕ ಚಿಕ್ಕ ಪ್ರಶ್ನೆಗಳ ಮೂಲಕ ಕಥೆಯನ್ನು ಮತ್ತೊಮ್ಮೆ ತಿಳಿಯುವುದು. (ಆಶಯ ಗ್ರಹಣ)
- *ಕಥಾ ಸಂದರ್ಭಗಳನ್ನು ಅಭಿನಯಿಸಿ ತೋರಿಸುವುದು.*

  *ಉದಾ : (ಚಿನ್ನು ಗಿಡುಗನ ಹಾರಾಟ, ನೂಲು ತುಂಡಾದ ಗಾಳಿಪಟದ ಸುತ್ತಾಟ, ದೀಪಾಳ ಬೇಸರ)*
- *ಕಥಾ ಪಾತ್ರಗಳನ್ನು ಚಿತ್ರಿಸುವುದು.*
- *ಇಷ್ಟವಾದ ಕಥಾಪಾತ್ರ, ಯಾಕೆ ಇಷ್ಟವಾಯಿತು? ಎಂದು ಹೇಳುವುದು.*
- *ಕಥೆಯಲ್ಲಿರುವ ಕಥಾ ಪಾತ್ರವನ್ನು ಇಷ್ಟಪಡದಿರಲು ಕಾರಣ?*
- *ಕಥೆಯ ಕೆಲವು ಸಂದರ್ಭಗಳನ್ನು ಸಂಭಾಷಣೆಯ ರೂಪದಲ್ಲಿ ಮಂಡಿಸುವುದು.*
- *ಕಥೆಯ ನಂತರ ನಡೆಯುವುದನ್ನು ಕಲ್ಪಿಸಿ ಹೇಳುವುದು.*
- *ಆಲಿಸಿದ ಕಥೆಯನ್ನು ಹೇಳುವುದು.*
- *ಕಥೆಯ 'ರೋಲ್‌ಪ್ಲೇ' ಆಗಿ ಮಂಡಿಸುವುದು.*
- *ಬೊಂಬೆಗಳು, ಮುಖವಾಡಗಳು ಎಂಬಿವುಗಳನ್ನುಪಯೋಗಿಸಿ ಮಂಡಿಸುವುದು*
- *ಕಥಾಸಂದರ್ಭಗಳ ಚಿತ್ರಗಳನ್ನು ಕ್ರಮೀಕರಿಸುವುದು*
- 

ಕಥೆಗೆ ಸಂಬಂಧಿಸಿದಂತೆ ಹಲವು ಮುಂದುವರಿದ ಚಟುವಟಿಕೆಗಳಿಗೆ ಸಾಧ್ಯತೆಗಳಿವೆ ಎಂದು

ತಿಳಿಯಿತಲ್ಲವೇ, 3+, 4+ ಮಟ್ಟಕ್ಕೆ ಸೂಕ್ತವಾದ ರೀತಿಯಲ್ಲಿ ಸೂಕ್ಷ್ಮವಾಗಿ ಪಾಠಯೋಜನೆಯನ್ನು ಮಾಡುವುದು ಪ್ರಧಾನವಾಗಿದೆ.

**ಪ್ರಿಸ್ಕೂಲ್ ಮಕ್ಕಳಿಗಾಗಿರುವ ಕಥೆಗಳಿಗೆ ತುಂಬಾ ವಿಶೇಷತೆಗಳಿವೆ. ಆ ವಿಶೇಷತೆಗಳು ಯಾವುವು?**




ಮನೋ ಚಿತ್ರವು ರೂಪೀಕರಿಸಲ್ಪಡುವುದಕ್ಕೆ ಒಂದು ಉದಾಹರಣೆಯನ್ನು ನೋಡುವ, 'ಸುಂದರಿ ಗಾಳಿಪಟ' ಎಂಬ ಕಥೆಯಲ್ಲಿ ಬರುವ ಗಾಳಿಪಟವನ್ನು ವರ್ಣಿಸಿರುವ ರೀತಿಯನ್ನು ನೋಡಿರಿ.

'ಕೆಂಪು ಉಡುಪು
ಪುಟ್ಟ ಬಾಲಗಳು,
ನನ್ನ ಸುಂದರಿ
ಗಾಳಿಪಟ'

## ಕಥೆಗಳನ್ನು ಆರಿಸುವಾಗ ಗಮನಿಸಬೇಕಾದ ಅಂಶಗಳು

- ಮಗುವಿನ ಸ್ವಭಾವಕ್ಕೆ ಅನುಸರಿಸಿರಬೇಕು.
- ರಸವತ್ತಾದ ಮತ್ತು ಆನಂದದಾಯಕವಾದವುಗಳು.
- ತಾಳಬದ್ಧವಾಗಿ ಹೇಳಲು ಸಾಧ್ಯವಾದವುಗಳು.
- ಸರಳವಾದ ಪದಗಳನ್ನು ಒಳಗೊಂಡಿರುವವುಗಳು.
- ಸರಳವಾಕ್ಯಗಳಿಂದ ತಯಾರಿಸಲ್ಪಟ್ಟವುಗಳು.
- ಗಟ್ಟಿಯಾಗಿ ಹೇಳಲು ಸಾಧ್ಯವಾಗುವವುಗಳು.
- ಓದಿಸಲು ಸಾಧ್ಯವಾಗುವವುಗಳು.
- ಶಬ್ದದ ಅನುಕರಣೆಗೆ ಸಾಧ್ಯವಾದವುಗಳು.
- ಒಂದೇ ಪದಗಳು, ವಾಕ್ಯಗಳು, ಶಬ್ದಗಳು ಎಂಬಿವು ಆವರ್ತಿಸಲ್ಪಡುವವುಗಳು.
- ಅಭಿನಯ ಸಾಧ್ಯತೆ ಇರುವವುಗಳು.
- ಕ್ರಿಯಾಶೀಲ ಚಿಂತನೆಯನ್ನು ಉತ್ತೇಜಿಸುವವುಗಳು.
- ವಿವಿಧ ವಿಧಾನಗಳಲ್ಲಿ ಮಂಡಿಸಲು ಸಾಧ್ಯವಾಗುವವುಗಳು (Sandtray, ಮುಖವಾಡ, ಬೊಂಬೆ).
- ದೃಶ್ಯ–ಶ್ರಾವ್ಯ ಉಪಕರಣಗಳ ಸಹಾಯದಿಂದ ಮಂಡಿಸಲು ಸಾಧ್ಯವಾಗುವವುಗಳು.

ಕಥೆ ಹೇಳುವ ಮತ್ತು ಆಲಿಸುವುದರ ಮೂಲಕ ಮಗುವಿನ ಪದ ಸಂಪತ್ತು ವೃದ್ಧಿಸುವುದು. ವಾಕ್ಯದ ಮಾದರಿಗಳನ್ನು ಸ್ವಾಯತ್ತಗೊಳಿಸಲು ಸಾಧ್ಯವಾಗುವುದು. ಲಭಿಸಿದ ವಿವರಗಳನ್ನು ಕ್ರಮೀಕರಿಸಿ ಹೇಳಲು ಸಾಧ್ಯವಾಗುವುದು. ವಿವರಣೆ, ಸಂಭಾಷಣೆ, ವಿಶೇಷಣಗಳನ್ನು ಸೇರಿಸಿ ಹೇಳುವುದು ಮೊದಲಾದ ಉನ್ನತ ನೈಪುಣ್ಯಗಳ ವ್ಯವಹಾರ ರೂಪಗಳತ್ತ ಬೆಳೆಯಲು ಕಥೆಯ ಮೂಲಕ ಸಾಧ್ಯವಾಗುವುದು. 3+, 4+ ಮಕ್ಕಳಿಗೆ ನೀಡುವ ಕಥೆಯಲ್ಲಿ ಹಾಗೂ ರೀತಿಯಲ್ಲಿ ಬದಲಾವಣೆ ಮತ್ತು ವೈವಿಧ್ಯ ಅಗತ್ಯವಾಗಿದೆ.

ಭಾಷಾ ಸಾಮರ್ಥ್ಯ ವಿಕಾಸಕ್ಕೆ ಕಥೆಗಳು ತುಂಬಾ ಸಹಕಾರಿಯಾಗಿವೆ. ವಿಶೇಷವಾದ ಭಾಷಾ ಪ್ರಯೋಗಗಳನ್ನು ಕಥೆಯ ವ್ಯಾಖ್ಯಾನದ ಸಂದರ್ಭದಲ್ಲಿ ಅಳವಡಿಸಲು ಅಧ್ಯಾಪಿಕೆಯು ಉದ್ದೇಶ ಪೂರ್ವಕವಾಗಿ ಪ್ರಯತ್ನಿಸಬೇಕು. ವಿಶೇಷ ಪದಗಳು, ವಿಶೇಷಣಗಳು, ಶೈಲಿಗಳು, ಪ್ರಯೋಗಗಳು ಎಂಬಿವುಗಳು ಭಾಷಾ ವಿಕಾಸಕ್ಕಿರುವ ಸಂದರ್ಭಗಳಾಗಿವೆ.

ಆಮೆ ಮತ್ತು ಮೊಲ ಓಟದ ಸ್ಪರ್ಧೆ ನಡೆಸಿದ ಕಥೆಯಲ್ಲಿ ಆಮೆ ತೆವಳಿ ತೆವಳಿ, ಮೊಲ ಜಿಗಿದು ಜಿಗಿದು ಹೋಯಿತು. ಮೊಲವು ದೊಡ್ಡ ಮರದ ಕೆಳಗೆ ಸುಖವಾಗಿ ನಿದ್ರಿಸಿತು. ಆಮೆ ಬೇರೇನೂ ಚಿಂತಿಸದೆ ಬೇಗ ಬೇಗ ಸಾಗಿತು. ಮೊಲಕ್ಕೆ ಥಕ್ಕನೆ ಎಚ್ಚರವಾಯಿತು. ಓಟವೇ....ಓಟ.
ಈ ರೀತಿಯಲ್ಲಿ ಭಾಷಾ ಸಾಮರ್ಥ್ಯವನ್ನು ವಿಕಾಸಗೊಳಿಸಲಿರುವ ಸಾಧ್ಯತೆಗಳನ್ನು ಅಳವಡಿಸಲು ಗಮನಿಸಬೇಕಲ್ಲವೇ?

**ಮೌಲ್ಯಮಾಪನ**

ಕಥಾ ಮಂಡನೆಯ ನಂತರ ಪ್ರತಿಸಲವೂ ಮಕ್ಕಳ ಭಾಷಾ ಪರವಾದ ವಿಕಾಸವನ್ನು ಮೌಲ್ಯಮಾಪನ ನಡೆಸುವುದು ಉತ್ತಮ. ಮೌಲ್ಯಮಾಪನ ಹೇಗೆಲ್ಲಾ ನಡೆಸಬಹುದು?

- ಆಲಿಸಿದ ಕಥೆಯಲ್ಲಿ ಬರುವ ಕಥಾಪಾತ್ರಗಳ ಹೆಸರನ್ನು ನೆನಪಿಸಿ ಹೇಳಲು ಸಾಧ್ಯವಾಗುವುದೇ? ☑
- ಕೆಲವೇ ವಾಕ್ಯಗಳಲ್ಲಿ ಕಥೆ ಹೇಳಲು ಸಾಧ್ಯವಾಗುವುದೇ? (3+) ☐
- ಆರಂಭ ಮತ್ತು ಅಂತ್ಯ ಒಳಗೊಳ್ಳುವಂತೆ ಕಥೆ ಮಂಡಿಸಲಾಗುತ್ತದೆಯೇ? (4+) ☐
- ಮಕ್ಕಳು ಸ್ವಂತವಾಗಿ ಕಥೆ ಹೇಳುತ್ತಾರೆಯೇ? ☐
- ಕಥೆಗಳ ಮೂಲಕ ಲಭಿಸಿದ ಪದಗಳು, ವಾಕ್ಯಗಳ ಮಾದರಿಗಳು ಎಂಬಿವುಗಳನ್ನು ಸ್ವಂತ ಕಥಾಮಂಡನೆಯ ಸಂದರ್ಭದಲ್ಲಿ ಪ್ರಯೋಗಿಸಲಾಗಿದೆಯೇ? ☐
- ಸಂದರ್ಭಗಳನ್ನು ನೀಡಿದರೆ ಕಥೆ ರಚಿಸಿ ಮಂಡಿಸಲು ಸಾಧ್ಯವಾಗುವುದೇ? ☐
- ಕಥೆಯ ಮೂಲಕ ಲಭಿಸಿದ ಮನೋಚಿತ್ರಗಳನ್ನು ಇತರ ಯಾವುದಾದರೂ ರೀತಿಯಲ್ಲಿ ಪ್ರಕಟಪಡಿಸಲು ಸಾಧ್ಯವಾಗುವುದೇ? (ಚಿತ್ರ, ರೋಲ್‌ಪ್ಲೇ...) (4+) ☐



## ಮರ ಬೀಳುತ್ತಿದೆ...

'ರೋಲ್‌ಪ್ಲೇ' ಎಲ್ಲಾ ಮಕ್ಕಳಿಗೂ ಇಷ್ಟವಾದ ಒಂದು ವಿಧಾನವಾಗಿದೆ. ಹಿರಿಯರನ್ನು ಅನುಕರಿಸಿ ಅಭಿನಯಿಸುವುದು ತಮಗೆ ಇಷ್ಟವಾದ ಸಂದರ್ಭಗಳನ್ನು ಅಭಿನಯಿಸುವುದು ಮೊದಲಾದವುಗಳು ಮಕ್ಕಳು ಸಾಮಾನ್ಯವಾಗಿ ಆಡುವ ಆಟಗಳಾಗಿವೆ. ಈ ಮಕ್ಕಳನ್ನು ಸಾಮಾಜಿಕವೂ ಭಾವನಾತ್ಮಕವೂ ಆದ ವಿಕಾಸಕ್ಕೂ ಇತರ ಬೌದ್ಧಿಕ ವಿಕಾಸಗಳಿಗೂ ಪ್ರಾಪ್ತರನ್ನಾಗಿ ಮಾಡುವುದು ಒಂದು ಪ್ರಿಸ್ಕೂಲ್ ಅಧ್ಯಾಪಿಕೆಯ ಜವಾಬ್ದಾರಿಯಾಗಿದೆ. ರೋಲ್‌ಪ್ಲೇ ನಡೆಸುವಾಗ ಪ್ರಧಾನವಾಗಿ ಗಮನಿಸಬೇಕಾದ ಕೆಲವು ಅಂಶಗಳಿವೆ.

ಯಾವ ಕಥೆ? ಅದನ್ನು ಹೇಗೆ ವಿಸ್ತರಿಸಬೇಕು? ಎಂದು ನಿಖರವಾಗಿ ಯೋಜನೆ ನಡೆಸಿರಬೇಕು. ನಂತರ ಕಥೆಯಲ್ಲಿನ ಸಂದರ್ಭಗಳನ್ನು ಮಕ್ಕಳಿಗೆ ಸ್ಪಷ್ಟವಾಗಿ ವಿವರಿಸಿ ಕೊಡಬೇಕು. ಕಥಾ ಪಾತ್ರಗಳು? ಅವರು ಏನೆಲ್ಲಾ ಮಾಡಬೇಕು? ಯಾವ ಸಮಯದಲ್ಲಿ ತಮ್ಮ ತಮ್ಮ ರೋಲ್ ಅಭಿನಯಿಸಿ ತೋರಿಸಬೇಕು? ಎಂಬೀ ವಿಷಯಗಳಲ್ಲಿ ಯೋಜನೆ ನಡೆಯಬೇಕು. ಪ್ರತಿಯೊಂದು ಸಂದರ್ಭದಲ್ಲಿಯೂ ಮಾಡಬೇಕಾದ ಕಾರ್ಯಗಳನ್ನು ಪ್ರತಿ ಮಗುವಿಗೂ ತಿಳಿಸಿರಬೇಕು. ಅಭಿನಯಿಸುವವರು. ದೃಶ್ಯಗಳನ್ನು ಸಜ್ಜುಗೊಳಿಸುವವರು, ದೃಶ್ಯದಲ್ಲಿ ವಸ್ತುಗಳಾಗಿ ಬದಲಾಗಬೇಕಾದವರು (ವಾಹನ, ಮರ) ಪ್ರತಿಯೊಬ್ಬರು ಎಲ್ಲಿ ನಿಲ್ಲಬೇಕು? ಹೇಗೆ ಚಲಿಸಬೇಕು? ಇವೆಲ್ಲವೂ ಯೋಜನೆಯಲ್ಲಿ ಇರಬೇಕು.
ರೋಲ್‌ಪ್ಲೇ ಆರಂಭಿಸಿದ ಬಳಿಕ ಪ್ರತಿಯೊಬ್ಬರು ಅವರವರ ಕಥಾ ಪಾತ್ರವನ್ನು ಸರಿಯಾಗಿ ಮಾಡುತ್ತಿದ್ದಾರೋ ಎಂದು ಅಧ್ಯಾಪಿಕೆಯು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಮಕ್ಕಳಿಗೆ ಸಕಾಲಿಕ ಬೆಂಬಲದ ಅಗತ್ಯ ಬರಬಹುದು. ರೋಲ್‌ಪ್ಲೇ ಕಳೆದ ಬಳಿಕ ಮಕ್ಕಳನ್ನು ಅಭಿನಂದಿಸಬೇಕು, ಮುಂದಿನ ರೋಲ್‌ಪ್ಲೇಯ ಸಂದರ್ಭದಲ್ಲಿ ಗಮನಿಸಬೇಕಾದ ವಿಚಾರಗಳನ್ನು ವಿವರಿಸಿ ಹೇಳಬೇಕು. ಕೆಲವು ಪಾತ್ರಗಳನ್ನು ಅಧ್ಯಾಪಿಕೆಯೇ ಅಭಿನಯಿಸಬೇಕಾದ ಸಂದರ್ಭಗಳೂ ಬರಬಹುದು. ರೋಲ್‌ಪ್ಲೇಯನ್ನು ನೋಡಿ ಆಸ್ವಾದಿಸಿ ಮಕ್ಕಳಿಗೂ ಅಭಿಪ್ರಾಯ ಮಂಡಿಸಲು ಅವಕಾಶ ನೀಡಬೇಕು. ಕಿರು ಪ್ರಶ್ನೆಗಳ ಮೂಲಕ ಇದು ಸಾಧ್ಯವಾಗಬಹುದು.
ಉದಾಹರಣೆ ನೋಡಿರಿ.

*ಅಜ್ಜ ಮತ್ತು ಅಜ್ಜಿ ಅಂಗಡಿಗೆ ಹೋಗಿ ಸಾಮಾನುಗಳನ್ನು ಖರೀದಿಸಿ ಒಂದು ಚೀಲದಲ್ಲಿ*

ತುಂಬಿಸಿದರು. ಇಬ್ಬರೂ ಮೆಲ್ಲ ಮೆಲ್ಲನೆ ನಡೆದರು. ನಡೆದು ನಡೆದು ಅವರಿಗೆ ದಣಿವಾಯಿತು. ಹ್ಹಾ... ಇನ್ನು ನಡೆಯಲು ನನ್ನಿಂದ ಸಾಧ್ಯವಿಲ್ಲ......(ಅಜ್ಜಿ ಹೇಳಿದರು) ನಾವು ಈ ಮರದಡಿಯಲ್ಲಿ ಕುಳಿತುಕೊಳ್ಳುವ......(ಅಜ್ಜ ಹೇಳಿದರು). ಇಬ್ಬರೂ ಮರದಡಿಯಲ್ಲಿ ಕುಳಿತರು. ಟಕ್......ಟಕ್......ಶಬ್ದ ಕೇಳಿ ಅಜ್ಜ ಮೇಲಕ್ಕೆ ನೋಡಿದರು. ತಕ್ಷಣ ಮರದ ಗೆಲ್ಲು ತುಂಡಾಗಿ ಅಜ್ಜನ ತಲೆಯ ಮೇಲೆ ಬಿತ್ತು. ಅಯ್ಯೋ...... ಇದನ್ನು ಕಂಡ ಅಜ್ಜಿ ಬೊಬ್ಬೆ ಹಾಕಿದರು.

ಇನ್ನು ಇದರಿಂದ ಒಂದು ರೋಲ್‌ಪ್ಲೇ ತಯಾರಿಸುವುದು ಹೇಗೆ? ಕಥೆಯಿಂದ ಸಣ್ಣ ಸಣ್ಣ ಪ್ರಶ್ನೆಗಳನ್ನು ಕೇಳುವುದು. ಪ್ರಶ್ನೆಗಳಿಗನುಸಾರವಾಗಿ ಮಕ್ಕಳು ಕಥಾಪಾತ್ರಗಳ ಅಭಿನಯವನ್ನು ಮಾಡಿ ತೋರಿಸಲಿ.

- ಕಥೆಯಲ್ಲಿ ಯಾರೆಲ್ಲಾ ಇದ್ದಾರೆ?



- ಅಜ್ಜನು ನಡೆಯುವುದು ಹೇಗೆ?
- ಅಜ್ಜಿ ನಡೆಯುವುದು ಹೇಗೆ?
- ಅಜ್ಜಿ ಮತ್ತು ಅಜ್ಜ ಏನು ಹೇಳಿದರು?
  - ಚೇಲವನ್ನು ಹಿಡಿದು ನಡೆಯುವ ರೀತಿಯನ್ನು ಅಭಿನಯಿಸುವುದು. (3+, 4+)
  - ಮಕ್ಕಳು ಅಜ್ಜನೂ ಮತ್ತು ಅಜ್ಜಿಯೂ ಹೇಳಿದ ಮಾತುಗಳನ್ನು ಅಭಿನಯಿಸಿ ತೋರಿಸುವರು.
- ಮರದ ಗೆಲ್ಲು ಮುರಿದು ತಲೆಗೆ ಬಿದ್ದಾಗ ನಡೆದ ವಿಚಾರಗಳು ಯಾವುವು?
- ಮರದ ಗೆಲ್ಲು ಮುರಿದು ತಲೆಗೆ ಬಿದ್ದ ಅಜ್ಜನಿಗೆ ಏನಾಗಿರಬಹುದು?

- ಮಕ್ಕಳು ಪ್ರತಿಕ್ರಿಯೆ ನೀಡುವರು. ಮಕ್ಕಳು ಅಭಿನಯಿಸಿ ತೋರಿಸುವರು.

ಅಧ್ಯಾಪಿಕೆಯಿಂದ ಅಗತ್ಯವಿರುವ ಬೆಂಬಲ ಮಕ್ಕಳಿಗೆ ಸಿಗಬೇಕು. ಈ ಕಥೆಯ ಮುಂದಿನ ಭಾಗವನ್ನು ಇನ್ನೊಂದು ರೀತಿಯಲ್ಲಿ ರೋಲ್‌ಪ್ಲೇ ಆಗಿ ಅಭಿನಯಿಸುವುದು ಹೇಗೆಂದು ನೋಡೋಣ.

- ಮಕ್ಕಳ ಮಟ್ಟಕ್ಕೆ ಅನುಕರಿಸಿದ ಆಕ್ಷನ್ ಚಿತ್ರವನ್ನು ಪ್ರದರ್ಶಿಸುವುದು. ಮಕ್ಕಳೊಂದಿಗೆ ಚರ್ಚೆ ನಡೆಸುವುದು. ಅಗತ್ಯವಿರುವ ಸಾಮಾಗ್ರಿಗಳನ್ನು ಸಿದ್ಧಗೊಳಿಸುವುದು.
- ಅಜ್ಜ, ಅಜ್ಜಿ, ಡಾಕ್ಟರ್, ನರ್ಸ್, ಅಜ್ಜನು ಆಸ್ಪತ್ರೆಯ ಬೆಡ್ಡಿನಲ್ಲಿ ಮಲಗಿರುವುದು. ಡಾಕ್ಟರ್ ತಪಾಸಣೆ ಮಾಡುವುದು. ಅಜ್ಜಿ ಸಮೀಪದಲ್ಲಿ ಕುಳಿತಿರುವುದು ನರ್ಸ್‌ನ ಕೈಯಲ್ಲಿ ಸಿರಿಂಜ್.

**ಸಾಮಗ್ರಿಗಳು**

- ಸ್ಟೆತೋಸ್ಕೋಪ್
- ಸಿರಿಂಜ್
- ಪಂಚೆಗಳು
- ಊರುಗೋಲು

ಮಕ್ಕಳು ಸಣ್ಣ ಗುಂಪಿನಲ್ಲಿ, ಸ್ವತಂತ್ರವಾಗಿ ಅಭಿನಯಿಸುವರು. ಮಕ್ಕಳು ಸ್ವತಹ ಸಂಭಾಷಣೆಯನ್ನೂ ಹೇಳುವರೇ? ....ಅಗತ್ಯವಾದ ಬೆಂಬಲವನ್ನು ನೀಡಬೇಕು.

- ಒಂದು ಕಥೆಯ ದೃಶ್ಯವನ್ನು ತೋರಿಸುವುದು. ಪ್ರಾಣಿಗಳ ಕಥೆಯಾದರೆ ಉತ್ತಮ (ಉದಾ : ನರಿಯು ರಾಜನಾದ ಕಥೆ)

  ದೃಶ್ಯಗಳನ್ನು ನೋಡಿದ ಬಳಿಕ ಮಕ್ಕಳೊಂದಿಗೆ ಸಂಭಾಷಣೆ ನಡೆಸಿ ಅವರು ಈ ಮೊದಲು ನಿರ್ಮಾಣ ಚಟುವಟಿಕೆಯ ಭಾಗವಾಗಿ ತಯಾರಿಸಿದ ಮುಖವಾಡಗಳನ್ನು ಧರಿಸಿ ರೋಲ್‌ಪ್ಲೇ ನಡೆಸುವರು.

ರೋಲ್‌ಪ್ಲೇಯ ಕೆಲವು ಸಂದರ್ಭಗಳನ್ನು ನೋಡಿ

- 'ಮನೆ ಆಟ'
- ಅಡುಗೆ ಕೋಣೆ
- ಆಟದ ಮೈದಾನ
- ಸಿನಿಮಾ, ನಾಟಕಗಳಲ್ಲಿನ ಕಥಾಪಾತ್ರಗಳ ನಡುವಿನ ಸಂಭಾಷಣೆಗಳು.

ಈ ರೀತಿಯ ವಿವಿಧ ಸಾಧ್ಯತೆಗಳನ್ನು ರೋಲ್‌ಪ್ಲೇ ಮಂಡನೆಯ ಸಂದರ್ಭದಲ್ಲಿ ಉಪಯೋಗಿಸಬಹುದಾಗಿದೆ. ಮಕ್ಕಳಿಗೆ ಅಗತ್ಯವಾದ ಅನುಭವಗಳನ್ನು ಕ್ರಮಬದ್ಧವಾಗಿ ನೀಡಿದರೆ

ರೋಲ್‌ಪ್ಲೇ ಮಂಡನೆಯಲ್ಲಿ ಹಂತ ಹಂತವಾಗಿ ಮಕ್ಕಳು ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗುವುದು ಗೋಚರವಾಗುತ್ತದೆ. ಕ್ರಮಬದ್ಧವಾದ ಯೋಜನೆಯನ್ನು ಪ್ರತಿಯೊಂದು ವಿಷಯಕ್ಕೂ ತಯಾರಿಸಲು ಅಧ್ಯಾಪಿಕೆಗೆ ಸಾಧ್ಯವಾಗಬೇಕು.

ಈ ರೀತಿಯ ಇತರ ಸಾಧ್ಯತೆಗಳನ್ನು ಕಂಡುಕೊಂಡು ಮಂಡಿಸಲು ಪ್ರಯತ್ನಿಸಿರಿ.

**ಪ್ರಿಸ್ಕೂಲ್‌ಗಳಲ್ಲಿ ರೋಲ್‌ಪ್ಲೇಗಳನ್ನು ಯಾಕೆ ಮಂಡಿಸಬೇಕು?**

**ರೋಲ್‌ಪ್ಲೇಗಳಿಂದ ಮಕ್ಕಳು ಪಡೆಯುವ ಸಾಮರ್ಥ್ಯಗಳು ಯಾವುವು?**

- ಮಕ್ಕಳಲ್ಲಿ ಸಹಕಾರ ಮನೋಭಾವ ಮತ್ತು ಸಾಂಘಿಕ ಮನೋಭಾವವನ್ನು ಬೆಳೆಸಲು
- ನಾಯಕತ್ವ ಗುಣವನ್ನು ಪೋಷಿಸಲು
- ಪ್ರೀತಿ, ಪರಸ್ಪರ ವಿಶ್ವಾಸ, ಸಹಿಷ್ಣುತೆ ಎಂಬಿವುಗಳ ಗುಣಾತ್ಮಕ ಬೆಳವಣಿಗೆಗೆ
- ಸೃಜನಾತ್ಮಕತೆಯನ್ನು ಉದ್ದೀಪನಗೊಳಿಸಲು
- ಕ್ರಿಯಾಶೀಲ ಮನೋಭಾವ ಬೆಳೆಸಲು
- ಭಾಷಾಪರವಾದ ವಿಕಾಸ ನಡೆಯಲು
- ಸಾಮಾಜಿಕವೂ ಭಾವನಾತ್ಮಕವೂ ಆದ ವಿಕಾಸವನ್ನು ಖಾತರಿಪಡಿಸಲು
- ಸ್ವತಃ ತಿಳಿದುಕೊಳ್ಳುವುದಕ್ಕೂ ತಪ್ಪನ್ನು ತಿದ್ದಿ ಮುನ್ನಡೆಯುವುದಕ್ಕೂ ಬೇಕಾದ ಸಂದರ್ಭವನ್ನು ಒದಗಿಸಲು
- ಆತ್ಮವಿಶ್ವಾಸವನ್ನು ಹೆಚ್ಚಿಸಲು
- ಮೌಲ್ಯಗಳು ಹಾಗೂ ಮನೋಭಾವಗಳನ್ನು ಬಳೆಸಲು.



## ಪದ್ಯ

### ಒಂದು ಎರಡು ಆಟಕೆ ಹೊರಡು

ಅಧ್ಯಾಪಿಕೆಯು ಸ್ಟ್ಯಾಂಡ್‌ಟ್ರೇಯಲ್ಲಿ ಒಂದು ಬಟ್ಟೆ ಅಂಗಡಿಯ ಮಾದರಿಯನ್ನು ಸಿದ್ಧಪಡಿಸಿರುತ್ತಾರೆ. ಅದನ್ನು ಆಧಾರವಾಗಿರಿಸಿ ಒಂದು ಆಖ್ಯಾನವನ್ನು ಮಂಡಿಸುತ್ತಾರೆ.

- ಇದೋ ನೋಡಿ.... ಒಂದು ಬಟ್ಟೆ ಅಂಗಡಿ. ಅಂಗಡಿಯ ಮುಂದೆ ಯಾರೆಲ್ಲಾ ತಲುಪಿರುವರು? (ಕಾಗೆ, ಗಿಳಿ, ಕೊಕ್ಕರೆ, ಅಮ್ಮು)
- ನಾವು ಬಟ್ಟೆ ಅಂಗಡಿಗೆ ಹೋಗುವುದು ಯಾಕೆ? ಮಕ್ಕಳು ಉತ್ತರಿಸುವರು.
- ಬಟ್ಟೆ ಅಂಗಡಿಯಲ್ಲಿ ಯಾವೆಲ್ಲಾ ಬಣ್ಣದ ಉಡುಪುಗಳನ್ನು ತೂಗಿಸಲಾಗಿದೆ?

  (ಕಾಗದದಲ್ಲಿ ನಿರ್ಮಿಸಿದ ಕಪ್ಪು, ಹಸಿರು, ಬಿಳಿ, ಚುಕ್ಕಿಗಳಿರುವ ಉಡುಪುಗಳು ಕಾಗದದಲ್ಲಿ ನಿರ್ಮಿಸಿ ಪ್ರದರ್ಶಿಸಬೇಕು)
- ಎಲ್ಲರೂ ಒಂದೇ ರೀತಿಯ ಉಡುಪನ್ನು ಕೊಂಡುಕೊಳ್ಳುವರೇ?
- ಪ್ರತಿಯೊಬ್ಬರೂ ಆಯ್ಕೆ ಮಾಡಿದ ಉಡುಪುಗಳು ಯಾವುದಾಗಿರಬಹುದು?

ಅಧ್ಯಾಪಿಕೆಯು ಪದ್ಯವನ್ನು ಹಾಡುವರು





ಕಾಗೆಗೆ ಇರುವುದು ಉಡುಪೊಂದು
ಕಪ್ಪು ಬಣ್ಣದ ಉಡುಪೊಂದು
ಗಿಳಿಗೆ ಇರುವುದು ಉಡುಪೊಂದು
ಹಸಿರು ಬಣ್ಣದ ಉಡುಪೊಂದು
ಕೊಕ್ಕರೆಗಿರುವುದು ಉಡುಪೊಂದು
........................................



ಪದ್ಯದ ಸಾಲುಗಳನ್ನು ಹಾಡಿ ನಿಲ್ಲಿಸುವಾಗ ಮಕ್ಕಳಿಗೆ ಹಸಿರುಡುಪು, ಬಿಳಿ ಉಡುಪು ಎಂಬುದಾಗಿ

ಸೇರಿಸಲು ಸಾಧ್ಯವಾಗಬಹುದು. ಅಲ್ಲವೇ?

ಅಮ್ಮುವಿಗೆ ಇರುವುದು ಉಡುಪೊಂದು

ಚುಕ್ಕಿಗಳಿರುವ ಉಡುಪೊಂದು

ಅಧ್ಯಾಪಿಕೆಯು ಎಲ್ಲಾ ಸಾಲುಗಳನ್ನು ಸೇರಿಸಿ ಹಾಡುವರು ಮತ್ತು ಮಕ್ಕಳು ಗುಂಪಾಗಿ ಹಾಡುವರು. ಪದ್ಯವನ್ನು ಮಂಡಿಸಿದ ನಂತರ ಮಕ್ಕಳೊಂದಿಗೆ ನಡೆಸುವ ಚರ್ಚೆಯಲ್ಲಿ ಆಶಯ ರೂಪೀಕರಣ ನಡೆಯಬೇಕು. ಅದಕ್ಕೆ ಅಗತ್ಯವಿರುವ ಪ್ರಶ್ನೆಗಳನ್ನು ಕೇಳಬೇಕು. ಮಕ್ಕಳ ಚಿಂತನೆಯನ್ನು ಉದ್ದೀಪನಗೊಳಿಸುವ ವಿಮರ್ಶಾತ್ಮಕ ಪ್ರಶ್ನೆಗಳು ಯಾವುವು ಎಂಬುದನ್ನು ಮೊದಲೇ ಮನಗಂಡು ಅವುಗಳನ್ನು ಯೋಜನೆಯಲ್ಲಿ ಸೇರಿಸಲು ಅಧ್ಯಾಪಿಕೆಯು ತಯಾರಿ ನಡೆಸಬೇಕಾಗಿದೆ. ಸಾಂದರ್ಭಿಕವಾದ ಪ್ರಶ್ನೆಗಳನ್ನೂ ಸೇರಿಸಬಹುದು. ರೂಪುಗೊಳ್ಳಬೇಕಾದ ಆಶಯಗಳು, ಮನೋಭಾವಗಳು ಎಂಬಿವುಗಳನ್ನು ಮನಸ್ಸಿನಲ್ಲಿ ಕಂಡುಕೊಂಡು ಪ್ರಶ್ನೆಗಳನ್ನು ತಯಾರಿಸಬೇಕು.

ಇಲ್ಲಿ ಉಡುಪು (ಬಟ್ಟೆ) ಎಂಬುದರಿಂದ ಉದ್ದೇಶಿಸಿರುವುದು ಪಕ್ಷಿಗಳ ಗರಿಗಳನ್ನಾಗಿದೆ ಎಂಬ ಆಶಯವನ್ನು ಗ್ರಹಿಸುವಾಗ ಪದ್ಯವು ರಸವತ್ತಾಗುತ್ತದೆ. ಇದಕ್ಕಾಗಿ ಯಾವ ಯಾವ ಪ್ರಶ್ನೆಗಳನ್ನು ಕೇಳಬಹುದು?

- ಈ ಪದ್ಯದಲ್ಲಿ ಯಾವ ಯಾವ ಪಕ್ಷಿಗಳ ಕುರಿತು ಹೇಳಲಾಗಿದೆ?
- ಪ್ರತಿಯೊಂದು ಪಕ್ಷಿಯ ಉಡುಪಿನ ಬಣ್ಣ ಯಾವುದು?
- ನಾವು ಉಡುಪು ಧರಿಸುವುದು ಯಾಕಾಗಿ?
- ಪ್ರತಿದಿನ ನಾವು ಬಟ್ಟೆ ಬದಲಾಯಿಸುತ್ತೇವೆ. ಪಕ್ಷಿಗಳೋ?
- ಪಕ್ಷಿಗಳ ಉಡುಪು ಎಂದು ಕರೆಯುವುದು ಯಾವುದನ್ನಾಗಿರಬಹುದು?
- ಉಡುಪು (ಗರಿಗಳು) ಗಳಿಂದ ಪಕ್ಷಿಗಳಿಗಿರುವ ಪ್ರಯೋಜನಗಳೇನು?

ಈ ರೀತಿಯ ಪ್ರಶ್ನೆಗಳಾಗಬಹುದು. ಮಕ್ಕಳ ಮಟ್ಟಕ್ಕನುಸರಿಸಿ ಪ್ರಶ್ನೆಗಳನ್ನು ಸರಳಗೊಳಿಸಬಹುದು. ಹೀಗೆ ಮಂಡಿಸುವುದರಿಂದ ಯಾವೆಲ್ಲಾ ಕಲಿಕೆಯ ಅನುಭವ ಮತ್ತು ಸಾಮರ್ಥ್ಯ ಮಗುವಿಗೆ ಲಭಿಸುತ್ತದೆ?

- ತಾಳಬದ್ಧವಾಗಿ ಸಾಲುಗಳನ್ನು ಹಾಡಲು.
- ಪದ್ಯದ ಆಶಯವನ್ನು ಗ್ರಹಿಸಲು.
- ಸ್ಯಾಂಡ್‌ಟ್ರೇಯಲ್ಲಿರುವ ಜೀವಿಗಳು/ಕಥಾಪಾತ್ರಗಳು ಯಾವುದೆಲ್ಲಾ ಎಂದು ತಿಳಿಯಲು.
- ಜೀವಿಗಳ ಬಣ್ಣವನ್ನು ಗುರುತಿಸಲು.
- ಜೀವಿಗಳ ಬಣ್ಣ ಮತ್ತು ಉಡುಪುಗಳ ಬಣ್ಣವನ್ನು ಹೋಲಿಸಲು.
- ಸಾಲುಗಳ ತಾಳವನ್ನು ಗಣನೆಗೆ ತೆಗೆದುಕೊಂಡು ಪದ್ಯದ ಸಾಲುಗಳನ್ನು ಸೇರಿಸಿ ಮುಂದುವರಿಸಲು.
- ಸರಳ ಪ್ರಶ್ನೆಗಳಿಗೆ ಉತ್ತರ ಹೇಳಲು ಮತ್ತು ಪ್ರಶ್ನೆಗಳನ್ನು ತಯಾರಿಸಿ ಕೇಳಲು.

**ಪದ್ಯಗಳನ್ನು ಮಂಡಿಸಲು ಬೇರೆ ಏನೆಲ್ಲಾ ಸಾಧ್ಯತೆಗಳನ್ನು ಉಪಯೋಗಿಸಿಕೊಳ್ಳಬಹುದು?**

- ತಾಳ ಹಾಕಲಿರುವ ವಾದ್ಯೋಪಕರಣಗಳನ್ನು ಉಪಯೋಗಿಸಿ ಕೈಗಂಟೆ, ಆಟದ ಚೆಂಡೆ....
- ಚಿತ್ರಗಳು, ವಿಡಿಯೋ ದೃಶ್ಯಗಳನ್ನು ಉಪಯೋಗಿಸಿಕೊಂಡು
- ಅನಿಮೇಷನ್ ದೃಶ್ಯ ಸಾಧ್ಯತೆಗಳನ್ನು ಉಪಯೋಗಿಸಿಕೊಂಡು.
- ಸಂಜ್ಞೆ ಚಲನೆ/ಅಭಿನಯ ಎಂಬಿವುಗಳ ಸಾಧ್ಯತೆಗಳನ್ನು ಪರಿಗಣಿಸಿ.
- ಒಂದು ಸಾಲನ್ನು ಒಂದು ಗುಂಪಿನಲ್ಲಿ ಎಂಬಂತೆ ಹಾಡುವುದು (ಉದಾ : ಪ್ರಶ್ನೋತ್ತರ ಹಾಡು)
- ಆಡಿಯೋ ಉಪಕರಣಗಳ ಸಾಧ್ಯತೆಯನ್ನು ಉಪಯೋಗಿಸುವುದು

**ಪ್ರಿಸ್ಕೂಲ್ ಮಕ್ಕಳ ಹಾಡುಗಳಿಗೆ ಏನೆಲ್ಲ ಪ್ರತ್ಯೇಕತೆಗಳಿರಬೇಕು?**

- ಕಾಗೆ ಹಾರಿ ಬಂತು
  ಬಂಡೆ ಮೇಲೆ ಕುಳಿತು
  ಕಾಗೆ ಹಾರಿ ಹೋಯಿತು
  ಬಂಡೆ ಅಲ್ಲೇ ಉಳಿಯಿತು
- ದನಕ್ಕೆ ಇರಲು ಹಟ್ಟಿ ಇದೆ
  ಕೋಳಿಗೆ ಇರಲು ಗೂಡು ಇದೆ
  ಹಾವಿಗೆ ಇರಲು ಬಿಲ ಇದೆ

ನನಗೂ ಅಪ್ಪ ಅಮ್ಮನಿಗೂ
ಮುದ್ದಿನ ತಂಗಿಗೂ ಮನೆ ಇದೆ

ಈ ರೀತಿಯ ಸರಳವೂ ರಸಾತ್ಮಕವೂ ಆದ ಪದ್ಯಗಳಾದರೆ ಉತ್ತಮ.

**ಇತರ ಏನೆಲ್ಲಾ ವಿಶೇಷತೆಗಳು ಇರಬೇಕು?**

- ತಾಳಾತ್ಮಕವಾಗಿ ಹಾಡಲು ಸಾಧ್ಯವಾಗುವವುಗಳು.
- ಹೆಚ್ಚು ಸಾಲುಗಳು ಇಲ್ಲದಿರುವವುಗಳು.
- ಅಕ್ಷರಗಳೋ, ವಾಕ್ಯಗಳೋ ಆವರ್ತಿಸುವುದು.
- ಅಭಿನಯ ಸಾಧ್ಯತೆ ಇರುವುದು.
- ವಿಷಯಕ್ಕೆ ಸಂಬಂಧಿಸಿದುದು.

4+ ಪ್ರಾಯದ ಮಕ್ಕಳನ್ನು ಪರಿಗಣಿಸುವಾಗ ಇದರ ಜೊತೆಗೆ ಇತರ ಕೆಲವು ವಿಷಯಗಳನ್ನು ಗಮನಿಸಬೇಕು.

- ಆಶಯ ಪೂರ್ಣವಾಗಿರುವವುಗಳು.
- ಭಾವನೆಯನ್ನು ಉತ್ತೇಜಿಸುವವುಗಳು.
- ಸಾಲುಗಳನ್ನು ಸೇರಿಸಿ ಹಾಡಲು ಸಾಧ್ಯವಿರುವವುಗಳು.
- ಒಗಟು ಪದ್ಯಗಳು
- ಕಥನಕವನಗಳು
- ಸಂಖ್ಯಾಹಾಡುಗಳು

## ಸಂಖ್ಯಾಹಾಡುಗಳು

ಒಂದು ಎರಡು ಆಟಕೆ ಹೊರಡು

ಮೂರು ನಾಲ್ಕು ಸಿಳ್ಳನು ಹಾಕು
ಐದು ಆರು ಮುಂದಕೆ ಹಾರು
ಏಳು ಎಂಟು ಕಾಲಲಿ ಕುಂಟು
ಒಂಭತ್ತು ಹತ್ತು ಸುತ್ತಲು ಸುತ್ತು



## ಒಗಟು ಪದ್ಯಗಳು



ಅಂಕು ಡೊಂಕು ಸಂಕಪಾಲ
ಮೂರು ತಲೆ ಹತ್ತು ಕಾಲು
ಹೇಳಿರಿ ಹೇಳಿರಿ ಇದು ಏನು?
ಉತ್ತರ : ಎತ್ತು ಕಟ್ಟಿ ಉಳುವ ಕೃಷಿಕ
–ಹಕಾರ ಆದಿ ಳಕಾರ ಅಂತ್ಯ
–ಚಂದ್ರ ಬಿಂಬ ಸಮಾನ
–ನಾನು ಯಾರು?
–ಉತ್ತರ : ಹಪ್ಪಳ

## ಕಥನ ಕವನ

ಆನೆ ಬಂತೊಂದು ಆನೆ
ಯಾವ ಊರಿನ ಆನೆ
ಬೀಜಾಪುರದ ಆನೆ
ಇಲ್ಲಿಗೇಕೆ ಬಂತು
ಕೊಬ್ಬರಿ ಬೆಲ್ಲ ತಂದಿತು
ಮಕ್ಕಳಿಗೆಲ್ಲ ಹಂಚಿ
ಆನೆ ಓಡಿ ಹೋಯಿತು

## ಸಾಲು ಸೇರಿಸುವ

ಮಳೆ ಬಂತು ಮಳೆ
ಮರದ ಮೇಲೆ ಮಳೆ
.................. ಮಳೆ
.................. ಮಳೆ
.................. ಮಳೆ
.................. ಮಳೆ

.............................................................................

*ಶಿಶು ಗೀತೆಗಳಿಗೆ ಸಾಲುಗಳನ್ನು ಸೇರಿಸುವಾಗ ಮೂರು ವರ್ಷದ ಮಕ್ಕಳಿಗೆ ಒಂದು ಪದ ಮಾತ್ರ ಸೇರಿಸಲಿರುವ ಸಾಲುಗಳನ್ನು ನೀಡುವುದು ಉತ್ತಮ. ಸಾಲುಗಳ ಆರಂಭದಲ್ಲೋ ಮಧ್ಯದಲ್ಲೋ ಪದಗಳನ್ನು ಸೇರಿಸಲಿರುವ ಸಾಧ್ಯತೆಯನ್ನು ಉಪಯೋಗಿಸಬಹುದು. ನಾಲ್ಕು ವರ್ಷ ಪ್ರಾಯದ ಮಕ್ಕಳ ಗುಂಪಿಗೆ ಪೂರ್ಣ ಸಾಲುಗಳನ್ನು ಸೇರಿಸಲಿರುವ ರೀತಿಯಲ್ಲಿ ನೀಡಬಹುದು.*

ಮರಗಳ ಹೆಸರನ್ನು ಸೇರಿಸಿ ಸಾಲುಗಳನ್ನು ಸೇರಿಸುವ ಗೀತೆಯನ್ನು ಉದಾಹರಣೆಯಾಗಿ ನೀಡಲಾಗಿದೆ. ಇದನ್ನು ಮಂಡಿಸುವುದಕ್ಕಿಂತ ಮೊದಲು ಮರಗಳ ಹೆಸರನ್ನು ಗುರುತಿಸಲಿರುವ ಕಲಿಕೆಯ ಅನುಭವಗಳನ್ನು ನೀಡಬೇಕಲ್ಲವೇ?

## ಪದ್ಯಗಳ ವೈವಿಧ್ಯ

ಪ್ರಿಸ್ಕೂಲ್ ಮಟ್ಟದ ಪದ್ಯಗಳ ವಿಶೇಷತೆಗಳನ್ನು ತಿಳಿದುಕೊಂಡೆವಲ್ಲವೇ? ವೈವಿಧ್ಯದಿಂದ ಕೂಡಿದ ತಾಳ, ಲಯವನ್ನು ಹೊಂದಿರುವ ಪದ್ಯಗಳನ್ನು ಮಕ್ಕಳು ಆಸ್ವಾದಿಸಬೇಕಲ್ಲವೇ?

ಹೆಚ್ಚಿನ ಮಕ್ಕಳು ಜೋಗುಳ ಹಾಡುಗಳ ಮಾಧುರ್ಯವನ್ನು ಅನುಭವಿಸಿದವರಾಗಿರಬಹುದು. ಅವುಗಳ ಬಾಯಿತಾಳಗಳನ್ನು ಪರಿಚಯ ಮಾಡೋಣ.

*ಲಾಲಿ ಲಾಲಿ ಲಾಲಿ ಲಾಲಿ....*

*ಲಾಲಿ ಲಾಲಿ ಲಾಲಿ ಲಾಲಿ....*

ಇದರಂತೆ ನಿರ್ದಿಷ್ಟ ಅರ್ಥವಿಲ್ಲದ ಪದಗಳನ್ನು ಸೇರಿಸಿ ತಯಾರಿಸುವ ಬಾಯಿ ತಾಳಗಳು ತಾಳ ಪ್ರಜ್ಞೆವನ್ನು ಉಂಟುಮಾಡಲು ಪ್ರಯೋಜನಕರವಾಗಿದೆ. ಈ ಅನುಭವಗಳು ಮುಂದಿನ ತರಗತಿಗಳಲ್ಲಿ ಕವನ ರಚಿಸಲು ಮಗುವನ್ನು ಪ್ರಾಪ್ತರಾಗಿಸಲು ಸಹಾಯಕವಾಗಬಹುದಲ್ಲವೇ? ಬಾಯಿ ತಾಳಗಳಿಗೆ ಕೆಲವು ಉದಾಹರಣೆಗಳು:–

ತನ್ನನೇ ತಾನೇ ತನ್ನ
ತನ್ನನ್ನೇ ತಾನೇ......
ಓ.........ತಿತ್ತಿತಾರ ತಿತ್ತಿತೈ
ತಿಂದೈ ಥಕ ಥೈ ಥೈ ತೋಮ್

ತಾನಿ ತಂದಾನೊ......ತಾನೋ
ತಾನಿ ತಂದಾನೋ.........ತಾನೋ
ತಾನಿ ತಂದಾನೋ ತಾನೋ ತಂದಾನೋ

ಡೆನ್ನ ಡೆನ್ನ ಡೆನ್ನ ಡೆನ್ನಾನ
ಓ.....ಡೆನ್ನ.....ಡೆನ್ನ
ಡೆನ್ನ ಡೆನ್ನ ಡೆನ್ನ ಡೆನ್ನಾನ

ಲಾಲ ಲಾಲ ಲಾಲಲಾ...
ಲಾಲ ಲಾಲ ಲಾಲಲಾ...
ಲಾಲ ಲಾಲ ಲಾಲಲಾ...

ಏಲೈಸಾ... ಏಲೈಸಾ
ಐಲೇಲೈಸಾ...ಏಲೈಸಾ

ಬಾಯಿ ತಾಳಗಳ ಹಾಗೆಯೇ "ನಾಲಗೆ ಸುರುಳಿಗಳು" ತಾಳಾತ್ಮಕವಾದ ಭಾಷಾ ಆಟಗಳಾಗಿ ಉಪಯೋಗವಾಗಬಹುದು. ಸರಳವಾದ ಕೆಲವು ನಾಲಗೆ ಸುರುಳಿಗಳನ್ನು ನೋಡಿರಿ.

- "ಕೆಂಪು ಕುಂಕುಮ, ಕಪ್ಪು ಕುಂಕುಮ"

ಇನ್ನೊಂದು ವಿಭಾಗ ತಾಳಕ್ಕೆ ಮಾತ್ರ ಪ್ರಾಧ್ಯಾನ್ಯತೆ ಇರುವ ಪದ್ಯಗಳಾಗಿವೆ. ಅರ್ಥ ರಹಿತವಾದ ಪದಗಳು ಕೂಡ ಇದರಲ್ಲಿರಬಹುದು. ಉದಾಹರಣೆಗೆ



*ಚಿಂಗಳಿಕ ಚಿಂಗಳಿಕ ಚುಂ ಚುಂ ಚುಂ*

*ಪಿಂಗಳಿಕ ಪಿಂಗಳಿಕ ಪುಂ ಪುಂ ಪುಂ*

ಆಟಗಳಿಗೆ ಸಂಬಂಧಿಸಿದ ಪದ್ಯಗಳನ್ನು ಮಕ್ಕಳು ಬಹಳ ಬೇಗ ಕಲಿಯುವುದನ್ನು ಕಾಣಬಹುದು. ಪದ್ಯ ಹಾಡಿದರೆ ಮಾತ್ರ ಆಟ ನಡೆಯಬಹುದು ಎಂಬ ಅಗತ್ಯವು ಪದ್ಯ ಕಲಿಯಲು ಮಗುವಿಗೆ

ಪ್ರಚೋದನೆ ನೀಡುತ್ತದೆ. ಆಟಗಳಿಗೆ ಸಂಬಂಧಿಸಿದ ಭಾಗದಲ್ಲಿ ಕೆಲವು ಪದ್ಯಗಳನ್ನು ನೀಡಲಾಗಿದೆ. ಗ್ರೂಪ್ ಮಾಡಲು ಮತ್ತು ನಾಯಕನ ಆಯ್ಕೆ ನಡೆಸಲು ಉಪಯೋಗಿಸುವ ಕೆಲವು ಪದ್ಯಗಳನ್ನು ನೋಡಿ.

- ಪುಟ್ಟ ಪುಟ್ಟ ಹುಡುಗಿ
  ಪುಟಾಣಿ ಹುಡುಗಿ
  ಸುತ್ತ ಮುತ್ತ ತಿರುಗಿ
  ನಿನಗ್ಯಾರು ಬೇಕು?
  ಬೇಕಾದವರನ್ನು ಆರಿಸಿಕೋ...

ಪ್ರತಿಯೊಂದು ಪ್ರದೇಶದಲ್ಲೂ ವಿವಿಧ ಜನವಿಭಾಗಗಳ ಕೆಲಸ, ಸಂಸ್ಕೃತಿ ಎಂಬಿವುಗಳಿಗೆ ಸಂಬಂಧಿಸಿದ ಪದ್ಯಗಳನ್ನು ಉಪಯೋಗಿಸಲು ಅಧ್ಯಾಪಿಕೆಗೆ ಸಾಧ್ಯವಾಗಬೇಕು.

ಇತರ ಯಾವೆಲ್ಲ ತರದ ಪದ್ಯಗಳನ್ನು ಮಕ್ಕಳಿಗೆ ಪರಿಚಯಿಸಲು ಸಾಧ್ಯ?

- ಸಣ್ಣದಾದ ಜನಪದ ಗೀತೆಗಳು
- ದೋಣಿ ಹಾಡು/ವಂಜಿ ಪಾಟ್ಟ್
- ಮಾಪಿಳ್ಳ ಪಾಟು
- ಪ್ರಶ್ನೋತ್ತರ ಪದ್ಯಗಳು
- ಆಚರಣೆಗೆ ಸಂಬಂಧಿಸಿದ ಪದ್ಯ
- ಸಿನಿಮಾ ಹಾಡುಗಳು
- 

ಪದ್ಯಗಳ ಮಂಡನೆಗೆ ಅವಕಾಶ ನೀಡುವಾಗ ಮಕ್ಕಳ ಸಾಮರ್ಥ್ಯವನ್ನು ಮೌಲ್ಯ ಮಾಪನ ಮಾಡಬೇಕಲ್ಲವೇ?

ಯಾವೆಲ್ಲ ವಿಷಯಗಳನ್ನು ಅಧ್ಯಾಪಿಕೆ ಪರಿಗಣಿಸಬೇಕು?

- ರಾಗ
- ತಾಳ
- ಭಾವ
- ಅಂಗಿಕ ಚಲನೆ/ಸೂಕ್ತವಾದ ಹೆಜ್ಜೆಗಾರಿಕೆ
- ಗುಂಪಿನಲ್ಲಿ ಭಾಗವಹಿಸುವಿಕೆ
- ಪದಗಳ ಉಚ್ಛಾರ ಸ್ಫುಟತೆ, ಸ್ಪಷ್ಟತೆ
- ಒಂದೇ ರಾಗದಲ್ಲಿ ಒಟ್ಟಿಗೆ ಹಾಡಲಿರುವ ಸಾಮರ್ಥ್ಯ.

*ಎಲ್ಲ ಘಟಕಗಳನ್ನು ಒಟ್ಟಿಗೆ ಮೌಲ್ಯ ಮಾಪನ ಮಾಡಬೇಕೆಂದಿಲ್ಲ. ವಿವಿಧ ಸಂದರ್ಭಗಳಲ್ಲಿ ಮೌಲ್ಯ ಮಾಪನ ನಡೆಸಿ ದಾಖಲಿಸಿದರೆ ಉತ್ತಮ.*

*ಭಾಷಾ ಪರವಾದ ಬುದ್ಧಿ (Verbal - Linguistic Intelligence) ಮತ್ತು ಸಂಗೀತ ಪರವಾದ ಬುದ್ಧಿ (Musical- Rhythemical Intelligence) ಯ ಬೆಳವಣಿಗೆಗಾಗಿ ವೈವಿಧ್ಯವಾದ ಪದ್ಯಗಳನ್ನು ಪ್ರಿಸ್ಕೂಲ್ ಶಿಕ್ಷಣದ ಭಾಗವಾಗಿ ಉಪಯೋಗಿಸಲು ಪ್ರತಿಯೊಂದು ಅಧ್ಯಾಪಿಕೆಗೂ ಸಾಧ್ಯವಾಗಬೇಕು. ಪ್ರತಿಯೊಂದು ವಿಷಯಕ್ಕೆ ಸಂಬಂಧಪಟ್ಟು ಪರಮಾವಧಿ ಪದ್ಯಗಳನ್ನು ಉಪಯೋಗಿಸುವುದರಿಂದ ಉತ್ತಮ ಕಲಿಕೆಯ ಅನುಭವಗಳನ್ನು ನಮಗೆ ನೀಡಲು ಸಾಧ್ಯ.*

## ನನ್ನ ಪದ್ಯ ಪುಸ್ತಕ

ಎಲ್ಲಾ ಅಧ್ಯಾಪಿಕೆಯರಲ್ಲೂ ಹೆಚ್ಚು ಪದ್ಯಗಳನ್ನು ಸಂಗ್ರಹಿಸಿದ ಪುಸ್ತಕವು ಇರಬೇಕು. ಸಿಗುವ ಸಂದರ್ಭದಲ್ಲಿ ಪದ್ಯಗಳನ್ನು ಸಂಗ್ರಹಿಸುವುದಕ್ಕಿಂತ ಬದಲು ಪ್ರತಿಯೊಂದು ವಿಷಯಕ್ಕೆ ಅನುಸರಿಸಿ ಅವುಗಳನ್ನು ಕ್ರಮೀಕರಿಸಿ ಸಂಗ್ರಹಿಸುವುದು ಉತ್ತಮವಲ್ಲವೇ? ಸೂಕ್ತವಾದ ಪದ್ಯಗಳನ್ನು ಸಂಗ್ರಹಿಸಲು ಇದು ಸಹಾಯಕವಾಗಬಹುದು. ಮೂರು ವರ್ಷದವರಿಗೂ ನಾಲ್ಕು ವರ್ಷದವರಿಗೂ ಯೋಗ್ಯವಾದ ಪದ್ಯಗಳನ್ನು ವರ್ಗೀಕರಿಸಿ ಸಂಗ್ರಹಿಸಲು ಸಾಧ್ಯವಾಗಬೇಕು. ಪದ್ಯಗಳ ರೀತಿಗನುಸರಿಸಿ ಕೂಡ ವರ್ಗೀಕರಿಸಬಹುದು.

- ಒಗಟು ಪದ್ಯಗಳು
- ಕಥನ ಕವನಗಳು
- ಸಂಖ್ಯಾ ಹಾಡುಗಾನಗಳು

- ಆಟದ ಪದ್ಯಗಳು
- ದೇಶಭಕ್ತಿ ಗೀತೆಗಳು
- ಪ್ರಾರ್ಥನಾ ಗೀತೆಗಳು
- ಜಾನಪದ ಗೀತೆಗಳು
- ಅಭಿನಯ ಗೀತೆಗಳು
- ಪ್ರಶ್ನೋತ್ತರಿ ಹಾಡುಗಳು
- ಬಾಯಿ ತಾಳಗಳು

ಇವುಗಳನ್ನು ಬರೆದು ಸಂಗ್ರಹಿಸುವುದು ಅಥವಾ ಮಕ್ಕಳ ಸಂಚಿಕೆಗಳಿಂದ ಕತ್ತರಿಸಿ ಅಂಟಿಸಿದ್ದೂ ಆಗಬಹುದು. ಚಿತ್ರಗಳನ್ನೂ ಬಣ್ಣಗಳನ್ನು ಉಪಯೋಗಿಸಿ ಸುಂದರಗೊಳಿಸಿದರೆ ಹೇಗಿರಬಹುದು? ಸಹ ಅಧ್ಯಾಪಕಿಯರು, ಹೆತ್ತವರು ಎಂಬಿವರೊಂದಿಗೆ ನಿಮ್ಮ ಸಂಗ್ರಹ ಪುಸ್ತಕವನ್ನು ಹಂಚಿಕೊಳ್ಳಿ. ನಿಮ್ಮ ಸಂಗ್ರಹವನ್ನು ಹೆಚ್ಚಿಸಲು ಅವರು ಕೂಡ ಸಹಾಯ ಮಾಡುವರಲ್ಲವೇ?



## ಗೊಂಬೆ ಆಟ

### ನನ್ನ ಗೊಂಬೆ

*ಹಿ..ಹಿ..ಹಿ.. ಇವತ್ತು ಎಲ್ಲರು ಬಂದಿರುವಿರಿ ತಾನೇ? ಮಂಗ ಬೊಂಬೆಯ ಪ್ರಶ್ನೆ ಕೇಳಿ ಮಕ್ಕಳೆಲ್ಲರೂ ಗಟ್ಟಿಯಾಗಿ ಬೊಬ್ಬಿಟ್ಟರು. ನಂತರ ಬೊಂಬೆಯ ಪ್ರಶ್ನೆಗಳಿಗೆಲ್ಲ ಪಟ ಪಟ ಪ್ರತಿಕ್ರಿಯೆ ನೀಡಿದರು. ಅಳುತ್ತ ಇದ್ದ ಶಾನ್ವಿನ್ ಸಹ ಬೊಂಬೆಯ ಪ್ರಶ್ನೆಗಳಿಗೂ ಆಂಗಿಕ ಚಲನೆಗೂ ಆಕರ್ಷಿತನಾದನು.*



ಶೈಶವಾಸ್ಥೆಯಲ್ಲಿಯೇ ಗೊಂಬೆಗಳು ಮಕ್ಕಳನ್ನು ತನ್ನತ್ತ ಸೆಳೆಯುವ ಒಂದು ಆಟಿಕೆಯಾಗಿದೆ. ಗೊಂಬೆಗಳನ್ನು ಆಟ ಆಡಿಸುವುದು. ಬಟ್ಟೆ ತೊಡಿಸುವುದು, ಜೊತೆಗೆ ಮಲಗಿಸಿ ನಿದ್ರೆ ಮಾಡಿಸುವುದು ಮೊದಲಾದ ಅಮ್ಮನ ಕೆಲಸಗಳನ್ನು ಅನುಕರಿಸುವುದು ಮಕ್ಕಳ ಸಾಮಾನ್ಯ ಗುಣಗಳಲ್ಲಿ ಒಂದಾಗಿದೆ. ಬೊಂಬೆಗಳೊಂದಿಗೆ ಮಾತುಕತೆ ನಡೆಸುವುದು ಕೂಡಾ ಕಾಣಲು ಸಾಧ್ಯ.

ಮಗುವಿನ ನೈಸರ್ಗಿಕವಾದ ಈ ಸ್ವಭಾವವನ್ನು ಶಿಶು ವಿದ್ಯಾಭ್ಯಾಸದಲ್ಲಿ ಹೇಗೆ ಫಲಪ್ರದವಾಗಿಸಬಹುದು ಎಂದು ನಾವು ಆಲೋಚಿಸಬೇಕಾಗಿದೆ.

ನಿಶ್ಚಲವಾದ ಬೊಂಬೆಗಳಿಗಿಂತ (Dolls) ಚಲಿಸುವ ಬೊಂಬೆಗಳೆಂದರೆ (Puppets) ಎಲ್ಲರಿಗೂ ಇಷ್ಟ. ತಲೆ ಆಡಿಸಿ ಕೈಗಳನ್ನು ಚಲಿಸುವಂತೆ ಮಾಡಿ ಮಾತನಾಡುವ ಬೊಂಬೆಗಳನ್ನು ಕಾಣುವ ಕೌತುಕಕ್ಕಿಂತಲೂ ಮಕ್ಕಳ ಭಾಷಣಾ ಸಾಮರ್ಥ್ಯವನ್ನೂ ಸೂಕ್ಷ್ಮ ಪೇಶಿ ವಿಕಾಸವನ್ನೂ ಪರಿಪೋಷಿಸುವುದಕ್ಕೆ ಅಧ್ಯಾಪಿಕೆಯರು ಒತ್ತು ನೀಡಬೇಕು.

- ಕುಶಲ ಸಂಭಾಷಣೆಯಲ್ಲಿ ಭಾಗವಹಿಸುವುದು
- ಸಣ್ಣ ಘಟನೆಗಳು, ಸಂದರ್ಭಗಳು ಎಂಬಿವುಗಳನ್ನು ಗೊಂಬೆಗಳನ್ನುಪಯೋಗಿಸಿ ಮಂಡಿಸುವುದು

ಮೊದಲಾದ ಚಟುವಟಿಕೆಗಳ ಮೂಲಕ ಸಂದರ್ಭಕ್ಕನುಸರಿಸಿ ಭಾಷೆಯನ್ನು ಉತ್ಪಾದಿಸಲು ಮತ್ತು ಪ್ರಯೋಗಿಸಲಿರುವ ಸಾಮರ್ಥ್ಯ ಬೆಳೆಯುವುದು.

ಮಾತ್ರವಲ್ಲದೆ ಗೊಂಬೆಗಳನ್ನು ಚಲಿಸುವಂತೆ ಮಾಡುವುದರಿಂದ ಪೇಶಿ ಚಲನಾಪರವಾದ ವಿಕಾಸವೂ ಸಾಧ್ಯವಾಗುವುದು. ಸಭಾ ಕಂಪನ ಇರುವವರಿಗೂ ಕೂಡ ಒಂದು ಪರದೆಯ ಹಿಂದೆ ನಿಂತು ಕೊಂಡು ಆತ್ಮ ವಿಶ್ವಾಸದಿಂದ ಸಂಭಾಷಣೆ ನಡೆಸಲು ಸಾಧ್ಯವಾಗುವುದು ಎಂಬುದು ಗೊಂಬೆ ನಾಟಕದ ಪ್ರತ್ಯೇಕತೆಗಳಾಗಿವೆ.

## ಹಲವು ವಿಧದ ಗೊಂಬೆಗಳು

ಯಾವುದೇ ಅಧ್ಯಾಪಿಕೆಗೂ ರಚಿಸಿ ಬಳಸಲು ಸಾಧ್ಯವಿರುವ ರೀತಿಯ ಗೊಂಬೆಗಳನ್ನು ಪ್ರಿಸ್ಕೂಲ್ ತರಗತಿಗಳಲ್ಲಿ ಉಪಯೋಗಿಸಬೇಕು. ಪರಿಸರದಿಂದ ಸುಲಭವಾಗಿ ಲಭಿಸುವ ಖರ್ಚಿಲ್ಲದ ಅಥವಾ ಖರ್ಚು ಕಡಿಮೆ ಇರುವ ಗೊಂಬೆಗಳು ಯಾವುದೆಲ್ಲ?





- ಬೆರಳು ಗೊಂಬೆಗಳು
- ಕಾಗದ ಗೂಡು/ಕ್ಯಾರಿ ಬ್ಯಾಗ್ ಬೊಂಬೆಗಳು
- ಪೆಟ್ಟಿಗೆ ಬೊಂಬೆಗಳು
- ಬಲೂನ್ ಬೊಂಬೆಗಳು

ಪದ್ಯಗಳು, ಕತೆಗಳು, ಸಂಭಾಷಣೆಗಳು, ಎಂಬಿವುಗಳನ್ನೆಲ್ಲಾ ಗೊಂಬೆಗಳ ಸಹಾಯದಿಂದ ಮಂಡಿಸಬಾರದೇ? ಮೊದಲ ಹಂತದಲ್ಲಿ ಗೊಂಬೆಗಳನ್ನು ಉಪಯೋಗಿಸಿರುವ ಚಟುವಟಿಕೆಗಳು ಮಕ್ಕಳಿಗೆ ಕಾಣಲಿರುವ ಅವಕಾಶವು ಧಾರಾಳವಾಗಿ ದೊರೆಯಬೇಕು. ಹೆತ್ತವರು, ಹಿರಿಯ ಮಕ್ಕಳು, ಇತರ ಅಧ್ಯಾಪಕರು ಎಂಬಿವರ ಸಹಾಯ ಪಡೆಯಬಾರದೇ?

ಮೂರು ವರ್ಷದವರಿಗೆ ಒಂದೋ ಎರಡೋ ಸಂಭಾಷಣೆಗಳು ಬರುವ ರೀತಿಯ ಸುಲಭವಾದ ಸಂದರ್ಭಗಳನ್ನು ಒದಗಿಸಬೇಕು. ನಾಲ್ಕು ವರ್ಷದ ಮಕ್ಕಳಿಗೆ ಸಣ್ಣ ಪ್ರಶ್ನೋತ್ತರ ಪದ್ಯಗಳು, ಕಲಿತ ಕತೆಯ ಸಂಭಾಷಣಾ ಸಂದರ್ಭಗಳನ್ನು ನೀಡುವುದು ಉತ್ತಮ. ಯಾವ ಕಥಾ ಪಾತ್ರ ಮಾತನಾಡುತ್ತಿದೆಯೋ ಆ ಗೊಂಬೆಯನ್ನು ಚಲಿಸುವಂತೆ ಮಾಡಬೇಕು. ಹಾಗಾದರೆ ಮಾತ್ರ ನೋಡುವವರಿಗೆ ಯಾವ ಗೊಂಬೆ ಮಾತಾಡುತ್ತಿದೆ ಎಂದು ತಿಳಿಯಬಹುದು. ಈ ರೀತಿಯ ತರಬೇತಿಗಳನ್ನು ಮಕ್ಕಳಿಗೆ ನೀಡಬೇಕು.

ಒಂದು ವಸ್ತುವನ್ನು ಇನ್ನೊಂದಾಗಿ ಕಲ್ಪಿಸಿ ಅಭಿನಯಿಸಲು ಮಗುವಿಗೆ ಸಾಧ್ಯವಿದೆ.

ಯಾವುದೇ ವಸ್ತುವಿನಲ್ಲೂ ಕಥಾಪಾತ್ರವನ್ನು ಕಾಣುವುದು ಮಕ್ಕಳ ಸ್ವಭಾವವಾಗಿದೆ. (ಚಾಲಕ ಗೊಂಬೆ, ಸ್ಟೇರಿಂಗ್–ಚಕ್ರ, ಬೆತ್ತ–ಖಡ್ಗ ಮೊದಲಾದವುಗಳು)

- ಸಂಭಾಷಣೆಗಳು ಸಹಜವಾಗಿರಬೇಕು.
- ಸಣ್ಣ ವಾಕ್ಯಗಳಲ್ಲಿ ಆಶಯವನ್ನು ಸ್ಪಷ್ಟಗೊಳಿಸಬೇಕು.
- ಪ್ರಾದೇಶಿಕವಾದ ಸಂಭಾಷಣಾ ರೀತಿ ಮಗುವಿಗೆ ಹೆಚ್ಚು ಇಷ್ಟವಾಗುವುದು.
- ಅಗತ್ಯಕ್ಕನುಸರಿಸಿ ಚಲನೆಯನ್ನು ಕ್ರಮಬದ್ಧಗೊಳಿಸಬೇಕು.
- ಹಿನ್ನಲೆ/ಸಂದರ್ಭಗಳನ್ನು ಸಿದ್ಧಗೊಳಿಸಿದರೆ ಉತ್ತಮ.
- ಸಂಗೀತೋಪಕರಣಗಳು/ರೆಕಾರ್ಡ್‌ಗಳು ಮೊದಲಾದವುಗಳನ್ನು ಉಪಯೋಗಿಸುವುದರಿಂದ ಗೊಂಬೆ ಆಟ ಹೆಚ್ಚು ರಸವತ್ತಾಗುವುದು.

ಒಂದು ಕತೆ ಹೇಳುವ ಸಂದರ್ಭದಲ್ಲಿ ಅಥವಾ ಕತೆಯನ್ನು ಮಂಡಿಸಿದ ನಂತರ ಒಂದು ಕಥಾಪಾತ್ರ ಮಾತ್ರ ಬಂದು ಹೇಳುವುದರಲ್ಲೋ, ಅಥವಾ ಕತೆಯ ಸಂಭಾಷಣಾ ಸಂದರ್ಭಗಳಿಗೆ ಬೇಕಾಗಿ ಗೊಂಬೆಯನ್ನು/ಗೊಂಬೆಯಾಟವನ್ನು ಉಪಯೋಗಿಸಿಕೊಳ್ಳಬಹುದು.

## ಸ್ಕ್ರಿಪ್ಟ್‌ನ ವಿಶೇಷತೆಗಳು

ಒಂದು ನಾಟಕವನ್ನು ಪ್ರದರ್ಶಿಸುವಾಗ ಆಶಯ ಸ್ಪಷ್ಟಪಡಿಸಲು ಯಾವೆಲ್ಲ ವಿಧದಲ್ಲಿ ಸಂಭಾಷಣೆಯನ್ನು ಉಪಯೋಗಿಸುತ್ತೇವೋ ಅಷ್ಟೇ ಗಮನ ಗೊಂಬೆಯಾಟದ ಸ್ಕ್ರಿಪ್ಟ್‌ನಲ್ಲೂ ಬೇಕಾಗಿದೆ. ಹಿನ್ನಲೆ, ಕಥಾಪಾತ್ರಗಳ ಚಲನೆ, ಸ್ಪಷ್ಟಭಾರ, ಆಶಯ ಸಂಪನ್ನತೆ ಮೊದಲಾದವುಗಳು ಗೊಂಬೆಯಾಟದ ಸ್ಕ್ರಿಪ್ಟ್ ತಯಾರಿಸುವಾಗ ಮತ್ತು ಮಂಡಿಸುವಾಗ ಅಧ್ಯಾಪಿಕೆಯ ಮನಸ್ಸಿನಲ್ಲಿರಬೇಕು.

ಉದಾಹರಣೆಗೆ ಸಿಂಹದ ಮತ್ತು ಇಲಿಯ ಕತೆ ಹೇಳುತ್ತಿರುವೆವು ಎಂದಿರಲಿ. ಇಲಿ ದೇಹಕ್ಕೆ ಬಂದು ಬಿದ್ದಾಗ ನಿದ್ದಿಸುತ್ತಿದ್ದ ಸಿಂಹವು ಬೆಚ್ಚಿ ಎಚ್ಚರಗೊಂಡಿತು. ಅಧ್ಯಾಪಿಕೆಯು ಕತೆಯನ್ನು ಇಲ್ಲಿ ನಿಲ್ಲಿಸಿ ಇಲಿಯ ಮತ್ತು ಸಿಂಹದ ಗೊಂಬೆ(pupet)ಗಳನ್ನು ಉಪಯೋಗಿಸಿ ಅವರ ನಡುವಿನ ಸಂಭಾಷಣೆಯನ್ನು ಹೇಳುತ್ತಾರೆ ಎಂದಿರಲಿ. (ಮಕ್ಕಳಿಗೆ ಗೊಂಬೆ ಕೊಟ್ಟು ಅವರನ್ನು ಸಂಭಾಷಣೆ

ರಚಿಸಲು ಪಾಲ್ಗೊಳ್ಳುವಂತೆ ಮಾಡಬುಹುದು.) ಸಿಂಹ ಏನು ಹೇಳಿರಬಹುದು? ಅದಕ್ಕೆ ಇಲಿ ಯಾವ ಉತ್ತರವನ್ನು ಕೊಟ್ಟಿರಬಹುದು? ಅಧ್ಯಾಪಿಕೆ ಕತೆ ಮುಂದುವರಿಸಿ ಹೇಳುತ್ತಾರೆ. ಹೀಗೆ ಕತೆ ಘಟನೆ ವಿವರಣೆ ಎಂಬಿವುಗಳನ್ನು ಪ್ರದರ್ಶಿಸುವ ಹಂತದಲ್ಲಿ ತಯಾರಿಸುವ ಸಕಾಲಿಕ ಸ್ಕ್ರಿಪ್ಟ್‌ಗಳ ಪ್ರದರ್ಶನಕ್ಕೆ ಗೊಂಬೆಗಳನ್ನು ಉಪಯೋಗಿಸಬೇಕು.

ಒಂದು ಕತೆಯನ್ನು ಮಂಡಿಸಿದ ನಂತರ ಕತೆಯಲ್ಲಿನ ಇಷ್ಟವಾದ ಸಂದರ್ಭಗಳನ್ನು ಪ್ರದರ್ಶಿಸಲು ಗೊಂಬೆಗಳನ್ನು ಉಪಯೋಗಿಸಬೇಕು. ಈ ಮೊದಲು ಸೂಚಿಸಿದ ಕತೆಯಲ್ಲಿ ಇಲಿ ಮತ್ತು ಸಿಂಹ ಏನೆಲ್ಲ ಹೇಳಿರಬಹುದೆಂದು ಕತೆಯ ನಂತರ ಅಧ್ಯಾಪಿಕೆಗೆ ಕೇಳಬಹುದು. ಅದನ್ನು ಇಬ್ಬರು ಮಕ್ಕಳು ಸೇರಿ ಮಂಡಿಸಲಿ. ಇಲ್ಲಿ ಸ್ಕ್ರಿಪ್ಟ್ ಕೆಲವೊಮ್ಮೆ ಮಕ್ಕಳು ಮಾತ್ರ ಅಥವಾ ಅಧ್ಯಾಪಿಕೆ ಮತ್ತು ಮಕ್ಕಳು ಸೇರಿ ತಯಾರಿಸಿರುವುದಾಗಿರಬಹುದು. ಇದು ಕೂಡ ಸಕಾಲಿಕವಾಗಿ ರೂಪುಗೊಳ್ಳುವ ಸ್ಕ್ರಿಪ್ಟ್ ಆಗಿರುವುದು.

ಕೆಲವು ಆಶಯಗಳನ್ನು ಮಕ್ಕಳಿಗೆ ತಲುಪಿಸಲು ಗೊಂಬೆಯಾಟಕ್ಕಿಂತ ಯೋಗ್ಯವಾದುದು ಬೇರೆ ಇಲ್ಲ ಎಂದರೂ ತಪ್ಪಲ್ಲ. ಉದಾಹರಣೆಗೆ ಸೊಳ್ಳೆಗಳ, ನೊಣಗಳ ಹಾಗೂ ಕೀಟಾಣುಗಳ ಕಾಟವನ್ನು ಗೊಂಬೆಗಳು ಮಕ್ಕಳಲ್ಲಿ ತಿಳಿಸುವ ರೂಪದಲ್ಲಾದರೆ ಅವರು ಹೆಚ್ಚು ವೇಗವಾಗಿ ಆಶಯವನ್ನು ಗ್ರಹಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಅಧ್ಯಾಪಿಕೆಯು ಉದ್ದೇಶ ಪೂರ್ವಕವಾಗಿ ಸಂಭಾಷಣೆಗಳನ್ನು ಬರೆದು ತಯಾರಿಸಬೇಕು.

ಚಿಟ್ಟೆ ತನ್ನ ಜೀವನದ ಕತೆ ಹೇಳುವುದು, ಹಾಲು ಕೊಡುವ ಪ್ರಾಣಿಗಳು, ಬೆಳಗೆದ್ದು ನಿತ್ಯಕರ್ಮಗಳನ್ನು ಮಾಡುವಂಥಹವುಗಳನ್ನೂ ಟೀಚರ್ ತಯಾರಿಸುವ ಸ್ಕ್ರಿಪ್ಟ್‌ನ ಮುಖಾಂತರ ಮಕ್ಕಳ ಎದುರಿನಲ್ಲಿ ಮಂಡಿಸಬಹುದಾಗಿದೆ. ನೆರಳು ಗೊಂಬೆ, ನೂಲು ಗೊಂಬೆ ಕೈ ಚೀಲ (gloves) ಗೊಂಬೆ ಎಂಬಿವುಗಳನ್ನು ಸಂಯೋಜಿಸಿ ನಡೆಸುವ ಗೊಂಬೆಯಾಟವು ಹೆಚ್ಚಿನ ಚಲನೆಗಳಿಗೂ ವಿಷಯಗಳನ್ನು ಉತ್ತಮ ರೀತಿಯಲ್ಲಿ ಮಂಡಿಸಲೂ ಸಹಾಯಕವಾಗಿವೆ.

## ಗೊಂಬೆಯಾಟದ ಸಂದರ್ಭಗಳು–ಕೆಲವು ಮಾದರಿಗಳು

### ಹೂ ಮತ್ತು ಚಿಟ್ಟೆ

ತೋಟದಲ್ಲಿ ಧಾರಾಳ ಹೂಗಳಿವೆ. ಒಂದು ಚಿಟ್ಟೆ ಹಾರಿ ಹಾರಿ ಬರುತ್ತಿದೆ.

ಹೂ : ಹಾಯ್ !ಚಿಟ್ಟೆ...ಏನು ವಿಶೇಷ?

ಚಿಟ್ಟೆ : ಇವತ್ತು ನೀನು ಬಹಳ ಸುಂದರಿಯಾಗಿರುವೆಯಲ್ಲ? ಒಳ್ಳೆಯ ಜೇನೂ ಇದೆ.

ಹೂ : ನಿನಗೆ ಎಲ್ಲಾ ಕಡೆ ಹಾರಿ ಸುತ್ತಾಡಬಹುದಲ್ಲವೇ? ನೀನು ನೋಡಿದ ದೃಶ್ಯಗಳು ಏನೆಲ್ಲ ಎಂದು ಹೇಳಬಹುದೇ?

ಚಿಟ್ಟೆ : ನಾನು ದೂರದ ಬೆಟ್ಟದಿಂದ ಇಳಿದು ಬರುವಾಗ ಹಲವು ಹೂಗಳನ್ನು ನದಿಗಳನ್ನೂ ಕಂಡೆ

ಹೂ : ಭಾಗ್ಯವಂತನೇ ಸರಿ!

ಚಿಟ್ಟೆ : ಇಲ್ಲಿ ಕುಳಿತಿರುವ ನಿನ್ನನ್ನು ಕಾಣಲು ತುಂಬ ಜನ ಬರುತ್ತಿದ್ದರಲ್ಲಾ. ದುಂಬಿ, ಇರುವೆ ಜೇನುನೊಣ...... ಎಷ್ಟೊಂದು ಜನ. ನೀನು ಕೂಡಾ ಭಾಗ್ಯವತಿ ಅಲ್ಲವೇ?

ಹೂ : ನೀನು ಹೇಳಿದ್ದು ಸರಿ ನನ್ನನ್ನು ನೋಡಲು ಹಲವು ಮಕ್ಕಳೂ ಬರುತ್ತಾರೆ.

### ಗಾಳಿ ಮತ್ತು ಮೋಡ

ಮಗುವಿನ ಮತ್ತು ತಾಯಿಯ gloves pupet (ಕೈಚೀಲ ಬೊಂಬೆ)

ಗಿಳಿಗಳ ಶಬ್ದ, ಗಾಳಿ ಬೀಸುತ್ತಿದೆ. (ತೂಗು ಹಾಕಿದ ಎಲೆಗಳು ತೋರಣಗಳೂ ಚಲಿಸುವ ರೀತಿಯಲ್ಲಿ ಫ್ಯಾನ್ ನಿಂದಲೋ ಕಾರ್ಡ್ ಬೋರ್ಡ್ ನಿಂದಲೋ ಗಾಳಿ ಬೀಸುವಂತೆ ಮಾಡಬಹುದು.)

ರಾಮು ಆಕಳಿಸುತ್ತಾ ರಂಗ ಪ್ರವೇಶ ಮಾಡುವನು.

ರಾಮು : ಗಾಳಿ ಬೀಸುತ್ತಿದೆಯಲ್ಲಾ. ಇವತ್ತು ಬೆಳಿಗ್ಗೆಯೇ ಗಾಳಿ ಆರಂಭವಾಯಿತೇ(ಮೇಲೆ ನೋಡುತ್ತಾ) ಆಕಾಶ ಕಪ್ಪು ಬಣ್ಣವಾಗಿದೆ ಅಮ್ಮಾ...... ಅಮ್ಮಾ......

ಅಮ್ಮ: (ಶಬ್ದ ಮಾತ್ರ) : ಏನು ಮಗು.. ನೀನು ಹಲ್ಲು ಉಜ್ಜಿ ಸ್ನಾನ ಮಾಡುವುದಿಲ್ಲವೇ?

ಅಮ್ಮ ಮೆಲ್ಲನೆ ರಂಗ ಪ್ರವೇಶ ಮಾಡುತ್ತಾಳೆ.

(ಹಿನ್ನಲೆಯಲ್ಲಿ ಗಾಳಿ ಮತ್ತು ಗುಡುಗಿನ ಶಬ್ದ ಕೇಳಲಿ)



ರಾಮು : ಅಮ್ಮ... ನಾನು ಎದ್ದು ಬಂದಾಗ ಸೂರ್ಯನನ್ನು ಕಾಣುವುದಿಲ್ಲ ಎಲ್ಲಿಗೆ ಹೋಯಿತು?

ಅಮ್ಮ : ಮಗು ಇವತ್ತು ಬೆಳಿಗಿನಿಂದಲೇ ಮಳೆಯೆಂದು ತೋರುತ್ತದೆ. ನೀನು ಬೇಗ ಹೋಗಿ ಹಲ್ಲುಜ್ಜಿ ಸ್ನಾನ ಮಾಡು. ನಾನು ಒಳಗೆ ಹೋಗುತ್ತೇನೆ.

ರಾಮು : ಬೇಡ ಅಮ್ಮಾ.... ಮೊದಲು ಆಕಾಶ ಯಾಕೆ ಕಪ್ಪಾಯಿತು ಎಂದು ಹೇಳಮ್ಮ

## ಸಂಭಾಷಣೆಯನ್ನು ಮಂಡಿಸುವಾಗ ಯಾವುದನ್ನೆಲ್ಲಾ ಗಮನಿಸಬೇಕು?

- ಭಾವವನ್ನು ಅರ್ಥೈಸಿರುವುದು
- ಶಬ್ದ ಕ್ರಮೀಕರಣ
- ಗೊಂಬೆಗಳ ಚಲನೆ
- 

ಸಿಂಹವನ್ನು ಬಾವಿಗೆ ಹಾರಿಸಿದ ಮೊಲದ ಕಥೆ ಕೇಳಲಿಲ್ಲವೇ? ಹೆದರಿ ನಡುಗುತ್ತಾ ಬರುವ ಮೊಲವನ್ನು ಕಂಡು ಕೋಪದಿಂದ ಗುಡುಗುವ ಸಿಂಹ. ಅವರ ನಡುವಿನ ಸಂಭಾಷಣೆ ನೋಡಿ

ಸಿಂಹ : ಎಲ್ಲಿಗೆ ಹೋಗಿದ್ದೆ ನೀನು ಇಷ್ಟು ಹೊತ್ತು? ಗುರ್....

ಮೊಲ : ಅಯ್ಯೋ ನಾನು ಬರುವ ದಾರಿಯಲ್ಲಿ...

ಸಿಂಹ : ದಾರಿಯಲ್ಲಿ ಏನಿತ್ತು ಹೇಳು?

ಮೊಲ : ಇನ್ನೊಂದು ಸಿಂಹ.... ನನ್ನನ್ನು ಅಡ್ಡಗಟ್ಟಿತು.

ಸಿಂಹ : ಇನ್ನೊಂದು ಸಿಂಹವೇ?...... ಅವನೆಲ್ಲಿ?

ಮೊಲ : ಆ ಬಾವಿಯ ಹತ್ತಿರ

ಸಿಂಹ : ಓಹೋ..... ಅವನನ್ನು ಇವತ್ತು ನಾನು ಸರಿ ಮಾಡುವೆ!



ಕ್ರೂರಿಯಾದ ಸಿಂಹದ ಸ್ವಭಾವವನ್ನು ಪ್ರತಿಫಲಿಸುವ ರೀತಿಯಲ್ಲಿರಬೇಕು ಶಬ್ದವು ಸಾಧುವಾದ ಮೊಲದ ಸಂಭಾಷಣೆಯಲ್ಲಿ ವಿನಯ ಮತ್ತು ಹೆದರಿಕೆಯೂ ಪ್ರತಿಫಲಿಸಬೇಕು. ಹೀಗೆ ಶಬ್ದ ಭಾವ ವ್ಯತ್ಯಾಸದೊಂದಿಗಿನ ಮಂಡನೆ ಕೇಳುವ ಮಗುವಿಗೆ ಮಂಡನೆಯಲ್ಲಿ ತರಬೇಕಾಗಿರುವ ಬದಲಾವಣೆ ಮನವರಿಕೆಯಾಗಬಹುದು. ಸಂಭಾಷಣೆಗಳನ್ನು ಕಂಠಪಾಠ ಮಾಡಿ ಮಂಡಿಸುವುದಾಗಿರಬಾರದು ನಮ್ಮ ಗುರಿ. ಕಥಾ ಸಂದರ್ಭವನ್ನು ಅರ್ಥೈಸಿ ಸ್ವಂತ ಭಾಷೆಯಲ್ಲಿ ಸಂಭಾಷಣೆಯನ್ನು ಮಂಡಿಸಬೇಕಾಗಿದೆ. ಈ ರೀತಿಯಲ್ಲಿ ಭಾಷಾ ಪರವಾದ ಬೆಳವಣಿಗೆಯ ಮೌಲ್ಯಮಾಪನ ನಡೆಯಬೇಕಾಗಿರುವುದು.

## ಗೊಂಬೆಯಾಟಕ್ಕಿರುವ ಸ್ಕ್ರಿಪ್ಟ್‌ಗಳನ್ನು ತಯಾರಿಸುವಾಗ.....

- ಒಂದು ಸಂದರ್ಭ (ಘಟನೆಗಳನ್ನೂ ಆಶಯಗಳನ್ನೋ ಸೇರಿಸಿ ಕೊಂಡು)
- ಕಥಾಪಾತ್ರಗಳ ಪ್ರಾಯ, ಲಿಂಗ, ವೇಷ ಎಂಬಿವುಗಳನ್ನು ಪರಿಗಣಿಸಬೇಕು.
- ಸೂಕ್ತವಾದ ಸಂಭಾಷಣೆ ತಯಾರಿಸುವುದು.
- ಸೂಕ್ತವಾದ ಹಿನ್ನಲೆಯ ಪರಿಕಲ್ಪನೆ ಮಾಡುವುದು.

**ಬೊಂಬೆಯಾಟ ಪ್ರದರ್ಶನದಲ್ಲಿ ಯಾವೆಲ್ಲ ವಿಷಯಗಳನ್ನು ಮೌಲ್ಯಮಾಪನ ಮಾಡಬೇಕು?**

- ಭಾವನೆ, ಸೂಕ್ತವಾದ ಸ್ವರ ಭಾರ, ಎಂಬಿವುಗಳೊಂದಿಗೆ ಇರುವ ಮಂಡನೆ.
- ಉಚ್ಚಾರಣೆಯಲ್ಲಿ ಸ್ಪಷ್ಟತೆ, ಸ್ಫುಟತೆ
- ಬೊಂಬೆಗಳನ್ನು ಸಂದರ್ಭಾನುಸಾರವಾಗಿ ಚಲಿಸುವಂತೆ ಮಾಡಲು ಇರುವ ಸಾಮರ್ಥ್ಯ.
- ಒಂದು ಕಥಾ ಪಾತ್ರದ ಸಂಭಾಷಣೆ ಪೂರ್ತಿಗೊಳಿಸಿದ ಬಳಿಕ ಮಾತ್ರವೇ ಮುಂದಿನ ಕಥಾಪಾತ್ರ ಮಾತನಾಡಿರುವುದು?
- ತನ್ನದೇ ಆದ ಭಾಷೆಯಲ್ಲಿ ಸೂಕ್ತವಾದ ಪದಗಳನ್ನು ಸೇರಿಸಿ ಸಂಭಾಷಣೆ ಮಂಡಿಸಲು ಸಾಧ್ಯವಾಗಿದೆಯೇ?

## ಗೊಂಬೆಗಳು ಗೊಂಬೆಗಳು

ಭಾವನಾತ್ಮಕ ದೃಷ್ಟಿಯಿಂದ ಕೂಡಿದ ಅಧ್ಯಾಪಿಕೆಗೆ ಯಾವುದೇ ಒಂದು ವಸ್ತುವನ್ನು ಗೊಂಬೆಯಾಗಿ ಬದಲಾಯಿಸಲು ಸಾಧ್ಯ. ಉದಾ: ಪ್ಲಾಸ್ಟಿಕ್ ಬಾಟ್ಲಿಗಳು, ಪೇಪರ್ ಗ್ಲಾಸುಗಳು, ಕೊಡೆಗಳು, ಬೆಂಕಿಪೆಟ್ಟಿಗೆಗಳು, ಖಾಲಿಡಬ್ಬ, ಖಾಲಿಯಾದ ಮದ್ದಿನ ಬಾಟ್ಲಿಗಳು, ಕೋಲಿನ ತುಂಡುಗಳು ಗೆರಟೆ, ಕಪ್‌ಗಳು, ಐಸ್‌ಕ್ರೀಮ್ ಬಾಲ್‌ಗಳು, ತೆಂಗಿನ ಸಿಪ್ಪೆ, ಎಲೆಗಳು, ಕಾರ್ಡ್‌ಬೋರ್ಡ್, ದಪ್ಪವಾದ ಪೇಪರಿನ ತುಂಡುಗಳು, ವಾರ್ತಾಪತ್ರಿಕೆಗಳು ಮೊದಲಾದವುಗಳನ್ನು ಬೊಂಬೆ ನಿರ್ಮಾಣಕ್ಕೆ ಉಪಯೋಗಿಸಬೇಕು.

ಮಕ್ಕಳ ಅಗತ್ಯಗಳು ಮತ್ತು ಸ್ವಭಾವವನ್ನು ಅರ್ಥಮಾಡಿಕೊಳ್ಳುವ ಒಬ್ಬ ವ್ಯಕ್ತಿ ಎಂಬ ನೆಲೆಯಲ್ಲಿ ಅವರ ಅಗತ್ಯಗಳನ್ನು ನೆರವೇರಿಸುವ ರೀತಿಯಲ್ಲಿ ಬಹಳ ಸರಳವಾದ ಗೊಂಬೆಗಳನ್ನು ನಿರ್ಮಿಸುವುದು ಉತ್ತಮ. ನಿರ್ಮಾಣ ಪ್ರಕ್ರಿಯೆಯಲ್ಲಿ ಮಕ್ಕಳನ್ನು ಕೂಡಾ ಪಾಲ್ಗೊಳ್ಳಿಸಿಕೊಂಡು ಸಹಕಾರ ಮನೋಭಾವವನ್ನು ಬೆಳೆಸುವ ರೀತಿಯಲ್ಲಿ ಮಾಡುವುದು. ಅವರಲ್ಲಿ ಆತ್ಮ ವಿಶ್ವಾಸವನ್ನು ಬೆಳೆಸಲು ಸಹಕಾರಿಯಾಗಿದೆ.

ಯಾವುದಾದರೂ ಕೆಲವು ಗೊಂಬೆಗಳನ್ನು ಪರಿಚಯ ಮಾಡಿ ಕೊಳ್ಳೋಣ.

### ಬೆಂಕಿಪೆಟ್ಟಿಗೆ ಗೊಂಬೆ

ಖಾಲಿಯಾದ ಬೆಂಕಿಪೆಟ್ಟಿಗೆಯನ್ನು ತೆಗೆದು



ಬಿಳಿಕಾಗದದಿಂದ ಮುಚ್ಚಿ ಒಂದು ಕೋಲು ಅಥವಾ ಮಡಲುಕಡ್ಡಿ ಅಂಟಿಸಿ ಕೋಲು ಗೊಂಬೆಯನ್ನು ತಯಾರಿಸುವ. ಅಗತ್ಯವಿರುವ ಮುಖದ ಚಿತ್ರವನ್ನು ರಚಿಸಿ, ಅಥವಾ ಅಂಟಿಸಿ, ಗೊಂಬೆ ತಯಾರಿಸಬಹುದು.

### ಹಗ್ಗದ ಗೊಂಬೆ

ಕೋಟನ್ ವೇಸ್ಟ್‌ನ ಸ್ವಲ್ಪ ನೂಲು (ಒಂದು ಅಡಿ ಉದ್ದ) ದಪ್ಪದಲ್ಲಿ ತೆಗೆಯಬೇಕು. ಅದನ್ನು ಎರಡಾಗಿ ಮಡಚಿ ಒಂದು ಭಾಗವನ್ನು ತಲೆಯ ಆಕೃತಿಯಂತೆ ಕಟ್ಟಬೇಕು.

ಉಳಿದ ಭಾಗವನ್ನು ಕೈ, ಎದೆ, ಕಾಲುಗಳು ಎಂಬಿವುಗಳನ್ನಾಗಿ ಮಾಡಿ ಅಗತ್ಯಕ್ಕೆ ಅನುಸರಿಸಿ ಕಟ್ಟಿ ಗೊಂಬೆ ಮಾಡಬಹುದು.

### ಪ್ಲಾಸ್ಟಿಕ್ ಬಾಟ್ಲಿ

ಖಾಲಿ ಬಾಟ್ಲಿಯನ್ನು ತುಂಡರಿಸಿ, ಮಾಡಿ ಪ್ರಾಣಿಗಳ ಆಕೃತಿ ತಯಾರಿಸಿ ಮೇಲ್ಭಾಗದಲ್ಲಿ ಪೇಪರನ್ನು ಅಂಟಿಸಿ ಗೊಂಬೆ ಮಾಡಬಹುದು. ಮನುಷ್ಯರ ಮತ್ತು ಪ್ರಾಣಿಗಳ ತಲೆಯನ್ನು ಕೂಡಾ ಬಾಟ್ಲಿಯಿಂದ ತಯಾರಿಸಬಹುದು.

### ಪೇಪರ್ ಗ್ಲಾಸು

ಪೇಪರ್ ಗ್ಲಾಸು, ಬೊಟ್ಟುಗಳು, ಕೋಲುಗಳು ಮೊದಲಾದವುಗಳನ್ನುಪಯೋಗಿಸಿ ವಿವಿಧ ರೀತಿಯ ಬೊಂಬೆಗಳನ್ನು ನಿರ್ಮಿಸಬಹುದು.

### ಕಾಗದದ ಕವರಿನ ಗೊಂಬೆ

ಒಂದು ಕಾಗದ ಕವರನ್ನು ತೆಗೆದು ಬೇಡದ ವಸ್ತುಗಳಿಂದ ತುಂಬಿಸಬೇಕು. ಒಂದು ಮುಖದ ಚಿತ್ರವನ್ನು ಬಿಡಿಸಿ ಬಣ್ಣ ಕೊಡುವುದೋ ಅಥವಾ ಮುಖಕ್ಕೆ ಕಣ್ಣು, ಬಾಯಿ, ಮೂಗು ಎಂಬಿವುಗಳಿಗೆ ಬಣ್ಣದ ಕಾಗದವನ್ನು ಕತ್ತರಿಸಿ ಅಂಟಿಸುವುದೋ ಮಾಡಬಹುದು. ಇದೆಲ್ಲವೂ ದೊಡ್ಡದಾಗಿರಬೇಕು. ಹಾಗಾದರೆ ಮಾತ್ರ ಗೊಂಬೆಗಳು ಅಂದವಾಗಿ ಉತ್ತಮವಾಗಿರಬಹುದು. ಕಾಗದದ ಕವರಿನ ಕೆಳಗಿನ ಭಾಗದಿಂದ ಒಂದು ಕೋಲನ್ನು ಜಾರಿಹೋಗದ ರೀತಿಯಲ್ಲಿ ಒಳಗೆ ತುರುಕಿಸಿ ಗಟ್ಟಿಯಾಗಿ ಕಟ್ಟಬೇಕು. ಕೋಲು ಅಥವಾ ಬಿದಿರು, ಯಾವುದೂ ಸಿಗದಿದ್ದರೆ ಕಾಗದವನ್ನೇ ಸುತ್ತಿ ಕೋಲಿನಂತೆ ಮಾಡಿ ಅಂಟಿಸಬಹುದು. ಈ ರೀತಿ ಹಳೆಯ ಡಬ್ಬಗಳು, ಪೇಪರು ತಟ್ಟೆಗಳು, ದಪ್ಪದ

ಕಾರ್ಡ್‌ಬೋರ್ಡ್ ಮೊದಲಾದವುಗಳಿಂದ ಗೊಂಬೆ ತಯಾರಿಸಬಹುದು.

**ಚೆಂಡಿನ ಗೊಂಬೆ**

ಹಳೆಯ ಒಂದು ರಬ್ಬರ್ ಚೆಂಡನ್ನು ತೆಗೆದುಕೊಂಡು ಬಣ್ಣದ ಸಹಾಯದಿಂದ ಒಂದು ಮುಖದ ಚಿತ್ರವನ್ನು ಮಾಡಬೇಕು. ಅದರ ಕೆಳಗೆ ಒಂದು ತೂತು ಮಾಡಿ, ಅದರೊಳಗೆ ಒಂದು ಕೋಲನ್ನು ತುರುಕಿಸಿ ಗೊಂಬೆಯನ್ನು ತಯಾರಿಸಬಹುದು. ಒಂದು ರಬ್ಬರ್ ಚೆಂಡಿನ ಬದಲು ಸಣ್ಣ ಬಟ್ಟೆಯ ಚೀಲದಲ್ಲಿ ಹಳೆಯ ಬಟ್ಟೆಗಳನ್ನು ತುಂಬಿಸಿಯೂ ಉಪಯೋಗಿಸಬಹುದು. ಅಲ್ಲದಿದ್ದರೆ ಗರಟೆಯನ್ನೋ, ಪ್ಲಾಸ್ಟಿಕ್ ಬಾಟ್ಲಿಯನ್ನೋ ಉಪಯೋಗಿಸಬಹುದು. ಗೊಂಬೆಯ ಉಡುಪಿಗೆ ಬಟ್ಟೆಯಿಂದ ಹೊದಿಕೆಯನ್ನು ಹೊಲಿದು ಮೇಲ್ಭಾಗದಲ್ಲಿ ಒಂದು ತೂತು ಮಾಡಬೇಕು. ಕೋಲನ್ನು ಅದರ ಮೂಲಕ ನುಗ್ಗಿಸಿ ತಲೆಯ ಕೆಳಗೆ ಬರುವಂತೆ ಗಟ್ಟಿ ಮಾಡಿ ನಿಲ್ಲಿಸಬೇಕು.

**ಬೆರಳು ಗೊಂಬೆ**

a. ನಿಮ್ಮ ಹೆಬ್ಬೆರಳಿನಲ್ಲಿ ಪೆನ್ನು ಅಥವಾ ಪೆನ್ಸಿಲ್‌ನಿಂದ ಮುಖದ ಚಿತ್ರವನ್ನು ಬಿಡಿಸಿ ಬಟ್ಟೆಯನ್ನು ಮುಚ್ಚಿದರೆ ಬೆರಳು ಗೊಂಬೆ ರೆಡಿ. ಎರಡು ಕೈಗಳ ಹೆಬ್ಬೆರಳಿನ ಗೊಂಬೆಗಳು ಸಂಭಾಷಣೆ ನಡೆಸಲು ಎಷ್ಟು ರಸವತ್ತಾಗಿದೆ.

   "ಹೆಬ್ಬೆರಳೆಲ್ಲಿ? ಹೆಬ್ಬೆರಳೆಲ್ಲಿ?
   ಇಲ್ಲಿರುವೆ...ಇಲ್ಲಿರುವೆ...
   ಹೇಗಿರುವೆಯಯ್ಯಾ... ಹೇಗಿರುವೆಯಯ್ಯಾ
   ಚೆನ್ನಾಗಿದ್ದೇನಯ್ಯಾ...ಚೆನ್ನಾಗಿದ್ದೆನೆಯ್ಯಾ
   ಹಿಂದಕ್ಕೋಡು, ಹಿಂದಕ್ಕೋಡು"

   ಮೊದಲಾದ ಪದ್ಯಗಳನ್ನು ಹಾಡುವಾಗ ಈ ರೀತಿಯ ಬೆರಳು ಗೊಂಬೆಗಳನ್ನು ಉಪಯೋಗಿಸುವುದರಿಂದ ತರಗತಿಯನ್ನು ಬಹಳ ಆಕರ್ಷಕಗೊಳಿಸಬಹುದು.

b. ಚೌಕಾಕಾರದ ಕಾಗದವನ್ನು ಬೆರಳಿಗೆ ಹೊಂದಿಕೆಯಾಗುವಂತೆ ಕೋನ್ ಆಕಾರದಂತೆ ಮಾಡಿ ಅದರ ಮೇಲೆ ಚಿತ್ರಗಳು/ಮುಖಗಳು/ರೂಪಗಳನ್ನು ಅಂಟಿಸಿ ಬೆರಳು ಗೊಂಬೆಗಳನ್ನು ತಯಾರಿಸಬಹುದು.

c. ಉಂಗುರದಂತೆ ಬೆರಳಿಗೆ ಹಾಕುವ ರೀತಿಯಲ್ಲಿ ಚಾರ್ಟ್ ಪೇಪರನ್ನು ಕತ್ತರಿಸಿ ಚಕ್ರದಂತೆ ಮಾಡಿ ಅದರ ಮೇಲೆ ಚಿತ್ರಗಳು/ರೂಪಗಳು ಅಂಟಿಸಿ ಬೆರಳು ಗೊಂಬೆಗಳನ್ನು ನಿರ್ಮಿಸಬಹುದು.

**ಗೊಂಬೆಗಳು**

ಇದು ಪ್ರಾಣಿಗಳ ಗೊಂಬೆಯನ್ನು ತಯಾರಿಸಲು ಸೂಕ್ತವಾದ ರೀತಿಯಾಗಿದೆ. ಒಂದು ಪ್ರಾಣಿಯ ರೂಪವನ್ನು ಕಾರ್ಡ್ ಬೋರ್ಡಿನಲ್ಲಿ ಬಿಡಿಸಿ ಅದಕ್ಕೆ ಬಣ್ಣ ಕೊಟ್ಟು ಕಣ್ಣು ಮತ್ತು ಮೂಗನ್ನು ಬಿಡಿಸಬೇಕು. ಹಿಂಭಾಗದಲ್ಲಿ ಭಾರ ಕಡಿಮೆಯಿರುವ ಒಂದು ಕೋಲನ್ನು ಅಂಟು, ಸೆಲ್ಲೋಟೋಪ್ ಉಪಯೋಗಿಸಿ ಅಂಟಿಸಬೇಕು. ಪೇಪರ್ ತಟ್ಟೆ ಮೊದಲಾದವುಗಳನ್ನು, ಉಪಯೋಗಿಸಿ ಈ ರೀತಿಯಲ್ಲಿ ಗೊಂಬೆಗಳನ್ನು ಮಾಡಬಹುದು. (ಮೃಗಗಳ ಚಿತ್ರವನ್ನು ಕತ್ತರಿಸಿ ತೆಗೆದೂ ಈ ರೀತಿಯ ಗೊಂಬೆಗಳನ್ನು ತಯಾರಿಸಬಹುದು.

**ಎಕ್ಸ್‌ರೇ ಫೀಲಿಂ/ಚಾರ್ಟ್ ಪೇಪರ್**

ಎಕ್ಸ್‌ರೇ ಫೀಲಿಂ ಕೋನ್ ಆಕೃತಿಯಲ್ಲಿ ಮಡಚಿ ಅಗತ್ಯವಿರುವ ಮೃಗಗಳ ಮುಖವನ್ನು ತಯಾರಿಸಬಹುದು. ಕೋನಿನ ಅಗಲವನ್ನು ಕ್ರಮೀಕರಿಸಿಕೊಂಡು ಪ್ರಾಣಿಯ ರೂಪವನ್ನಾಗಿ ಮಾಡಬಹುದು. ಕೋನನ್ನು ಪಿನ್ ಚುಚ್ಚಿ ಗಟ್ಟಿ ಮಾಡಿದ ನಂತರ ಅಂಟಿಸಿ ಅಂದಗೊಳಿಸಬಹುದು. ಕೋನದ ಒಳಗಿನಿಂದ ಕೈ ಹಾಕಿ ಹಿಡಿದು ಅಥವಾ ಕೋಲನ್ನು ಉಪಯೋಗಿಸಿ ಈ ಗೊಂಬೆಯನ್ನು ಚಲಿಸುವಂತೆ ಮಾಡಬಹುದು. ಎಕ್ಸ್‌ರೇ ಫಿಲೀಂ ಇಲ್ಲದಿದ್ದರೆ ಚಾರ್ಟು ಪೇಪರಿನಿಂದ ಕೂಡಾ ಇವುಗಳನ್ನು ತಯಾರಿಸಬಹುದು.

**ಒರಿಗಾಮಿ ಗೊಂಬೆ**

ಒರಿಗಾಮಿ ರೂಪಗಳನ್ನು ತಯಾರಿಸಿ ಗೊಂಬೆಗಳಾಗಿ ಉಪಯೋಗಿಸಬಹುದು. ಉದಾ: ಕಾಗೆ, ನವಿಲು, ಹಂಸ, ಮೀನು, ಕಪ್ಪೆ ಮೊದಲಾದವುಗಳು.

ಇವುಗಳಲ್ಲದೆ ತರಗತಿ ಕೋಣೆಯಲ್ಲಿ ಉಪಯೋಗಿಸಲು ಸಾಧ್ಯವಿರುವ ಇತರ ವಿವಿಧ ತರದ ಗೊಂಬೆಗಳಿವೆ. ಅಧ್ಯಾಪಕರ ಸಂಗಮ ಸಮಯದಲ್ಲಿ ಈ ರೀತಿಯ ಗೊಂಬೆಗಳನ್ನು ತಯಾರಿಸುವ ತರಬೇತಿ ಶಿಬಿರಗಳನ್ನು ಹಮ್ಮಿಕೊಂಡರೆ ನಮ್ಮ ಸಾಮರ್ಥ್ಯಗಳನ್ನು ಕೂಡಾ ಹೆಚ್ಚಿಸಬಹುದಲ್ಲವೇ.

# ಆಟ

## ಗೂಡಿಲ್ಲದ ಅಳಿಲೇ ಓಡಿ ಬಾರೋ



## ಸ್ನೇಹವೇ ಭಾಷೆ ಆಟವೇ ವಿಧಾನ

ಇದು ಪ್ರಿಸ್ಕೂಲ್ ಕಲಿಕೆಯ ರೀತಿಯ ಕುರಿತು ಬಹಳ ಸೂಕ್ತವಾದ ಹೇಳಿಕೆಯಾಗಿದೆ. ಆಟವು ಪ್ರಿಸ್ಕೂಲ್ ಚಟುವಟಿಕೆಗಳ ಜೀವನಾಡಿಯಾಗಿದೆ. ಆಟವಾಡುವುದು ಮಕ್ಕಳ ನೈಸರ್ಗಿಕ ಅಭಿರುಚಿಯಾಗಿದೆ. ಆಟದ ಮೂಲಕ ಕಲಿಕೆಯನ್ನು ಮಕ್ಕಳು ಹೆಚ್ಚು ಇಷ್ಟಪಡುತ್ತಾರೆ. "ಪುಟ್ಟ ಮಕ್ಕಳಿಗೆ ಸಂಬಂಧಿಸಿದಂತೆ ಅವರು ಸಹಜವಾಗಿ ತೊಡಗಿಸಿಕೊಳ್ಳುವ ಯಾವುದೇ ಚಟುವಟಿಕೆಯು ಆಟವೇ ಆಗಿದೆ". ಎಂದು ಗಾಂಧೀಜಿಯವರು ಅಭಿಪ್ರಾಯಪಟ್ಟಿರುವುದು ಈ ಕಾರಣದಿಂದಲೇ ಆಗಿದೆ. ಆಟ ಎಂದು ನಾವು ಹೇಳುವುದಿದ್ದರೂ ಮಕ್ಕಳಿಗೆ ಸಂಬಂಧಿಸಿ ಅದು ಪ್ರಧಾನವುಳ್ಳ ಚಟುವಟಿಕೆಯೇ ಆಗಿದೆ. ಈ ಮೂಲಕ ಮಗುವಿಗೆ ಅರಿವಿಲ್ಲದೆಯೇ ಜ್ಞಾನ ಸಂಪಾದನೆ ನಡೆಯುತ್ತದೆ.

ರತ್ತೋ ರತ್ತೋ
ರಾಯನ ಮಗಳೆ
ಬಿತ್ತೋ ಬಿತ್ತೋ
ಭೀಮನ ಮಗಳೆ

ಗೆಳೆಯರೊಂದಿಗೆ ತಾಳಬದ್ಧವಾಗಿ ಹಾಡಿ ಆಟವಾಡಲು ಮಕ್ಕಳಿಗೆ ಬಹಳ ಇಷ್ಟವಾಗುವುದು.

*ರತ್ತೋ ರತ್ತೋ ರಾಯನ ಮಗಳೆ, ಕಣ್ಣಾ ಮುಚ್ಚೋ ಕಾಡೇ ಗೂಡೇ, ಟೊಪ್ಪಿ ಬೇಕೆ ಟೊಪ್ಪಿ.*

ಇತ್ಯಾದಿ ಆಟಗಳನ್ನೆಲ್ಲಾ ಮಕ್ಕಳು ಆಸಕ್ತಿಯಿಂದ ಆಡುವುದನ್ನು ನೀವು ನೋಡಿದರಲ್ಲವೇ?

## ಮಗುವಿನ ವಿಕಾಸ ಮಂಡಲಗಳೂ, ಆಟಗಳೂ...

ಆಟಗಳು ಶಾರೀರಿಕ ಚಲನಾತ್ಮಕ ವಿಕಾಸಕ್ಕಿರುವ ಅತೀ ಪ್ರಧಾನ ಚಟುವಟಿಕೆಯಾಗಿದೆ. ಶಾರೀರಿಕ ಚಲನಾತ್ಮಕ ವಿಕಾಸಕ್ಕೆ ಹೊರತಾಗಿ ಭಾಷಾ ವಿಕಾಸ, ವೈಜ್ಞಾನಿಕ ವಿಕಾಸ, ಗಣಿತ ಪೂರ್ವ ಸಾಮರ್ಥ್ಯ ವಿಕಾಸ, ಸಾಮಾಜಿಕ, ಭಾವನಾತ್ಮಕ ವಿಕಾಸ ಇತ್ಯಾದಿ ಮಂಡಲಗಳಲ್ಲಿ ಆಟದ ಚಟುವಟಿಕೆಗಳಿಗೆ ಬಹಳ ಪ್ರಾಧಾನ್ಯವಿದೆ. ಪದ್ಯ ಹಾಡುತ್ತಾ ಆಡುವ ಆಟಗಳು, ಪ್ರಶ್ನೋತ್ತರಗಳನ್ನು ಹೇಳುವ ಆಟಗಳು (ಪ್ರಶ್ನೆ ಕೇಳುವುದು–ಉತ್ತರ ಹೇಳುವುದು) ಎಂಬಿವುಗಳು ಭಾಷಾ ವಿಕಾಸಕ್ಕೆ ಮಕ್ಕಳಿಗೆ ಸಹಜವಾದ ಸಂದರ್ಭಗಳನ್ನು ಒದಗಿಸುತ್ತದೆ. ಜಿಗ್ಸೋ ಪಸ್‌ಲ್‌ಗಳು, ತಾರ್ಕಿಕವಾಗಿ ಚಿಂತಿಸಿ ಗೆಲುವು ಸಾಧಿಸುವ ಆಟಗಳು ಎಂಬಿವುಗಳ ಹಾಗೆ ವೈಜ್ಞಾನಿಕ ವಿಕಾಸಕ್ಕೆ ಸಹಕಾರಿಯಾಗುವ, ಬೇರೆ ಯಾವ ಚಟುವಟಿಕೆಗಳಿವೆ? ಸಾಮಾಜಿಕ–ಭಾವನಾತ್ಮಕ ವಿಕಾಸವನ್ನು ದೃಢಗೊಳಿಸಲು ಧಾರಾಳ ಸಂದರ್ಭಗಳು ಮಕ್ಕಳಿಗೆ ಲಭಿಸುತ್ತದೆ ಎಂಬುದನ್ನು ನಾವು ಮರೆಯಬಾರದು. ಆಟಿಕೆಗಳ ತಯಾರಿ ಎನ್ನುವುದು ಕ್ರಿಯಾತ್ಮಕವೂ, ಸೃಜನಾತ್ಮಕವೂ ಚಟುವಟಿಕೆಯಾಗಿ ಬದಲಾಗತ್ತದಲ್ಲವೇ.

## 3+,4+ ವಯೋಮಟ್ಟದ ಗುಂಪುಗಳೂ ಆಟಗಳೂ

ಆಟಗಳಲ್ಲಿ ತೊಡಗಿಸಿಕೊಳ್ಳುವಾಗ 3+, 4+ ವಯೋಮಟ್ಟದ ಗುಂಪಿನ ಮಕ್ಕಳಿಗೆ ಇತರ ಮಂಡಲಗಳ ಚಟುವಟಿಕೆಗಳಂತೆ ಕಷ್ಟ ಎದುರಿಸಬೇಕಾಗುವುದಿಲ್ಲ ಎನ್ನುವುದು ಆಟ ಚಟುವಟಿಕೆಗಳ ಹಿರಿಮೆಯಾಗಿದೆ. ಆಟದಲ್ಲಿ ತೊಡಗಿಸಿಕೊಳ್ಳುವಾಗ ಅನುಭವಿಸುವ ಸಂತೋಷ ಪರಸ್ಪರ ಸಂತೈಸುವಿಕೆ. ಅಭಿನಂದಿಸುವುದು ಎಂಬಿವುಗಳೆಲ್ಲವೂ ಭಾವನಾತ್ಮಕ ವಿಕಾಸಕ್ಕಿರುವ ಪ್ರಾಯೋಗಿಕ ಸಂದರ್ಭಗಳನ್ನು ಮಗುವಿಗೆ ನೀಡುತ್ತದೆ. 3+ ವಯೋಮಟ್ಟದ ಗುಂಪಿನ ಮಕ್ಕಳಲ್ಲಿ ಮುಖ್ಯವಾಗಿ ಅಭಿನಯದ ಆಟ ಪಾತ್ರಾಭಿನಯ, ಸ್ವತಂತ್ರ ಆಟ, ಗುಂಪಾಗಿ ಆಡುವ ಆಟಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತ. ಆಟದ ನಿಯಮಗಳನ್ನು ನಿಖರವಾಗಿ ಪಾಲಿಸಬೇಕಾದ ಆಟಗಳನ್ನು 4+ ವಯೋಮಟ್ಟದವರಿಗೆ ಆಯ್ಕೆ ಮಾಡಬಹುದು.

## ಆಟದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಮೂಲಕ ಯಾವೆಲ್ಲಾ ಅನುಭವಗಳು ಮಗುವಿಗೆ ಲಭಿಸುತ್ತವೆ?

- ಆಟದಲ್ಲಿ ಪಾಲ್ಗೊಳ್ಳುವಾಗ ಸೂಕ್ಷ್ಮ-ಸ್ಥೂಲ ಪೇಶಿ ವಿಕಾಸಕ್ಕೆ ಸಂದರ್ಭ ದೊರೆಯುತ್ತದೆ.
- ಆಟದ ಆಡುತ್ತಿರುವಾಗ ನೈಜ ಸಂಭಾಷಣೆಗೆ ಸಂದರ್ಭ ಲಭಿಸುತ್ತದೆ.
- ಆಟದ ನಿಯಮಗಳನ್ನು ಆಲಿಸಲು ಸಂದರ್ಭ ದೊರೆಯುತ್ತದೆ.
- ಗುಂಪಾಗಿ ಆಡುವಾಗ ಪಾಲಿಸಬೇಕಾದ ಸಾಮಾನ್ಯ ರೀತಿ ನೀತಿಗಳ (ವರ್ತನೆಗಳ) ಬಗ್ಗೆ ತಿಳಿಯುತ್ತಾರೆ.
- ಆಟದಲ್ಲಿ ಜಯಗಳಿಸಲಿರುವ ಚಿಂತನೆಗಳೂ ಅದಕ್ಕನುಗುಣವಾಗಿ ವರ್ತಿಸಲು ಸಂದರ್ಭ ದೊರೆಯುತ್ತದೆ.
- ಆಟಿಕೆಗಳನ್ನು ನಿರೀಕ್ಷಿಸಲು, ಸಂಗ್ರಹಿಸಲು ಸಂದರ್ಭ ದೊರೆಯುತ್ತದೆ.
- ಆಟಿಕೆಗಳನ್ನು ತಯಾರಿಸಲೂ, ಅವುಗಳನ್ನು ಬಳಸಲೂ ಸಂದರ್ಭ ದೊರೆಯುತ್ತದೆ.



*ಪ್ರಿಸ್ಕೂಲ್‌ಗಳಲ್ಲಿ ಯಾವುದೇ ವಿಷಯದಲ್ಲಿ (ಥೀಂ) ಆಟದ ಚಟುವಟಿಕೆಗಳನ್ನು ನಿರ್ದಿಷ್ಟವಾದ ಉದ್ದೇಶದೊಂದಿಗೆ ಸೇರಿಸಲು ಸಾಧ್ಯವಿದೆ. ವೈಯಕ್ತಿಕ ಆಟ, ಇಬ್ಬರ ಗುಂಪಿನ ಆಟ, ದೊಡ್ಡ ಗುಂಪಿನಲ್ಲಿ ಆಡುವ ಆಟಗಳು. ಬೋರ್ಡ್ ಆಟಗಳು, ಅಭಿನಯದ ಆಟ ಒಳ/ಹೊರ ಆಟ, ಸ್ವತಂತ್ರ ಆಟ, ನಿಯಂತ್ರಿತ ಆಟ, ಏರೋಬಿಕ್ಸ್, ಥಿಯೇಟರ್ ಗೇಮ್ ಐಸಿಟಿ ಬಳಸಿಕೊಂಡು ಮಾಡಬಹುದಾದ ಆಟಗಳು, ವ್ಯಾಯಾಮ ಆಟಗಳು.... ಹೀಗೆ ವಿಭಿನ್ನ ರೀತಿಯ ಆಟಗಳನ್ನು ಪ್ರಿಸ್ಕೂಲ್‌ಗಳಲ್ಲಿ ಕಲಿಕೆಯ ತಂತ್ರಗಳಾಗಿ ಬಳಸಿಕೊಳ್ಳಬಹುದು.*

### ಆಟಗಳು

ಉನ್ನತ ಮಟ್ಟದ ಸೃಜನಾತ್ಮಕತೆ ಇರುವ ಮಕ್ಕಳೂ ಪ್ರಿಸ್ಕೂಲ್‌ಗಳಲ್ಲಿದ್ದಾರೆ. ಸ್ವತಃ ಆಟಗಳನ್ನು ರೂಪೀಕರಿಸಲು ಅವರಿಗೆ ಹೇಗೆ (ಬೆಂಬಲ ನೀಡಬಹುದು) ಎಂದು ಆಲೋಚಿಸಬೇಕಾಗಿದೆ. ಆಟಿಕೆಗಳಾಗಿ ಬದಲಿಸಬಹುದಾದ ಅನಗತ್ಯ ವಸ್ತುಗಳು (ಹಾಳಾದ ಚಪ್ಪಲಿ, ಬಾಟ್ಲಿ, ಮುಚ್ಚಳ ಇತ್ಯಾದಿ) ಮತ್ತಿತರ ಸಾಮಗ್ರಿ ಎಂಬಿವುಗಳನ್ನು ಮಕ್ಕಳಿಗೆ ನೀಡಿದಾಗ ಅವರು ಈ ಸಾಮಗ್ರಿಗಳನ್ನು ಬಳಸಿಕೊಂಡು ಕಡಿಮೆ ಸಮಯದಲ್ಲಿ ಆಟದಲ್ಲಿ ತೊಡಗಿಸಿಕೊಳ್ಳುವುದನ್ನು ಕಾಣಬಹುದು. ಇದು ಅವನಿಗೆ ತನ್ನ ಪರಿಸರದಲ್ಲಿರುವ ಒಂದು ಆಟಿಕೆಯನ್ನು ವೀಕ್ಷಿಸಲಿರುವ ಸಾಮರ್ಥ್ಯವನ್ನು ಗಳಿಸಲು ಸಹಾಯಕವಾಗುತ್ತದೆ. ಜಿಜ್ಞಾಸೆಯನ್ನು, ವೈಜ್ಞಾನಿಕ ಚಿಂತನೆಯನ್ನೂ ಬೆಳೆಸಲು ಇಂತಹ ಅನುಭವಗಳು ಮಗುವಿಗೆ ಹೆಚ್ಚಿನ ರೀತಿಯಲ್ಲಿ ಸಹಾಯಕವಾಗುತ್ತದೆ.

ಮಕ್ಕಳಿಗೆ ಸ್ವತಂತ್ರವಾಗಿ ಸೃಜನಾತ್ಮಕತೆಯೊಂದಿಗೆ ಆಟದಲ್ಲಿ ತೊಡಗಿಸಿಕೊಳ್ಳಲು ಪ್ರಿಸ್ಕೂಲ್‌ಗಳಲ್ಲಿ ಆಟದಮೂಲೆಯನ್ನು ಸಜ್ಜುಗೊಳಿಸಬೇಕು. ಸೂಕ್ಷ್ಮ ಪೇಶಿ ವಿಕಾಸಕ್ಕೆ ಸಹಾಯಕವಾದ ಸಹಜವಾದ ಆಟದ ಚಟುವಟಿಕೆಗಳಲ್ಲಿ 3 ವಯಸ್ಸಿನವರನ್ನೂ, 4 ವಯಸ್ಸಿನವರನ್ನೂ ಸಕ್ರಿಯವಾಗಿ ಪಾಲ್ಗೊಳ್ಳಿಸುವಲ್ಲಿ ಆಟದ ಮೂಲೆಗೆ ಬಹಳಷ್ಟು ಪ್ರಾಧಾನ್ಯವಿದೆ.

### ಆಟವೂ, ಅನುರೂಪೀಕರಣ

ಆಟದ ಚಟುವಟಿಕೆಗಳಲ್ಲಿ ಎಲ್ಲಾ ಮಕ್ಕಳ ಸಹಭಾಗಿತ್ವ ಮತ್ತು ಉದ್ದೇಶವಿರಿಸಿಕೊಳ್ಳಲಾದ ಸಾಮರ್ಥ್ಯಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವ ಚಟುವಟಿಕೆಗಳನ್ನು ನಾವು ಆಯ್ಕೆ ಮಾಡಿಕೊಳ್ಳಬೇಕು. ಸವಾಲುಗಳನ್ನು ಎದುರಿಸುವ ಮಕ್ಕಳಿಗೆ ಆತ್ಮಸ್ಥೈರ್ಯದಿಂದಲೂ ಸಂತೋಷದಿಂದಲೂ ಆಟದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ ಎನ್ನುವುದನ್ನು ಅಧ್ಯಾಪಿಕೆ ಖಚಿತಪಡಿಸಿಕೊಳ್ಳಬೇಕು.

(ಹೆಚ್ಚಿನ ಮಾಹಿತಿಗೆ 'ಅನುರೂಪೀಕರಣ ಏನು? ಹೇಗೆ?' ಎಂಬ ಅಧ್ಯಾಯವನ್ನು ನೋಡಿರಿ)

I. **ವೈಯಕ್ತಿಕ ಆಟಗಳು**

- ತನ್ನ ಆಟಿಕೆಗಳೊಂದಿಗೆ
- ಸ್ಥಿರವಾಗಿರುವ ಉಪಕರಣಗಳು (ಉಯ್ಯಾಲೆ, ಮೆರಿಗೋ ರೌಂಡ್)
- ಗಿಡಗಳಲ್ಲು, ಹೂಗಳಲ್ಲೂ, ಸಂಭಾಷಣೆ ನಡೆಸುವುದು
- ಅಭಿನಯ ಆಟ(ಉದಾ: ಗೊಂಬೆಯ ಅಮ್ಮನಾಗಿ, ದೋಸೆ ತಯಾರಿ ಇತ್ಯಾದಿ ಅಭಿನಯ)
- ಕಂಪ್ಯೂಟರ್/ವೀಡಿಯೋ ಗೇಮ್‌ಗಳು
- ಆಟದ ಉಪಕರಣಗಳು/ಆಟಿಕೆಗಳನ್ನು ತಯಾರಿಸುವುದು
- ಆಟದ ಚಪ್ಪರ, ಆಟದ ಮನೆ ನಿರ್ಮಾಣ ಇತ್ಯಾದಿ
- ಜಿಗ್ಸೋ ಪಸ್‌ಲ್‌ಗಳನ್ನು ಪೂರ್ತಿಗೊಳಿಸುವುದು





II. **ಇಬ್ಬರ ಗುಂಪಿನಲ್ಲಿ ಆಡಬಹುದಾದ ಆಟಗಳು**

- ಬೊಂಬೆ ಮದುವೆ ಆಟ
- ಚೆಂಡು ಉರುಳಿಸುವ ಆಟ
- ರಾಣಿಯೂ ಮಕ್ಕಳೂ
- ಲೂಡೋ
- ಹಾವೇಣಿ
- ಕಲ್ಲಾಟ

III. **ಭಾಷಾ ವಿಕಾಸಕ್ಕೆ ಸಹಕಾರಿಯಾಗುವ ಆಟಗಳು (ಆಟದ ಪದ್ಯಗಳಿರುವ)**

1. ರತ್ತೋ ರತ್ತೋ ರಾಜನ ಮಗಳೆ
2. ಕಣ್ಣಾ ಮುಚ್ಚೆ
3. ಕ್ಯಾಪ್ಟನ್ ಕ್ಯಾಪ್ಟನ್ ವೇರ್‌ಈಸ್ ಬಾಲ್
4. ಟೊಪ್ಪಿ ಬೇಕೇ?
5. ಹೇಳಿ ಹೇಳಿ ಎಷ್ಟು ಜನ?
   ನೀವೇ ಹೇಳಿ ಎಷ್ಟು ಜನ?
6. ......................



IV. **ಪಾತ್ರಾಭಿನಯ ಆಟಗಳು**

1. ತಾಯಿಯೂ ಮಗುವೂ
2. ಅಡುಗೆ ಮನೆ ಆಟ
3. ಟೀಚರ್ ಮತ್ತು ಮಕ್ಕಳು
4. ಬಸ್ಸಿನ ಡ್ರೈವರ್ ಮತ್ತು ಕಂಡಕ್ಟರ್

V. ಶಾರೀರಿಕ ಚಲನ ಪರ ವಿಕಾಸಕ್ಕೆ ಸಹಾಯಕವಾಗುವ, ದೊಡ್ಡ ಗುಂಪಿನಲ್ಲಿ ಆಡಬಹುದಾದ ಇತರ ಆಟಗಳು

1. ತಾಯಿ ಮತ್ತು ಮಗುವಿನ ಆಟ
2. ಅನ್ನ, ಸಾಂಬಾರು ತಯಾರಿಸುವ ಆಟ(ಅಡುಗೆ ಆಟ)
3. ಕೋಳಿ ಮತ್ತು ನರಿಯ ಆಟ
4. ಕಾಗೆ–ಗಿಳಿ ಆಟ
5. ಕಳ್ಳ ಪೊಲೀಸ್ ಆಟ
6. ಸೊಪ್ಪಾಟ

## ಆಟ ಮತ್ತು ಆಶಯ ರೂಪೀಕರಣ

ಆಶಯಗಳ ರೂಪೀಕರಣಕ್ಕೂ, ರೂಪೀಕರಿಸಿದ ಆಶಯಗಳನ್ನು ದೃಢಗೊಳಿಸಲು ಆಟಗಳನ್ನು ಬಳಸಬಹುದು. ಉದಾಹರಣೆಗೆ ಜೀವಿಗಳು ಎಂಬ ವಿಷಯದಲ್ಲಿ ಅವುಗಳ ಶಾರೀರಿಕ ಪ್ರತ್ಯೇಕತೆಗಳ ವಿಚಾರದಲ್ಲಿ ಜೀವಿಗಳು ಒಂದೇ ರೀತಿಯಲ್ಲಿ ಇಲ್ಲಿ ಎಂಬ ಆಶಯದ ರೂಪೀಕರಣಕ್ಕಾಗಿ ಟೀಚರಿಗೆ, ಕೊಂಬು, ಕೊಂಬು,.......ಬೇ.....ಬೇ... ಎಂಬ ಆಟವನ್ನು ಆಡಿಸುವುದು (ಫ್ರೂಟ್‌ಸಲಾಡ್).

## ಆಟ

ಅಧ್ಯಾಪಿಕೆ ಮಕ್ಕಳಿಗೆ 5/6 ಜೀವಿಗಳ ಹೆಸರು ಬರೆದ ಬ್ಯಾಡ್ಜ್‌ಗಳನ್ನು ನೀಡುವುದು (ಉದಾ: ಕೊಂಬುಗಳಿರುವ, ರೆಕ್ಕೆಗಳಿರುವ, ಎರಡು ಕಾಲಿರುವ, ನಾಲ್ಕು ಕಾಲಿರುವ ತೆವಳುವ) ಮಕ್ಕಳು ವೃತ್ತಾಕಾರದಲ್ಲಿ ಕುರ್ಚಿಯಲ್ಲಿ ಕುಳಿತು ಕೊಳ್ಳುವುದು. ಅಧ್ಯಾಪಿಕೆ ಒಂದು ಶಾರೀರಿಕ ಪ್ರತ್ಯೇಕತೆಗಳನ್ನು ಹೇಳುವುದು) ಉದಾ: ಕೊಂಬಿರುವ ಜೀವಿ . ಆ ಪ್ರತ್ಯೇಕತೆ ಇರುವ ಜೀವಿಗಳು

ಮಾತ್ರ ಕುರ್ಚಿ ಬದಲಾಯಿಸಿ ಕುಳಿತುಕೊಳ್ಳಬೇಕು. ಮಕ್ಕಳು ಕುರ್ಚಿ ಬದಲಾಯಿಸುವ ಸಂದರ್ಭದಲ್ಲಿ ಅಧ್ಯಾಪಿಕೆ ಒಂದು ಕುರ್ಚಿಯಲ್ಲಿ ಕುಳಿತುಕೊಳ್ಳುವುದು ಅಥವಾ ಕುರ್ಚಿಯನ್ನು ವೃತ್ತದಿಂದ ತೆಗೆದಿರಿಸುವುದು. ಹೀಗೆ ಆಡುವಾಗ ಕುರ್ಚಿ ಸಿಗದ ಮಗು 'ಗಿಳಿ' ಆಗುತ್ತದೆ. ಮುಂದುವರಿದು ಆ ಮಗು (ಗಿಳಿ ಆದ ಮಗು) ಒಂದು ಜೀವಿಯ ಪ್ರತ್ಯೇಕತೆ ಹೇಳಬೇಕು. ಮಕ್ಕಳು ಆ ಮಗು ಹೇಳಿದ ಸೂಚನೆಗನುಸಾರವಾಗಿ ಕುರ್ಚಿಯನ್ನು ಬದಲಾಯಿಸುತ್ತಾರೆ. ತನ್ಮಧ್ಯೆ ಹಿಂದೆ ಗಿಳಿಯಾದ ಮಗು ಓಡಿ ಯಾವುದಾದರೂ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತದೆ. ಇನ್ನೊಂದು ಮಗುವಿಗೆ ಕುರ್ಚಿ ಸಿಗುವುದಿಲ್ಲ. ಆಗ ಕುರ್ಚಿ ಸಿಗದ ಮಗು 'ಗಿಳಿ'ಯಾಗುತ್ತದೆ. 'ಜೀವಿಗಳು' ಎಂದು 'ಗಿಳಿ'ಯಾದ ಮಗು ಹೇಳಿದರೆ ಎಲ್ಲರೂ ಪರಸ್ಪರ ಕುರ್ಚಿ ಬದಲಾಯಿಸಬೇಕು.

**ಆಟದ ಚಟುವಟಿಕೆಗಳನ್ನು ಮೌಲ್ಯ ನಿರ್ಣಯ ಮಾಡುವುದು ಹೇಗೆ?**

- ಭಾಗವಹಿಸುವಿಕೆ ಫಲಪ್ರದವಾಗಿತ್ತೇ?
- ಆಶಯವನ್ನು ಅರ್ಥೈಸಿಕೊಂಡು ಆಟದಲ್ಲಿ ತೊಡಗಿಸಿಕೊಳ್ಳಲು ಯಾರಿಗೆಲ್ಲ ಸಾಧ್ಯವಾಗಿದೆ?
- ಆಟದಲ್ಲಿ ಪೂರ್ಣ ಆಸಕ್ತಿಯಿಂದ ಪಾಲ್ಗೊಳ್ಳುವಲ್ಲಿ ಮಕ್ಕಳು ಅನುಭವಿಸುವ ತೊಂದರೆಗಳೇನು?

**ಆಟದಲ್ಲಿ ಅನುರೂಪೀಕರಣ ಹೇಗೆ?**

ಎಲ್ಲಾ ಮಕ್ಕಳನ್ನೂ ಆಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಿಸಲು ಇಲ್ಲಿ ಯಾವ ತಂತ್ರವನ್ನು ಬಳಸಬಹುದೆಂದು ನೋಡಿರಿ.

- ಜೀವಿಗಳ ಬ್ಯಾಡ್ಜ್ ನೀಡಿದ ಮೇಲೆ ಶರೀರ ರಚನೆಯ ಪ್ರತ್ಯೇಕತೆಯನ್ನು ಹೇಳಿ ಜೀವಿಗಳನ್ನು ಹತ್ತಿರಕ್ಕೆ ಕರೆಯಬಹುದು?
- ಬ್ಯಾಡ್ಜ್ ಧರಿಸಿದ ಮಕ್ಕಳು ಪ್ರಸ್ತುತ ಬ್ಯಾಡ್ಜ್‌ನ ಜೀವಿಗಳ ರೀತಿಯಲ್ಲಿ ಸಂಚರಿಸಲಿ.

ಇಂತಹ ಚಟುವಟಿಕೆಗಳ ನಂತರ ಫ್ರೂಟ್ ಸಲಾಡ್ ಆಟ ಆಡಿಸುವುದಿದ್ದರೆ ತಾನು ಯಾರು? ತನ್ನ ಪ್ರತ್ಯೇಕತೆ ಏನು? ಇತ್ಯಾದಿಗಳನ್ನು ಅರಿತುಕೊಂಡು (ತಿಳುವಳಿಕೆಯೊಂದಿಗೆ) ಮಗುವಿಗೆ ಆಟದಲ್ಲಿ ಭಾಗವಹಿಸಲು ಸಂದರ್ಭ ಲಭಿಸಬಹುದಲ್ಲವೇ?



## ಸುರಿಯಲಿ ಮಳೆ ಸುರಿಯಲಿ....

*ನಿರ್ಮಲ ಟೀಚರ್ ತರಗತಿಗೆ ತಲಪಿದಾಗ ಮಕ್ಕಳು ಪ್ರೀತಿಯಿಂದ ಟೀಚರನ್ನು ಸುತ್ತುವರಿದರು. "ಈ ದಿನ ಒಂದು ಮ್ಯಾಜಿಕ್ ತೋರಿಸುತ್ತೇನೆ ಎಂದು ಟೀಚರ್ ಹೇಳಿದ್ದೀರಿ" ಅಮಿತ ನೆನಪಿಸಿದಳು.*

*'ಸರಿ. ಎಲ್ಲರೂ ಕುಳಿತುಕೊಳ್ಳಿ. ನಾನೀಗಲೇ ಮ್ಯಾಜಿಕ್ ಆರಂಭಿಸುತ್ತೇನೆ.' ಟೀಚರ್ ಹೇಳಿದರು.*

*ಮಕ್ಕಳೆಲ್ಲರೂ ಉಸಿರು ಬಿಗಿ ಹಿಡಿದು ಕುಳಿತರು.*

*ಟೀಚರ್ ಒಂದು ಗಾಜಿನ ಲೋಟವನ್ನು ಮೇಜಿನ ಮೇಲಿರಿಸಿದರು. "ಅಂಜಲೀ.... ಇದರಲ್ಲಿ ನೀರು ತುಂಬಿಸು." ಅಂಜಲಿಗೆ ತುಂಬಾ ಖುಷಿಯಾಯಿತು. ಅವಳು ಓಡಿ ಹೋಗಿ ಪಾತ್ರೆಯಲ್ಲಿ ನೀರು ತಂದು ಲೋಟಕ್ಕೆ ಎರೆದಳು.*

*"ಲೋಟದಲ್ಲಿ ಈಗ ನೀರಿದೆಯಲ್ಲವೇ? ಟೀಚರ್ ಕೇಳಿದರು. 'ಇದೆ ಟೀಚರ್' ಮಕ್ಕಳೆಲ್ಲರೂ ತಲೆಯಾಡಿಸಿದರು. 'ಲೋಟ ಪೂರ್ತಿ ನೀರಿದೆಯಲ್ಲವೇ?' "ಇಲ್ಲ ಲೋಟ ತುಂಬಲು ಇನ್ನೂ ಸ್ವಲ್ಪ ನೀರು ಹಾಕಬೇಕು." ಆದಿತ್ಯ ಹೇಳಿದ.*

*"ನೀರಿಗೆ ಬಣ್ಣವಿದೆಯೇ?"*

*"ನೀರಿಗೆ ಬಣ್ಣ ಇಲ್ಲ ಟೀಚರ್" ಅಮಿತ ಅವಳಿಗೆ ತಿಳಿದಿರುವ ವಿಚಾರವನ್ನು ಹೇಳಿದಳು.*

*ಟೀಚರ್ ಕೈಯಲ್ಲಿರುವ ಪೊಟಾಶಿಯಂ ಪರ್ಮಾಂಗನೇಟಿನ ಒಂದು ಕಣವನ್ನು ತೆಗೆದು ಮೆಲ್ಲಗೆ ಲೋಟದಲ್ಲಿರುವ ನೀರಿಗೆ ಹಾಕಿದರು.*

*ಅದು ನೀರಿನೊಂದಿಗೆ ಮಿಶ್ರಿತವಾಗಿ ನಿಧಾನವಾಗಿ ತಳಭಾಗಕ್ಕೆ ಹೋಗುವ ಹಾದಿಯಲ್ಲೆಲ್ಲಾ ನೇರಳೆ(ವಯಲೆಟ್) ಬಣ್ಣ ಹರಡಲಾರಂಭಿಸಿತು. ಬಣ್ಣ ಹರಡಿಕೊಂಡು ವಯಲೆಟ್ ಹೂಗಳ ರೂಪ ಪಡೆಯಿತು. ಹಾಯ್...ಹಾಯ್.... ಇಲ್ಲಿ ನೋಡಿ, ನೀರಿನಲ್ಲಿ ವಯಲೆಟ್ ಹೂಗಳು"*

ಮಕ್ಕಳೆಲ್ಲರೂ ಕುಳಿತಲ್ಲಿಂದ ಜಿಗಿದೆದ್ದರು. ಟೀಚರ್ ಪುನಃ ಕಣಗಳನ್ನು ಲೋಟಕ್ಕೆ ಹಾಕಿದರು. ನಿಧಾನವಾಗಿ ನೇರಳೆ ಬಣ್ಣ ನೀರಿನಲ್ಲಿ ಹರಡಿತು. ಲೋಟದ ನೀರು ಪೂರ್ತಿ ನೇರಳೆ ಬಣ್ಣವಾಯಿತು. "ಟೀಚರ್ ಏನು ಮ್ಯಾಜಿಕ್ ಮಾಡಿದಿರಿ?" ಮಕ್ಕಳು ಕೇಳುತ್ತಾ ಇದ್ದರು.

ಮಕ್ಕಳ ಕ್ರಮವೇ ಹಾಗೆ. ಕುತೂಹಲಕರ ದೃಶ್ಯಗಳು ಅವರಿಗೆ ಬಹಳ ಇಷ್ಟ. ಅದ್ಭುತ ದೃಶ್ಯಗಳ ಮುಂದೆ ಮಕ್ಕಳು ಎಷ್ಟು ಸಮಯ ಬೇಕಾದರೂ ಕಳೆಯುತ್ತಾರೆ. ಇಲ್ಲಿ ಮಕ್ಕಳು ಅದ್ಭುತ ದೃಶ್ಯಗಳ ನೋಡುಗರು ಮಾತ್ರವಲ್ಲ. ತಮ್ಮ ಕಣ್ಣು ಕಿವಿ ಮತ್ತಿತರ ಇಂದ್ರಿಯಗಳನ್ನು ಬಳಸಿ ಸಮಗ್ರವಾದ ನಿರೀಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇದು ಅವರಲ್ಲಿ ಜಿಜ್ಞಾಸೆಯನ್ನು ಉದ್ದೀಪನಗೊಳಿಸಿ ಕಾರಣಗಳನ್ನು ಕಂಡುಹಿಡಿಯಲಿರುವ ಆಸಕ್ತಿಯನ್ನು ಬಲಗೊಳಿಸುತ್ತದೆ. ಅವರು ಪ್ರಶ್ನೆಗಳನ್ನು ಕೇಳುತ್ತಾ ಇರುತ್ತಾರೆ. ಮಕ್ಕಳ ಈ ನಿರೀಕ್ಷಣಾ ಸಾಮರ್ಥ್ಯ ಮುಂದುವರಿದು ಆಶಯ ರೂಪೀಕರಣ ಪ್ರಕ್ರಿಯೆಯಲ್ಲಿ ಅವರಿಗೆ ಸಹಾಯಕವಾಗುತ್ತದೆ. ತನ್ನ ಪರಿಸರದ ವಿಚಾರಗಳನ್ನು ಸಮಗ್ರವಾಗಿ ನಿರೀಕ್ಷಿಸುವ ಮೂಲಕ ವಿಜ್ಞಾನದ ಬಾಗಿಲುಗಳು ಅವರ ಮುಂದೆ ತೆರೆದುಕೊಳ್ಳುತ್ತದೆ.

ಪ್ರಿಸ್ಕೂಲ್ ಹಂತವು, ಮಕ್ಕಳಲ್ಲಿ ತ್ವರಿತಗತಿಯಲ್ಲಿ ನ್ಯೂರೋನ್‌ಗಳು ಪರಸ್ಪರ ಬಂಧಿಸಲ್ಪಡುವ ಹಂತವಾಗಿದೆ. ಈ ಹಂತದಲ್ಲಿ ಮಕ್ಕಳಿಗೆ ಲಭಿಸುವ ಅನುಭವಗಳು, ಅವರ ಮುಂದಿನ ಕಲಿಕೆಯ ಸಿದ್ಧತೆಯನ್ನು ಕಲಿಕೆಯ ವೇಗವನ್ನು ನಿರ್ಧರಿಸುತ್ತದೆ. ಎಳೆಯ ವಯಸ್ಸಿನಲ್ಲಿ ಮಕ್ಕಳಿಗೆ ಲಭಿಸುವ ಅನುಭವಗಳು, ಕುತೂಹಲಕರ ದೃಶ್ಯಗಳು, ನ್ಯೂರೋನ್ ಮೂಲಕ ಮಿದುಳಿನಲ್ಲಿ ರಕ್ಷಿಸಲ್ಪಡುತ್ತದೆ. ಮುಂದಿನ ತರಗತಿಯ ಅನುಭವಗಳಿಗೆ ಈ ಮೊದಲು ಲಭಿಸಿದ ಅನುಭವಗಳನ್ನು ಸೇರಿಸಿಕೊಂಡು ಜ್ಞಾನ ನಿರ್ಮಾಣ ಪ್ರಕ್ರಿಯೆ ಫಲಪ್ರದಗೊಳಿಸುವ ಸಾಮರ್ಥ್ಯ ಸಹಜವಾಗಿ ಮಕ್ಕಳಿಗೆ ಲಭಿಸಿರುತ್ತದೆ. ಇಂತಹ ಪರಸ್ಪರ ನ್ಯೂರೋನ್ ಸಂಬಂಧಗಳು (synapsis) ನಿರ್ದಿಷ್ಟ ಆಶಯಗಳಿಗೆ ಸಂಬಂಧಿಸಿ ಮಗುವಿನ ಜ್ಞಾನವನ್ನು ದೃಢಗೊಳಿಸಲು ಸಹಾಯಕವಾಗುವುದು. ಆದ್ದರಿಂದ ಪ್ರಿಸ್ಕೂಲ್ ತರಗತಿಗಳಲ್ಲಿ ಒಂದು ಕಲಿಕೆಯ ತಂತ್ರ ಎಂಬ ರೀತಿಯಲ್ಲಿ ವೈಜ್ಞಾನಿಕ ಆಟಗಳಿಗೆ ಹೆಚ್ಚಿನ ಪ್ರಾಧಾನ್ಯವಿದೆ.

ಮಕ್ಕಳ ಜಿಜ್ಞಾಸೆಯನ್ನು ಉದ್ದೀಪನಗೊಳಿಸುವ ಮತ್ತು ಅವರಲ್ಲಿ ಕುತೂಹಲವನ್ನುಂಟು ಮಾಡುವ ಯಾವ ಯಾವ ವಿಚಾರಗಳು ನಮ್ಮ ಪರಿಸರದಲ್ಲಿವೆ? ನಿರ್ದಿಷ್ಟ ವಿಷಯಕ್ಕೆ (ಥೀಂ) ಸಂಬಂಧಿಸಿ ಇದನ್ನು ಹೇಗೆ ಪ್ರಿಸ್ಕೂಲ್ ಚಟುವಟಿಕೆಗಳಾಗಿ ನಮಗೆ ಮಂಡಿಸಲು ಸಾಧ್ಯವಿದೆ....?.

**ಉದಾಹರಣೆಗಳನ್ನು ಗಮನಿಸಿ**

- ನಾಚಿಕೆ ಮುಳ್ಳಿನ (ಮುಟ್ಟಿದರೆ ಮುನಿ) ಎಲೆ ಮುಟ್ಟಿದಾಗ ಮುದುಡುವುದು, ಸ್ವಲ್ಪ ಸಮಯದ ಬಳಿಕ ತೆರೆದುಕೊಳ್ಳುವುದು.
- ಮೊಗ್ಗು ಬಿರಿದು ಆಕರ್ಷಕವಾದ ಹೂಗಳಾಗುವುದು.
- ಬಾಳೆಕಾಯಿ ಹಣ್ಣಾಗುವುದು. ಹಸುರು ಬಣ್ಣ ಹಳದಿಯಾಗುವುದು.
- ಬೀಜ ಮೊಳಕೆಯೊಡೆಯುವುದು
- ತನ್ನೊಂದಿಗೆ ಚಲಿಸುವ ಚಂದಮಾಮ
- 'ಅಜ್ಜನ ಗಡ್ಡ'ದ ಸಂಚಾರ
- ನೆರಳಿನ ವಿವಿಧ ಆಕಾರಗಳು, ಚಲನೆ

ಈ ಕುತೂಹಲ ಭರಿತ ಸಂದರ್ಭಗಳಲ್ಲಿ ಮಕ್ಕಳ ಶ್ರದ್ಧೆ ಹಾಗೂ ನಿರೀಕ್ಷಣೆಯನ್ನು ಖಚಿತ ಪಡಿಸುವುದು. ಅಧ್ಯಾಪಿಕೆಯ ಹೊಣೆಗಾರಿಕೆಯಾಗಿದೆ.

- ಸಂದರ್ಭವನ್ನು ಮಂಡಿಸಿವುದು, ಜಿಜ್ಞಾಸೆ ಉಂಟುಮಾಡುವುದು.
- ಪ್ರಶ್ನೆಗಳನ್ನು ಕೇಳಲು ಪ್ರೇರೇಪಿಸುವುದು.
- ಅನ್ವೇಷಿಸಲು ಜವಾಬ್ದಾರಿ ನೀಡುವುದು.
- ತಾನು ಕಂಡುಕೊಂಡಿರುವುದು ಸರಿಯಾಗಿದೆಯೇ ಎಂದು ಪರಿಶೀಲಿಸಲು ಪ್ರೇರೇಪಿಸುವುದು.

ಜ್ಞಾನ ನಿರ್ಮಾಣದ ಈ ಪ್ರಕ್ರಿಯೆಯನ್ನು ದೃಢಪಡಿಸಲು ಅಧ್ಯಾಪಿಕೆ ಗಮನಹರಿಸಬೇಕು.

**ಪ್ರಿಸ್ಕೂಲ್‌ನ ವಿಷಯಗಳಿಗೆ ಸಂಬಂಧಿಸಿ ವಿಜ್ಞಾನದ ಆಟ ಮತ್ತು ವಿಜ್ಞಾನದ ಕೌತುಕಗಳಾಗಿ ನೀಡಬಹುದಾದ ಕೆಲವು ಚಟುವಟಿಕೆಗಳನ್ನು ಕೆಳಗೆ ಕೊಡಲಾಗಿದೆ.**

## ವಿಷಯ: ನೀರು/ಮಳೆ

**ನಿರೀಕ್ಷಣಾ ಚಟುವಟಿಕೆಗಳು**

1. ನೀರು ಕುದಿಯುವುದು.
2. ಸಕ್ಕರೆ ಮತ್ತು ಉಪ್ಪು ನೀರಿನಲ್ಲಿ ವಿಲೀನಗೊಂಡು ಅದೃಶ್ಯವಾಗುವುದು.
3. ನೀರಿನಲ್ಲಿ ತೇಲುವ ವಸ್ತುಗಳೂ ಮುಳುಗುವ ವಸ್ತುಗಳೂ ಇವೆ.
4. ನೀರಿನಲ್ಲಿ ಕಾಗದದ ದೋಣಿಯ ಚಲನೆ.
5. ನೀರಿನಲ್ಲಿ ಪ್ರತಿಬಿಂಬ.
6. ನೀರಿನಲ್ಲಿ ಗುಳ್ಳೆ ಬರಿಸಿ ಕಾಮನ ಬಿಲ್ಲು ಮಾಡುವುದು.
7. ಒದ್ದೆ ಬಟ್ಟೆ ಒಣಗುವುದು.



8. ಒದ್ದೆಯಾಗದ ಕರವಸ್ತ್ರ (ವಿಜ್ಞಾನ ಕೌತುಕ)

## ವಿಷಯ : ಜೀವಿಗಳು

**ನಿರೀಕ್ಷಣಾ ಚಟುವಟಿಕೆಗಳು**

1. ಬಣ್ಣದ ರೆಕ್ಕೆಗಳಿರುವ ಚಿಟ್ಟೆ ಮತ್ತು ದುಂಬಿಗಳು ಹಾರಾಡುವುದು.
2. ಹಕ್ಕಿಗಳು ಹಾರಾಡುವುದು.
3. ಜೀವಿಗಳು ತೆವಳುವುದು.
4. ಹಕ್ಕಿಗಳ ಗೂಡುಗಳು.
5. ಗೆದ್ದಲಿನ ಹುತ್ತ.
6. ಎಲೆಯಿಂದ ರಚಿಸಲ್ಪಟ್ಟ ಇರುವೆಯ ಗೂಡು.
7. ಹುಲ್ಲು ಕುದುರೆಯ ಪ್ರಯಾಣ.
8. ಓತಿ ಬಣ್ಣ ಬದಲಾಯಿಸುವುದು.
9. ಮೊಟ್ಟೆ ಬಿರಿದು ಮರಿಗಳುಂಟಾಗುವುದು.



## ವಿಷಯ: ಸಸ್ಯಗಳು

**ನಿರೀಕ್ಷಣಾ ಚಟುವಟಿಕೆಗಳು**

1. ವಿವಿಧ ಎಲೆಗಳ ಆಕೃತಿ, ಬಣ್ಣ ಇತ್ಯಾದಿ ನಿರೀಕ್ಷಣೆ
2. ಬೀಜ ಮೊಳಕೆ ಒಡೆಯುವುದು
3. ವಿವಿಧ ತರದ ಬೀಜಗಳು, ಅವುಗಳ ಬಣ್ಣ, ಆಕೃತಿ ಮಂಜಟ್ಟಿ ಕಾಯಿ, ಚೆನ್ನೆಕಾಯಿ ಗುಲುಗುಂಜಿ, ಪಚ್ಚೆಹೆಸರು...)
4. ಅಜ್ಜನ ಗಡ್ಡದ ಸಂಚಾರ
5. ಮೊಗ್ಗು ಅರಳುವುದು
6. ಬಾಳೆ ಹೂವಿನ ಜೇನು ಮತ್ತು ನೆಂಟರು
7. ನಾಚಿಕೆ ಮುಳ್ಳು

ಅಧ್ಯಾಪಿಕೆ ಸಿದ್ಧಗೊಳಿಸಬೇಕಾದ ನಿರೀಕ್ಷಣಾ ಚಟುವಟಿಕೆಗಳು, ಸಾಮಗ್ರಿಗಳು, ಚಟುವಟಿಕೆಯ ರೀತಿ ಇತ್ಯಾದಿಗಳನ್ನು ಕಲಿಕೆಯ ಸಂಪನ್ಮೂಲಗಳು ಎಂಬ 10ನೇ ಅಧ್ಯಾಯದಲ್ಲಿ ನೀಡಲಾಗಿದೆ. (ಪೇಜ್: 228–231)

ಮಕ್ಕಳ ವಯೋಮಟ್ಟಕ್ಕನುಗುಣವಾಗಿ ನಿರೀಕ್ಷಣಾ ಚಟುವಟಿಕೆಗಳನ್ನು ಆಯ್ಕೆ ಮಾಡಿ, ಚಟುವಟಿಕೆಗಳನ್ನು ಸಿದ್ಧಗೊಳಿಸಲು, ಅಧ್ಯಾಪಿಕೆ ಗಮನಿಸಬೇಕು. ಹೆಚ್ಚು ಸೂಕ್ಷ್ಮತೆ ಅಗತ್ಯವಿರುವ ನಿರೀಕ್ಷಣಾ ಚಟುವಟಿಕೆಗಳನ್ನು ನಾಲ್ಕು ವರ್ಷವಿರುವ ಮಕ್ಕಳಿಗೆ ನೀಡುವುದು ಸೂಕ್ತ. 3 ವರ್ಷದ

ಮಕ್ಕಳು ಕೌತುಕ ದೃಶ್ಯ (ಕುತೂಹಲ ಭರಿತದೃಶ್ಯ) ಎಂಬ ನೆಲೆಯಲ್ಲಿ ಚಟುವಟಿಕೆಗಳಲ್ಲಿ ಭಾಗಿಗಳಾಗುವಾಗ, 4 ವರ್ಷದ ಮಕ್ಕಳನ್ನು ಹೆಚ್ಚಿನ ಅನ್ವೇಷಣೆ ಎಡೆಗೆ ಮುನ್ನಡೆಸಬೇಕಾದ ಪ್ರಶ್ನೆಗಳನ್ನು ಅಧ್ಯಾಪಿಕೆ ಕೇಳಬೇಕಾಗಿದೆ.

ಮಕ್ಕಳ ನಿರೀಕ್ಷಣಾ ಸಾಮರ್ಥ್ಯ, ಆಶಯಗ್ರಹಣ ಸಾಮರ್ಥ್ಯ ಆಶಯ ವಿನಿಮಯ ಸಾಮರ್ಥ್ಯ ನಿರೀಕ್ಷಣೆ–ಪ್ರಯೋಗ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಿರುವ ಸಾಮರ್ಥ್ಯ ಎಂಬಿವುಗಳನ್ನು ಅಧ್ಯಾಪಿಕೆ ಮೌಲ್ಯನಿರ್ಣಯ ಮಾಡಿ ಅಗತ್ಯವಿರುವ ಫೀಡ್ ಬ್ಯಾಕ್‌ಗಳನ್ನು ನೀಡಬೇಕು.

**ವೈಜ್ಞಾನಿಕ ಅನುಭವಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳು.**

- ಚಿತ್ರಗಳು, ಘಟನೆಗಳು, ಸಂದರ್ಭಗಳು ಎಂಬಿವುಗಳನ್ನು ನಿರೀಕ್ಷಿಸಿ ವಿಶೇಷತೆಗಳನ್ನು ಹೇಳುವುದು.
- ಸಾಮ್ಯ–ವ್ಯತ್ಯಾಸಗಳನ್ನು ಕಂಡುಹಿಡಿದು ಹೇಳುವುದು.
  - ವಸ್ತುಗಳನ್ನು ಹೋಲಿಸಿ
  - ಚಿತ್ರಗಳನ್ನು/ಮಾದರಿಗಳನ್ನು ಹೋಲಿಸಿ



  - ಘಟನೆಗಳನ್ನು(ಆಲಿಸಿದ ಕಥೆ, ಸ್ವಾನುಭವ) ಹೋಲಿಸಿ.
- ಒಂಟಿಯಾಗಿರುವುದನ್ನು ಕಂಡುಹಿಡಿಯುವುದು (ಚಿತ್ರಗಳು, ವಸ್ತುಗಳು ಮತ್ತು ನೆರಳು ಚಿತ್ರ ಇತ್ಯಾದಿಗಳನ್ನು ನಿರೀಕ್ಷಣೆ ಮಾಡಿ).
- ಜಿಗ್ಸೋ ಸಮಸ್ಯೆಗಳು (ಬ್ಲೋಕ್ಸ್, ಚಿತ್ರಗಳು ಇತ್ಯಾದಿ)
- ಆಟದ ಚಟುವಟಿಕೆಗಳು (ಹೂ, ಹಣ್ಣು, ತರಕಾರಿ, ಕೊಂಬು.....ಕೊಂಬು)
- ಪಂಚೇಂದ್ರಿಯಾನುಭವಗಳು–ಸ್ಮರಣ ಶಕ್ತಿ ಪರೀಕ್ಷೆ

ಮೇಜಿನ ಮೇಲೆ ಸಾಕಷ್ಟು ವಾಹನಗಳ ಕಟೌಟ್/ಮಾದರಿಗಳನ್ನೇ ಇರಿಸಲಾಗಿದೆ. ಎಲ್ಲಾ ಮಕ್ಕಳು ವಾಹನಗಳನ್ನು ನಿರೀಕ್ಷಣೆ ಮಾಡುತ್ತಾರೆ. ಆ ಮೇಲೆ ಮಕ್ಕಳಿಗೆ ಕಾಣಿಸದಂತೆ ಅವುಗಳಲ್ಲೊಂದು ವಾಹನವನ್ನು ಅಧ್ಯಾಪಿಕೆ ಪೆಟ್ಟಿಗೆಯೊಳಗೆ ಹಾಕುತ್ತಾರೆ.

ಯಾವ ವಾಹನವನ್ನು ಪೆಟ್ಟಿಗೆಗೆ ಹಾಕಲಾಗಿದೆ? ಎಂದು ಮಕ್ಕಳು ಹೇಳಬೇಕು.

ಮೇಜಿನ ಮೇಲಿರುವ ಒಟ್ಟು ವಾಹನಗಳನ್ನು ನಿರೀಕ್ಷಣೆ ಮಾಡಿ ಅದರಲ್ಲಿ ಇಲ್ಲದಿರುವ ವಾಹನ ಯಾವುದೆಂದು ಮಕ್ಕಳು ಕಂಡುಹಿಡಿಯಬೇಕು.

ಮಕ್ಕಳಿಗೆ ಉತ್ತರಿಸಿ ಆದ ಮೇಲೆ ಉತ್ತರ ಸರಿಯೇ ಎಂದು ತಿಳಿಯಲು ಪೆಟ್ಟಿಗೆ ತೆರೆದು ತೋರಿಸಬೇಕು. ಇದೇ ರೀತಿ ಬೇರೆ ಬೇರೆ ವಾಹನಗಳನ್ನು ತೆಗೆದಿರಿಸಿ ಆಟ ಮುಂದುವರಿಸಬಹುದು.

ಈ ಆಟವನ್ನು ಇನ್ನೊಂದು ರೀತಿಯಲ್ಲಿ ಆಡಬಹುದು. ತೆಗೆದಿರಿಸಿದ ವಾಹನಗಳ ವಿಶೇಷತೆಗಳನ್ನು ಅಧ್ಯಾಪಿಕೆ ಹೇಳುವುದು.

- ಗಾತ್ರ
- ಆಕೃತಿ
- ಚಕ್ರಗಳ ಸಂಖ್ಯೆ
- ಉಪಯೋಗ

ಮಕ್ಕಳು ವಾಹನದ ಹೆಸರು ಹೇಳಬೇಕು.

ಮಕ್ಕಳು ಸ್ವತಃ ವಿಶೇಷತೆಗಳನ್ನು ಹೇಳುವ ರೀತಿಯಲ್ಲಿ ಆಟವನ್ನು ಬದಲಾಯಿಸಬಹುದು.

**ಈ ಆಟದ ಚಟುವಟಿಕೆಯ ಮೂಲಕ ಮಗುವಿನ ಯಾವ ಯಾವ ಸಾಮರ್ಥ್ಯಗಳು ವಿಕಾಸಗೊಳ್ಳುತ್ತದೆ?**



- ನಿರೀಕ್ಷಣೆ
- ವಿಶ್ಲೇಷಿಸಿ ಹೇಳುವುದು
- ನೆನಪಿಸುವುದು
- ವಿಶೇಷತೆಗಳನ್ನು ಮನದಟ್ಟು ಮಾಡಿಕೊಳ್ಳುವುದು.

ಹೀಗೆ ವೈಜ್ಞಾನಿಕ ವಿಕಾಸ ಮಂಡಲಕ್ಕೆ ಒತ್ತು ನೀಡಿ ವಿವಿಧ ಮಂಡಲಗಳಿಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ನೀಡಬೇಕಲ್ಲವೇ........?

- ಚಿತ್ರಗಳು ಘಟನೆಗಳು ಸಂದರ್ಭಗಳು ಎಂಬಿವುಗಳನ್ನು ನಿರೀಕ್ಷಿಸಿ ವಿಶೇಷತೆಗಳನ್ನು ಹೇಳುವುದು. ವಿವರಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡುವವರಿಗೆ ಮಾತ್ರ ಸ್ಪಷ್ಟವಾದ ಪ್ರತಿಕ್ರಿಯೆ ನೀಡಲು ಸಾಧ್ಯ.
- ಹೋಲಿಸಿ ಸಾಮ್ಯ-ವ್ಯತ್ಯಾಸಗಳನ್ನು ಕಂಡುಕೊಳ್ಳುವುದು. ಒಂದೇ ರೀತಿಯ ಚಿತ್ರಗಳಲ್ಲಿ ಹಲವು ವಿಚಾರಗಳಲ್ಲಿ ವ್ಯತ್ಯಾಸವೋ, ಬಿಟ್ಟು ಹೋದ ಚಿತ್ರಗಳೋ ಇದ್ದರೆ, ಅವುಗಳನ್ನು ನಿರೀಕ್ಷಣೆ ಮಾಡಿ, ಒಂದು ಇನ್ನೊಂದರಿಂದ ಯಾವೆಲ್ಲ ವಿಚಾರಗಳಲ್ಲಿ ಭಿನ್ನವಾಗಿದೆ ಎಂದು ಮಗು ಹೇಳಬೇಕು. ಇಲ್ಲಿಯೂ ಸೂಕ್ಷ್ಮವಾದ ನಿರೀಕ್ಷಣೆ ನಡೆಯುತ್ತದೆ.
- ಒಂಟಿಯಾಗಿರುವುದ(ಗುಂಪಿಗೆ ಸೇರದ)ನ್ನು ಕಂಡುಹಿಡಿಯುವುದು, ಚಿತ್ರಗಳು ವಸ್ತುಗಳು ಇತ್ಯಾದಿಗಳನ್ನು ಇದಕ್ಕಾಗಿ ಬಳಸುವುದು.
- ನೆರಳು ಮತ್ತು ಚಿತ್ರವನ್ನು ತಮ್ಮೊಳಗೆ ಹೊಂದಿಸುವುದು.
- ಜಿಗ್ಸೋ ಸಮಸ್ಯೆಗಳು (ಬ್ಲೋಕ್‌ಗಳು, ಚಿತ್ರಗಳು)
- ಗಣಿತ ಪೂರ್ವ ಚಟುವಟಿಕೆಗಳು.
- ಆಟದ ಚಟುವಟಿಕೆಗಳು

  (ಉದಾ: ಹೂ, ಹಣ್ಣು, ತರಕಾರಿ ಆಟ)

  ಹೂ, ಹಣ್ಣು ತರಕಾರಿ ಎಂದು ಹೇಳುತ್ತಾ ಮಕ್ಕಳು ವೃತ್ತಾಕಾರದಲ್ಲಿ ನಿಲ್ಲುವುದು. ಒಂದು ಮಗು ತನ್ನ ಮುಂದೆ ತಲುಪುವಾಗ ಅಧ್ಯಾಪಿಕೆ 'ಹಣ್ಣು' ಎಂದು ಹೇಳುವರು. ಆಗ ಆ ಮಗು ಹಣ್ಣಿನ ಹೆಸರು ಹೇಳಬೇಕು, ಹೀಗೆ ಆಟ, ತರಕಾರಿ, ಹೂ ಎಂಬಿವುಗಳ ಹೆಸರು ಹೇಳಲು ಮಕ್ಕಳಿಗೆ ಅವಕಾಶ ಒದಗಿಸುವುದರ ಮೂಲಕ ಆಟ ಮುಂದುವರಿಯುತ್ತದೆ.

  ಈ ಆಟ ಸಮರ್ಪಕವಾಗಿ ಆಟ ಬೇಕಾದರೆ ಮಗುವಿಗೆ ಹಣ್ಣುಗಳು, ತರಕಾರಿಗಳು, ಹೂಗಳು, ಇತ್ಯಾದಿಗಳ ಹೆಸರು ತಿಳಿದಿರಬೇಕು. ಅವುಗಳನ್ನು ವರ್ಗೀಕರಿಸಲು ತಿಳಿದಿರಬೇಕು.
- ಕೊಂಬು.....ಕೊಂಬು
- ಫ್ರೂಟ್ ಸಲಾಡ್

  ಇವೆಲ್ಲಾ ವೈಜ್ಞಾನಿಕ ಮಂಡಲಗಳಿಗೆ ಸಂಬಂಧಿಸಿದ ಆಟಗಳಾಗಿವೆ.

  ಪಂಚೇಂದ್ರಿಯಾನುಭವಗಳಿಗೆ ಸಂಬಂಧಿಸಿ ಧಾರಾಳ ಚಟುವಟಿಕೆಗಳನ್ನು ಪ್ರಿಸ್ಕೂಲ್ ತರಗತಿಗಳಲ್ಲಿ ನಡೆಸಬೇಕಾಗಿದೆ.

  ವೀಕ್ಷಿಸಿ, ಆಲಿಸಿ, ಮುಟ್ಟಿ, ಮೂಸಿ ನೋಡಿ, ರುಚಿ ನೋಡಿ, ವಸ್ತುಗಳನ್ನು ಗುರುತಿಸಲು ಸಂದರ್ಭವೊದಗಿಸುವ ಚಟುವಟಿಕೆಗಳಿರಬೇಕು. ಪೆಟ್ಟಿಗೆಯೊಳಗಿರುವ ಟೊಮೆಟೊ, ಬಟಾಟೆ ಇವುಗಳನ್ನು ಕಣ್ಣಿಗೆ ಬಟ್ಟೆ ಕಟ್ಟಿ ಮುಟ್ಟಿ ನೋಡುವುದು.
- ಯಾವುದು ಟೊಮೆಟೊ? ಯಾವುದು ಬಟಾಟೆ? ಎಂದು ಮಗು ಹೇಳಬೇಕು.
- ಬಟ್ಟೆಯಲ್ಲಿ ಸುತ್ತಿಟ್ಟ ಕರಿಬೇವು, ನಿಂಬೆ ಗಿಡದ ಎಲೆ ಎಂಬಿವುಗಳನ್ನು ಮೂಸಿನೋಡಿ ಕಂಡು ಹಿಡಿಯಬೇಕು.

ಹೀಗಿರುವ ಪಂಚೇಂದ್ರಿಯ ವಿಕಾಸಕ್ಕೆ ಸಾಧ್ಯತೆ ಇರುವ ಚಟುವಟಿಕೆಗಳೂ ವೈಜ್ಞಾನಿಕ ಮಂಡಲ ಭಾಗವಾಗಿ ಬರುವವುಗಳಾಗಿವೆ.

## ಒಂದಕ್ಕೆ ಒಂದು ಸೇರಿದರೆ ಎರಡಲ್ಲವೇ.......?

"ಈ ದಿನ ನಾನೊಂದು ಹಾಡು ಹಾಡುತ್ತೇನೆ. ಎಲ್ಲರೂ ಜತೆಯಾಗಿ ಹಾಡಬೇಕು. ಟೀಚರು ತೋರಿಸಿದಂತೆ ಅಭಿನಯ ಮಾಡಬೇಕು. ಗೊತ್ತಾಯ್ತಾ? ಬೀನಾ ಟೀಚರು ಹಾಡ ತೊಡಗಿದರು.

ಒಂದು ಒಂದು ಒಂದು<br>
ಕೊಡೆಗೆ ಕಾಲು ಒಂದು<br>
ಎರಡು ಎರಡು ಎರಡು<br>
ಕೋಳಿಗೆ ಕಾಲುಗಳು ಎರಡು<br>
ಮೂರು ಮೂರು ಮೂರು<br>
ರಿಕ್ಷಾಕ್ಕೆ ಚಕ್ರವು ಮೂರು<br>
ನಾಲ್ಕು ನಾಲ್ಕು ನಾಲ್ಕು<br>
ಬೆಕ್ಕಿಗೆ ಕಾಲುಗಳು ನಾಲ್ಕು<br>
ಐದು ಐದು ಐದು<br>
ಕೈಗೆ ಬೆರಳುಗಳು ಐದು

ಹಾಡುವಾಗ ಹಾಡಿಗೆ ಹೊಂದಿಕೆಯಾಗುವ ಚಿತ್ರಗಳನ್ನು ಪ್ರದರ್ಶಿಸಬೇಕು. ಪ್ರತಿಯೊಂದು ಸಂಖ್ಯೆಯನ್ನು ಹೇಳುವಾಗ ಸಂಖ್ಯೆಯಷ್ಟು ಬೆರಳುಗಳನ್ನು ತೋರಿಸಬೇಕು. ಮಕ್ಕಳು ಅದೇ ರೀತಿ ಮಾಡಬೇಕು.

ಹೀಗೆ ಗಣಿತಪರವಾದ ವಿಚಾರಗಳಿಗೆ ಒತ್ತು ನೀಡಿದ ಚಟುವಟಿಕೆಗಳನ್ನು ಪ್ರಿಸ್ಕೂಲ್‌ನಲ್ಲಿ ನೀಡಲಾಗುತ್ತಿದೆಯಲ್ಲವೇ? ಪ್ರಿಸ್ಕೂಲ್ ವಯೋಮಾನದ ಮಕ್ಕಳಿಗೆ ಗಣಿತಪರವಾದ ಯಾವ ಯಾವ ಪೂರ್ವಜ್ಞಾನವಿದೆ? ದೊಡ್ಡದು-ಸಣ್ಣದು, ಹತ್ತಿರ-ದೂರ, ಹೆಚ್ಚು-ಕಡಿಮೆ. ಇತ್ಯಾದಿಗಳು ಮಕ್ಕಳಲ್ಲಿರುವ ಪೂರ್ವಜ್ಞಾನವಲ್ಲವೇ? ಇದನ್ನು ಉಪಯೋಗಿಸಿ ಚಟುವಟಿಕೆಗಳನ್ನು ಆಯೋಜಿಸಬಹುದಲ್ಲವೇ? ಕಥೆ, ಪದ್ಯ, ನಿರ್ಮಾಣ, ಚಿತ್ರರಚನೆ, ಆಟ ಇತ್ಯಾದಿಗಳಲ್ಲಿ ಗಣಿತಪರವಾದ ಸಾಮರ್ಥ್ಯಗಳನ್ನು ಬೆಳೆಸಲು ಸಂದರ್ಭವಿದೆ.

ಬಾಯಾರಿದ ಕಾಗೆ ಹೂಜಿಯ ನೀರನ್ನು ಕುಡಿದು ಬಾಯಾರಿಕೆಯನ್ನು ನೀಗಿಸಿದ ಕಥೆಯನ್ನು ಮಕ್ಕಳಿಗೆ ಹೇಳಿಕೊಡಲಿಲ್ಲವೇ? ಈ ಕಥೆಯಲ್ಲಿ ಗಣಿತ ಸಾಮರ್ಥ್ಯವನ್ನು ಸೇರಿಸಿಕೊಂಡು ಹೇಳಬಹುದಲ್ಲವೇ. ಅದಕ್ಕಾಗಿ ಏನೇನು ಬದಲಾವಣೆ, ಸೇರ್ಪಡೆಗಳನ್ನು ಕಥೆಯಲ್ಲಿ ಮಾಡಬೇಕಾಗಿದೆ?

ಬಾಯಾರಿದ ಕಾಗೆ ಕೆಳಗೆ ದೊಡ್ಡ ಹೂಜಿಯಲ್ಲಿ ಸ್ವಲ್ಪ ನೀರನ್ನು ಕಂಡಿತು..... ಕಾಗೆಗೆ ಒಂದು ಉಪಾಯ ಹೊಳೆಯಿತು. ಕಲ್ಲುಗಳನ್ನು ಹೆಕ್ಕಿ ಹಾಕುವ. ಒಂದು.. ಎರಡು.. ಮೂರು.... ನಾಲ್ಕು.... ಐದು..... ಒಂದೊಂದು ಕಲ್ಲನ್ನು ಹೆಕ್ಕಿ ಹೂಜಿಗೆ ಹಾಕಿತು............ಬಾಯಾರಿಕೆ ನೀಗಿಸಿ ಕಾಗೆ ಕಾ... ಕಾ... ಎನ್ನುತ್ತಾ ಹಾರಿ ಹೋಯಿತು.



ಇಂತಹ ಸಾಧ್ಯತೆಗಳು ಇತರ ಕಥೆಗಳಲ್ಲೂ ಇರಬಹುದಲ್ಲವೇ? ಇಂತಹ ಸಾಧ್ಯತೆಗಳನ್ನು ನೈಜವಾಗಿ ಉಪಯೋಗಿಸಲು ಸಾಧ್ಯವಾಗಬೇಕು.

ಮನೆ ಎಂಬ ವಿಷಯಕ್ಕೆ ಸಂಬಂಧಿಸಿ ಮಗುವಿಗೆ ಸಾಕಷ್ಟು ಚಟುವಟಿಕೆಗಳನ್ನು ಮಾಡಲು ಸಂದರ್ಭಗಳಿವೆ.

ಮನೆಯ ಚಿತ್ರ ಬಿಡಿಸಿ ಬಣ್ಣ ಹಚ್ಚುವುದು, ಕಾಗದಗಳನ್ನು ಅಂಟಿಸಿ ಮನೆಯ ಆಕೃತಿ ತಯಾರಿಸುವುದು ಎಂಬೀ ಚಟುವಟಿಕೆಗಳನ್ನು ಮಾಡುವಾಗ ಗಣಿತ ಸಾಮರ್ಥ್ಯಗಳಿಗೆ ಪ್ರಾಧಾನ್ಯ ನೀಡುವ ರೀತಿಯಲ್ಲಿ ಸೂಚನೆಗಳನ್ನು ನೀಡಬಹುದು.

ಎರಡು ಕಿಟಿಕಿಗಳಿಗೆ ಒಂದೇ ರೀತಿಯ ಬಣ್ಣ ನೀಡುವುದು. ಒಂದು ಬಾಗಿಲನ್ನು ಚಿತ್ರಿಸಿರಿ. ಉದ್ದವಾದ ಮೆಟ್ಟಲುಗಳನ್ನು ರಚಿಸಿರಿ. ಎಂಬೀ ರೀತಿಯಲ್ಲಿ ದೊಡ್ಡ ಮನೆ, ಸಣ್ಣ ಮನೆ, ಕಿಟಿಕಿ, ಬಾಗಿಲು ಇವುಗಳ ಆಕೃತಿ, ಎತ್ತರವಿರುವ ಮನೆ, ತಗ್ಗಿನ ಮನೆ ಹೀಗೆ ಹಲವಾರು ಸಾಧ್ಯತೆಗಳಿವೆಯಲ್ಲವೇ?

ಮೊದಲು ಎಲ್ಲರೂ ದೊಡ್ಡ ಮನೆಯ ಚಿತ್ರ ಬಿಡಿಸಲಿ. ಆ ಮೇಲೆ ಅದಕ್ಕಿಂತ ಸಣ್ಣ ಮನೆಯ ಚಿತ್ರ ಬಿಡಿಸಲಿ. ಪುನಃ ಅದಕ್ಕಿಂತಲೂ ಚಿಕ್ಕ ಮನೆಯ ಚಿತ್ರ ಬಿಡಿಸಿ. ಹೀಗಿರುವ ಚಟುವಟಿಕೆಗಳು ಮಕ್ಕಳಿಗೆ ಸವಾಲುಗಳನ್ನೂ ಆಸಕ್ತಿಯನ್ನು ಉಂಟು ಮಾಡುತ್ತದೆ.

ಮೊದಲೇ ತಯಾರಿಸಿದ ವಿವಿಧ ಆಕೃತಿಯಲ್ಲಿರುವ ಮನೆಗಳ ಕಟೌಟ್‌ಗಳು ನಿರ್ದಿಷ್ಟ ಸಮಯದೊಳಗೆ, ಗಾತ್ರಕ್ಕನುಸರಿಸಿ ಕ್ರಮೀಕರಿಸುವ ಚಟುವಟಿಕೆಗಳು ಒಂದು ಆಸಕ್ತಿದಾಯಕವಾದ ಆಟವಾಗಬಹುದಲ್ಲವೇ.......?

ಮನೆಯ ಉಪವಿಷಯವಾದ ಅಡುಗೆ ಮನೆಯನ್ನು ಪರಿಗಣಿಸಬಹುದು. ಅಡುಗೆ ಮನೆ ಎಂಬ ವಿಷಯಕ್ಕೆ ಸಂಬಂಧಿಪಟ್ಟಂತೆ ಗಣಿತ ಸಾಮರ್ಥ್ಯಗಳಿಗೆ ಧಾರಾಳ ಸಾಧ್ಯತೆಗಳಿವೆ. ಪಾತ್ರೆಗಳ ಸಂಖ್ಯೆ, ಅಳತೆ, ಅಡುಗೆ ತಯಾರಿ......

ಒಂದು ಗ್ಲಾಸ್ ನೀರು, ಒಂದು ಕಪ್ ನೀರು, ಎರಡು ಬಾಲ್ದಿ ನೀರು... ಎಂಬೀ ರೀತಿಯಲ್ಲಿ ಹೇಳುತ್ತೇವಲ್ಲವೇ? ಅಡುಗೆ ಎನ್ನುವುದು ಮಗುವಿಗೆ ಆಸಕ್ತಿದಾಯಕವಾದ ಚಟುವಟಿಕೆಯಾಗಿದೆ.

ನಾವು ತಯಾರಿಸುವ. ಸಲಾಡ್ ತಯಾರಿಸಲು ಏನೇನು ಬೇಕು? ನೀರುಳ್ಳಿ, ಟೊಮೆಟೊ, ಉಪ್ಪು, ಮೊಸರು... ಮೊದಲಿಗೆ ಎರಡು ನೀರುಳ್ಳಿಗಳನ್ನು ಸಣ್ಣದಾಗಿ ಕತ್ತರಿಸಿ ಆ ಮೇಲೆ ಮೂರು ಟೊಮೆಟೊಗಳನ್ನು ಸಣ್ಣದಾಗಿ ಕತ್ತರಿಸಬೇಕು. ಇದಕ್ಕೆ ಒಂದು ಚಮಚ ಉಪ್ಪು ಸೇರಿಸುವ. ಒಂದು ಗ್ಲಾಸು ಮೊಸರನ್ನೂ ಸೇರಿಸಿ ಚೆನ್ನಾಗಿ ಕಲಸಬೇಕು ಸಲಾಡ್ ತಯಾರು.

ಹೀಗೆ ಸೂಚನೆಗಳನ್ನು ನೀಡಿ ಮಕ್ಕಳಿಂದ ಸಲಾಡ್ ಮಾಡಿಸಬಹುದು.

ಅಡುಗೆ ಎಂಬುದು ಅಳತೆಗಳು, ಸಂಖ್ಯೆಗಳು ಎಂಬಿವುಗಳನ್ನು ಸಹಜ ಸಂದರ್ಭಗಳಲ್ಲಿ ಬಳಸಲು ಸಾಧ್ಯವಿರುವ ಚಟುವಟಿಕೆಯಾಗಿದೆ.

ಗುಂಪುಗಳಾಗಿ ಮಾಡುವುದು, ವರ್ಗೀಕರಿಸುವುದು ಎಂಬೀ ಚಟುವಟಿಕೆಗಳನ್ನು ನಡೆಸಬಹುದು.

ನೈಜ ಹಣ್ಣುಗಳು, ತರಕಾರಿಗಳು ಅಥವಾ ಹಣ್ಣು ಮತ್ತು ತರಕಾರಿಗಳ ಮಾದರಿಗಳು/ಚಿತ್ರಗಳನ್ನು ಗುಂಪುಗಳಾಗಿ ಮಾಡಲು ಹೇಳಬಹುದು. ಮಾವಿನ ಹಣ್ಣುಗಳ ಗುಂಪು, ಸೇಬುಹಣ್ಣುಗಳ ಗುಂಪು ಸೌತೆಕಾಯಿಗಳ ಗುಂಪು......ಹೀಗೆ ಮಾಡಬಹುದು. ಯವುದು ದೊಡ್ಡದು? ಯಾವುದು ಸಣ್ಣದು? ಎಂಬೀ ಪ್ರಶ್ನೆಗಳನ್ನು ಕೇಳಬಹದು.

ಯಾವ ಗುಂಪು ದೊಡ್ಡದು? ಅದಕ್ಕಿಂತ ಸಣ್ಣದು ಯಾವ ಗುಂಪು? ಈ ರೀತಿ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಎತ್ತರ ಹೇಳಿಸಬಹುದು.

ಇದನ್ನು ಒಂದು ಆಟದ ಚಟುವಟಿಕೆಯಾಗಿ ನಡೆಸಬಹುದು. ಮೇಜಿನ ಮೇಲೆ ಒಂದು ಸ್ಕೂಲ್ ಬ್ಯಾಗ್ ಇರಿಸಬೇಕು. ಇದಕ್ಕಿಂತಲೂ ಸಣ್ಣದಾದ ಒಂದು ವಸ್ತುವನ್ನು ಎಲ್ಲರೂ ತೋರಿಸಿರಿ.

ಇನ್ನು ಅದಕ್ಕಿಂತಲೂ ಸಣ್ಣ ವಸ್ತುವನ್ನು ತೋರಿಸಿರಿ. ಹೀಗೆ ಚಟುವಟಿಕೆಯನ್ನು ಮುಂದುವರಿಸುತ್ತಾ ಇನ್ನೂ ಸಣ್ಣದು........ಹೀಗೆ ಸೂಕ್ಷ್ಮಮಟ್ಟದ ನಿರೀಕ್ಷಣೆಗೆ ಮಕ್ಕಳನ್ನು ಮುನ್ನಡೆಸುವ ರೀತಿಯಲ್ಲಿ ಸೂಚನೆಗಳನ್ನು ನೀಡಬಹುದು.

## ಇನ್ನು ಏನೇನು ಸಾಧ್ಯತೆಗಳು?

ಸೀಟಿ ಹಾಕುವಾಗ ಎಲೆಗಳನ್ನು ದೊಡ್ಡ ಎಲೆಯಿಂದ ಸಣ್ಣ ಎಲೆಗೆ ಎಂಬ ಕ್ರಮದಲ್ಲಿ ಕ್ರಮೀಕರಿಸಲು ಹೇಳುವುದು.

ಒಬ್ಬರು ಒಂದು ದೊಡ್ಡ ವೃತ್ತವನ್ನೆಳೆಯುವುದು. ಹತ್ತಿರದವರು ಅದಕ್ಕಿಂತ ಸಣ್ಣದು ಹೀಗೆ ಎಷ್ಟು ಸಣ್ಣದಾಗಿ ವೃತ್ತವನ್ನು ರಚಿಸಬಹುದು?

ಸಹಜ ಸಂದರ್ಭಗಳಲ್ಲಿ ಗಣಿತ ಸಾಮರ್ಥ್ಯಗಳ ವಿಕಾಸಕ್ಕೆ ಸಹಾಯಕವಾಗುವ ಸಂದರ್ಭಗಳನ್ನು ಚಟುವಟಿಕೆಗಳಲ್ಲಿ ಒಳಪಡಿಸಲು ಸಾಧ್ಯವಾಗಬೇಕು.

ಸ್ಥಳಕ್ಕೆ ಸಂಬಂಧಿಸಿದ ವಿಚಾರಗಳು, ಗುಣಪರವಾದ ವಿಚಾರಗಳು ಎಂಬಿವು ಗಣಿತ ಪೂರ್ವದ ಸಾಮರ್ಥ್ಯಗಳಾಗಿವೆ.

ಹತ್ತಿರ–ದೂರ, ಕೆಳಗೆ–ಮೇಲೆ ಎಂಬಿವು ಸ್ಥಳಕ್ಕೆ ಸಂಬಂಧಿಸಿದ ಗಣಿತ ಸಾಮರ್ಥ್ಯವೂ, ದೊಡ್ಡ ಗುಂಪು–ಸಣ್ಣ ಗುಂಪು. ದೊಡ್ಡ ಪೆಟ್ಟಿಗೆ, ಸಣ್ಣ ಪೆಟ್ಟಿಗೆ, ಉದ್ದ ಹೆಚ್ಚಾದದ್ದು, ಕಡಿಮೆಯಾದದ್ದು ಇತ್ಯಾದಿಗಳು ಗುಣಪರವಾದ ಗಣಿತ ಸಾಮರ್ಥ್ಯಗಳೂ ಆಗಿವೆ.

ಗಣಿತ ಕಲಿಕೆಯಲ್ಲಿ **ELPS** ಹಂತಗಳನ್ನು ಪಾಲಿಸಬೇಕಾಗಿದೆ.

**E** - Experience, **L** - Language , **P** - Picture , **S** - symbol

ಇದರಲ್ಲಿ ಆರಂಭದ ಮೂರು ಹಂತಗಳನ್ನು ಪ್ರಿಸ್ಕೂಲ್‌ಗಳಲ್ಲಿ ಪರಿಗಣಿಸಬೇಕಾಗಿದೆ. ಆದರೆ S (symbol) ಈ ಸಂದರ್ಭದಲ್ಲಿ ಪರಿಗಣಿಸುವ ಅಗತ್ಯವಿಲ್ಲ. ಮಗುವಿನ ಪೂರ್ವಜ್ಞಾನವನ್ನು ತಿಳಿದುಕೊಂಡು ಅನುಭವಗಳನ್ನು ನೀಡಬೇಕು.

ಇದಕ್ಕೆ ಅಗತ್ಯವಿರುವ ಗಣಿತ ಭಾಷೆಯನ್ನು ಉಪಯೋಗಿಸಬೇಕು.

ಚಿತ್ರ/ಮಾದರಿ, ಎಂಬಿವುಗಳನ್ನು ಹೊಂದಿಸಬೇಕು (5 ಹೂಗಳು, 4 ಗಿಳಿಗಳು....)

ಮೇಲೆ ಹೇಳಿದ ಹಂತಗಳ ಮೂಲಕ ಗಣಿತ ಸಾಮರ್ಥ್ಯಗಳನ್ನೂ ಕ್ರಮವಾಗಿ ವಿಕಾಸಗೊಳಿಸಬೇಕಾಗಿದೆ.

## ಚಿತ್ರ ಕೌತುಕ

### ಅನುಭವ ಟಿಪ್ಪಣಿ ಓದುವ

ಪ್ರಿಸ್ಕೂಲ್ ವಿದ್ಯಾಭ್ಯಾಸದ ಫಲಪ್ರಾಪ್ತಿ ಎಷ್ಟರಮಟ್ಟಿಗೆ ಇದೆ. ಎಂಬುದರ ಸಂಶೋಧನೆಗಾಗಿ ಇಂದು ನಾನು 'ತಲವಿಲ್' ಪ್ರಿಸ್ಕೂಲ್‌ಗೆ ಹೋದೆನು. ತರಗತಿಯಲ್ಲಿದ್ದ ಅತೀ ಕಡಿಮೆ ಪ್ರಾಯದ ಶಿವಾನಂದನೆಂಬ ಬಾಲಕನು, ಅಮ್ಮನನ್ನು ಕಾಣಬೇಕೆಂದು ಹಟ ಹಿಡಿದು ಅಳುತ್ತಿದ್ದನು. ಟೀಚರ್ ಎಷ್ಟು ಸಮಾಧಾನ ಪಡಿಸಿದರೂ ಅವನು ಅಳುವುದನ್ನು ನಿಲ್ಲಿಸಲಿಲ್ಲ. ಅಳುವಿನ ಸದ್ದು ಕಡಿಮೆಯಾದಾಗ ಟೀಚರ್ ಚಟುವಟಿಕೆಗಳನ್ನು ನೀಡಲು ಆರಂಭಿಸಿದರು.

ಮನೆಯ ಕುರಿತಾಗಿ ಚರ್ಚಿಸಲು ಟೀಚರ್ ಆರಂಭಿಸಿದರು. ನಂತರ ಮಕ್ಕಳು ನೋಡಿದ ಒಂದು ಮನೆಯ ಚಿತ್ರವನ್ನು ರಚಿಸಲು ಹೇಳಿದರು. ಮಕ್ಕಳೆಲ್ಲಾ ಚಿತ್ರ ಬಿಡಿಸಲು ತೊಡಗಿದರು.

ನಾನು ಮೆಲ್ಲನೆ ಶಿವಾನಂದನ ಬಳಿ ಹೋದೆನು. ಅವನನ್ನು ಹತ್ತಿರ ಕುಳಿತುಕೊಳ್ಳಿಸಿ ಅವನ ಕೈಗೆ ಕ್ರಯೋನ್ಸ್ ಮತ್ತು ಕಾಗದವನ್ನು ನೀಡಿದೆನು. ಅವನು ಆಸಕ್ತಿ ತೋರಿಸದೆ ಕಾಗದದಲ್ಲಿ ಗೀಚ ತೊಡಗಿದನು. ನಾನದನ್ನು ಒಂದು ವೃತವಾಗಿ ಬದಲಾಯಿಸಿದೆನು. ಕಣ್ಣು,ಮೂಗು, ಬಾಯಿಗಳನ್ನು ಚಿತ್ರಿಸಿದೆನು. ಅವನು ಇನ್ನೇನೋ ಗೀಚಿದ. ನಾನದನ್ನೂ ಚಿತ್ರವಾಗಿ ಬದಲಾಯಿಸಿದೆನು. ಚಟುವಟಿಕೆ ಅವನಿಗಿಷ್ಟವಾಯಿತು. ಅವನು ನಂತರ ಗೀಚುತ್ತಾ ಇದ್ದ ನಾನದನ್ನು ಚಿತ್ರವಾಗಿ ಬದಲಾಯಿಸುತ್ತಾ ಇದ್ದೆ. ಕಾಗದ ತುಂಬಾ ಚಿತ್ರಗಳು. ಅವನ ಮುಖ ಅರಳಿತು.

ನಾನು ಒಂದು ಗ್ಲಾಸನ್ನು ತೆಗೆದು ಕಾಗದಲ್ಲಿರಿಸಿ ಅದರ ಸುತ್ತಲು ಗೆರೆ ಎಳೆದು ಒಂದು ವೃತ್ತವನ್ನು ರಚಿಸಿ ತೋರಿಸಿದೆ. ನಂತರ ಶಿವಾನಂದನೂ ಗ್ಲಾಸಿನ ಸುತ್ತ ಗೆರೆ ಎಳೆದು ವೃತ್ತವನ್ನು ರಚಿಸಿದ. ನಾನದರಲ್ಲಿ ಕೆಲವು ಗೆರೆಗಳೆನ್ನೆಳೆದು ಚೆಂಡಿನ ಚಿತ್ರ ರಚಿಸಿದೆನು. ಅವನು ಎರಡು ಬಾರಿಯೂ ವೃತ್ತವನ್ನು ರಚಿಸಿದ. ನಾನದನ್ನು ಆಮೆಯಾಗಿ ಬದಲಾಯಿಸಿದೆನು. ಈ ಪ್ರಕ್ರಿಯೆ ಮುಂದುವರಿಯಿತು. ಅವನು ಸಂತೋಷದಿಂದ ಚಿತ್ರ ಮಾಡಲೂ ಬಣ್ಣ ನೀಡಲೂ ಪ್ರಾರಂಭಿಸಿದ.

ಅವನ ಮುಖ ಅರಳಿತು. ತರಗತಿಯ ಸಹಪಾಠಿಗಳು ತಾವು ರಚಿಸಿದ ಮನೆಯ ಚಿತ್ರಗಳನ್ನು ಟೀಚರಿಗೆ ತೋರಿಸಲು ತೊಡಗಿದರು. ನಾನು ಕಾಗದ ತೆಗೆದು ಒಂದು ಸಣ್ಣ ಮನೆಯ ಚಿತ್ರ ಮಾಡಿ ಶಿವಾನಂದನಿಗೆ ನೀಡಿದೆನು. ಆ ಮೂರು ವರ್ಷದ ಪೋರ ಅದಕ್ಕೆ ಬಣ್ಣ ಕೊಡಲು ತೊಡಗಿದ.



- ಇಂತಹ ಅನುಭವಗಳು ನಿಮಗಾಗಿವೆಯೇ?
- ಮಗುವಿನ ಪ್ರಾಯ, ಆಸಕ್ತಿ, ಭಾವನಾತ್ಮಕ ಮಟ್ಟವನ್ನು ಗುರುತಿಸಿ ಇಂತಹ ಸಂದರ್ಭಗಳಲ್ಲಿ ನೀವು ಹೇಗೆ ವರ್ತಿಸಿದ್ದೀರಿ?
- ಮಕ್ಕಳ ಗಮನದ ಕಾಲಾವಧಿ ಹೆಚ್ಚಿಸಲು ಚಿತ್ರ ರಚನೆಯು ಎಷ್ಟರಮಟ್ಟಿಗೆ ಸಹಾಯಕವಾಗಿದೆ?

### ಚಿತ್ರರಚನೆಯ ಪ್ರಾಧಾನ್ಯ

ಚಿತ್ರ ರಚನೆಯು ಬರವಣಿಗೆಯ ಸಾಮರ್ಥ್ಯಗಳಿಸುವುದಕ್ಕಿಂತ ಮುಂಚಿತವಾದ ಅತೀ ಪ್ರಧಾನವಾದ ಆವಿಷ್ಕಾರ ರೀತಿಯಾಗಿದೆ. ತನ್ನ ನಿರೀಕ್ಷಣೆ ಚಿಂತನೆ ಹಾಗೂ ಇಷ್ಟಗಳನ್ನು ಪ್ರಕಟಿಸುವ ಅತೀ ಪ್ರಭಲ ಮಾಧ್ಯಮವೂ ಚಿತ್ರಾ ರಚನೆಯೇ ಆಗಿದೆ. ನೋಡಿ ಕೇಳಿ ಅನುಭವಿಸಿದ ಆಶಯಗಳನ್ನು ಚಿತ್ರಗಳ ಮೂಲಕ ತಿಳಿಸಲು ಮಕ್ಕಳಿಗೆ ಸಾಧ್ಯವಾಗುವುದು. ಮಕ್ಕಳ ಬೆಳವಣಿಗೆಯೊಂದಿಗೆ ಚಿತ್ರರಚನಾ ಸಾಮರ್ಥ್ಯವೂ ಬೆಳೆಯುವುದು.

**ಮಗುವಿನ ಚಿತ್ರವನ್ನು ವಿಶ್ಲೇಷಿಸಿದರೆ ಯಾವೆಲ್ಲ ವಿಚಾರಗಳನ್ನು ಕಾಣಬಹುದು?**

- ನಿರೀಕ್ಷಣಾ ಸಾಮರ್ಥ್ಯ
- ಆಶಯಗ್ರಹಣದ ಫಲಪ್ರಾಪ್ತಿ
- ಆಶಯ ಗ್ರಹಣದ ಸಮಗ್ರತೆ

- ತನ್ನ ಸುತ್ತುಮುತ್ತಲಿರುವ ವಸ್ತುಗಳು, ಅವುಗಳ ವಿಶೇಷತೆಗಳನ್ನು ತಿಳಿಯುವ ಮಗುವಿನ ಸಾಮರ್ಥ್ಯ
- ಬಣ್ಣಗಳ ಕುರಿತಾದ ತಿಳುವಳಿಕೆ
- ಚಿತ್ರರಚನಾ ಸಾಮರ್ಥ್ಯ, ಇರುವ ಇತಿಮಿತಿಗಳು
- ಬರವಣಿಗೆಯ ಸಾಮಗ್ರಿ(ಕಾಗದ, ಪೆನ್ಸಿಲು, ಕ್ರಯೋನ್)ನ್ನು ಬಳಸುವ ಸಾಮರ್ಥ್ಯ/ ಇತಿಮಿತಿ)

ಮೇಲೆ ಹೇಳಿದ ಪ್ರತಿಯೊಂದನ್ನು ಸೂಕ್ಷ್ಮವಾಗಿ ತಿಳಿದು ಅಗತ್ಯವಿದ್ದಲ್ಲಿ ಸಹಾಯ ನೀಡುವುದರ ಮೂಲಕ ಚಿತ್ರರಚನಾ ಸಾಮರ್ಥ್ಯವನ್ನು ಬೆಳೆಸುವುದು ನಮ್ಮ ಕೆಲಸವಲ್ಲವೇ?

## ವಿವಿಧ ರಚನಾ ತಂತ್ರಗಳು

1. ಗೀಚುವುದು
2. ಲೈನ್ ಡ್ರೋಯಿಂಗ್
3. ಚುಕ್ಕಿಗಳನ್ನು ಜೋಡಿಸುವುದು
4. ಅರ್ಧ ಚಿತ್ರವನ್ನು ಪೂರ್ತಿಗೊಳಿಸುವುದು
5. ಸ್ಟೆನ್ಸಿಲ್ ಚಿತ್ರಗಳು
6. ಕಟೌಟ್ ಚಿತ್ರಗಳು
7. ಊದಿ ರಚಿಸುವ ಚಿತ್ರಗಳು
8. ಬೆರಳು ಚಿತ್ರಗಳು
9. ನೂಲು ಚಿತ್ರಗಳು







10. ಮಾರ್ಬ್ಲಿಂಗ್
11. ವೆಜಿಟೇಬಲ್ ಪ್ರಿಂಟಿಂಗ್
12. ಎಲೆಪ್ರಿಂಟ್
13. ಸ್ವತಂತ್ರ ಚಿತ್ರರಚನೆ
14. ಬಣ್ಣ ನೀಡುವುದು
15. ಮೇಣದ ಚಿತ್ರಗಳು
16. ಕೊಲೇಷ್
17. ಸ್ಪ್ರೇ ಪೈಂಟಿಂಗ್

ಚಿತ್ರಕಲೆಗೆ ಸಂಬಂಧಿಸಿದ ಹಲವು ರಚನಾತಂತ್ರಗಳನ್ನು ಪ್ರಿಸ್ಕೂಲ್ ಅಧ್ಯಾಪಿಕೆಯರಿಗೆ ಉಪಯೋಗಿಸಲು ಸಾಧ್ಯವಿದೆ. ಸುಲಭದಲ್ಲಿ ಮಾಡಲು ಸಾಧ್ಯವಿರುವ ಕೆಲವು ಚಟುವಟಿಕೆಗಳು ಯಾವುವೆಂದು ನೋಡುವ.

ಎಲ್ಲಾ ಮಕ್ಕಳಲ್ಲಿ ಒಬ್ಬ ಚಿತ್ರಕಲಾವಿದನೋ ಕಲಾವಿದೆಯೋ ಸುಪ್ತವಾಗಿರಬಹುದು. ತನ್ನ ಆಶಯಗಳನ್ನು ಬರವಣಿಗೆಯ ಮೂಲಕ ಆವಿಷ್ಕರಿಸಲು ಸಾಧ್ಯವಾಗುವ ಮಗು ಅದನ್ನು ಚಿತ್ರ ಬಿಡಿಸುವ ಮೂಲಕ ಪ್ರಕಟಿಸಲು ಪ್ರಯತ್ನಿಸಿರುವುದನ್ನು ನೀವು ನೋಡಿರಬಹುದು.

## ಗೀಚುವುದು (ಸ್ಕ್ರಿಬ್ಲಿಂಗ್)

*ಮೂರು ವರ್ಷದ ಸಜಿನಿ ಒಂದು ಕಾಗದವನ್ನು ಹಿಡಿದು ಅಪ್ಪನ ಬಳಿ ಓಡಿ ಬಂದಳು.*

*“ಅಪ್ಪಾ... ಅಪ್ಪಾ... ಇಲ್ಲಿ ನೋಡಿ, ನಾನು, ಅಪ್ಪ, ಅಮ್ಮ ಮತ್ತು ನನ್ನ ಚಿತ್ರವನ್ನು ಮಾಡಿದ್ದು ನೋಡಿದ್ದೀರಾ?” ಕಾಗದವನ್ನು ನೋಡಿದ ತಂದೆಗೆ ಅಸ್ಪಷ್ಟವಾದ ತುಂಬಾ ಗೆರೆಗಳು, ವೃತ್ತಗಳು, ಚುಕ್ಕೆಗಳು ಕಂಡವು.*

*“ಇದರಲ್ಲಿ ಅಪ್ಪ ಎಲ್ಲಿ ಮಗಳೇ?”*

*“ಇದೋ ಈ ಮೀಸೆ ಎಳೆದದ್ದೇ ಅಪ್ಪಾ, ಇದು ಅಮ್ಮ, ಇದು ನಾನು” ಮಗು ರಚಿಸಿದ ಚಿತ್ರದಿಂದ ಅಪ್ಪ, ಅಮ್ಮ ಮಗಳನ್ನು ಕಂಡು ಹಿಡಿಯಲು ಅಪ್ಪ ತುಂಬಾ ಹೆಣಗಾಡಿದರು!*

ಗೀಚು ಹಾಕಿ ಮಾಡಿದ ಈ ಚಿತ್ರವು ಅವಳಿಗೆ ಸಂಬಂಧಿಸಿ ಸ್ಪಷ್ಟವಾದ ಚಿತ್ರಗಳೇ ಆಗಿವೆ. ಚಿತ್ರರಚನೆ ಮತ್ತು ಬರವಣಿಗೆಯ ಬಾಲಪಾಠಗಳನ್ನು ಮಗು ಸ್ವಾಯತ್ತಗೊಳಿಸುವುದು ಗೀಚುವುದರ (ಸ್ಕ್ರಿಬ್ಲಿಂಗ್) ಮೂಲಕವಾಗಿರುತ್ತದೆ.

## ಲೈನ್ ಡ್ರೋಯಿಂಗ್

ರೇಖೆಗಳು ಮತ್ತು ವೃತ್ತಗಳನ್ನೂ ಸೇರಿಸಿ ಬೆಂಕಿಕಡ್ಡಿ ಚಿತ್ರಗಳನ್ನು (stick pictures) ರಚಿಸುವ ಹಂತಕ್ಕೆ ಮಕ್ಕಳು ಕ್ರಮೇಣ ತಲುಪುವರು. ಅವಯವಗಳ ವಿವರಣೆಗಳು ಇಲ್ಲದ, ಅವಯವಗಳು ಯಥಾಸ್ಥಾನದಲ್ಲಿಲ್ಲದ ಮನುಷ್ಯರ ಮತ್ತು ಮೃಗಗಳ ಚಿತ್ರಗಳನ್ನು ಮಕ್ಕಳು ಬಿಡಿಸುವುದನ್ನು ಕಾಣಬಹುದು. ವೃತ್ತ ಆಯತ, ತ್ರಿಕೋನ ಮೊದಲಾದ ಜ್ಯಾಮಿತೀಯ ಆಕೃತಿಗಳನ್ನು ಉಪಯೋಗಿಸಿ ಪರಿಸರದಲ್ಲಿ ಕಾಣುವ ವಸ್ತುಗಳ ಚಿತ್ರ ರಚಿಸಲಿರುವ ಸಾಮರ್ಥ್ಯವು ನಿಧಾನವಾಗಿ ಬೆಳೆಯುವುದು. ಇದನ್ನು ಬಳಸಿಕೊಂಡು ಸ್ವತಂತ್ರ ಚಿತ್ರ ರಚನೆಯಿಂದ ಸೂಚಿಸುವ ವಸ್ತು/ ಆಶಯಗಳ ಚಿತ್ರರಚನೆಯೆಡೆಗೆ ಮಕ್ಕಳಲ್ಲಿ ಕೊಂಡೊಯ್ಯುವ ಉದ್ದೇಶಪೂರ್ವಕ ಪ್ರಯತ್ನವನ್ನು ಪ್ರಿಸ್ಕೂಲ್ ಅಧ್ಯಾಪಿಕೆ ನಡೆಸಬೇಕು.

*ಸೂಕ್ಷ್ಮ ನಿರೀಕ್ಷಣೆಯ ಮೂಲಕ ವಿವರಗಳನ್ನು ಗ್ರಹಿಸಿ ಆವಿಷ್ಕರಿಸುವುದೇ ಚಿತ್ರ ರಚನೆಯ ತಳಹದಿ. ಮಾದರಿಗಳನ್ನು ತೋರಿಸಿ ನಿರೀಕ್ಷಣೆಗೆ ಪ್ರೇರಣೆ ನೀಡುವ ಫೀಡ್ ಬ್ಯಾಕ್‌ನಿಂದ ಮಕ್ಕಳ ರಚನೆಯನ್ನು ಉತ್ತಮಪಡಿಸಲು ಅಧ್ಯಾಪಿಕೆಗೆ ಸಾಧ್ಯವಿದೆ.*

## ಚುಕ್ಕಿಗಳನ್ನು ಜೋಡಿಸುವುದು

ಮಾದರಿಗಳನ್ನು ನೋಡಿ ಚುಕ್ಕಿಗಳನ್ನು ಮಾತ್ರ ನೀಡಿದ ಕಾಗದದಲ್ಲಿ ಸರಳವಾದ ಚಿತ್ರಗಳಳನ್ನು ರಚಿಸಲಿರುವ ಚಟುವಟಿಕೆಯನ್ನು ನಾಲ್ಕು ವರ್ಷದ ಮಕ್ಕಳಿಗೆ ನೀಡಬಹುದು. ಚುಕ್ಕಿಯಿಂದ ಚುಕ್ಕಿಗೆ ರೇಖೆಗಳನ್ನೆಳೆಯುವ ತರಬೇತಿಯು ಇದರಿಂದ ಲಭಿಸುವುದು. ಅಲ್ಲದೆ ಮಾದರಿಗಳನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡುವುದಕ್ಕೂ ಪುನರಾವಿಷ್ಕಾರ ನಡೆಸುವುದಕ್ಕೂ ಸಾಮರ್ಥ್ಯವನ್ನು ಗಳಿಸುತ್ತಾರೆ.

## ಅರ್ಧ ಚಿತ್ರವನ್ನು ಪೂರ್ತಿಗೊಳಿಸುವುದು

ಒಂದು ಭಾಗದ ಚಿತ್ರವನ್ನು ನೋಡಿ ಇನ್ನೊಂದು ಭಾಗವನ್ನು ಪೂರ್ತಿಗೊಳಿಸುವುದು ಚಿತ್ರ ರಚನೆಯಲ್ಲಿ ಉಪಯೋಗಿಸುವ ಒಂದು ತಂತ್ರವಾಗಿದೆ. ಚಿತ್ರವನ್ನು ನಿರೀಕ್ಷಣೆ ಮಾಡಿ ಉಳಿದರ್ಧ ಭಾಗದಲ್ಲಿ ಮಾಡಬೇಕಾದ ಬದಲಾವಣೆಗಳನ್ನು ಕಂಡುಹಿಡಿದು ಚಿತ್ರಿಸುವಾಗ ಸಾಮ್ಯ ವ್ಯತ್ಯಾಸಗಳನ್ನು (Symmetrical) ಕೂಡಾ ಪರಿಗಣಿಸಬೇಕಾಗುವುದು. ನಿರೀಕ್ಷಣೆಗಿಂತಲೂ ಮಿಗಿಲಾದ ಕೆಲವು ಮಾನಸಿಕ ಪ್ರಕ್ರಿಯೆಗಳನ್ನು ಇಂತಹ ರಚನೆಯ ಮೂಲಕ ಬೆಳೆಸಲು ಸಾಧ್ಯವಿಲ್ಲವೇ?

## ಸ್ಟೆನ್ಸಿಲ್/ಕಟೌಟ್ ಚಿತ್ರಗಳು

ಕಾರ್ಡು, ಎಕ್ಸ್‌ರೇ ಅಥವಾ ಪ್ಲಾಸ್ಟಿಕ್ ಶೀಟುಗಳಲ್ಲಿ ಚಿತ್ರಗಳ ಔಟ್‌ಲೈನ್ ರಚಿಸಿ ಒಳಭಾಗವನ್ನು ಕತ್ತರಿಸಿ ತೆಗೆದಾಗ ಸ್ಟೆನ್ಸಿಲ್ ತಯಾರಾಗುವುದು.

ಮೂರು ವರ್ಷದವರಿಗೆ ಚಿತ್ರಗಳನ್ನು ರಚಿಸಲು ಇದು ಉತ್ತಮ ಮಾರ್ಗವಾಗಿದೆ. ಪೆನ್ಸಿಲ್/ ಕ್ರಯೋನಿಂದ ಚಿತ್ರದ ಬದಿಗಳಿಂದಾಗಿ ಗೆರೆ ಎಳೆಯಬಹುದು. ಪೆನ್ಸಿಲಿನಂತಹ ಬರಹೋಪಕರಣಗಳನ್ನು ಹಿಡಿಯಲಿರುವ ತರಬೇತಿ ಇದರಿಂದ ಲಭಿಸುವುದು. ಕ್ರಯೋನಿನಿಂದ ಸ್ಟೆನ್ಸಿಲಿನ ಖಾಲಿ ಭಾಗಕ್ಕೆ ಬಣ್ಣವನ್ನು ಹೆಚ್ಚುವಾಗ ಸೂಕ್ಷ್ಮಪೇಶಿಗಳ ಚಲನಶೀಲತೆ ಅಧಿಕವಾಗುವುದಲ್ಲದೆ ಸ್ಟೆನ್ಸಿಲ್ ತೆಗೆದು ನೋಡುವಾಗ ಕಾಣುವ ಚಿತ್ರದ ಸೌಂದರ್ಯವು ಸೃಷ್ಟಿಸುವ ಕೌತುಕವೂ ಸಂತೋಷವೂ ಮಗುವಿಗೆ ವಿಭಿನ್ನ ಅನುಭವ ನೀಡುವುದಲ್ಲವೇ? ಹೀಗೆ ಪ್ರತಿಯೊಂದು ವಿಷಯಕ್ಕೂ ಯೋಗ್ಯವಾದ ಸ್ಟೆನ್ಸಿಲುಗಳನ್ನು ನಿರ್ಮಿಸಿ ಉಪಯೋಗಿಸಬಹುದು.

## ಕಟೌಟ್‌ಗಳು

ಸ್ಟೆನ್ಸಿಲ್‌ಗಳ ಚಿತ್ರದ ಹೊರಭಾಗದಲ್ಲಿ ಒಂದು ಕೈಯಿಂದ ಹಿಡಿದು ಇನ್ನೊಂದು ಕೈಯಿಂದ ಗೆರೆ ಎಳೆಯಲು ಸಾಧ್ಯವಿದೆ. ಆದರೆ ಕಟೌಟ್‌ಗಳ ಸುತ್ತ ಗೆರೆ ಎಳೆಯುವಾಗ ಮಧ್ಯಭಾಗದಲ್ಲಿಯೂ ಒತ್ತಿಹಿಡಿದು ಎಳೆಯಬೇಕು. ಸ್ವಲ್ಪ ತ್ರಾಸದಾಯಕದುದರಿಂದ ನಾಲ್ಕು ವರ್ಷದವರಿಗೆ ಕಟೌಟ್ ನೀಡಲು ಪ್ರಾರಂಭಿಸಬಹುದು. ಇಲ್ಲಿಯೂ ಕಟೌಟಿನ ಹೊರಬದಿಯಲ್ಲಿ ಗಮನವಿಟ್ಟು ಗೆರೆ ಎಳೆದರೆ ಮಾತ್ರ ಚಿತ್ರವನ್ನು ಪೂರ್ತಿಗೊಳಿಸಲು ಸಾಧ್ಯವಿದೆ. ಪ್ರೀಸ್ಕೂಲಿನಲ್ಲಿ ನೀಡುವ ಕಟೌಟ್ ಚಿತ್ರಗಳು ಮಗುವಿಗೆ ಮಾಡಲು ಸಾಧ್ಯವಾಗುವಂತಹ ದೊಡ್ಡ ಚಿತ್ರಗಳಾದರೆ ಉತ್ತಮ.

## ಊದಿ ರಚಿಸುವ ಚಿತ್ರಗಳು

ಕಾಗದದಲ್ಲಿ ಒಂದು ಬಿಂದು ಬಣ್ಣ ಹಾಕಿ ಸ್ಟ್ರಾವನ್ನು ಉಪಯೋಗಿಸಿ ಬಣ್ಣವನ್ನು ಊದುವುದಾಗಿದೆ. ಬಣ್ಣವು ಗೆರೆಗಳಾಗಿ ಹಲವೆಡೆಯಲ್ಲಿ ಹರಡುವುದನ್ನು ಕಾಣಬಹುದು. ಉಂಟಾಗುವ ಗೆರೆಗಳ ತುದಿಗಳಲ್ಲಿ ಕಾಗದವನ್ನು ಸುತ್ತಿ ಬಣ್ಣದಲ್ಲಿ ಮುಳುಗಿಸಿ ಅಚ್ಚು ಒತ್ತಿದರೆ ಸುಂದರವಾದ ಹೂಗಳ ನಿರ್ಮಾಣವಾಗುವುದು. ಹಸುರು ಬಣ್ಣ ಉಪಯೋಗಿಸಿ ಎಲೆಗಳನ್ನೂ ಈ ರೀತಿ ಚಿತ್ರಿಸಬಹುದು.

## ಬೆರಳು ಚಿತ್ರಗಳು

ಕೈಬೆರಳನ್ನು ಬಣ್ಣದಲ್ಲಿ ಮುಳುಗಿಸಿ ಕಾಗದದಲ್ಲಿ ಒತ್ತಿ ಬೆರಳು ಚಿತ್ರಗಳನ್ನು ರಚಿಸಬಹುದು. ಹಸ್ತ ಪೂರ್ತಿ ಬಣ್ಣ ಹಚ್ಚಿಯೂ ಬೆರಳ ತುದಿಗೆ ಮಾತ್ರ ಬಣ್ಣ ಹಚ್ಚಿಯೂ ಚಿತ್ರಗಳನ್ನು ರಚಿಸಬಹುದು. ಚಿತ್ರದಲ್ಲಿ ಸ್ಕೆಚ್‌ಪೆನ್‌ನಿಂದ ಸಣ್ಣಗೆರೆಗಳನ್ನೆಳೆದು ಹೂ, ಪಕ್ಷಿ, ಮೃಗ ಹಾಗೂ ಮತ್ತಿತ್ತರ ವಸ್ತುಗಳನ್ನು ಮಾಡಲು ಸಾಧ್ಯವಾಗುವುದು.

## ನೂಲು ಚಿತ್ರಗಳು

ಕಾಗದವನ್ನು ಮಧ್ಯಭಾಗದಲ್ಲಿ ಮಡಚಬೇಕು. ಮಡಚಿದ ಭಾಗವನ್ನು ತೆರೆದು ಬಣ್ಣದಲ್ಲಿ ಮುಳುಗಿಸಿದ ನೂಲನ್ನು ಕಾಗದದ ಒಳಗೆ ಸುರುಳಿ ಸುರುಳಿಯಾಗಿ ತುದಿಯು ಹೊರಗೆ ಕಾಣುವಂತೆ ಇರಿಸಬೇಕು. ಪುನಃ ಕಾಗದವನ್ನು ನೂಲಿನ ಮೇಲೆ ಮಡಚಿರಿ. ಗಟ್ಟಿಯಾದ ಕಾರ್ಡ್‌ಬೋರ್ಡಿನ ತುಂಡು ಅಥವಾ ಒಂದು ಪುಸ್ತಕವನ್ನು ಕಾಗದದ ಮೇಲೆ ಇರಿಸಿ ಒತ್ತಿ ಹಿಡಿದು ಹೊರಗೆ ಕಾಣಿಸುವ ನೂಲಿನ ತುದಿಯನ್ನು ಎಳೆಯಿರಿ. ಕಾಗದದ ಎರಡೂ ಬದಿಗಳಲ್ಲಿ ಮೂಡಿಬಂದ ಚಿತ್ರವನ್ನು ನೋಡಿರಿ. ವಿವಿಧ ಬಣ್ಣಗಳನ್ನು ಉಪಯೋಗಿಸಿ ವೈವಿಧ್ಯಮಯವಾದ ಚಿತ್ರಗಳನ್ನು ನಿರ್ಮಿಸಬಹುದು.

## ತರಕಾರಿ ಪ್ರಿಂಟಿಂಗ್

ಬೆಂಡೆಕಾಯಿ, ಕೆಸುವಿನ ದಂಟು, ಬಾಳೆಯ ಕೈ, ನೀರುಳ್ಳಿ, ಬೀನ್ಸ್, ಕ್ಯಾಪ್ಸಿಕಂ ಮೊದಲಾದವುಗಳನ್ನು ತುಂಡರಿಸಿ ಬಣ್ಣದಲ್ಲಿ ಮುಳುಗಿಸಿ ಅಚ್ಚೊತ್ತಿ ಹೂಗಳನ್ನೂ ಡಿಸೈನುಗಳನ್ನೂ ನಿರ್ಮಿಸಬಹುದು.

## ಎಲೆ ಪ್ರಿಂಟಿಂಗ್

ಎಲೆಗಳ ಅಡಿಭಾಗದಲ್ಲಿ ಬಣ್ಣ ಹಚ್ಚಿ ಅದನ್ನು ಕಾಗದದಲ್ಲಿ ಒತ್ತುವುದು, ಒಂದು ರೀತಿಯಾಗಿದೆ. ಕಾಗದದಲ್ಲಿ, ಬಣ್ಣ ಹಚ್ಚಿದ ಎಲೆಗಳನ್ನು ಇರಿಸಿದ ಬಳಿಕ ಒಂದು ಕಾರ್ಡ್‌ಬೋರ್ಡನ್ನು ಮೇಲಿರಿಸಿ ಒತ್ತಿದರೂ ಆಗಬಹುದು. ಕಾಗದದ ಅಡಿಯಲ್ಲಿ ಎಲೆಯನ್ನು ಇರಿಸಿ ಮೇಲ್ಭಾಗದಲ್ಲಿ ಕ್ರಯೋನಿನಿಂದ ಉಜ್ಜಿದರೂ ಎಲೆಗಳ ನರಗಳು ಎದ್ದು ಕಾಣುವ ಚಿತ್ರ ಮೂಡಬಹುದು.

## ಸ್ಪ್ರೇ ಪೈಂಟಿಂಗ್

ಎಲೆಗಳು ಅಥವಾ ಕತ್ತರಿಸಿ ತೆಗೆದ ಚಿತ್ರಗಳನ್ನು ಕಾಗದದಲ್ಲಿ ಇರಿಸಿರಿ. ಹಳೆಯ ಟೂತ್‌ಬ್ರಶ್‌ನ್ನು ಬಣ್ಣದಲ್ಲಿ ಮುಳುಗಿಸಿ ಬಣ್ಣದ ಹನಿಗಳು ಕಾಗದದಲ್ಲಿ ಚಿಮ್ಮುವಂತೆ ಬ್ರಶ್‌ನ ಮೇಲ್ಭಾಗದಲ್ಲಿ ಬೆರಳನ್ನಾಡಿಸಿರಿ. ಎಲೆ/ಚಿತ್ರದ ಬದಿಗಳಲ್ಲಿ ಬಣ್ಣವು ಚಿಮುಕಿದ ನಂತರ ಎಲೆ/ಚಿತ್ರವನ್ನು ತೆಗೆಯಿರಿ. ಬಿಳಿಯ ನೆರಳು ಕಾಗದದಲ್ಲಿ ಪ್ರತ್ಯಕ್ಷವಾಗುವುದು. ಸುತ್ತಲೂ ಬಣ್ಣವು ಚದುರಿರುವುದನ್ನು ಕಾಣಬಹುದು. ಹೆಚ್ಚು ಬಣ್ಣಗಳನ್ನು ಉಪಯೋಗಿಸಿದರೆ ಇನ್ನೂ ಉತ್ತಮ.

## ಕೊಲೇಷ್

ಕೊಲೇಷ್ ಎಂಬುದು ಬಣ್ಣದ ಕಾಗದದ ತುಂಡುಗಳನ್ನೋ ಬಟ್ಟೆಯ ತುಂಡುಗಳನ್ನೋ ಅಂಟಿಸಿ ತಯಾರಿಸುವ ಚಿತ್ರವಾಗಿದೆ. ಪ್ರಿಸ್ಕೂಲ್ ತರಗತಿಗಳಲ್ಲಿ ಔಟ್‌ಲೈನ್ ಚಿತ್ರದ ಒಳಭಾಗದಲ್ಲಿ ಸೂಕ್ತವಾದ ಬಣ್ಣದ ಕಾಗದದ ತುಂಡುಗಳನ್ನು ಅಂಟಿಸುವುದು ಒಳ್ಳೆಯದು. ಕಾಗದವನ್ನು ಸಣ್ಣದಾಗಿ ಹರಿಯುವುದು. ನಂತರ ಅಂಟು ಹಚ್ಚುವುದು. ಅಂಟಿಸುವುದು ಮೊದಲಾದ ಸೂಕ್ಷ್ಮ ಚಟುವಟಿಕೆಗಳಲ್ಲಿ ಮಕ್ಕಳು ತೊಡಗಿಸಿಕೊಳ್ಳುವಾಗ ಕೈಬೆರಳುಗಳ ಪೇಶಿಗಳ ವಿಕಾಸವು ಸಾಧ್ಯವಾಗುವುದು. ಮಾತ್ರವಲ್ಲ ಬಣ್ಣಗಳ ಆಯ್ಕೆಯಲ್ಲಿಯೂ ಚಿತ್ರವನ್ನು ಆಕರ್ಷಕಗೊಳಿಸುವುದರಲ್ಲಿಯೂ ಭಾವನೆ ಮತ್ತು ಕ್ರಿಯಾಶೀಲತೆಯನ್ನು ಉಪಯೋಗಿಸುತ್ತಾರಲ್ಲವೇ?

## ಮೇಣದ ಚಿತ್ರಗಳು

ಮೇಣದಬತ್ತಿ/ಬಿಳಿ ಬಣ್ಣದ ಕ್ರಯೋನ್ ಉಪಯೋಗಿಸಿ ಬಿಳಿಕಾಗದದಲ್ಲಿ ಮೊದಲೇ ಚಿತ್ರ ರಚಿಸಿ ನೀಡುವುದು. ನಂತರ ಕಾಗದದಲ್ಲಿ ಕಡುಬಣ್ಣವನ್ನು ಹಚ್ಚುವುದು. ಆಗ ಮೇಣದಬತ್ತಿಯಿಂದ

ಮಾಡಿದ ಚಿತ್ರವು ಕಾಗದದಲ್ಲಿ ಮೂಡಿ ಬರುವುದು. ಮಕ್ಕಳಿಗಿದು ಕೌತುಕವಾಗಬಹುದು.

## ಮಾರ್ಬ್ಲಿಂಗ್

ಅಗಲವಾದ ಪಾತ್ರೆಯಲ್ಲಿರುವ ನೀರಿನಲ್ಲಿ ಹಲವು ಬಣ್ಣಗಳಲ್ಲಿರುವ ಇನಾಮಲ್ ಪೈಂಟ್‌ಗಳ ಬಿಂದುಗಳನ್ನು ಹಾಕಿರಿ. ಒಂದು ಕೋಲು ತೆಗೆದು ಕದಡಿಸಿರಿ. ನೀರಿನ ಮೇಲ್ಭಾಗದಲ್ಲಿ ವಿವಿಧ ಡಿಸೈನ್‌ಗಳಾಗಿ ಬಣ್ಣ ಚದುರಿ ನಿಲ್ಲುವುದು. ನಿಧಾನವಾಗಿ ಕಾಗದವನ್ನು ನೀರಿನ ಮೇಲ್ಭಾಗದಲ್ಲಿ ಇರಿಸಿ ತೆಗೆಯಬೇಕು. ಕಾಗದದಲ್ಲಿ ಮಾರ್ಬಲಿನಂತೆ ಡಿಸೈನ್ ಮೂಡುವುದು. ಮಕ್ಕಳಿಂದ ಮಾಡಿಸುವಾಗ ಪೈಂಟ್ ಕೈಗೆ ಅಂಟದಂತೆ ಕಾಗದದ ಎರಡೂ ಬದಿಗಳನ್ನು ಮಡಚಿ ಅದರಲ್ಲಿ ಹಿಡಿದು ನೀರಿನ ಮೇಲ್ಭಾಗದಲ್ಲಿ ಇರಿಸಬೇಕು.

## ಸ್ವತಂತ್ರ ಚಿತ್ರ ರಚನೆ

ಚಿತ್ರರಚನೆಯು ಮಕ್ಕಳು ಮನಸ್ಸಿನಲ್ಲಿರುವ ಆಶಯಗಳನ್ನು ಪ್ರಕಟಪಡಿಸಲಿರುವ ಒಂದು ಪ್ರಬಲವಾದ ಮಾಧ್ಯಮವಾಗಿದೆ. ಬಳಸುವ ಆಶಯಗಳು ಮಾತ್ರವಲ್ಲ, ಅವರ ಭಾವೋದ್ವೇಗಗಳನ್ನು ಪ್ರಕಟಪಡಿಸಲು ಚಿತ್ರಗಳನ್ನು ಉಪಯೋಗಿಸುವ ಸಂದರ್ಭವಿದೆ. ಬಾಯ್ದೆರೆಯಾಗಿ ಪ್ರಕಟಪಡಿಸಲು ಕಷ್ಟವಾಗುವ ಮಕ್ಕಳಿಗೆ ಆಶಯ ಪ್ರಕಟಣೆ. ತ್ರರಚನೆಯ ಮೂಲಕ ಸಾಧ್ಯವಾಗಬಹುದು. ಪ್ರತಿಯೊಂದು ವಿಷಯದಲ್ಲಿ ಗಳಿಸಿದ ಜ್ಞಾನವನ್ನು ಪರಿಶೋಧಿಸುವುದಕ್ಕೂ, ತರಗತಿ ಅನುಭವಗಳನ್ನು ನೀಡಿದ ನಂತರ ಗಳಿಸಿದ ಹೊಸ ಆಶಯಗಳನ್ನು ಆವಿಷ್ಕರಿಸುವುದಕ್ಕೂ ಸ್ವತಂತ್ರ ಚಿತ್ರರಚನೆಯ ಮೂಲಕ ಸಾಧ್ಯವಾಗುವುದು.

**ವಿವಿಧ ರೀತಿಯಲ್ಲಿ ಸ್ವತಂತ್ರ ರಚನೆಯನ್ನು ನಿರ್ವಹಿಸಬಹುದು.**

ಉದಾಹರಣೆಗೆ – ವಿವಿಧ ಬಣ್ಣದ ಚೋಕುಗಳನ್ನು ಉಪಯೋಗಿಸಿ ನೆಲದಲ್ಲಿ ಚಿತ್ರ ರಚಿಸಲು ಮಗುವಿಗೆ ಅವಕಾಶ ಒದಗಿಸಬೇಕು. ಸಣ್ಣ ಚಿತ್ರಗಳನ್ನು ಮಾತ್ರ ಮಾಡಿ ಅಭ್ಯಾಸವಿರುವ ಮಕ್ಕಳಿಗೆ ದೊಡ್ಡ ಚಿತ್ರ ಮಾಡುವ ತರಬೇತಿಯೂ ಇದರ ಮೂಲಕ ಲಭಿಸುವುದು. ನೆಲವನ್ನು ಉಪಯೋಗಿಸಲು ಸಾಧ್ಯವಿಲ್ಲದೆಡೆಗಳಲ್ಲಿ ಶಿಶು ಸ್ನೇಹಿ ಕರಿಹಲಗೆಯನ್ನು ಉಪಯೋಗಿಸಿಕೊಳ್ಳಬಹುದು.

## ಬಣ್ಣ ನೀಡುವುದು.

3+ ಪ್ರಾಯದಲ್ಲಿ ಮಕ್ಕಳು ಬಣ್ಣ ನೀಡುವುದಕ್ಕಿರುವ ಮಾಧ್ಯಮವಾಗಿ ಕ್ರಯೋನ್‌ಗಳನ್ನು ಉಪಯೋಗಿಸುವುದು ಉತ್ತಮ. 4+ ಪ್ರಾಯದಲ್ಲಿ ಮಕ್ಕಳು ಕಲರ್ ಪೆನ್ಸಿಲುಗಳು ಸ್ಕೆಚ್‌ಪೆನ್, ಜಲವರ್ಣ ಮೊದಲಾದ ಮಾಧ್ಯಮಗಳನ್ನು ಬಣ್ಣ ನೀಡಲು ಉಪಯೋಗಿಸಬಹುದು.

ನಿರ್ದಿಷ್ಟ ಚೌಕಟ್ಟಿನೊಳಗೆ ಬಣ್ಣ ಕೊಡಲು ಮಕ್ಕಳಿಗೆ ಮೊದಲ ಹಂತದಲ್ಲಿ ಸಾಧ್ಯವಾಗಲಾರದು. ಕ್ರಮೇಣ ಆ ಸಾಮರ್ಥ್ಯಕ್ಕೆ ತಲಪಲು ಸಾಕಷ್ಟು ಚಟುವಟಿಕೆಗಳನ್ನು ಪ್ರತಿಯೊಂದು ವಿಷಯದ ಭಾಗವಾಗಿ ನೀಡಬೇಕಾಗುವುದು. ಯೋಗ್ಯವಾದ ಬಣ್ಣವನ್ನು ಆರಿಸುವುದಕ್ಕೂ ಮತ್ತು ಅದರ ಯುಕ್ತಿಯನ್ನು ಹೇಳುವುದಕ್ಕೂ ಮಕ್ಕಳಿಗೆ ಅವಕಾಶ ನೀಡಿದರೆ ಉತ್ತಮ.

ವಾಟರ್‌ಕಲರ್ ಉಪಯೋಗಿಸುವಾಗ ಬ್ರಶ್‌ಗಳಿಗೆ ಬದಲಾಗಿ ಸ್ಪಂಜಿನ ತುಂಡು, ಇಯರ್‌ಬಡ್ಸ್ ಮೊದಲಾದವುಗಳನ್ನು ಉಪಯೋಗಿಸಿ ಬಣ್ಣ ನೀಡಲಿರುವ ಅವಕಾಶಗಳನ್ನು ಮೊದಲ ಹಂತದಲ್ಲಿ ನೀಡಬೇಕು.

ವಿವಿಧ ರೀತಿಯ ಚಿತ್ರ ರಚನಾ ತಂತ್ರಗಳ ಪರಿಚಯವಾಯಿತಲ್ಲವೇ?. ಚಿತ್ರ ರಚನೆಗೆ ಮೊದಲು ಚಿತ್ರಗಳನ್ನು ನೋಡುವುದಕ್ಕೂ ಮತ್ತು ಅವುಗಳನ್ನು ಓದುವುದಕ್ಕೂ ಸಾಕಷ್ಟು ಅನುಭವಗಳನ್ನು ಮಕ್ಕಳಿಗೆ ನೀಡಬೇಕಲ್ಲವೇ?

ಪ್ರಿಸ್ಕೂಲಿನ ಗೋಡೆಗಳನ್ನು ಶಿಶುಸ್ನೇಹಿಯಾದ ಚಿತ್ರಗಳಿಂದ ಆಕರ್ಷಕಗೊಳಿಸಲು ಸಾಧ್ಯವಿಲ್ಲವೇ? ಮಕ್ಕಳು ಇಷ್ಟಪಡುವ ಕಥಾಪಾತ್ರಗಳ ಆಹ್ಲಾದಕರವಾದ ವಾತಾವರಣವನ್ನು ಮೂಡಿಸುವ ಚಿತ್ರಗಳ ಹಿನ್ನಲೆಯಿರುವುದು ಉತ್ತಮ.

ಪ್ರಿಸ್ಕೂಲ್‌ನಲ್ಲಿ ಚಿತ್ರಮೂಲೆಯೊಂದನ್ನು ಸಿದ್ಧಗೊಳಿಸುವುದು ಉತ್ತಮ. ಅಲ್ಲಿ ಏನೇನು ಇರಬೇಕು?

- ಚಿತ್ರ ರಚನೆಗೆ ಅಗತ್ಯವಾದ ಉಪಕರಣಗಳು (ಕಾಗದ, ಕ್ರಯೋನ್ಸ್, ಸ್ಕೆಚ್‌ಪೆನ್‌ಗಳು, ಪೆನ್ಸಿಲುಗಳು, ವಾಟರ್‌ಕಲರ್, ನೀರು, ಪೇಲೆಟ್(Palette), ಬಣ್ಣ ತೆಗೆಯಲು ಬೇಕಾದ ಪಾತ್ರೆಗಳು, ಸ್ಪೋಂಜ್ ತುಂಡುಗಳು, ಇಯರ್‌ಬಡ್ಸ್, ಬ್ರಶ್‌ಗಳು, ಹಳೆಯ ಟೂತ್‌ಬ್ರಶ್,

ಬಣ್ಣದ ಕಾಗದಗಳು, ಹಳೆ ಸಂಚಿಕೆಗಳು, ಅಂಟು....)

- ಮಕ್ಕಳು ರಚಿಸಿದ ಚಿತ್ರಗಳನ್ನು ಪ್ರದರ್ಶಿಸಲಿರುವ ಡಿಸ್‌ಪ್ಲೇ ಬೋರ್ಡ್
- ಚಿತ್ರದ ಮಾದರಿಗಳು
- ಚಿತ್ರ ಪುಸ್ತಕಗಳು

## ಪೋರ್ಟ್‌ಫೋಲಿಯೋ

ಪ್ರೀಸ್ಕೂಲಿನಲ್ಲಿ ಮಕ್ಕಳ ಪ್ರತಿಭಾ ವಿಕಾಸಕ್ಕಿರುವ ಸಾಕ್ಷಿಗಳಾಗಿ ಉಪಯೋಗಿಸಲು ಸಾಧ್ಯವಿರುವವುಗಳಲ್ಲಿ ಅತಿಪ್ರಧಾನವಾದುದು ಮಕ್ಕಳ ಚಿತ್ರಗಳಾಗಿವೆ. ಪ್ರೀಸ್ಕೂಲಿನಲ್ಲಿ ಸೇರುವ ಸಮಯದಲ್ಲಿರುವ ಮಕ್ಕಳ ರಚನೆಗಳನ್ನೂ ಪ್ರತಿಯೊಂದು ತಿಂಗಳೂ ಕಳೆಯುವಾಗ ರಚನೆಯಲ್ಲಾಗುವ ಬದಲಾವಣೆಗಳನ್ನೂ ಸ್ಪಷ್ಟವಾಗಿ ಅರ್ಥೈಸುವುದಕ್ಕೂ ಹೆತ್ತವರಿಗೆ ತಿಳಿಸುವುದಕ್ಕೂ ಸಾಧ್ಯವಾಗುವುದು.

ಹೀಗೆ ಪ್ರತಿಯೊಂದು ಮಗುವಿನ ರಚನೆಗಳನ್ನು ಸಂಗ್ರಹಿಸಿ ಒಂದು ಪೋರ್ಟ್‌ಫೋಲಿಯೋ ಬ್ಯಾಗ್‌ನಲ್ಲಿ ಸಂಗ್ರಹಿಸಿಡುವುದು ಉತ್ತಮ. ಅಧ್ಯಾಪಕರಿಗೆ ಮಕ್ಕಳನ್ನು ಮೌಲ್ಯನಿರ್ಣಯ ಮಾಡಿ ಟಿಪ್ಪಣಿ ತಯಾರಿಸುವುದಕ್ಕೂ ಮಕ್ಕಳಿಗೆ, ಹೆತ್ತವರಿಗೆ, ಅಧಿಕಾರಿಗಳಿಗೆ ತಿಳಿಸುವುದಕ್ಕೂ ಇದರಿಂದ ಸಾಧ್ಯವಾಗುವುದು.

ಮಕ್ಕಳು ರಚಿಸಿದ ಚಿತ್ರಗಳನ್ನು ಚಟುವಟಿಕೆಯ ನಂತರ ಪ್ರದರ್ಶಿಸಬೇಕು. ಉತ್ತಮವಾದವುಗಳನ್ನು ಆರಿಸುವ ಅವಕಾಶವನ್ನು ನೀಡಬೇಕು.

- ಅತ್ಯಂತ ಉತ್ತಮವಾದುದು ಯಾವುದು?
- ಆ ಚಿತ್ರಕ್ಕೆ ಇರುವ ಪ್ರತ್ಯೇಕತೆಗಳೇನು?

ಹೀಗಿರುವ ಪ್ರಶ್ನೆಗಳು ಮಕ್ಕಳ ಚಿಂತನೆ ಮತ್ತು ನಿರೀಕ್ಷಣಾ ಸಾಮರ್ಥ್ಯದ ಬೆಳವಣಿಗೆಗೆ ಸಹಾಯಕವಾಗಬಹುದಲ್ಲವೇ? ಮಗು ಇಲ್ಲಿ ಸ್ವ – ಚಿತ್ರದೊಂದಿಗೆ ಹೋಲಿಸುವಾಗ ಉಂಟಾಗುವ ಸ್ವ – ತಿಳುವಳಿಕೆಯು ತನ್ನ ಕಲಿಕೆಯನ್ನು ಉತ್ತಮಪಡಿಸಲು ಸಹಾಯ ಮಾಡುವುದು. ಹಾಗಾಗಿ ಪ್ರತಿಯೊಂದು ರಚನೆಯ ಕೊನೆಯಲ್ಲೂ ಈ ರೀತಿಯ ಮೌಲ್ಯನಿರ್ಣಯ ಸಾಧ್ಯತೆಗಳನ್ನು ಉಪಯೋಗಿಸಲು ಗಮನಿಸಬೇಕು.







## ಗಾಡಿ ಗಾಡಿ ಎಲೆಗಾಡಿ

ಮಕ್ಕಳು ಅನುಕರಣೆಯ ಸ್ವಭಾವವುಳ್ಳವರಾಗಿದ್ದಾರೆ. ಈ ವಿಶೇಷ ಸ್ವಭಾವವು ರಚನೆಯಲ್ಲೂ, ನಿರ್ಮಾಣದಲ್ಲೂ ಕಂಡುಬರುವುದು. ಪ್ರಕೃತಿಯಲ್ಲಿ ಕಾಣುವ ವಸ್ತುಗಳ ಮಾದರಿಗಳನ್ನು ತನ್ನದೇ ಆದ ರೀತಿಯಲ್ಲಿ ಆವಿಷ್ಕರಿಸಲು ಮಕ್ಕಳು ಹೆಚ್ಚು ಆಸಕ್ತರಾಗಿರುತ್ತಾರೆ. ಈ ವಿಶೇಷತೆಯ ಪ್ರಯೋಜನ ಪಡೆಯಲು ಸಾಕಷ್ಟು ಚಟುವಟಿಕೆಗಳಿಗೆ ಪ್ರೀಸ್ಕೂಲ್‌ನಲ್ಲಿ ಸಾಧ್ಯತೆಯಿದೆ. ಪೇಪರ್ ಮಡಚಿ ವಿವಿಧ ರೂಪಗಳನ್ನು ನಿರ್ಮಿಸುವುದು. ಪ್ರಕೃತಿಯಿಂದ ದೊರಕುವ ಎಲೆಗಳು, ಕಾಯಿಗಳು ಎಂಬಿವುಗಳನ್ನು ಉಪಯೋಗಿಸಿ ಆಟಿಕೆಗಳನ್ನು ನಿರ್ಮಿಸುವುದು, ಕತ್ತರಿಸಿಯೂ ಅಂಟಿಸಿಯೂ ವಸ್ತುಗಳನ್ನು ನಿರ್ಮಿಸುವುದು ಎಂಬಿವುಗಳೆಲ್ಲವೂ ನಿರ್ಮಾಣ ಚಟುವಟಿಕೆಗಳು ಆಗಿದೆ.

### ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗುವಾಗ

- ಸೂಕ್ಷ್ಮಪೇಶೀ ವಿಕಾಸಕ್ಕೆ ಅವಕಾಶ ಲಭಿಸುವುದು.
- ಸೃಜನಾತ್ಮಕ, ಸೌಂದರ್ಯಾತ್ಮಕ, ಸಾಮರ್ಥ್ಯ ವಿಕಾಸವಾಗುವುದು.
- ಸಾಮಾಜಿಕ – ಭಾವನಾತ್ಮಕ ವಿಕಾಸ ಉಂಟಾಗುವುದು.
- ಕೈ – ಕಣ್ಣುಗಳ ಸಂಯೋಜನೆ ಸಾಧ್ಯವಾಗುವುದು.
- ಇದರ ಹೊರತಾಗಿ ಪ್ರಕೃತಿಯೊಂದಿಗೂ ಪ್ರಕೃತಿಯಲ್ಲಿರುವ ತ್ಯಾಜ್ಯವಸ್ತುಗಳೊಂದಿಗೂ ಆಸಕ್ತಿ ಹುಟ್ಟಿಸಲು ಸಾಧ್ಯವಾಗುವುದು.
- ನಿರ್ಮಾಣವು ಮಗುವಿಗೆ ಹೆಚ್ಚು ಆಸಕ್ತಿಯಿರುವ ಚಟುವಟಿಕೆಯಾಗಿದೆ.

ಹೆಚ್ಚು ತಂತ್ರಜ್ಞಾನದ ಅಗತ್ಯವಿರುವ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಲು 3+, 4+ ಪ್ರಾಯವಿರುವ ಮಕ್ಕಳಿಗೆ ಸಾಧ್ಯವಿಲ್ಲ. ಇದರಲ್ಲೂ 3+,4+ ವ್ಯತ್ಯಾಸಗಳಿವೆ.

ಟೀಚರ್ ತಯಾರಿಸುವುದನ್ನು ನಿರೀಕ್ಷಣೆ ಮಾಡಲು ಮತ್ತು ಆಸ್ವಾದಿಸಲು ಮಗುವಿಗೆ ಅವಕಾಶ ನೀಡಬೇಕು. ಕಾಗದ ಉಪಯೋಗಿಸಿ ವಿವಿಧ ನಿರ್ಮಾಣ ಚಟುವಟಿಕೆಗಳನ್ನು ಮಾಡಲು ಸಾಧ್ಯವಿದೆ. ಅತ್ಯಂತ ಸುಲಭವಾಗಿ ಒಂದು ದೋಣಿಯ ಆಕೃತಿ ಮಾಡುವುದನ್ನು ನೋಡಿರಿ. ಕಾಗದವನ್ನು ತ್ರಿಕೋನಾಕೃತಿಯಲ್ಲಿ ಕತ್ತರಿಸಿ ತುದಿಯನ್ನು ಮಡಚಿ ದೋಣಿ ಆಕೃತಿಯನ್ನು ಮಾಡಬಹುದು.




ಹೀಗೆ ತಯಾರಿಸುವ ದೋಣಿಯನ್ನು ಬಣ್ಣ ಹಚ್ಚಿ ಆಕರ್ಷಕಗೊಳಿಸಬಹುದು. ಇದನ್ನು ಉಪಯೋಗಿಸಿ ಗುಂಪು ಮಾಡುವುದು, ಸಾಲುಗಳಾಗಿ ಕ್ರಮೀಕರಿಸುವುದು ಒಂದೇ ಬಣ್ಣದವುಗಳನ್ನು ಕ್ರಮೀಕರಿಸುವುದು ಹೀಗೆ ಹಲವಾರು ಚಟುವಟಿಕೆಗಳಿಗೆ ಸಾಧ್ಯತೆಯಿದೆಯಲ್ಲವೇ? ಆಗ ನಿರ್ಮಾಣವೆಂಬುದು ಕೇವಲ ಒಂದು ಚಟುವಟಿಕೆಯಾಗದೆ, ನಿರ್ಮಿಸಿದ ವಸ್ತುಗಳನ್ನು ಉಪಯೋಗಿಸಿ ಕೆಲವೊಂದು ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವ ರೀತಿಯಲ್ಲಿ ಮುಂದುವರಿಯುವುದು.

ಮಡಲನ್ನು ಉಪಯೋಗಿಸಿ ವಾಚು, ಗಿರಿಗಿಟಿ, ಕನ್ನಡಕ, ಗೊಂಬೆ, ಚೆಂಡು, ಹಾವು.... ಹೀಗೆ ಹಲವಾರು ಆಟಿಕೆಗಳನ್ನು ಮಾಡಬಹುದಲ್ಲವೇ? ಚೆಂಡುಪೊಳೆ, ಹಲಸಿನೆಲೆಗಳಿಂದ ತಯಾರಿಸುವ ಗಾಡಿ, ಬೀಜಗಳನ್ನು ಅಂಟಿಸಿದ ಚಿತ್ರಗಳು, ಕೊಲೇಷ್, ಸೋಕ್ಸಿನೊಳಗೆ ಹತ್ತಿ ತುಂಬಿಸಿ ಬೊಂಬೆ,



ರಟ್ಟಿನ ಪೆಟ್ಟಿಗೆಯಿಂದ ಮನೆ ಹೀಗೆ ಹಲವಾರು ಸಾಧ್ಯತೆಗಳಿವೆ.

ಪ್ರತಿಯೊಂದು ನಿರ್ಮಾಣ ಚಟುವಟಿಕೆಯು ಕಳೆದಾಗ ಅದನ್ನು ಉಪಯೋಗಿಸಿ ಇನ್ನೊಂದು ಚಟುವಟಿಕೆಯನ್ನು ಆಯೋಜಿಸಿ ನಡೆಸಲು ಸಾಧ್ಯವಾಗಬೇಕು. ಇದು ಆಟಗಳು ಗಣಿತಪೂರ್ವ ಚಟುವಟಿಕೆ, ಭಾಷಾಪರವಾದ ಚಟುವಟಿಕೆ, ಅವುಗಳಲ್ಲಿ ಯಾವುದೂ ಆಗಬಹುದು. ಟೀಚರ್ ಸರಿಯಾದಯೋಜನೆಯನ್ನು ಮಾಡಿ ನಿರ್ಮಾಣ ಚಟುವಟಿಕೆಯನ್ನು ನಡೆಸಬೇಕು.

ಅಂಗಡಿಯಿಂದ ಖರೀದಿಸುವ ಆಟಿಕೆಗಳಿಗಿಂತಲೂ ಮಗುವಿಗೆ ಹೆಚ್ಚು ಆಸಕ್ತಿ ಇರುವುದು ಅವನು ಸ್ವಂತವಾಗಿ ತಯಾರಿಸಿದ ಆಟಿಕೆಗಳಲ್ಲಿ. ಅದು ಮಗುವಿನಲ್ಲಿ ಅಭಿಮಾನ ಪ್ರಜ್ಞೆಯನ್ನು ಮೂಡಿಸುವುದು. ಆತ್ಮವಿಶ್ವಾಸವನ್ನು ಬೆಳೆಯುವುದು ಹೆಚ್ಚಿಸುವುದು. ಕಸವನ್ನು ರಸವಾಗಿ ಬದಲಾಯಿಸುವ ಹವ್ಯಾಸವು ಬೆಳೆಯುವುದು.



- ಮಗು ತನ್ನ ಪರಿಸರವನ್ನು ಸೂಕ್ಷ್ಮವಾಗಿ ನಿರೀಕ್ಷಣೆ ಮಾಡುವುದಕ್ಕೂ, ತನಗೆ ಅಗತ್ಯವಿರುವ ವಸ್ತುಗಳನ್ನು ಆರಿಸಿ ಉಪಯೋಗಿಸುವುದಕ್ಕೂ ಸಾಮರ್ಥ್ಯವನ್ನು ಗಳಿಸುತ್ತಾನೆ.



## ತಿರುಗಾಡಿ ಬರೋಣ.......ಹೇಳೋಣ.

ಪ್ರೀಸ್ಕೂಲ್ ಮಕ್ಕಳಿಗೆ ಪ್ರತ್ಯಕ್ಷವಾಗಿ, ಲಭಿಸುವ ತಿಳುವಳಿಕೆಯೇ ಹೆಚ್ಚು ಫಲಪ್ರದವಾದುದು. ನೋಡಿ, ಆಲಿಸಿ ಮಾಡಿ ನೋಡಿ ಮಗು ತನ್ನ ತಿಳುವಳಿಕೆಯ ವ್ಯಾಪ್ತಿಯನ್ನು ವಿಸ್ತರಿಸುತ್ತಾನೆ. ತರಗತಿಯೊಳಗೆ ನಡೆಯುವ ಚಟುವಟಿಕೆಗಳು ಮತ್ತು ಹೊರಗೆ ನಡೆಯುವ ಚಟುವಟಿಕೆಗಳೂ ಇವೆ. ಮಗುವಿಗೆ ಸಂಬಂಧಿಸಿದಂತೆ, ಅವನ ಪಾಠಪುಸ್ತಕವೆಂಬುದು ತರಗತಿಯ ಒಳಗಿನ ಹಾಗೂ ಹೊರಗಿನ ಪರಿಸರವೆಲ್ಲವೂ ಸೇರಿದುದಾಗಿದೆ.

ಬಯಲು ಪ್ರವಾಸ ಪ್ರಕೃತಿಯನ್ನು ಪ್ರತ್ಯಕ್ಷವಾಗಿ ತಿಳಿಯುವುದಕ್ಕೂ ಪರಿಸರದಲ್ಲಿರುವ ಸಸ್ಯಜಾಲಗಳನ್ನು ನಿರೀಕ್ಷಣೆ ಮಾಡುವುದಕ್ಕೂ ಜೀವಜಾಲಗಳು, ಅಜೈವಿಕ ಘಟಕಗಳು, ಪ್ರಕೃತಿಯ ಕೌತುಕಗಳು, ಜಲಮೂಲಗಳು ಇತ್ಯಾದಿಗಳನ್ನು ಕಾಣುವುದಕ್ಕೂ ಬಯಲು ಪ್ರವಾಸವು ಅತ್ಯಂತ ಪ್ರಯೋಜನಕಾರಿಯಾಗಿದೆ.

**ಬಯಲು ಪ್ರವಾಸದಿಂದ ಪ್ರಯೋಜನಗಳೇನು?**

- ಸೂಕ್ಷ್ಮ ನಿರೀಕ್ಷಣಾ ಸಾಮರ್ಥ್ಯ
- ಕಂಡ ವಿಚಾರಗಳನ್ನು ಹೇಳುವ ಸಾಮರ್ಥ್ಯ
- ಅನುಭವಗಳನ್ನು ವಿವರಿಸುವ ಸಾಮರ್ಥ್ಯ
- ಸಂಗ್ರಹಿಸುವ ಮನೋಭಾವ



ಹೀಗೆ ಹಲವಾರು ಸಾಮರ್ಥ್ಯಗಳು. ಬಯಲು ಪ್ರವಾಸದಿಂದ ಮಗುವಿಗೆ ಲಭಿಸುವುದು.

**ಕೇವಲವಾದ ಒಂದು ಪ್ರವಾಸ ಎಂಬುವುದಕ್ಕಿಂತಲೂ ಬಯಲು ಪ್ರವಾಸಕ್ಕೆ ಅನೇಕ ವಿಶೇಷತೆಗಳಿವೆ. ಅದಕ್ಕನುಸರಿಸಿದ ಯೋಜನೆಯನ್ನು ಮಾಡಿ ಬಯಲು ಪ್ರವಾಸವನ್ನು ನಡೆಸಬೇಕು.**

- ಹೋಗುವ ಸ್ಥಳವನ್ನು ಮೊದಲೇ ತೀರ್ಮಾನಿಸಬೇಕು
- ಉದ್ದೇಶಿಸುವ ಕಾರ್ಯವು ಅಲ್ಲಿ ಲಭಿಸಬಹುದೆಂದು ಖಾತರಿಪಡಿಸಬೇಕು.
- ಅಪಘಾತಕ್ಕೆಡೆಯಿಲ್ಲವೆಂದು ಖಾತರಿಪಡಿಸಬೇಕು.
- ಹೋಗುವ ವಿಚಾರ ಹಾಗೂ ಉದ್ದೇಶಗಳನ್ನು ಮಕ್ಕಳೊಂದಿಗೆ ಮೊದಲಾಗಿ ಚರ್ಚಿಸಿರಬೇಕು.
- ಹೋಗುವಾಗ ಏನು ಮಾಡಬೇಕು? ಏನೆಲ್ಲಾ ಗಮನಿಸಬೇಕು? ಏನು ಸಂಗ್ರಹಿಸಬೇಕು? ಎಂಬೀ ವಿಚಾರಗಳನ್ನು ಮಗುವಿನೊಂದಿಗೆ ಮೊದಲಾಗಿ ಚರ್ಚಿಸಿರಬೇಕು.
- ವಿಷಯವನ್ನು ಹೆತ್ತವರಿಗೆ ತಿಳಿಸಬೇಕಲ್ಲದೆ, ಅವರ ಸಹಾಯವನ್ನೂ ಪಡೆಯಬೇಕು.

ಇವೆಲ್ಲ ಬಯಲು ಪ್ರವಾಸಕ್ಕೆ ಮುಂಚಿತವಾಗಿ ಮಾಡಬೇಕಾದ ಕಾರ್ಯಗಳಾಗಿವೆ.

**ಬಯಲು ಪ್ರವಾಸದ ಸಂದರ್ಭದಲ್ಲಿ ಏನೆಲ್ಲಾ ಗಮನಿಸಬೇಕು?**

- ಎಲ್ಲಾ ಮಕ್ಕಳು ಭಾಗವಹಿಸುತ್ತಾರೆ ಎಂದು ದೃಢಪಡಿಸುವುದು.
- ಅಭಿಪ್ರಾಯಗಳನ್ನು ಪ್ರಕಟಪಡಿಸುವುದಕ್ಕೂ, ಪ್ರಶ್ನೆಗಳನ್ನು ಕೇಳುವುದಕ್ಕೂ ಮಕ್ಕಳನ್ನು ಪ್ರೇರೇಪಿಸಬೇಕು.
- ಸೂಚನೆಗಳು ಹಾಗೂ ಪ್ರಶ್ನೆಗಳ ಮೂಲಕ ನಿರೀಕ್ಷಣೆಯು ಸರಿಯಾಗಿ ನಡೆಯುತ್ತಿದೆ ಎಂದು ಟೀಚರ್ ದೃಢಪಡಿಸಬೇಕು.
- ಎಲ್ಲಿಯೂ ಅಪಘಾತಕ್ಕೆಡೆಯಿಲ್ಲವೆಂಬುದನ್ನು ಖಾತರಿಪಡಿಸಬೇಕು.

## ಬಯಲು ಪ್ರವಾಸದ ನಂತರ

- ಕಂಡ ವಿಚಾರಗಳ ಕುರಿತು ಹೇಳುವುದು.
- ಕಂಡ ವಿಚಾರಗಳನ್ನು ಚಿತ್ರಿಸುವುದು.
- ಟೀಚರ್‌ರ ಪ್ರಶ್ನೆಗಳಿಗೆ ಉತ್ತರ ಹೇಳುವುದು.

ಸರಿಯಾದ ಯೋಜನೆಯೊಂದಿಗೆ ಕೈಗೊಳ್ಳುವ ಬಯಲು ಪ್ರವಾಸವು ಹೆಚ್ಚು ಆಸಕ್ತಿದಾಯಕವೂ ವಿಜ್ಞಾನ ಪ್ರದವೂ ಆಗಬಹುದು.

ಕೆರೆಯನ್ನು ಸಂದರ್ಶಿಸುವ ಸಂದರ್ಭದಲ್ಲಿ ಮಗು ನಿರೀಕ್ಷಿಸಬೇಕಾದ ಅಂಶಗಳೇನು?

- ನೀರು
- ನೀರಿನಲ್ಲಿ ಹಾಗೂ ದಡಗಳಲ್ಲಿರುವ ಸಸ್ಯಗಳು
- ಕೆರೆಯಲ್ಲಿರುವ ಜೀವಿಗಳು
- ಕೆರೆಯ ಸುತ್ತಲೂ ಕಾಣುವ ಇತರ ಜೀವಿಗಳು (ಮಿಂಚುಳ್ಳಿ, ಕೊಕ್ಕರೆ...)
- ಹಾಗಾದರೆ ಇಂತಹ ವಿಚಾರಗಳಲ್ಲಿ ಮಗುವಿನ ಗಮನ ಸೆಳೆಯಲು ಸಾಧ್ಯವಾಗುವ ಬೆಂಬಲವನ್ನೂ ಟೀಚರ್ ನೀಡಬೇಕು.





# 5 ವಿಷಯಗಳು – ಕಲಿಕೆಯ ಅನುಭವಗಳು

## ವಿಷಯಗಳು

ಪ್ರಿಸ್ಕೂಲ್ ಹಂತದ ಮೂಲಕ ಹಾದುಹೋಗುವ ಪ್ರತಿಯೊಬ್ಬ ಮಗುವು ಹಲವಾರು ಸಾಮರ್ಥ್ಯಗಳನ್ನು ಆರ್ಜಿಸಬೇಕಾಗಿದೆ. ವಿನಿಮಯ ಸೌಕರ್ಯಕ್ಕಾಗಿ ಅವುಗಳನ್ನು ವಿವಿಧ ಕಲಿಕಾ ಸಾಧನೆಗಳ ಹೇಳಿಕೆಗಳಾಗಿ ಕ್ರಮೀಕರಿಸಲಾಗಿದೆ. ಈ ಸಾಮರ್ಥ್ಯವನ್ನು ವಿಷಯ ವಿನಿಮಯ ಚಟುವಟಿಕೆಗಳ ಮೂಲಕ ಪ್ರತಿಯೊಬ್ಬ ಮಗು ಗಳಿಸಬೇಕಾಗಿದೆ. ಆದುದರಿಂದ ಈ ಕಲಿಕಾಸಾಧನೆಗಳ ಹೇಳಿಕೆಗಳನ್ನು ಅರಗಿಸಿಕೊಂಡು ಅಧ್ಯಾಪಕರು ಚಟುವಟಿಕಾ ಪ್ರಕ್ರಿಯೆಗಳನ್ನು ಆಯೋಜಿಸಬೇಕಾಗಿದೆ. ತರಗತಿಯಲ್ಲಿ ವಿಷಯ ವಿನಿಮಯದ ಅನುಕೂಲಕ್ಕಾಗಿ 30 ವಿಷಯಗಳನ್ನು ಆಯ್ದುಕೊಳ್ಳಲಾಗಿದೆ. (ಪಟ್ಟಿಯನ್ನು ನೋಡಿರಿ)ಮೂವತ್ತು ವಿಷಯಗಳನ್ನು ಸರಳವಾಗಿ ಸಂಕ್ಷಿಪ್ತವಾಗಿ ನೀಡಲಾಗಿದೆ.( ಜಾಲ ನೋಡಿರಿ)

### ವಿಷಯಗಳನ್ನು ಪರಿಗಣಿಸುವಾಗ ಯಾವೆಲ್ಲ ವಿಚಾರಗಳನ್ನು ಗಮನಿಸಬೇಕು?

- ಆಶಯಗಳನ್ನು ತುರುಕಿಸಲಿರುವ ಮಾಧ್ಯಮವಾಗಬಾರದು.
- ಪರಿಸ್ಥಿತಿ ಮತ್ತು ಸ್ಥಳೀಯ ಪ್ರತ್ಯೇಕತೆಗಳಿಗನುಸರಿಸಿ ಕ್ರಮೀಕರಿಸಬೇಕು.
- ಮಗುವಿನ ವಿವಿಧ ವಿಕಾಸ ಮಂಡಲಗಳು/ಸಾಮರ್ಥ್ಯಗಳು ಎಂಬಿವುಗಳ ವಿಕಾಸಕ್ಕೆ ಸೂಕ್ತವಾದ ರೀತಿಯಲ್ಲಿ ಆಯೋಜಿಸಬೇಕು.
- ಮುಂದುವರಿದ ಕಲಿಕೆಗೆ ಮಗುವಿಗೆ ಸ್ಫೂರ್ತಿಯಾಗುವ ರೀತಿಯಲ್ಲಿ ವಿಷಯಗಳಿಗೆ ಸಂಬಂಧಿಸಿದ ಗರಿಷ್ಠ ಅನುಭವಗಳನ್ನು ರಸವತ್ತಾಗಿ ನೀಡಬೇಕು.
- ಔಪಚಾರಿಕ ಕಲಿಕೆಗೆ ಜಾರದಂತೆ ಗಮನಿಸಬೇಕು. ವಿಷಯಗಳ ಪರಸ್ಪರ ಸಂಬಂಧವನ್ನು ಪರಿಗಣಿಸಿ ಅನುಭವಗಳನ್ನು ನೀಡಬೇಕು.
- 3,4 ವರ್ಷ ಪ್ರಾಯದವರ ಶಾರೀರಿಕ ಹಾಗೂ ಮಾನಸಿಕವಾದ ಬೆಳವಣಿಗೆ, ಸಾಮರ್ಥ್ಯಗಳು, ಅಗತ್ಯಗಳು ಎಂಬಿವುಗಳನ್ನು ಗುರುತಿಸಿಕೊಂಡು ವಿಭಿನ್ನವಾದ ಅನುಭವಗಳನ್ನು ನೀಡಬೇಕು.
- ವಿಷಯಗಳನ್ನು ಪರಿಗಣಿಸುವಾಗ ಪ್ರಾಯವನ್ನು ಪರಿಗಣಿಸಬೇಕು. ಉದಾಹರಣೆಗೆ ಸಾರ್ವಜನಿಕ ಸಂಸ್ಥೆಗಳು, ಟಿ.ವಿ, ರೇಡಿಯೋ ಎಂಬಿವುಗಳನ್ನು 4 ವರ್ಷದವರಿಗೆ ಪರಿಗಣಿಸಬಹುದು.
- ಶಿಶುವಿಕಾಸ ಮಂಡಲಗಳು ಮತ್ತು ಬಹುಮುಖ ಮಂಡಲಗಳನ್ನು ಪರಸ್ಪರ ಹೊಂದಿಸಿಕೊಂಡು ಚಟುವಟಿಕೆಗಳನ್ನು ಆಯೋಜಿಸಬೇಕು.
- ಚಕ್ರಿಯಾವರ್ತನ (Spiralling) ಸಾಧ್ಯತೆಗಳನ್ನು ಖಚಿತಪಡಿಸಬೇಕು. ಉಪವಿಷಯಗಳಿಗೂ ಚಕ್ರಿಯಾವರ್ತನವನ್ನು ಪರಿಗಣಿಸಬೇಕು.

ಉದಾಹರಣೆಗೆ ಜೀವಿಗಳು ಎಂಬ ವಿಷಯವನ್ನು ಪರಿಗಣಿಸುವಾಗ, ಸಾಕು ಪ್ರಾಣಿಗಳು, ಸಾಕು ಪಕ್ಷಿಗಳು ಎಂಬಿವುಗಳನ್ನು ಮೊದಲು ಪರಿಗಣಿಸಬಹುದು. ಮುಂದುವರಿಕೆಯಾಗಿ ಬರುವ ಯಾವುದಾದರೂ ವಿಷಯಗಳಲ್ಲಿ ಪಕ್ಷಿಗಳು, ಚಿಟ್ಟೆಗಳು, ಪ್ರಾಣಿಗಳು ಎಂಬಿವುಗಳಲ್ಲದೆ ಹರಿದಾಡುವ ಜೀವಿಗಳನ್ನು ಅಳವಡಿಸಬಹುದು.

ವಿಷಯಗಳನ್ನು ವಿಕಾಸ ಮಂಡಲಗಳು/ಸಾಮರ್ಥ್ಯಗಳು ಎಂಬಿವುಗಳೊಂದಿಗೆ ಹೊಂದಿಸಿಕೊಂಡು ಮಕ್ಕಳಿಗೆ ಅನುಭವಗಳನ್ನು ನೀಡುವ ರೀತಿಯನ್ನು ಅವಲಂಬಿಸಬೇಕಾಗಿದೆ. ಪ್ರಿಸ್ಕೂಲಿನಲ್ಲಿ ಪರಿಗಣಿಸಬಹುದಾದ ವಿಷಯಗಳನ್ನು ಕೆಳಗೆ ಕೊಡಲಾಗಿದೆ. ಸ್ಥಳೀಯ ವಿಶೇಷತೆಗಳು ಮತ್ತು ಪರಿಸ್ಥಿತಿ ಎಂಬಿವುಗಳನ್ನು ಪರಿಗಣಿಸಿ ಟೀಚರಿಗೆ ಸೂಕ್ತವಾದ ಬದಲಾವಣೆಗಳನ್ನು ಮಾಡಬಹುದಾಗಿದೆ.


ವಿಷಯಗಳು
ಕುಟುಂಬ
ಮನೆ ಮತ್ತು ಪರಿಸರ
ನಾನು ನನ್ನ ಶರೀರ – ಶುಚಿತ್ವ
ಆಹಾರ
ವಸ್ತ್ರ
ಬೆಳಕು
ಮಳೆ ಮತ್ತು ಹವಾಮಾನ
ವಾಹನಗಳು
ಹೂಗಳು, ಹೂದೋಟ, ಚಿಟ್ಟೆಗಳು
ಸಸ್ಯಗಳು, ಹಣ್ಣುಗಳು
ತರಕಾರಿಗಳು
ಹಕ್ಕಿಗಳು
ಪ್ರಾಣಿಗಳು, ಸಾಕು ಪ್ರಾಣಿಗಳು, ಸಾಕು ಪಕ್ಷಿಗಳು
ಆರೋಗ್ಯ, ರೋಗಗಳು, ಆಸ್ಪತ್ರೆ
ಗಾಂಧಿ ಜಯಂತಿ
ವಸ್ತುಗಳು
ಮಣ್ಣು, ಕೃಷಿ
ಕಸುಬು
ಆಟಗಳು, ವಿನೋದಗಳು
ನೀರು, ನದಿ, ಸಮುದ್ರ
ಪಾತ್ರೆಗಳು, ಉಪಕರಣಗಳು
ಶಿಶುದಿನ
ಆಕಾಶ
ನನ್ನಗ್ರಾಮ
ಹಬ್ಬಗಳು, ಸ್ಥಳೀಯ ಉತ್ಸವಗಳು
ಓಣಂ, ರಂಜಾನ್
ಆಚರಣೆಗಳು – ಸ್ವಾತಂತ್ರ್ಯದಿನ
ವಾರ್ತಾವಿನಿಮಯ ಮಾಧ್ಯಮಗಳು (ರೇಡಿಯೋ, ಟಿ.ವಿ, ಫೋನ್, ದಿನಪತ್ರಿಕೆ)
ಕ್ರಿಸ್‌ಮಸ್
ಕಾಡು, ಮರಗಳು
ಸಾರ್ವಜನಿಕ ಸಂಸ್ಥೆಗಳು

| ಪ್ರಿಸ್ಕೂಲ್ ವಿಷಯಗಳು | | |
|---|---|---|
| 1 | ಕುಟುಂಬ | ಜೂನ್ |
| 2 | ಮನೆ ಮತ್ತು ಪರಿಸರ | |
| 3 | ನಾನು ಮತ್ತು ನನ್ನ ಶರೀರ – ಶುಚಿತ್ವ | ಜುಲೈ |
| 4 | ಮಳೆ ಮತ್ತು ಹವಾಮಾನ | |
| 5 | ಸಸ್ಯಗಳು, ಹಣ್ಣುಗಳು | |
| 6 | ಆಹಾರ | ಆಗಸ್ಟ್ |
| 7 | ಆಚರಣೆಗಳು, ಸ್ವಾತಂತ್ರ್ಯದಿನ | |
| 8 | ಆರೋಗ್ಯ, ರೋಗಗಳು, ಆಸ್ಪತ್ರೆ | |
| 9 | ಹೂಗಳು, ಹೂದೋಟ. ಚಿಟ್ಟೆಗಳು | ಸೆಪ್ಟೆಂಬರ್ |
| 10 | ಓಣಂ, ರಂಜಾನ್ | |
| 11 | ತರಕಾರಿಗಳು | |
| 12 | ಗಾಂಧಿ ಜಯಂತಿ | ಅಕ್ಟೋಬರ್ |
| 13 | ಪ್ರಾಣಿಗಳು, ಸಾಕು ಪ್ರಾಣಿಗಳು, ಸಾಕು ಪಕ್ಷಿಗಳು | |
| 14 | ವನ್ಯಜೀವಿಗಳು | |
| 15 | ಮಣ್ಣು, ಕೃಷಿ | |
| 16 | ಕಸುಬುಗಳು | ನವೆಂಬರ್ |
| 17 | ಶಿಶುದಿನ | |
| 18 | ಹಕ್ಕಿಗಳು | |
| 19 | ಪ್ರಾಣಿಗಳು, ಹರಿದಾಡುವ ಜೀವಿಗಳು | ಡಿಸೆಂಬರ್ |
| 20 | ಬಟ್ಟೆಬರೆ | |
| 21 | ಕ್ರಿಸ್‌ಮಸ್ | |
| 22 | ವಾಹನಗಳು | ಜನವರಿ |
| 23 | ನನ್ನ ಗ್ರಾಮ | |
| 24 | ಸಾರ್ವಜನಿಕ ಸಂಸ್ಥೆಗಳು | |
| 25 | ಕಲೆಗಳು, ಸ್ಥಳೀಯ ಉತ್ಸವಗಳು | ಫೆಬ್ರವರಿ |
| 26 | ಆಕಾಶ | |
| 27 | ಆಟಗಳ ಮನೋರಂಜನೆಗಳು | |
| 29 | ವಾರ್ತಾವಿನಿಮಯ ಮಾಧ್ಯಮಗಳು (ರೇಡಿಯೋ, ಟಿ.ವಿ, ಪತ್ರಿಕೆ, ಫೋನ್) | ಮಾರ್ಚ್ |
| 29 | ನೀರು, ನದಿ, ಸಮುದ್ರ | |
| 30 | ಕಾಡು, ಮರಗಳು | |

## ಗ್ರಿಡ್‌ಗಳ ಪ್ರಯೋಜನ ಹೇಗೆ?

ವಿಕಾಸ ಮಂಡಲಗಳು, ಬಹುಮುಖ ಬುದ್ಧಿಶಕ್ತಿಯ ವಲಯಗಳು, ವಿಷಯಗಳು ಎಂಬಿವುಗಳನ್ನು ಆಧಾರವಾಗಿಸಿಕೊಂಡು, ಕಲಿಕಾ ಸಾಧನೆಗಳ ಹೇಳಿಕೆಗಳನ್ನು ರೂಪೀಕರಿಸಲಾಗಿದೆ. 3+, 4+ ಮಕ್ಕಳಿಗೆ ಸೂಕ್ತವಾದ ಸಾಮರ್ಥ್ಯಗಳು ಹಾಗೂ ಕಲಿಕೆಯ ಅನುಭವಗಳನ್ನು ಗ್ರಿಡ್ ಆಗಿ ಇಲ್ಲಿ ನೀಡಲಾಗಿದೆ. ಪ್ರಾದೇಶಿಕ ವಿಶೇಷತೆಗಳು ಹಾಗೂ ಸಾಧ್ಯತೆಗಳನ್ನು ಸದುಪಯೋಗಪಡಿಸಿ ಅಗತ್ಯವಾದ ಬದಲಾವಣೆಗಳೊಂದಿಗೆ ಉಪಯೋಗಿಸಲು ಈ ಗ್ರಿಡ್‌ಗಳು ಅಧ್ಯಾಪಕರಿಗೆ ಸಹಾಯಕವಾಗಬಹುದು.

ವಿಷಯಗಳು, ಆಶಯಗಳು, ಸಾಮರ್ಥ್ಯಗಳು ಕಲಿಕೆಯ ಅನುಭವಗಳು, (3+, 4+) ಎಂಬಿವುಗಳನ್ನು ಅಳವಡಿಸಿಕೊಂಡು ಗ್ರಿಡ್‌ಗಳನ್ನು ತಯಾರಿಸಲಾಗಿದೆ. ಕಲಿಕಾನುಭವಗಳು ಪೂರ್ಣವಾಗಿಲ್ಲ. ಸೂಚನೆಗಳನ್ನು ಮಾತ್ರವೇ ನೀಡಲಾಗಿದೆ. ಹೆಚ್ಚಿನ ಕಲಿಕೆಯ ಅನುಭವಗಳನ್ನು ಸೇರ್ಪಡೆಗೊಳಿಸಲು ಟೀಚರಿಗೆ ಸ್ವಾತಂತ್ರ್ಯವಿದೆ ಅದರಂತೆ ನಿರ್ದಿಷ್ಟ ಸಾಮರ್ಥ್ಯಗಳ ಹೊರತಾಗಿ ಹೆಚ್ಚಿನ ಸಾಮರ್ಥ್ಯಗಳನ್ನು ಸೇರ್ಪಡೆಗೊಳಿಸಬಹುದು.

ಸಾಮರ್ಥ್ಯಗಳು, ಯಾವೆಲ್ಲಾ ವಿಕಾಸಮಂಡಲಗಳು ಹಾಗೂ ಬಹುಮುಖಬುದ್ಧಿ ವಲಯಗಳೊಂದಿಗೆ ಹೊಂದಿಕೆಯಾಗುವುದು ಎಂಬ ಸೂಚನೆಗಳನ್ನು ಮೊದಲಿನ ಎರಡು ವಿಷಯಗಳಲ್ಲಿ ನೀಡಲಾಗಿದೆ. ಮುಂದಿನ ವಿಷಯಗಳ ಸಾಮರ್ಥ್ಯಗಳು ಯಾವೆಲ್ಲಾ ಬಹುಮುಖ ಬುದ್ಧಿ ವಲಯ, ವಿಕಾಸ ಮಂಡಲಗಳೊಂದಿಗೆ ಹೊಂದಿಕೆಯಾಗುವುದು ಎಂಬ ವಿಚಾರವನ್ನು ಅಧ್ಯಾಪಿಕೆ ಪರಿಶೀಲಿಬೇಕು. ಒಂದು ವಿಷಯಕ್ಕೆ ಸಂಬಂಧಿಸಿದ ಪಾಠ ಯೋಜನೆಯನ್ನು ಮಾಡುವಾಗ ಸಾಮರ್ಥ್ಯಗಳನ್ನು ಪರಿಶೀಲಿಸಿ ಕಲಿಕಾನುಭವಗಳನ್ನು ನೈಜವಾಗಿ ಸಂಯೋಜಿಸಬೇಕು. ಉದಾಹರಣೆಗಾಗಿ ಹಕ್ಕಿಗಳು ಎಂಬ ವಿಷಯದಲ್ಲಿ, ಪಾರಿವಾಳ ಮತ್ತು ಇರುವೆಯ ಕಥೆ ಹೇಳುವ ಸಂದರ್ಭದಲ್ಲಿ ಕಥೆಯೊಂದಿಗೆ ಸಂಯೋಜಿಸಿ ಮುಳುಗುವುದು, ತೇಲುವುದು ಎಂಬ ಕಲಿಕೆಯ ಅನುಭವವನ್ನು ನೀಡಿ ಕಥೆಯನ್ನು ಸಮಗ್ರ ಹಾಗೂ ಅನುಭವ ಆಧಾರಿತವಾಗಿಸಬೇಕು. ಮೇಲೆ ಹೇಳಿರುವಂತೆ ಎರಡು ಕಲಿಕೆಯ ಅನುಭವಗಳು ವಿಭಿನ್ನ ಸಾಮರ್ಥ್ಯಗಳಿಗೆ ಸಂಬಂಧಿಸಿದವುಗಳಾಗಿವೆ. ಗ್ರಿಡ್‌ಗೆ ಅನುಸರಿಸಿ ಪಾಠಯೋಜನೆ ಮಾಡಿ ಟೀಚಿಂಗ್ ಮ್ಯಾನ್ವಲ್ ತಯಾರಿಸುವಾಗ ಕೈಪಿಡಿಯಲ್ಲಿರುವ ಟ್ರೈಔಟ್ ಭಾಗವನ್ನು ಪರಿಶೀಲಿಸುವುದು ಹೆಚ್ಚಿನ, ಸ್ಪಷ್ಟತೆ ಗಳಿಸುವುದಕ್ಕೆ ಸಹಾಯಕವಾಗಬಹುದು.

## ವಿಷಯ ಯೋಜನೆಗೆ ಸಹಾಯಕವಾದ ಗ್ರಿಡ್‌ಗಳು

**ವಿಷಯ : 1 – ಕುಟುಂಬ** **ಕಾಲಾವಧಿ : ಜೂನ್**

| (3+) | (4+) |
|---|---|
| **ಆಶಯಗಳು**<br>1. ತಂದೆ, ತಾಯಿ, ಮಕ್ಕಳು ಸೇರಿರುವುದೇ ಕುಟುಂಬ<br>2. ಕುಟುಂಬದ ಸದಸ್ಯರು (ತಂದೆ, ತಾಯಿ, ಅಕ್ಕ, ಅಣ್ಣ, ಅಜ್ಜ, ಅಜ್ಜಿ) ಒಟ್ಟಾಗಿ ಒಂದೇ ಮನೆಯಲ್ಲಿ ವಾಸಿಸುವರು. | 1. ಕುಟುಂಬದಲ್ಲಿರುವ ಪ್ರತಿಯೊರ್ವ ಸದಸ್ಯನು ಪರಿಸರ ಸ್ನೇಹ, ಸಹಕಾರ, ಗೌರವದೊಂದಿಗೆ ವರ್ತಿಸುವರು.<br>2. ಮನೆಯ ಪ್ರತಿಯೊಬ್ಬ ಸದಸ್ಯನಿಗೆ ತನ್ನದೇ ಆದ ಜವಾಬ್ದಾರಿ ಹಾಗೂ ಕರ್ತವ್ಯಗಳಿವೆ. |

| ಸಾಮರ್ಥ್ಯಗಳು | ಕಲಿಕೆಯ ಅನುಭವಗಳು (3+) | ಕಲಿಕೆಯ ಅನುಭವಗಳು (4+) |
|---|---|---|
| ***ಶಾರೀರಿಕ ಚಲನಾತ್ಮಕ ವಿಕಾಸ ಶಾರೀರಿಕ ಚಲನ ಪರ ಬುದ್ಧಿಶಕ್ತಿ***<br>• ಶರೀರದ ಹೆಚ್ಚಿನ ಪೇಶಿಗಳನ್ನು ಬಳಸಿಕೊಂಡು ಸ್ವತಂತ್ರ ಹಾಗೂ ನಿಯಂತ್ರಿತವಾದ ಸರಳ ಆಟಗಳಲ್ಲಿ ತೊಡಗುವುದು. | • ತಾಳಾತ್ಮಕ ಚಲನೆಗಳು<br>• ಅಧ್ಯಾಪಿಕೆಯ ಸಹಾಯದಿಂದ ಸ್ವತಂತ್ರ ಆಟಗಳು | • ತಾಳಾತ್ಮಕ ಚಲನೆಗಳು<br>• ಕುಟುಂಬಕ್ಕೆ ಸಂಬಂಧಿಸಿದ ಪದ್ಯ ಹಾಡಿ ಅಭಿನಯಿಸುವುದು (ಅಮ್ಮಅಮ್ಮ ನನ್ನಮ್ಮ ಯಾವತ್ತು ಮನೆಯಲ್ಲಿರುವಳಮ್ಮ)<br>• ಯೋಜನಾಬದ್ಧ ಆಟಗಳು |
| ***ಭಾಷಾ ವಿಕಾಸ – ಭಾಷಾಪರವಾದ ಬುದ್ಧಿ***<br>• ಕುಟುಂಬಕ್ಕೆ ಸಂಬಂಧಿಸಿದ ಘಟನೆಗಳು, ಅನುಭವಗಳು, ಕಥೆಗಳು ಎಂಬಿವುಗಳನ್ನು ಕಾಣುವುದಕ್ಕೂ ಆಲಿಸುವುದಕ್ಕೂ ಸಾಧ್ಯವಾಗುವುದು. | • ಮಗುವಿನ ಕುಟುಂಬಕ್ಕೆ ಸಂಬಂಧಿಸಿದ ಸ್ವತಂತ್ರ ಸಂಭಾಷಣೆ.<br>• ಕುಟುಂಬಕ್ಕೆ ಸಂಬಂಧಿಸಿದ ಅಭಿನಯ ಗೀತೆ ಆಲಿಸುವುದು, ಹಾಡು ಕೇಳುವುದು(ಐ.ಸಿ.ಟಿ.) ಕಥೆ ಆಲಿಸುವುದು(ಐ.ಸಿ.ಟಿ.). | • ಕುಟುಂಬಕ್ಕೆ ಸಂಬಂಧಿಸಿದ ಅಭಿನಯ ಗೀತೆ ಆಲಿಸುವುದು, ಹಾಡು ಕೇಳುವುದು (ಐ.ಸಿ.ಟಿ.), ಮತ್ತು ಕಥೆ ಆಲಿಸುವುದು(ಐ.ಸಿ.ಟಿ.). |
| • ಕುಟುಂಬ ಸದಸ್ಯರ ಪ್ರಾಯದ ಆಧಾರದಲ್ಲಿ, ನಿರೀಕ್ಷಣೆ ಮಾಡುವುದಕ್ಕೂ ವ್ಯಾಖ್ಯಾನಿಸುವುದಕ್ಕೂ ಸಾಧ್ಯವಾಗುವುದು. | • ಸ್ವಂತ ಕುಟುಂಬದ ಸದಸ್ಯರ ಕುರಿತಾದ ಸರಳ ಪ್ರಶ್ನೆಗಳನ್ನು ಕೇಳುವುದು, ಹೇಳುವುದು<br>• ಚಿತ್ರದಲ್ಲಿರುವ ಕುಟುಂಬದ ಸದಸ್ಯರನ್ನು ಗುರುತಿಸುವುದು. | • ಕುಟುಂಬಕ್ಕೆ ಸಂಬಂಧಿಸಿದ ಚಿತ್ರ ಸಂಗ್ರಹ, ಚಿತ್ರಗಳ ಕುರಿತು ವಿವರಿಸುವುದು, ಚಿತ್ರ ಹಾಗೂ ವಿವರಣೆಗಳನ್ನು ಹೊಂದಿಸುವುದು.<br>• ಕಥೆ ಕಟ್ಟಿ ಹೇಳುವುದು |

| ಸಾಮರ್ಥ್ಯಗಳು | ಕಲಿಕೆಯ ಅನುಭವಗಳು (3+) | ಕಲಿಕೆಯ ಅನುಭವಗಳು (4+) |
|---|---|---|
| **ವೈಜ್ಞಾನಿಕ ವಿಕಾಸ**<br>• ಕುಟುಂಬ ಸದಸ್ಯರ ಪ್ರಾಯದ ಆಧಾರದಲ್ಲಿ ನಿರೀಕ್ಷಣೆ ಮಾಡುವುದಕ್ಕೂ ವ್ಯಾಖ್ಯಾನಿಸುವುದಕ್ಕೂ ಸಾಧ್ಯವಾಗುವುದು. | • ಕುಟುಂಬ ಸದಸ್ಯರನ್ನು ಪ್ರಾಯಕ್ಕೆ ಅನುಸರಿಸಿ ಹೇಳುವುದು (ಅಣ್ಣ, ಅಕ್ಕ, ಅಜ್ಜ, ಅಜ್ಜಿ, ತಮ್ಮ, ತಂಗಿ) | • ಕುಟುಂಬ ಸದಸ್ಯರನ್ನು ಪ್ರಾಯಕ್ಕೆ ಅನುಸರಿಸಿ ಹೇಳುವುದು (ಅಣ್ಣ, ಅಕ್ಕ, ಅಜ್ಜಿ, ಅಜ್ಜ, ತಮ್ಮ, ತಂಗಿ) |
| • ಚಿಕ್ಕದು–ದೊಡ್ಡದು, ಎತ್ತರ–ಗಿಡ್ಡ, ಹೆಚ್ಚುಪ್ರಾಯ–ಕಡಿಮೆ ಪ್ರಾಯ ಎಂಬಿವುಗಳ ಆಧಾರದಲ್ಲಿ ಕುಟುಂಬ ಸದಸ್ಯರು, ವಸ್ತುಗಳು, ಜೀವಿಗಳು ಎಂಬಿವುಗಳನ್ನು ಹೋಲಿಸುವುದು. | • ಕುಟುಂಬ ಸದಸ್ಯರನ್ನು ಎತ್ತರಕ್ಕನುಸರಿಸಿ ಹೇಳುವುದು. | • ಚಿತ್ರದಲ್ಲಿರುವ ವಸ್ತುಗಳಿಗೆ ಗಾತ್ರಕ್ಕನುಸರಿಸಿ ಬೇರೆ–ಬೇರೆ ಬಣ್ಣ ನೀಡುವುದು.<br>• ವಸ್ತುಗಳನ್ನು ಚಿಕ್ಕದು, ದೊಡ್ಡದು ಎಂಬ ರೀತಿಯಲ್ಲಿ ಕ್ರಮೀಕರಿಸುವುದು (ಕೊಡೆ, ಚಪ್ಪಲಿ, ಉಡುಪು ಎಂಬಿವುಗಳು)<br>• ಕಥೆಗಳು, ಪದ್ಯಗಳು, ಚಿತ್ರಗಳು ಎಂಬಿವುಗಳನ್ನು ಹೊಂದಿಸಿ, ಹೆಚ್ಚು ಪ್ರಾಯದವರು, ಕಡಿಮೆ ಪ್ರಾಯದವರು, ಸಣ್ಣ ಕುಟುಂಬ, ದೊಡ್ಡ ಕುಟುಂಬ ಎಂಬುದಾಗಿ ಹೇಳುವುದು. |
| **ಸಾಮಾಜಿಕ ಭಾವನಾತ್ಮಕ ವಿಕಾಸ**<br>5. ತನ್ನ ಹೆಸರು, ತಂದೆ ತಾಯಂದಿರ ಹೆಸರು ಮೊದಲಾದವುಗಳನ್ನು ಇತರರೊಡನೆ ಹೇಳಲು ಸಾಧ್ಯವಾಗುವುದು. | • ತನ್ನ ಹೆಸರು ಹೇಳುವುದು/ತಂದೆ/ತಾಯಿ/ಅಣ್ಣ/ಅಕ್ಕ ಎಂಬಿವರ ಹೆಸರು ಹೇಳುವುದು.<br>• ವಾಸಿಸುವ ಸ್ಥಳದ ಕುರಿತು ಹೇಳುವುದು.<br>• ತನಗೆ ಇಷ್ಟವಾದ ವಿಚಾರಗಳನ್ನು ಹೇಳುವುದು. | • ತನ್ನ ಹೆಸರು ಹೇಳುವುದು<br>• ತಂದೆ ತಾಯಂದಿರು, ಅಣ್ಣ, ಅಕ್ಕ ಮೊದಲಾದವರ ಹೆಸರು ಹೇಳುವುದು<br>• ವಾಸಸ್ಥಳದ ಕುರಿತು ಹೇಳುವುದು<br>• ಪದ್ಯಗಳನ್ನು ಹಾಡುವುದು |
| • ತಂದೆ, ತಾಯಿ, ಅಣ್ಣ, ಅಕ್ಕ, ತಮ್ಮ, ತಂಗಿ, ಅಜ್ಜ, ಅಜ್ಜಿ, ಮಾವ, ಅತ್ತೆ ಎಂಬೀ ವ್ಯತ್ಯಸ್ಥ ಸಂಬಂಧಗಳನ್ನು ಗುರುತಿಸಲು ಸಾಧ್ಯವಾಗುವುದು. | • ಕಥೆ, (ಅಜ್ಜ/ಅಜ್ಜಿ/ಮಕ್ಕಳು)<br>• ಕೌಟುಂಬಿಕ ಸಂಬಂಧಗಳನ್ನು ತಿಳಿಯುವುದು | • ಕಥೆಯ ಘಟನೆಗಳನ್ನು ಅಭಿನಯಿಸುವುದು<br>• ರೋಲ್‌ಪ್ಲೇ (ಅಡುಗೆ ಆಟ)<br>• ಆಲಿಸಿದ ಕಥೆಯನ್ನು ತನ್ನದೇ ಆದ ಭಾಷೆಯಲ್ಲಿ ಹೇಳುವುದು |
| • ತನ್ನ ಕುಟುಂಬದ ಮತ್ತು ಇತರ ವ್ಯಕ್ತಿಗಳ ಪ್ರಾಯವನ್ನು ಅರಿತು ಗೌರವದಿಂದ ಮಾತನಾಡುವುದಕ್ಕೂ ನಿರ್ಭಯವಾಗಿ ವ್ಯವಹರಿಸುವುದಕ್ಕೂ ಸಾಧ್ಯವಾಗುವುದು. | • ಕುಟುಂಬ ಸದಸ್ಯರಿಗೆ ಸಂಬಂಧಿಸಿದ ಕಥೆಗಳನ್ನು ಆಲಿಸುವುದು<br>• ಹಿರಿಯರು ಹಾಗೂ ಇತರರನ್ನು ಗೌರವಿಸುವುದು ಮತ್ತು ಆದರಿಸುವುದು | • ಕಥೆಗಳನ್ನು ಆಲಿಸುವುದು<br>• ರೋಲ್ ಪ್ಲೇ – ಕುಟುಂಬ<br>• ಹಿರಿಯರನ್ನು ಮತ್ತು ಇತರರನ್ನು ಗೌರವಿಸುವುದು ಮತ್ತು ಆದರಿಸುವುದು |
| **ಸೃಜನಾತ್ಮಕ – ಸೌಂದರ್ಯಾತ್ಮಕ ವಿಕಾಸ**<br>• ಕುಟುಂಬಕ್ಕೆ ಸಂಬಂಧಿಸಿದ ಹಾಡುಗಳನ್ನು ತಾಳಾತ್ಮಕವಾಗಿ ಹಾಡಲು ಸಾಧ್ಯವಾಗುವುದು. | • ಗುಂಪಾಗಿಯೂ, ಒಂಟಿಯಾಗಿಯು ಹಾಡುವುದು<br>• ಅಭಿನಯ ಗೀತೆ | • ಆಲಿಸಿದ ಹಾಡುಗಳನ್ನು ಗುಂಪಾಗಿಯೂ, ಒಂಟಿಯಾಗಿಯೂ ತಾಳಾತ್ಮಕವಾಗಿಯೂ ಹಾಡುವುದು<br>• ಅಭಿನಯ ಗೀತೆ<br>• ಬೊಂಬೆಯಾಟ |

| ವಿಷಯ : 2 - ಮನೆ ಮತ್ತು ಪರಿಸರ | ಕಾಲಾವಧಿ : ಜೂನ್ |
|---|---|
| **(3+)** | **(4+)** |
| **ಆಶಯಗಳು**<br>1. ತಂದೆ, ತಾಯಿ, ಅಜ್ಜ, ಅಜ್ಜಿ, ಅಕ್ಕ, ಅಣ್ಣ ಎಂಬಿವರು ಒಂದೇ ಮನೆಯಲ್ಲಿ ಒಟ್ಟಾಗಿ ವಾಸಿಸುವರು.<br>2. ಅಡುಗೆ ಮಾಡಲು ಅಡುಗೆ ಕೋಣೆಯೂ, ನಿದ್ರಿಸುವುದಕ್ಕೆ ಮಲಗುವ ಕೋಣೆಯೂ ಸ್ನಾನಕ್ಕೆ ಬಚ್ಚಲು ಮನೆಯೂ ಇದೆ.<br>3. ಮಂಚ, ಮೇಜು, ಕುರ್ಚಿ, ಪಾತ್ರೆಗಳು ಎಂಬೀ ಉಪಕರಣಗಳು ಇವೆ. | 1. ತಂದೆ, ತಾಯಿ, ಅಜ್ಜ, ಅಜ್ಜಿ, ಅಣ್ಣ, ಅಕ್ಕ ಎಂಬಿವರು ಕುಟುಂಬದ ಸದಸ್ಯರಾಗಿದ್ದಾರೆ. ಕುಟುಂಬದ ಸದಸ್ಯರು ವಿವಿಧ ಕೆಲಸಗಳನ್ನು ಮಾಡುತ್ತಾರೆ.<br>2. ಮನೆಯಲ್ಲಿ ಮಂಚ, ಮೇಜು, ಕುರ್ಚಿ, ಪಾತ್ರೆ ಮೊದಲಾದ ಉಪಕರಣಗಳಿವೆ.<br>3. ಬೆಕ್ಕು, ನಾಯಿ, ದನ, ಕೋಳಿ, ಬಾತುಕೋಳಿ, ಮೀನು ಮೊದಲಾದ ಜೀವಿಗಳನ್ನು ಮನೆಯಲ್ಲಿ ಸಾಕುತ್ತಾರೆ.<br>4. ವಿವಿಧ ಸಸ್ಯಗಳನ್ನು ಮನೆಯ ಸುತ್ತಮುತ್ತಲು ನೆಟ್ಟು ಬೆಳೆಸುತ್ತಾರೆ.<br>5. ಮನೆಯ ಸದಸ್ಯರು ಪರಸ್ಪರ ಪ್ರೀತಿಯಿಂದ ವ್ಯವಹರಿಸುತ್ತಾರೆ. |

| ಸಾಮರ್ಥ್ಯಗಳು | ಕಲಿಕೆಯ ಅನುಭವಗಳು (3+) | ಕಲಿಕೆಯ ಅನುಭವಗಳು (4+) |
|---|---|---|
| ***ಶಾರೀರಿಕ ಚಲನಾತ್ಮಕ ವಿಕಾಸ – ಶಾರೀರಿಕ ಚಲನಾತ್ಮಕ ಬುದ್ಧಿ***<br>• ಮುಖ, ಭುಜ, ಮಣಿಕಟ್ಟು, ಬೆರಳುಗಳು, ಮೊಣಕಾಲು, ಪಾದ ಎಂಬಿವುಗಳ ಸ್ನಾಯುಗಳ ಸಹಾಯದಿಂದ ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. | • ಮೆಟ್ಟಲು ಏರುವುದು, ಇಳಿಯುವುದು<br>• ಉಯ್ಯಾಲೆ ಆಟ<br>• ಕೆರೆದಡ ಆಟ<br>• ಯೋಜನಾಬದ್ಧ ಆಟಗಳು<br>• ಹಕ್ಕಿಗಳು ಮತ್ತು ಮೃಗಗಳ ಚಲನೆಗಳು (ಕಪ್ಪೆಜಿಗಿತ, ಮೊಲ, ಆನೆ, ಚಿಟ್ಟೆ) | • ಮೆಟ್ಟಲು ಏರುವುದು, ಇಳಿಯುವುದು<br>• ಉಯ್ಯಾಲೆ ಆಟ<br>• ಹಕ್ಕಿಗಳು ಮತ್ತು ಮೃಗಗಳ ಚಲನೆಗಳು (ಕಪ್ಪೆಜಿಗಿತ, ಮೊಲ, ಆನೆ, ಚಿಟ್ಟೆ)<br>• ಕೆರೆದಡ ಆಟ<br>• ಯೋಜನಾಬದ್ಧ ಆಟಗಳು<br>• ಆವೆಮಣ್ಣು, ಮೈದಾ, ಪ್ಲಾಸ್ಟಿಸಿನ್ ಎಂಬಿವುಗಳನ್ನು ಕಲಸಿ, ಹದಗೊಳಿಸಿ ಮನೆಯ ಆಕೃತಿಗಳನ್ನು ನಿರ್ಮಿಸುವುದು. |
| • ಸ್ವತಃ ಚಿತ್ರರಚಿಸಿ ಬಣ್ಣ ನೀಡಲು ಸಾಧ್ಯವಾಗುವುದು. (ಕ್ರಯೋನ್, ಸ್ಕೆಚ್‌ಪೆನ್, ವಾಟರ್‌ಕಲರ್, ಮರದ ಹುಡಿ, ಪೇಪರ್ ಬಟ್ಟೆ...............) | • ಮನೆಯ ಚಿತ್ರಕ್ಕೆ ಬಣ್ಣ ನೀಡುವುದು<br>• ಕ್ರಯೋನ್, ವಾಟರ್ ಕಲರ್ ಎಂಬಿವುಗಳನ್ನುಪಯೋಗಿಸಿ ಚಿತ್ರಗಳಿಗೆ ಬಣ್ಣ ನೀಡುವುದು. | • ಕಾಗದದಲ್ಲಿ ಅಂಟು(ಬಣ್ಣ ಕಲಸಿದ ಮೈದಾ) ಹಚ್ಚಿ, ಇನ್ನೊಂದು ಕಾಗದವಿಟ್ಟು ಪ್ರಿಂಟ್ ತೆಗೆಯುವುದು.<br>• ಚಿತ್ರಗಳನ್ನು ರಚಿಸಿ, ಕ್ರಯೋನ್, ಪೆನ್ಸಿಲ್, ವಾಟರ್‌ಕಲರ್ ಎಂಬಿವುಗಳನ್ನುಪಯೋಗಿಸಿ ಬಣ್ಣ ನೀಡುವುದು. |

| ಸಾಮರ್ಥ್ಯಗಳು | ಕಲಿಕೆಯ ಅನುಭವಗಳು (3+) | ಕಲಿಕೆಯ ಅನುಭವಗಳು (4+) |
|---|---|---|
| • ಸುತ್ತಮುತ್ತಲಿನ ವಿವಿಧ ತರದ ವಸ್ತುಗಳನ್ನುಪಯೋಗಿಸಿ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುವುದು. | • ಮರದ ತುಂಡುಗಳು, ಬಿಲ್ಡಿಂಗ್ ಬ್ಲೋಕ್ಸ್, ಬೆಂಕಿ ಪೆಟ್ಟಿಗೆ, ಕಾರ್ಡ್‌ಬೋರ್ಡ್ ಪೆಟ್ಟಿಗೆ, ಮೊದಲಾದವು ಗಳನ್ನುಪಯೋಗಿಸಿ ನಿರ್ಮಾಣ ಚಟುವಟಿಕೆ | • ಆಟಿಕೆಗಳನ್ನು ನಿರ್ಮಿಸುವುದು (ಚೆಂಡುಪುಳಿ, ಬೆಂಕಿಪೆಟ್ಟಿಗೆಯ ರೈಲುಗಾಡಿ, ಮೊದಲಾದವುಗಳು)<br>• ಕಾಗದ, ಆವೆಮಣ್ಣು, ಎಲೆಗಳು, ಕಡ್ಡಿಗಳು, ನೂಲು, ಹೂಗಳು, ಬೀಜಗಳು, ಮೈದಾ, ಮೊದಲಾದವುಗಳನ್ನುಪಯೋಗಿಸಿ ಮನೆಯ ಆಕೃತಿಗಳನ್ನು ರಚಿಸುವುದು. |
| ***ಭಾಷಾ ವಿಕಾಸ (ಭಾಷಾಪರವಾದ ಬುದ್ಧಿಶಕ್ತಿ)***<br>• ನೋಡಿ, ಆಲಿಸಿ, ಅರ್ಥೈಸಿದ ಘಟನೆಗಳು, ವಿವರಣೆಗಳು, ಕಥೆಗಳು ಎಂಬಿವುಗಳನ್ನು ಆಶಯವು ಸೋರಿಹೋಗದಂತೆ ಇತರರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವುದು. | • ಮನೆಯ ಒಳಗಿನ ವಿವಿಧ ಕೋಣೆಗಳ ಉಪಯೋಗವನ್ನು ಹೇಳುವುದು.<br>• ಇಷ್ಟವಾದ ಆಹಾರ, ಆಟ, ಪ್ರವಾಸ ಎಂಬಿವುಗಳ ಕುರಿತು ಹೇಳುವುದು | • ಆಟದ ರೀತಿಯನ್ನು ಕ್ರಮವಾಗಿ ಹೇಳುವುದು (ಲಗೋರಿ)<br>• ಮನೆಯನ್ನು ನಿರೀಕ್ಷಣೆ ಮಾಡಿ, ಮಾಡಿನ ಕುರಿತು, ಹಂಚು, ಮಡಲು, ಕಾಂಕ್ರೀಟು, ಬೈಹುಲ್ಲು ಎಂಬೀ ರೀತಿಯಲ್ಲಿ ಹೇಳುವುದು.<br>• ವಿವಿಧ ಕೋಣೆಗಳು, ಉಪಕರಣಗಳು ಎಂಬಿವುಗಳ ಉಪಯೋಗವನ್ನು ಹೇಳುವುದು. |
| ***ವೈಜ್ಞಾನಿಕ ವಿಕಾಸ/ಗಣಿತ ಪರವಾದ ಬುದ್ಧಿ/ಪ್ರಕೃತಿ ಪರವಾದ ಬುದ್ಧಿ***<br>• ದೈನಂದಿನ ಜೀವನದ ಸಂದರ್ಭಗಳಲ್ಲಿ ಬರುವ ವೈವಿಧ್ಯಮಯವಾದ ಆಚರಣೆಗಳು ಹಾಗೂ ಇಷ್ಟವಾದ ವಿಷಯಗಳ ಕುರಿತು ಧಾರಾಳ ವಿಷಯಗಳನ್ನು ಹೇಳುವುದಕ್ಕೂ, ಕೇಳಿ ತಿಳಿಯುವುದಕ್ಕೂ, ಆಲಿಸಿ ತಿಳಿಯುವುದಕ್ಕೂ ಸಾಧ್ಯವಾಗುವುದು. | • ಮನೆ ನಿರೀಕ್ಷಣೆ ಮಾಡುವ, ವ್ಯತ್ಯಾಸ ಕಂಡುಹಿಡಿಯುವ<br>• ಬಯಲು ಪ್ರವಾಸದಲ್ಲಿ ಕಂಡ ಮನೆಗಳ ಕುರಿತು, ಅಧ್ಯಾಪಕರಲ್ಲಿ ಗೆಳೆಯರಲ್ಲಿ ಹೇಳುವುದು. | • ಬಯಲು ಪ್ರವಾಸದಲ್ಲಿ ಕಂಡ ಮನೆಗಳ ಕುರಿತು ಅಧ್ಯಾಪಕರಲ್ಲಿ, ಗೆಳೆಯರಲ್ಲಿ ಹೇಳುವುದು.<br>• ಮನೆಗಳೊಳಗಿನ ವ್ಯತ್ಯಾಸ ಕಂಡು ಹಿಡಿದು ಹೇಳುವುದು<br>• ಚಿತ್ರದಲ್ಲಿರುವ ಉಪಕರಣಗಳ ವ್ಯತ್ಯಾಸಗಳನ್ನು ಕಂಡುಹಿಡಿದು ಹೇಳುವುದು.<br>• ಮನೆಯನ್ನು ದೊಡ್ಡದು ಸಣ್ಣದು ಎಂಬ ಆಧಾರದಲ್ಲಿ ಹೋಲಿಸುವುದು. |
| • ವಸ್ತುಗಳ ಬಿಡಿಭಾಗಗಳು ಮತ್ತು ಪೂರ್ಣ ವಸ್ತುಗಳೊಳಗಿನ ಸಂಬಂಧಗಳನ್ನು ವಿವರಿಸಲು ಸಾಧ್ಯವಾಗುವುದು. | • ಚಿತ್ರಗಳನ್ನು ಪೂರ್ತಿಗೊಳಿಸುವುದು (ಹೂವು, ಮನೆ...)<br>• ಸರಳವಾದ ಸಮಸ್ಯಾ ಚಿತ್ರಗಳನ್ನು ಪೂರ್ತಿಗೊಳಿಸುವುದು. | • ಚಿತ್ರಗಳನ್ನು ಪೂರ್ತಿಗೊಳಿಸುವುದು(ಹೂವು, ಮನೆ....)<br>• ಸಮಸ್ಯಾ ಚಿತ್ರಗಳನ್ನು ಪೂರ್ತಿಗೊಳಿಸುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| ***ಸಾಮಾಜಿಕ, ಭಾವನಾತ್ಮಕ ವಿಕಾಸ/ಆಂತರಿಕ, ವೈಯಕ್ತಿಕ ಬುದ್ಧಿ, ವ್ಯಕ್ತ್ಯಾಂತರ ಬುದ್ಧಿ***<br>• ಪರಿಸರ ಶುಚಿತ್ವ ಅಭ್ಯಾಸಗಳನ್ನು ಪಾಲಿಸಿಕೊಂಡು ವ್ಯವಹರಿಸಲು ಸಾಧ್ಯವಾಗಬೇಕು. | • ಆರೋಗ್ಯ ಅಭ್ಯಾಸಕ್ಕೆ ಸಂಬಂಧಿಸಿದ ಬೊಂಬೆಯಾಟವನ್ನು ಕಾಣುವುದು, ಆಡುವುದು.<br>• ಆಟಿಕೆಗಳನ್ನು ಯಥಾ ಸ್ಥಳದಲ್ಲಿರಿಸುವುದು.<br>• ಸರಿಯಾದ ಶೌಚ ಕ್ರಮವನ್ನು ಅಭ್ಯಾಸ ಮಾಡುವುದು. | • ಮನೆ, ಪ್ರೀಸ್ಕೂಲ್, ತಾಯಿಯೊಂದಿಗೆ/ ಟೀಚರೊಂದಿಗೆ ಸೇರಿ ಶುಚಿಗೊಳಿಸುವುದು.<br>• ಕಸದ ಬುಟ್ಟಿಯನ್ನುಪಯೋಗಿಸುವುದು<br>• ಶುಚಿತ್ವಕ್ಕೆ ಸಂಬಂಧಿಸಿದ ವೀಡಿಯೋ ವೀಕ್ಷಿಸುವುದು, ಅದರ ಕುರಿತು ಮಾತನಾಡುವುದು.<br>• ರೋಲ್–ಪ್ಲೇ<br>• ಆಟಿಕೆಗಳನ್ನು ಯಥಾ ಸ್ಥಳದಲ್ಲಿ ಕ್ರಮೀಕರಿಸುವುದು<br>• ಸರಿಯಾದ ಶೌಚ ಕ್ರಮವನ್ನು ಅಭ್ಯಾಸಮಾಡುವುದು |
| • ಕಥೆಗಳು, ಅನುಭವಗಳು, ಸಂದರ್ಭಗಳು ಎಂಬಿವುಗಳಲ್ಲಿರುವ ಕಥಾ ಪಾತ್ರಗಳ ಪಾತ್ರಾಭಿನಯ ಮಾಡಲು ಸಾಧ್ಯವಾಗುವುದು (ರೋಲ್ ಪ್ಲೇ) | • ಕಥೆಗಳನ್ನು ಆಲಿಸುವುದು | • ಕಥೆಗಳನ್ನು ವಿಶ್ಲೇಷಣೆ ಮಾಡುವುದು( ಉದಾ : ನರಿಯು ಕಾಗೆಯಿಂದ ರೊಟ್ಟಿ ಕಸಿದ ಕಥೆ)<br>"ನರಿಯು ಮಾಡಿದ್ದು ಸರಿಯೇ?"<br>• ಕೊಕ್ಕರೆ ಮತ್ತು ನರಿಯ ಕಥೆ |
| • ಸಸ್ಯಗಳನ್ನು , ಜೀವಿಗಳನ್ನು ಪ್ರೀತಿಸುವುದಕ್ಕೂ ಪರಿಪಾಲಿಸುವುದಕ್ಕೂ, ಸಂರಕ್ಷಿಸುವುದಕ್ಕೂ ಸಾಧ್ಯವಾಗುವುದು. | • ಜೀವಿಗಳಿಗೆ ಸಂಬಂಧಿಸಿದ ಹಾಡುಗಳನ್ನು/ಕಥೆಗಳನ್ನು ಆಲಿಸುವುದು<br>• ಗಿಡಗಳಿಗೆ ನೀರೆರೆಯುವುದು<br>• ಮೀನು, ಹಕ್ಕಿಗಳು ಎಂಬಿವುಗಳಿಗೆ ಆಹಾರ ನೀಡುವುದು | • ಜೀವಿಗಳ ಗೂಡುಗಳನ್ನು ನಿರೀಕ್ಷಣೆ ಮಾಡುವುದು<br>• ಸಸ್ಯಗಳನ್ನು ಮತ್ತು ಜೀವಿಗಳನ್ನು ಪ್ರೀತಿಸುವ ಹಾಗೂ ಸಂರಕ್ಷಿಸುವುದರ ಕುರಿತಾದ ಹಾಡುಗಳನ್ನು/ಕಥೆಗಳನ್ನು ಆಲಿಸುವುದು<br>• ಹೂದೋಟ ಪರಿಪಾಲನೆ<br>• ಸಾಕುಪಕ್ಷಿ/ಪ್ರಾಣಿಗಳು ಎಂಬಿವುಗಳಿಗೆ ಆಹಾರ ನೀಡುವುದು<br>• ಸಾಕುಪಕ್ಷಿಗಳು, ಪ್ರಾಣಿಗಳು ಎಂಬಿವುಗಳ ಗೂಡುಗಳನ್ನು ನಿರೀಕ್ಷಣೆ ಮಾಡುವುದು.<br>• ಗುಂಪು ಆಟಗಳಲ್ಲಿ ತೊಡಗುವುದು |

## ವಿಷಯ : 3 – ನಾನು ಮತ್ತು ನನ್ನ ಶರೀರ (ಶುಚಿತ್ವ)

**ಕಾಲಾವಧಿ – ಜುಲೈ**

| (3+) | (4+) |
|---|---|
| **ಆಶಯಗಳು –**<br>1. ಶರೀರವನ್ನು ಶುಚಿಯಾಗಿರಿಸಬೇಕು – ಸ್ನಾನ ಮಾಡಬೇಕು, ಹಲ್ಲುಜ್ಜಬೇಕು, ಉಗುರು ಕತ್ತರಿಸಬೇಕು, ಶುಚಿಯಾದ ಉಡುಪನ್ನು ಧರಿಸಬೇಕು.<br>2. ಶರೀರವನ್ನು ಶುಚಿಯಾಗಿರಿಸದಿದ್ದರೆ ರೋಗ ಬರಬಹುದು.<br>3. ಮನೆ, ಶಾಲೆ ಮತ್ತು ಪರಿಸರವನ್ನು ಶುಚಿಯಾಗಿರಿಸಬೇಕು. | 1. ಶರೀರವನ್ನು ಶುಚಿಯಾಗಿರಿಸಬೇಕು – (ಸ್ನಾನ ಮಾಡಬೇಕು, ಹಲ್ಲುಜ್ಜಬೇಕು, ಉಗುರು ತೆಗೆಯಬೇಕು, ಶುಚಿಯಾದ ಉಡುಪನ್ನು ಧರಿಸಬೇಕು.<br>2. ಶರೀರವನ್ನು ಶುಚಿಯಾಗಿರಿಸದಿದ್ದರೆ ರೋಗ ಬರಬಹುದು.<br>3. ಮನೆ, ಶಾಲೆ ಮತ್ತು ಪರಿಸರವನ್ನು ಶುಚಿಯಾಗಿರಿಸಬೇಕು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ತಾಳಾತ್ಮಕವಾಗಿ ಶಬ್ದ ಉಂಟುಮಾಡುವುದಕ್ಕೂ ಅವಯವಗಳನ್ನು ಯಥೇಚ್ಛವಾಗಿ ಚಲಿಸುವಂತೆ ಮಾಡುವುದಕ್ಕೂ ಸಾಧ್ಯವಾಗುತ್ತದೆ. | • ಶರೀರಕ್ಕೆ ಸಂಬಂಧಿಸಿದ ಅಭಿನಯ ಗೀತೆಗಳನ್ನು ಹಾಡಿ ಅಭಿನಯಿಸುವುದು.<br>• ಆರೋಗ್ಯ ಮತ್ತು ಶುಚಿತ್ವಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುವುದು. | • ಶರೀರಕ್ಕೆ ಸಂಬಂಧಿಸಿದ ಅಭಿನಯ ಗೀತೆಗಳನ್ನು ಹಾಡಿ ಅಭಿನಯಿಸುವುದು.<br>• ಆರೋಗ್ಯ ಮತ್ತು ಶುಚಿತ್ವಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುವುದು. |
| • ಆರೋಗ್ಯ ಅಭ್ಯಾಸಗಳನ್ನು, ಶುಚಿತ್ವ ಅಭ್ಯಾಸಗಳನ್ನು ತಿಳಿಯುವುದು | • ಸ್ವತಂತ್ರ ಸಂಭಾಷಣೆ, ವ್ಯಕ್ತಿಗತ ಶುಚಿತ್ವ (ಕೈ ತೊಳೆಯುವುದು, ಹಲ್ಲುಜ್ಜುವುದು, ಸ್ನಾನ ಮಾಡುವುದು, ತಲೆ ಬಾಚುವುದು)<br>• ಶೌಚಕ್ರಮದ ಅಭ್ಯಾಸ<br>• ಶಾರೀರಿಕ ಶುಚಿತ್ವವನ್ನು ಪಾಲಿಸುವುದು (ಕೈತೊಳೆಯುವುದು, ಹಲ್ಲುಜ್ಜುವುದು, ಸ್ನಾನ, ತಲೆ ಬಾಚುವುದು, ಉಗುರು ಕತ್ತರಿಸುವುದು) | • ಶುಚಿತ್ವ ಚಟುವಟಿಕೆಗಳು (ತರಗತಿ/ಆಟಿಕೆಗಳನ್ನು ಶುಚಿಗೊಳಿಸುವುದು, ಯಥಾ ಸ್ಥಳದಲ್ಲಿರಿಸುವುದು)<br>• ಸ್ವತಂತ್ರ ಸಂಭಾಷಣೆ(ವ್ಯಕ್ತಿ ಶುಚಿತ್ವ)<br>• ಶಾರೀರಿಕ ಶುಚಿತ್ವ ಪಾಲಿಸುವುದು. |
| • ಆರೋಗ್ಯ – ಶುಚಿತ್ವಾಭ್ಯಾಸಗಳನ್ನು ಪಾಲಿಸಿಕೊಂಡು ವ್ಯವಹರಿಸುವುದಕ್ಕೆ ಸಾಧ್ಯವಾಗುವುದು. | • ವಸ್ತ್ರ ಶುಚಿತ್ವವನ್ನು ಕಾಪಾಡುವುದು<br>• ಪರಿಸರ ಶುಚಿತ್ವ (ಕಸದ ಬುಟ್ಟಿಯನ್ನು ಸರಿಯಾಗಿ ಉಪಯೋಗಿಸುವುದು, ಆಟಿಕೆಗಳನ್ನು ಯಥಾ ಸ್ಥಳದಲ್ಲಿರಿಸುವುದು) | • ಶಾರೀರಿಕ ಶುಚಿತ್ವವನ್ನು ಪಾಲಿಸುವುದು<br>• ವಸ್ತ್ರ ಶುಚಿತ್ವವನ್ನು ಪಾಲಿಸುವುದು<br>• ಪರಿಸರ ಶುಚಿತ್ವ (ತರಗತಿಯ ವಸ್ತುಗಳು/ಆಟಿಕೆಗಳನ್ನು ಶುಚಿಗೊಳಿಸುವುದು) |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| ***ವೈಜ್ಞಾನಿಕ ಚಿಂತನೆಯ ವಿಕಾಸ***<br>• ತನ್ನ ಸರಳವಾದ ಅಗತ್ಯಗಳನ್ನು ಪ್ರಾಯಕ್ಕನುಸರಿಸಿ, ಪರಾಶ್ರಯವಿಲ್ಲದೆ ಮಾಡುವುದು. | • ವೀಡಿಯೋ, ಕಥೆ, ಬೊಂಬೆಯಾಟ, ಚಿತ್ರ ನಿರೀಕ್ಷಣೆ ಎಂಬಿವುಗಳ ಮೂಲಕ ಕೆಳಗಿನವುಗಳಲ್ಲಿ ತಿಳುವಳಿಕೆ ಗಳಿಸುವುದು.<br>- ಹಲ್ಲುಜ್ಜುವುದು<br>- ಕೈತೊಳೆಯುವುದು<br>- ಒರೆಸುವುದು<br>- ಚಪ್ಪಲಿ ಧರಿಸುವುದು<br>- ತಲೆ ಬಾಚುವುದು<br>- ಬಟ್ಟೆ ಧರಿಸುವುದು, ಬದಲಿಸುವುದು<br>- ಶೌಚಾಲಯ ಉಪಯೋಗ | • ವೀಡಿಯೋ, ಕಥೆ, ಬೊಂಬೆಯಾಟ, ಚಿತ್ರ ನಿರೀಕ್ಷಣೆ ಎಂಬಿವುಗಳ ಮೂಲಕ ಕೆಳಗಿನವುಗಳಲ್ಲಿ ತಿಳುವಳಿಕೆ ಗಳಿಸುವುದು.<br>- ಹಲ್ಲುಜ್ಜುವುದು<br>- ಕೈತೊಳೆಯುವುದು.<br>- ಒರೆಸುವುದು<br>- ಚಪ್ಪಲಿ ಧರಿಸುವುದು<br>- ತಲೆ ಬಾಚುವುದು<br>- ಬಟ್ಟೆ ಧರಿಸುವುದು, ಬದಲಿಸುವುದು, ಮಡಚಿ ಇಡುವುದು<br>- ಸ್ನಾನ ಮಾಡುವುದು<br>- ವಸ್ತುಗಳನ್ನು ಒಪ್ಪ ಓರಣವಾಗಿ ಇರಿಸುವುದು. ಉದಾ: ಒಪ್ಪ ಓರಣದ ಮೇಜಿನ ಮೇಲ್ಬದಿ<br>• ಶೌಚಾಲಯದ ಸರಿಯಾದ ಉಪಯೋಗ<br>• ಚಿತ್ರದ ಸಹಾಯದಿಂದ (ತೆರೆದ ಸ್ಥಳದಲ್ಲಿ ಶೌಚಾಲಯ) ಸರಿತಪ್ಪುಗಳನ್ನು ಹೇಳುವುದು. |
| ***ಸೌಂದರ್ಯಾತ್ಮಕ ಹಾಗೂ ಸೃಜನಾತ್ಮಕವಾದ ವಿಕಾಸ***<br>• ಆರೋಗ್ಯ – ಶುಚಿತ್ವಾಭ್ಯಾಸಗಳಿಗೆ ಸಂಬಂಧಿಸಿದ ಹಾಡುಗಳನ್ನು ಕಂಡುಕೊಳ್ಳುವುದಕ್ಕೂ, ಪದಗಳನ್ನು ಸಾಲುಗಳನ್ನು ಸೇರಿಸಿ ಹಾಡುವುದಕ್ಕೂ, ಚಿತ್ರ ರಚಿಸುವುದಕ್ಕೂ, ಬಣ್ಣ ನೀಡುವುದ್ದೂ ಸಾಧ್ಯವಾಗುವುದು. | • ಆರೋಗ್ಯ – ಶುಚಿತ್ವ ಅಭ್ಯಾಸಗಳಿಗೆ ಸಂಬಂಧಿಸಿದ ಹಾಡುಗಳಲ್ಲಿ ಯೋಗ್ಯವಾದ ಪದಗಳನ್ನು ಸೇರಿಸಿ ಹಾಡುವುದು.<br>• ಚಿತ್ರ ರಚನೆ, ಬಣ್ಣ ಹಚ್ಚುವುದು<br>• ಚೆಂಡುಪುಳಿಯಿಂದ ಮನುಷ್ಯ ನಿರ್ಮಾಣ<br>• ಹಸ್ತ ಚಿತ್ರ | • ಆರೋಗ್ಯ – ಶುಚಿತ್ವ ಅಭ್ಯಾಸಗಳಿಗೆ ಸಂಬಂಧಿಸಿದ ಹಾಡುಗಳಲ್ಲಿ ಪದಗಳನ್ನು ಸೇರಿಸಿ ಹಾಡುವುದು.<br>• ಚಿತ್ರದಿಂದ ಸರಿತಪ್ಪು ಕಂಡುಹಿಡಿದು ಬಣ್ಣ ಹಚ್ಚುವುದು<br>• ಚಿತ್ರ ರಚನೆ, ಬಣ್ಣ ಹಚ್ಚುವುದು<br>• ಒಗಟು<br>• ಹೆಗ್ಗಳಿಕೆ ಹೇಳುವುದು<br>• ಚೆಂಡುಪುಳಿಯಿಂದ ಮನುಷ್ಯ ನಿರ್ಮಾಣ |
| ***ಸಾಮಾಜಿಕ ಹಾಗೂ ಭಾವನಾತ್ಮಕ ವಿಕಾಸ***<br>• ನಮ್ಮ ಕೆಲವೊಂದು ಕೆಲಸಗಳು ಇತರರನ್ನು ಹೇಗೆ ಬಾಧಿಸಬಹುದು ಎಂಬುದರ ಕುರಿತು ಚಿಂತಿಸುವುದಕ್ಕೂ ಇತರರಿಗೆ ತೊಂದರೆಯಾಗುವ ವಿಚಾರಗಳನ್ನು ಕೈಬಿಡುವುದಕ್ಕೂ ಸಾಧ್ಯವಾಗುವುದು. | • ಸ್ವತಂತ್ರ ಸಂಭಾಷಣೆಯಲ್ಲಿ ತೊಡಗುವುದು. (ವ್ಯಕ್ತಿ ಶುಚಿತ್ವ ಮತ್ತು ಪರಿಸರ ಶುಚಿತ್ವ) | • ಚಿತ್ರಗಳನ್ನು ನಿರೀಕ್ಷಣೆ ಮಾಡಿ ಅಭಿಪ್ರಾಯಗಳನ್ನು ಹೇಳುವುದು.<br>• ರೋಲ್ ಪ್ಲೇ ನಡೆಸುವುದು. |

| ವಿಷಯ : 4 – ಮಳೆ ಮತ್ತು ಹವಾಮಾನ | ಕಾಲಾವಧಿ : ಜುಲೈ |
|---|---|
| (3+) | (4+) |
| **ಆಶಯಗಳು**<br>1. ಮಳೆ ಬಂದಾಗ ಧಾರಾಳ ನೀರು ಲಭಿಸುವುದು.<br>2. ಮಳೆ ಇರುವ ಕಾಲ ಮತ್ತು ಮಳೆನೀರಿಲ್ಲದ ಕಾಲವೂ ಇವೆ.<br>3. ಮಳೆಯೊಂದಿಗೆ ಗಾಳಿ, ಗುಡುಗು ಮಿಂಚು ಎಂಬಿತ್ಯಾದಿ ಉಂಟಾಗುವುದಿದೆ.<br>4. ನೀರನ್ನು ಜಾಗ್ರತೆಯಿಂದ ಉಪಯೋಗಿಸಬೇಕು | 1. ಮಳೆ ಬಂದಾಗ ಧಾರಾಳ ನೀರು ಲಭಿಸುವುದು<br>2. ಮಳೆ ಬರುವ ಕಾಲ ಮತ್ತು ಮಳೆ ಇಲ್ಲದ ಕಾಲವೂ ಇವೆ (ಬೇಸಿಗೆ ಕಾಲ, ಚಳಿಗಾಲ)<br>3. ಮಳೆಯೊಂದಿಗೆ ಗಾಳಿ, ಗುಡುಗು, ಮಿಂಚು ಎಂಬಿತ್ಯಾದಿಗಳು ಉಂಟಾಗುವುದಿದೆ.<br>4. ಮಳೆ ಸುರಿಯುವಾಗ ತಂಪಾಗುವುದು<br>5. ನೀರನ್ನು ಜಾಗರೂಕತೆಯಿಂದ ಉಪಯೋಗಿಸಬೇಕು.<br>6.. ಮಳೆಗಾಲದಲ್ಲಿ ಸಸ್ಯಗಳು ಚಿಗುರುತ್ತವೆ, ಬೆಳೆಯುತ್ತವೆ |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| ***ದೈಹಿಕ ಚಲನಾತ್ಮಕ ವಿಕಾಸ***<br>• ಕೈಬೆರಳುಗಳು, ಹಿಡಿಕಡ್ಡಿ, ಪೆನ್ಸಿಲು, ನೀರು, ಚೋಕು, ಕ್ರಯೋನ್, ಸ್ಕೆಚ್‌ಪೆನ್ ಎಂಬಿವುಗಳನ್ನುಪಯೋಗಿಸಿ ಸ್ವಂತವಾಗಿ ಚಿತ್ರ ರಚಿಸಲು ಸಾಧ್ಯವಾಗುವುದು. | • ಕೈಬೆರಳು, ನೀರು, ಚೋಕು, ಕ್ರಯೋನ್, ಸ್ಲೇಟ್‌ಕಡ್ಡಿ ಎಂಬಿವುಗಳನ್ನುಪಯೋಗಿಸಿ ಚಿತ್ರ ರಚಿಸುವುದು. | • ಚೋಕು, ಕ್ರಯೋನ್, ಪೆನ್ಸಿಲ್, ಹಿಡಿಕಡ್ಡಿ ಎಂಬಿವುಗಳನ್ನುಪಯೋಗಿಸಿ ಚಿತ್ರ ರಚಿಸುವುದು<br>• ಇಯರ್‌ಬಡ್ಸ್/ಚಿಕ್ಕ ಬ್ರಷ್‌ನ್ನು ಬಣ್ಣದಲ್ಲಿ ಮುಳುಗಿಸಿ ಚಿತ್ರ ರಚಿಸುವುದು. |
| • ತಾಳಾತ್ಮಕವಾಗಿ ಶಬ್ದ ಮಾಡುವುದಕ್ಕೂ, ಅವಯವಗಳನ್ನು ಯಥೇಚ್ಛವಾಗಿ ಚಲಿಸುವಂತೆ ಮಾಡುವುದಕ್ಕೂ ಸಾಧ್ಯವಾಗುವುದು. | • ಅಭಿನಯ ಗೀತೆ<br>• ತಾಳಾತ್ಮಕವಾಗಿ ಚಪ್ಪಾಳೆ ತಟ್ಟುವುದು<br>• ಮಳೆ ಚಿತ್ರ ರಚನೆ – ಬಣ್ಣ ಹಚ್ಚುವುದು<br>• ದೋಣಿಗೆ ಹುಟ್ಟು ಹಾಕುವ ಆಟ | • ನೃತ್ಯ/ಏರೋಬಿಕ್ಸ್<br>• ಗಿಜಿಗಿಜಿ; ಡ್ರಮ್ ಮೊದಲಾದವುಗಳಲ್ಲಿ ತಾಳಾತ್ಮಕವಾಗಿ ಶಬ್ದ ಮಾಡಿ ಆಡುವುದು<br>• ಮಳೆ ಚಿತ್ರ ರಚನೆ – ಬಣ್ಣ ಹಚ್ಚುವುದು<br>• ದೋಣಿಗೆ ಹುಟ್ಟು ಹಾಕುವ ಆಟ |
| ***ಭಾಷಾ ಪರವಾದ ವಿಕಾಸ***<br>• ಪ್ರಕೃತಿ, ವಸ್ತು, ಚಿತ್ರಗಳು ಎಂಬಿವುಗಳನ್ನು ಓದಿ, (ಪೂರ್ವ ಓದು) ಆಶಯಗಳನ್ನು ಹೇಳಲು ಸಾಧ್ಯವಾಗುವುದು. | • ಮಳೆಯ ಅನುಭವಗಳನ್ನು ಬಿಡಿಸುವ, ಬಣ್ಣ ನೀಡುವ<br>• ಮಳೆ ಹಾಡುಗಳನ್ನು ಹಾಡುವುದು | • ಕೊಡೆ ರಚಿಸುವ, ಬಣ್ಣ ಹಚ್ಚುವ<br>• ವಸ್ತು ಓದು, ಚಿತ್ರ ಓದು<br>• ಮಳೆಯ ಅನುಭವಗಳನ್ನು ಹೇಳುವುದು<br>• ಮಳೆ ಹಾಡುಗಳನ್ನು ಹಾಡುವುದು<br>• ಮಳೆಯ ಕಥೆಗಳನ್ನು ಹೇಳುವುದು, ಚಿತ್ರಕಥೆಗಳನ್ನು ಕ್ರಮೀಕರಿಸುವುದು (ಮಳೆಗೆ ಸಂಬಂಧಿಸಿದವುಗಳು) |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ತನ್ನ ಸುತ್ತಮುತ್ತಲಿನ ವಸ್ತುಗಳು, ಘಟನೆಗಳು, ಅನುಭವಗಳು, ಕಥೆಗಳು ಎಂಬಿವುಗಳ ವಿಶೇಷತೆಗಳನ್ನು ಸ್ವಾನುಭವದ ಆಧಾರದಲ್ಲಿ ಪರಸ್ಪರ ಹೊಂದಿಸಿ ಹೇಳಲು ಸಾಧ್ಯವಾಗುವುದು. | • ಕೊಡೆ, ಟೊಪ್ಪಿ ಎಂಬಿವುಗಳ ಚಿತ್ರಗಳಿಗೆ ಬಣ್ಣ ಹಚ್ಚುವುದು. | • ಇಷ್ಟವಾದ ಮಳೆ ಪ್ರವಾಸದ ಕುರಿತು ಹೇಳುವುದು.<br>• ಮಳೆಗೆ ಸಂಬಂಧಿಸಿದ ಅನುಭವಗಳನ್ನು ಹೇಳುವುದು.<br>• ಮಳೆಗೆ ಸಂಬಂಧಿಸಿದ ವಸ್ತುಗಳಾದ ಕೊಡೆ, ಟೊಪ್ಪಿ, ಕೋಟು ಇವುಗಳ ಉಪಯೋಗವನ್ನು ಹೇಳುವುದು ಅವುಗಳ ಚಿತ್ರಕ್ಕೆ ಬಣ್ಣ ಹಚ್ಚುವುದು.<br>• ಮಳೆಯಲ್ಲಿ ಕೊಡೆ ಹಿಡಿದ ಮಗುವಿನ ಚಿತ್ರವನ್ನು ರಚಿಸುವುದು.<br>• ಕೊಡೆ ಹಿಡಿಯದ ಮಗುವಿನ ಚಿತ್ರಕ್ಕೆ ಕೊಡೆಯ ಚಿತ್ರ ಸೇರಿಸಿ ಬಿಡಿಸುವುದು. |
| ***ವೈಜ್ಞಾನಿಕ ಚಿಂತನೆಯ ವಿಕಾಸ***<br>• ವಸ್ತುಗಳು/ಜೀವಿಗಳು, ಸಸ್ಯಗಳು ಎಂಬಿವುಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲು ಸಾಧ್ಯವಾಗುವುದು. | • ಪ್ರಶ್ನೋತ್ತರ ಪದ್ಯಗಳನ್ನು ಹಾಡುವುದು<br>• ವಸ್ತುಗಳು/ಜೀವಿಗಳು/ಸಸ್ಯಗಳು ಎಂಬಿವುಗಳ ಒಗಟುಗಳನ್ನು ಹೇಳುವುದು. | • ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು<br>• ಪ್ರಾಕೃತಿಕ ವಿದ್ಯಮಾನಗಳು/ವಸ್ತುಗಳು /ಜೀವಿಗಳು/ ಸಸ್ಯಗಳು ಎಂಬಿವುಗಳ ಒಗಟುಗಳನ್ನು ಹೇಳುವುದು. |
| • ಪ್ರಕೃತಿಯಲ್ಲುಂಟಾಗುವ ಬದಲಾವಣೆಗಳನ್ನು (ಮಳೆ, ಬೇಸಿಗೆ, ಚಳಿ ಎಂಬಿವುಗಳು) ತಿಳಿಯುವುದು. ಅನುಭವಗಳನ್ನು ಹಂಚುವುದು.<br> | • ಬಯಲು ಪ್ರವಾಸ<br>• ಅನುಭವಗಳನ್ನು ಹೇಳುವುದು<br>• ಚಿತ್ರ ನಿರೀಕ್ಷಣೆ ಮಾಡಿ ಹೇಳುವುದು<br>• ಅನುಭವಗಳ ಮೂಲಕ ತಿಳಿಯುವುದು. (ಬಿಸಿ, ತಂಪು)<br> | • ಬಯಲು ಪ್ರವಾಸ<br>• ಅನುಭವಗಳನ್ನು ಹಂಚುವುದು<br>• ಮಳೆಗಾಲದಲ್ಲಿ ಕಾಣುವ ಬದಲಾವಣೆಗಳನ್ನು ಹೇಳುವುದು<br>• ಚಿತ್ರ ನಿರೀಕ್ಷಣೆ ಮಾಡಿ ವ್ಯತ್ಯಾಸಗಳನ್ನು ಹೇಳುವುದು.<br>• ಅನುಭವಗಳ ಮೂಲಕ ತಿಳಿಯುವುದು. (ಬಿಸಿ, ತಂಪು, ಬಿಸಿಲು)<br>• ಚಾರ್ಟಿನಲ್ಲಿರುವ ಚಿತ್ರವನ್ನು ನೋಡಿ ವಿವರಿಸುವುದು.<br>• ಕಥೆಯ ಬಾಕಿ ಭಾಗವನ್ನು ಭರ್ತಿ ಮಾಡುವುದು.<br> |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| ***ಸಾಮಾಜಿಕ – ಭಾವನಾತ್ಮಕ ವಿಕಾಸ – ಭಾಷಾಪರವಾದ ವಿಕಾಸ***<br>• ಮಳೆಗೆ ಸಂಬಂಧಿಸಿದ ಹಾಡುಗಳನ್ನು (ಗುಂಪುಹಾಡು, ಬಾಯಿತಾಳ, ಪ್ರಶ್ನೋತ್ತರ ಪದ್ಯಗಳು, ಕಥನ ಕವನಗಳು, ಸಂಭಾಷಣೆಗಳು, ಆಟಗಳು)ಶ್ರದ್ಧೆಯಿಂದ ಆಲಿಸುವುದಕ್ಕೂ ಆಸ್ವಾದಿಸುವುದಕ್ಕೂ ಸಾಧ್ಯವಾಗುವುದು. | • ಕಥನ ಕವನಗಳು, ಸಂಭಾಷಣೆ ಹಾಡುಗಳನ್ನು ಆಲಿಸುವುದು (ಆಡಿಯೋ)<br>• ಮಣ್ಣಿನ ಹೆಂಟೆ ಮತ್ತು ತರಗೆಲೆ ಕಥೆ<br>• ಕೊಡೆಯೊಳಗೆ ಸೇರುವ ಆಟ | • ಕಥನ ಕವನಗಳು, ಸಂಭಾಷಣೆ ಹಾಡುಗಳು, ಪ್ರಶ್ನೋತ್ತರ ಪದ್ಯ, ಗುಂಪು ಹಾಡು, ಬಾಯಿತಾಳ ಎಂಬಿವುಗಳನ್ನು ಆಲಿಸುವುದು (ಆಡಿಯೋ)<br>• ಸಂದರ್ಭವನ್ನು ಹೇಳುವಾಗ ಅಭಿನಯಿಸುವುದು.<br>• ಕೊಡೆಯೊಳಗೆ ಸೇರುವ ಆಟ<br>• ಮಣ್ಣಿನ ಹೆಂಟೆ ಮತ್ತು ತರಗೆಲೆಯು ಕಾಶಿಗೆ ಹೋದ ಕಥೆಯನ್ನು ಆಲಿಸುವುದು. |
| • ಆಲಿಸಿದ ಹಾಡುಗಳನ್ನು ತಾಳಾತ್ಮಕವಾಗಿ ಹಾಡಲು ಸಾಧ್ಯವಾಗುವುದು. | • ಗುಂಪಾಗಿಯೂ, ಒಂಟಿಯಾಗಿಯೂ ಹಾಡುವುದು.<br>• ಉಪಕರಣಗಳನ್ನುಪಯೋಗಿಸಿ (ಗಿಜಿ ಗಿಜಿ) ಮಳೆಹಾಡು ಹಾಡುವುದು. | • ಆಲಿಸಿದ ಹಾಡುಗಳನ್ನು ಗುಂಪಾಗಿಯೂ, ಒಂಟಿಯಾಗಿಯೂ ತಾಳಾತ್ಮಕವಾಗಿ ಹಾಡುವುದು.<br>• ಗಿಜಿ ಗಿಜಿಯಂತಹ ತಾಳೋಪಕರಣಗಳನ್ನು ಉಪಯೋಗಿಸಿ ಹಾಡುವುದು. |
| ***ಸೃಜನಾತ್ಮಕ ಹಾಗೂ ಸೌಂದರ್ಯಾತ್ಮಕ ವಿಕಾಸ***<br>• ಪ್ರಕೃತಿದತ್ತ ವಸ್ತುಗಳು, ಉಪಯೋಗ ಶೂನ್ಯ ವಸ್ತುಗಳು ಎಂಬಿವುಗಳನ್ನುಪಯೋಗಿಸಿ ಕೌತುಕ ಪರವಾದ ವಸ್ತುಗಳನ್ನು ಆಟಿಕೆಗಳನ್ನು ನಿರ್ಮಿಸುವುದು. | • ಸ್ಟೆನ್ಸಿಲ್ ಉಪಯೋಗಿಸಿ ಚಿತ್ರಿಸಿ ಬಣ್ಣ ಹಚ್ಚುವುದು. | • ಕಾಗದದ ದೋಣಿ ನಿರ್ಮಾಣ<br>• ಸ್ಟೆನ್ಸಿಲ್ ಉಪಯೋಗಿಸಿ ಚಿತ್ರಿಸಿ ಬಣ್ಣ ಹಚ್ಚುವುದು<br>• ಕಾಗದದ ಕೊಡೆ ನಿರ್ಮಾಣ<br>• ಕೊಡೆ – ಕೊಲಾಷ್<br>• ವಿವಿಧ ತರದ ಕೊಡೆ ಚಿತ್ರಗಳನ್ನು ಅಂಟಿಸುವುದು. |

| ವಿಷಯ : 5 – ಸಸ್ಯಗಳು – ಹಣ್ಣುಗಳು | | ಕಾಲಾವಧಿ : ಜುಲೈ |
|---|---|---|
| (3+) | | (4+) |
| **ಆಶಯಗಳು**<br>1. ಮನೆಯಲ್ಲಿ ವಿವಿಧ ತರದ ಸಸ್ಯಗಳನ್ನು ನೆಟ್ಟು ಬೆಳೆಸಲಾಗುವುದು<br>2. ವಿವಿಧ ತರದ ಹಣ್ಣುಗಳಿವೆ.<br>3. ಹಣ್ಣುಗಳಿಗೆ, ಪರಿಮಳ, ರುಚಿ, ಬಣ್ಣ ಎಂಬಿವುಗಳಿವೆ.<br>4. ಸಸ್ಯಗಳಿಂದ ಪ್ರಯೋಜನಗಳಿವೆ. | | 1. ಮನೆಯಲ್ಲಿ ವಿವಿಧ ತರದ ಸಸ್ಯಗಳನ್ನು ಬೆಳೆಸಲಾಗುವುದು.<br>2. ವಿವಿಧ ಬಗೆಯ ಹಣ್ಣುಗಳಿವೆ.<br>3. ಹಣ್ಣುಗಳು, ಆಕೃತಿ, ಪರಿಮಳ, ರುಚಿ, ಬಣ್ಣ ಎಂಬಿವುಗಳಲ್ಲಿ ವ್ಯತ್ಯಸ್ಥವಾಗಿವೆ.<br>4. ಆರೋಗ್ಯಕ್ಕೆ ಹಣ್ಣುಗಳು ಪ್ರಯೋಜನಕಾರಿಯಾಗಿವೆ.<br>5. ಸಸ್ಯಗಳಿಂದ ಪ್ರಯೋಜನಗಳಿವೆ. |
| **ಸಾಮರ್ಥ್ಯಗಳು** | **ಕಲಿಕಾನುಭವಗಳು (3+)** | **ಕಲಿಕಾನುಭವಗಳು (4+)** |
| • ಸ್ವಂತವಾಗಿ ಚಿತ್ರಗಳನ್ನು ರಚಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು. (ಕ್ರಯೋನ್, ವಾಟರ್‌ಕಲರ್, ಮರದ ಹುಡಿ, ಕಾಗದ, ಬಟ್ಟೆ......) | • ಹಣ್ಣುಗಳ ಚಿತ್ರಗಳಿಗೆ ಕ್ರಯೋನ್ ಬಳಸಿ ಬಣ್ಣ ನೀಡುವುದು. | • ಸಸ್ಯಗಳು, ಹಣ್ಣುಗಳು ಎಂಬಿವುಗಳಿಗೆ ಕ್ರಯೋನ್ ಬಳಸಿ ಬಣ್ಣ ನೀಡುವುದು.<br>• ಹಣ್ಣುಗಳ ಚಿತ್ರ ರಚಿಸಿ, ಕ್ರಯೋನ್, ಪೆನ್ಸು, ವಾಟರ್‌ಕಲರ್, ಕಾಗದ, ಬಟ್ಟೆ ಎಂಬಿವುಗಳಲ್ಲಿ ಬಣ್ಣ ನೀಡುವುದು. |
| • ಪ್ರಕೃತಿಯ ವಸ್ತುಗಳು , ಚಿತ್ರಗಳು ಎಂಬಿವುಗಳನ್ನು ಓದಿ (ಪೂರ್ವಓದು)ಆಶಯಗಳನ್ನು ಹೇಳಲು ಸಾಧ್ಯವಾಗುವುದು. | • ಹಣ್ಣುಗಳ ಕುರಿತು ಹೇಳುವುದು | • ಚಿತ್ರ ಓದು (ಸಸ್ಯಗಳು, ಹಣ್ಣುಗಳು ಎಂಬಿವುಗಳ ಚಿತ್ರ)<br>• ಹಣ್ಣುಗಳು ಹೆಗ್ಗಳಿಕೆ ಹೇಳುವುದು.<br>• ಹಣ್ಣು ತಿನ್ನುವುದರ ಅಭಿನಯ<br>• ಹಣ್ಣುಗಳ ಮುಖವಾಡ ಧರಿಸಿ ಅಭಿನಯ |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಒಂದರಿಂದ 5ರ ವರೆಗಿನ ಸಂಖ್ಯೆಗಳನ್ನು ಎಣಿಸುವುದಕ್ಕೂ ಸಂಖ್ಯೆ ಮತ್ತು ವಸ್ತುಗಳನ್ನು ಪರಸ್ಪರ ಹೋಲಿಸಲೂ ಸಾಧ್ಯವಾಗುವುದು. | • ಚಿತ್ರದಲ್ಲಿರುವ ಹಣ್ಣುಗಳ ಸಂಖ್ಯೆ ಹೇಳುವುದು | • ಚಿತ್ರ ನೋಡಿ ಹಣ್ಣುಗಳ ಸಂಖ್ಯೆ ಹೇಳುವುದು<br>• ಎಲೆಗಳೂ ಹಣ್ಣುಗಳೂ ಹೆಚ್ಚು ಕಡಿಮೆ ಯಾವುದೆಂದು ಹೇಳುವುದು.<br>• ಹಣ್ಣುಗಳ ಸಂಖ್ಯೆಯನ್ನೂ ಚಿತ್ರವನ್ನೂ ಪರಸ್ಪರ ಹೋಲಿಸುವುದು.<br>• ಹಣ್ಣುಗಳನ್ನು ಎರಡರ ಗುಂಪು ಮಾಡುವುದು. |
| • ಹಣ್ಣುಗಳ ವಿಶೇಷತೆಗಳನ್ನು ಸ್ವಂತ ಅನುಭವದ ಆಧಾರದಲ್ಲಿ ಪರಸ್ಪರ ಹೋಲಿಸಿ ಹೇಳಲು ಸಾಧ್ಯವಾಗುವುದು. | • ಹಣ್ಣುಗಳ ಕುರಿತು ಹೇಳಲು<br>• ಹಣ್ಣುಗಳ ಚಿತ್ರಕ್ಕೆ ಬಣ್ಣ ಕೊಡುವುದು, ಹೇಳುವುದು | • ಇಷ್ಟವಾದ ಹಣ್ಣಿನ ಬಗ್ಗೆ ಹೇಳುವುದು<br>• ಹಣ್ಣು ತಿಂದ ಅನುಭವ – ರುಚಿ<br>• ಹಣ್ಣುಗಳು/ಚಿತ್ರಗಳನ್ನು ನೋಡಿ ವಿಶೇಷತೆಗಳನ್ನು ಹೇಳುವುದು |
| • ಪಂಚೇದ್ರೀಯಗಳನ್ನು ಉಪಯೋಗಿಸಿ ಸಸ್ಯಗಳ ಭಾಗಗಳು, ಹಣ್ಣುಗಳನ್ನು ನಿರೀಕ್ಷಿಸಿ ಪ್ರತ್ಯೇಕತೆಗಳನ್ನು ಕಂಡುಹಿಡಿದು ಬಾಯ್ದೆರೆಯಾಗಿ ಹೇಳುವುದು. | • ಸ್ವಂತ ಸಂಭಾಷಣೆ<br>• ಹಣ್ಣುಗಳಿಗೆ ಸಂಬಂಧಿಸಿದ ಪದ್ಯಗಳು, ಕಥೆಗಳನ್ನು ಆಲಿಸುವುದು | • ಸ್ವಂತ ಸಂಭಾಷಣೆ<br>• ಹೂ, ಎಲೆ ಇತ್ಯಾದಿಗಳ ವಾಸನೆಯನ್ನು ಗ್ರಹಿಸುವುದು.<br>• ರುಚಿ ನೋಡುವುದು<br>• ಹಣ್ಣುಗಳಿಗೆ ಸಂಬಂಧಿಸಿದ ಪದ್ಯಗಳು, ಕಥೆಗಳನ್ನು ಆಲಿಸುವುದು, ಹೇಳುವುದು.<br>• ಹಣ್ಣುಗಳನ್ನು ವರ್ಗೀಕರಿಸುವುದು.<br>(ಬಣ್ಣದ ಕಾರ್ಡುಗಳು, ಮಣಿಗಳು, ಹೂಗಳು) |
| • ಹಣ್ಣುಗಳ (ವಿವಿಧ ರೀತಿಯ), ಚಿತ್ರಗಳನ್ನು ನಿರೀಕ್ಷಿಸಿ, ಗುಂಪಿಗೆ ಸೇರದುದನ್ನು ಪ್ರತ್ಯೇಕಿಸಿ ಹೇಳಲೂ ಗುಂಪಿಗೆ ಸೇರದುದರ ಕಾರಣವನ್ನು ಹೇಳಲೂ ಸಾಧ್ಯವಾಗುವುದು. | • ಹಣ್ಣುಗಳಿಗೆ ಬಣ್ಣ ಹಚ್ಚುವುದು, ವರ್ಗೀಕರಿಸುವುದು | • ಸಾಮ್ಯತೆ ಕಂಡುಹಿಡಿದು ಹೇಳುವುದು<br>• ವರ್ಗೀಕರಿಸುವುದು<br>• ನೈಜವಾದ ಬಣ್ಣ ಹಚ್ಚುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಬಣ್ಣ, ಆಕಾರ, ಗಾತ್ರ, ಉದ್ದ ಇತ್ಯಾದಿ ಒಂದಕ್ಕಿಂತ ಹೆಚ್ಚು ಸೂಚನೆಗಳಿಗನುಸರಿಸಿ ಹಣ್ಣುಗಳು, ಎಲೆಗಳು ಇತ್ಯಾದಿಗಳನ್ನು ವರ್ಗೀಕರಿಸಿ ಕ್ರಮೀಕರಿಸಲು ಸಾಧ್ಯವಾಗುವುದು. | • ಗಣಿತದ ಆಟಗಳು – ಹಣ್ಣಿನಂಗಡಿ<br>• ಚಿತ್ರ ಓದು<br>• ಚಟುವಟಿಕೆಗಳು<br>(ಬಣ್ಣ, ಆಕಾರ, ಉದ್ದ) | • ಗಣಿತ ಆಟಗಳು – ಹಣ್ಣಿನಂಗಡಿ<br>• ಹಣ್ಣುಗಳು, ಎಲೆಗಳು ಇತ್ಯಾದಿ ಕ್ರಮೀಕರಿಸುವುದು. (ಬಣ್ಣ ಆಕೃತಿ, ಗಾತ್ರ, ಉದ್ದ)<br>• ಚಿತ್ರ ಓದು |
| • ಮಾದರಿ ನೋಡಿ ಗಣಿತ ನಮೂನೆಯನ್ನು ಸುಂದರವಾಗಿ ಕ್ರಮೀಕರಿಸಲು ಸಾಧ್ಯವಾಗುವುದು. | • ಹಣ್ಣುಗಳು, ಎಲೆಗಳನ್ನು ನಮೂನೆಯ ರೂಪದಲ್ಲಿ ಕ್ರಮೀಕರಿಸುವುದು.<br>• ಫಿಂಗರ್ ಪ್ರಿಂಟಿಂಗ್<br>• ವೆಜಿಟೇಬಲ್ ಪ್ರಿಂಟಿಂಗ್<br>• ವಿವಿಧ ರೀತಿಯ ಮಣಿ ಪೋಣಿಸುವುದು | • ಹೂಗಳು, ಎಲೆಗಳನ್ನೂ ನಮೂನೆ ರೂಪದಲ್ಲಿ ಕ್ರಮೀಕರಿಸುವುದು<br>• ವೆಜಿಟೇಬಲ್ ಪ್ರಿಂಟಿಂಗ್<br>• ಮಣಿ ಪೋಣಿಸುವುದು<br>• ಅಲಂಕಾರ ಕೆಲಸ<br>• ಫಿಂಗರ್ ಪಪ್ಪೆಟ್ (ಹಣ್ಣುಗಳು) |
| • ಸಸ್ಯಗಳನ್ನೂ, ಜೀವಿಗಳನ್ನೂ ಪ್ರೀತಿಸಲು ಮತ್ತು ಪರಿಪಾಲನೆ ಮಾಡಲೂ ಸಂರಕ್ಷಿಸಲೂ ಸಾಧ್ಯವಾಗುವುದು. | • ಬಯಲು ಪ್ರವಾಸ<br>• ಸಸ್ಯಗಳ ಪದ್ಯ/ಕಥೆ ಕೇಳುವುದು<br>• ಸಸ್ಯಗಳನ್ನು ನೆಟ್ಟು ಬೆಳೆಸುವುದು<br>• ಗಿಡಗಳಿಗೆ ನೀರೆರೆಯುವುದು | • ಬಯಲು ಪ್ರವಾಸ<br>• ಸಸ್ಯ ಮತ್ತು ಜಂತುಗಳನ್ನು ಪ್ರೀತಿಸುವುದು, ಸಂರಕ್ಷಿಸುವ ಕುರಿತಾದ ಹಾಡು/ಕಥೆಗಳನ್ನು ಕೇಳುವುದು<br>• ಹೂದೋಟ ನಿರ್ಮಾಣ, ಪರಿಪಾಲನೆ<br>• ಗಿಡಗಳಿಗೆ ನೀರೆರೆಯುವುದು |
| • ಹಣ್ಣುಗಳು, ಸಸ್ಯಗಳನ್ನು ಸೇರಿಸಿ ಹೊಸ ಪದ್ಯಗಳನ್ನು ಕಂಡುಹಿಡಿಯುವುದು, ಹಾಡುವುದು, ಹೊಸಪದಗಳು, ಸಾಲುಗಳನ್ನು ಸೇರಿಸಿ ಹಾಡಲು ಸಾಧ್ಯವಾಗುವುದು. | • ಹಣ್ಣುಗಳು, ಸಸ್ಯಗಳು ಇತ್ಯಾದಿಗಳ ಕುರಿತಾಗಿರುವ ಹಾಡುಗಳಲ್ಲಿ ಪದಗಳನ್ನು ಸೇರಿಸಿ ಹಾಡುವುದು. | • ಗಿಡ, ಹಣ್ಣು ಇತ್ಯಾದಿಗಳ ಹಾಡುಗಳಲ್ಲಿ ಪದ ಮತ್ತು ಸಾಲುಗಳನ್ನು ಸೇರಿಸಿ ಹಾಡುವುದು.<br>• ಹೊಸ ಹಾಡು ರಚಿಸಿ ಹಾಡುವುದು. |
| • ಪ್ರಕೃತಿಯನ್ನು ಆಸ್ವಾದಿಸುವುದಕ್ಕೂ, ಚಿತ್ರದ ಮೂಲಕ ಪ್ರಕಟಪಡಿಸುವುದಕ್ಕೂ, ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು. | • ಎಲೆ ಪ್ರಿಂಟಿಂಗ್<br>• ಕಾಗದ ಸುರುಟಿ ಪ್ರಿಂಟಿಂಗ್ | • ಎಲೆ ಪ್ರಿಂಟ್, ಎಲೆ ಮೃಗಾಲಯ |
| • ಕಂಡು ಹಿಡಿಯುವ ಚಟುವಟಿಕೆಗಳಲ್ಲಿ ಭಾಗವಹಿಸುವುದು, ನಿಗಮನಗಳನ್ನು ಮಂಡಿಸಲು ಸಾಧ್ಯವಾಗುವುದು. | • ಸಸ್ಯಗಳ ಭಾಗಗಳ ಹೆಸರು ಹೇಳುವರು<br>• ಎಲೆ ಮೂಸುವ ಆಟ (ಕರಿಬೇವು, ತುಳಸಿ, ಸಾಮ್ರಾಣಿ) | • ಗಿಡದ ಭಾಗಗಳನ್ನು ನಿರೀಕ್ಷಿಸಿ ಹೆಸರು ಹೇಳುವುದು<br>• ವಿವಿಧ ರೀತಿಯ ಎಲೆಗಳನ್ನು ನಿರೀಕ್ಷಿಸಿ ಅವುಗಳ ವಿಶೇಷತೆಗಳನ್ನು ಹೇಳುವುದು (ಬಣ್ಣ, ವಾಸನೆ, ಗಾತ್ರ)<br>• ಎಲೆ ಮೂಸುವ ಆಟ (ಕರಿಬೇವು, ತುಳಸಿ, ಸಾಮ್ರಾಣಿ, ಕೊತ್ತಂಬರಿಸೊಪ್ಪು...)<br>• ಎಲೆಗಳನ್ನು ವರ್ಗೀಕರಿಸುವುದು (ಪರಿಮಳ) |

**ವಿಷಯ : 6 – ಆಹಾರ** **ಕಾಲಾವಧಿ : ಆಗೋಸ್ತು**

| (3+) | (4+) |
|---|---|
| **ಆಶಯಗಳು**<br>1. ಮನುಷ್ಯರಲ್ಲದೆ ಇತರ ಜೀವಿಗಳೂ ಹಸಿವಾದಾಗ ಆಹಾರ ಸೇವಿಸುತ್ತವೆ.<br>2. ಹಲವು ವಿಧದ ಆಹಾರಗಳಿವೆ. (ಅನ್ನ, ಇಡ್ಲಿ, ಸಿಹಿತಿಂಡಿ, ಹಣ್ಣು, ತರಕಾರಿ ಇತ್ಯಾದಿ)<br>3. ಉಪ್ಪು, ಖಾರ, ಸಿಹಿಯಾದ ಆಹಾರ ವಸ್ತುಗಳಿವೆ.<br>4. ಶುಚಿಯಾಗಿರುವ ಆಹಾರವನ್ನು ಸೇವಿಸಬೇಕು. | 1. ಎಲ್ಲಾ ಜೀವಿಗಳೂ ಹಸಿವಾದಾಗ ಆಹಾರ ಸೇವಿಸುತ್ತದೆ.<br>2. ಹಲವು ರೀತಿಯ ಆಹಾರಗಳಿವೆ (ಅನ್ನ, ಇಡ್ಲಿ, ಸಿಹಿತಿಂಡಿಗಳು, ಹಣ್ಣುಗಳು, ತರಕಾರಿಗಳು ಇತ್ಯಾದಿ)<br>3. ಉಪ್ಪು, ಖಾರ, ಸಿಹಿ, ಕಹಿ, ಶುಚಿಯಾಗಿರುವ ಆಹಾರಗಳಿವೆ.<br>4. ಶುಚಿಯಾಗಿರುವ ಆಹಾರ ಸೇವಿಸಬೇಕು.<br>5. ಹಸಿಯಾಗಿ ತಿನ್ನುವ ಆಹಾರವನ್ನು ನೀರಿನಲ್ಲಿ ತೊಳೆದು ಸೇವಿಸಬೇಕು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| ***ಪೇಶಿ ಚಲನೆ***<br>• ಅಡುಗೆಗೆ ಸಂಬಂಧಿಸಿದ ಉಪಕರಣಗಳನ್ನು ಉಪಯೋಗಿಸಿರುವ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು. | • ಹಣ್ಣು ಸುಲಿಯುವುದು<br>• ಪದಾರ್ಥಗಳನ್ನು ಒಂದರಿಂದ ಇನ್ನೊಂದಕ್ಕೆ ಬದಲಾಯಿಸುವುದು.<br>• ಬಾಟ್ಲಿಯ ಮುಚ್ಚಳ ತೆಗೆಯುವುದು<br>• ಚಮಚ ಉಪಯೋಗಿಸಿ ಸಕ್ಕರೆ, ಉಪ್ಪು ಕರಗಿಸುವುದು. | • ಹಣ್ಣು ಸುಲಿದು, ತುಂಡು ಮಾಡಿ, ಚಮಚ ಉಪಯೋಗಿಸಿ ತಿನ್ನುವುದು.<br>• ನೀರು ತುಂಬಿಸುವುದು.<br>• ಸಲಾಡ್ ತಯಾರಿಸುವುದು<br>• ಹಣ್ಣುಗಳನ್ನು ತುಂಡು ಮಾಡುವುದು.<br>• ಬಾಟಲಿಯ ಮುಚ್ಚಳ ತೆಗೆಯುವುದು<br>• ಸಕ್ಕರೆ, ಉಪ್ಪು ಕರಗಿಸುವುದು |
| ***ಭಾಷಾ ವಿಕಾಸ***<br>• ವಸ್ತುಗಳ/ಆಹಾರದ ಕುರಿತಾದ ವಿಶೇಷತೆಗಳನ್ನೂ, ತಿಳುವಳಿಕೆಗಳನ್ನೂ ಪ್ರಕಟಪಡಿಸಲು ಸಾಧ್ಯವಾಗುವುದು. | • ಚಿತ್ರ ನೋಡಿ ಹೇಳುವುದು.<br>• ಇಷ್ಟವಿರುವ ಆಹಾರದ ಕುರಿತು ಹೇಳುವುದು (ಸ್ವತಂತ್ರ ಸಂಭಾಷಣೆ).<br>• ಚಿತ್ರ ರಚನೆ (ಬಣ್ಣ ಹಚ್ಚುವುದು) | • ಚಿತ್ರ ಓದು<br>• ಚಿತ್ರದ ಕುರಿತು ವಿವರಣೆ<br>• ಕಥೆ ಹೆಣೆದು ಹೇಳುವುದು (ಅಜ್ಜಿ ಮತ್ತು ಮಂಗಗಳು)<br>• ಇಷ್ಟವಿರುವ ಆಹಾರದ ಕುರಿತು ಹೇಳುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಆಹಾರಕ್ಕೆ ಸಂಬಂಧಿಸಿದ ತನ್ನ ಅನುಭವಗಳನ್ನೂ, ವಿಶೇಷತೆಗಳನ್ನೂ ಹೇಳಲು ಸಾಧ್ಯವಾಗುವುದು. | • ಆಹಾರದ ಕುರಿತು ಹೇಳುವುದು<br>• ಬಿಸ್ಕೆಟು ತಿಂದ ಅನುಭವ ಹೇಳುವುದು<br>• ಸಾಕು ಪ್ರಾಣಿಗಳ ಆಹಾರ ಹೇಳುವುದು | • ಹಸಿದ ಅವಸ್ಥೆ – ಅಭಿನಯಿಸುವುದು. ಆಹಾರ ಸೇವಿಸುವುದರ ಅಗತ್ಯ ಹೇಳುವುದು<br>• ಉಪ್ಪು, ಸಿಹಿ, ಖಾರ ಇತ್ಯಾದಿ ಆಹಾರಗಳನ್ನು ಹೇಳುವುದು<br>• ಅಡುಗೆಕೋಣೆ ಉಪಕರಣಗಳ ಉಪಯೋಗ ಹೇಳುವುದು.<br>• ವೀಡಿಯೋ ನೋಡುವುದು, ನೋಡಿ ಹೇಳುವುದು<br>• ಸಾಕು ಪ್ರಾಣಿಗಳ ಆಹಾರ ಹೇಳುವುದು. |
| • ರೋಲ್‌ಪ್ಲೇ, ಪಾತ್ರಾಭಿನಯ ಇತ್ಯಾದಿಗಳನ್ನು ಆಟ ಸಂದರ್ಭಕ್ಕನುಸರಿಸಿ ನಡೆಸಲು ಸಾಧ್ಯವಾಗುವುದು. | • ಹಣ್ಣುಗಳು, ತರಕಾರಿಗಳು ಇತ್ಯಾದಿಗಳ ಬಗ್ಗೆ ಹೇಳುವುದು. | • ರೋಲ್‌ಪ್ಲೇ, ಗೊಂಬೆಯಾಟ, ಪಾತ್ರಾಭಿನಯ ಎಂಬಿವುಗಳು ಸಂಭಾಷಣೆ ಹೇಳುವುದು. |
| ***ವೈಜ್ಞಾನಿಕ ವಿಕಾಸ***<br>• ಪಂಚೇಂದ್ರೀಯಗಳನ್ನು ಉಪಯೋಗಿಸಿ ವಸ್ತುಗಳನ್ನು ನಿರೀಕ್ಷಿಸಿ ಪ್ರತ್ಯೇಕತೆಗಳನ್ನು ಕಂಡುಹಿಡಿಯಲೂ ಬಾಯ್ದೆರೆಯಾಗಿ ಹೇಳಲೂ ಸಾಧ್ಯವಾಗುವುದು. (ಬಣ್ಣ, ಗಾತ್ರ, ಆಕೃತಿ, ಪರಿಮಳ, ರುಚಿ, ಭಾರ, ಬಾಗಿ ಬಳುಕುವ.........) | • ಅಡುಗೆ ಕೋಣೆಯ ಉಪಕರಣಗಳನ್ನು ಗುರುತಿಸುವುದು (ಶಬ್ದಗಳನ್ನು ಗುರುತಿಸುವುದು, ಪ್ಲಾಸ್ಟಿಕ್, ಲೋಹದ ಚಮಚಗಳು, ಸ್ಟೀಲ್ ಗ್ಲಾಸ್, ಪ್ಲಾಸ್ಟಿಕ್ ಸೌಟು)<br>• ಬಣ್ಣಗಳನ್ನು ಗುರುತಿಸುವುದು.<br>• ಬಣ್ಣಗಳಿಗೆ ಸಂಬಂಧಿಸಿದ ಪದ್ಯಗಳು, ಕಥೆಗಳನ್ನು ಆಲಿಸುವುದು<br>• ವಿವಿಧ ಆಹಾರ ವಸ್ತುಗಳನ್ನು ಬಣ್ಣದ ಆಧಾರದಲ್ಲಿ ವರ್ಗೀಕರಿಸುವುದು.<br>• ಮೂಸಿ ನೋಡುವ, ಹೇಳುವ ಆಟ<br>• ರುಚಿ ನೋಡುವ, ಹೇಳುವ ಆಟ (ಸಕ್ಕರೆ, ಉಪ್ಪಿನಹುಡಿ, ನೀರು, ತೆಂಗಿನಎಣ್ಣೆ)<br>• ಆಕೃತಿಗಳನ್ನು ಗುರುತಿಸುವ ಆಟ (ವೃತ್ತ) ದೋಸೆ, ವಡೆ, ಹಪ್ಪಳ | • ಆಹಾರಕ್ಕೆ ಸಂಬಂಧಿಸಿದ ಪ್ರಶ್ನೋತ್ತರ ಪದ್ಯಗಳನ್ನು ಹಾಡುವುದು<br>• ಅಡುಗೆಕೋಣೆ ಉಪಕರಣಗಳನ್ನು ಹೋಲಿಸುವುದು, ಗುರುತಿಸುವುದು (ಶಬ್ದ ಗುರುತಿಸುವುದು, ಪ್ಲಾಸ್ಟಿಕ್ , ಲೋಹದ ಚಮಚಗಳು, ಸ್ಟೀಲ್‌ಗ್ಲಾಸ್, ಪ್ಲಾಸ್ಟಿಕ್ ಸೌಟು)<br>• ಅಡುಗೆಕೋಣೆ ಉಪಕರಣಗಳನ್ನು ಗಾತ್ರದ ಆಧಾರದಲ್ಲಿ ವರ್ಗೀಕರಿಸುವುದು.<br>• ಚಿತ್ರಗಳಿಗೆ ಬಣ್ಣ ಹಚ್ಚುವುದು.<br>• ಬಣ್ಣಕ್ಕೆ ಸಂಬಂಧಿಸಿದ ಹಾಡು, ಕಥೆಗಳನ್ನು ಆಲಿಸುವುದು.<br>• ಬಣ್ಣ ಗುರುತಿಸುವ ಆಟ<br>• ಬಣ್ಣ ಹಚ್ಚುವುದು<br>• ಬಣ್ಣಗಳನ್ನು ಹಲವು ರೀತಿಯಲ್ಲಿ ಕ್ರಮೀಕರಿಸುವುದು<br>• ರುಚಿ ನೋಡುವ, ಹೇಳುವ ಆಟ, ಉಪ್ಪುಹುಡಿ, ಸಕ್ಕರೆ, ಚಹಾ, ತೆಂಗಿನಎಣ್ಣೆ<br>• ಆಕೃತಿ ಗುರುತಿಸುವ ಆಟ – ವಡೆ, ದೋಸೆ, ಬಿಸ್ಕೆಟ್, ಹಪ್ಪಳ. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಅಡುಗೆ ಕೋಣೆಯ ವಿವಿಧ ಆಕೃತಿಗಳಲ್ಲಿರುವ ವಸ್ತುಗಳನ್ನು ಕಂಡುಹಿಡಿದು ಚಿತ್ರ ಮಾಡುವುದು, ಉದಾಹರಿಸುವುದು, ಐದಕ್ಕಿಂತ ಕಡಿಮೆ ಇರುವ ವಸ್ತುಗಳನ್ನು ಎಣಿಸಿ ತೆಗೆಯುವುದು. | • ಕಿಚನ್‌ಸೆಟ್‌ನ ಸಹಾಯದೊಂದಿಗೆ ಪಾತ್ರಗಳ ಹೆಸರು ಹೇಳುವುದು.<br>• ಉಪಕರಣಗಳು ಎಷ್ಟಿವೆಯೆಂದು ಎಣಿಸಿ ಕಂಡು ಹಿಡಿಯುವುದು (ಉದಾ : ಚಮಚ 2ರಂತೆ). | • ಕಿಚನ್‌ಸೆಟ್‌ನ ಸಹಾಯದೊಂದಿಗೆ ಪಾತ್ರೆಗಳನ್ನು ಉರುಟಾಗಿರುವುದು, ಚಪ್ಪಟ್ಟೆಯಾಗಿರುವುದು, ಉದ್ದವಾಗಿರುವುದು ಹೀಗೆ ವರ್ಗೀಕರಿಸುವುದು. ಹೆಸರು, ಹೇಳುವುದು, ಚಿತ್ರ ಮಾಡುವುದು.<br>• ಉಪಕರಣಗಳು ಎಷ್ಟೆಂದು ಎಣಿಸಿ ಹೇಳುವುದು (ಉದಾ: ಚಮಚ 2).<br>• ಕಟೌಟ್‌ನ ಆಧಾರದಲ್ಲಿ ಚಿತ್ರಿಸುವುದು. |
| • ಸಮಯ, ಪ್ರಾಯದ ಆಧಾರದಲ್ಲಿ ಸರಿಯಾದ ಆಹಾರ ಕ್ರಮವನ್ನು ಎಣಿಸಿ ತೆಗೆಯುವುದು. | • ಬೆಳಿಗ್ಗೆ ಸೇವಿಸುವ ಆಹಾರ, ಮಧ್ಯಾಹ್ನ ಸೇವಿಸುವ ಆಹಾರ, ರಾತ್ರಿ ಸೇವಿಸುವ ಆಹಾರ. | • ಸರಿಯಾದ ಆಹಾರ ಕ್ರಮ (ಆಹಾರ ಪೋಲು ಮಾಡದೆ ಸೇವಿಸುವ) |
| ***ಸೌಂದರ್ಯಾತ್ಮಕ ಮತ್ತು ಸೃಜನಾತ್ಮಕ ವಿಕಾಸ***<br>• ಆಹಾರಕ್ಕೆ ಸಂಬಂಧಿಸಿದ ವಿವಿಧ ರೀತಿಯ ಹಾಡುಗಳು (ಸಮೂಹ ಗೀತೆ, ಬಾಯಿತಾಳ, ಪ್ರಶ್ನೋತ್ತರ ಹಾಡು, ಕಥನ ಕವನ, ಸಂಭಾಷಣೆಗಳನ್ನು ಗಮನವಿಟ್ಟು ಆಲಿಸುವುದು, ಆಸ್ವಾದಿಸುವುದು) | • ಕಥನ ಕವನಗಳು, ಸಂಭಾಷಣಾ ಗೀತೆಗಳನ್ನು ಆಲಿಸುವುದು (ಆಡಿಯೋ). | • ಕಥನ ಕವನಗಳು, ಸಂಭಾಷಣಾ ಗೀತೆಗಳು, ಪ್ರಶ್ನೋತ್ತರ ಗೀತೆಗಳು, ಸಮೂಹ ಗೀತೆಗಳು, ಬಾಯಿತಾಳಗಳು. ಎಂಬಿವುಗಳನ್ನು ಆಲಿಸುವುದು (ಓಡಿಯೋ). |

## ವಿಷಯ 7 : ಆಚರಣೆಗಳು, ಸ್ವಾತಂತ್ರ್ಯದಿನ

ಕಾಲಾವಧಿ : ಆಗೋಸ್ತು

| (3+) | (4+) |
|---|---|
| **ಆಶಯಗಳು**<br>1. ಹುಟ್ಟುಹಬ್ಬ, ಮದುವೆ ಇತ್ಯಾದಿ ಆಚರಣೆಗಳನ್ನು ಮನೆಯಲ್ಲಿ ಆಚರಿಸುತ್ತಾರೆ.<br>2. ಓಣಂ, ಕ್ರಿಸ್‌ಮಸ್, ಬಕ್ರೀದ್ ಇತ್ಯಾದಿ ಹಬ್ಬಗಳಿವೆ. ಪ್ರತಿಯೊಂದಕ್ಕೂ ಅದರದ್ದೇ ಆದ ವಿಶೇಷತೆಗಳಿವೆ. (ರಂಗೋಲಿ, ಕ್ರಿಸ್‌ಮಸ್‌ತಾತ, ಕೇಕ್ ಇತ್ಯಾದಿ ವಿಶೇಷತೆಗಳಿವೆ)<br>4. ಆಚರಣೆಯ ಅಂಗವಾಗಿ ಶಾಲೆ, ಮನೆ ಮತ್ತು ಪರಿಸರವನ್ನು ಅಲಂಕರಿಸುತ್ತಾರೆ. | 1. ಮನೆಯಲ್ಲಿ ಹುಟ್ಟುಹಬ್ಬ, ಮದುವೆ ಇತ್ಯಾದಿ ಆಚರಣೆಗಳನ್ನು ಮಾಡುತ್ತೇವೆ.<br>2. ಓಣಂ, ಕ್ರಿಸ್‌ಮಸ್‌ತಾತ, ಬಕ್ರೀದ್ ಇತ್ಯಾದಿ ಹಲವಾರು ಹಬ್ಬಗಳಿವೆ. ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳಿವೆ. (ಪೂಕಳ, ಕ್ರಿಸ್‌ಮಸ್‌ತಾತ, ಕೇಕ್.... ಇತ್ಯಾದಿ) ಶಾಲೆಯಲ್ಲೂ ಆಚರಣೆಗಳಿವೆ. (ಸ್ವಾತಂತ್ರ್ಯದಿನ, ಗಾಂಧೀಜಿ, ಮಕ್ಕಳ ದಿನಾಚರಣೆ ಇತ್ಯಾದಿ)<br>3. ಆಚರಣೆಯ ಅಂಗವಾಗಿ ಶಾಲೆ, ಮನೆ ಹಾಗೂ ಪರಿಸರವನ್ನು ಅಲಂಕರಿಸುತ್ತಾರೆ. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಆಚರಣೆಗಳಿಗೆ ಸಂಬಂಧಿಸಿದ ಚಿತ್ರ ರಚಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು. (ಕ್ರಯೋನ್, ವಾಟರ್‌ಕಲರ್, ಕಾಗದ, ಬಟ್ಟೆ, ಮರದ ಹುಡಿ ಇತ್ಯಾದಿ) | • ಚಿತ್ರಗಳಿಗೆ ಕ್ರಯೋನ್ ಉಪಯೋಗಿಸಿ ಬಣ್ಣ ಹಚ್ಚುವುದು. | • ಚಿತ್ರ ರಚಿಸಿ ಕ್ರಯೋನ್, ಪೆನ್ಸಿಲ್, ವಾಟರ್‌ಕಲರ್, ಪೇಪರ್, ಬಟ್ಟೆ ಇತ್ಯಾದಿ ಬಳಸಿ ಬಣ್ಣ ಹಚ್ಚುವುದು. |
| • ವಿವಿಧ ಸಂದರ್ಭಗಳ ಸ್ವಯಂ ನಿರೀಕ್ಷಣೆ, ಅಭಿಪ್ರಾಯ, ನಿರ್ದೇಶನಗಳನ್ನು ಸಹಪಾಠಿಗಳಲ್ಲೂ, ಹಿರಿಯರಲ್ಲೂ, ಸಭೆಗಳಲ್ಲೂ ಹೇಳಲು ಸಾಧ್ಯವಾಗುವುದು. | • ಸೂಚನೆಯಂತೆ ತರಗತಿಯನ್ನು ಅಲಂಕರಿಸುವುದು. ಶುಚೀಕರಣ ಪ್ರಕ್ರಿಯೆಗಳು. ಅವುಗಳ ಕುರಿತು ಹೇಳುವುದು. (ಯಾವಾಗ? /ಹೇಗೆ? ಯಾವುದೆಲ್ಲಾ ತಯಾರಿ? ) | • ಕ್ಲಾಸ್ ಅಲಂಕರಿಸುವುದು, ಶುಚೀಕರಣ ಚಟುವಟಿಕೆ, ಹೂದೋಟ ನಿರ್ಮಾಣ, ಗುಂಪಾಗಿ ಮಾಡುವ ಇತರ ಚಟುವಟಿಕೆಗಳಲ್ಲಿ ತನ್ನ ಅಭಿಪ್ರಾಯ ಮಂಡಿಸುವುದು.<br>ಉದಾ : ಓಣಂ, ರಂಜಾನ್, ಕ್ರಿಸ್‌ಮಸ್ ಹಬ್ಬಗಳು – ಹೇಗೆ ತಯಾರಾಗುವುದು? ಏನೆಲ್ಲಾ ಮಾಡಬೇಕು? (ಅಭಿಪ್ರಾಯಗಳು)<br>- ಪೂವಲಿ (ಹೂ ರಂಗವಲ್ಲಿ) ಇಷ್ಟವಾಯಿತೇ? ಯಾಕೆ? (ನಿಗಮನ) |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಕಾಗದ, ಬಟ್ಟೆ ಇತ್ಯಾದಿಗಳನ್ನು ಕತ್ತರಿಸಲೂ, ಮಡಚಲೂ, ಅಂಟಿಸಲೂ ಸಾಧ್ಯವಾಗುವುದು. | • ತೋರಣ ಕಟ್ಟುವುದು, ಕ್ಲಾಸ್ ಅಲಂಕರಿಸುವುದು. | • ತೋರಣ ತಯಾರಿಸುವುದು. ಕ್ಲಾಸಿನ ಒಳಗೂ ಹೊರಗೂ (ಕಾಗದ, ಎಲೆ, ಬಟ್ಟೆ)ಅಲಂಕರಿಸುವುದು.<br>• ಬ್ಯಾಡ್ಜ್ ನಿರ್ಮಾಣ |
| • ಆಟಗಳಲ್ಲಿಯೂ, ನಿರ್ಮಾಣ ಚಟುವಟಿಕೆಗಳಲ್ಲಿಯೂ ಗುಂಪಾಗಿಯೂ, ಹಿರಿಯರೊಂದಿಗೂ ಸೇರಿ ಸಹಕಾರ ಮನೋಭಾವದೊಂದಿಗೆ ನಾಯಕತ್ವದೊಂದಿಗೆ ಭಾಗವಹಿಸಲು ಸಾಧ್ಯವಾಗುವುದು. | • ಕ್ಲಾಸ್ ಅಲಂಕರಿಸುವುದು<br>• ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.<br>• ಆಟಗಳಲ್ಲಿ ಭಾಗವಹಿಸುವುದು | • ಆಟಗಳಲ್ಲಿ ಭಾಗವಹಿಸುವಿಕೆ<br>• ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆ. ದೇಶಭಕ್ತಿಗೀತೆಗಳು. |
| • ಇತರರ ಸಾಮರ್ಥ್ಯ, ಸತ್ಕಾರ್ಯಗಳನ್ನು ಪ್ರೋತ್ಸಾಹಿಸಲೂ, ಅಂಗೀಕರಿಸಲೂ ಸಾಧ್ಯವಾಗುವುದು. | • ಹಾಡು, ಕಥೆ, ಚಿತ್ರಗಳ ನಂತರ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವುದು. | • ಹಾಡು, ಕಥೆ, ರೋಲ್‌ಪ್ಲೇ, ಚಿತ್ರ ಇತ್ಯಾದಿಗಳ ನಂತರ ಕೈಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವುದು.<br>• ತನ್ನದಾದ ರೀತಿಯಲ್ಲಿ ಬಹುಮಾನ ಕೊಡುವುದು. |
| • ಸಂಕೋಚವಿಲ್ಲದೆ ಸಹಪಾಠಿಗಳು, ಹಿರಿಯರೊಂದಿಗೆ ಸಂತೋಷದಿಂದ ಮಾತನಾಡಲೂ ಹೊಸ ಸಹಪಾಠಿ ಮತ್ತು ಹಿರಿಯರನ್ನು ಪರಿಚಯ ಮಾಡಿಕೊಳ್ಳಲೂ ಸಾಧ್ಯವಾಗುವುದು. | • ಆಚರಣೆಗಳಲ್ಲಿ ಭಾಗವಹಿಸುವುದು | • ಆಚರಣೆಗಳಲ್ಲಿ ಪಾಲ್ಗೊಳ್ಳುವುದು<br>• ಗುಂಪು ಚಟುವಟಿಕೆಗಳು<br>• ರೋಲ್ ಪ್ಲೇ |
| • ಆಟಿಕೆಗಳು, ಆಹಾರ , ಇತರ ವಸ್ತುಗಳು ಇತ್ಯಾದಿಗಳನ್ನು ಇತರರೊಂದಿಗೆ ಹಂಚುವುದಕ್ಕೂ, ಸರದಿಯಲ್ಲಿ ಕಾದು ನಿಲ್ಲುವುದಕ್ಕೂ ಸಾಧ್ಯವಾಗುವುದು. | • ಆಚರಣೆಗಳಿಗೆ ಸಂಬಂಧಿಸಿದ ಔತಣಕೂಟ ತಯಾರಿಸುವುದು, ಒಟ್ಟಿಗೆ ಸೇವಿಸುವುದು. | • ಆಚರಣೆಗಳಿಗೆ ಸಂಬಂಧಿಸಿದ ಔತಣ ತಯಾರಿಸುವುದು. (ರೋಲ್‌ಪ್ಲೇ). ಜೊತೆಯಾಗಿ ಆಹಾರ ಸೇವಿಸುವುದು.<br>• ಸರದಿಯಲ್ಲಿ ನಿಲ್ಲುವ– ಆಟಗಳು<br>• ಮಾಸ್‌ಡ್ರಿಲ್ |

## ಆಶಯ 8 : ಆರೋಗ್ಯ, ರೋಗಗಳು, ಆಸ್ಪತ್ರೆ

ಕಾಲಾವಧಿ : ಆಗೋಸ್ತು

| (3+) | (4+) |
|---|---|
| **ಆಶಯಗಳು**<br>1. ವಿವಿಧ ರೋಗಗಳಿವೆ.<br>2. ರೋಗಕ್ಕಾಗಿ ಸ್ವಚ್ಛತಾ ಅಭ್ಯಾಸಗಳು ಅಗತ್ಯ.<br>3. ರೋಗ ಬಂದರೆ ಚಿಕಿತ್ಸೆ ನೀಡುವ ಸಂಸ್ಥೆ ಆಸ್ಪತ್ರೆಯಾಗಿದೆ.<br>4. ಆಸ್ಪತ್ರೆಯಲ್ಲಿ ವೈದ್ಯರು, ದಾದಿ ಮುಂತಾದವರು ಇದ್ದಾರೆ. | 1. ವಿವಿಧ ರೋಗಗಳಿವೆ.<br>2. ರೋಗಕ್ಕಾಗಿ ಸ್ವಚ್ಛತಾ ಅಭ್ಯಾಸಗಳು ಅಗತ್ಯ.<br>3. ರೋಗ ಬಂದರೆ ಚಿಕಿತ್ಸೆ ನೀಡುವ ಸಂಸ್ಥೆ ಆಸ್ಪತ್ರೆಯಾಗಿದೆ.<br>4. ಆಸ್ಪತ್ರೆಯಲ್ಲಿ ವೈದ್ಯರು, ದಾದಿ ಮುಂತಾದವರು ಇದ್ದಾರೆ.<br>5. ವ್ಯಕ್ತಿ ಶುಚಿತ್ವ, ಪರಿಸರ ಸ್ವಚ್ಛತೆ ಪಾಲಿಸಿದರೆ ರೋಗದಿಂದ ಪಾರಾಗಬಹುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಆರೋಗ್ಯ ಅಭ್ಯಾಸಗಳು ಸ್ವಚ್ಛತೆ ಪಾಲಿಸಬೇಕಾದ ಅಗತ್ಯ ತಿಳಿದು ಅನುಸರಿಸಲು ಸಾಧ್ಯವಾಗುವುದು. | • ಆರೋಗ್ಯ ಪದ್ಯಗಳು/ಸ್ವಚ್ಛತೆಗೆ ಸಂಬಂಧಿಸಿದ ಹಾಡುಗಳನ್ನು ಹಾಡುವುದು (ಕೈತೊಳೆಯುವುದು, ಸರಿಯಾದ ರೀತಿಯಲ್ಲಿ ಆಹಾರ ಸೇವಿಸುವುದು, ಹಲ್ಲುಜ್ಜುವುದು, ಸ್ನಾನ, ಕೂದಲು ಬಾಚುವುದು, ಉಗುರು ಕತ್ತರಿಸುವುದು)<br>• ಶಾರೀರಿಕ ಸ್ವಚ್ಛತೆ ಪಾಲಿಸುವುದು<br>• ವಸ್ತ್ರ ಶುಚಿತ್ವ ಪಾಲಿಸುವುದು<br>• ಪರಿಸರ ಸ್ವಚ್ಛತೆ<br>• ಸರಿಯಾದ ಶೌಚಾಲಯ ಪರಿಶೀಲನೆ | • ಆರೋಗ್ಯ/ಶುಚಿತ್ವ ಇತ್ಯಾದಿಗಳಿಗೆ ಸಂಬಂಧಿಸಿದ ಹಾಡು ಹಾಡುವುದು.<br>• ಶುಚೀಕರಣ ಚಟುವಟಿಕೆಗಳು (ಕ್ಲಾಸ್/ತರಕಾರಿ ಶುಚಿಗೊಳಿಸುವುದು, ತಕ್ಕ ಸ್ಥಳದಲ್ಲಿ ಇರಿಸುವುದು)<br>• ಸ್ವತಂತ್ರ ಸಂಭಾಷಣೆ (ಕೈತೊಳೆಯುವುದು, ಹಲ್ಲುಜ್ಜುವುದು, ಸ್ನಾನ, ಉಗುರು ತೆಗೆಯುವುದು, ತಲೆ ಬಾಚುವುದು)<br>• ಕಸದ ತೊಟ್ಟಿಯನ್ನು ಸರಿಯಾಗಿ ಬಳಸುವುದು, ಆಟೋಪಕರಣಗಳನ್ನು ಸರಿಯಾದ ಜಾಗದಲ್ಲಿರಿಸುವುದು. |
| • ತನ್ನ ಸರಳವಾದ ಆವಶ್ಯಕತೆಗಳನ್ನು ಪ್ರಾಯಕ್ಕನುಸರಿಸಿ ಮಾಡಲು ಸಾಧ್ಯವಿರುವವುಗಳನ್ನು ಸ್ವತಃ, ಪರರ ಆಶ್ರಯವಿಲ್ಲದೆ ಮಾಡಲು ಸಾಧ್ಯವಾಗುವುದು. | • ಕೈಯಲ್ಲಿ ಕೊಳೆಯಿದೆಯೇ? – ಸರಳ ಪ್ರಯೋಗ<br>• ಹಲ್ಲುಜ್ಜುವುದು<br>• ಒರೆಸುವುದು<br>• ಚಪ್ಪಲಿ ಧರಿಸುವುದು<br>• ತಲೆ ಬಾಚುವುದು<br>• ವಸ್ತ್ರ ಧರಿಸುವುದು, ಕಳಚುವುದು<br>• ಪಾಯಿಖಾನೆ ಉಪಯೋಗ | • ಚಿತ್ರ ಓದು (ರೋಗ ಹರಡುವ ಜೀವಿಗಳು, ಮಲಿನನೀರು, ತೆರೆದಿರಿಸಿದ ಆಹಾರ)<br>• ವೀಡಿಯೋ ನೋಡುವುದು, ಪ್ರತಿಕ್ರಿಯಿಸುವುದು<br>• ಹಲ್ಲುಜ್ಜುವುದು<br>• ಕೈತೊಳೆಯುವುದು<br>• ಒರೆಸುವುದು<br>• ಚಪ್ಪಲಿ ಧರಿಸುವುದು<br>• ತಲೆ ಬಾಚುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| | | • ವಸ್ತ್ರ ಧರಿಸುವುದು, ಕಳಚಿಡುವುದು, ಮಡಚಿಡುವುದು<br>• ಆಟಗಳು<br>• ವ್ಯವಸ್ಥಿತವಾಗಿ ವಸ್ತುಗಳನ್ನು ಇರಿಸುವುದು<br>• ಪಾಯಿಖಾನೆಯ ಸರಿಯಾದ ಬಳಕೆ |
| • ಆರೋಗ್ಯ ಶುಚಿತ್ವ ಅಭ್ಯಾಸಗಳನ್ನು ಪಾಲಿಸಿಕೊಂಡು ಪ್ರವರ್ತಿಸಲು ಸಾಧ್ಯವಾಗುವುದು. | • ಚಿತ್ರನೋಡಿ ಹೇಳುವುದು – ಅನುಭವ ಹೇಳುವುದು<br>• ಡಾಕ್ಟರ್‌ಸೆಟ್ ಆಟಿಕೆ ಉಪಯೋಗಿಸಿ ಆಟ | • ಆಸ್ಪತ್ರೆ – ರೋಲ್‌ಪ್ಲೇ<br>• ವೇಸ್ಟ್‌ಬೋಕ್ಸ್ ನಿರ್ಮಾಣ<br>• ಚಿತ್ರ ಓದು (ವೈದ್ಯರು, ದಾದಿ), ಅನುಭವ ಹೇಳುವುದು<br>• ಡಾಕ್ಟರ್‌ಸೆಟ್ ಆಟಿಕೆ ಉಪಯೋಗಿಸಿ ಆಡುವುದು. |
| • ಮುಖಭಾವದಲ್ಲೂ, ಅಭಿನಯದ ಮೂಲಕವೂ, ಶಬ್ದ ಏರಿಳಿತದೊಂದಿಗೂ ಇತರರೊಡನೆ ಆಶಯ ವಿನಿಮಯ ಮಾಡಲಸಾಧ್ಯವಾಗುವುದು. | • ಆಟಗಳು<br>• ವೇಷಧರಿಸಿ ಆಟ | • ವೇಷಧರಿಸಿ ಆಟ, ರೋಲ್‌ಪ್ಲೇ ಅಭಿನಯ |



| ವಿಷಯ 9 : ಹೂಗಳು, ಹೂದೋಟ, ಚಿಟ್ಟೆಗಳು | ಕಾಲಾವಧಿ : ಸೆಪ್ಟೆಂಬರ್ |
|---|---|
| **(3+)** | **(4+)** |
| **ಆಶಯಗಳು**<br>1. ಹೂವಿನ ಗಿಡಗಳನ್ನು ನೆಟ್ಟು ಬೆಳೆಸುತ್ತಾರೆ.<br>2. ಹೂಗಳು ಹಲವು ಬಣ್ಣಗಳಲ್ಲವೇ.<br>3. ಪರಿಮಳದ ಹೂಗಳು, ಪರಿಮಳವಿಲ್ಲದ ಹೂಗಳು ಇವೆ.<br>4. ಹೂಗಳಿಗೆ ಚಿಟ್ಟೆಗಳು ಬರುತ್ತವೆ. | 1. ಮನೆಯಲ್ಲಿರುವ ಹಲವು ವಿಧದಲ್ಲಿರುವ ಗಿಡಗಳನ್ನು ನೆಟ್ಟು ಬೆಳೆಸುತ್ತಾರೆ.<br>2. ಹೂಗಳು ಆಗುವ ಗಿಡಗಳಿವೆ.<br>3. ಬಣ್ಣದ ಹೂಗಳಿವೆ.<br>4. ಪರಿಮಳದ ಹೂಗಳೂ, ಪರಿಮಳವಿಲ್ಲದ ಹೂಗಳೂ ಇವೆ.<br>5. ಹೂವಿನ ಬಳಿಗೆ ದುಂಬಿ, ಜೇನುನೊಣಗಳೂ, ಚಿಟ್ಟೆಗಳೂ ಜೇನುಕುಡಿಯಲು ಬರುತ್ತದೆ.<br>6. ನೀರಿನಲ್ಲಿ ಬೆಳೆಯುವ ಸಸ್ಯಗಳಿಗೂ ಹೂವುಗಳಿವೆ.<br>7. ಹೂಗಳನ್ನು ಅಲಂಕಾರಕ್ಕೆ ಬಳಸುತ್ತೇವೆ. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಶರೀರದ ಹೆಚ್ಚಿನ ಪೇಶಿಗಳನ್ನು ಬಳಸಿಕೊಂಡು ಸ್ವಂತವಾಗಿ ಮತ್ತು ನಿಯಂತ್ರಿತವಾದ (ಸೂಚನೆಗಳನ್ನು ಪಾಲಿಸಿ) ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. | • ಹೂಗಳಿಗೆ ಸಂಬಂಧಿಸಿದ ಅಭಿನಯಗಳು | • ಹೂಗಳಿಗೆ ಸಂಬಂಧಿಸಿದ ಅಭಿನಯಗೀತೆಗಳು, ಹೂ ಕೊಯ್ಯಲು ಬರುವೆಯಾ ಬರುವೆಯಾ....?<br>(1, 2, 3, 4, ಚಪ್ಪಾಳೆ) |
| • ಸ್ವಂತವಾಗಿ ಚಿತ್ರಗಳನ್ನು ರಚಿಸಿ ಬಣ್ಣ ಹಚ್ಚುವುದು. ಅವುಗಳ ಕುರಿತು ಹೇಳುವುದು. | • ಚಿತ್ರದಲ್ಲಿ ಕ್ರಯೋನ್ ಉಪಯೋಗಿಸಿ ಬಣ್ಣ ಹಚ್ಚುವುದು.<br>• ಚಿತ್ರಗಳನ್ನು ಕತ್ತರಿಸಿ ಅಂಟಿಸುವುದು.<br>• Sandtray ಯಲ್ಲಿ ಹೂಗಳನ್ನು ಕ್ರಮೀಕರಿಸುವುದು. | • ಚಿತ್ರಗಳಲ್ಲಿ ಕ್ರಯೋನ್ ಬಳಸಿ ಬಣ್ಣ ಹಚ್ಚುವುದು.<br>• ತೆಂಗಿನಕಾಯಿಯ ಮುತ್ತು, ಬ್ರೆಷ್<br>• ಬಣ್ಣದಲ್ಲಿ ಮುಳುಗಿಸಿ ಇಷ್ಟವಿರುವಂತೆ ಬಣ್ಣ ಹಚ್ಚುವುದು, ಚಿತ್ರದ ಕುರಿತು ವಿವರಣೆ.<br>• ಚಿತ್ರ ಕತ್ತರಿಸಿ ಅಂಟಿಸುವುದು<br>• ಚಿತ್ರ ರಚನೆ – ಬೋರ್ಡ್, ಗೋಡೆ..... |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| | • ಚಿತ್ರನೋಡಿ ಹೇಳುವುದು<br>• ಹೂಗಳ ಕುರಿತು ಹೇಳುವುದು | • ರಚಿಸಿದ ಚಿತ್ರ – (ಹೂ, ಕೊಲಾಷ್, ಹ್ಯೊಗೆ, ಮರದಿ ಹುಡಿ) ನೋಡಿ ಹೇಳುವುದು.<br>• Sandtrayಯಲ್ಲಿ ಹೂ ಇಟ್ಟು ಅಲಂಕಾರ<br>• Flower baseನಲ್ಲಿ ಹೂಗಳನ್ನಿಡುವುದು.<br>• ಮಾಲೆ ಕಟ್ಟುವುದು. |
| • ತನ್ನ ಸುತ್ತಮುತ್ತಲೂ ಇರುವುದೂ ಮನೆಯಲ್ಲಿ ಬೆಳೆಸುವುದೂ ಆದಂತಹ ಗಿಡಗಳು, ಹೂಗಳ ವಿಶೇಷತೆಗಳನ್ನು ಹೇಳುವುದು. | • ಸ್ವಂತ ಸಂಭಾಷಣೆ – ಬಾಯ್ದೆರೆ ಪ್ರಶ್ನೆಗಳಿಗೆ ಉತ್ತರ ಹೇಳುವುದು. | • ಮನೆಯಲ್ಲಿ ಬೆಳೆಸುವ ಗಿಡಗಳು, ಹೂಗಳ ಕುರಿತು ಹೇಳುವುದು.<br>• ಪರಿಸರದಲ್ಲಿ ನಡೆದಾಗ ಕಂಡಂತಹ ವಸ್ತು/ಗಿಡ/ಹೂಗಳ ಬಗ್ಗೆ ಹೆತ್ತವರು, ಅಧ್ಯಾಪಕರು, ಗೆಳೆಯರು, ಹಿರಿಯರಲ್ಲಿ ಕೇಳುವುದು, ಹೇಳುವುದು. |
| **ವೈಜ್ಞಾನಿಕ ವಿಕಾಸ**<br>• ಹೂಗಳು, ಹೂದೋಟ, ಚಿಟ್ಟೆಗಳು ಇತ್ಯಾದಿಗಳಿಗೆ ಸಂಬಂಧಿಸಿ ಹೆಚ್ಚಿನ ಪ್ರತ್ಯೇಕತೆಗಳನ್ನು ಹೇಳಿ, ಕೇಳಿ ತಿಳಿಯುವುದು, ಪ್ರಶ್ನೆಗಳನ್ನು ಕೇಳಿ ತಿಳಿಯುವುದು. | • ಬಯಲು ಪ್ರವಾಸದಲ್ಲಿ ನೋಡಿದ ಗಿಡ/ಹೂಗಳ ಕುರಿತು ಅಧ್ಯಾಪಿಕೆ ಕೇಳುವಾಗ ಹೇಳುವುದು.<br>• ತರಗತಿ ಅಲಂಕರಿಸುವುದು, ಶುಚೀಕರಣ, ಹೂದೋಟ ನಿರ್ಮಾಣ ಇತ್ಯಾದಿಗಳಲ್ಲಿ ಸೂಚನೆಗಳಿನುಸರಿಸಿ ಗುಂಪಾಗಿ ಭಾಗವಹಿಸುವುದು. | • ಹೂಗಳ ಸಾಮ್ಯ ವ್ಯತ್ಯಾಸ ನಿರೀಕ್ಷಿಸಿ ಹೇಳುವುದು.<br>• ಕ್ಲಾಸ್ ಅಲಂಕರಿಸುವುದು, ಶುಚೀಕರಣ ಕೆಲಸ, ಹೂದೋಟ ನಿರ್ಮಾಣಗಳಲ್ಲಿ ಗುಂಪಾಗಿ ಭಾಗವಹಿಸುವುದು. |
| • ಹೂಗಳನ್ನು ಹೋಲಿಸುವುದು. ಗಣಿತ ಭಾಷೆಯಲ್ಲಿ ಮಂಡಿಸಲು ಸಾಧ್ಯವಾಗುವುದು. | • ಬೇರೆ ಬೇರೆ ಗಾತ್ರದಲ್ಲಿರುವ ಚಿತ್ರಕ್ಕೆ ಬಣ್ಣ ಹಚ್ಚುವುದು.<br>• ಎಷ್ಟು ಹೂಗಳ ಹೆಸರು ತಿಳಿದಿದೆ? ಆಟ | • ಹೂಗಳನ್ನು ಗುರುತಿಸುವ ಆಟ<br>• ಎಷ್ಟು ಹೂಗಳ ಹೆಸರು ಗೊತ್ತಿದೆ? ಆಟ<br>• ಚಿತ್ರದಲ್ಲಿ ದೊಡ್ಡಗುಂಪು, ಸಣ್ಣ ಗುಂಪು, ಉರುಟು ಹಾಕಿ ಬಣ್ಣ ಹಚ್ಚುವುದು<br>• ಎಸಳುಗಳನ್ನು ಅಂಟಿಸುವುದು (ಪೇಪರ್ ಎಸಳು)<br>• ಹೂಗಳು – ಹೆಗ್ಗಳಿಕೆ ಹೇಳುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಪಂಚೇಂದ್ರಿಯಗಳನ್ನು ಉಪಯೋಗಿಸಿ ಗಿಡಗಳು, ಹೂಗಳು, ಚಿಟ್ಟೆಗಳು ಇತ್ಯಾದಿಗಳನ್ನು ನಿರೀಕ್ಷಿಸಿ ಬಾಯ್ದೆರೆಯಾಗಿ ಹೇಳುವುದು. | • ಮೂಸಿ ಹೇಳುವಾ<br>• ಪರಿಮಳ ಇರುವ ಮತ್ತು ಇಲ್ಲದ ಹೂಗಳನ್ನು ಗುರುತಿಸುವುದು.<br>• ಶುಚಿ ನೋಡುವಾ | • ಪರಿಮಳ ಇರುವ ಮತ್ತು ಇಲ್ಲದ ಹೂಗಳನ್ನು ವರ್ಗೀಕರಿಸುವುದು.<br>• ನಯವಾದ ಮತ್ತು ದೊರಗಾದ ವಸ್ತುಗಳನ್ನು ಗುರುತಿಸುವುದು (ವಿವಿಧ ತರದ ಎಲೆಗಳು, ಹೂಗಳು)<br>• ಪರಿಚಿತವಾದ ಆಕೃತಿಗಳನ್ನು ಹೇಳುವುದು.<br>• ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು.<br>• ಹೂಗಳು, ಹೂದೋಟ, ಚಿಟ್ಟೆ ಇತ್ಯಾದಿಗಳಿಗೆ ಸಂಬಂಧಿಸಿದ ಕಥೆಗಳನ್ನು ಹೇಳುವುದು. |
| • ಹೂಗಳನ್ನು/ಚಿತ್ರಗಳನ್ನು ನಿರೀಕ್ಷಿಸಿ ಗುಂಪಿಗೆ ಸೇರದುದನ್ನು ವರ್ಗೀಕರಿಸಿ ಹೇಳುವುದು. | • ಹೂಗಳ ಬಣ್ಣ ಹೇಳುವುದು. | • ಹೂಗಳನ್ನು ವರ್ಗೀಕರಿಸುವುದು (ಬಣ್ಣ ಪರಿಮಳ) |
| • ವ್ಯತ್ಯಸ್ಥ ಸಂದರ್ಭಗಳ ಸ್ವಯಂ ನಿರೀಕ್ಷಣೆಗಳು, ಅಭಿಪ್ರಾಯಗಳು, ಸೂಚನೆಗಳು ಇತ್ಯಾದಿಗಳನ್ನು ಗೆಳೆಯರೊಡನೆ, ಹಿರಿಯರೊಡನೆ ಸಾರ್ವಜನಿಕ ಸಭೆಗಳಲ್ಲಿ ಹೇಳಲು ಸಾಧ್ಯವಾಗುವುದು | • ಸೂಚನೆಗಳಿಗನುಸರಿಸಿ ತರಗತಿ ಕೋಣೆಯನ್ನು ಅಲಂಕರಿಸಲು, ಹೂದೋಟ ನಿರ್ಮಿಸುವುದು, ಗುಂಪಾಗಿ ಮಾಡುವ ಇತರ ಚಟುವಟಿಕೆಗಳಲ್ಲಿ ಭಾಗವಹಿಸುವುದು. | • ಮೆಟ್ಟಲಿಗೆ ಹೂ ಹಾಕುವುದು.<br>- ಹೇಗೆ ತಯಾರಿಸಬಹುದು? (ಅಭಿಪ್ರಾಯ)<br>- ರಂಗೋಲಿಯಲ್ಲಿ ಹೂಗಳು (ಎಲ್ಲಿ? ಹೇಗೆ? ಹಾಕಬೇಕು? ಸೂಚನೆಗಳು)<br>- ಹೂ ರಂಗೋಲಿ ಇಷ್ಟವಾಯಿತೇ? |
| • ಹೂಗಳಿಗೆ ಸಂಬಂಧಿಸಿದ ವಿವಿಧ ಕಲಾರೂಪಗಳನ್ನು (ನೃತ್ಯ, ಪದ್ಯ, ಅಭಿನಯ ಇತ್ಯಾದಿ)<br>• ನಿರೀಕ್ಷಣೆ ಮಾಡಲೂ, ಆಸ್ವಾದಿಸಲೂ ಸಾಧ್ಯವಾಗುವುದು. | • ಹೂದೋಟ ಸಂರಕ್ಷಣೆ<br>• ಹಾಡುಗಳನ್ನು ಆಲಿಸುವುದು, ಹಾಡುವುದು<br>• ಕಥೆ ಆಲಿಸುವುದು, ಹೇಳುವುದು<br>• ಚಿತ್ರ ರಚನೆ, ಬಣ್ಣ ಹಚ್ಚುವುದು | • ರೋಲ್‌ಪ್ಲೇ – ಹೂದೋಟ ಸಂರಕ್ಷಣೆ<br>• ಕಥೆ ಆಲಿಸುವುದು, ಹೇಳುವುದು, ಅಭಿನಯಿಸುವುದು<br>• ಚಿತ್ರಗಳಿಗೆ ಬಣ್ಣ ಹಚ್ಚುವುದು<br>• ಚಿತ್ರ ರಚನೆ, ಅಂಟಿಸುವುದು |
| • ಚಿತ್ರ, ಎಲೆಗಳು, ಗರಿಗಳು ಇತ್ಯಾದಿಗಳನ್ನು ಸಂಗ್ರಹಿಸಿ, ಕ್ರಮೀಕರಿಸಿ, ಜೋಪಾನವಾಗಿಡುವುದು. | • ಬಯಲು ಪ್ರವಾಸ<br>• ಎಲೆ, ಗರಿಗಳನ್ನು ಅಂಟಿಸುವುದು. | • ಬಯಲು ಪ್ರವಾಸ<br>• ಚಿತ್ರ ಸಂಗ್ರಹಿಸುವುದು, ಅಂಟಿಸುವುದು<br>• ಎಲೆಗಳನ್ನೂ, ಗರಿಗಳನ್ನೂ ಅಂಟಿಸುವುದು. |

| ವಿಷಯ 10 : ಓಣಂ, ರಂಝಾನ್ | | ಕಾಲಾವಧಿ : ಸೆಪ್ಟೆಂಬರ್ |
|---|---|---|
| (3+) | | (4+) |
| **ಆಶಯಗಳು**<br>1. ಓಣಂ, ಪೆರ್ನಾಳ್ ಇತ್ಯಾದಿ ಹಲವಾರು ಆಚರಣೆಗಳಿವೆ. ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳಿವೆ.<br>2. ಆಚರಣೆಗಳ ಅಂಗವಾಗಿ ತರಗತಿ ಮತ್ತು ಶಾಲಾ ಪರಿಸರವನ್ನು ಅಲಂಕರಿಸುವುದು. | | 1. ಓಣಂ, ಪೆರ್ನಾಳ್ ಇತ್ಯಾದಿ ಹಲವಾರು ಆಚರಣೆಗಳಿವೆ. ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳಿವೆ.<br>2. ಆಚರಣೆಗಳ ಅಂಗವಾಗಿ ತರಗತಿ ಮತ್ತು ಶಾಲಾ ಪರಿಸರವನ್ನು ಅಲಂಕರಿಸುವುದು. |
| **ಸಾಮರ್ಥ್ಯಗಳು** | **ಕಲಿಕಾನುಭವಗಳು (3+)** | **ಕಲಿಕಾನುಭವಗಳು (4+)** |
| ಶರೀರದ ಹೆಚ್ಚಿನ ಪೇಶಿಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾಗಿ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. | • **ವೈಯಕ್ತಿಕವಾಗಿ ಆಟಗಳಲ್ಲಿ ಭಾಗವಹಿಸುವುದು**<br>• ಉಯ್ಯಾಲೆಯಾಟ<br>• ಚೆಂಡಾಟ<br>• ಯೋಜನಾಬದ್ಧ ಆಟಗಳು<br>• ತಾಳಾತ್ಮಕ ಚಲನೆಗಳು | • **ಸ್ವತಂತ್ರವಾಗಿ ಆಟಗಳಲ್ಲಿ ಭಾಗವಹಿಸುವುದು**<br>• ಉಯ್ಯಾಲೆ ಆಟ<br>• ಚೆಂಡಾಟ<br>• ಯೋಜನಾಬದ್ಧ ಆಟಗಳು<br>• ತಾಳಾತ್ಮಕ ಚಲನೆಗಳು |
| ಆಚರಣೆಗಳಿಗೆ ಸಂಬಂಧಿಸಿದ ವ್ಯತ್ಯಸ್ಥ ಸಂದರ್ಭಗಳಲ್ಲಿ ಸ್ವಯಂ ನಿರೀಕ್ಷಣೆ, ಅಭಿಪ್ರಾಯ ಇತ್ಯಾದಿ ಗೆಳೆಯರಲ್ಲೂ, ಹಿರಿಯರಲ್ಲೂ ಮತ್ತು ಸಾರ್ವಜನಿಕರಲ್ಲಿಯೂ ಹೇಳಲು ಸಾಧ್ಯವಾಗುವುದು. | • ತರಗತಿಯನ್ನು ಅಲಂಕರಿಸುವುದು, ಶುಚೀಕರಣ ಚಟುವಟಿಕೆ, ಹೂದೋಟ ನಿರ್ಮಾಣ ಇತ್ಯಾದಿಗಳನ್ನು ಗುಂಪಾಗಿ ಮಾಡುವುದು. | • ಕ್ಲಾಸ್‌ರೂಂ ಅಲಂಕರಿಸುವುದು, ಶುಚೀಕರಣ ಚಟುವಟಿಕೆ, ಹೂದೋಟ ನಿರ್ಮಾಣ, ಇತ್ಯಾದಿ ಗುಂಪಾಗಿ ಮಾಡುವ ಇತರ ಚಟುವಟಿಕೆಗಳಲ್ಲಿ ತನ್ನ ಅಭಿಪ್ರಾಯ, ಸೂಚನೆಗಳನ್ನು ಹೇಳುವುದು.<br>ಉದಾ : ಹೂವಿನ ರಂಗೋಲಿ ಹಾಕುವುದು, ರಂಜಾನ್ ಆಚರಣೆಗಳಿಗಾಗಿ ಹೇಗೆ ತಯಾರಾಗುವುದು? ಏನೆಲ್ಲಾ ಮಾಡಬೇಕು (ಅಭಿಪ್ರಾಯಗಳು)<br>ರಂಗೋಲಿಯಲ್ಲಿ ಹೂಗಳು ಎಲ್ಲಿ? ಹೇಗೆ ಇರಿಸಬೇಕು? ಹೂರಂಗೋಲಿ ಇಷ್ಟವಾಯಿತೇ? ಯಾಕೆ? (ನಿಗಮನ) |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಆಚರಣೆಗಳಿಗೆ ಸಂಬಂಧಿಸಿ ಆಟಗಳಲ್ಲಿ ನಿರ್ವಾಣ ಚಟುವಟಿಕೆಗಳಲ್ಲಿ ಮತ್ತು ಇತರ ಚಟುವಟಿಕೆಗಳಲ್ಲಿ, ಒಂಟಿಯಾಗಿಯೂ ಗುಂಪಾಗಿಯೂ ಹಿರಿಯರೊಡನೆ ಸೇರುವುದು, ಸಹಕಾರ ಮನೋಭಾವದೊಂದಿಗೆ ಜವಾಬ್ದಾರಿ ವಹಿಸಿಕೊಂಡು ಕಾರ್ಯಾಚರಿಸಲು ಸಾಧ್ಯವಾಗುವುದು. | • ಗುಂಪಾದ ಚಟುವಟಿಕೆಗಳು<br>• ಸಮೂಹ ಗೀತೆ | • ಗುಂಪು ಚಟುವಟಿಕೆಗಳು<br>• ಹುಟ್ಟುಹಬ್ಬದ ಆಚರಣೆ<br>• ತರಗತಿ ಕೋಣೆ ಶುಚಿಗೊಳಿಸುವುದು<br>• ಹಿರಿಯರನ್ನು ಗೌರವಿಸುವುದು, ಸಹಾಯ ಮಾಡುವುದು<br>• ಆಟಗಳಲ್ಲಿ ಭಾಗವಹಿಸುವುದು |
| • ಉತ್ಸವಗಳು/ಆಚರಣೆಗಳು (ಓಣಂ, ಕ್ರಿಸ್‌ಮಸ್, ರಂಝಾನ್)ಮುಂತಾದ ಸಂದರ್ಭದಲ್ಲಿ ತಯಾರಿಸುವ ಆಹಾರಗಳು (ಔತಣ, ಬಿರಿಯಾಣಿ, ಕೇಕ್) ಪರಿಚಯಿಸಲು ಮತ್ತು ಅವುಗಳನ್ನು ಹಂಚಿಕೊಳ್ಳಲು ಸಾಧ್ಯವಾಗುವುದು. | • ವಿಶೇಷ ಆಹಾರಗಳನ್ನು ಹೇಳುವುದು.<br>• ಕಥೆಗಳನ್ನು ಆಲಿಸುವುದು<br>• ಚಿತ್ರ ಓದು<br>• ಹರಡುವುದು | • ವಿಶೇಷ ಆಹಾರ ಹೇಳುವುದು<br>• ಅನುಭವಗಳನ್ನು ಹೇಳುವುದು<br>• ಆಹಾರ ಹಂಚುವುದು |
| • ಓಣಂ, ರಂಜಾನ್ ಎಂಬಿವುಗಳಿಗೆ ಸಂಬಂಧಿಸಿದ ಹಾಡುಗಳನ್ನು (ಗುಂಪು ಹಾಡು, ಬಾಯಿತಾಳಗಳು, ಪ್ರಶ್ನೋತ್ತರ ಹಾಡುಗಳು, ಸಂಭಾಷಣೆಗಳು ಮೊದಲಾದವುಗಳು)ಶ್ರದ್ಧೆಯಿಂದ ಆಲಿಸಲೂ, ಆಸ್ವಾದಿಸಲು ಸಾಧ್ಯವಾಗುವುದು. | • ಕಥನ ಕವನಗಳು, ಸಂಭಾಷಣೆಗಳು (ಆಡಿಯೋ) ಆಲಿಸುವುದು. | • ಕಥನ ಕವನಗಳು, ಸಂಭಾಷಣೆಗಳು, ಪ್ರಶ್ನೋತ್ತರ, ಗುಂಪುಹಾಡು, ಬಾಯಿತಾಳಗಳು ಎಂಬಿವುಗಳನ್ನು ಆಲಿಸುವುದು (ಆಡಿಯೋ) |
|  |  |  |

| ವಿಷಯ : 11 – ತರಕಾರಿಗಳು | ಕಾಲಾವಧಿ – ಸೆಪ್ಟೆಂಬರ್ |
|---|---|
| **(3+)** | **(4+)** |
| **ಆಶಯಗಳು**<br>1. ವಿವಿಧ ರೀತಿಯ ತರಕಾರಿಗಳಿವೆ.<br>2. ಬಣ್ಣದಲ್ಲೂ ಗಾತ್ರದಲ್ಲೂ ಅವುಗಳು ವ್ಯತ್ಯಸ್ಥವಾಗಿವೆ.<br>3. ಬೇಯಿಸಿಯೂ, ಬೇಯಿಸದೆಯೂ ತರಕಾರಿಗಳನ್ನು ತಿನ್ನುವರು. | 1. ವಿವಿಧ ರೀತಿಯ ತರಕಾರಿಗಳನ್ನು ಕೃಷಿ ಮಾಡುತ್ತಾರೆ.<br>2. ಮನೆಯಲ್ಲಿ ತರಕಾರಿಗಳನ್ನು ನೆಟ್ಟು ಬೆಳೆಸುತ್ತಾರೆ.<br>3. ಬೇಯಿಸಿಯೂ, ಬೇಯಿಸದೆಯೂ ತರಕಾರಿಗಳನ್ನು ತಿನ್ನುತ್ತಾರೆ.<br>4. ಗಾತ್ರ, ಆಕಾರ, ಬಣ್ಣದಲ್ಲೂ ವ್ಯತ್ಯಾಸವಿದೆ.<br>5. ಬಳ್ಳಿಗಳಲ್ಲೂ ಗಿಡಗಳಲ್ಲೂ ತರಕಾರಿಗಳು ಬೆಳೆಯುತ್ತದೆ.<br>6. ಆಹಾರದಲ್ಲಿ ತರಕಾರಿಗಳನ್ನು ಸೇರಿಸಿಕೊಳ್ಳಬೇಕು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಸ್ವಂತವಾಗಿಯೂ, ನಿಯಂತ್ರಿತವಾಗಿಯೂ ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. | • ಹಣ್ಣು, ತರಕಾರಿ ಆಟ<br>• ಕೆರೆದಡ ಆಟ (ಹಣ್ಣು ಒಳಗೆ ತರಕಾರಿ ಹೊರಗೆ) | • ಹಣ್ಣು ತರಕಾರಿ ಆಟ<br>• ಕೆರೆದಡ ಆಟ (ಹಣ್ಣು ಒಳಗೆ, ತರಕಾರಿ ಹೊರಗೆ) |
| • ಸೂಕ್ಷ್ಮಪೇಶಿಗಳನ್ನು ಏಕೀಕರಿಸಿಕೊಂಡಿರುವ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. | • ಸಸ್ಯಗಳು, ತರಕಾರಿಗಳು ಇತ್ಯಾದಿಗಳ ಚಿತ್ರಗಳಿಗೆ ಕ್ರಯೋನ್‌ನಿಂದ ಬಣ್ಣ ಹಚ್ಚುವುದು.<br>• ಕಟೌಟ್ ಚಿತ್ರ ರಚಿಸಿ ಬಣ್ಣ ಹಚ್ಚುವುದು.<br>• ತರಕಾರಿಗಳನ್ನು ಅಂಟಿಸುವುದು. | • ಹಿಡಿಸೂಡಿ ಕಡ್ಡಿ, ಕ್ರಯೋನ್, ಚೋಕ್, ಪೆನ್ಸಿಲ್ ಇತ್ಯಾದಿ ಬಳಸಿ ಬಣ್ಣ ಹಚ್ಚುವುದು.<br>• ಕಟೌಟ್ ಚಿತ್ರ ರಚಿಸಿ ಸೂಕ್ತವಾದ ಬಣ್ಣ ಹಚ್ಚುವುದು.<br>• ತರಕಾರಿಗಳ ಚಿತ್ರಗಳನ್ನು ಕತ್ತರಿಯಿಂದ ಕತ್ತರಿಸಿ ಅಂಟಿಸುವುದು.<br>• ಬೊಂಬೆ ನಿರ್ಮಾಣ (Finger puppet) |
| • ಅಡುಗೆ ಉಪಕರಣಗಳನ್ನುಪಯೋಗಿಸಿ ಚಟುವಟಿಕೆ ಮಾಡುವುದು. | • ತರಕಾರಿಗಳನ್ನು ಮಕ್ಕಳು ತುಂಡು ಮಾಡುವುದು. ಅಧ್ಯಾಪಿಕೆಯ ಸಹಾಯ | • ಅಧ್ಯಾಪಿಕೆಯ ಸಹಾಯದೊಂದಿಗೆ ಕತ್ತಿಯಿಂದ ತರಕಾರಿ ತುಂಡರಿಸುವುದು, ಸಲಾಡ್ ಹಂಚುವುದು<br>• ಅಡುಗೆ ಉಪಕರಣಗಳನ್ನುಪಯೋಗಿಸಿ ಚಟುವಟಿಕೆ ಮಾಡುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ನೋಡಿಯೂ, ಕೇಳಿಯೂ ತಿಳಿದ ವಿಷಯಗಳನ್ನು ಆಶಯಕ್ಕೆ ಕುಂದು ಬಾರದಂತೆ ಇತರರೊಂದಿಗೆ ಹಂಚುವುದು. | • ಮನೆಯಲ್ಲಿರುವ ತರಕಾರಿಗಳ ಕುರಿತು ಹೇಳುವುದು.<br>• ಕಂಡುಹಿಡಿಯುವಾ, ಹೇಳುವಾ ಆಟ (ಬಣ್ಣ, ಗಾತ್ರ, ರುಚಿ).<br>• ತರಕಾರಿಗಳಿಗೆ ಸಂಬಂಧಿಸಿದ ಚಿತ್ರ ಓದು.<br>• ಕಥೆಗಳನ್ನು ಆಲಿಸುವುದು, ಹೇಳುವುದು.<br>• ಹಾಡುವುದು.<br>• ತರಕಾರಿಗಳ ಹೆಗ್ಗಳಿಕೆ ಹೇಳುವುದು. | • ಮನೆಯಲ್ಲಿ ಬೆಳೆಸಿದ, ಉಪಯೋಗಿಸುವ ತರಕಾರಿಗಳ ಬಗ್ಗೆ ಹೇಳುವುದು.<br>• ಕಂಡುಹಿಡಿಯುವಾ ಹೇಳುವಾ ಆಟ (ಆಕೃತಿ, ಬಣ್ಣ, ರುಚಿ, ಪರಿಮಳ, ಗಿಡ).<br>• ಚಿತ್ರ ಓದು.<br>• ಕಥೆಗಳನ್ನು ಆಲಿಸುವುದು – ನಿರ್ಮಿಸುವಾ – ಹೇಳುವಾ<br>• ಹಾಡುಗಳನ್ನು ಆಲಿಸುವುದು – ರಚಿಸುವುದು.<br>• ಬೊಂಬೆಯಾಟ<br>• ಹೆಗ್ಗಳಿಕೆ ಹೇಳುವುದು (ವಿಶೇಷತೆ, ಪ್ರಯೋಜನ). |
| • ಕಂಡುಹಿಡಿಯುವ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮತ್ತು ನಿಗಮನ ರೂಪಿಸುವುದು ಹಾಗೂ ಮಂಡಿಸಲು ಸಾಧ್ಯವಾಗುವುದು. | • ತರಕಾರಿಗಳ ಬಗ್ಗೆ ಹೇಳುವುದು. | • ಮುಳುಗುವುದೇ? ತೇಲುವುದೇ? – ಸರಳ ಪ್ರಯೋಗ<br>• ತರಕಾರಿಗಳ ವಿಶೇಷತೆ ಹೇಳುವುದು. |
| • ವಸ್ತುಗಳನ್ನು ಹೋಲಿಸಿ ಗಣಿತ ಭಾಷೆಯಲ್ಲಿ ಹೇಳುವರು. | • ಗುಂಪಿನಿಂದ ಸಣ್ಣದು ದೊಡ್ಡದು ಕಂಡು ಹಿಡಿದು ಹೇಳುವುದು.<br>• ತರಕಾರಿಗಳಿಗೆ ದೊಡ್ಡದು ಮತ್ತು ಸಣ್ಣದಕ್ಕೆ ಬೇರೆ ಬೇರೆ ಬಣ್ಣ ಹಚ್ಚುವುದು.<br>• ಚಿತ್ರ ನೋಡಿಯೂ, ತರಕಾರಿ ನೋಡಿಯೂ ಎಣಿಸಿ ಹೇಳುವುದು. | • ದೊಡ್ಡ ಗುಂಪು, ಸಣ್ಣ ಗುಂಪು ಎಂದು ವರ್ಗೀಕರಿಸುವುದು.<br>• ದೊಡ್ಡದಕ್ಕೂ, ಸಣ್ಣದಕ್ಕೂ ಉರುಟು ಹಾಕುವುದು.<br>• 1 ರಿಂದ 5 ರವರೆಗೆ ಎಣಿಸಿ ಹೇಳುವುದು.<br>• ಗಣಿತ ಪದ್ಯಗಳನ್ನು ಹಾಡುವುದು. ಪದ್ಯವನ್ನು ಆಧರಿಸಿ ಎಷ್ಟೆಂದು ಹೇಳುವುದು. |







| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ನಮೂನೆಗಳನ್ನು ಕಂಡುಹಿಡಿದು ಅವುಗಳನ್ನು ಸುಂದರವಾಗಿ ಕ್ರಮೀಕರಿಸಲು ಸಾಧ್ಯವಾಗುವುದು. | • ತರಕಾರಿಗಳಿಂದ ವಿವಿಧ ನಮೂನೆಗಳನ್ನು ರಚಿಸುವುದು. | • ತರಕಾರಿಗಳಿಂದ ವಿವಿಧ ರೂಪಗಳನ್ನು ನಿರ್ಮಿಸಿ ಅದರ ನಮೂನೆ ಕಂಡುಹಿಡಿದು ಹೇಳುವುದು. |
| • ದ್ವಿಮಾನ, ತ್ರಿಮಾನ ಮಾದರಿ ವಸ್ತುಗಳಿಂದ ಆಶಯಗಳನ್ನು ಆವಿಷ್ಕರಿಸಲು ಸಾಧ್ಯವಾಗುವುದು. | • ಆವೆಮಣ್ಣು, ಮೈದಾ ಇತ್ಯಾದಿಗಳಿಂದ ತರಕಾರಿಯ ಆಕೃತಿಗಳನ್ನು ನಿರ್ಮಿಸುವುದು.<br>• ಕಾರ್ಡಿನಲ್ಲಿ ತರಕಾರಿಯ ಚಿತ್ರದಲ್ಲಿ ಗಮ್ ಹಚ್ಚಿ Sand ಕೊಲಾಷ್ ಮಾಡುವುದು. | • ತರಕಾರಿಗಳ ಕೊಲಾಷ್ ನಿರ್ಮಾಣ<br>• ಆವೆಮಣ್ಣು, ಪ್ಲಾಸ್ಟರ್ ಆಫ್ ಪ್ಯಾರೀಸ್, ಮೈದಾ ಉಪಯೋಗಿಸಿ ತರಕಾರಿಗಳ ಮೊಡೆಲ್ ನಿರ್ಮಾಣ.<br>• ಇತರ ವಸ್ತುಗಳಿಂದ ತರಕಾರಿಯ ರೂಪಗಳನ್ನು ತಯಾರಿಸುವುದು (ಮೊಟ್ಟೆ, ಚಿಪ್ಪು)<br>• Sand ಕೊಲಾಷ್ ಮಾಡುವುದು<br>• ವೆಜಿಟೇಬಲ್ ಪ್ರಿಂಟಿಂಗ್ (ಬಟ್ಟೆ, ಕಾಗದ)) |
| • ಲಘು ಆಶಯಗಳನ್ನು ವಿವಿಧ ಕಲಾ ರೂಪಗಳಲ್ಲಿ ಪ್ರಕಟಿಸಲು ಸಾಧ್ಯವಾಗುವುದು. | • ಬೊಂಬೆ ನಾಟಕ ನೋಡುವುದು (ತರಕಾರಿ ತಿನ್ನಬೇಕಾದ ಅಗತ್ಯ)<br>• ಅಭಿನಯಗೀತೆ<br>• ತರಕಾರಿ ಸಂತೆ (ರೋಲ್‌ಪ್ಲೇ)<br>• ಆಟಗಳು | • ಬೊಂಬೆನಾಟಕ – ನೋಡುವುದು, ಪ್ರದರ್ಶಿಸುವುದು (ತರಕಾರಿ ತಿನ್ನುವುದರ ಅಗತ್ಯದ ಬಗ್ಗೆ)<br>• ಅಭಿನಯಗೀತೆ<br>• ತರಕಾರಿ ಸಂತೆ – ರೋಲ್‌ಪ್ಲೇ |
| • ನಿರ್ಮಾಣ ಚಟುವಟಿಕೆಗಳಲ್ಲಿ ಗುಂಪಾಗಿಯೂ, ಹಿರಿಯರೊಂದಿಗೆ ಸೇರಿಯೂ ಕಾರ್ಯನಿರ್ವಹಿಸಲು ಸಾಧ್ಯವಾಗುವುದು. | • ಅಧ್ಯಾಪಿಕೆಯ ಸಹಾಯದೊಂದಿಗೆ ಸಲಾಡ್ ವಿತರಣೆ<br>• ಲಿಂಬೆ ಶರಬತ್ತು ಮಾಡುವುದು, ವಿತರಣೆ | • ತರಕಾರಿ ಕೃಷಿ ಮಾಡುವುದು<br>• ಸಲಾಡ್ ತಯಾರಿ – ಹಂಚುವುದು |

| ವಿಷಯ : 12 – ಗಾಂಧೀಜಯಂತಿ | ಕಾಲಾವಧಿ : ಅಕ್ಟೋಬರ್ |
|---|---|
| **(3+)** | **(4+)** |
| **ಆಶಯಗಳು**<br>1. ಗಾಂಧೀಜಯಂತಿ, ಮಕ್ಕಳ ದಿನಾಚರಣೆ ಮೊದಲಾದವುಗಳನ್ನು ಶಾಲೆಯಲ್ಲಿ ಆಚರಣೆಯಾಗಿ ನಡೆಸುತ್ತೇವೆ.<br>2. ಆಚರಣೆಯ ಭಾಗವಾಗಿ ಮನೆ ಪರಿಸರ, ಶಾಲೆಯನ್ನು ಅಲಂಕರಿಸುತ್ತೇವೆ. | 1. ಗಾಂಧೀಜಯಂತಿ, ಮಕ್ಕಳ ದಿನಾಚರಣೆ ಮೊದಲಾದ ದಿನಾಚರಣೆಗಳನ್ನು ಶಾಲೆಯಲ್ಲಿ ಆಚರಣೆಯಾಗಿ ನಡೆಸುತ್ತೇವೆ.<br>2. ಆಚರಣೆಯ ಭಾಗವಾಗಿ ಮನೆ ಪರಿಸರ, ಶಾಲೆಯನ್ನು ಅಲಂಕರಿಸುತ್ತೇವೆ. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಗಾಂಧೀಜಯಂತಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಿ ಬಣ್ಣ ಕೊಡುವುದು. | • ಚಿತ್ರಗಳಿಗೆ ಕ್ರಯೋನ್, ಪೆನ್ಸಿಲ್ ಉಪಯೋಗಿಸಿ ಬಣ್ಣ ಹಚ್ಚುವುದು. | • ಚಿತ್ರಗಳಿಗೆ ಕ್ರಯೋನ್ ಪೆನ್ಸಿಲ್ ಉಪಯೋಗಿಸಿ ಬಣ್ಣ ಹಚ್ಚುವುದು. |
| • ಗಾಂಧೀಜಯಂತಿಗೆ ಸಂಬಂಧಿಸಿದ ಕಥೆಗಳನ್ನು / ಪದ್ಯಗಳನ್ನು ಆಲಿಸಲು, ಹೇಳಲು ಸಾಧ್ಯವಾಗುವುದು. | • ಗಾಂಧೀಜಯಂತಿಗೆ ಸಂಬಂಧಿಸಿದ ಕಥೆಗಳು ಕೇಳುವುದು, ಪದ್ಯಗಳನ್ನು ಹಾಡುವುದು. | • ಗಾಂಧೀಜಯಂತಿಗೆ ಸಂಬಂಧಿಸಿದ ಕಥೆಗಳನ್ನು ಕೇಳುವುದು ಪದ್ಯಗಳನ್ನು ಹಾಡುವುದು. |
| • ಕಾಗದ, ಬಟ್ಟೆ ಮೊದಲಾದವುಗಳನ್ನು ತುಂಡು ಮಾಡಲು, ಮಡಚಲು, ಅಂಟಿಸಲು ಸಾಧ್ಯವಾಗುವುದು. | • ತೋರಣಗಳನ್ನು ತಯಾರಿಸುವುದು, ಅವುಗಳನ್ನು ಉಪಯೋಗಿಸಿ ಅಲಂಕರಿಸುವುದು. | • ತೋರಣಗಳನ್ನು ತಯಾರಿಸುವುದು<br>• ತರಗತಿ ಕೋಣೆ ಅಲಂಕರಿಸುವುದು<br>• ಬಟ್ಟೆಗಳನ್ನು ತಯಾರಿಸಿ ಉಪಯೋಗಿಸುವುದು. |

| ವಿಷಯ : 13 – ಜೀವಿಗಳು, ಸಾಕುಪ್ರಾಣಿಗಳು, ಸಾಕುಪಕ್ಷಿಗಳು | | ಕಾಲಾವಧಿ : ಅಕ್ಟೋಬರ್ |
|---|---|---|
| (3+) | | (4+) |
| **ಆಶಯಗಳು**<br>1. ದನ, ಆಡು, ಎತ್ತು, ನಾಯಿ, ಬೆಕ್ಕು, ಮೊಲ ಮೊದಲಾದವುಗಳನ್ನು ಮನೆಯಲ್ಲಿ ಸಾಕುತ್ತೇವೆ.<br>2. ಸಾಕು ಪ್ರಾಣಿಗಳಿಂದ ಉಪಯೋಗಗಳಿವೆ (ಹಾಲು ಕೊಡುತ್ತದೆ, ಮನೆ ಕಾಯುವುದು).<br>3. ಕೆಲವು ಹಕ್ಕಿಗಳನ್ನು ಮನೆಯಲ್ಲಿ ಸಾಕುತ್ತೇವೆ.<br>4. ಕೆಲವು ಹಕ್ಕಿಗಳಿಂದ ಪ್ರಯೋಜನಗಳಿವೆ (ಕೋಳಿ, ಬಾತುಕೋಳಿ) | | 1. ದನ, ಆಡು, ನಾಯಿ, ಬೆಕ್ಕು, ಮೊಲ ಮೊದಲಾದವುಗಳನ್ನು ಮನೆಯಲ್ಲಿ ಸಾಕುತ್ತೇವೆ.<br>2. ಸಾಕು ಪ್ರಾಣಿಗಳಿಂದ ಉಪಯೋಗಗಳಿವೆ (ಹಾಲು ಕೊಡುತ್ತದೆ, ಮನೆ ಕಾಯುತ್ತದೆ)<br>3. ಕೆಲವು ಹಕ್ಕಿಗಳನ್ನು ಮನೆಯಲ್ಲಿ ಸಾಕುತ್ತೇವೆ.<br>4. ಕೆಲವು ಹಕ್ಕಿಗಳಿಂದ ಪ್ರಯೋಜನಗಳಿವೆ (ಕೋಳಿ, ಬಾತುಕೋಳಿ)<br>5. ಸಾಕು ಪ್ರಾಣಿಗಳಿಗೆ ಪರಿಪಾಲನೆ ಅಗತ್ಯ. |
| **ಸಾಮರ್ಥ್ಯಗಳು** | **ಕಲಿಕೆಯ ಅನುಭವಗಳು (3+)** | **ಕಲಿಕೆಯ ಅನುಭವಗಳು (4+)** |
| • ಸಂದರ್ಭಗಳಿಗನುಸರಿಸಿ ತೆವಳಿ ಬಾಗಿ, ವಾಲಿಕೊಂಡು, ಮೊಣಕಾಲೂರಿ ನಡೆದೂ ಹಿಗ್ಗಿಸಿ, ಕುಗ್ಗಿಸಿ ದೇಹವನ್ನು ಉಪಯೋಗಿಸಲು ಸಾಧ್ಯವಾಗುವುದು. | • ಪಕ್ಷಿ ಮತ್ತು ಪ್ರಾಣಿಗಳ ಚಲನೆಗಳು(ಕಪ್ಪೆ ಜಿಗಿತ, ಮೊಲ, ಆನೆ, ಆಡು, ಚಿಟ್ಟೆ)<br>• ಆಟಗಳು, ಕಥೆಗಳು, ಪದ್ಯಗಳು | • ಪಕ್ಷಿ ಮತ್ತು ಪ್ರಾಣಿಗಳ ಚಲನೆಗಳು (ಕಪ್ಪೆ ಜಿಗಿತ, ಮೊಲ, ಆನೆ, ಚಿಟ್ಟೆ)<br>• ಆಟಗಳು, ಕಥೆಗಳು, ಪದ್ಯಗಳು<br>• ಮೈಮಿಂಗ್<br>• ಡೆಸ್ಕ್, ಮೇಜು, ಕುರ್ಚಿ ಮೊದಲಾದವುಗಳ ಅಡಿಯಲ್ಲಿ ದಾಟಲು. |
| • ಶರೀರದ ಸಣ್ಣ ಪೇಶಿಗಳನ್ನು ಉಪಯೋಗಿಸಿಕೊಂಡು ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. | • ಜೀವಿಗಳ ಚಿತ್ರಗಳಿಗೆ ಕ್ರಯೋನ್ ಉಪಯೋಗಿಸಿ ಬಣ್ಣ ಹಚ್ಚುವುದು | • ಜೀವಿಗಳ ಚಿತ್ರಗಳಿಗೆ ಕ್ರಯೋನ್ ಉಪಯೋಗಿಸಿ ಬಣ್ಣ ಹಚ್ಚುವುದು<br>• ತೆಂಗಿನ ಮುತ್ತು (ತೆಂಗಿನಕಾಯಿಯನ್ನು ಗೊನೆಯಲ್ಲಿ ಹಿಡಿದಿಡುವ ಭಾಗ)<br>• ಬ್ರಷ್‌ನ್ನು ಬಣ್ಣದಲ್ಲಿ ಮುಳುಗಿಸಿ, ಇಷ್ಟಬಂದಂತೆ ಬಣ್ಣ ಹಚ್ಚುವುದು.<br>• ವಸ್ತು ಒದು, ಚಿತ್ರ ಒದು |

| ಸಾಮರ್ಥ್ಯಗಳು | ಕಲಿಕೆಯ ಅನುಭವಗಳು (3+) | ಕಲಿಕೆಯ ಅನುಭವಗಳು (4+) |
|---|---|---|
| • ಸುತ್ತಮುತ್ತಲು ಇರುವ ವಸ್ತುಗಳು, ಘಟನೆಗಳು ಅನುಭವಗಳು, ಕಥೆಗಳು ಮೊದಲಾದವುಗಳನ್ನು ಗ್ರಹಿಸಿ ಕಾಣಲು, ಆಲಿಸಲು, ಸಾಧ್ಯವಾಗುವುದು. | • ತಿಳಿಯುವ ಆಟ (ಪಕ್ಷಿಗಳು, ವೃುಗಗಳು, ವಾಹನಗಳು)<br>• ಅಭಿನಯ ಗೀತೆ ಗಮನಿಸುವುದು<br>• ಹಾಡು ಆಲಿಸುವುದು (ICT)<br>• ಕಥೆ ಆಲಿಸುವುದು (ICT)<br>• ಕೊಂಬಿನ ಆಟ | • ಶಬ್ದಾನುಕರಣೆ ಆಟಗಳು (ಪಕ್ಷಿಗಳು)<br>• ಹಾಡು, ಕಥೆ, ನಾಟಕ ಆಲಿಸುವುದು (ICT)<br>• ಕೊಂಬಿನ ಆಟ |
| • ಭಾವ ಪೂರ್ಣವಾಗಿ ಮೃಗ, ಪಕ್ಷಿಗಳು ಎಂಬಿವುಗಳು ಸಂಬಂಧಿಸಿದ ಕಥೆ, ಹಾಡು, ಘಟನೆಗಳು ಇತ್ಯಾದಿಗಳನ್ನು ಮಂಡಿಸಲು ಸಾಧ್ಯವಾಗುವುದು. (ಸ್ವರಭಾರ, ಹಾವಭಾವ, ಅಭಿನಯ ತಾಳ, ಚಲನೆ) | • ಅಭಿನಯಗೀತೆ ಹಾಡುವುದು.<br>• ಕಥೆ ಕೇಳುವುದು<br>• ಚಿತ್ರ ನಿರೀಕ್ಷಿಸಿ ಹೇಳುವುದು.<br>• Sandtrayಯ ವ್ಯವಸ್ಥೆಯನ್ನು ನೋಡಿ ಹೇಳುವುದು. | • ಆಟದ ರೀತಿ ಮತ್ತು ಪ್ರಕ್ರಿಯೆಯನ್ನು ಹೇಳುವುದು.<br>• ಕಥೆಯ ಪದ್ಯಗಳನ್ನು ಕ್ರಮೀಕರಿಸಿ ಹೇಳುವುದು.<br>• ಘಟನೆಗಳ ವಿವರಣೆ ಹೇಳುವುದು.<br>• Big Picture ನೋಡಿ ಹೇಳುವುದು. |
| • ವಸ್ತು ಮತ್ತು ಘಟನೆಗಳ ಚಿತ್ರಗಳನ್ನು ನೋಡಿ ವಿಶೇಷತೆಗಳನ್ನು ಮತ್ತು ತಿಳಿದ ವಿಚಾರಗಳನ್ನು ಮಂಡಿಸಲು ಸಾಧ್ಯವಾಗುವುದು. | • ಪರಿಸರದಲ್ಲಿ ಬಯಲು ಪ್ರವಾಸದಲ್ಲಿ ನೋಡಿದ ಪಕ್ಷಿ ಮತ್ತು ಜೀವಿಗಳ ಕುರಿತು ಅಧ್ಯಾಪಿಕೆಯೊಡನೆಯೂ ಗೆಳೆಯರೊಡನೆಯೂ ಕೇಳುವುದು.<br>• ಚಿತ್ರನೋಡಿ ಹೇಳುವುದು.<br>• ಇಷ್ಟವಾದ ವಸ್ತುಗಳ ಕುರಿತು ಹೇಳುವುದು.<br>• ಬೊಂಬೆಯಾಟ | • ಬಯಲು ಪ್ರವಾಸದಲ್ಲಿ ಕಂಡ ವಸ್ತು, ಗಿಡ, ಬೀಜಗಳು, ಹೂಗಳು, ಆಕರ್ಷಕವಾದ ವಸ್ತುಗಳ ಕುರಿತು ಅಧ್ಯಾಪಿಕೆ ಮತ್ತು ಗೆಳೆಯರೊಡನೆ ಕೇಳುವುದು .<br>• ಚಿತ್ರದ ಘಟನೆಗಳನ್ನು ಹೇಳಲು.<br>• ಚಿತ್ರದ ಕುರಿತು ವಿವರಿಸುವುದು.<br>• ಚಿತ್ರ ಮತ್ತು ಆಲಿಸಿದ ವಿವರಣೆಯನ್ನು ಪರಸ್ಪರ ಒಂದುಗೂಡಿಸುವುದು.<br>• ಕಥೆ ಕಟ್ಟಿ ಹೇಳುವುದು.<br>• ಬೊಂಬೆ ನಿರ್ಮಾಣ, ಬೊಂಬೆ ಆಟ. |
| • ಚಿತ್ರ ಕಥೆಗಳನ್ನು ನೋಡಿ ಕಥೆಯನ್ನು ಊಹಿಸಿ ಕೇಳಲು ಸಾಧ್ಯವಾಗುವುದು. | • ಚಾರ್ಟಿನ ಚಿತ್ರ ನೋಡಿ ಹೇಳುವುದು. | • ಚಾರ್ಟಿನ ಚಿತ್ರವನ್ನು ನೋಡಿ ಕಥೆಯನ್ನು ಊಹಿಸಿ ಹೇಳುವುದು<br>• ಅಪೂರ್ಣವಾದ ಕಥೆಯನ್ನು ಪೂರ್ತಿಗೊಳಿಸುವುದು |
| • ಕಥೆಗಳು, ಘಟನೆಗಳು, ಸಂದರ್ಭಗಳನ್ನು ವಿಶ್ಲೇಷಿಸಿ ಇತರರಿಗೆ ನೆಮ್ಮದಿ, ಸಂತೋಷವನ್ನು ಉಂಟುಮಾಡುವ ಚಟುವಟಿಕೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದು. | • ಸಂದರ್ಭಗಳನ್ನು ವಿಶ್ಲೇಷಿಸುವುದು<br>ಉದಾ : ಮನೆಯ ಅಣ್ಣ/ಅಕ್ಕ/ತಮ್ಮ/ತಂಗಿ ಆಟಿಕೆಗಾಗಿ ಜಗಳ ಮಾಡುವುದು<br>• ಕಥೆ ಹೇಳುವುದು, ಆಲಿಸುವುದು | • ಸಂದರ್ಭಗಳನ್ನು ವಿಶ್ಲೇಷಿಸುವುದು<br>• ಕಥೆಗಳನ್ನು ವಿಶ್ಲೇಷಿಸುವುದು<br>ಉದಾ : ಕಾಗೆ, ನರಿ ಮತ್ತು ರೊಟ್ಟಿಯ ಕಥೆ<br>'ನರಿ ಮಾಡಿದ್ದು ಸರಿಯೇ'? |

| ಸಾಮರ್ಥ್ಯಗಳು | ಕಲಿಕೆಯ ಅನುಭವಗಳು (3+) | ಕಲಿಕೆಯ ಅನುಭವಗಳು (4+) |
|---|---|---|
| • ವಸ್ತುಗಳು/ಚಿತ್ರಗಳನ್ನು ನೋಡಿಯೂ ಗುಂಪಿಗೆ ಸೇರದುದನ್ನು ಗುರುತಿಸಿ ಹೇಳುವುದು, ಗುಂಪಿಗೆ ಸೇರದುದಕ್ಕೆ ಕಾರಣ ಹೇಳಲೂ ಸಾಧ್ಯವಾಗುವುದು. | • ಪಕ್ಷಿಗಳು ಮತ್ತು ಪ್ರಾಣಿಗಳನ್ನು ಗುರುತಿಸುವುದು. | • ಪಕ್ಷಿಗಳು, ಪ್ರಾಣಿಗಳ ಸಾಮ್ಯ ವ್ಯತ್ಯಾಸ ಹೇಳುವುದು (ಬಣ್ಣ, ಆಕಾರ, ಎತ್ತರ, ಉದ್ದ).<br>• ಗುಂಪಿಗೆ ಸೇರುವುದು, ಸೇರದಿರುವುದನ್ನು ಗುರುತಿಸಿ ಹೇಳುವುದು. |
| • ಆಲಿಸಿದ ಹಾಡುಗಳನ್ನು ತಾಳಾತ್ಮಕವಾಗಿ ಹಾಡಲು ಸಾಧ್ಯವಾಗುವುದು. | • ಗುಂಪಾಗಿಯೂ, ಒಂಟಿಯಾಗಿಯೂ ಹಾಡುವುದು. | • ಆಲಿಸಿದ ಹಾಡುಗಳನ್ನು ಒಂಟಿಯಾಗಿಯೂ, ಗುಂಪಾಗಿಯೂ, ತಾಳಾತ್ಮಕವಾಗಿಯೂ ಹಾಡುವುದು. |
| • ಚಿತ್ರಗಳು, ಎಲೆಗಳು, ಗರಿಗಳನ್ನು ಸಂಗ್ರಹಿಸಿ, ಕ್ರಮೀಕರಿಸಿ ತೆಗೆದಿರಿಸುವುದು. | • ಚಿತ್ರಗಳು (ಮೃಗ, ಪಕ್ಷಿ), ಗರಿಗಳನ್ನು ಅಂಟಿಸುವುದು. | • ಎಲೆಗಳು, ಗರಿಗಳು, ಚಿತ್ರಗಳನ್ನು ಸಂಗ್ರಹಿಸಿ ಅಂಟಿಸುವುದು<br>• ಪ್ರಾಣಿಗಳ ಆಲ್ಬಂ ತಯಾರಿಸುವುದು<br>• ಹೇಗೆ ತಯಾರಿಸುವುದು ? ಏನೆಲ್ಲಾ ಮಾಡಬೇಕು? (ಅಭಿಪ್ರಾಯಗಳು). |
| • ವಸ್ತುಗಳ ಮತ್ತು ಘಟನೆಗಳ ಚಿತ್ರಗಳನ್ನು ನೋಡಿ ಪ್ರಧಾನ ವಿಷಯಗಳನ್ನು ಮಂಡಿಸಲು ಸಾಧ್ಯವಾಗುವುದು. | • ಚಿತ್ರನೋಡಿ ಹೇಳುವುದು.<br>• ಇಷ್ಟವಾದ ವಸ್ತುಗಳ ಕುರಿತು ಹೇಳುವುದು. | • ಎಲೆ ಮೃಗಾಲಯ ತಯಾರಿ.<br>• ಪ್ರಾಣಿಪಕ್ಷಿಗಳ ಆಲ್ಬಂ ತಯಾರಿಸುವುದು. |
| • ಸಾಕು ಪ್ರಾಣಿಗಳು, ಕಾಡು ಪ್ರಾಣಿಗಳು, ಸಾಕುವ ಪಕ್ಷಿಗಳು, ಕಾಡು ಪಕ್ಷಿಗಳು ಇತ್ಯಾದಿಗಳನ್ನು ಗುರುತಿಸಿ ವಿಶೇಷತೆಗಳನ್ನು ಹೇಳುವುದು. ವಾಸಸ್ಥಳಗಳನ್ನು ತಿಳಿದು ಹೇಳಲು ಸಾಧ್ಯವಾಗುವುದು. | • ಸ್ವತಂತ್ರ ಸಂಭಾಷಣೆ<br>• ಚಿತ್ರದಿಂದ (ಚಿತ್ರ ಕಾರ್ಡ್), ವೀಡಿಯೋ ನೋಡಿ ಪ್ರಾಣಿ ಪಕ್ಷಿಗಳನ್ನು ಗುರುತಿಸಿ ಹೇಳುವುದು.<br>• ಚಿತ್ರಕ್ಕೆ ಬಣ್ಣ ಕೊಡುವುದು.<br>• ಮುಖವಾಡ ಧರಿಸಿ ಅಭಿನಯ. | • ಸ್ವತಂತ್ರ ಸಂಭಾಷಣೆ<br>• ಚಿತ್ರ ಕಾರ್ಡುಗಳನ್ನುಪಯೋಗಿಸಿ ಸಾಕು ಪ್ರಾಣಿ/ಕಾಡು ಪ್ರಾಣಿ ಎಂದು ವರ್ಗೀಕರಿಸುವುದು.<br>• ಊಹಿಸಿ ಹೇಳುವುದು.<br>• ಚಿತ್ರಕ್ಕೆ ಬಣ್ಣ ಕೊಡುವುದು – ಅಮ್ಮ ಮತ್ತು ಮರಿಯನ್ನು ಸೇರಿಸುವುದು<br>• ಮುಖವಾಡ ಧರಿಸಿ ಅಭಿನಯ.<br>• ಕಥೆ ಆಲಿಸುವುದು, ಕಥಾ ರಚನೆ.<br>• ವೀಡಿಯೋ ನೋಡಿ ಪ್ರತಿಕ್ರಿಯಿಸುವುದು. |

| | | |
|---|---|---|
| • ಪಂಚೇಂದ್ರಿಯಗಳನ್ನು ಉಪಯೋಗಿಸಿ ವಸ್ತುಗಳು/ ಜೀವಜಾಲಗಳು ಎಂಬಿವುಗಳ ಶಬ್ದವನ್ನು ಅನುಕರಣೆ ಮಾಡಲು ಸಾಧ್ಯವಾಗುವುದು. | • ಶಬ್ದ ಗುರುತಿಸುವ ಆಟ (ಕಾಗೆ ಕೂಗುವ ಸದ್ದು, ಕೆಮ್ಮುವಶಬ್ದ). | • ಶಬ್ದವನ್ನು ಗುರುತಿಸುವ ಆಟ (ಕಾಗೆ ಕೂಗುವ ಶಬ್ದ, ಕೆಮ್ಮುವಶಬ್ದ). |
| • ಜಂತುಗಳು/ಪಕ್ಷಿಗಳು ಇವುಗಳಿಗೆ ಸಂಬಂಧಿಸಿದ ಕಾರ್ಯಕಾರಣ ಪ್ರಶ್ನೆಗಳನ್ನು ಕೇಳಲು ಸಾಧ್ಯವಾಗುವುದು. (ಬೆಕ್ಕು ಹಾರದಿರಲು ಕಾರಣವೇನು?) | • ಸುತ್ತಲಿರುವ ವಸ್ತುಗಳ ಕುರಿತು ಇರುವ ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು ? (ಉದಾ : ಯಾಕಾಗಿ? ಯಾಕಾಗಿ? ). | • ಜೀವಿಗಳು, ಪಕ್ಷಿಗಳು, ಪ್ರಾಣಿಗಳು ಇತ್ಯಾದಿಗಳಿಗೆ ಸಂಬಂಧಿಸಿದ ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು. |
| • ವಸ್ತುಗಳು/ಚಿತ್ರಗಳನ್ನು ನಿರೀಕ್ಷಿಸಿ ಗುಂಪಿಗೆ ಸೇರದವುಗಳನ್ನು ವರ್ಗೀಕರಿಸಿ ಹೇಳುವುದಕ್ಕೂ, ಗುಂಪಿಗೆ ಸೇರದುದಕ್ಕೆ ಕಾರಣವನ್ನು ಹೇಳಲೂ ಸಾಧ್ಯವಾಗುವುದು. | • ಪಕ್ಷಿಗಳು/ಪ್ರಾಣಿಗಳನ್ನು ಗುರುತಿಸುವುದು.<br>• ಸುತ್ತಲಿರುವ ವಸ್ತುಗಳ ಕುರಿತು ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು. ಉದಾ : (ಯಾಕಾಗಿ ? ಅದು ಯಾಕಾಗಿ? ). | • ಪ್ರಾಣಿಗಳು/ಪಕ್ಷಿಗಳು ಇತ್ಯಾದಿಗಳ ಒಗಟುಗಳನ್ನು ಹಾಡುವುದು.<br>• ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು<br>• ಪ್ರಕೃತಿ ವೈಚಿತ್ರ್ಯಗಳು/ಪ್ರಾಣಿಗಳು/ಪಕ್ಷಿಗಳು/ ವಸ್ತುಗಳು/ಸಸ್ಯಗಳು ಇತ್ಯಾದಿಗಳ ಒಗಟು ಹೇಳುವುದು.<br>• ಪಕ್ಷಿಗಳು/ಪ್ರಾಣಿಗಳು ಗುರುತಿಸುವುದು. |
| • ಪ್ರಾಣಿಗಳು, ಚಿಟ್ಟೆಗಳು, ಕೀಟಗಳು, ಸಾಕುಪ್ರಾಣಿಗಳು, ಕಾಡುಪ್ರಾಣಿಗಳು, ಸಾಕುಪಕ್ಷಿಗಳು, ಕಾಡುಪಕ್ಷಿಗಳು ಇತ್ಯಾದಿಯನ್ನು ಗುರುತಿಸಿ, ವಿಶೇಷತೆಗಳನ್ನು ಕಂಡು ಹಿಡಿದು ವಿವರಿಸುವುದು, ವಾಸಸ್ಥಳಗಳನ್ನು ತಿಳಿದು ಹೇಳಲು ಸಾಧ್ಯವಾಗುವುದು. | • ಬಯಲುಪ್ರವಾಸ (ಕಾಣುವ ಜೀವಿಗಳನ್ನು ಗುರುತಿಸಿ ಹೆಸರು ಹೇಳುವುದು, ವಿಶೇಷತೆಗಳನ್ನು ಹೇಳುವುದು)<br>• ಚಿತ್ರ ಓದು<br> | • ಬಯಲು ಪ್ರವಾಸ (ಚಿಟ್ಟೆಗಳು, ಪ್ರಾಣಿಗಳು, ಪಕ್ಷಿಗಳನ್ನು ಗುರುತಿಸುವುದು/ವಿಶೇಷತೆ ಹೇಳುವುದು.)<br>• ವಿವಿಧ ಜೀವಿಗಳನ್ನು ನೇರವಾಗಿ ಕಾಣುವುದು. |

| ಸಾಮರ್ಥ್ಯಗಳು | ಕಲಿಕೆಯ ಅನುಭವಗಳು (3+) | ಕಲಿಕೆಯ ಅನುಭವಗಳು (4+) |
| --- | --- | --- |
| • ಸಸ್ಯಗಳನ್ನು ಮತ್ತು ಜೀವಿಗಳನ್ನು ಪ್ರೀತಿಸುವುದು ಮತ್ತು ಪರಿಪಾಲಿಸಿ, ಸಂರಕ್ಷಿಸಲು ಸಾಧ್ಯವಾಗುವುದು. | • ಬಯಲುಪ್ರವಾಸ<br>• ಸಸ್ಯ ಮತ್ತು ಪ್ರಾಣಿಗಳ ಹಾಡುಗಳನ್ನು/ಕಥೆಗಳನ್ನು ಕೇಳುವುದು.<br>• ಗಿಡಗಳಿಗೆ ನೀರೆರೆಯುವುದು.<br>• ಮೀನು, ಪಕ್ಷಿಗಳಿಗೆ ಆಹಾರ ನೀಡುವುದು. | • ಬಯಲು ಪ್ರವಾಸ<br>• ಸಸ್ಯ ಮತ್ತು ಪ್ರಾಣಿಗಳನ್ನು ಪ್ರೀತಿಸುವುದಕ್ಕೂ, ಸಂರಕ್ಷಿಸುವುದಕ್ಕೂ ಸಂಬಂಧಿಸಿದ ಹಾಡು/ಕಥೆ ಆಲಿಸುವುದು.<br>• ಹೂದೋಟ ನಿರ್ಮಾಣ, ಸಂರಕ್ಷಣೆ.<br>• ಸಾಕುಪ್ರಾಣಿ/ಪಕ್ಷಿಗಳಿಗೆ ಆಹಾರ ನೀಡುವುದು. |
| • ಕಥೆಗಳನ್ನು ಆಲಿಸಲೂ, ಆಸ್ವಾದಿಸಲೂ ಸಾಧ್ಯವಾಗುವುದು. | • ಕಥೆಗಳನ್ನು ಆಲಿಸುವುದು (ಆಡಿಯೋ) | • Audio, Roleplay, ಬೊಂಬೆಯಾಟ ಇತ್ಯಾದಿಗಳ ಮೂಲಕ ಕಥೆಗಳನ್ನು ಆಲಿಸುವುದು. |
| • ಒಂದನ್ನು ಇನ್ನೊಂದಾಗಿ ಭಾವಿಸಿ (ಸುತ್ತಲಿರುವ ಜೀವಿಗಳು, ವಸ್ತುಗಳು) ಬೇರೆ ಒಬ್ಬನಾಗಿ ತನ್ನನ್ನು ಕಲ್ಪಿಸಿಯೂ-ಭಾವನೆಗಳನ್ನು ಸೃಷ್ಟಿಸಿ ಆಶಯ ಪ್ರಕಟಿಸಲು ಸಾಧ್ಯವಾಗುವುದು. | • ವೇಷಧರಿಸಿ ಆಟ<br>• ಪ್ರಾಣಿ/ಪಕ್ಷಿಗಳ ಮುಖವಾಡ ಧರಿಸಿ ಆಟ ಆಡುವುದು. | • ಮುಖವಾಡ ಧರಿಸಿ ಆಡುವುದು<br>• ಹೆಗ್ಗಳಿಕೆ ಹೇಳುವುದು<br>• ಕೋಲನ್ನು ಬೇರೆ ವಸ್ತುವಾಗಿ ಗ್ರಹಿಸಿ ಮಂಡಿಸುವುದು<br>• ಕಿಚನ್‌ಸೆಟ್ ಆರ್ಕೆಸ್ಟ್ರಾ |
| • ಸುತ್ತಲಿರುವ ಜೀವಿಗಳು, ವಸ್ತುಗಳು, ಜನರಶಬ್ದ ಚಲನೆಗಳನ್ನು ಅನುಕರಣೆ ಮಾಡಲು ಸಾಧ್ಯವಾಗುವುದು. | • ಶಬ್ದಾನುಕರಣೆ ಆಟಗಳು<br>• ಗುಂಪು ಆಟಗಳು | • ಶಬ್ದಾನುಕರಣ ಆಟಗಳು<br>• ಗುಂಪು ಆಟಗಳು |
| • ಚಿತ್ರಗಳು, ಎಲೆಗಳು, ಗರಿಗಳು, ಕೌತುಕ ವಸ್ತುಗಳು, ಮಹಾತ್ಮರ ಚಿತ್ರಗಳು, ಕಲಾವಿದರ ಚಿತ್ರಗಳು ಎಂಬಿವುಗಳನ್ನು ಸಂಗ್ರಹಿಸಿ ಕ್ರಮೀಕರಿಸಿ ತೆಗೆದಿರಿಸುವುದು. | • ಎಲೆ ಮತ್ತು ಗರಿಗಳನ್ನು ಅಂಟಿಸುವುದು. | • ಎಲೆಗಳು/ವಸ್ತುಗಳು/ಚಿತ್ರಗಳು ಕುತೂಹಲಭರಿತ ವಸ್ತುಗಳು ಇತ್ಯಾದಿಗಳನ್ನು ಸಂಗ್ರಹಿಸಿ ಅಂಟಿಸುವುದು. |

| ವಿಷಯ : 14 – ವನ್ಯಜೀವಿಗಳು | | ಕಾಲಾವಧಿ : ಅಕ್ಟೋಬರ್ |
|---|---|---|
| (3+) | | (4+) |
| **ಆಶಯಗಳು**<br>1. ಕಾಡಿನಲ್ಲಿ ಜೀವಿಸುವ ಹಲವು ತರದ ಜೀವಿಗಳಿವೆ.<br>2. ದೊಡ್ಡದೂ, ಸಣ್ಣದೂ ಆಗಿರುವ ಮೃಗಗಳಿವೆ. | | 1. ಕಾಡಿನಲ್ಲಿ ಹಲವು ತರದ ಜೀವಿಗಳು ವಾಸಿಸುತ್ತವೆ.<br>2. ದೊಡ್ಡದೂ ಸಣ್ಣದೂ ಆದ ಮೃಗಗಳಿವೆ.<br>3. ಮಾಂಸಾಹಾರಿ ಜೀವಿಗಳೂ, ಸಸ್ಯಹಾರಿ ಜೀವಿಗಳೂ ಇವೆ. |
| **ಸಾಮರ್ಥ್ಯಗಳು** | **ಕಲಿಕಾನುಭವಗಳು (3+)** | **ಕಲಿಕಾನುಭವಗಳು (4+)** |
| • ವಿವಿಧ ರೀತಿಯ ಹಾಡುಗಳನ್ನೂ, ಸಂಭಾಷಣೆಗಳನ್ನು ಗಮನವಿಟ್ಟು ಆಲಿಸುವುದಕ್ಕೂ, ಆಸ್ವಾದಿಸಲೂ ಇಷ್ಟವಾದುದನ್ನು ಮಂಡಿಸಲು ಸಾಧ್ಯವಾಗುವುದು. | • ರೇಡಿಯೋ/ಫೋನ್/ಟಿ.ವಿ/ಮೊಬೈಲ್ ಫೋನ್‌ಗಳಲ್ಲೂ, ಹಾಡುಗಳು, ಕಥ ಕವನಗಳು ಸಂಭಾಷಣೆ ಎಂಬಿವುಗಳನ್ನು ಆಲಿಸುವುದು.<br>• | • ರೇಡಿಯೋ/ಟಿ.ವಿಗಳಲ್ಲಿ ಕಥನ ಕವನಗಳು, ಮಾತುಗಾರಿಕೆ ಹಾಡುಗಳು, ಪ್ರಶ್ನೋತ್ತರ ಹಾಡುಗಳು, ಗುಂಪು ಹಾಡು, ಬಾಯಿತಾಳಗಳು ಎಂಬಿವುಗಳನ್ನು ಆಲಿಸುವುದು.<br>• ರೇಡಿಯೋ, ಟಿ.ವಿಗಳಲ್ಲಿ ಬಂದ ಕಾರ್ಯಕ್ರಮಗಳನ್ನು ಮಂಡಿಸುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ವಾರ್ತಾ ಮಾಧ್ಯಮಗಳನ್ನು /ಚಿತ್ರಗಳನ್ನು ನೋಡಿ ವಿವರಗಳನ್ನು ಮಂಡಿಸುವುದು | • ರೇಡಿಯೋ, ಟಿ.ವಿಗಳಲ್ಲಿ ಬಂದ ಕಾರ್ಯಕ್ರಮಗಳನ್ನು ಮಂಡಿಸುವುದು<br>• ಚಿತ್ರನೋಡಿ ಟಿ.ವಿ, ರೇಡಿಯೋ, ಫೋನ್, ಪತ್ರಿಕೆ ಎಂಬಿವುಗಳನ್ನು ಗುರುತಿಸಿ ಹೇಳುವುದು<br>• ಸ್ವತಂತ್ರ ಮಾತುಗಾರಿಕೆ, ಟಿ.ವಿ, ರೇಡಿಯೋ, ಫೋನ್ ಅನುಭವಗಳನ್ನು ಹಂಚಿಕೊಳ್ಳುವುದು.<br>• ಸ್ವತಂತ್ರ ಮಾತುಗಾರಿಕೆ – ಮಾಧ್ಯಮಗಳಿಗೆ ಸಂಬಂಧಿಸಿದ ಅನುಭವಗಳು (ಟಿ.ವಿ, ರೇಡಿಯೋ, ಫೋನ್) | • ಸ್ವತಂತ್ರ ಮಾತುಗಾರಿಕೆ – ಮಾಧ್ಯಮಗಳಿಗೆ ಸಂಬಂಧಿಸಿದ ಅನುಭವಗಳು (ಟಿ.ವಿ, ರೇಡಿಯೋ, ಫೋನ್)<br>• ಚಿತ್ರದ ಕುರಿತು ವಿವರಿಸುವುದು<br>• ಆಲಿಸಿದ ವಿವರಣೆಗಳನ್ನು ತಮ್ಮೊಳಗೆ ಹೊಂದಿಸುವುದು. (ಟಿ.ವಿ, ರೇಡಿಯೋ, ಕಂಪ್ಯೂಟರ್, ಇಂಟರ್‌ನೆಟ್, ಫೋನ್)<br>• ವಾರ್ತೆ ಕೈಬದಲಾಯಿಸುವ ಆಟ |



| ವಿಷಯ : 29 – ನೀರು, ನದಿ, ಸಮುದ್ರ | ಕಾಲಾವಧಿ: ಮಾರ್ಚ್ |
|---|---|
| **(3+)** | **(4+)** |
| **ಆಶಯಗಳು**<br><br>1. ಮಳೆಯಿಂದ ನೀರು ಲಭಿಸುವುದು<br>2. ನೀರಿನಲ್ಲಿ ತೇಲುವ ಹಾಗೂ ಮುಳುಗುವ ವಸ್ತುಗಳಿವೆ.<br>3. ಕುಡಿಯುವುದಕ್ಕೆ, ಸ್ನಾನಕ್ಕೆ, ಆಹಾರ ತಯಾರಿಗೆ ಹಾಗೂ ಮತ್ತಿತರ ದೈನಂದಿನ ಅವಶ್ಯತೆಗಳಿಗೆ ನೀರಿನ ಅಗತ್ಯವಿದೆ.<br>4. ಮನೆಯ ಎಲ್ಲಾ ಸದಸ್ಯರಿಗೂ ತಮ್ಮದೇ ಆದ ಜವಾಬ್ದಾರಿಗಳೂ ಕರ್ತವ್ಯಗಳೂ ಇದೆ. | 1. ಮಳೆಯೇ ನೀರಿನ ಪ್ರಧಾನ ಮೂಲವಾಗಿದೆ.<br>2. ನೀರಿನಲ್ಲಿ ಕರಗುವ ಹಾಗೂ ಕರಗದ ವಸ್ತುಗಳಿವೆ<br>3. ನೀರಿನಲ್ಲಿ ತೇಲುವ ಹಾಗೂ ಮುಳುಗುವ ವಸ್ತುಗಳಿವೆ<br>4. ಕುಡಿಯುವುದಕ್ಕೆ, ಸ್ನಾನಕ್ಕೆ, ಆಹಾರ ತಯಾರಿಕೆ ಹಾಗೂ ಮತ್ತಿತ್ತರ ದೈನಂದಿನ ಅವಶ್ಯಕತೆಗಳಿಗೆ ನೀರಿನ ಅಗತ್ಯವಿದೆ.<br>5. ಮನೆಯ ಎಲ್ಲಾ ಸದಸ್ಯರಿಗೂ ತಮ್ಮದೇ ಆದ ಜವಾಬ್ದಾರಿಗಳೂ ಕರ್ತವ್ಯಗಳೂ ಇವೆ<br>6. ವಿವಿಧ ಜಲಾಶಯಗಳಿವೆ (ನದಿ, ಸಮುದ್ರ) |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ದೇಹದ ಹೆಚ್ಚಿನ ಪೇಶಿಗಳ ಸಹಾಯದಿಂದ ಸ್ವತಂತ್ರ ಹಾಗೂ ನಿಯಂತ್ರಿತವಾದ (ಸೂಚನೆಗಳನ್ನು ಪಾಲಿಸಿ)ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುವುದು. | • ಸ್ವತಂತ್ರ ಆಟಗಳು | • ಸ್ವತಂತ್ರ ಆಟಗಳು, ಯೋಜನಾಬದ್ಧ ಆಟಗಳು |
| • ಪ್ರಕೃತಿಯನ್ನು ನಿರೀಕ್ಷಿಸಿ (ಪ್ರಕೃತಿ, ವಸ್ತುಚಿತ್ರಗಳು) ವಾಚನಾಪೂರ್ವ ಆಶಯಗಳನ್ನು ಹೇಳಲು ಸಾಧ್ಯವಾಗುವುದು. | • ಪ್ರಕೃತಿ ಓದು<br>• ಚಿತ್ರದಲ್ಲಿ ಕಾಣುವವುಗಳನ್ನು ಹೇಳುವುದು(ನದಿ, ಸಮುದ್ರ, ನೀರು ಮೊದಲಾದವುಗಳು) | • ಚಿತ್ರ ಓದು, ಪ್ರಕೃತಿಓದು<br>• ಚಿತ್ರದಲ್ಲಿ ಕಾಣಿಸುವ ವಿಚಾರಗಳನ್ನು ಹೇಳುವುದು, ಅವುಗಳ ಉಪಯೋಗವನ್ನೂ ಹೇಳುವುದು. |
| • ನೀರಿಗೆ ಸಂಬಂಧಿಸಿದ ಘಟನೆಗಳು, ತನ್ನ ಅನುಭವಗಳು, ಸ್ಥಿತಿಗತಿಗಳು, ವಿಶೇಷತೆಗಳು ಎಂಬಿವುಗಳನ್ನು ಪರಸ್ಪರ ಹೊಂದಿಸಿ ಹೇಳಲು ಸಾಧ್ಯವಾಗುವುದು. | • ನೀರಿನಲ್ಲಿ ಆಟವಾಡಿದ, ಸ್ನಾನ ಮಾಡಿದ, ತಣ್ಣೀರನ್ನು ಕುಡಿದ, ಐಸ್ ತಿಂದ ಇತ್ಯಾದಿ ಅನುಭವಗಳನ್ನು ಹೇಳುವುದು. | • ನೀರಿನಲ್ಲಿ ಆಟವಾಡಿದ, ಸ್ನಾನಮಾಡಿದ, ತಣ್ಣೀರು ಕುಡಿದ, ಐಸ್ ತಿಂದ ಇತ್ಯಾದಿ ಅನುಭವಗಳನ್ನು ಹೇಳುವುದು |
| • ಅಂಗೀಕರಿಸದ ಏಕಕಗಳನ್ನು (ಸ್ಪೂನ್, ಲೋಟ, ಕಪ್ಪ್, ನೂಲು)ಉಪಯೋಗಿಸಿ ಅಳತೆಗಳನ್ನು ಹೋಲಿಸಲು ಸಾಧ್ಯವಾಗುವುದು. | • ನೀರು ತುಂಬಿಸುವಾಟ | • ಅಂಗೀಕರಿಸದ ಏಕಕಗಳನ್ನು ಉಪಯೋಗಿಸಿ ಚಟುವಟಿಕೆಗಳು<br>- ಕಪ್‌ನಲ್ಲಿ ಎಷ್ಟು ಲೋಟ ನೀರು?<br>- ಬಾಟ್ಲಿಯಲ್ಲಿ ಎಷ್ಟು ಲೋಟ ನೀರು?<br>- ಯಾವುದರಲ್ಲಿ ಹೆಚ್ಚು ನೀರು? ಒಂದೇ ರೀತಿ ಬರುವವುಗಳು? ಸರಳ ಚಟುವಟಿಕೆಗಳಲ್ಲಿ ತೊಡಗುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| ನೀರು, ನದಿ, ಸಮುದ್ರ ಎಂಬಿವುಗಳಿಗೆ ಸಂಬಂಧಿಸಿದ ವಿವಿಧ ಹಾಡುಗಳು, ಕಥೆಗಳು (ಗುಂಪು ಹಾಡು, ಬಾಯಿತಾಳ, ಪ್ರಶ್ನೋತ್ತರ ಪದ್ಯಗಳು, ಕಥನ ಕವನಗಳು, ಸಂಭಾಷಣಾ ಹಾಡುಗಳು) ಮೊದಲಾದವುಗಳನ್ನು ಶ್ರದ್ಧೆಯಿಂದ ಆಲಿಸುವುದಕ್ಕೂ ಆಸ್ವಾದಿಸುವುದಕ್ಕೂ ಸಾಧ್ಯವಾಗುವುದು. | • ಕಥನ ಕವನಗಳನ್ನೂ, ಸಂಭಾಷಣಾ ಹಾಡುಗಳನ್ನೂ ಆಲಿಸುವುದು (ಆಡಿಯೋ)<br>• ಕಥೆಗಳನ್ನು ಆಲಿಸುವುದು – ಹೇಳುವುದು | • ಕಥನ ಕವನಗಳು, ಸಂಭಾಷಣಾ ಹಾಡುಗಳು, ಪ್ರಶ್ನೋತ್ತರ ಹಾಡುಗಳು, ಗುಂಪು ಹಾಡು, ಬಾಯಿತಾಳ ಎಂಬಿವುಗಳನ್ನು ಆಲಿಸುವುದು (ಆಡಿಯೋ)<br>• ಕಥೆ ಕೇಳುವುದು – ಹೇಳುವುದು, ರಚಿಸುವುದು |
| ನೀರಿನ ಆಟಗಳಲ್ಲಿ ತೊಡಗಲು ಸಾಧ್ಯವಾಗುವುದು | • ಕಾಗದದ ದೋಣಿ, ಬಾಟ್ಲಿಯ ಮುಚ್ಚಳ, ಪಾತ್ರೆಯ ಮುಚ್ಚಳ ಎಂಬಿವುಗಳನ್ನು ಉಪಯೋಗಿಸಿ ಆಟಗಳು | • ವಿವಿಧ ವಸ್ತುಗಳನ್ನು ಉಪಯೋಗಿಸಿ ಜಲಕ್ರೀಡೆಗಳಲ್ಲಿ ತೊಡಗುವುದು. |
| ಕಂಡುಹಿಡಿಯುವ ಚಟುವಟಿಕೆಗಳಲ್ಲಿ ತೊಡಗುವುದಕ್ಕೂ ನಿಗಮನಗಳನ್ನು ಮಂಡಿಸುವದಕ್ಕೂ ಸಾಧ್ಯವಾಗುವುದು. | • ನೀರಿಗೆ ಸಂಬಂಧಿಸಿದ ಸರಳ ಪ್ರಯೋಗಗಳು<br>ಬಿಸಿ – ತಂಪು | • ನೀರಿಗೆ ಸಂಬಂಧಿಸಿದ ಸರಳ ಪ್ರಯೋಗಗಳು<br>- ತೇಲುವುದೋ ಮುಳುಗುವುದೋ?<br>- ಬಿಸಿ – ತಂಪು<br>- ಮಳೆಬಿಲ್ಲನ್ನು ಸೃಷ್ಟಿಸುವುದು (ಮುಖ ನೋಡುವ ಕನ್ನಡಿಯನ್ನು ನೀರಿನಲ್ಲಿರಿಸಿ ಬಿಸಿಲಿನಲ್ಲಿಡುವುದು) |
| ನೀರಿಗೆ ಸಂಬಂಧಿಸಿದ ಕಥೆಗಳನ್ನು ಆಲಿಸುವುದಕ್ಕೂ ಆಸ್ವಾದಿಸುವುದಕ್ಕೂ ಸಾಧ್ಯವಾಗುವುದು. | • ನೀರಿಗೆ ಸಂಬಂಧಿಸಿದ ಕಥೆಗಳನ್ನು ಆಲಿಸುವುದು - ಹೇಳುವುದು | • ನೀರಿಗೆ ಸಂಬಂಧಿಸಿದ ಕಥೆಗಳನ್ನು ಆಲಿಸುವುದು, ಹೇಳುವುದು, ರಚಿಸುವುದು<br>- ಸಂಭಾಷಣೆ<br>- ಇನ್ನೊಂದು ಕಥೆ ರಚಿಸುವುದು |
| • ಲೇಖನ ಪೂರ್ವಚಟುವಟಿಕೆಗಳಲ್ಲಿ ತೊಡಗುವುದು | • ಮಳೆ ಹನಿಯನ್ನು ಚಿತ್ರಿಸುವುದು | • ಮಳೆ ಹನಿಯನ್ನು ಚಿತ್ರಿಸುವುದು<br>• ಮಳೆ – ಮೋಡ ಎಂಬಿವುಗಳ ಚಿತ್ರ ಮಾಡುವುದು |
| • ವಾಚನಪೂರ್ವ – ನೀರಿಗೆ ಸಂಬಂಧಿಸಿದ ಬಾಲಕೃತಿಗಳನ್ನು ಓದಿ ಆಲಿಸುವುದಕ್ಕೂ ಆಲಿಸಿದ ವಿಚಾರಗಳನ್ನು ವಿವಿದ ರೀತಿಯಲ್ಲಿ ಮಂಡಿಸುವುದಕ್ಕೂ ಸಾಧ್ಯವಾಗುವುದು. | • ಕಥೆಯನ್ನು ಆಲಿಸುವುದು ವಿವಿಧ ರೀತಿಯಲ್ಲಿ ಮಂಡಿಸುವುದು<br>- ಅಭಿನಯಗೀತೆ<br>- ಚಿತ್ರ ರಚನೆ<br>- ಸಂಭಾಷಣೆ | • ಕಥೆಯನ್ನು ಆಲಿಸುವುದು, ವಿವಿಧ ರೀತಿಯಲ್ಲಿ ಮಂಡಿಸುವುದು<br>- ಅಭಿನಯಗೀತೆ<br>- ಚಿತ್ರ ರಚನೆ<br>- ರೋಲ್‌ಪ್ಲೇ<br>- ಸಂಭಾಷಣೆ<br>- ಮತ್ತೊಂದು ಕಥೆ ರಚಿಸುವುದು |

**ವಿಷಯ : 30 – ಮರಗಳು, ಕಾಡು** **ಕಾಲಾವಧಿ : ಮಾರ್ಚ್**

| (3+) | (4+) |
|---|---|
| **ಆಶಯಗಳು**<br>1. ನಾವು ನೆಟ್ಟು ಬೆಳೆಸುವ ಹಾಗೂ ಇತರ ಮರಗಳಿವೆ.<br>2. ಮಾವಿನಕಾಯಿ, ಹಲಸಿನ ಕಾಯಿ, ಪೇರಳೆ, ನೆಲ್ಲಿಕಾಯಿ, ಮೊದಲಾದ ಫಲವಸ್ತುಗಳು ನಮಗೆ ಮರಗಳಿಂದ ಲಭಿಸುವುದು.<br>3. ಮನೆ ಹಾಗೂ ಮನೆ ಉಪಕರಣಗಳನ್ನು ನಿರ್ಮಿಸಲು ಮರಗಳನ್ನು ಉಪಯೋಗಿಸಲಾಗುವುದು. | 1. ನಾವು ನೆಟ್ಟು ಬೆಳೆಸುವ ಹಾಗೂ ಇತರ ಮರಗಳಿವೆ.<br>2. ಮಾವಿನಕಾಯಿ, ಹಲಸಿನಕಾಯಿ, ಪೇರಳೆ, ನೆಲ್ಲಿಕಾಯಿ ಮೊದಲಾದ ಫಲವಸ್ತುಗಳು, ಮರಗಳಿಂದ ನಮಗೆ ಲಭಿಸುವುದು.<br>3. ಮನೆ ಹಾಗೂ ಮನೆ ಉಪಕರಣಗಳನ್ನು ನಿರ್ಮಿಸಲು ಮರಗಳನ್ನು ಉಪಯೋಗಿಸುವುದು.<br>4. ಕಟ್ಟಿಗೆಯನ್ನು ಉರಿಸಲು ಉಪಯೋಗಿಸಲಾಗುವುದು.<br>5. ಮರಗಳನ್ನು ಮತ್ತು ಕಾಡನ್ನು ಸಂರಕ್ಷಿಸಬೇಕು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಮರ/ಕಾಡು ಎಂಬಿವುಗಳಿಗೆ ಸಂಬಂಧಿಸಿ ಸ್ವತಂತ್ರವಾಗಿ ಚಿತ್ರಗಳನ್ನೂ ರಚಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು. (ಕ್ರಯೋನ್, ಸ್ಕೆಚ್‌ಪೆನ್, ವಾಟರ್‌ಕಲರ್...) | • ಕ್ರಯೋನ್‌ನಿಂದ ಚಿತ್ರಕ್ಕೆ ಬಣ್ಣ ಹಚ್ಚುವುದು.<br>• ಪ್ರಿಂಟಿಂಗ್ (ಬೆರಳು, ತರಕಾರಿ, ಕಡ್ಡಿ) | • ಕ್ರಯೋನ್‌ನಿಂದ ಚಿತ್ರಕ್ಕೆ ಬಣ್ಣಹಚ್ಚುವುದು.<br>• ಪ್ರಿಂಟಿಂಗ್ (ಬೆರಳು, ತರಕಾರಿ, ಕಡ್ಡಿ, ಎಲೆ, ಸುರುಟಿದ ಕಾಗದ)<br>• ಚಿತ್ರಗಳನ್ನು ರಚಿಸಿ ಕ್ರಯೋನ್, ಪೆನ್ನು, ವಾಟರ್‌ಕಲರ್ ಎಂಬಿವುಗಳಿಂದ ಬಣ್ಣ ಹಚ್ಚುವುದು. |
| • ಮರ/ಕಾಡು ಎಂಬಿವುಗಳಿಗೆ ಸಂಬಂಧಿಸಿ ಘಟನೆಗಳು, ಅನುಭವಗಳು, ಕಥೆಗಳು, ಹಾಡುಗಳು ಎಂಬಿವುಗಳನ್ನು ಶ್ರದ್ಧೆಯಿಂದ ಆಲಿಸುವುದಕ್ಕೂ ಕಾಣುವುದಕ್ಕೂ ಸಾಧ್ಯವಾಗುವುದು. | • ಕಥೆಯನ್ನು ಆಲಿಸುವುದು<br>• ಪದ್ಯವನ್ನು ಆಲಿಸುವುದು<br>• ಸ್ವತಂತ್ರ ಮಾತುಗಾರಿಕೆ<br>• ನನ್ನ ಮನೆಯ ಮರಗಳು | • ಕಥೆಯನ್ನು ಆಲಿಸುವುದು – ಆಲಿಸಿದ ಕಥೆಯನ್ನು ಹೇಳುವುದು, ರಚಿಸುವುದು.<br>• ಸ್ವತಂತ್ರ ಮಾತುಗಾರಿಕೆ – ತನ್ನ ಮನೆಯ ಮರಗಳ ಕುರಿತು ಸ್ವಂತ ಅನುಭವವನ್ನು ಹೇಳುವುದು.<br>• ಪದ್ಯವನ್ನು ಆಲಿಸುವುದು – ಹಾಡುವುದು – ರಚಿಸುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಮರ/ಕಾಡು ಎಂಬಿವುಗಳ ಕುರಿತು ನೋಡಿ, ಕೇಳಿ, ತಿಳಿದುಕೊಂಡ ಘಟನೆಗಳು, ವಿವರಣೆಗಳು ಎಂಬಿವುಗಳನ್ನು ಆಶಯವು ಸೋರಿಹೋಗದಂತೆ ಇತರರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವುದು. | • ನೋಡಿದ ಹಾಗೂ ಆಲಿಸಿದ ವಿಚಾರಗಳ ಕುರಿತು ಹೇಳುವುದು<br>• ನಾನು ಕಂಡ ಮರ – ಕಿರು ವಿವರಣೆಗಳನ್ನು ನೀಡುವುದು | • ಆಲಿಸಿದ ಘಟನೆಗಳನ್ನು ಕ್ರಮೀಕರಿಸಿ ಹೇಳುವುದು.<br>• ನಾನು ಕಂಡ ಮರ ಸವಿಸ್ತಾರವಾಗಿ ವಿವರಿಸಿಸುವುದು |
| • ಮರ/ಕಾಡುಗಳಿಗೆ ಸಂಬಂಧಿಸಿದ ಗಣಿತ ನಮೂನೆಗಳನ್ನು ಕಂಡು ಹಿಡಿಯುವುದಕ್ಕೂ ಅವುಗಳ ಪ್ರಯೋಜನವನ್ನು ಪಡೆಯುವುದಕ್ಕೂ ಸಾಧ್ಯವಾಗುವುದು.<br>• ವಸ್ತುಗಳು, ಚಿತ್ರಗಳು ಎಂಬಿವುಗಳನ್ನು ನೋಡಿ ಕಂಡುಕೊಂಡ ವಿವರಗಳನ್ನು ಮಂಡಿಸಲು ಸಾಧ್ಯವಾಗುವುದು. | • ಮರದಲ್ಲಿರುವ ಹಣ್ಣುಗಳಿಗೆ ಬಣ್ಣ ಹಚ್ಚುವುದು | • ಚಿತ್ರ ನೋಡಿ ಪರಸ್ಪರ ಹೊಂದಿಸಿ ಹೇಳುವುದು<br>• ಇಷ್ಟವಾದ ಮರದ ಕುರಿತು ಹೇಳುವುದು<br>• ಮರಕ್ಕೆ ಸೂಕ್ತವಾದ ಹಣ್ಣು/ಕಾಯಿಗಳ ಚಿತ್ರ ಬಿಡಿಸುವುದು<br>• ವಿವರಣೆಯನ್ನು ಆಲಿಸಿ ಚಿತ್ರದೊಂದಿಗೆ ಹೊಂದಿಸುವುದು<br>• ಮರ, ಕಾಡು ಅವುಗಳಿಗೆ ಸಂಬಂಧಿಸಿದ ಕಥೆಗಳನ್ನು ಕಟ್ಟುವುದು. |
| • ಪರಿಸರವನ್ನು ನಿರೀಕ್ಷಣೆ ಮಾಡಿ ಮರಕ್ಕೆ ಸಂಬಂಧಿಸಿದ ಆಕೃತಿಗಳನ್ನು ಗುರುತಿಸುವುದು – ಚಿತ್ರಿಸುವುದು | • ಮರ, ಕಾಡು ಇವುಗಳಿಗೆ ಸಂಬಂಧಿಸಿದ ಕಥೆ ಕಟ್ಟುವುದು. | • ಮರದ ತುಂಡುಗಳ ಆಕೃತಿಗಳನ್ನು ಗುರುತಿಸಿ ಚಿತ್ರಿಸುವುದು (ವೃತ್ತ, ಚೌಕ, ಆಯತ, ಗೋಲ) |
| • ಮರಗಳನ್ನು ಕಾಡುಗಳನ್ನೂ ಪ್ರೀತಿಸುವುದಕ್ಕೂ ಪರಿಪಾಲಿಸುವುದಕ್ಕೂ ಸಾಧ್ಯವಾಗುವುದು. | • ಮರದ ತುಂಡುಗಳ ಆಕೃತಿಗಳನ್ನು ಗುರುತಿಸಿ ಹೇಳುವುದು (ವೃತ್ತ, ಆಯತ, ಚೌಕ)<br>• ಬಯಲು ಪ್ರವಾಸ<br>• ಕಾಡು ಕಾಣುವುದು –ವೀಡಿಯೋ<br>• ಮರ – ಕೊಲೇಷ್<br>• ಚಿತ್ರಗಳನ್ನು ಸಂಗ್ರಹಿಸಿ ಅಂಟಿಸುವುದು | • ವೀಡಿಯೋ<br>• ಬಯಲುಪ್ರವಾಸ<br>• ಕಾಡು ಕಾಣುವುದು – ವೀಡಿಯೋ<br>• ಮರಗಳು ಮತ್ತು ಜೀವಿಗಳೊಳಗಿನ ಸಂಬಂಧವನ್ನು ಸೂಚಿಸುವ ಕಥೆ, ಪದ್ಯಗಳನ್ನು ಆಲಿಸುವುದು, ಬೊಂಬೆನಾಟಕವನ್ನು ಕಾಣುವುದು, ಹೇಳುವುದು<br>• ರೋಲ್‌ಪ್ಲೇ ಮಂಡಿಸುವುದು<br>• ಮರ– ಕೊಲೇಷ್<br>• ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ನಿರ್ಮಿಸುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಪ್ರಾಣಿ – ಪಕ್ಷಿಗಳಿಗೆ ಸಂಬಂಧಿಸಿದ ಕಥೆ, ಪದ್ಯ, ಘಟನೆ ಎಂಬಿವುಗಳನ್ನು ಭಾವಪೂರ್ಣದೊಂದಿಗೆ ಮಂಡಿಸಲು ಸಾಧ್ಯವಾಗುವುದು.(ಶಬ್ದವ್ಯತ್ಯಾಸ, ಭಾವ, ಆಂಗಿಕ ಚಲನೆ, ತಾಳ, ಲಯ, ಚಲನೆ) | • ಅಭಿನಯಗೀತೆ ಹಾಡುವುದು<br>• ಕಥೆ ಹೇಳುವುದು<br>• ಚಿತ್ರವನ್ನು ನಿರೀಕ್ಷಣೆ ಮಾಡಿ ಕಥೆಯನ್ನು ಊಹಿಸಿ ಹೇಳುವುದು<br>• ಸ್ಯಾಂಡ್‌ಟ್ರೇಯ ಕ್ರಮೀಕರಣವನ್ನು ನೋಡಿ ಹೇಳುವುದು<br>• ಬಯಲುಪ್ರವಾಸ | • ಆಟದ ರೀತಿಯನ್ನು ಪ್ರಕ್ರಿಯೆ ಪಾಲಿಸಿ ಹೇಳುವುದು<br>• ಕಥೆಯ ಘಟನೆಗಳನ್ನು ಕ್ರಮೀಕರಿಸಿ ಹೇಳುವುದು<br>• ಘಟನೆಯನ್ನು ವಿವರಿಸಿ ಹೇಳುವುದು<br>• ಬಿಗ್ ಪಿಕ್ಚರ್ ನೋಡಿ ಹೇಳುವುದು |
| • ವಸ್ತುಗಳ ಹಾಗೂ ಘಟನೆಗಳ ಚಿತ್ರಗಳನ್ನ ನೋಡಿ ವಿವರಗಳನ್ನೂ ನಿಗಮನಗಳನ್ನೂ ಮಂಡಿಸಲು ಸಾಧ್ಯವಾಗುವುದು. | • ಪ್ರಾಣಿಗಳು, ಪಕ್ಷಿಗಳು ಎಂಬಿವುಗಳ ಕುರಿತು ಟೀಚರಲ್ಲಿಯೂ ಗೆಳೆಯರಲ್ಲಿಯೂ ಕೇಳುವುದು<br>• ಚಿತ್ರನೋಡಿ ಹೇಳುವುದು<br>• ಇಷ್ಟವಿರುವ ವಸ್ತುಗಳ ಕುರಿತು ಹೇಳುವುದು. ಬೊಂಬೆಯಾಟ<br>• ಚಾರ್ಟಿನಲ್ಲಿರುವ ಚಿತ್ರನೋಡಿ ಹೇಳುವುದು | • ಚಿತ್ರದಲ್ಲಿನ ಘಟನೆಗಳನ್ನು ಹೇಳುವುದು<br>• ಚಿತ್ರದ ಕುರಿತು ವಿವರಿಸುವುದು<br>• ಚಿತ್ರವನ್ನು ಮತ್ತು ಕೇಳಿಸಿದ ವಿವರಗಳನ್ನೂ ಪರಸ್ಪರ ಹೊಂದಿಸುವುದು<br>• ಕಥೆ ಕಟ್ಟಿ ಹೇಳುವುದು<br>• ಬೊಂಬೆ ನಿರ್ಮಾಣ, ಬೊಂಬೆಯಾಟ<br>• ಚಾರ್ಟಿನಲ್ಲಿರುವ ಚಿತ್ರನೋಡಿ ಕಥೆಯನ್ನು ಊಹಿಸಿ ಹೇಳುವುದು<br>• ಕಥೆಯ ಉಳಿದ ಭಾಗವನ್ನು ಪೂರ್ತಿಗೊಳಿಸುವುದು |
| • ಕಥೆಗಳು, ಘಟನೆಗಳು, ಸಂದರ್ಭಗಳನ್ನು ವಿಶ್ಲೇಷಿಸಿ ಇತರರಿಗೆ ಒಳಿತು ಹಾಗೂ ಸಂತೋಷ ಉಂಟಾಗುವಂತಹ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುವುದು. | • ಸಂದರ್ಭಗಳನ್ನು ವಿಶ್ಲೇಷಿಸಿವುದು (ಉದಾ : ಮನೆಯಲ್ಲಿ ಅಕ್ಕ/ಅಣ್ಣ/ತಮ್ಮ/ತಂಗಿ ಪರಸ್ಪರ ಆಟಿಕೆಗಾಗಿ ಹಠ ಹಿಡಿಯುವುದು)<br>• ಕಥೆ ಹೇಳುವುದು, ಆಲಿಸುವುದು. | • ಸಂದರ್ಭಗಳನ್ನು ವಿಶ್ಲೇಷಿಸುವುದು<br>• ಕಥೆಯನ್ನು ಆಲಿಸುವುದು, ರಚಿಸುವುದು<br>• ವೀಡಿಯೋ ನೋಡಿ ಪ್ರತಿಕ್ರಿಯೆ ನೀಡುವುದು<br>• ಕಥೆಗಳನ್ನು ವಿಶ್ಲೇಷಣೆ ಮಾಡುವುದು (ಉದಾ : ಕಾಗೆಯಿಂದ ನರಿಯು ರೊಟ್ಟಿಯನ್ನು ಕಸಿದುಕೊಂಡ ಕಥೆ)<br>'ನರಿಯೂ ಮಾಡಿದ್ದು ಸರಿಯೇ?' |
| • ಪಂಚೇಂದ್ರಿಯಗಳ ಸಹಾಯದಿಂದ ವಸ್ತುಗಳು/ಜೀವಜಾಲಗಳು ಎಂಬಿವುಗಳ ಶಬ್ದಗಳನ್ನು ಅನುಕರಿಸಲು ಸಾಧ್ಯವಾಗುವುದು. | • ಶಬ್ದ ಗುರುತಿಸುವ ಆಟ (ಕಾಗೆ ಕೂಗುವ ಶಬ್ದ ಕೆಮ್ಮುವ ಶಬ್ದ...) | • ಶಬ್ದನ್ನು ಗುರುತಿಸುವ ಆಟ (ಕಾಗೆ ಕೂಗುವ ಶಬ್ದ, ಕೆಮ್ಮುವ ಶಬ್ದ) |
| • ಪ್ರಾಣಿ – ಪಕ್ಷಿಗಳಿಗೆ ಸಂಬಂಧಿಸಿದ ಕಾರ್ಯಕಾರಣ ಪ್ರಶ್ನೆಗಳನ್ನು ಕೇಳಲು ಸಾಧ್ಯವಾಗುವುದು? (ಬೆಕ್ಕು ಹಾರಾಡದಿರಲು ಕಾರಣವೇನು?) | • ಸುತ್ತಮುತ್ತಲಿನ ವಸ್ತುಗಳ ಕುರಿತಾದ ಪ್ರಶ್ನೋತ್ತರ ಪದ್ಯಗಳನ್ನು ಹಾಡಲು<br>ಉದಾ : ಯಾಕಾಗಿ..... ಯಾಕಾಗಿ ಪದ್ಯ | • ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದ ಪ್ರಶ್ನೋತ್ತರ ಹಾಡುಗಳನ್ನು ಹಾಡುವುದು<br>• ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದ ಒಗಟುಗಳನ್ನು ಹೇಳುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ವಸ್ತುಗಳ ಭಾಗಗಳು ಹಾಗೂ ಪೂರ್ಣ ವಸ್ತುಗಳೊಳಗಿನ ಸಂಬಂಧವನ್ನು ವಿವರಿಸಲು ಸಾಧ್ಯವಾಗುವುದು. | • ಬಯಲು ಪ್ರವಾಸ (ಕಾಣುವ ಜೀವಿಗಳನ್ನು ಗುರುತಿಸಿ ಹೆಸರು ಹೇಳುವುದು, ವಿಶೇಷತೆಗಳನ್ನು ಹೇಳುವುದು).<br>• ಚಿತ್ರಓದು | • ಬಯಲು ಪ್ರವಾಸ (ಪ್ರಾಣಿಗಳು, ಚಿಟ್ಟೆಗಳು, ಮೃಗಗಳು, ಪಕ್ಷಿಗಳು) ಎಂಬಿವುಗಳನ್ನು ಗುರುತಿಸುವುದು. ವಿಶೇಷತೆಗಳನ್ನು ಹೇಳುವುದು. ವಾಸಸ್ಥಳವನ್ನು ಗುರುತಿಸುವುದು.<br>• ವಿವಿಧ ಜೀವಿಗಳನ್ನು ಪ್ರತ್ಯಕ್ಷವಾಗಿ ಕಾಣುವುದು. |
| • ಬಣ್ಣ, ಆಕಾರ, ಗಾತ್ರ, ಭಾರ, ಉದ್ದ, ದಪ್ಪ ಮೊದಲಾಗಿ ಒಂದಕ್ಕಿಂತ ಹೆಚ್ಚು ಮಾನದಂಡಗಳನ್ನು ಪರಿಗಣಿಸಿ ವಸ್ತುಗಳನ್ನು ವರ್ಗೀಕರಿಸಿ ಕ್ರಮೀಕರಿಸಲು ಸಾಧ್ಯವಾಗುವುದು.<br>• ಸಸ್ಯಗಳನ್ನು, ಜಂತುಗಳನ್ನು ಪ್ರೀತಿಸುವುದಕ್ಕೂ, ಪರಿಪಾಲಿಸುವುದಕ್ಕೂ, ಸಂರಕ್ಷಿಸುವುದಕ್ಕೂ ಸಾಧ್ಯವಾಗುವುದು. | • ಬಯಲುಪ್ರವಾಸ<br>• ಅನುಭವಗಳನ್ನು ಹೇಳುವುದು. | • ಬಯಲು ಪ್ರವಾಸ.<br>• ಅನುಭವಗಳನ್ನು ಹಂಚುವುದು.<br>• ಪ್ರಕೃತಿಯಲ್ಲಿ ಉಂಟಾಗುವ ಬದಲಾವಣೆಗಳನ್ನು ಹೇಳುವುದು. |
| • ವಿವಿಧ ಬಗೆಯ ಹಾಡುಗಳು (ಗುಂಪುಹಾಡು, ಬಾಯಿತಾಳ, ಪ್ರಶ್ನೋತ್ತರ ಹಾಡು, ಕಥನಕವನ, ಸಂಭಾಷಣಾಹಾಡು....) ಮೊದಲಾದವುಗಳನ್ನು ಶ್ರದ್ಧೆಯಿಂದ ಆಲಿಸುವುದಕ್ಕೂ ಆಸ್ವಾದಿಸುವುದಕ್ಕೂ. | • ನಿರೀಕ್ಷಣೆ ಮಾಡಿ ಹೇಳುವುದು<br>• ಅನುಭವಿಸಿ ತಿಳಿಯುವುದು<br>• ಪ್ರಕೃತಿಗೆ ಸಂಬಂಧಿಸಿದ ಪದ್ಯಗಳು, ಕಥೆಗಳನ್ನು ಹಾಡುವುದು/ಹೇಳುವುದು.<br>(ಹಗಲು, ರಾತ್ರಿ)<br>ಹಗಲು – ಸೂರ್ಯ<br>ರಾತ್ರಿ – ಚಂದ್ರ, ನಕ್ಷತ್ರಗಳು | • ನಿರೀಕ್ಷಣೆ ಮಾಡಿ ಹೇಳುವುದು<br>• ಅನುಭವಿಸಿ ತಿಳಿಯುವುದು<br>• ಕಥೆ/ಪದ್ಯ ಮಂಡಿಸುವುದು (ಬೆಳಿಗ್ಗೆ – ಮಧ್ಯಾಹ್ನ – ರಾತ್ರಿ, ಸೂರ್ಯ–ಪ್ರಕಾಶ – ತಾಪ –ಬಿಸಿಲು....)ಚಂದ್ರ – ನಕ್ಷತ್ರ |
| • ಪ್ರಕೃತಿಯನ್ನು ಆಸ್ವಾದಿಸುವುದಕ್ಕೂ ಚಿತ್ರಗಳ ಮೂಲಕ ಪ್ರಕಟಪಡಿಸುವುದಕ್ಕೂ ಬಣ್ಣಗಳನ್ನು ನೀಡುವುದಕ್ಕೂ ಸಾಧ್ಯವಾಗುವುದು. | • ಚಿತ್ರಗಳನ್ನು ಪೂರ್ತಿಗೊಳಿಸುವುವು(ಹೂವು, ಮನೆ,.....).<br>• ಸಮಸ್ಯಾ ಚಿತ್ರಗಳನ್ನು(Picture Puzzle) ಪೂರ್ತಿಗೊಳಿಸುವುದು. | • ಚಿತ್ರಗಳನ್ನು ಪೂರ್ತಿಗೊಳಿಸುವುದು (ಹೂವು, ವಾಹನಗಳು, ಶರೀರ ಭಾಗಗಳು, ನಮೂನೆಗಳು).<br>• ಸಮಸ್ಯಾ ಚಿತ್ರಗಳನ್ನು(Picture Puzzle) ಪೂರ್ತಿಗೊಳಿಸುವುದು. |



# 6 ವಿಷಯ-ಯೋಜನೆಗಳು

## ವಿಷಯ ಯೋಜನೆ ಎಂದರೇನು? ಯಾಕೆ?ಹೇಗೆ?

ಪ್ರಿಸ್ಕೂಲ್ ಮಗು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ವಿವಿಧ ವಿಕಾಸ ಮಂಡಲಗಳಿಗೆ ಸಂಬಂಧಪಟ್ಟಂತೆ ಗಳಿಸಬೇಕಾದ ಸಾಮರ್ಥ್ಯಗಳಿರುವ ಚಟುವಟಿಕೆಗಳನ್ನು ಒಂದು ವಿಷಯದೊಡನೆ ಸೇರಿಸಿ ಮಂಡಿಸುವುದನ್ನು ವಿಷಯ ಯೋಜನೆ ಎನ್ನುವರು. ಮಗುವಿನ ಪೂರ್ವಜ್ಞಾನ, ವಿಕಾಸ ಹಂತ, ಆಸಕ್ತಿ ಎಂಬಿವುಗಳನ್ನು ಪರಿಗಣಿಸಿಕೊಂಡು ಚಟುವಟಿಕೆಗಳನ್ನು ಆಯ್ಕೆ ಮಾಡಬೇಕು. ಮೂರು, ನಾಲ್ಕು ವರ್ಷದವರನ್ನು ಪರಿಗಣಿಸಿಕೊಂಡಿರುವ ಚಟುವಟಿಕೆಗಳನ್ನು ಫಲಪ್ರದವಾಗಿ ಒಂದುಗೂಡಿಸಿ ನೀಡಲು ವಿಷಯ ಯೋಜನೆಯು ಸಹಕಾರಿಯಾಗಿದೆ.

ಒಂದು ಪ್ರಧಾನ ವಿಷಯ, ಅದರೊಳಗೆ ಉಪವಿಷಯವಾಗಿ ಪರಿಗಣಿಸಬೇಕಾದವುಗಳನ್ನು ಮಗುವಿನ ದೃಷ್ಟಿಕೋನದಿಂದ ನೋಡಬೇಕಾಗಿದೆ. ವಿಷಯದಲ್ಲಿ/ಉಪವಿಷಯದಲ್ಲಿ ಸೇರಿಸಬೇಕಾದ ವಿವಿಧ ವಿಕಾಸ ಮಂಡಲಗಳನ್ನು ಕಂಡುಹಿಡಿಯುವುದು ಮುಂದಿನ ಹಂತವಾಗಿದೆ. ವಿಷಯ/ಉಪವಿಷಯಗಳಿಗೆ ಸಂಬಂಧಪಟ್ಟ ಆಶಯಗಳು ನಿರ್ದಿಷ್ಟ ಆಶಯಗಳೊಂದಿಗೆ ಸಂಬಂಧಿಸಲ್ಪಡುವ ಕಲಿಕಾನುಭವಗಳು ಎಂಬಿವುಗಳನ್ನು ಬಳಿಕ ತೀರ್ಮಾನಿಸಲಾಗುವುದು.

ಆರಂಭದಲ್ಲಿ ಪ್ರತಿಯೊಂದು ವಿಷಯವನ್ನು 5 ವಿಕಾಸ ಹಂತಗಳನ್ನಾಗಿಸಿ ವೆಬ್ ಮಾದರಿಯಲ್ಲಿ ಸಮಗ್ರ ಯೋಜನೆ ತಯಾರಿಸಬೇಕು.

ಚಿತ್ರದಲ್ಲಿರುವಂತೆ ವಿಷಯ, ವಿಕಾಸ ಮಂಡಲಗಳು, ಚಟುವಟಿಕೆ ಸೂಚನೆಗಳು ಎಂಬಿವುಗಳನ್ನು ರೂಪೀಕರಿಸುವಾಗ ಪ್ರತಿಯೊಂದು ವಿಷಯದ ಸಾಮರ್ಥ್ಯಗಳು, ಆಶಯಗಳು ಎಂಬಿವುಗಳನ್ನು ಪರಿಗಣಿಸಬೇಕು.




ಪ್ರತಿಯೊಂದು ವಿಕಾಸ ಮಂಡಲಗಳಿಗೆ ಸಂಬಂಧಪಟ್ಟ ಸಾಮರ್ಥ್ಯಗಳನ್ನು ಶಿಶುಸ್ನೇಹಿ ರೀತಿಯಲ್ಲಿ ಮಕ್ಕಳಿಗೆ ತಲುಪಿಸಲು ವಿಷಯ ಯೋಜನೆಯ ಮೂಲಕ ಪ್ರಯತ್ನಿಸಲಾಗುವುದು. ಸೂಕ್ತವಾದ ಆಟದ ಚಟುವಟಿಕೆಗಳ ಮೂಲಕ ಹಾದುಹೋಗುವ ಮಗುವಿಗೆ ಆಶಯ ರೂಪೀಕರಿಸಲು ಈ ಮೂಲಕ ಸಾಧ್ಯವಾಗುವುದು.

## ವಿಷಯ ಯೋಜನೆಯನ್ನು ದಾಖಲಿಸುವಾಗ ಬರೆಯುವಾಗ ಸೇರಿಸಬೇಕಾದವುಗಳು

- ವಿಷಯದ ಹೆಸರು/ಉಪ ವಿಷಯಗಳು

- ಸಾಮರ್ಥ್ಯಗಳು
- ರೂಪೀಕರಿಸುವ ಆಶಯಗಳು
- ಪ್ರತಿಯೊಂದು ವಿಕಾಸ ಹಂತದಲ್ಲೂ ಒಳಪಡಿಸಬೇಕಾದ ಶಿಶು ಚಟುವಟಿಕೆಗಳು
- ನಿರೀಕ್ಷಿಸುವ ಸಮಯ
- ಚಟುವಟಿಕೆಗಳ ಪ್ರಕ್ರಿಯಾ ವಿವರಣೆಗಳು
- ಅನುರೂಪೀಕರಣ ಸಾಧ್ಯತೆಗಳು
- ಐ.ಸಿ.ಟಿ. ಯ ಸಾಧ್ಯತೆಗಳು
- ಮೌಲ್ಯಮಾಪನ ಸೂಚನೆಗಳು

## ವಿಷಯಗಳನ್ನು ಕ್ರಮೀಕರಿಸಿರುವ ರೀತಿ

ಪ್ರಿಸ್ಕೂಲ್‌ನಲ್ಲಿ 30 ವಿಷಯಗಳನ್ನು ಪರಿಗಣಿಸಲಾಗಿದೆ. ಇದರಲ್ಲಿ 26 ಪ್ರಧಾನ ವಿಷಯಗಳು, 4 ಉಪವಿಷಯಗಳೂ ಆಗಿವೆ. ಪ್ರಧಾನವಾಗಿ ದಿನಾಚರಣೆಗಳನ್ನು ಉಪವಿಷಯಗಳನ್ನಾಗಿ ಪರಿಗಣಿಸಲಾಗಿದೆ. ದಿನಾಚರಣೆಗಳಿಗೆ ಸಂಬಂಧಿಸಿ ಮಕ್ಕಳು ಪೂರ್ತಿಗೊಳಿಸಬೇಕಾದ ಅನಿವಾರ್ಯವಾದ ಚಟುವಟಿಕೆಗಳಿಗೆ ಒಂದೋ ಎರಡೋ ದಿವಸಗಳನ್ನು ಪರಿಗಣಿಸಿದರೆ ಸಾಕಾಗುವುದು. 3 ವರ್ಷದವನ ದೃಷ್ಟಿಕೋನದಲ್ಲಿ ಪ್ರಿಸ್ಕೂಲ್ ಎನ್ನುವುದು ಹೊಸ ಅನುಭವ ಕೇಂದ್ರವಾದುದರಿಂದ ಚೇತನಾ ಚಟುವಟಿಕೆಗಳನ್ನೂ ಸಿದ್ಧತಾ ಚಟುವಟಿಕೆಗಳನ್ನೂ ಮಾಡಬೇಕಾಗಿದೆ. ಜೂನಿನ ಮೊದಲ ದಿನಗಳಲ್ಲಿ ಇಂತಹ ಚಟುವಟಿಕೆಗಳನ್ನು ನಡೆಸಬೇಕಾಗಿರುವುದರಿಂದ ಜೂನಿನಲ್ಲಿ 2 ವಿಷಯಗಳನ್ನು ಮಾತ್ರವೇ ವಾರ್ಷಿಕ ಯೋಜನೆಯಲ್ಲಿ ನೀಡಲಾಗಿದೆ.

ವಿವಿಧ ಶಿಶು ವಿಕಾಸ ಮಂಡಲಗಳ ಸಾಮರ್ಥ್ಯಗಳು 3, 4 ಪ್ರಾಯವಿರುವ ಗುಂಪಿನ ಮಕ್ಕಳಿಗೆ ಲಭಿಸುವುದಕ್ಕೆ ಯೋಗ್ಯವಾದ ವಿಷಯವನ್ನು ಕಂಡುಹಿಡಿದು ಕಲಿಕಾ ಆಟಗಳನ್ನು ಅಧ್ಯಾಪಿಕೆ ನೀಡಬೇಕು. ಇಲ್ಲಿ ಮಕ್ಕಳ ಪರಿಸರಾನುಭವ, ಪ್ರಾದೇಶಿಕವಾದ ಪ್ರತ್ಯೇಕತೆಗಳು ಎಂಬಿವುಗಳನ್ನು ಪರಿಗಣಿಸಿ ಉಚಿತವಾದ ವಿಷಯ ಅಥವಾ ಉಪ ವಿಷಯವನ್ನು ತೀರ್ಮಾನಿಸಲು ಅಧ್ಯಾಪಿಕೆಗೆ ಸಾಧ್ಯ.

ಸಂಯೋಜಿತ ವಿಷಯಗಳನ್ನು ಕ್ಲಸ್ಟರುಗಳಾಗಿ ಪರಿಗಣಿಸಲಾಗಿದೆ. ಪ್ರತಿಯೊಂದು ತಿಂಗಳಲ್ಲಿ ಒಂದು ಕ್ಲಸ್ಟರ್ ಎಂಬಂತೆ ವಿನಿಮಯಕ್ಕಾಗಿ ಪರಿಗಣಿಸಲಾಗುವುದಾಗಿದೆ. ಆದರೂ ವಿಷಯ ಯೋಜನೆ ಮಾಡುವಾಗ ಪ್ರತ್ಯೇಕ ಪ್ರತ್ಯೇಕ ವಿಷಯಗಳಾಗಿ ಕಾಣುವುದು ಹೆಚ್ಚು ಸೂಕ್ತವೆನಿಸುವುದು.

ಪ್ರತಿಯೊಂದು ವಿಷಯಕ್ಕೂ 5 ವಿಕಾಸ ಮಂಡಲಗಳನ್ನು ಮಾಡಿ ವೆಬ್ ಮಾದರಿಯಲ್ಲಿ ಸಮಗ್ರ ಯೋಜನೆಯನ್ನು ನಿರ್ವಹಿಸಬೇಕು.

ಚಿತ್ರದಲ್ಲಿರುವಂತೆ ವಿಷಯ, ವಿಕಾಸ ಮಂಡಲಗಳು, ಚಟುವಟಿಕಾ ಸೂಚನೆಗಳು ಎಂಬಿವುಗಳನ್ನು ರೂಪೀಕರಿಸುವಾಗ ಪ್ರತಿಯೊಂದು ವಿಷಯದ ಸಾಮರ್ಥ್ಯಗಳು, ಆಶಯಗಳು ಎಂಬಿವುಗಳನ್ನು ಪರಿಗಣಿಸಬೇಕು.

ಪ್ರತಿಯೊಂದು ವಿಕಾಸ ಮಂಡಲಗಳಿಗೆ ಸಂಬಂಧಿಸಿದ ಸಾಮರ್ಥ್ಯಗಳನ್ನು ಶಿಶುಸ್ನೇಹೀ ರೀತಿಯಲ್ಲಿ ಮಕ್ಕಳಿಗೆ ತಲುಪಿಸಲು ವಿಷಯ ಯೋಜನೆಗಳ ಮೂಲಕ ಪ್ರಯತ್ನಿಸಲಾಗುವುದು.

## ಪ್ರಾಯೋಗಿಕ ಪರೀಕ್ಷೆಗಳು (ಟ್ರೈಔಟ್)

ಕೆಲವು ವಿಷಯಗಳು, ಅದಕ್ಕೆ ಸಂಬಂಧಿಸಿದ ವಿಕಾಸ ಮಂಡಲಗಳು ಮತ್ತು ಅದಕ್ಕೆ ಹೊಂದಿಕೆಯಾಗುವ ಚಟುವಟಿಕಾ ಸೂಚನೆಗಳನ್ನು, ಪ್ರಾಯೋಗಿಕ ಪರೀಕ್ಷೆಯ ಕ್ಲಾಸ್ (ಟ್ರೈ ಔಟ್) ಆಗಿ ವಿವಿಧ ಪ್ರೀಸ್ಕೂಲ್‌ಗಳಲ್ಲಿ ಪರೀಕ್ಷಿಸಿ ನೋಡಲಾಗಿತ್ತು. ಇದಕ್ಕಾಗಿ ತರಕಾರಿಗಳು, ಪಕ್ಷಿಗಳು ಎಂಬೀ ವಿಷಯಗಳನ್ನು ಆರಿಸಲಾಗಿತ್ತು. ಪ್ರಾಯೋಗಿಕ ಪರೀಕ್ಷೆಯ ಕ್ಲಾಸ್ ನಡೆಸಿದ ಅಧ್ಯಾಪಕರುಗಳ ಸ್ವಯಂ – ಮೌಲ್ಯಮಾಪನವು, ಕ್ಲಾಸ್ ನಿರೀಕ್ಷಿಸಿದ ತಂಡಗಳ ನಿರೀಕ್ಷಣ ವಿಶ್ಲೇಷಣಾ ವರದಿಯನ್ನು ಪಾಠಯೋಜನೆ ಮುಂದುವರಿಕೆಯಾಗಿ ಈ ಅಧ್ಯಾಯದಲ್ಲಿ ನೀಡಲಾಗಿದೆ.

ಟ್ರೈಔಟ್ ನಡೆಸಿ ಮನದಟ್ಟಾದವುಗಳಾಗಿದ್ದರೂ ಎಲ್ಲಾ ಸಂದರ್ಭಗಳಲ್ಲೂ ಇದು ಯಶಸ್ವಿಯಾಗಬೇಕೆಂದಿಲ್ಲ. ಮಕ್ಕಳ ಮಟ್ಟ, ಮತ್ತಿತ್ತರ ಸಂದರ್ಭಗಳು ಎಂಬಿವುಗಳನ್ನು ಪರಿಗಣಿಸಿ ಅಧ್ಯಾಪಕರು ಅಗತ್ಯವಿರುವ ಬದಲಾವಣೆಗಳನ್ನು ಯೋಜನೆಯಲ್ಲಿ ಒಳಪಡಿಸಬೇಕು.

## ವಿಷಯ : ತರಕಾರಿಗಳು

| (3+) | (4+) |
|---|---|
| **ಆಶಯಗಳು**<br>1. ವಿವಿಧ ತರಕಾರಿಗಳಿವೆ.<br>2. ಬಣ್ಣದಲ್ಲೂ, ಗಾತ್ರದಲ್ಲೂ ಅವುಗಳು ವಿಭಿನ್ನವಾಗಿವೆ.<br>3. ಅಡುಗೆ ಮಾಡಿಯೂ ಹಸಿಯಾಗಿಯೂ ತರಕಾರಿಗಳನ್ನು ತಿನ್ನಬಹುದು. | 1. ವಿವಿಧ ತರಕಾರಿ ಕೃಷಿ ಮಾಡುತ್ತೇವೆ.<br>2. ಮನೆಯಲ್ಲಿ ತರಕಾರಿ ಗಿಡಗಳನ್ನು ನೆಟ್ಟು ಬೆಳೆಸುತ್ತೇವೆ.<br>3. ಅಡುಗೆ ಮಾಡಿಯೂ, ಹಸಿಯಾಗಿಯೂ ತರಕಾರಿಗಳನ್ನು ತಿನ್ನುತ್ತಾರೆ.<br>4. ಗಾತ್ರದಲ್ಲಿಯೂ, ಆಕಾರದಲ್ಲಿಯೂ, ಬಣ್ಣದಲ್ಲೂ ವ್ಯತ್ಯಾಸವಿದೆ.<br>5. ಬಳ್ಳಿಯಲ್ಲೂ, ಗಿಡದಲ್ಲೂ ತರಕಾರಿಗಳು ಬೆಳೆಯುತ್ತವೆ.<br>6. ಆಹಾರದಲ್ಲಿ ತರಕಾರಿಗಳನ್ನು ಸೇರಿಸಬೇಕು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ಸ್ವತಂತ್ರವೂ, ನಿಯಂತ್ರಿತವೂ ಆದ ಸರಳ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುತ್ತದೆ. | • ಹಣ್ಣು – ತರಕಾರಿ ಆಟ<br>• ಕೆರೆ – ದಡ ಆಟ (ಹಣ್ಣು ಒಳಗೆ, ತರಕಾರಿ ಹೊರಗೆ) | • ಹಣ್ಣು – ತರಕಾರಿ ಆಟ<br>• ಕೆರೆ – ದಡ ಆಟ (ಹಣ್ಣು ಒಳಗೆ, ತರಕಾರಿ ಹೊರಗೆ)) |
| • ಸೂಕ್ಷ್ಮಪೇಶಿಗಳನ್ನು ಒಂದುಗೂಡಿಸಿ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುತ್ತದೆ. | • ಸಸ್ಯಗಳು, ತರಕಾರಿಗಳು ಎಂಬಿವುಗಳ ಚಿತ್ರದಲ್ಲಿ ಕ್ರಯೋನ್ ಉಪಯೋಗಿಸಿ ಬಣ್ಣ ಕೊಡುವುದು.<br>• ಕಟೌಟ್ ಚಿತ್ರ ರಚಿಸಿ ಬಣ್ಣ ಹಚ್ಚುವುದು.<br>• ತರಕಾರಿಗಳ ಚಿತ್ರಗಳನ್ನು ಅಂಟಿಸುವುದು | • ಮಡಲಕಡ್ಡಿ, ಕ್ರಯೋನ್, ಚೋಕ್, ಸ್ಲೇಟ್, ಪೆನ್ಸಿಲ್ ಎಂಬಿವುಗಳನ್ನುಪಯೋಗಿಸಿ ಬಣ್ಣ ಹಚ್ಚುವುದು.<br>• ಕಟೌಟ್ ಚಿತ್ರಗಳನ್ನು ರಚಿಸಿ ಯೋಗ್ಯವಾದ ಬಣ್ಣ ಹಚ್ಚುವುದು.<br>• ತರಕಾರಿಗಳ ಚಿತ್ರಗಳನ್ನು ಕತ್ತರಿ ಉಪಯೋಗಿಸಿ ತುಂಡರಿಸಿ ಅಂಟಿಸುವುದು.<br>• ಬೊಂಬೆ ನಿರ್ಮಾಣ (Finger puppet) |
| • ಅಡುಗೆಗೆ ಸಂಬಂಧಿಸಿದ ಉಪಕರಣಗಳನ್ನು ಉಪಯೋಗಿಸಿ ಚಟುವಟಿಕೆಯಲ್ಲಿ ತೊಡಗುವುದು. | • ತರಕಾರಿಗಳನ್ನು ಮಕ್ಕಳು ತುಂಡರಿಸುವರು. ಅಧ್ಯಾಪಿಕೆಯ ಸಹಾಯ | • ಅಧ್ಯಾಪಿಕೆಯ ಸಹಾಯದೊಂದಿಗೆ ಕತ್ತಿ ಉಪಯೋಗಿಸಿ ತರಕಾರಿ ತುಂಡರಿಸುವುದು, ಸಲಾಡ್ ಮಾಡಿ ವಿತರಣೆ ಮಾಡುವುದು.<br>• ಅಡುಗೆಗೆ ಸಂಬಂಧಿಸಿದ ಉಪಕರಣಗಳನ್ನು ಉಪಯೋಗಿಸಿ ಚಟುವಟಿಕೆಗಳಲ್ಲಿ ಭಾಗವಹಿಸುವುದು. |

| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ನೋಡಿ, ಆಲಿಸಿ ಅರ್ಥೈಸಿದ ಕಾರ್ಯಗಳನ್ನು ಆಶಯ ನಷ್ಟವಾಗದೇ ಇನ್ನುಳಿದವರೊಂದಿಗೆ ಹಂಚಿಕೊಳ್ಳುವುದು. | • ಮನೆಯ ತರಕಾರಿಗಳ ಕುರಿತು ಹೇಳುವುದು.<br>• ಕಂಡುಹಿಡಿಯುವ, ಹೇಳುವ ಆಟ (ಬಣ್ಣ, ಗಾತ್ರ, ರುಚಿ)<br>• ತರಕಾರಿಗಳಿಗೆ ಸಂಬಂಧಿಸಿದ ಚಿತ್ರ ಓದುವುದು<br>• ಕಥೆ ಕೇಳುವುದು– ಹೇಳುವುದು<br>• ಪದ್ಯ ಹಾಡುವುದು<br>• ತರಕಾರಿಗಳ ಹೆಗ್ಗಳಿಕೆ ಹೇಳುವುದು. | • ಮನೆಯಲ್ಲಿ ಬೆಳೆದ ಉಪಯೋಗಿಸುವ ತರಕಾರಿಗಳು – ವೈಯಕ್ತಿಕ ಭಾಷಣ<br>• ಕಂಡು ಹಿಡಿಯುವ – ಹೇಳುವ ಆಟ (ಗಾತ್ರ, ಬಣ್ಣ, ಆಕೃತಿ, ರುಚಿ, ಪರಿಮಳ, ಗಿಡ...........)<br>• ಚಿತ್ರ ಓದುವುದು<br>• ಕಥೆ ಕೇಳುವುದು – ನಿರ್ಮಿಸುವುದು – ಹೇಳುವುದು.<br>• ಪದ್ಯ ಕೇಳುವುದು, ನಿರ್ಮಿಸುವುದು – ಹಾಡುವುದು<br>• ಬೊಂಬೆಯಾಟ<br>• ಹೆಗ್ಗಳಿಕೆ ಹೇಳುವುದು (ಪ್ರತ್ಯೇಕತೆ, ಪ್ರಯೋಜನ) |
| • ಕಂಡುಹಿಡಿಯುವ ಚಟುವಟಿಕೆಯಲ್ಲಿ ಭಾಗವಹಿಸಿ ನಿಗಮನ ರೂಪೀಕರಿಸಿ ಪ್ರಕಟಪಡಿಸಲು ಸಾಧ್ಯವಾಗುವುದು. | • ತರಕಾರಿಗಳ ಕುರಿತು ಹೇಳುವುದು. | • ಮುಳುಗಿತೇ? ತೇಲಿತೇ? – ಸರಳ ಪ್ರಯೋಗ<br>• ತರಕಾರಿಗಳ ಪ್ರತ್ಯೇಕತೆಗಳನ್ನು ಹೇಳುವುದು. |
| • ವಸ್ತುಗಳನ್ನು ತುಲನಾತ್ಮಕವಾಗಿ ನೋಡಿ ಗಣಿತ ಭಾಷೆಯಲ್ಲಿ ಹೇಳುವುದು. | • ಗುಂಪಿನಲ್ಲಿ ಚಿಕ್ಕದು ದೊಡ್ಡದು ಕಂಡುಹಿಡಿದು ಹೇಳುವುದು.<br>• ತರಕಾರಿಗಳಿಗೆ ದೊಡ್ಡದು, ಚಿಕ್ಕದು ಎಂಬಂತೆ ಬೇರೆ ಬೇರೆ ಬಣ್ಣ ಕೊಡುವುದು.<br>• ಚಿತ್ರ ನೋಡಿಯೂ, ತರಕಾರಿ ನೋಡಿಯೂ ಎಣಿಸಿ ಹೇಳುವುದು. | • ದೊಡ್ಡ ಗುಂಪು, ಸಣ್ಣ ಗುಂಪೆಂದು ವಿಂಗಡಿಸುವುದು<br>• ದೊಡ್ಡದಕ್ಕೂ, ಚಿಕ್ಕದಕ್ಕೂ ವೃತ್ತ ಹಾಕುವುದು<br>• 1–5ರವರೆಗೆ ಎಣಿಸಿ ಹೇಳುವುದು.<br>• ಗಣಿತ ಪದ್ಯ ಹಾಡುವುದು. ಪದ್ಯಗಳನ್ನು ಆಧಾರವಾಗಿರಿಸಿ ಎಷ್ಟೆಂದು ಹೇಳುವುದು. |







| ಸಾಮರ್ಥ್ಯಗಳು | ಕಲಿಕಾನುಭವಗಳು (3+) | ಕಲಿಕಾನುಭವಗಳು (4+) |
|---|---|---|
| • ನಮೂನೆಗಳನ್ನು ಕಂಡುಹಿಡಿಯಲೂ ಅದನ್ನು ಸೌಂದರ್ಯಾತ್ಮಕವಾಗಿ ವಿನ್ಯಾಸಗೊಳಿಸಲು ಸಾಧ್ಯವಾಗುವುದು. | • ತರಕಾರಿ ಉಪಯೋಗಿಸಿ ವಿವಿಧ ನಮೂನೆಗಳ ರೂಪ ನಿರ್ಮಿಸುವುದು | • ತರಕಾರಿ ಉಪಯೋಗಿಸಿ ವಿವಿಧ ರೂಪ ನಿರ್ಮಿಸಿ ಅದರ ನಮೂನೆ ಕಂಡು ಹಿಡಿದು ಹೇಳುವುದು. |
| • ದ್ವಿಮಾನ, ತ್ರಿಮಾನ ನಿರ್ಮಾಣಗಳ ಆಶಯಗಳನ್ನು ಆವಿಷ್ಕರಿಸಲು ಸಾಧ್ಯವಾಗುವುದು. | • ಆವೆಮಣ್ಣು, ಮೈದಾವನ್ನುಪಯೋಗಿಸಿ ತರಕಾರಿ ರೂಪಗಳನ್ನು ನಿರ್ಮಿಸುವರು.<br>• ಕಾರ್ಡಿನಲ್ಲಿ ತರಕಾರಿ ಚಿತ್ರಗಳಿಗೆ ಗಮ್ ಅಂಟಿಸಿ ಹೊೖಗೆ ಹಚ್ಚಿ ರೂಪ ಕೊಡುವುದು. (ಸೇಂಡ್ ಕೊಲೇಶ್ ತಯಾರಿ) | • ತರಕಾರಿಗಳ ಕೊಲೇಷ್ ನಿರ್ಮಾಣ<br>• ಆವೆಮಣ್ಣು, ಪ್ಲಾಸ್ಟಿಕ್, ಮೈದಾ ಉಪಯೋಗಿಸಿ ತರಕಾರಿ ಮಾದರಿಗಳನ್ನು ನಿರ್ಮಿಸುವುದು.<br>• ಬೇರೆ ವಸ್ತುಗಳನ್ನು ಉಪಯೋಗಿಸಿ ತರಕಾರಿ ರೂಪ ನಿರ್ಮಿಸುವುದು (ಮೊಟ್ಟೆ ಚಿಪ್ಪು)<br>• ಹೊೖಗೆ ಕೊಲೇಷ್ ತಯಾರಿಸುವುದು.<br>• ವೆಜಿಟೇಬಲ್ ಪ್ರಿಂಟಿಂಗ್ (ಬಟ್ಟೆ, ಕಾಗದ) |
| • ಸರಳ ಆಶಯಗಳನ್ನು ವಿವಿಧ ಕಲಾರೂಪಗಳಲ್ಲಿ ಪ್ರದರ್ಶಿಸಲು ಸಾಧ್ಯವಾಗುವುದು | • ಬೊಂಬೆ ನಾಟಕ ನೋಡುವುದು (ತರಕಾರಿ ತಿನ್ನುವುದರ ಅವಶ್ಯಕತೆ)<br>• ಸಂಖ್ಯಾಹಾಡು<br>• ತರಕಾರಿ ಸಂತೆ – ರೋಲ್ ಪ್ಲೇ<br>• ಆಟಗಳು | • ಬೊಂಬೆನಾಟಕ – ನೋಡುವುದು ಪ್ರದರ್ಶಿಸುವುದು (ತರಕಾರಿ ದಿನನಿತ್ಯವು ಸೇವಿಸುವುದು ಅವಶ್ಯಕವಾಗಿದೆ)<br>• ಅಭಿನಯ ಗೀತೆ<br>• ತರಕಾರಿ ಸಂತೆ–ರೋಲ್ ಪ್ಲೇ |
| • ನಿರ್ಮಾಣ ಚಟುವಟಿಕೆಗಳನ್ನು ಗುಂಪಾಗಿಯೂ, ಹಿರಿಯರ ಜೊತೆ ಸೇರಿಯೂ ಮಾಡಲು ಸಾಧ್ಯವಾಗುವುದು | • ಅಧ್ಯಾಪಿಕೆಯ ಸಹಾಯದೊಂದಿಗೆ ಸಲಾಡ್ ವಿತರಣೆ.<br>• ನಿಂಬೆ ಶರಬತ್ತು ತಯಾರಿ ಮತ್ತು ವಿತರಣೆ | • ತರಕಾರಿ ಸಸಿ ನೆಡುವುದು (ತರಕಾರಿ ತೋಟ/ಜೈವಕೃಷಿ ತೋಟ)<br>• ಸಲಾಡ್ ತಯಾರಿ – ವಿತರಣೆ |

## ವಿಷಯ : ತರಕಾರಿಗಳು

**ಚಟುವಟಿಕೆ** : ಕಥೆ ಹೇಳುವುದು (4+)
**ವಿಕಾಸ ಮಂಡಲ** : ಭಾಷಾ ವಿಕಾಸ, ಸೃಜನಾತ್ಮಕವೂ, ಸೌಂದರ್ಯಾತ್ಮಕವೂ ಆದ ವಿಕಾಸ
**ಬಹುಮುಖ ಬುದ್ಧಿಶಕ್ತಿ** : ಭಾಷಾಪರವಾದ ಬುದ್ಧಿ

### ಸಾಮರ್ಥ್ಯಗಳು

- ಸರಳವಾದ ಕಥೆಗಳನ್ನು ಕೇಳಿ ಆಸ್ವಾದಿಸುತ್ತಾರೆ.
- ಕೇಳಿದ ಕಥೆಯ ಆಶಯಗಳನ್ನು ಗ್ರಹಿಸಿ ಸ್ವಂತ ಭಾಷೆಯಲ್ಲಿ ಪ್ರಕಟಿಸುತ್ತಾರೆ. ಮಂಡಿಸುತ್ತಾರೆ
- ವಿವಿಧ ತರಕಾರಿಗಳನ್ನು ಗುರುತಿಸುತ್ತಾರೆ.

*ಸಾಮಾಗ್ರಿಗಳು : ತರಕಾರಿಗಳ ಕೋಲುಗೊಂಬೆ*

**ನಿರೀಕ್ಷಿತ ಉತ್ಪನ್ನಗಳು** : ಕಥೆ ಹೇಳುವ ಸಾಮರ್ಥ್ಯ, ಬಣ್ಣ ಹಚ್ಚುವುದು, ವಿಭಿನ್ನ ರೀತಿಗಳಲ್ಲಿ ಮಂಡನೆ, ಕೋಲುಬೊಂಬೆ
ಸಮಯ : 45 ಮಿನಿಟ್

### ಚಟುವಟಿಕೆ/ಪ್ರಕ್ರಿಯೆ



<table>
<tr><th>ಚಟುವಟಿಕೆ</th><th>ಮೌಲ್ಯಮಾಪನ</th></tr>
<tr><td>
ಅಧ್ಯಾಪಿಕೆ ಪದಾರ್ಥ ಮಾಡಲು ಉಪಯೋಗಿಸುವ ತರಕಾರಿಗಳ ಕುರಿತು ಕೇಳುವುದು.<br><br>
ಮಕ್ಕಳು ಅದರ ಬಗ್ಗೆ ಪ್ರತಿಕ್ರಿಯಿಸುವರು.<br><br>
ಅಧ್ಯಾಪಿಕೆ ಬಳ್ಳಿಗಿಡಗಳಲ್ಲಿ ಆಗುವ ತರಕಾರಿಗಳ ಕುರಿತು ಒಂದು ಪದ್ಯವನ್ನು ಹಾಡುವುದು. ಮಕ್ಕಳೂ ಕೂಡ ಜೊತೆಗೆ ಹಾಡುವುದು.<br><br>
ಒಂದನೇ ಸಾಲು ಕೊಯ್ದಾಗ<br>
ಒಂದು ಬುಟ್ಟಿ ಹಾಗಲ<br>
ಹಾಗಲಕಾಯಿ ಕೊಯ್ದರೂ<br>
ಹಾಗಲಬಳ್ಳಿ ಕೊಯ್ಯದಿರಿ<br>
ಎರಡನೇ ಸಾಲು ಕೊಯ್ದಾಗ<br>
ಎರಡು ಬುಟ್ಟಿ ಕುಂಬಳ<br>
ಕುಂಬಳಕಾಯಿ ಕೊಯ್ದರೂ<br>
ಕುಂಬಳ ಬಳ್ಳಿ ಕೊಯ್ಯದಿರಿ<br><br>
ಅಧ್ಯಾಪಿಕೆಯ ಕುಂಬಳಕಾಯಿಯ ಕೋಲುಬೊಂಬೆಯನ್ನು ಎತ್ತಿ ತೋರಿಸುತ್ತಾರೆ. ಕುಂಬಳ ಕಾಯಿಯ ಕುರಿತು ಮಕ್ಕಳು ಅವರಿಗೆ ತಿಳಿದಿರುವ ವಿಚಾರಗಳನ್ನು ಹೇಳಲಿ. ಇನ್ನೂ ಕುಂಬಳ ಕಾಯಿಯ ಕುರಿತು ಒಂದು ಕಥೆ ಹೇಳಿದರೇನು? ಎಂದು ಟೀಚರ್ ಕೋಲು ಬೊಂಬೆಯನ್ನುಪಯೋಗಿಸಿ ಕಥೆ ಹೇಳುವುದು.<br><br>
**ಉರುಟು ಉರುಟಾದ ಕುಂಬಳಕಾಯಿ**<br><br>
ಚಂದು ಅಣ್ಣನು ತಳ್ಳುಗಾಡಿಯೊಂದಿಗೆ ಸಂತೆಗೆ ತಲುಪಿದನು. ತಳ್ಳುಗಾಡಿಯಲ್ಲಿ ತರಕಾರಿಗಳನ್ನು ಕೊಂಡು ಹೋಗಿ ಸಂತೆಯಲ್ಲಿ ಮಾರುವುದು ಇವನ ಕೆಲಸವಾಗಿತ್ತು.
</td><td>
• ಮಕ್ಕಳು ತರಕಾರಿಗಳ ಹೆಸರು ಹೇಳುತ್ತಾರೆ.
</td></tr>
</table>

| ಚಟುವಟಿಕೆ | ಮೌಲ್ಯಮಾಪನ |
|---|---|
| ಹಲವು ವಿಧದ ತರಕಾರಿಗಳನ್ನು ಪಡೆದು ಗಾಡಿಯಲ್ಲಿ ಹಾಕಿದರು. ಯಾವೆಲ್ಲಾ ತರಕಾರಿಗಳನ್ನು ಪಡೆದಿರಬಹುದು? ಎಂದು ಅಧ್ಯಾಪಿಕೆ ಮಕ್ಕಳಲ್ಲಿ ಕೇಳುವುದು.<br><br>ಮಕ್ಕಳು ಪ್ರತಿಕ್ರಿಯಿಸುವರು.<br><br>ರಾಶಿಯಲ್ಲಿ ಬೆಳೆದ ಒಂದು ಕುಂಬಳಕಾಯಿಯನ್ನು ಪಡೆದುಕೊಂಡನು.<br><br>'ಇದರ ಬೀಜವನ್ನು ಬಿತ್ತನೆಗಾಗಿ ತೆಗೆಯೋಣ'<br><br>ಎಂದು ಚಂದು ಅಣ್ಣನು ಮನಸ್ಸಿನಲ್ಲಿಯೇ ಆಲೋಚಿಸಿದನು.<br><br>*'ತರಕಾರಿ ಬೇಕೇ ತರಕಾರಿ .........ತರಕಾರಿ'*<br><br>ಗಾಡಿ ಹೀಗೆ ಹೋಗುತ್ತಿರುವಂತೆಯೇ ಕುಂಬಳಕಾಯಿ ರಸ್ತೆಗೆ ಬಿತ್ತು. ಕುಂಬಳಕಾಯಿ ರಸ್ತೆಗೆ ಬಿದ್ದ ವಿಷಯ ಚಂದು ಅಣ್ಣನಿಗೆ ಗೊತ್ತೇ ಆಗಲಿಲ್ಲ. ಕುಂಬಳಕಾಯಿ ಉರುಳಿ ಉರುಳಿ ಉರುಳಿ ಒಂದು ಮದುವೆಯ ಮನೆಗೆ ತಲುಪಿತು. ಅಲ್ಲಿ ಊಟಕ್ಕೆ ಬೇಕಾದ ತರಕಾರಿಗಳ ದೊಡ್ಡ ಸಾಲೇ ಇತ್ತು.<br><br>ಪಡವಲಕಾಯಿ, ಬೆಂಡೆಕಾಯಿ, ಹಾಗಲಕಾಯಿ, ಚೀನಿಕಾಯಿ, ಅಲಸಂಡೆ, ಟೊಮೇಟೋ ಚೀನಿಕಾಯಿ ಹೀಗೆ ತರಕಾರಿಗಳು (ಮಕ್ಕಳಿಗೆ ಹೇಳಲು ಸಂದರ್ಭ ನೀಡಬೇಕು) ತರಕಾರಿಗಳ ಕೋಲುಗೊಂಬೆಯನ್ನು ಪಯೋಗಿಸುವುದು. ಕಂಡಾಗ ಅವರು ತಳ್ಳುಗಾಡಿಯಿಂದ ಬಿದ್ದು ಉರುಳಿ ಉರುಳಿ ಇಲ್ಲಿ ತಲುಪಿದ ವಿಷಯವೇನೆಂದು ಕೇಳಿದರು. ಚೀನಿಕಾಯಿ ಹೇಳಿತು. | • ಮಕ್ಕಳು ತರಕಾರಿಗಳ ಹೆಸರನ್ನು ಹೇಳುವರು.<br>• ಮಕ್ಕಳು ಕಥೆಯ ಆರಂಭ ಹಂತದಲ್ಲಿ ಭಾಗವಹಿಸದಿದ್ದರೂ ಎರಡನೆಯ ಹಂತದಲ್ಲಿ ಸಕ್ರಿಯವಾಗಿ ಭಾಗವಹಿಸಲು ತೊಡಗಿದರು.<br>• ಮಕ್ಕಳು ಕಥೆಯ ಅಭಿನಯ ಸಾಧ್ಯತೆಯಿರುವ ಭಾಗಗಳನ್ನು ಬಹಳ ಉತ್ತಮವಾಗಿ ನಿರ್ವಹಿಸಿದರು.<br>• ಸೇಂಡ್ ಟ್ರೇಯಲ್ಲಿ ವಿನ್ಯಾಸಗೊಳಿಸುವುದು ಎಂಬ ಚಟುವಟಿಕೆಯಲ್ಲಿ ಮಕ್ಕಳು ಉತ್ಸಾಹದಿಂದ ಭಾಗವಹಿಸಿದರು. $3^+$ ಮಕ್ಕಳಿಗೆ $4^+$ ಮಕ್ಕಳು ಸಹಾಯ ಮಾಡುವುದು ಕಂಡು ಬಂತು.<br>• ಮಕ್ಕಳು ಕಥೆಯನ್ನು ಆಸ್ವಾದಿಸಿದರು. ಗಾಡಿ ಏನೆಂದು ತಿಳಿದುಕೊಳ್ಳಲು ಚಿತ್ರವನ್ನೂ ಮಾದರಿಯನ್ನೂ ಉಪಯೋಗಿಸಿದುದು ಫಲಪ್ರದವಾಯಿತು. |

| ಚಟುವಟಿಕೆ | ಮೌಲ್ಯಮಾಪನ |
|---|---|
| ನಮ್ಮೆಲ್ಲರನ್ನೂ ಈಗ ತುಂಡರಿಸಿ ಪದಾರ್ಥ ಮಾಡುವರು. ಇಲ್ಲಿ ನಿಂತರೆ ನಿನ್ನನ್ನು ತುಂಡರಿಸುವರು. ಬೇಗನೇ ಬಚಾವಾಗು ಎಂದು ತರಕಾರಿಗಳು ಜೊತೆಯಾಗಿ ಹೇಳಿದವು.<br><br>ಇದು ಕೇಳಿ ಕುಂಬಳಕಾಯಿಗೆ ಭಯವಾಯಿತು.<br><br>ಅದು ಉರುಳಿ ಉರುಳಿ ರಸ್ತೆಗೆ ಇಳಿಯಿತು.<br><br>ಆಶಯ ಗ್ರಹಣಕ್ಕೆ ಕಥೆ ಇಷ್ಟವಾಯಿತೇ?<br>ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು<br>• ಯಾವುದು ಸಂತೆಗೆ ಬಂದದ್ದು?<br>• ಸಂತೆಯಲ್ಲಿ ಯಾವೆಲ್ಲಾ ತರಕಾರಿಗಳು ಇರಲು ಸಾಧ್ಯ?<br>• ಕುಂಬಳಕಾಯಿ ಹೇಗಿತ್ತು? (ಬಣ್ಣ, ಆಕಾರ.......)<br>• ದಾರಿಮಧ್ಯೆ ಚೀನಿಕಾಯಿಗೆ ಏನು ಸಂಭವಿಸಿತು?<br>• ಕುಂಬಳಕಾಯಿ ತಲುಪಿದ್ದೆಲ್ಲಿಗೆ?<br>• ಕುಂಬಳಕಾಯಿ ತಲುಪಿದ ಜಾಗದಲ್ಲಿ ಯಾರೆಲ್ಲಾ ಇದ್ದರು?<br>• ಕುಂಬಳಕಾಯಿ ಉಳಿದ ತರಕಾರಿಗಳ ಜೊತೆ ಏನೆಲ್ಲಾ ಹೇಳಿರಬಹುದು?<br>• ಕುಂಬಳಕಾಯಿ ಬಚಾವಾಗಿರಬಹುದೇ?<br>• ಪ್ರಶ್ನೆಗಳಿಗೆ ಮಕ್ಕಳು ಉತ್ತರಿಸುವರು.<br>• ಅಧ್ಯಾಪಿಕೆಯು ಮಕ್ಕಳ ಪ್ರತಿಕ್ರಿಯೆಯನ್ನು ಭಾವನೆಯನ್ನು ಸೂಕ್ತ ಮುಖಭಾವಗಳೊಂದಿಗೆ ಕಥಾರೂಪದಲ್ಲಿ ನೀಡುವರು.<br>• ಮಕ್ಕಳಿಗೂ ಅವಕಾಶ ನೀಡುವುದು. | • ಪ್ರಶ್ನಾವಳಿಗೆ ಮಕ್ಕಳು ಪ್ರತಿಕ್ರಿಯಿಸಿದರು. ಮಕ್ಕಳು ಪ್ರತಿಕ್ರಿಯಿಸಲು ಮೊದಲಿಗೆ ಅಧ್ಯಾಪಿಕೆಯ ಸಹಾಯ ಬೇಕಾಗಿ ಬಂತು. |

**3+ ಮಕ್ಕಳಿಗೂ, ಭಿನ್ನಸಾಮರ್ಥ್ಯವುಳ್ಳ ಮಕ್ಕಳಿಗೂ ಆಶಯ ಪ್ರಕಟಪಡಿಸುವುದಕ್ಕಿರುವ ಇತರ ಸಾಧ್ಯತೆಗಳು ಯಾವುದೆಲ್ಲಾ?**

- ಕಥೆಯಲ್ಲಿ ಬರುವ ಕೆಲವು ಸಂದರ್ಭಗಳನ್ನು ಅಭಿನಯಿಸುವುದು
  - ತಳ್ಳುಗಾಡಿಯಲ್ಲಿ ಹೋಗುವುದು.
  - ಕುಂಬಳಕಾಯಿ ಉರುಳಿ ಉರುಳಿ ಹೋಗುವುದು
- ಸಂದರ್ಭಗಳು/ಕಥಾ ಪಾತ್ರಗಳಿಗೆ ಬಣ್ಣ ಕೊಡುವುದು
  - ತರಕಾರಿಗಳು
  - ತಳ್ಳುಗಾಡಿ
  - ಸಂತೆ
- ಸೇಂಡ್ ಟ್ರೇಯಲ್ಲಿ ವಿನ್ಯಾಸಗೊಳಿಸುವುದು (ಗುಂಪಿನಲ್ಲಿ)
  - ವಿವಿಧ ಬಗೆಯ ತರಕಾರಿಗಳು
  - ಗಾಡಿಯಲ್ಲಿ ತರಕಾರಿಗಳ ಮಾದರಿಗಳನ್ನು ಕ್ರಮಬದ್ಧವಾಗಿ ಇಡುವುದು
  - ಸಂತೆಯ ಮಾದರಿ ನಿರ್ಮಾಣ

**4+ ಪ್ರಾಯದಲ್ಲಿರುವ ಮಕ್ಕಳಿಗೆ ಏನೆಲ್ಲಾ?**

- ಸ್ವಂತ ಭಾಷೆಯಲ್ಲಿ ಕಥೆಯ ಮಂಡನೆ
- ಕಥಾ ಸಂದರ್ಭಕ್ಕೆ ಯೋಗ್ಯವಾದ ಚಿತ್ರಗಳನ್ನು ಕ್ರಮಬದ್ಧವಾಗಿ ಇಡುವುದು
- ಕಥೆಯಲ್ಲಿ ಮುಂದೇನಾಯಿತು-ಕಲ್ಪಿಸಿ ಹೇಳುವುದು.

ಉದಾ : ರಸ್ತೆಗೆ ಉರುಳಿದ ಕುಂಬಳಕಾಯಿ ಒಂದು ಆನೆಯ ಮುಂದೆ ಬಂದು ತಲುಪಿದ್ದು/ವಾಹನಗಳು ರಸ್ತೆಯಲ್ಲಿ ವೇಗವಾಗಿ ಸಾಗುತ್ತಾ ಇದ್ದುವೆ/ ದೂರದಿಂದ ಚಂದು ಅಣ್ಣನ ದನಿ ಕೇಳಿಸುತ್ತಿತ್ತು. – ತರಕಾರಿ ಬೇಕೇ..........

- ಕುಂಬಳಕಾಯಿಯ ಹಿಂದಿನಿಂದಾಗಿ ಮದುವೆ ಮನೆಯಿಂದ ನುಗ್ಗೆಕಾಯಿ ಜಿಗಿದು ಬಂತು – ಅಭಿನಯಿಸಿ ತೋರಿಸುವುದು. ಬಾಕಿ ಉಳಿದ ತರಕಾರಿಗಳು ಬಂದದ್ದು ಹೇಗಾಗಿರಬಹುದು?

ಈ ರೀತಿಯಲ್ಲಿ ಮುಂದುವರಿಯುವ ಸಾಧ್ಯತೆಗಳ ಕುರಿತು ಆಲೋಚಿಸಬೇಕು ಅಲ್ಲವೇ?

ಕಥಾ ಮಂಡನೆಯ ನಂತರ ಏನನ್ನೆಲ್ಲಾ ಮೌಲ್ಯಮಾಪನ ಮಾಡಬಹುದು?

- ಮಂಡನಾ ಪ್ರಕಟಣಾ ಸಾಮರ್ಥ್ಯ (ಮಕ್ಕಳದ್ದು)
- ಆಶಯ ಗ್ರಹಣ
- ವಿಭಿನ್ನ ರೀತಿಯಲ್ಲಿ ಆಶಯಗಳ ಪ್ರಕಟಣೆ ಮಂಡನೆ

(ಚಿತ್ರ ರಚಿಸುವುದು, ಅಭಿನಯಿಸುವುದು, ಕಥಾ ಚಿತ್ರಗಳನ್ನು ಕ್ರಮಬದ್ಧವಾಗಿ ಇರಿಸುವುದು, ಸೇಂಡ್ ಟ್ರೇ ಸಿದ್ಧಪಡಿಸುವುದರಲ್ಲಿನ ಸೃಜನಾತ್ಮಕತೆ)

# ವಿಷಯ : ಪಕ್ಷಿಗಳು

## ಸಾಮರ್ಥ್ಯಗಳು (4+)

- ತಾಳಲಯಬದ್ಧವಾಗಿ ವೈಯಕ್ತಿಕವಾಗಿ ಮತ್ತು ಗುಂಪಿನಲ್ಲಿ ಹಾಡುಗಳನ್ನು ಹಾಡಿ ಆಸ್ವಾದಿಸುವರು.
- ವಿವಿಧ ಬಗೆಯ ಪಕ್ಷಿಗಳ ಬಣ್ಣಕ್ಕೆ ಸಂಬಂಧಪಟ್ಟ ಸಾಲುಗಳನ್ನು ಸೇರಿಸಿ ಪದ್ಯವನ್ನು ತಯಾರಿಸಲು ಸಾಧ್ಯವಾಗುವುದು.
- ಕಾಗದವನ್ನು ತುಂಡರಿಸಿಯೂ ಮತ್ತು, ಅಂಟಿಸಿಯೂ ಕೊಲೇಷ್ ನಿರ್ಮಾಣ ಚಟುವಟಿಕೆಯಲ್ಲಿ ಭಾಗವಹಿಸುವುದಕ್ಕೂ, ಅವುಗಳನ್ನು ಆಸ್ವಾದಿಸುವುದಕ್ಕೂ ಇರುವ ಸಾಮರ್ಥ್ಯವನ್ನು ಗಳಿಸುವುದು.
- ವಿವಿಧ ಪಕ್ಷಿಗಳನ್ನು ಗುರುತಿಸುತ್ತಾರೆ.
- ಸಂಖ್ಯೆಗಳನ್ನು ವಸ್ತುಗಳೊಂದಿಗೆ ಹೋಲಿಸಿ 1–5ರವರೆಗೆ ಎಣಿಸಲು ಸಾಧ್ಯವಾಗುವುದು.
- ಕಂಡುಹಿಡಿಯುವ ಚಟುವಟಿಕೆಯಲ್ಲಿ ಭಾಗವಹಿಸುವುದಕ್ಕೂ, ನಿಗಮನಗಳನ್ನು ಅನುಭವಗಳ ಆಧಾರದಲ್ಲಿ ಮಂಡಿಸುವುದಕ್ಕೂ ಸಾಧ್ಯವಾಗುವುದು.

## ಸಾಮಗ್ರಿಗಳು

ಸೇಂಡ್ ಟ್ರೇ, ಪಕ್ಷಿಗಳ ಚಿತ್ರಗಳು, ಕಟೌಟ್‌ಗಳು, ಕೋಲುಗೊಂಬೆ, ಬಣ್ಣದ ಕಾಗದಗಳು, ಕ್ರಯೋನ್ಸ್‌ಗಳು/ಡಿಸ್‌ಪ್ಲೇ ಬೋರ್ಡ್, ಬಕೆಟ್, ನೀರು, ಎಲೆ, ಗರಿ, ಮರದ ತುಂಡು, ಕಲ್ಲು, ಪೆನ್ಸಿಲ್, ಹುಂಜ ಕೋಳಿಯ ಚಿತ್ರ, ಹುಣಸೆ ಬೀಜ.

(ಸಮಯ ಒಂದು ದಿನ)

## ಪರಿಗಣಿಸಿದ ಮಂಡಲಗಳು

| | |
|---|---|
| **ವೈಜ್ಞಾನಿಕ ವಿಕಾಸ** | : ಸರಳ ಪ್ರಯೋಗ |
| **ಸಾಮಾಜಿಕ ಮತ್ತು ಸೌಂದರ್ಯಾತ್ಮಕ ವಿಕಾಸ** | : • ಆಟಗಳು, ಗುಂಪು ಚಟುವಟಿಕೆಗಳು |
| **ಶಾರೀರಿಕ ಚಲನ ವಿಕಾಸ** | : • ಕೊಲೇಷ್ ನಿರ್ಮಾಣ, ಆಟ |
| **ಭಾಷಾ ಪರವಾದ ವಿಕಾಸ** | : • ಹಾಡು ಆಲಿಸುವುದು – ತಯಾರಿಸುವುದು ಕಥೆ ಆಲಿಸುವುದು – ರಚಿಸುವುದು – ಪ್ರತಿಕ್ರಿಯೆಗಳು |

| ಚಟುವಟಿಕೆ | ಮೌಲ್ಯಮಾಪನ |
|---|---|
| **ಚಟುವಟಿಕೆ 1 : ಹಾಡು ಹಾಡುವ, ಆಡುವಾ?**<br><br>**ಭಾಷಾ ಪರವಾದ ವಿಕಾಸ, ಸೌಂದರ್ಯಾತ್ಮಕವಾದ ವಿಕಾಸ (ಭಾಷಾ ಪರವಾದ ಬುದ್ಧಿ ಶಕ್ತಿ, ಸಂಗೀತ ಪರವಾದ ಬುದ್ಧಿ ಶಕ್ತಿ)**<br><br>ಮಕ್ಕಳೊಡನೆ ಕುಶಲ ಸಂಭಾಷಣೆ ನಡೆಸುವುದು. ಅಧ್ಯಾಪಿಕೆ ಒಂದು ಸಣ್ಣ ಪ್ರಶ್ನೆ ಕೇಳುವರು: 'ನಿಮಗೆ ಹಾರಲು ಸಾಧ್ಯವೇ'? ವ್ಯತ್ಯಸ್ತ ಪ್ರತಿಕ್ರಿಯೆಗಳು – ಅಧ್ಯಾಪಿಕೆಯ ಪ್ರೋತ್ಸಾಹ ಕಾಗದದಿಂದ ತಯಾರಿಸಿದ ಫ್ಯಾನ್ ಮಕ್ಕಳಿಗೆ ವಿತರಿಸುವರು. ಫ್ಯಾನಿನಲ್ಲಿ ಪಕ್ಷಿಗಳ ಚಿತ್ರ (ಸಣ್ಣದು)ವನ್ನು ಅಂಟಿಸಲಾಗಿದೆ. ಮಕ್ಕಳೆಲ್ಲರೂ ಕುರ್ಚಿ, ಬೆಂಚು ಎಂಬಿವುಗಳ ಮೇಲೆ ನಿಲ್ಲುತ್ತಾರೆ. ಅಧ್ಯಾಪಿಕೆಯು ಕುರ್ಚಿಯ ಮೇಲೆ ನಿಲ್ಲುತ್ತಾರೆ. ಸೂಚನೆಗಳಿಗನು ಸರಿಸಿ ಕಾಗದ ಫ್ಯಾನನ್ನು ಕೆಳಗೆ ಹಾಕುವರು. ಮಕ್ಕಳಿಗೆ ಪುನರಾವರ್ತಿಸಲು ಅವಕಾಶ ನೀಡುವುದು.<br><br>ಅವರಿಗೆ ಲಭಿಸಿದ ಫ್ಯಾನಿನಲ್ಲಿ ಅಂಟಿಸಿದ ಚಿತ್ರ ನೋಡಲು ಹೇಳುವರು. ಮಕ್ಕಳು ಪಕ್ಷಿ ಎಂದು ಕೂಗಿ ಹೇಳುವರು.<br><br>ಪಕ್ಷಿಗಳಿಗೆ ಸಂಬಂಧಿಸಿದ ಹಾಡುಗಳನ್ನು ಮಕ್ಕಳು ಹಾಡುವರು.<br><br>ಈ ಹಿಂದೆ ತಯಾರಿಸಿದ ಕೋಲುಗೊಂಬೆಗಳನ್ನು ಅಧ್ಯಾಪಕರು ಉಪಯೋಗಿಸುವರು. ಪ್ರತಿಯೊಂದರ ಕುರಿತು ಮಕ್ಕಳು ಹೇಳುವರು. ಬಿಟ್ಟು ಹೋದ ವಿಚಾರಗಳನ್ನು ಅಧ್ಯಾಪಿಕೆ ಸೇರಿಸುವರು. ಅಧ್ಯಾಪಿಕೆ ಹಾಡಿನ ಮೊದಲ ಸಾಲುಗಳನ್ನು ಹಾಡುವರು. | |

| ಚಟುವಟಿಕೆ | ಮೌಲ್ಯಮಾಪನ |
|---|---|
| **'ಕಾಗೆಗೆ ಇರುವುದು ಒಂದೇ ಅಂಗಿ,<br>ಅದುವೇ ಚಂದದ ಕಪ್ಪಂಗಿ '**<br><br>ಮಕ್ಕಳು ಜತೆಗೆ ಹಾಡುವರು. ಹೆಜ್ಜೆ ಹಾಕಿ ಹಾಡುವರು. ಅಧ್ಯಾಪಿಕೆ ಗಿಳಿಯ ಕೋಲುಗೊಂಬೆ ತೋರಿಸುವರು.<br>ಮಕ್ಕಳು ಸ್ವಂತವಾಗಿ ಸಾಲುಗಳನ್ನು ರಚಿಸಿ ಹಾಡುವರು.<br>*'ಗಿಳಿಗಿರುವುದು ಒಂದೇ ಅಂಗಿ, ಅದುವೇ ಚಂದದ ಹಸಿರಂಗಿ'*<br><br>ಕೊಕ್ಕರೆಯ ಚಿತ್ರ ಎತ್ತಿ ತೋರಿಸವರು.<br>ಮಕ್ಕಳು ಉತ್ಸಾಹದಿಂದ ಸಾಲುಗಳನ್ನು ರಚಿಸುತ್ತಾರೆ.<br>*'ಕೊಕ್ಕರೆಗಿರುವುದು ಒಂದೇ ಅಂಗಿ ಅದುವೇ ಚಂದದ ಬಿಳಿಯಂಗಿ'*<br>ಅಧ್ಯಾಪಿಕೆ ತನ್ನ ಉಡುಪು ತೋರಿಸಿ ಹಾಡುತ್ತಾರೆ. ನನಗೂ ಇರುವುದು ಒಂದುಡುಪು ಅದು ಹಕ್ಕಿಗಳಿರುವಾ ಉಡುಪು. ಮಕ್ಕಳು ಸ್ವಂತ ಉಡುಪನ್ನು ಆಧಾರವಾಗಿರಿಸಿ ಹಾಡುವರು.<br>ಎಲ್ಲರೂ ಸೇರಿ ಪೂರ್ತಿ ಸಾಲನ್ನು ಹಾಡುವರು. ಅಧ್ಯಾಪಿಕೆ ಕೋಲುಗೊಂಬೆಗಳನ್ನು ಸೇಂಡ್ ಟ್ರೇಯಲ್ಲಿ ಊರಿ ನಿಲ್ಲಿಸುವರು. ಅವುಗಳನ್ನು ತೋರಿಸುತ್ತಾ ಮಕ್ಕಳು ಪುನರಾವರ್ತಿಸಿ ಹಾಡುವರು. ಹೆಜ್ಜೆ ಹಾಕಿ ಹಾಡುವರು.<br>– ಮಕ್ಕಳಿಗೆ ಮೊದಲ ಸಾಲು ರಚಿಸಿ ಹಾಡಲು ಕಷ್ಟವಾದರೂ ನಂತರ ಅಧ್ಯಾಪಿಕೆ ಎಲ್ಲರಿಗೂ ಸಹಕರಿಸಿದರು.<br> | • ಮಕ್ಕಳಿಗೆ ಮೊದಲ ಸಾಲು ರಚಿಸಿ ಹಾಡಲು ಕಷ್ಟವಾದರೂ ನಂತರ ಎಲ್ಲರಿಗೂ ಸಾಧ್ಯವಾಯಿತು.<br>• ಕೋಲು ಗೊಂಬೆ ಉಪಯೋಗಿಸಿದ್ದು ಒಳ್ಳೆಯದಾಯಿತು.<br>• ಚಟುವಟಿಕೆಗಳಲ್ಲಿ ಮಕ್ಕಳು ಆಸಕ್ತಿಯಿಂದ ಭಾಗವಹಿಸಿದರು. |

| ಚಟುವಟಿಕೆ | ಮೌಲ್ಯಮಾಪನ |
|---|---|
| ಸೇಂಡ್ ಟ್ರೇಯಲ್ಲಿ ಅಧಿಕವಾಗಿ ಇರಿಸಿರುವ ಮಿಂಚುಳ್ಳಿ, ಕೋಳಿ ಎಂಬಿವುಗಳ ಕುರಿತು ಅವರು ಹಾಡು ರಚಿಸಿ ಹಾಡುವರು.<br>ಎಲ್ಲರಿಗೂ ಪಕ್ಷಿಗಳ ಔಟ್‌ಲೈನ್ ಚಿತ್ರಗಳನ್ನು ವಿತರಣೆ ಮಾಡುವರು. ಮನೆಯಿಂದ ಯೋಗ್ಯವಾದ ಬಣ್ಣ ಕೊಟ್ಟು ಬರಲು ಹೇಳುವರು.<br>**ಚಟುವಟಿಕೆ 2 : ಚಿತ್ರ ಚಾರ್ಟ್**<br>**(ಸಾಮಾಜಿಕ – ಭಾವನಾತ್ಮಕ ವಿಕಾಸ ಮಂಡಲ, ಸೃಜನಾತ್ಮಕ ವಿಕಾಸ, ಶಾರೀರಿಕ ಬುದ್ಧಿ)**<br>ಅಂದವಾಗಿ ಬಿಡಿಸಿ ಬಣ್ಣ ತುಂಬಿದ ಚಿತ್ರಗಳನ್ನು ಚಾರ್ಟಿನಲ್ಲಿ ಅಂಟಿಸುವುದು. ಅಧ್ಯಾಪಿಕೆಯು ಅದರ ಕೆಳಗಡೆ ಮಕ್ಕಳ ಹೆಸರು ಬರೆಯುವರು. ಚಿತ್ರಗಳ ಮೌಲ್ಯಮಾಪನ ಮಾಡುವುದು.<br>ಅಧ್ಯಾಪಿಕೆ ಬಿಗ್ ಪಿಕ್ಚರ್‌ನಲ್ಲಿ ಮೊದಲು ತಯಾರಿಸಿಟ್ಟ ಹುಂಜಕೋಳಿಯ ಚಿತ್ರವನ್ನು ಕರ್ಟನ್ ಬದಿಗೆ ಸರಿಸಿ ತೋರಿಸುವರು. ಕರ್ಟನ್ ಬದಿಗೆ ಸರಿಸುವಾಗ ಒಂದೊಂದು ಭಾಗವು ಸ್ವಲ್ಪ ಸ್ವಲ್ಪವಾಗಿ ಕಾಣುವ ರೀತಿಯಲ್ಲಿ ಮಕ್ಕಳಲ್ಲಿ ಕುತೂಹಲ ಹುಟ್ಟಿಸುವ ರೀತಿಯಲ್ಲಿ ತೋರಿಸುತ್ತಾರೆ. ಚಿತ್ರವನ್ನು ಪೂರ್ಣವಾಗಿ ತೋರಿಸುವರು. ಯಾರೆಂಬುದಾಗಿ ಕೇಳುತ್ತಾರೆ. ಮಕ್ಕಳ ಪ್ರತಿಕ್ರಿಯಿಸುವರು. ಹುಂಜಕೋಳಿಗೆ ಸಂಬಂಧಿಸಿದ ಲಘು ಚರ್ಚೆ. ಮಕ್ಕಳಿಗೆ ಹಾಡಲು ಅವಕಾಶ. ಅಧ್ಯಾಪಿಕೆ ಹುಂಜಕೋಳಿಯ ಒಂದು ಪದ್ಯ ಹಾಡುತ್ತಾರೆ. | |

| ಚಟುವಟಿಕೆ | ಮೌಲ್ಯಮಾಪನ |
|---|---|
| ದಿನವೂ ನನ್ನನು ಎಬ್ಬಿಸೊ ಕೋಳಿ<br>ಕೊಕೊಕೊ ಎನ್ನುವ ಮುದ್ದಿನ ಕೋಳಿ<br>ಅಂಗಳದೆಲ್ಲೆಡೆ ಸುತ್ತುವ ಕೋಳಿ<br>ಕೆಂಪು ಜುಟ್ಟಿನ ಅಂಕದ ಕೋಳಿ<br>ಕೊಕೊಕೊ ಕೊಕ್ಕರೆಕೋ<br><br>ಮಕ್ಕಳೂ, ಅಧ್ಯಾಪಿಕೆಯೂ ಸೇರಿ ಹಾಡುವರು. ಹಾಡಿ ನಲಿಯುವರು.<br><br>ಮಕ್ಕಳಿಗೆ ಪಕ್ಷಿಗಳ ಚಿತ್ರಗಳ ಮಡಚಿದ ಚೀಟಿಯನ್ನು ವಿತರಿಸುವರು. ಒಂದೇ ತರದ ಪಕ್ಷಿಗಳ ಚಿತ್ರ ಸಿಕ್ಕಿದವರು. ಜೊತೆ ಯಾಗುವರು. ಪಕ್ಷಿಗಳ ಹೆಸರು ಹೇಳುವಾಗ ಅದರ ಕೂಗನ್ನು ಅನುಕರಣೆ ಮಾಡುತ್ತಾರೆ. ಚಲನೆಯನ್ನು ಅನುಕರಣೆ ಮಾಡುವರು.<br><br>ಗುಂಪಿನಲ್ಲಿ ಮಕ್ಕಳಿಗೆ ಹುಂಜಕೋಳಿಯ ದೊಡ್ಡದಾದ ಚಿತ್ರದ ಔಟ್‌ಲೈನ್‌ನ್ನು ನೀಡುವುದು. ಅಂಟು, ಬಣ್ಣದ ಕಾಗದಗಳು ಎಂಬಿವುಗಳನ್ನು ನೀಡುವುದು. ಮಕ್ಕಳು ಹುಂಜಕೋಳಿಯ ಔಟ್‌ಲೈನ್‌ನಲ್ಲಿ ಅಂಟಿಸುವರು.ಅಧ್ಯಾಪಿಕೆ ಅಗತ್ಯವಾದ ಸಹಾಯ ಸಹಕಾರವನ್ನು ನೀಡುವರು. ಕೊಲೇಷ್‌ನ್ನು ಹುಂಜಕೋಳಿಯ ಪ್ರತಿ ಗುಂಪೂ ಪ್ರದರ್ಶಿಸುವುದು. ಚಿತ್ರವನ್ನು ಮೌಲ್ಯಮಾಪನ ಮಾಡುವುದು. ಎಲ್ಲಾ ಮಕ್ಕಳಿಗೂ ಮಾತನಾಡಲು ಅವಕಾಶ ನೀಡುವುದು. ಚಿತ್ರವನ್ನು ಗೋಡೆಯಲ್ಲಿ ತೂಗಿಸಿಡುವುದು. ಹುಂಜಕೋಳಿಯ ಹಾಡನ್ನು ಮಕ್ಕಳು ಅಧ್ಯಾಪಿಕೆಯು ಸೇರಿ ಹಾಡುವರು. | • ಸೂಕ್ಷ್ಮವಾದ ಯೋಜನೆ ಇದ್ದರೆ ಮಕ್ಕಳಲ್ಲಿ ಸಾಮರ್ಥ್ಯದ ವಿಕಾಸ ಸಾಧ್ಯವಾಗುವುದು ಎಂದು ತಿಳಿಯಿತು.<br>• ಪ್ರಿಸ್ಕೂಲ್‌ನಲ್ಲಿ ಧಾರಾಳ ಕಲಿಕೆಗೆ ಆಟಿಕೆಗಳು ಅತ್ಯಾವಶ್ಯಕ ಎಂದು ತಿಳಿಯಿತು.<br>• ಮಕ್ಕಳ ಭಾಗವಹಿಸುವಿಕೆ ಗುಂಪಿನೊಳಗಿನ ಮಕ್ಕಳ ಪಾಲ್ಗೊಳ್ಳುವಿಕೆ, ಸಹಕಾರ, ನಿಖರತೆ, ಸೂಕ್ಷ್ಮತೆ ಪಾಲಿಸಲಾಗಿದೆ. (ಕಾಗದ ಕತ್ತರಿಸುವುದು, ಅಂಟಿಸುವುದು)<br>• ಕಾಗದ ಕತ್ತರಿಸಲೂ ಮತ್ತು ಅಂಟಿಸಲೂ ಸಾಧ್ಯವಾಗುತ್ತದೆ. |

| ಚಟುವಟಿಕೆ | ಮೌಲ್ಯಮಾಪನ |
|---|---|
| **ಚಟುವಟಿಕೆ – 3**<br><br>**1, 2, 3 ಎಣಿಸಬಹುದಲ್ಲವೇ?**<br><br>**(ವೈಜ್ಞಾನಿಕ ವಿಕಾಸ – ಯುಕ್ತಿ ಚಿಂತನೆ – ಗಣಿತ ಪರವಾದ ಬುದ್ಧಿ ಶಕ್ತಿ, ದೃಶ್ಯ ಪ್ರಾದೇಶಿಕ ಬುದ್ಧಿ ಶಕ್ತಿ ಭಾಷಾ ಪರವಾದ ಬುದ್ಧಿ ಶಕ್ತಿ)**<br>ಹುಂಜಕೋಳಿಯ ಚಿತ್ರವು ಚಂದವಾಗಿದೆ. ನಮಗೊಂದು ಒಗಟು ಹೇಳೋಣವೇ? ಉತ್ತರವನ್ನು ಹೇಳುವಿರಲ್ಲವೇ?<br>ಬಣ್ಣದ ಕೊಕ್ಕು<br>ಕುತ್ತಿಗೆಯಲ್ಲಿ ಬಂಗಾರದ ಮಾಲೆ<br>ಹಸಿರು ಬಣ್ಣದ ಉಡುಪು<br>ತೊಟ್ಟಿರುವ ಸುಂದರಿ ನಾನ್ಯಾರು?<br>ಮಕ್ಕಳು ಉತ್ತರಿಸುವರು – (ಗಿಳಿ)<br><br>ಮಕ್ಕಳು ನೋಡಿದ ಪಕ್ಷಿಗಳ ಹೆಸರು ಹೇಳುವರು. ಅಧ್ಯಾಪಿಕೆಯು ನೋಡಿದ ಪಕ್ಷಿಗಳ ಚಿತ್ರ ಪ್ರದರ್ಶಿಸುವರು. ಚಿತ್ರಗಳನ್ನು ಬಿಗ್ ಪಿಕ್ಚರಿನಲ್ಲಿ / ಡಿಸ್‌ಪ್ಲೇ ಬೋರ್ಡಿನಲ್ಲಿ ಪ್ರದರ್ಶಿಸುವರು.<br><br>ಅಧ್ಯಾಪಿಕೆ ಪಕ್ಷಿಗಳ ಔಟ್‌ಲೈನ್ ಚಿತ್ರಗಳನ್ನು ಒಂದು ಕವರ್‌ನಲ್ಲಿ ಹಾಕಿ ವಿತರಿಸುವರು.<br><br>ಚಿತ್ರಗಳು (ಕಾಗೆ – 1, ಗಿಳಿ – 3, ಕೊಕ್ಕರೆ – 2, ಗುಬ್ಬಚ್ಚಿ – 3, ಕೋಗಿಲೆ – 5) ಯೋಗ್ಯವಾದ ಬಣ್ಣ ಹಚ್ಚುವರು. | |

| ಚಟುವಟಿಕೆ | ಮೌಲ್ಯಮಾಪನ |
|---|---|
| ಅದರ ಕೆಳಗೆ ಹೆಸರು ಬರೆಯುವವರು. ಅಂಗಿಯಲ್ಲಿ ಇದನ್ನು ಬ್ಯಾಡ್ಜ್ ಆಗಿ ಧರಿಸುವರು.<br>ಅವರವರಿಗೆ ಸಿಕ್ಕಿದ ಪಕ್ಷಿಗಳ ಹೆಸರನ್ನು ಗಟ್ಟಿಯಾಗಿ ಹೇಳುವರು. ಅಧ್ಯಾಪಿಕೆಯ ನಿರ್ದೇಶಕ್ಕನುಸಾರ ಪಕ್ಷಿಗಳಾಗಿ ಬದಲಾದ ಮಕ್ಕಳು ಹಾರಿ ಬರುವರು.<br>*ಟೀಚರ್- ಕಾಗೆಗಳೇ ಹಾರಿ ಬನ್ನಿ.......*<br>*ಒಂದು ಕಾಗೆ ಹಾರಿ ಬರುವುದು.*<br>*ಟೀಚರ್ -ಕಾಗೆ ಒಂದೇ ಇರುವುದು ಎಂದು ಹೇಳುವುದು.*<br>*- ಗುಬ್ಬಚ್ಚಿಗಳೇ ಹಾರಿ ಬನ್ನಿ...*<br>*ಗುಬ್ಬಚ್ಚಿಗಳು ಹಾರಿ ಬರುವುವು.*<br><br>*ಟೀಚರ್ – ಹಾಯ್ ಗುಬ್ಬಿಗಳೇ ಎಷ್ಟು ಮಂದಿ?*<br>*ನಾಲ್ಕು ಮಂದಿ ಇದ್ದೀರಲ್ಲವೇ?*<br>*- ಮುಂದುವರಿಸಿ ಬಾಕಿ ಉಳಿದ ಪಕ್ಷಿಗಳನ್ನು ಸಂಖ್ಯೆಗೆ ಅನುಸಾರವಾಗಿ ಕರೆಯುವರು.*<br>*ಆಟದ ಪುನರಾವರ್ತನೆ*<br>ಅಧ್ಯಾಪಿಕೆ ಸಂಖ್ಯೆಗಳನ್ನು ಮಾತ್ರ ಹೇಳುವುದು. ಅದಕ್ಕನುಗುಣವಾಗಿ ಮಕ್ಕಳು ಹಕ್ಕಿಗಳಂತೆ ಹಾರಿ ಬರುವರು.<br>ಟೀಚರ್ – (2) 2 – ಕೊಕ್ಕರೆಗಳು ಎಂದು ಹೇಳಿದಾಗ ಶಬ್ದ ಮಾಡುತ್ತಾ ಹಾರಿ ಬರುವುದು. ಬಂದ ಕೊಕ್ಕರೆಯನ್ನು ಎಣಿಸಿ ನೋಡಲು ಹೇಳುವುದು.<br>ಆಟ ಪುನರಾವರ್ತಿಸುವುದು.<br>ಮಕ್ಕಳ ಕೈಯಲ್ಲಿರುವ ಬ್ಯಾಡ್ಜ್‌ಗಳನ್ನು ಮೇಜಿನ ಮೇಲೆ ಪ್ರದರ್ಶಿಸುವುದು.<br>ಪಕ್ಷಿಗಳ ಹೆಸರು ಹೇಳುವಾಗ ಸೂಕ್ತವಾದ ಸಂಖ್ಯೆಯನ್ನು ಬಿಗ್ ಪಿಕ್ಚರಿನಲ್ಲಿ ಅಂಟಿಸುವುದು.<br>ಆಟ ಮುಂದುವರಿಸುವುದು. | • ಸೂಚನೆಗಳನ್ನು ಪಾಲಿಸಿ ಆಟದಲ್ಲಿ ಭಾಗವಹಿಸುವ ಸಾಮರ್ಥ್ಯ<br>• ಗಣಿತಾಶಯ/ಸಂಖ್ಯೆಯ ಗುಂಪುಗಳನ್ನು ಗುರುತಿಸಿ, ಸೂಕ್ತ ಸಂದರ್ಭದಲ್ಲಿ ಪ್ರಯೋಗಿಸಲು ಸಾಧ್ಯವಾಗುವುದು.<br>• ಸಂಖ್ಯೆ ಮತ್ತು ವಸ್ತುಗಳನ್ನು ಹೊಂದಿಸಲು ಸಾಧ್ಯವಾಗುವುದು. |

| ಚಟುವಟಿಕೆ | ಮೌಲ್ಯಮಾಪನ |
|---|---|
| **ಚಟುವಟಿಕೆ – 4 ಮುಳುಗುವುದೋ? ತೇಲುವುದೋ?**<br>**(ವಿಕಾಸ ಮಂಡಲ – ವೈಜ್ಞಾನಿಕ ಮಂಡಲ)**<br>ಟೀಚರ್, ಮಕ್ಕಳು ಸೇರಿ 'ಕಾಗೆಗೆ ಇರುವುದು ಒಂದೇ ಅಂಗಿ' ಎಂಬ ಹಾಡನ್ನು ಹಾಡಿ ನಲಿಯುವರು.<br>ಅಧ್ಯಾಪಿಕೆಯು ಬಿಗ್‌ಪಿಕ್ಚರ್‌ನಲ್ಲಿ ಪರಿವಾಳವನ್ನೂ, ಇರುವೆಯನ್ನು ಪ್ರದರ್ಶಿಸುತ್ತಾರೆ. ಇವರು ಯಾರೆಂದು ಕೇಳುತ್ತಾರೆ–ಹೇಳುತ್ತಾರೆ. ಕಂಡ ವಿಚಾರಗಳನ್ನು ಮಕ್ಕಳು ಹೇಳುತ್ತಾರೆ.<br>- ಎಲೆಗಳು ಇಲ್ಲದ ಮರ<br>- ಮರದ ಕೊಂಬೆಯಲ್ಲಿ ಕುಳಿತ ಪಾರಿವಾಳ<br>- ನೀರಿನಲ್ಲಿ ಬಿದ್ದ ಇರುವೆ<br>ಅಧ್ಯಾಪಿಕೆ ಪರಿವಾಳ ಮತ್ತು ಇರುವೆಯ ಕಥೆಯನ್ನು ಭಾವಾಭಿನಯದೊಂದಿಗೆ ಮಂಡಿಸುತ್ತಾರೆ. ಇರುವೆಗೆ ಸಹಾಯ ಮಾಡಲು ಪಾರಿವಾಳವು ಯೋಚಿಸಿತು. ಆದರೆ ಮರದಲ್ಲಿ ಎಲೆಗಳಿಲ್ಲ. ಏನು ಮಾಡಲು ಸಾಧ್ಯ? ಮಕ್ಕಳು ಪ್ರತಿಕ್ರಿಯಿಸುವರು. ಮಕ್ಕಳ ಊಹೆಗಳನ್ನು ಹೇಳಲು ಅವಕಾಶ ನೀಡುವುದು. ಎಲ್ಲಾ ವಸ್ತುಗಳೂ ನೀರಿನಲ್ಲಿ ತೇಲುವುದೇ? ಎಂದು ಟೀಚರು ಪ್ರಶ್ನಿಸುವರು. ಮಕ್ಕಳು ಅವರ ಊಹೆಯನ್ನು ಹೇಳುವರು.<br>ಗರಿಗಳು ಮುಳುಗುವುದೇ? ತೇಲುವುದೇ?<br>ಟೀಚರ ಪ್ರಶ್ನೆಗಳಿಗೆ ಮಕ್ಕಳು ಪ್ರತಿಕ್ರಿಯೆ ತೋರುವರು. ನಾವು ಮಾಡಿ ನೋಡೋಣ. | |

| ಚಟುವಟಿಕೆ | ಮೌಲ್ಯಮಾಪನ |
|---|---|
| ಮಕ್ಕಳು ವೃತ್ತಾಕಾರದಲ್ಲಿ ನಿಲ್ಲುವರು. ತರಗತಿ ಮಧ್ಯದಲ್ಲಿ ಒಂದು ಬಕೆಟಿನಲ್ಲಿ ನೀರಿರಿಸುವುದು. ಟೀಚರ್ ಒಂದು ಮಗುವಿನ ಕೈಯಲ್ಲಿ ಒಂದು ಗರಿಯನ್ನು ಕೊಡುತ್ತಾರೆ. ಮಗು ಅದನ್ನು ನೀರಿಗೆ ಹಾಕುತ್ತಾನೆ. ಏನಾಯಿತು? ಮಕ್ಕಳು ಪ್ರತಿಕ್ರಿಯೆ ನೀಡುವರು. ಇತರ ಮೂರು ವಸ್ತುಗಳನ್ನು ಮಕ್ಕಳಿಗೆ ನೀಡಿ ನೀರಿಗೆ ಹಾಕಿ ನೋಡಲು ಹೇಳುವರು. ಪ್ರತಿಯೊಂದು ವಸ್ತುಗಳನ್ನು ಹೇಳುವರು. ಪ್ರತಿಯೊಂದು ವಸ್ತುಗಳನ್ನು ಎತ್ತಿ ತೋರಿಸಿ ಇದು ಮುಳುಗುವುದೇ? ತೇಲುವುದೇ? ಎಂದು ಪ್ರಶ್ನಿಸುವರು. ವಿವಿಧ ಗುಂಪುಗಳಿಗೆ ನೀರಿನ ಬಕೆಟ್‌ನ್ನು ನೀಡಿ ಸರಳ ಪ್ರಯೋಗಗಳನ್ನು ಪುನರಾವರ್ತಿಸುವರು. ಮಕ್ಕಳು ತಮ್ಮ ನಿಗಮನಗಳನ್ನು ಹೇಳುವರು.<br><br>ಟೀಚರು ಸಂಗ್ರಹಿಸಿದ ಒಂದೊಂದೇ ವಸ್ತುವನ್ನು ತೋರಿಸಿ ಪ್ರಶ್ನೆಯನ್ನು ಪುನರಾವರ್ತಿಸುವರು. ಮಕ್ಕಳು ಉತ್ತರಿಸುವರು. ಯಾಕಾಗಿ? ಮಕ್ಕಳು ತಮ್ಮ ನಿಗಮನವನ್ನು ಹೇಳುವರು. ಟೀಚರು ಬಿಟ್ಟು ಹೋದ ವಿಚಾರಗಳನ್ನು ಸೇರಿಸುವರು.<br><br>ಟೀಚರು ಕಥೆಯನ್ನು ಮುಂದುವರಿಸುವರು. ಹೀಗೆ ಪಾರಿವಾಳವು ಇರುವೆಯನ್ನು ಕಾಪಾಡಿತು. ಹೇಗೆ ಪಾರಿವಾಳವು ಇರುವೆಯನ್ನು ಕಾಪಾಡಿತು? ಮಕ್ಕಳು ಪ್ರತಿಕ್ರಿಯೆ ನೀಡುವರು. ಗರಿಯನ್ನು ಕಿತ್ತು ಹಾಕಿ ಇರುವೆಯನ್ನು ಕಾಪಾಡಿತು. ಕಥೆ ಇಷ್ಟವಾಯಿತೇ? | • ಚಟುವಟಿಕೆಯನ್ನು ಸರಿಯಾಗಿ ಮಾಡಿ ಕಂಡುಕೊಂಡ ವಿಚಾರಗಳನ್ನು ಸರಿಯಾಗಿ ಹೇಳಿ ಮಕ್ಕಳನ್ನು ಪ್ರೋತ್ಸಾಹಿಸುವುದು.<br>• ಟೀಚರು ತಂದ ಯಾವುದಾದರು ಒಂದು ವಸ್ತು ಮುಳುಗುವುದೋ ತೇಲುವುದೋ ಆಗಿದೆ.<br>• ಗರಿಯು ತೇಲುವ ವಸ್ತು ಆಗಿದೆ ಎಂದೂ ಇರುವೆಗೆ ರಕ್ಷಣೆ ಪಡೆಯಲು ಸಾಧ್ಯವಾಗಿದೆ ಎಂದೂ ಮಕ್ಕಳಿಗೆ ತಿಳಿಯಲು ಸೂಕ್ತವಾದ ಚಟುವಟಿಕೆ ಆಗಿದೆ. |

## ಅಧ್ಯಾಪಿಕೆಯ ಪ್ರತಿಕ್ರಿಯೆಯ ನುಡಿ

ಪ್ರತಿಯೊಂದು ಹಂತದಲ್ಲೂ ಮೌಲ್ಯಮಾಪನ ನಡೆಸಲಾಗಿದೆ. ಚಟುವಟಿಕೆಯಲ್ಲಿ ಎಲ್ಲ ಮಕ್ಕಳು ಭಾಗವಹಿಸಿದ್ದರು. ಪ್ರತಿಯೊಂದು ಮಗುವಿನ ಪ್ರತಿಕ್ರಿಯೆಗೂ ಸರಿಯಾದ ಉತ್ತರವನ್ನೂ, ಮೆಗಾಫೋನಿಂಗ್ ಮಾಡಲಾಯಿತು. ಮಕ್ಕಳಿಗೆ ತುಂಬಾ ಇಷ್ಟವಾದಂತೆ ತೋರಿತು. ಇನ್ನು ಯಾವೆಲ್ಲಾ ಚಟುವಟಿಕೆ ಆಗಬಹುದು? ಎಲ್ಲಾ ಮಂಡಲಗಳಿಗೂ ಸೂಕ್ತವಾದ ಚಟುವಟಿಕೆಯನ್ನು ಮಕ್ಕಳಿಗೆ ಅನುಭವವಾಗಿ ನೀಡಲು ಸಾಧ್ಯವಾಗಿದೆಯೇ? ಪ್ರತಿಯೊಂದು ಚಟುವಟಿಕೆಯ ಮಧ್ಯದಲ್ಲಿಯೂ, ಮುಗಿದಾಗಲೂ ಮಕ್ಕಳು ಗಳಿಸಬೇಕಾದ ಸಾಮರ್ಥ್ಯಗಳನ್ನು ಎಷ್ಟರ ಮಟ್ಟಿಗೆ ಗಳಿಸಲಾಗಿದೆ ಎಂದು ಸ್ವತಃ ಮೌಲ್ಯ ಮಾಪನ ನಡೆಸಿ ದಾಖಲಿಸುವುದು, ಮುಂದಿನ ಚಟುವಟಿಕಾ ಯೋಜನೆಗೂ, ಮಕ್ಕಳ ಸರಿಯಾದ ವಿಕಾಸಕ್ಕೂ ಸಹಾಯಕವಾಗಬಹುದು.

## ನಿರೀಕ್ಷಣಾ ವಿಶ್ಲೇಷಣಾ ವರದಿ

| | | |
|---|---|---|
| **ಚಟುವಟಿಕೆ** : | ಮುಳುಗುವುದೇ? ತೇಲುವುದೇ? | **ವಿಷಯ** : ಪಕ್ಷಿಗಳು |
| **ಅಧ್ಯಾಪಿಕೆ** : | ವಿಜಯ ವಿ. | **ಮಕ್ಕಳು** : 16 |
| **ಶಾಲೆಯ ಹೆಸರು**: | ಪಿ.ಪಿ.ಇ.ಟಿ.ಟಿ.ಐ. ಕೋಟನ್‌ಹಿಲ್ | **ಸಮಯ** : 30 ನಿಮಿಷ |

ಬೆಳಿಗ್ಗೆ 11.30 ತರಗತಿ ಆರಂಭವಾಯಿತು. ಕುಶಲ ಸಂಭಾಷಣೆಯ ಬಳಿಕ ಅಧ್ಯಾಪಿಕೆ ಪಾರಿವಾಳ ಮತ್ತು ಇರುವೆಯ ಕಥೆ ಹೇಳಲು ತೊಡಗಿದರು. ಇರುವೆ ನೀರಿನಲ್ಲಿ ಬಿತ್ತು. ಒಣಗಿದ ಮರವಾದ ಕಾರಣ ಎಲೆಯೇ ಇರಲಿಲ್ಲ. ಈ ಸಂದರ್ಭದಲ್ಲಿ ನೀವು ಆದರೆ ಏನು ಮಾಡುವಿರಿ? ಎಂಬ ಪ್ರಶ್ನೆಯನ್ನು ಕೇಳಿದರು. ಬೇರೊಂದು ಮರದ ಎಲೆಯನ್ನು ಕೊಯ್ದು ಹಾಕಬೇಕೆಂದೂ, ಪಾರಿವಾಳ ಹಾರಿಬಂದು ಇರುವೆಯನ್ನು ಕೊಕ್ಕಿನಲ್ಲಿ ತೆಗೆದು ರಕ್ಷಿಸಬೇಕೆಂದೂ ಇಬ್ಬರು ಮಕ್ಕಳು ಹೇಳಿದರು. ಆನಂತರ ಗರಿಗಳು 'ಮುಳುಗುವುದು, ತೇಲುವುದು' ಎಂಬ ಚಟುವಟಿಕೆಯತ್ತ ಸಾಗಿದರು. ಬಕೇಟನ್ನು ತರಗತಿಯ ಮಧ್ಯದಲ್ಲಿಟ್ಟರು. ಮೊದಲು 3 ಮಕ್ಕಳನ್ನು ಕರೆದರು. 3 ವಸ್ತುಗಳನ್ನು ನೀಡಿದರು. ಅವರು ಅದನ್ನು ನೀರಿಗೆ ಹಾಕಿದರು. ಮುಳುಗುವವುಗಳನ್ನು ತೇಲುವವುಗಳನ್ನು ಗುರುತಿಸಿದರು. ನಂತರ ನೀರು ತುಂಬಿದ ಪಾರದರ್ಶಕವಾದ ಬಕೇಟನ್ನು ಪಾತ್ರೆಯನ್ನು ತಂದರು. ಎಲ್ಲರಿಗೂ ಕಾಣಿಸುವಂತೆ ಮೊದಲು ಉಪಯೋಗಿಸಿದ ಎಲ್ಲಾ ವಸ್ತುಗಳನ್ನು ನೀರಿನಲ್ಲಿ ಹಾಕಿ ಅವುಗಳು ಮುಳುಗುವುದೇ, ತೇಲುವುದೇ ಎಂದು ಚರ್ಚಿಸಿ ನಿಗಮನಗಳನ್ನು ಕ್ರೋಡೀಕರಿಸಲಾಯಿತು.

ಭಾರ ಇರುವ ವಸ್ತುಗಳು ನೀರಿನಲ್ಲಿ ಮುಳುಗುವುದೆಂದೂ ಭಾರ ಕಡಿಮೆಯಾದ ವಸ್ತುಗಳು ನೀರಿನಲ್ಲಿ ತೇಲುವುದೆಂದೂ ಕ್ರೋಡಿಕರಿಸಲಾಯಿತು. ತರಗತಿಯಲ್ಲಿ ಮಕ್ಕಳು ಸಕ್ರಿಯವಾಗಿ ಪಾಲ್ಗೊಂಡರು. ಒಂದೊಂದೇ ವಸ್ತುವನ್ನು ನೀರಿನಲ್ಲಿ ಹಾಕುವಾಗ ಅದು ಮುಳುಗಬಹುದು, ಇದು ತೇಲಬಹುದು ಎಂದು ಮಕ್ಕಳು ಹೇಳುತ್ತಿದ್ದರು. ಮಕ್ಕಳ ಯುಕ್ತಿ, ಚಿಂತನೆ, ಊಹೆ ಎಂಬಿವುಗಳಿಗೆ ಒಳ್ಳೆಯ ಅವಕಾಶ ನೀಡಿದ ಚಟುವಟಿಕೆಯಾಗಿತ್ತು. ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವಾಗ ತನ್ನ ಊಹೆ ಸರಿಯಾಗಿದೆಯೇ ಎಂದು ತಿಳಿಯಲು ಆಸಕ್ತಿಯಿಂದ ಶ್ರಮಿಸುತ್ತಿದ್ದರು. ಮೂವತ್ತು ನಿಮಿಷದಲ್ಲಿ ಚಟುವಟಿಕೆಯನ್ನು ಪೂರ್ತಿಗೊಳಿಸಲು ಸಾಧ್ಯವಾಯಿತು.

**ಚಟುವಟಿಕೆಯ ಮೌಲ್ಯಮಾಪನ ಮಾಡುವಾಗ**

- ಮಕ್ಕಳ ಮಟ್ಟಕ್ಕೆ ಅನುಸರಿಸಿತ್ತು ಹಾಗೂ ಆಸಕ್ತಿ ದಾಯಕವಾಗಿ ಇತ್ತು.
- ಬಕೆಟ್, ಪಾರದರ್ಶಕ ಪಾತ್ರೆ ಎಂಬಿವುಗಳಲ್ಲಿ ಎರಡು ಸಲ ಚಟುವಟಿಕೆ ಮಾಡುವ ಬದಲು, ಪಾರದರ್ಶಕ ಪಾತ್ರೆಯಲ್ಲಿ ಒಂದು ಸಲ ಚಟುವಟಿಕೆ ಮಾಡಿದರೆ ಸಾಕಾಗುತ್ತಿತ್ತು.
- ಎಲ್ಲಾ ಮಕ್ಕಳಿಗೂ ಒಂದೊಂದು ವಸ್ತುವನ್ನು ನೀರಿನಲ್ಲಿ ಹಾಕಲು ಅವಕಾಶ ಒದಗಿಸಿದ್ದು ಮುಂದುವರಿದ ಚಟುವಟಿಕೆಗೆ ಪ್ರೇರಣೆಯಾಗಿತ್ತು.
- ಬೇರೆ ಮರದಿಂದ ಎಲೆ ತರಬಹುದು, ಇರುವೆಯನ್ನು ಕುಕ್ಕಿ ತರಬಹುದು ಎಂಬೀ ಸೂಚನೆಗಳನ್ನು ತರಗತಿಯಲ್ಲಿ ನೀಡಿ ಹೆಚ್ಚಿನ ಚಿಂತನೆಗೆ ಅವಕಾಶ ನೀಡುತ್ತಿದ್ದರೆ ಉತ್ತಮವಾಗಿತ್ತು.
- ತರಗತಿಯಲ್ಲಿ ಎಲ್ಲಾ ವಸ್ತುಗಳನ್ನು ಸಂಗ್ರಹಿಸಿಟ್ಟು ಪಾರಿವಾಳದಂತೆ ಅಭಿನಯಿಸಿ ಒಂದೊಂದು ವಸ್ತುಗಳನ್ನು ತಂದು ಕೊಡುತ್ತಿದ್ದರೆ ಉತ್ತಮವಾಗಿತ್ತು.
- ಸ್ವಂತ ಗರಿಯನ್ನು ನೀಡಿ ಇರುವೆಯನ್ನು ರಕ್ಷಿಸಿದೆವು ಎಂಬ ಮೌಲ್ಯವನ್ನು ಮಕ್ಕಳಲ್ಲಿ ಉಂಟುಮಾಡಲು ಸಾಧ್ಯವಾಗುವುದು.





- ಅಡುಗೆ ಮನೆಯಲ್ಲಿರುವ ಉಪಯೋಗಿಸುವ ವಸ್ತುಗಳಲ್ಲಿ ಯಾವೆಲ್ಲಾ ವಸ್ತುಗಳು ಮುಳುಗುವವುಗಳು, ತೇಲುವವುಗಳು ಎಂಬ ಮುಂದುವರಿದ ಚಟುವಟಿಕೆಯ ಸಾಧ್ಯತೆಯನ್ನು ಪರಿಗಣಿಸಲು ಮೊಡ್ಯೂಲ್‌ಗೆ ಸಾಧ್ಯವಾಗಬೇಕು.

| | | | |
|---|---|---|---|
| **ಚಟುವಟಿಕೆ** : ಕೊಲೇಷ್ ನಿರ್ಮಾಣ | | **ವಿಷಯ** : ಪಕ್ಷಿಗಳು | |
| **ಅಧ್ಯಾಪಿಕೆ** : ಪ್ರಶಾಂತಿ ದೇವಿ | | **ಮಕ್ಕಳು** : 20 | |
| **ಶಾಲೆಯ ಹೆಸರು**: ಪಿ.ಪಿ.ಟಿ.ಟಿ.ಎ. ಕೋಟನ್‌ಹಿಲ್ | | **ಸಮಯ** : 30 ಮೀ | |

ಮಕ್ಕಳ ಜೊತೆ ಅನೌಪಚಾರಿಕ ಸಂಭಾಷಣೆ ನಡೆಸುತ್ತಾ ಅಧ್ಯಾಪಿಕೆ ತರಗತಿ ಆರಂಭಿಸಿದರು. ಮಕ್ಕಳ ಯೋಗಕ್ಷೇಮ ವಿಚಾರಿಸುತ್ತಾ "ಮುಂಜಾನೆಯಲ್ಲಿ ಜನರನ್ನು ರೆಕ್ಕೆ ಬಡಿದು ಕೂಗಿ ಕರೆದು ಎಚ್ಚರಿಸುವುದು ಯಾರು"? 'ಕೋಳಿ' ಎಂದು ಕೆಲವು ಮಕ್ಕಳು ಹೇಳಿದರು. ಮಕ್ಕಳು ಕುರ್ಚಿಗಳನ್ನು ವೃತ್ತಾಕಾರದಲ್ಲಿರಿಸಿ ಕುಳಿತಿದ್ದರು. ಆದುದರಿಂದ ಮಕ್ಕಳಿಗೆ ಅಧ್ಯಾಪಿಕೆಯ ಎಲ್ಲಾ ಚಟುವಟಿಕೆಗಳೂ ಸರಿಯಾಗಿ ಕಾಣಲು ಸಾಧ್ಯವಾಗುತ್ತಿತ್ತು. ನಂತರ, ಮನೆಯಲ್ಲಿ ಕೋಳಿಯನ್ನು ಮಾತ್ರ ಸಾಕುವುದೇ ಎಂದು ಟೀಚರು ಪ್ರಶ್ನಿಸಿದರು. ಗಿಳಿ, ಬಾತುಕೋಳಿ ಎಂಬಿವುಗಳನ್ನು ಹೇಳಿದರು. "ಕೋಳಿಯು ಎಲ್ಲರಿಗೂ ಇಷ್ಟವೇ"? ಎಂದು ಟೀಚರು ಕೇಳಿದರು. 'ಇಷ್ಟ' ಎಂದು ಮಕ್ಕಳು ಎಂದು ಹೇಳಿದರು. ನಂತರ ಹುಂಜದ ಪ್ರತ್ಯೇಕತೆಗಳನ್ನು ಹೇಳಿಸಿದರು.

**'ಹುಂಜವು ಬೆಳಗೆದ್ದು ಕೂಗುವುದು'** ಎಂಬ ಹಾಡನ್ನು ಹಾಡಿದರು. ಮಕ್ಕಳು ಜೊತೆಗೆ ಹಾಡು ಹಾಡುತ್ತಿರುವಾಗ ಅಧ್ಯಾಪಿಕೆ ತರಗತಿಯಲ್ಲಿ ಅಂಟಿಸಿದ ಹುಂಜಕೋಳಿಯ ಚಿತ್ರ ತೋರಿಸಿದರು. 'ಈ ಕೋಳಿ ಎಲ್ಲರಿಗೂ ಇಷ್ಟವಾಯಿತೇ' ಎಂದು ಅಧ್ಯಾಪಿಕೆ ಕೇಳಿದರು. ಇಷ್ಟವಾಯಿತೆಂದು ಮಕ್ಕಳು ಹೇಳಿದರು. ಇದೇ ರೀತಿ ಒಂದು ಕೋಳಿಯನ್ನು ತಯಾರಿಸೋಣವೇ ತಯಾರಿಸೋಣ ಎಂದು ಮಕ್ಕಳು ಹೇಳಿದರು. ನಂತರ ಮಕ್ಕಳನ್ನು ಗುಂಪು ಮಾಡುವರು. ವಿವಿಧ ಪಕ್ಷಿಗಳ ಚಿತ್ರವನ್ನು ಒಂದು ಕವರಿನಲ್ಲಿ ಹಾಕಿ ಪ್ರತಿ ಮಗುವಿನಿಂದ ಒಂದೊಂದು ಚಿತ್ರದಂತೆ ತೆಗೆಯಲು ಹೇಳುತ್ತಾರೆ.

ಎಲ್ಲರೂ ಚಿತ್ರಗಳನ್ನು ತೆಗೆದ ನಂತರ ಯಾವೆಲ್ಲಾ ಚಿತ್ರಗಳು ಸಿಕ್ಕಿದುವು ಎಂದು ಹೇಳಿಸುತ್ತಾರೆ.

ಗಿಳಿ, ಕಾಗೆ, ನವಿಲು, ಕೋಳಿ, ಚಾತಕ ಪಕ್ಷಿ ಎಂಬ ಚಿತ್ರಗಳನ್ನು ನೀಡಲಾಗಿತ್ತು. ನಂತರ ಅಧ್ಯಾಪಿಕೆ ಪ್ರತಿಯೊಂದು ಪಕ್ಷಿಯ ಹೆಸರನ್ನು ಹೇಳಿದರು. ಆ ಪಕ್ಷಿಗಳ ಚಿತ್ರ ಸಿಕ್ಕಿದವರನ್ನು 5 ಗುಂಪುಗಳಾಗಿ ಮಾಡಿದರು. ಒಂದೊಂದು ಗುಂಪಿನಲ್ಲಿ 4 ಮಕ್ಕಳು ಇದ್ದರು.

ನಂತರ ಡೆಸ್ಕಿನಲ್ಲಿ ಎದುರು ಬದುರಾಗಿ ಮಕ್ಕಳನ್ನು ಸಾಲಾಗಿ ಕುರ್ಚಿಯಲ್ಲಿ ಕುಳ್ಳಿರಿಸಿದರು. ಬಳಿಕ ಮಕ್ಕಳಿಗೆ ಹುಂಜಕೋಳಿಯ ಔಟ್‌ಲೈನ್ ಚಿತ್ರ, ಚಿಕ್ಕ ಪಾತ್ರೆಯಲ್ಲಿ ಚಿಕ್ಕದಾಗಿ ತುಂಡರಿಸಿದ ಕಾಗದ ಚೂರುಗಳು ಚಿಕ್ಕ ಪಾತ್ರೆಯಲ್ಲಿ ಮೈದದ ಅಂಟು, ತೆಂಗಿನ ಸಿಪ್ಪೆಯನ್ನು ಜಜ್ಜು ಮಾಡಿದ ಬ್ರಷ್ ಎಂಬಿವುಗಳನ್ನು ನೀಡಿದರು.

ಮಕ್ಕಳು ಪೇಪರ್ ತುಂಡಿಗೆ ಅಂಟು ಅಂಟಿಸಿ ಕೋಳಿಯ ಔಟ್‌ಲೈನಿನ ಒಳಗೆ ಅಂಟಿಸಿದರು. ಗುಂಪಿನ ಎಲ್ಲಾ ಮಕ್ಕಳು ಸೇರಿ ಕೊಲೇಷ್ ಪೂರ್ತಿಗೊಳಿಸಿದರು. ಅಧ್ಯಾಪಿಕೆ ಪ್ರತಿಯೊಂದು ಗುಂಪಿಗೆ ಆಗಮಿಸಿ ನಿರ್ದೇಶನಗಳು, ಅಗತ್ಯವಾದ ಸಹಾಯವನ್ನು ಮಾಡುತ್ತಿದ್ದರು. ಎಲ್ಲಾ ಗುಂಪು ಕೋಳಿಯ ಚಿತ್ರ ಅಂಟಿಸಿ ಪೂರ್ತಿಯಾದ ನಂತರ ಚಿತ್ರಗಳನ್ನು ಪ್ರದರ್ಶಿಸಿದರು. ಜೊತೆಯಲ್ಲಿ ಅಧ್ಯಾಪಿಕೆಯು ತಯಾರಿಸಿದ ಚಿತ್ರವನ್ನು ಇರಿಸಿದರು. ಇನ್ನು ಈ ಚಿತ್ರಗಳನ್ನು ಗೋಡೆಯಲ್ಲಿ ಪ್ರದರ್ಶಿಸುವ ಅಧ್ಯಾಪಿಕೆ ಹೇಳಿದರು.

ಪುನಃ ಒಮ್ಮೆ ಕೋಳಿಯ ಹಾಡು ಹಾಡಿಸಿ ತರಗತಿ ಮುಕ್ತಾಯಗೊಳಿಸಿದರು.

**ಪ್ರತ್ಯೇಕ ಗಮನಿಸಿದ ವಿಷಯಗಳು**

- ಕಾಗದ ತುಂಡರಿಸಲಿರುವ ಅವಕಾಶವನ್ನೂ ಕೂಡ ಮಕ್ಕಳಿಗೆ ನೀಡಬಹುದಿತ್ತು.
- ಅಂಟು ಅಂಟಿಸಲು, ತೆಂಗಿನ ಬ್ರಷ್ ಉಪಯೋಗಿಸಿದ್ದು ಉತ್ತಮವಾಗಿ ತೋರಿತು.
- ಗುಂಪು ಮಾಡಿದಾಗ ಚಾತಕಪಕ್ಷಿಯ ಚಿತ್ರ ನೀಡಿದ್ದು ಮಕ್ಕಳಿಗೆ ಗುರುತಿಸಲು ಸಾಧ್ಯವಿಲ್ಲ.
- ಮಕ್ಕಳು ಉತ್ಸಾಹದಿಂದ ಚಟುವಟಿಕೆಗಳಲ್ಲಿ ಭಾಗವಹಿಸಿದರು.
- ಎಲ್ಲಾ ಚಿತ್ರಗಳನ್ನು ತೋರಿಸಿದ ನಂತರ ಸಾಮಾನ್ಯ ಮೌಲ್ಯಮಾಪನ ನಡೆಸದೆ ಇದ್ದುದು ಕೊರತೆಯಾಗಿ ಕಂಡಿತು.



| | | | |
|---|---|---|---|
| **ಚಟುವಟಿಕೆ** | : ಹಾಡು ಹಾಡುವ | **ವಿಷಯ** | : **ಪಕ್ಷಿಗಳು** |
| **ಅಧ್ಯಾಪಿಕೆ** | : ಎ.ಕೆ. ಸಕೀನ | **ಮಕ್ಕಳು** | : 15 |
| **ವಿದ್ಯಾಲಯ** | : ಜಿ.ಯು.ಪಿ. ಎಸ್. ಪೂಜಪುರಂ | **ಸಮಯ** | : |

ಮಧ್ಯಾಹ್ನ 12: 30ಕ್ಕೆ ತರಗತಿ ಆರಂಭಿಸಿದರು. ಮಕ್ಕಳ ಜೊತೆ ಸೌಹಾರ್ದ ಸಂಭಾಷಣೆಯೊಂದಿಗೆ ಪಕ್ಷಿಗಳ ವಿಶೇಷತೆಗಳನ್ನು ಕೇಳಿದರು.

ಕಾಗದ ಫ್ಯಾನ್ (4 ಬಣ್ಣದ್ದು)ನ್ನು ವಿತರಿಸಿದರು. ಅವುಗಳನ್ನು ಎತ್ತರದಿಂದ ಕೆಳಗೆ ಹಾಕಿದರು. ಮಕ್ಕಳು ಸಂತೋಷದಿಂದ ಮತ್ತೆ ಮತ್ತೆ ಕುರ್ಚಿಯಲ್ಲಿ ಹತ್ತುತ್ತಿದ್ದರು.

ಕಾಗದ ಫ್ಯಾನ್‌ನಲ್ಲಿ ಚಿಕ್ಕ ಚಿತ್ರಗಳನ್ನು (ಪಕ್ಷಿಗಳ) ಅಂಟಿಸುವ ಚಟುವಟಿಕೆಯನ್ನು ಬದಲಾಯಿಸಿ ಅಧ್ಯಾಪಿಕೆ ಮಂಡಿಸಿದರು. ಎಲ್ಲರಿಗೂ ಮಾಡಲು ಸಾಧ್ಯವಾಗುವ ರೀತಿಯಲ್ಲಿ ಚಟುವಟಿಕೆ ಸರಳಗೊಳಿಸಿದ್ದು ಒಳ್ಳೆಯದಾಯಿತು.

ಪಕ್ಷಿಗಳ ಕುರಿತು ತಿಳಿದಿರುವ ಹಾಡು ಹಾಡುವ ಚಟುವಟಿಕೆಯನ್ನು ಕೈಬಿಟ್ಟು ನೇರವಾಗಿ ಚಟುವಟಿಕೆಗಳಿಗೆ ಹೋದರು (ಸಮಯದ ಕೊರತೆ ಇತ್ತು).

ಸೇಂಡ್ ಟ್ರೇ ಕಟೌಟ್‌ಗಳು ಎಂಬಿವುಗಳನ್ನು ಅಧ್ಯಾಪಿಕೆ ಮೊದಲೇ ತಯಾರಿ ಮಾಡಿದ್ದರು.

ಸೇಂಡ್ ಟ್ರೇಯ ಮುಂಭಾಗದಲ್ಲಿ ಬಟ್ಟೆ ಅಂಗಡಿಯೂ ಹಿಂಭಾಗದಲ್ಲಿ ಪಕ್ಷಿಗಳು ಹಾಗೂ ಮಕ್ಕಳ ಆಕೃತಿಗಳನ್ನು ಸಿದ್ಧಗೊಳಿಸಿದರು. ಬಟ್ಟೆ ಅಂಗಡಿಯ ಹಿನ್ನೆಲೆಯನ್ನು ಹಿಂಬದಿಯಲ್ಲಿ ಕ್ರಮೀಕರಿಸುತ್ತಿದ್ದರೆ ಒಳ್ಳೆಯದಾಗಿತ್ತು. ಅಲ್ಲದೆ ಸೇಂಡ್ ಟ್ರೇಯನ್ನು ಹತ್ತಿರದಿಂದ ನೋಡಲೂ ಕಂಡ ವಿಚಾರಗಳನ್ನು ಹೇಳಲು ಅವಕಾಶ ನೀಡಬೇಕಾಗಿತ್ತು. ಕಾಗೆಯ ಸ್ಟಿಕ್ ಪಪೆಟ್‌ನ್ನು ಎತ್ತಿ ಹಿಡಿದು ಕಾಗೆಯ ಕುರಿತು ಹೇಳಲು ಅವಕಾಶ ನೀಡಲಾಯಿತು. ಮಕ್ಕಳು ಉತ್ತಮ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಿದರು. ಬಳಿಕ ಅಧ್ಯಾಪಿಕೆ ಮೊದಲ 2 ಸಾಲುಗಳನ್ನು ಪ್ರಕಟಿಸಿದರು.



*'ಕಾಗೆಗೆ ಇರುವುದು ಒಂದೇ ಅಂಗಿ*

*ಅದುವೇ ಚಂದದ ಕಪ್ಪಂಗಿ'*

ಟೀಚರ್ ಜೊತೆಯಲ್ಲಿ ಮಕ್ಕಳಿಗೂ ಹಾಡಲು ಅವಕಾಶ ನೀಡಿದರು. ಮಕ್ಕಳಿಗೆ ಪ್ರೋತ್ಸಾಹ ನೀಡುವ ರೀತಿಯಲ್ಲಿ ಹೆಜ್ಜೆ ಹಾಕಿ ಅಭಿನಯಿಸಿ ಹಾಗೂ ಆಸಕ್ತಿದಾಯಕವಾಗಿ ಹಾಡುವುದು ಕಾಣಿಸಲಿಲ್ಲ.

ಗಿಳಿಯ ಉಡುಪು ಹಸಿರು ಬಣ್ಣವೆಂದು ಕೊಕ್ಕರೆಗೆ ಬಿಳಿ ಬಣ್ಣವೆಂದು ಮಕ್ಕಳು ಪ್ರತಿಕ್ರಿಯಿಸಿದ್ದರು.

4+ ಪ್ರಾಯದಲ್ಲಿರುವ ಮಕ್ಕಳು ಸಾಲುಗಳನ್ನು ಸೇರಿಸುವುದರಲ್ಲಿ ಸಮರ್ಥರಾಗಿದ್ದರು. ಕೆಲವೊಂದು 3+ ಮಕ್ಕಳು ಕೂಡಾ ಹೇಳುತ್ತಿದ್ದರು. 'ಗಿಳಿಗೆ ಇರುವುದು' ಎಂಬ ಸಾಲು ಅಧ್ಯಾಪಿಕೆ ಹಾಡಿ ನಿಲ್ಲಿಸಿದಾಗ ಮಕ್ಕಳು ಹಸಿರು ಉಡುಪು ಎಂದು ಸೇರಿಸಿ ಉಳಿದ ಸಾಲುಗಳನ್ನು ಹಾಡಲು ಅಧ್ಯಾಪಿಕೆ ಸೂಚಿಸಿದರು. ಮಕ್ಕಳು ಹಾಡಿದರು.

ಮಿಂಚುಳ್ಳಿಯ ಚಿತ್ರವನ್ನು ತೋರಿಸಿ ಪರಿಚಯಿಸಿದರು. ಹೆಚ್ಚಿನ ಮಕ್ಕಳು ಪಕ್ಷಿಯನ್ನು ಗುರುತಿಸಿದರು. ಸ್ವಲ್ಪ ಸ್ಪಷ್ಟವಾದ ದೊಡ್ಡ ಚಿತ್ರವನ್ನು ಉಪಯೋಗಿಸಬಹುದಾಗಿತ್ತು. ಮಕ್ಕಳು ಉಡುಪಿನ ಬಣ್ಣ ನೀಲಿ ಎಂದು ಹೇಳಿದರು. ಹೀಗೆ ಮಕ್ಕಳ ಭಾಗವಹಿಸುವಿಕೆಯೊಂದಿಗೆ ಹಾಡನ್ನು ಮುಂದುವರಿಸಲು ಸಾಧ್ಯವಾಯಿತು. ವಾಚಿಕವಾದ ಪ್ರತಿಕ್ರಿಯೆಗಳು ಉತ್ತಮವಾಗಿತ್ತಾದರೂ ಆಸಕ್ತಿದಾಯಕವಾಗಿ ಹಾಡುವ ಕಾರ್ಯದಲ್ಲಿ ಪ್ರತಿಕ್ರಿಯೆಯು ತೃಪ್ತಿದಾಯಕವಾಗಿರಲಿಲ್ಲ. ಗುಂಪಾಗಿ ಹಾಡುವುದರೊಂದಿಗೆ ಒಂಟಿಯಾಗಿ ಹಾಡುವುದಕ್ಕಿರುವ ಅವಕಾಶವು ಕಲಿಕಾ ಸಾಧನೆಯಲ್ಲಿದ್ದರೂ ಅದರ ಪ್ರಯೋಜನ ಪಡೆಯಲು ಸಾಧ್ಯವಾಗಲಿಲ್ಲ.

ಅರ್ಧಕ್ಕಿಂತ ಹೆಚ್ಚು ಮಕ್ಕಳು ಒಳ್ಳೆಯ ಪ್ರತಿಕ್ರಿಯೆ ನೀಡಿದ್ದರು. ಪ್ರಶ್ನೆಗಳನ್ನು, ಸೂಚನೆಗಳನ್ನು ಪಾಲಿಸುವುದರಲ್ಲಿ ಎಲ್ಲರೂ ಸಮರ್ಥರಾಗಿದ್ದರು. ಚಟುವಟಿಕೆಗಳಲ್ಲಿ ಹಿಂದುಳಿದವರನ್ನು ಮುಂದೆ ತರುವುದರಲ್ಲಿ ಟೀಚರ್‌ನ ಸಹಭಾಗಿತ್ವ ಇತ್ತು. ಭಾಷೆಯ ವಿಚಾರದಲ್ಲಿ ತರಗತಿಯಲ್ಲಿದ್ದ ಉತ್ತರಭಾರತದ ಒಂದು ಮಗುವಿಗೆ ಸಮಸ್ಯೆ ಉಂಟಾಗಿತ್ತು. ಆದರೆ ಹೆಜ್ಜೆಗಳನ್ನಿಟ್ಟು ಅಭಿನಯಿಸುವುದರಲ್ಲಿ ಆ ಮಗು ಸಮರ್ಥನಾಗಿದ್ದಾನೆ. ಕಲಿಕಾ ಸಾಮಾಗ್ರಿಗಳನ್ನು ಉಪಯೋಗಿಸುವುದರಲ್ಲಿ ಈ ಮೊದಲು ಸೂಚಿಸಿದ ಕೊರತೆಗಳನ್ನು ಬದಿಗಿರಿಸಿದರೆ ಚಟುವಟಿಕೆ ಉತ್ತಮವಾಗಿತ್ತು.

ಕಲಿಕೆಯೊಂದಿಗೆ ಮಕ್ಕಳನ್ನು ನಿರೀಕ್ಷಣೆ ಮಾಡಿರುವ ಮೌಲ್ಯಮಾಪನ ಸಾಧ್ಯತೆಯನ್ನು ಬಳಸಲಾಗಿದೆ.



| | | | | |
|---|---|---|---|---|
| **ಚಟುವಟಿಕೆ** | : | ಒಂದು, ಎರಡು, ಮೂರು ಎಂದು ಎಣಿಸೋಣವೇ? | **ವಿಷಯ** : | ಪಕ್ಷಿಗಳು |
| **ಅಧ್ಯಾಪಕರು** | : | ಶೆರೀಲ್ | **ಮಕ್ಕಳು** : | 15 |
| **ವಿದ್ಯಾಲಯ** | : | ಗವಃ ಯು.ಪಿ.ಎಸ್ ಪೂಜಪುರಂ | **ಸಮಯ** : | 30 ನಿಮಿಷ |

## ನಿರೀಕ್ಷಣೆ ವಿಶ್ಲೇಷಣಾ ವರದಿ

ಪಕ್ಷಿಗಳು ಎನ್ನುವ ವಿಷಯದಲ್ಲಿ ವೈಜ್ಞಾನಿಕ ವಿಭಾಗದ ಗಣಿತ ಆಟಗಳ ಚಟುವಟಿಕೆಯನ್ನು ಟ್ರೈಔಟ್‌ಗೆ ಆಯ್ಕೆ ಮಾಡಿದ್ದು. . ಸಂಖ್ಯೆಯನ್ನು ವಸ್ತುಗಳೊಂದಿಗೆ ಹೋಲಿಸಲಾಗುತ್ತದೆ. (1–5ವರೆಗೆ) ವಿವಿಧ ಪಕ್ಷಿಗಳನ್ನು ಗುರುತಿಸುವುದು (ಗಣಿತ ಪರವಾಗಿ), ಅನುಕರಿಸುವುದು ಮಾಡುವರು ಎಂಬ ಕಲಿಕಾ ಸಾಧನೆಗಳನ್ನು ಆಧಾರವಾಗಿರಿಸಿರುವ ಪ್ರಿಸ್ಕೂಲ್ ಚಟುವಟಿಕೆಯ ಫಲಪ್ರಾಪ್ತಿಯನ್ನೂ ಟ್ರೈಔಟ್‌ನಲ್ಲಿ ಅನ್ವೇಷಿಸಲಾಗಿದೆ. 30 ನಿಮಿಷ ಚಟುವಟಿಕೆಯ ಸಮಯವಾಗಿ ನಿಶ್ಚಯಿಸಲಾಗಿತ್ತು.

## ಸಂಘಟಿಸುವುದು

ಶಿಶು ಸೌಹಾರ್ದ ಪ್ರಿ ಪ್ರೈಮರಿ ತರಗತಿಯ ವಿಶೇಷತೆಯನ್ನು ಪ್ರಕಟಿಸುವ ತರಗತಿ ಕೋಣೆಯಲ್ಲಿ ಅಧ್ಯಾಪಿಕೆ ಅಗತ್ಯವಾದ ತಯಾರಿ ನಡೆಸಿದ್ದರು. ಅರ್ಧವೃತ್ತಾಕೃತಿಯಲ್ಲಿ ಆಸನಗಳನ್ನು ಕ್ರಮೀಕರಿಸಿಕೊಂಡು ಚಟುವಟಿಕೆಗಳನ್ನು ನಡೆಸಲಿರುವ ಸ್ಥಳವನ್ನು ನಿಶ್ಚಯಿಸಲಾಗಿತ್ತು. ಕಲಿಕಾ ಸಾಮಾಗ್ರಿಗಳು ಸಂಗ್ರಹ ಎಂಬಿವುಗಳು ಉತ್ತಮ ರೀತಿಯಲ್ಲಿದ್ದವು. ಒಂದು ಶಿಶು ಸೌಹಾರ್ದ ಯುತವಾದ ಬಿಗ್‌ಪೇಬೋರ್ಡ್ ತರಗತಿಯಲ್ಲಿ ಇರಿಸಬಹುದಾಗಿತ್ತು.

## ಚಟುವಟಿಕೆ

11–40ಕ್ಕೆ ತರಗತಿ ಆರಂಭಿಸಿದರು ಅಧ್ಯಾಪಿಕೆ ಕುಶಲೋಪರಿ ಸಂಭಾಷಣೆಯ ಮೂಲಕ ಚಟುವಟಿಕೆ ಆರಂಭಿಸಿದರು. ಮಕ್ಕಳ ಪ್ರವಾಸಕ್ಕೆ ಸಂಬಂಧಿಸಿದ ವಿಶೇಷತೆಗಳನ್ನು ಹೆಸರು ಕರೆದು ಕೇಳಿದ್ದು ಸಮಂಜಸವಾಗಿತ್ತು. ಇಲ್ಲಿ ಹೆಚ್ಚಿನ ನ ಮಕ್ಕಳನ್ನು ಕಲಿಕಾ ಚೌಕಟ್ಟಿನೊಳಗೆ ತರುವುದರಲ್ಲಿ ಅಧ್ಯಾಪಿಕೆ ಯಶಸ್ವಿಯಾಗಿದ್ದಾರೆ.

ಅಧ್ಯಾಪಿಕೆ ತಾನು ನೋಡಿದ 5 ಪಕ್ಷಿಗಳ ಚಿತ್ರಗಳನ್ನು ಪ್ರದರ್ಶಿಸಿದರು. ಒಂದೊಂದು ಪಕ್ಷಿಯ ಪ್ರತ್ಯೇಕತೆಗಳು, ಹೆಸರು ಎಂಬಿವುಗಳನ್ನು ಮಕ್ಕಳಿಂದ ಹೇಳಿಸಿದರು. ಇಲ್ಲಿ ಮಕ್ಕಳ ಚಿತ್ರಗಳನ್ನು ಡಿಸ್‌ಪ್ಲೇ ಬೋರ್ಡಿನಲ್ಲಿ ಅಂಟಿಸುವ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಖಚಿತಪಡಿಸಬಹುದಿತ್ತು. ಮಕ್ಕಳ ಮನೆಯಲ್ಲಿರುವ ಪಕ್ಷಿಗಳು, ನೋಡಿದ ಪಕ್ಷಿಗಳು ಎಂಬಿವುಗಳ ಕುರಿತು ಅಧ್ಯಾಪಿಕೆ ಕೇಳಿ ತಿಳಿಸಿದರು. ಮಕ್ಕಳ ಮೊದಲ ತಿಳುವಳಿಕೆಗೆ ಸಂಬಂಧಿಸಿದ ಮೌಲ್ಯಮಾಪನ ಮಾಡಲಿರುವ ಸಂದರ್ಭವನ್ನು ಇಲ್ಲಿ ಅಧ್ಯಾಪಿಕೆಯು ಫಲಪ್ರದವಾಗಿ ಉಪಯೋಗಿಸಿದ್ದರು.

ಬಣ್ಣ ನೀಡಲು ಕೊಟ್ಟ ಚಿತ್ರದಲ್ಲಿ ಪಕ್ಷಿಗಳ ಆಕಾರ ಮಕ್ಕಳಿಗೆ ಸಂಶಯಬಾರದ ರೀತಿಯಲ್ಲಿ ನೋಡಿಕೊಳ್ಳಬೇಕು. ಉದಾ : ಲವ್‌ಬರ್ಡ್ಸ್, ಪಾರಿವಾಳಗಳ ಆಕಾರದಲ್ಲಿರುವ ವ್ಯತ್ಯಾಸವನ್ನು ಪ್ರಕಟಪಡಿಸಬೇಕು. ಇಲ್ಲಿ ಬಣ್ಣ ನೀಡುವ ಚಟುವಟಿಕೆಯನ್ನು ಅಧ್ಯಾಪಿಕೆ ವ್ಯಕ್ತಿಗತವಾಗಿ ಮೌಲ್ಯಮಾಪನ ನಡೆಸಿದರು. ಅಗತ್ಯವಾದ ಮೌಲ್ಯಮಾಪನ ನಡೆಸುವುದು, ಫೀಡ್‌ಬ್ಯಾಕ್ ನೀಡುವುದು ಎಂಬಿವುಗಳನ್ನು ಅಧ್ಯಾಪಿಕೆ ಬೇಕಾದಷ್ಟು ಪರಿಗಣಿಸಿಲ್ಲ. ಮುಂದುವರಿದು ಒಂದೊಂದು ಪಕ್ಷಿಯನ್ನು ಹೆಸರು ತೆಗೆದು ಮುಂದೆ ಕರೆದರು. ಮಕ್ಕಳೆಲ್ಲಾ ನಿರ್ದೇಶನಗಳಿಗೆ ಅನುಸಾರವಾಗಿ ಮುಂದೆ ಬಂದರು. ಒಂದು ಮಗು ಮಾತ್ರ ತನ್ನ ಹೆಸರು ಕರೆಯದೇ ತನ್ನನ್ನು ತಪ್ಪಾಗಿ ತಿಳಿದು ಮುಂದೆ ಬಂದನು. ಇಲ್ಲಿ 'ಮಗು ಪಾರಿವಾಳ' ಅಲ್ಲ ಎಂದು ಹೇಳಿ ಅವನನ್ನು ತಿರುಗಿಸಿ ಕಳುಹಿಸಿದರು. ಈಗ ನೀನು ಚಿತ್ರ ನೋಡು, ನೀನು ಯಾವ ಪಕ್ಷಿ? ಜೊತೆಯಲ್ಲಿ ಬಂದಿರುವ ಹಕ್ಕಿಗಳಾವುವು? ಎಂಬಿತ್ಯಾದಿ ಪ್ರಶ್ನೆಗಳ ಮೂಲಕ ಸ್ವ – ಮೌಲ್ಯಮಾಪನ ನಡೆಸಲು ಸಾಧ್ಯವಾಗಿಸಬಹುದಾಗಿತ್ತು.

ಮುಂದುವರಿದು ಬಣ್ಣಕೊಟ್ಟ ಚಿತ್ರಗಳನ್ನು ಅಧ್ಯಾಪಿಕೆ ಮಕ್ಕಳಿಗೆ ಬ್ಯಾಡ್ಜ್ ಆಗಿ ನೀಡಿದರು. ಒಂದೊಂದು ಪಕ್ಷಿಯನ್ನು ಅಧ್ಯಾಪಿಕೆ ಮುಂದೆ ಕರೆದರು. ಪ್ರತ್ಯೇಕತೆ ನೋಡಿ ಗುಂಪುಗಳಾಗಿ ನಿಲ್ಲಲು, ತಾವು ಎಷ್ಟು ಮಂದಿ ಎಂದು ಎಣಿಸಿ ನೋಡಲು ಹೇಳಿದರು. ಮಕ್ಕಳಿಗೆ ಅದು ಸಾಧ್ಯವಾಗುತ್ತದೆ.

ಮುಂದುವರಿದು ಶಬ್ದ ಉಂಟು ಮಾಡಿ ಒಂದೊಂದು ಗುಂಪಿಗೂ ಕುಳಿತುಕೊಳ್ಳಲು ಕುರ್ಚಿಯನ್ನು ಕಂಡುಹಿಡಿದು ಕುಳಿತುಕೊಳ್ಳಲು ಹೇಳಿದರು. ಮಕ್ಕಳು ಸೂಚನೆಗಳನ್ನು ಪಾಲಿಸಿ ಕುರ್ಚಿಯನ್ನು ಕಂಡುಹಿಡಿದು ಕುಳಿತರು. ಇಲ್ಲಿ ಕುರ್ಚಿಗಳು ಮೂರು, ನಾಲ್ಕು, ಐದೆಂದೂ ಗುಂಪುಗಳಾಗಿ ವೃತ್ತದಲ್ಲಿ ಕ್ರಮೀಕರಿಸಿದ್ದರೆ ಒಳ್ಳೆಯದಿತ್ತು.







# 7 ಜೊತೆಗೂಡಿಸುವ (ಪ್ರತ್ಯೇಕ ಪರಿಗಣನೆಗೆ ಅರ್ಹರಾದ ಮಕ್ಕಳು)

ಗೋಕುಲ್ ಬೀನಾ ಟೀಚರಿನ ಕ್ಲಾಸಿನ ತಂಟೆಮಾಡುವ ವಿದ್ಯಾರ್ಥಿಯಾಗಿದ್ದ. ಬೀನಾ ಟೀಚರಿನ ನಿರ್ದೇಶಾನುಸಾರವಾಗಿ ಉಳಿದ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವಾಗ ಗೋಕುಲ್, ಹತ್ತಿರ ಕುಳಿತುಕೊಂಡವರಲ್ಲಿ ಏನಾದರೂ ಕೇಳುತ್ತಿರುತ್ತಾನೆ. ಅಧ್ಯಾಪಕರು ಗಮನಿಸುವಾಗ ಸುಮ್ಮನಾಗುತ್ತಿದ್ದ. ಅಧ್ಯಾಪಿಕೆಯ ಗಮನ ಬದಲಾದರೆ ಪುನಃ ಮೊದಲಿನಂತೆ, ಆದರೂ ಸ್ವಲ್ಪ ನಿಧಾನವಾಗಿ ಚಟುವಟಿಕೆಗಳನ್ನು ಅವನು ಪೂರ್ಣಗೊಳಿಸುತ್ತಾನೆ. ಬೀನಾ ಟೀಚರ್‌ನ ಸೂಕ್ಷ್ಮ ನಿರೀಕ್ಷೆಯಲ್ಲಿ ಒಂದು ವಿಷಯ ಗಮನಕ್ಕೆ ಬಂತು. ಅಧ್ಯಾಪಿಕೆ ಏನಾದರೂ ಹೇಳುವಾಗ ಗೋಕುಲ್ ತಲೆ ಕೆಳಗಾಗಿ ಕುಳಿತುಕೊಳ್ಳುತ್ತಾನೆ. ಹೆತ್ತವರಲ್ಲಿ ಅಧ್ಯಾಪಿಕೆ ಈ ವಿಷಯವನ್ನು ಚರ್ಚಿಸಿದರು. ಅಧ್ಯಾಪಿಕೆಯ ನಿರ್ದೇಶನವನ್ನು ಅರ್ಥೈಸಿ ಆಸ್ಪತ್ರೆಯಲ್ಲಿ ನಡೆಸಿದ ಉನ್ನತ ತಪಾಸಣೆಯಿಂದ ಗೋಕುಲ್‌ಗೆ ಕೇಳುವುದು ಕಡಿಮೆ ಎಂಬುದು ತಿಳಿದು ಬಂತು. ಅಧ್ಯಾಪಿಕೆ ಹೇಳುವುದು ಸರಿಯಾಗಿ ಕೇಳದೆ ಇರುವುದರಿಂದ ಗೆಳೆಯರೊಡನೆ ಅವನು ವಿಷಯಗಳನ್ನು ಕೇಳಿ ತಿಳಿಯುತ್ತಾನೆ ಎಂದು ಬೀನಾ ಟೀಚರ್‌ಗೆ ಅರ್ಥವಾಯಿತು.

ಹೀಗೆ ವಿಶೇಷತೆಗಳಿರುವ ಹಾಗೂ ಗಮನಹರಿಸಬೇಕಾಗಿರುವ ಮಕ್ಕಳು ತರಗತಿಯಲ್ಲಿಲ್ಲವೇ?

- ದೃಷ್ಟಿದೋಷವಿರುವವರು
- ಶ್ರವಣಶಕ್ತಿ ಕಡಿಮೆ ಇರುವವರು
- ಮಾತುಗಾರಿಕೆಯಲ್ಲಿ ಕೊರತೆ ಇರುವವರು
- ನಡೆದಾಡುವುದರಲ್ಲಿ ಸಮಸ್ಯೆ ಇರುವವರು
- ಬೌದ್ಧಿಕ ಸಮಸ್ಯೆ ಎದುರಿಸುವ ಮಕ್ಕಳು
- ಓಟಿಸಂನ ಸಮಸ್ಯೆ ಇರುವವರು

ಇವರೆಲ್ಲ ಪ್ರತ್ಯೇಕ ಪರಿಗಣನೆಗೆ ಅರ್ಹರಾದ ಮಕ್ಕಳು ಕೆಲವರು ಬರುವರು. ಹುಟ್ಟಿನಿಂದಲೇ ಇಂತಹ ಸಮಸ್ಯೆಗಳು ಇರುವವರಾಗಿರಬಹುದು ಅಲ್ಲದಿದ್ದರೆ ಬಳಿಕ ವಿವಿಧ ಕಾರಣಗಳಿಂದ ಈ ರೀತಿಯ ಸಮಸ್ಯೆಗಳಿಗೆ ಒಳಗಾಗಿರಬಹುದು. ಆದಷ್ಟು ಬೇಗನೇ ಶಾರೀರಿಕವೂ, ಮಾನಸಿಕವೂ ಆದ ವಿಕಲತೆಯನ್ನು ಕಂಡುಹಿಡಿಯುವುದು ಸೂಕ್ತ. ಉನ್ನತ ಚಿಕಿತ್ಸೆಯನ್ನು ಲಭಿಸುವಂತೆ ಮಾಡಿದರೆ ಪೂರ್ಣವಾದ/ಭಾಗಿಕವಾದ ಸಮಸ್ಯೆಗಳನ್ನು ಇಲ್ಲದಾಗಿಸಲು ಸಾಧ್ಯ. ಈ ವಿಷಯಕ್ಕೆ ಸಂಬಂಧಿಸಿ ಪ್ರಿಸ್ಕೂಲ್ ಹಂತದಿಂದಲೇ ಅಧ್ಯಾಪಿಕೆಯ ಸೂಕ್ಷ್ಮವಾದ ನಿರೀಕ್ಷಣೆ ಹಾಗೂ ಅನ್ವೇಷಣೆ ಅಗತ್ಯವಾಗಿ ಬೇಕಾಗಿದೆ.

## ಕಣ್ಣಿನ ಸಮಸ್ಯೆಗಳನ್ನು ಹೇಗೆ ಕಂಡುಹಿಡಿಯಬಹುದು?

- ಅಸಾಧಾರಣವಾಗಿಯೂ, ನಿರಂತರವಾಗಿಯೂ ಕಣ್ಣು ಮುಚ್ಚಿ ತೆರೆಯುತ್ತಾ ಇರುವುದು
- ಯಾವಾಗಲೂ ಕಣ್ಣು ಉಜ್ಜುವುದು, ತುರಿಸುವುದು.
- ಯಾವಾಗಲೂ ಕಣ್ಣಿನಲ್ಲಿ ನೀರು ಬರುವುದು
- ಸ್ಥಿರವಾಗಿ ಕಣ್ಣು ನೋವು ಉಂಟಾಗುವುದು
- ನಡೆಯುವಾಗಲೂ, ಓಡುವಾಗಲೂ, ಕಷ್ಟಪಡುವುದು (ಅತಿ ಸೂಕ್ಷ್ಮತೆ ಪ್ರಕಟಿಸುವ ದು ಓಡಲು ಉದಾಸೀನ ತೋರುವುದು)
- ನೆಲಕ್ಕೆ ನೋಡಿ ಜಾಗರೂಕತೆಯಿಂದ ನಡೆಯುವರು.
- ಸಂಚರಿಸುವಾಗ ಎಡವಿ ಬೀಳುವುದು, ವಸ್ತುಗಳಿಗೆ ಹೋಗಿ ಢಿಕ್ಕಿ ಹೊಡೆಯುವುದು.
- ಯಾವುದೇ ವಸ್ತುವನ್ನು ನೋಡುವಾಗಲೂ ಮುಖದ ಹತ್ತಿರ ತಂದು ನೋಡುವರು.
- ಕೆಲವು ಬಣ್ಣಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.
- ಯಾವಾಗಲೂ ಬೋರ್ಡಿನ ಹತ್ತಿರವೇ ಬಂದು ನಿಲ್ಲುವುದು ಎಂಬಿವುಗಳೆಲ್ಲ ದೃಷ್ಟಿದೋಷದ ಲಕ್ಷಣವಾಗಿರಬಹುದು.

## ಶ್ರವಣ ಸಮಸ್ಯೆ ಇರುವ ಮಕ್ಕಳು

- ಉಚ್ಚಾರ ದೋಷ
- ಸಾಮಾನ್ಯ ನೋಟಕ್ಕೆ ಕಾಣುವ ರೀತಿಯಲ್ಲಿ ಕಿವಿಗೆ ಸಂಬಂಧಿಸಿದಂತೆ ತೊಂದರೆಗಳು.
- ನಿರಂತರವಾಗಿ ಕಿವಿ ನೋವು ಬರುತ್ತಿರುವುದು.
- ಕಿವಿ ಸೋರುತ್ತಿರುವುದು
- ಕೇಳಬೇಕಾದ ಸಂದರ್ಭಗಳಲ್ಲಿ ತಲೆಯನ್ನು ಒಂದು ಬದಿಗೆ ಬಾಗಿ ಹಿಡಿಯುತ್ತಾರೆ.
- ಪ್ರತಿಯೊಂದು ವಿಷಯವನ್ನು ಮತ್ತೆ ಮತ್ತೆ ಹೇಳುವಂತೆ ಒತ್ತಾಯಿಸುವುದು.
- ಕೇಳಿದ ಪ್ರಶ್ನೆಗೆ ಉತ್ತರಿಸದಿರುವುದು, ಬೇರೆ ಏನಾದರೂ ಹೇಳುವುದು.
- ಮಾತುಗಾರಿಕೆ ವಿಳಂಬ
- ಇತರರು  ಮಾತನಾಡುವಾಗ ತುಟಿಯ ಚಲನೆಯನ್ನು ಗಮನಿಸಿ ನೋಡುವುದು.

ಈ ಸಮಸ್ಯೆಗಳು ಇರುವ ಮಕ್ಕಳಿಗೆ ಶ್ರವಣದೋಷ ಇರುವ ಸಾಧ್ಯತೆ ಇದೆ.

## ಮಾತುಗಾರಿಕೆಯಲ್ಲಿ ಕೊರತೆ ಅನುಭವಿಸುವ ಮಕ್ಕಳು

- ಬೆಳವಣಿಗೆಯ ಹಂತಕ್ಕನುಸರಿಸಿ ಮಾತನಾಡುವ ಸಾಮರ್ಥ್ಯ ವಿಕಾಸಗೊಳ್ಳದ ಅವಸ್ಥೆ.
- ಅಸ್ವಾಭಾವಿಕವಾಗಿ ಮಾತು ನಿಂತು ಹೋಗುವುದು.
- ಮಾತಿನ ಮಧ್ಯೆ ಅಕ್ಷರಗಳು, ಪದಗಳು ಎಂಬಿವುಗಳು ಬಿಟ್ಟು ಹೋಗುವುದು
- ಮಾತಿನಲ್ಲಿ ಉಗ್ಗುವಿಕೆ
- ದೀರ್ಘ ಸಮಯ ಶಬ್ದ ಹೊರಡಿಸಲು ಸಾಧ್ಯವಾಗದೇ ಇರುವುದು
- ಅಸ್ಪಷ್ಟವಾದ ಮಾತುಗಾರಿಕೆ
- ತಿದ್ದಿದರೂ ಕೆಲವು ಅಕ್ಷರಗಳನ್ನು/ಪದಗಳನ್ನು ತಪ್ಪಾಗಿಯೇ ಉಚ್ಚರಿಸುವುದು.
  ಇದು ಮಾತನಾಡಲಿರುವ ವೈಕಲ್ಯವಾಗಬಹುದು.

## ಚಲನೆಯಲ್ಲಿ ಸಮಸ್ಯೆ ಇರುವ ಮಕ್ಕಳು

- ಸಂಧಿಗಳು ಅನುಕೂಲಕರವಾಗಿ ಚಲಿಸದಿರುವುದು, ನಿರಂತರವಾದ ನೋವು
- ಸಂಧಿಗಳು ನಿರಂತರವಾಗಿ ಬಾತುಕೊಳ್ಳುವುದು
- ಕೈಗಳು, ಕುತ್ತಿಗೆ, ಬೆರಳುಗಳು ಸೊಂಟ ಎಂಬೀ ಕಡೆಗಳಲ್ಲಿ ಎದ್ದು ಕಾಣುವ ರೂಪ ವಿಕಾರಗಳು ವೈಕಲ್ಯಗಳು
- ಕುಳಿತುಕೊಳ್ಳುವುದು, ವಸ್ತುಗಳನ್ನೂ ಹಿಡಿಯುವುದು, ಬರೆಯುವುದು ಎಂಬಿವುಗಳಿಗಿರುವ ಸಮಸ್ಯೆ
- ಶರೀರವನ್ನು ಬಿಗಿ ಹಿಡಿದು ನಡೆಯುವುದು
- ಅವಯವಗಳು ನಷ್ಟವಾಗುವುದು (ಅಪಘಾತ, ರೋಗ ಮುಂತಾದವುಗಳಿಂದ)
- ನಿಯಂತ್ರಣವಿಲ್ಲದ ರೀತಿಯಲ್ಲಿರುವ ಶರೀರದ ಚಲನೆಗಳು
- ನಡೆಯಲು, ಓಡಲು ಅಸಡ್ಡೆ ತೋರಿಸುವುದು.

ಶಾರೀರಿಕವಾದ ಚಲನೆಯಲ್ಲಿರುವ ಸಮಸ್ಯೆಯೇ ಇದಕ್ಕೆ ಕಾರಣವಾಗಿರಬಹುದು.

## ಬೌದ್ಧಿಕವಾಗಿ ಸವಾಲುಗಳನ್ನು ಎದುರಿಸುವ ಮಕ್ಕಳು

- ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗುವ ಶಾರೀರಿಕ ಪ್ರತ್ಯೇಕತೆಗಳನ್ನು ಕೆಲ ಮಕ್ಕಳಲ್ಲಿ ನೋಡಬಹುದು (ಮಂಗೋಲಿಸಂ, ದೊಡ್ಡ ತಲೆ, ತೆರೆದು ಹಿಡಿದ ವಾಯು ಮೊದಲಾದವುಗಳು)
- ಪ್ರಾಥಮಿಕ ಕಾರ್ಯಗಳನ್ನು ಕೂಡ ಸ್ವತಃ ಮಾಡಲು ಸಾಧ್ಯವಾಗುವುದಿಲ್ಲ.
- ಸಮಪ್ರಾಯದವರೊಡನೆ ಹೋಲಿಸಿದಾಗ ಎಲ್ಲಾ ವಿಭಾಗದಲ್ಲೂ ತುಂಬಾ ಹಿಂದಿರುವವರು.
- ಚಲನೆಯಲ್ಲಿ ಸಮಸ್ಯೆಯನ್ನು ಅನುಭವಿಸುವರು.
- ಯಾವುದೇ ಸಾಮರ್ಥ್ಯಗಳಿಸಲು ಅಧಿಕ ಸಮಯ ಬೇಕಾಗಿ ಬರುವುದು.
- ಕಲಿಕೆಯಲ್ಲಿ ಹಿಂದಿರುವುದು.

ಇವೆಲ್ಲಾ ಬೌದ್ಧಿಕವಾದ ಸಮಸ್ಯೆ ಅನುಭವಿಸುವ ಮಕ್ಕಳ ಪ್ರತ್ಯೇಕತೆಗಳಾಗಿವೆ.

## ಓಟಿಸಂ ಇರುವ ಮಕ್ಕಳು

- ಪಾಯಕ್ಕೆ ತಕ್ಕಂತೆ ಮಾತನಾಡುವ ಸಾಮರ್ಥ್ಯ ವಿಕಾಸಗೊಳ್ಳದ ಸ್ಥಿತಿ.
- ಪ್ರಾಯಕ್ಕನುಗುಣವಾಗಿ ಪರಸ್ಪರ ಪೂರಕವಾದ ಸಾಮಾಜಿಕ ಸಾಮರ್ಥ್ಯ (ಮುಖ ನೋಡುವುದು, ಕರೆಯುವಾಗ ನೋಡುವುದು, ಬೊಟ್ಟೆತ್ತಿ ತೋರಿಸುವುದು, ಟಾಟಾ ಹೇಳುವುದು)
- ಉದ್ದೇಶ ರಹಿತವಾದ ಆವರ್ತನ ಚೇಷ್ಟೆಗಳು, ಮಾತುಗಳು ಎಂಬಿವುಗಳನ್ನು ಪ್ರಕಟಿಸುವರು.
- ಗುಂಪಿನಿಂದ ಬೇರ್ಪಟ್ಟು ಒಂಟಿಯಾಗಿ ಆಟಗಳಲ್ಲಿ ನಿರತರಾಗುವುದು.
- ಕೆಲವು ಮಕ್ಕಳು ಇದರ ಜೊತೆಯಲ್ಲಿ ತುಂಟತನವನ್ನೂ ಪ್ರಕಟಿಸುವರು.

ಶಾರೀರಿಕವಾಗಿ ಒಂದಕ್ಕಿಂತ ಹೆಚ್ಚು ಸಮಸ್ಯೆಗಳು ಇರುವವರು ಇದ್ದಾರೆ. ಯಾವುದಾದರೂ ಒಂದು ವಿಭಾಗದಲ್ಲಿ ಎದುರಿಸುವ ಸಮಸ್ಯೆಗಳು ಬೇರೆ ವಿಭಾಗಗಳಲ್ಲೂ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

ಉದಾ : ಶ್ರವಣ ಸಾಮರ್ಥ್ಯ ಕಡಿಮೆ ಇರುವ ಮಕ್ಕಳಲ್ಲಿ ಮಾತುಗಾರಿಕೆಯ ತೊಂದರೆ ಉಂಟಾಗಲು ಸಾಧ್ಯತೆ ಇದೆ.

ಶಾರೀರಿಕವಾದ ಸವಾಲುಗಳನ್ನು ಎದುರಿಸುವ ಮಕ್ಕಳನ್ನು ಗುರುತಿಸಲು ಯಾವಾಗಲೂ ಸಾಧ್ಯವಾಗಬೇಕೆಂದಿಲ್ಲ. ಪ್ರತ್ಯಕ್ಷವಾಗಿ ಗಮನಕ್ಕೆ ಬರುವುದೋ, ಅನುಭವಕ್ಕೆ ಬರುವುದೋ, ಆದವುಗಳನ್ನು ಮಾತ್ರವೇ ಬೇಗನೆ ಗುರುತಿಸಲು ಸಾಧ್ಯವಾಗಬಹುದು. ಆದರೂ ಮೇಲೆ ಹೇಳಿದ ಲಕ್ಷಣಗಳಲ್ಲಿರುವ ಮಕ್ಕಳನ್ನು ಪ್ರತ್ಯೇಕವಾಗಿ ಗಮನಿಸಬೇಕಾಗಿದೆ.

- ಹೆತ್ತವರೊಂದಿಗಿನ ಅನ್ವೇಷಣೆ
- ಮನೆಗಳಿಗೆ ಭೇಟಿ
- ವೈದ್ಯಕೀಯ ತಪಾಸಣೆಗೆ ನಿರ್ದೇಶಿಸುವುದು

ಇವೆಲ್ಲವೂ ಗುರುತಿಸುವುದಕ್ಕೆ ಅವಲಂಬಿಸುವ ಮಾರ್ಗಗಳಾಗಿವೆ.

ಶಾರೀರಿಕವಾದ ಸವಾಲುಗಳನ್ನು ಎದುರಿಸುವ ಮಕ್ಕಳು ಇದ್ದಾರೆ ಎಂಬುದನ್ನು ಗುರುತಿಸಿ ಈ ಸವಾಲುಗಳನ್ನು ಪರಿಹರಿಸಲಿರುವ ಪ್ರಯತ್ನಗಳನ್ನು ಅಧ್ಯಾಪಿಕೆ ನಡೆಸಬೇಕು.

ತರಗತಿ ಕೋಣೆಯೊಳಗೂ ಮನೆಯಲ್ಲಿ ಹೆತ್ತವರ ಸಹಾಯದೊಂದಿಗೂ, ಇಂತಹ ಮಕ್ಕಳಿಗೆ ನಿರಂತರವಾಗಿ ಸಹಾಯ ನೀಡಬೇಕಾಗಬಹುದು.

ದೃಷ್ಟಿದೋಷ ಇರುವ ಮಕ್ಕಳಿಗೆ ಸ್ವತಂತ್ರವಾದ ಚಲನೆಗಿರುವ ಅವಕಾಶ ನೀಡುವುದು. ಬೇರೆ ಮಕ್ಕಳೊಂದಿಗೆ ಬೆರೆಯುವುದಕ್ಕಿರುವ ಧಾರಾಳ ಅವಕಾಶಗಳನ್ನು ನೀಡುವುದು.

ಎಲ್ಲಾ ಕಲಿಕೆಯ ಚಟುವಟಿಕೆಗಳಲ್ಲೂ ಭಾಗವಹಿಸುವಿಕೆಯನ್ನು ಖಚಿತಪಡಿಸಬೇಕು. ಸರಿಯಾಗಿ ಕಾಣುವ ರೀತಿಯಲ್ಲಿ ಆಸನಗಳನ್ನು ಕ್ರಮೀಕರಿಸಬೇಕು. ಕಲಿಕಾ ಸಾಮಗ್ರಿಗಳಲ್ಲಿ ಅಗತ್ಯವಾದ ಬದಲಾವಣೆ ತರುವ ಕೆಲಸ ಮಾಡಬೇಕು (ಅಗಲ, ಬಣ್ಣ)

- ಶಬ್ದ, ವಾಸನೆ ಎಂಬಿವುಗಳ ಮೂಲಕ ವಸ್ತುಗಳನ್ನು ಗುರುತಿಸಲಿರುವ ತರಬೇತು ನೀಡಬೇಕು.
- ಸಹಾನುಭೂತಿಯೊಂದಿಗೆ ವ್ಯವಹರಿಸಲಿರುವ ಮನೋಭಾವವನ್ನು ಇತರ ಮಕ್ಕಳಲ್ಲಿ ಬೆಳೆಸುವುದು.
- ಸವಾಲುಗಳನ್ನು ಪರಿಹರಿಸಲಿರುವ ಉಪಕರಣಗಳನ್ನು ನಿಖರವಾಗಿ ಹಾಗೂ ಸಕಾಲಿಕವಾಗಿ ಬದಲಾವಣೆಯೊಂದಿಗೆ ಉಪಯೋಗಿಸುತ್ತಾರೆ ಎಂದು ಖಚಿತಪಡಿಸುವುದು.

ದೃಷ್ಟಿದೋಷ ಇರುವ ಮಕ್ಕಳಿಗೆ ಈ ರೀತಿ ವಿಶೇಷ ಗಮನ ಅಗತ್ಯ.

ಗುಂಪು ಚಟುವಟಿಕೆಗೆ ಹೆಚ್ಚಿನ ಅವಕಾಶ ನೀಡುವುದು.

ಸೂಚನೆಗಳನ್ನು ಬರೆದು ತೋರಿಸಿ, ಆಂಗಿಕ ಭಾಷೆಯ ಮೂಲಕ ತಿಳಿಸುವುದು.

ಶ್ರವಣದೋಷ ಪರಿಹರಿಸಲು ಇರುವ ಉಪಕರಣಗಳನ್ನು ಉಪಯೋಗಿಸುತ್ತಾನೆ ಎಂಬುದನ್ನು ಖಚಿತಪಡಿಸುವುದು.

ಉಪಕರಣದಲ್ಲಿ ಕಾರ್ಯಕ್ಷಮತೆಯನ್ನು ಖಚಿತಪಡಿಸುವುದು. ವೈದ್ಯಕೀಯ ತಪಾಸಣೆಯನ್ನು ನಿಖರವಾಗಿ ನಡೆಸುವುದಕ್ಕೆ ಅಗತ್ಯವಾದ ಅರಿವನ್ನು ಹೆತ್ತವರಿಗೆ ನೀಡುವುದು.

ಮನೆಯಿಂದ ಸಹಾನುಭೂತಿಯನ್ನೊಳಗೊಂಡ ಬೆಂಬಲ ಲಭಿಸುತ್ತದೆ ಎಂದು ದೃಢಪಡಿಸಬೇಕು.

ಮಾತುಗಾರಿಕೆಯ ಸಮಸ್ಯೆಗೆ ಪ್ರಧಾನ ಕಾರಣ ಶ್ರವಣದೋಷವಾಗಿರಬಹುದು.

ಮಾತುಗಾರಿಕೆಯ ಸಾಮರ್ಥ್ಯ ಕಡಿಮೆ ಇರುವ ಮಕ್ಕಳಿಗೆ ಆತ್ಮವಿಶ್ವಾಸದಿಂದ ಮಾತನಾಡಲು ಧಾರಾಳ ಸಂದರ್ಭಗಳನ್ನು ಉದ್ದೇಶ ಪೂರ್ವಕವಾಗಿ ಒದಗಿಸಬೇಕು.

ಬಾಯಿಗೂ ನಾಲಿಗೆಗೆ ವ್ಯಾಯಾಮ ನೀಡುವಂತಹ ರೀತಿಯಲ್ಲಿ ಪದ್ಯಗಳನ್ನು ಹೇಳಲು ಸಂದರ್ಭ ಒದಗಿಸಬೇಕು.

*ಉದಾ :* * *'ಎತ್ತೆರೆಡೆಮ್ಮೆರಡಾಡೆರ*
*ಡಾಡಿನಮರಿಯೆರಡೆರಡು'*
* *'ಕಾರ್‌ರ್‍ಯಾಲಿ, ಲಾರಿರ್‍ಯಾಲಿ'*

ಪ್ರತಿಯೊಂದು ವಿಷಯವು ಹೇಳಬೇಕಾದ ಸಂದರ್ಭಗಳಲ್ಲಿ ಬೇಕಾದಷ್ಟು ಸಮಯವಕಾಶ ನೀಡಬೇಕು.

ಇನ್ನಷ್ಟೂ ಹೇಳಲು ಪ್ರೋತ್ಸಾಹಿಸಬೇಕು.

ಆತ್ಮವಿಶ್ವಾಸ ಕಡಿಮೆಯಾಗುವ ರೀತಿಯಲ್ಲಿ ಮಾತನಾಡಲು ಒತ್ತಾಯಿಸಬಾರದು. (ಗುಂಪಿನ ಮುಂದೆ ಹೇಳಲು).

ಪ್ರಕಟಪಡಿಸುವ ಇತರ ಸಾಮರ್ಥ್ಯಗಳನ್ನು ಉತ್ತಮ ರೀತಿಯಲ್ಲಿ ಬಿಂಬಿಸಿ ಪ್ರೋತ್ಸಾಹಿಸಬೇಕು.

ಮಾತುಗಾರಿಕೆ ಅಗತ್ಯವಿಲ್ಲದ ಚಟುವಟಿಕೆಗಳನ್ನು (ಚಿತ್ರ ಬಿಡಿಸುವುದು, ನಿರ್ಮಾಣ ಮೂಕಾಭಿನಯ) ಸೇರಿಸಿ ಚಟುವಟಿಕೆಗಳ ಯೋಜನೆ ಮಾಡಬೇಕು . ಸ್ಪೀಚ್‌ಥೆರಾಪಿ ಅಗತ್ಯವಿರುವ ಮಕ್ಕಳಿಗೆ ಅದಕ್ಕೆ ಬೇಕಾದ ಸಂದರ್ಭವನ್ನು ಒದಗಿಸಬೇಕು.

ರಕ್ಷಕರಿಗೆ ಅರಿವು ಮೂಡಿಸಬೇಕು.

ಮಾತುಗಾರಿಕೆಯಲ್ಲಿ ವೈಕಲ್ಯವಿರುವ ಮಕ್ಕಳಿಗೆ ಈ ರೀತಿಯ ಗಮನ ನೀಡಬೇಕಾಗಿದೆ.

ಚಲನ ಸಂಬಂಧೀ ಸಮಸ್ಯೆಗಳನ್ನು ಎದುರಿಸುವ ಮಕ್ಕಳು ಎಲ್ಲಾ ರೀತಿಯಲ್ಲೂ ಸಾಧಾರಣ ಮಕ್ಕಳಂತೆಯೇ ಇರುವವರು. ಅವರಿಗೆ ಬರುವುದಕ್ಕೆ ಹೋಗುವುದಕ್ಕೆ ಬೇಕಾದ ಸೌಲಭ್ಯ ಮಾಡಿಕೊಡಬೇಕು. (ವಾಹನ, ವೀಲ್ ಚೆಯರ್, ರ್‍ಯಾಂಪ್)

- ಆತ್ಮವಿಶ್ವಾಸ ಬೆಳೆಸುವ ರೀತಿಯಲ್ಲಿ ಮಕ್ಕಳೊಂದಿಗೆ ಬೆರೆಯಬೇಕು.
- ಆಟಗಳ ಯೋಜನೆಯನ್ನು ತಯಾರಿಸುವಾಗ ಇಂತಹ ಮಕ್ಕಳಿಗೆ ಕೂಡಾ ಸಾಧ್ಯವಾಗುವಂತಹ ಆಟಗಳನ್ನು ಸೇರಿಸಬೇಕು.
- ಇತರ ಮಕ್ಕಳಿಗೆ ಸಹಾನುಭೂತಿಯಿಂದ ವರ್ತಿಸಲು ಮಾರ್ಗದರ್ಶನ ನೀಡಬೇಕು.
- ಟೋಯಿಲೆಟ್, ವಾಷ್‌ಬೇಸಿನ್, ಆಸನಗಳು ಮೊದಲಾದ ಎಲ್ಲಾ ಕಡೆಗಳಲ್ಲಿ ಶಾರೀರಿಕವಾದ ವೈಕಲ್ಯಗಳನ್ನು ಪರಿಹರಿಸುವ ರೀತಿಯಲ್ಲಿ ಪುನಃ ಕ್ರಮೀಕರಿಸಬೇಕು.

ಬೌದ್ಧಿಕ ತೊಂದರೆ ಇರುವ ಮಕ್ಕಳಿಗೆ ಪ್ರತ್ಯೇಕ ಗಮನ ಬೇಕಾಗಿ ಬರುತ್ತದೆ. ವ್ಯಕ್ತಿಗತವಾಗಿ ಮಾಡಬೇಕಾದ ಕಾರ್ಯಗಳಲ್ಲಿ ನಿರಂತರವಾದ ಗಮನ ಹಾಗೂ ತರಬೇತಿ ನೀಡಬೇಕಾಗಿ ಬರುವುದು. (ಶರೀರ ಶುಚಿಯಾಗಿಸುವುದು, ಟೋಯಿಲೆಟ್ ಉಪಯೋಗಿಸುವುದು, ಆಹಾರ ಸೇವಿಸುವುದು.)

ಬೌದ್ಧಿಕ ತೊಂದರೆ ಇರುವ ಮಕ್ಕಳಿಗೆ ಇತರ ಶಾರೀರಿಕ ತೊಂದರೆಗಳು (ದೃಷ್ಟಿ, ಶಬ್ದ, ಚಲನೆ, ಮಾತುಗಾರಿಕೆ) ಇಲ್ಲ ಎಂದು ದೃಢೀಕರಿಸಬೇಕು.

ಪ್ರೀತಿಯಿಂದಿರುವ ನಡತೆ, ಪದೇ ಪದೇ ನೆನಪಿಸುವುದು, ವಿಶೇಷ ಗಮನ ಇತ್ಯಾದಿಗಳನ್ನು ಇಂತಹ ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀಡಬೇಕಾಗಿ ಬರುವುದು. ರಕ್ಷಕರಿಗೆ ಅಗತ್ಯವಾದ ತಿಳುವಳಿಕೆ ಕೊಡಬೇಕು.

ಸಾಮಾಜಿಕವಾದ ಎಲ್ಲಾ ಕಾರ್ಯಕ್ರಮಗಳಲ್ಲಿ ಸಭೆ ಸಮಾರಂಭಗಳಲ್ಲೂ ಪಾಲ್ಗೊಳ್ಳುವಂತೆ ಮಾಡಬೇಕು. ಚಿಕಿತ್ಸೆ ಅಗತ್ಯವಿದ್ದಲ್ಲಿ ಬೇಕಾದ ಸಮಯದಲ್ಲಿ ದೊರಕಿಸಬೇಕು. (ಇಂತಹ ಮಕ್ಕಳಿಗೆ ಅಪಸ್ಮಾರದಂತಿರುವ ರೋಗಗಳು ಇರಲು ಸಾಧ್ಯವಿದೆ).

**ಎಲ್ಲಾ ಮಕ್ಕಳನ್ನು ಸೇರಿಸಿ ಚಟುವಟಿಕೆಗಳನ್ನು ನಾವು ಕೊಡುವುದು**

ಪ್ರತ್ಯೇಕ ಪರಿಗಣನೆಗೆ ಅರ್ಹವಿರುವ ಮಕ್ಕಳನ್ನು ಅವರ ಸ್ವಭಾವದೋಷದಿಂದಾಗಿ ಪ್ರಿಸ್ಕೂಲ್ ಕ್ಲಾಸಿನಿಂದ ಬಹಿಷ್ಕರಿಸಬಾರದು. ಇಂತಹ ಮಕ್ಕಳ ಮಾತಾಪಿತರಿಗೆ ಅಗತ್ಯವಾದ ಆತ್ಮವಿಶ್ವಾಸ ಕೊಟ್ಟು ಮಕ್ಕಳನ್ನು ದಿನಾಲೂ ಪ್ರಿಸ್ಕೂಲ್‌ನಲ್ಲಿ ಬರುವಂತೆ ಮಾಡಲು ಪ್ರೋತ್ಸಾಹಿಸಬೇಕು. ಮಕ್ಕಳ ಸ್ವಭಾವದಲ್ಲಿರುವ ಸಮಸ್ಯೆ ಮೊದಲ ಎರಡು ಮೂರು ತಿಂಗಳಿನೊಳಗೆ ಸಾಧಾರಣವಾಗಿ ಕಡಿಮೆಯಾಗುತ್ತಾ ಬರುವುದು. ಇಂತಹ ಸಂಯೋಜಿತ ಸಮೀಪನಕ್ಕೆ ಯಾವುದೆಲ್ಲಾ ಅಡೆತಡೆಗಳಿವೆ. ಎನ್ನುವುದನ್ನು ತಿಳಿದುಕೊಂಡು ಅದನ್ನು ಪರಿಹರಿಸಲು ಬೇಕಾದ ಕ್ರಮಗಳನ್ನು ಸ್ವೀಕರಿಸುವ ಮೂಲಕ ಸಮನ್ವಯ ಶಿಕ್ಷಣ(Inclusive education–ಒಳಗೊಂಡಿರುವ ಶಿಕ್ಷಣ) ಹೆಚ್ಚು ಅರ್ಥಪೂರ್ಣವಾಗುವುದು.

ಎಲ್ಲಾರನ್ನು ಒಟ್ಟುಗೂಡಿಸಿಕೊಂಡಿರುವ ಚಟುವಟಿಕೆ ಯಾವ ರೀತಿಯಲ್ಲಿ ಯೋಜನೆ ಮಾಡುವುದೆಂದು ನೋಡುವಾ?

## ಚಿತ್ರ ಓದುವಿಕೆ ಎನ್ನುವ ಚಟುವಟಿಕೆ ನಡೆಸುವಾಗ...

ದೃಷ್ಟಿ ದೋಷವಿರುವ ಮಕ್ಕಳಿಗೆ ದೊಡ್ಡದಾದ ಚಿತ್ರ ಕೊಡಬೇಕಾಗಿ ಬರಬಹುದು.

ಕೆಲವೊಮ್ಮೆ ಚಿತ್ರದಲ್ಲಿರುವ ವಿಷಯದ ಆಕೃತಿಗಳನ್ನು ಕೊಡಬೇಕಾಗಿ ಬರಬಹುದು.

ಶ್ರವಣ ಮತ್ತು ಮಾತನಾಡುವ ತೊಂದರೆಗಳನ್ನು ಎದುರಿಸುವ ಮಕ್ಕಳಿಗೆ ಚಿತ್ರ ಬಿಡಿಸಲು ಮತ್ತು ಚಿತ್ರಗಳನ್ನು ಹೆಕ್ಕಿ ಅಭಿನಯಿಸಲಿರುವ ಚಟುವಟಿಕೆಗಳಿಗೆ ಸಂದರ್ಭ ಒದಗಿಸಬೇಕು.

## ಕಲಿಕೆಯಲ್ಲಿ ಮುಂದಿರುವ ಮಕ್ಕಳು ಮತ್ತು ಅನ್ಯಭಾಷೆಯ ಮಕ್ಕಳು

ಎಲ್ಲರೂ ಒಳಗೊಂಡಿರುವ ಶಿಕ್ಷಣದಲ್ಲಿ ಪರಿಗಣಿಸಬೇಕಾದ ಇತರ ಎರಡು ವಿಭಾಗಗಳು ಬಹಳಷ್ಟು ಮುಂದಿರುವ ಮಕ್ಕಳು ಮತ್ತು ಅನ್ಯ ಭಾಷಿಕರು.

ಸರಾಸರಿಗಿಂತ ಜಾಸ್ತಿ ಬುದ್ಧಿ ಶಕ್ತಿಯುಳ್ಳ ಮಕ್ಕಳಿಗೆ ಇತರ ಮಕ್ಕಳಿಗೆ ಕೊಡುವಂತಹ ಚಟುವಟಿಕೆಗಳು ಮಾತ್ರ ಸಾಕಾಗುವುದಿಲ್ಲ. ಇಂತಹವರನ್ನೂ ಪರಿಗಣಿಸಲು ಚಟುವಟಿಕೆಗಳು ಸಾಧ್ಯತೆಗಳು ಇರಬೇಕು.

ಉದಾಹರಣೆ : ಚಿತ್ರ ಓದುವಿಕೆಯ ಪ್ರಕ್ರಿಯೆಯನ್ನು ನೋಡುವ.

ಎಲ್ಲಾ ಮಕ್ಕಳು ಚಿತ್ರದಲ್ಲಿ ಏನೆಲ್ಲಾ ಇದೆ ಎಂದು ಗುರುತಿಸಿ ಹೇಳುತ್ತಾರೆ.

ಇಂತಹ ಚಟುವಟಿಕೆಯನ್ನು ಬೇಗನೆ ಮುಗಿಸಿದ ಮಕ್ಕಳಿಗೆ ಸೂಕ್ಷ್ಮವಾದ ನಿರೀಕ್ಷಣೆಗಿರುವ ಸಂದರ್ಭ ಮಾಡಿಕೊಡಬೇಕು.

ಚಿತ್ರದಲ್ಲಿರುವ ಯಾವುದಾದರೂ ಒಂದನ್ನು ಮಾತ್ರ ನಿರೀಕ್ಷಣೆ ಮಾಡಿ ಹೆಚ್ಚು ವಿಷಯಗಳನ್ನು ಹೇಳುವುದಕ್ಕೆ ಮತ್ತು ಒಬ್ಬ ಮತ್ತೊಬ್ಬನಲ್ಲಿ ಏನನ್ನು ಹೇಳಿರಬಹುದು. ಮೊದಲಾದ ಚಟುವಟಿಕೆಗಳನ್ನು ಇವರಿಗಾಗಿ ಕೊಡಬೇಕು.

ಚಟುವಟಿಕೆಗಳಲ್ಲಿ ಇಂತಹ ಮಕ್ಕಳ ವಿಶೇಷ ಸಾಮರ್ಥ್ಯಗಳ ಪ್ರದರ್ಶನಕ್ಕೆ ಅವಕಾಶ ದೊರೆಯಬೇಕು.

ಇನ್ನೊಂದು ವಿಭಾಗವಾದ ಅನ್ಯ ಭಾಷಿಕರಿಗೆ ಮಕ್ಕಳಿಗೆ ಆಶಯಗ್ರಹಣಕ್ಕೆ ಮತ್ತು ಅದನ್ನು ಪ್ರಕಟಿಸಲು ಸಮಸ್ಯೆ ಇರಬಹುದು. ಕ್ರಮೇಣ ಇಂತಹ ಸಾಮರ್ಥ್ಯಗಳನ್ನು ಬೆಳೆಸಲು ಸಾಧ್ಯವಾಗುವುದು. ಅದಕ್ಕೆ ಬೇಕಾದ ಆತ್ಮವಿಶ್ವಾಸವನ್ನು ನೀಡುವುದು ನಾವು ಮೊದಲು ಮಾಡಬೇಕಾದ ಕೆಲಸವಾಗಿದೆ. ಚಿತ್ರಿಸಿ ತೋರಿಸಲು ಅಭಿನಯಿಸಿಯೂ, ನಿರ್ಮಿಸಿಯೂ ತೋರಿಸಲಿರುವ ಧಾರಾಳ ಸಂದರ್ಭಗಳನ್ನು ಒದಗಿಸಬೇಕು. ಅವರ ಭಾಷೆಯಲ್ಲಿ ಸಂಕೋಚವಿಲ್ಲದೆ ಹೇಳಲಿರುವ ಆತ್ಮವಿಶ್ವಾಸವನ್ನು ಬೆಳೆಸಬೇಕು. ಇತರ ಮಕ್ಕಳೊಂದಿಗೆ ಗೆಳೆತನ ಬೆಳೆಸಲು, ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶವನ್ನು ಮಾಡಿಕೊಡಬೇಕು.

ಅವಗಣನೆಗೊಳಗಾಗುವವರು ಆದಿವಾಸಿಗಳು, ಲೈಂಗಿಕ ಕಾರ್ಮಿಕರು, ಜೈಲುಶಿಕ್ಷೆ ಅನುಭವಿಸುವವರು, HIV ಅಣುಬಾಧಿತರು ಇತ್ಯಾದಿಗಳಿರುವವರ ಮಕ್ಕಳಲ್ಲೂ ಇದೇ ರೀತಿಯ ಸಮನ್ವಯ ಸಮೀಪನವನ್ನು ಸ್ವೀಕರಿಸಬೇಕು.



# 8 ನಿರಂತರ ಮೌಲ್ಯಮಾಪನ

ಅಮ್ಮು : ಟೀಚರ್, ಟೀಚರ್ ನಾನು ಬಿಡಿಸಿದ ಚಿತ್ರ
ಟೀಚರ್ : ಆಹಾ, ಚೆನ್ನಾಗಿದೆಯೆಲ್ಲಾ!
ಟೀಚರ್ : ಇದು ಯಾರ ಮನೆ?
ಅಮ್ಮು : ನನ್ನ ಮನೆ...

ಈ ಸಂದರ್ಭದಲ್ಲಿ ಎರಡು (ಪ್ರೀಸ್ಕೂಲ್) ಅಧ್ಯಾಪಿಕೆಯ ಪ್ರತಿಕ್ರಿಯೆ ನೋಡಿರಿ.




ಅವಳು ಓಡಿ ಹೋಗಿ ಮನೆಯ ಬಾಗಿಲ ಚಿತ್ರ ಬಿಡಿಸಲು ಶುರು ಮಾಡಿದಳು.

- ತನ್ನ ಮನೆಯ ಚಿತ್ರ ನೆನಪಿಗೆ ಬಂತು.
- ಆ ಮನೆಯ ವಿಶೇಷತೆಗಳನ್ನು (ಬಾಗಿಲು, ಕಿಟಕಿ, ಬಣ್ಣ) ನೆನಪಿಸಿಕೊಂಡಳು
- ಬಾಗಿಲು, ಕಿಟಕಿಗಳ ಸ್ಥಾನ ಮತ್ತು ಆಕಾರವನ್ನು ನೆನಪಿಸಿಕೊಂಡಳು.
- ವಿಶೇಷತೆಗಳನ್ನು ಸೇರಿಸಿಕೊಂಡು ಚಿತ್ರ ಬಿಡಿಸಲು ತೀರ್ಮಾನಿಸಿದಳು.

ಟೀಚರ್ : ನವ್ಯಾ ನೀನೇಕೆ ಮನೆಯ ಬಾಗಿಲಿನ ಚಿತ್ರ ಬಿಡಿಸಲಿಲ್ಲ? ಬಾಗಿಲ ಚಿತ್ರ ಬಿಡಿಸು
ನವ್ಯಾ : ಸರಿ ಟೀಚರ್

ಎರಡನೆಯ ಟೀಚರ್, ನವ್ಯಾ ನೀನೇಕೆ ಮನೆಯ ಬಾಗಿಲು ಬಿಡಿಸಲಿಲ್ಲ? ಬಾಗಿಲು ಬಿಡಿಸು ಎಂಬ ಸೂಚನೆ ಕೊಟ್ಟಾಗ ಕೊಟ್ಟಾಗ ಮಗು ತನ್ನ ಚಿತ್ರಕ್ಕೆ ಬಾಗಿಲು ಬಿಡಿಸಲು ಆರಂಭಿಸಿ ದಳು.

- ಎರಡು ಅಧ್ಯಾಪಕರ ಪ್ರತಿಕ್ರಿಯೆ ಗಮನಿಸಿದಿರಾ?

ಒಂದನೇ ಅಧ್ಯಾಪಕಿ ನವ್ಯಾ ಹೇಗೆ ಮನೆಯೊಳಗೆ ಹೋಗುವೆ ಎಂಬ ಪ್ರಶ್ನೆಯನ್ನು ಕೇಳಿದಾಗ ಹುಡುಗಿಯ ಮನಸ್ಸಿನಲ್ಲಿ ಉಂಟಾದ ಯೋಚನೆಯೇನು?

ಒಂದನೇ ಅಧ್ಯಾಪಿಕೆಯದ್ದು ಚಿಂತನೆಯನ್ನು ಉದ್ದೀಪನಗೊಳಿಸುವ ಪ್ರಶ್ನೆಯಾಗಿತ್ತು. ಎರಡನೇ ಅಧ್ಯಾಪಿಕೆಯದ್ದು ಸೂಚನೆ ಮಾತ್ರವಾಗಿತ್ತು.

- ತನ್ನ ಚಿತ್ರರಚನೆಯನ್ನು ಉತ್ತಮಗೊಳಿಸಲಿರುವ ಅಂದವಾಗಿಸಲಿರುವ ಹುಡುಗಿಯ ಆಸಕ್ತಿಯನ್ನು ಯಾವ ಪ್ರಶ್ನೆ/ಯಾವ ಅಧ್ಯಾಪಿಕೆಯು ಹೆಚ್ಚು ಪರಿಗಣಿಸಿರುವವರು? ಯಾಕೆ?

ನೀನು ಹೇಗೆ ಮನೆಯೊಳಗೆ ಹೋಗುವೆ ಎಂಬ ಪ್ರಶ್ನೆಯು ತನ್ನ ಚಿತ್ರವನ್ನೂ ಮೌಲ್ಯಮಾಪನ ಮಾಡಲು ಹುಡುಗಿಗೆ ಪ್ರೇರಣೆಯಾದುದನ್ನು ನಾವು ಕಂಡೆವು. ಇಂತಹ ಸ್ವಯಂ ಮೌಲ್ಯಮಾಪನ ಪ್ರಕ್ರಿಯೆಯ ಮೂಲಕ ಹಾದುಹೋಗುವ ಮಕ್ಕಳಿಗೆ ಸ್ವತಃ ಉತ್ತಮಗೊಳಿಸಲು ಮತ್ತು ಜ್ಞಾನ ನಿರ್ಮಿಸಲು ಸಾಧ್ಯವಾಗುವುದು.

ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರದರ್ಶನ ಬೋರ್ಡಿನಲ್ಲಿ ಪ್ರದರ್ಶಿಸಲು ಒಪ್ಪಿಗೆ ನೀಡಿದರೆ ಅವರಿಗೆ ಸ್ವಂತ ಚಿತ್ರವನ್ನು ಮತ್ತು ಗೆಳೆಯರ ಚಿತ್ರವನ್ನು ತಾರತಮ್ಯ ಮಾಡಲು ಸಾಧ್ಯವಾಗುತ್ತದೆ. ಇಲ್ಲಿಯೂ ಅಧ್ಯಾಪಿಕೆ ಫೀಡ್‌ಬ್ಯಾಕ್ ಪ್ರಶ್ನೆಗಳನ್ನು ಕೇಳಬಹುದು.

- ಯಾರ ಚಿತ್ರ ನಿಮಗೆ ಇಷ್ಟವಾಯಿತು?
- ಆ ಚಿತ್ರ ಇಷ್ಟಪಡಲು ಕಾರಣವೇನು?

ಈ ರೀತಿಯ ಪ್ರಶ್ನೆಗಳನ್ನು ಕೇಳುವಾಗ ಮಾತ್ರವಲ್ಲ. ಸ್ವಂತ ರಚನೆಯನ್ನು ಗೆಳೆಯರ ರಚನೆಗಳೊಂದಿಗೆ ತಾರತಮ್ಯ ಮಾಡಿ ಅಗತ್ಯವಾದ ರೀತಿಯಲ್ಲಿ ಉತ್ತಮ ಪಡಿಸಲು ಸಾಧ್ಯವಾಗುವುದು.

ಪ್ರಿಸ್ಕೂಲ್ ವಿಧ್ಯಾಭ್ಯಾಸದಲ್ಲಿ ನಿರಂತರ ಮೌಲ್ಯಮಾಪನ ಪ್ರಕ್ರಿಯೆಗೆ ಮತ್ತು ಫೀಡ್‌ಬ್ಯಾಕ್‌ಗೂ ಹಿರಿದಾದ ಸ್ಥಾನವಿದೆ. ಮಗುವಿನ ಸಮಗ್ರವಾದ ಪುರೋಗತಿಯನ್ನು ಕಲಿಕೆಯ ಸನ್ನದ್ಧತೆಯನ್ನು ಗುರಿಯಾಗಿರಿಸುವಾಗ ಶಿಶುವಿಕಾಸ ವಲಯಗಳಲ್ಲಿ ಮಕ್ಕಳ ಸ್ಥಿತಿಯನ್ನು ನಿಖರವಾದ ರೀತಿಯಲ್ಲಿ ಮೌಲ್ಯಮಾಪನ ಮಾಡಬೇಕಾಗಿದೆ. ಮೌಲ್ಯ ನಿರ್ಣಯಕ್ಕಿಂತಲೂ ನಿರಂತರ ಮೌಲ್ಯಮಾಪನಕ್ಕೆ ನಾವು ಪ್ರಿಸ್ಕೂಲಿನಲ್ಲಿ ಒತ್ತು ನೀಡಬೇಕು. ಮಕ್ಕಳನ್ನು ಮೌಲ್ಯಮಾಪನ ಮಾಡಿ ಗ್ರೇಡ್ ನೀಡುವುದು. ಪ್ರಿಸ್ಕೂಲಿನ ಮೌಲ್ಯಮಾಪನದ ಉದ್ದೇಶವಲ್ಲ. ಪ್ರಿಸ್ಕೂಲ್ ಚಟುವಟಿಕೆಗಳಲ್ಲಿ ಮಕ್ಕಳ ಸಕ್ರಿಯವಾದ ಪಾಲ್ಗೊಳ್ಳುವಿಕೆ ಅಗತ್ಯವಾದ ಸಹಾಯ ಮತ್ತು ಪ್ರೋತ್ಸಾಹವನ್ನು ಖಾತರಿಪಡಿಸುವುದು ಮೌಲ್ಯಮಾಪನದ ಉದ್ದೇಶವಾಗಿದೆ.

## ಮೌಲ್ಯಮಾಪನದ ಉದ್ದೇಶಗಳು

- ವಿಕಾಸ ಮಂಡಲದಲ್ಲಿ ತನ್ನ ಮಗು ಎಲ್ಲಿ ನಿಂತಿದ್ದಾನೆ ಎಂದು ತಿಳಿದುಕೊಳ್ಳಲು.
- ಪ್ರಿಸ್ಕೂಲ್ ಚಟುವಟಿಕೆಗಳಲ್ಲಿ ಮಕ್ಕಳ ಸಕ್ರಿಯವಾದ ಪಾಲ್ಗೊಳ್ಳುವಿಕೆಗೆ ಸಹಾಯ ಮತ್ತು ಪ್ರೋತ್ಸಾಹವನ್ನು ಖಾತರಿಪಡಿಸುವುದು.
- ಶುಚಿತ್ವ ಅಭ್ಯಾಸ, ಆಹಾರಾಭ್ಯಾಸ, ಮೌಲ್ಯಗಳು ಮುಂತಾದವುಗಳ ರೂಪೀಕರಣದಲ್ಲಿ ಅಗತ್ಯವಾದ ಪ್ರೋತ್ಸಾಹ ನೀಡುವುದು.
- ಪ್ರತಿಯೊಂದು ಮಗುವಿನ ವೈಯಕ್ತಿಕವಾದ ವಿಶೇಷತೆಗಳನ್ನು, ಸಾಮರ್ಥ್ಯಗಳನ್ನು ತಿಳಿಯಲು ಅಗತ್ಯವಾದ ಪ್ರೋತ್ಸಾಹ ನೀಡುವುದು.
- ಸವಾಲು ಎದುರಿಸುವ ಮಕ್ಕಳಿಗೆ ಅವಶ್ಯವಾದ ಪ್ರತ್ಯೇಕ ಪರಿಗಣನೆ ಮತ್ತು ಪ್ರೋತ್ಸಾಹ ನೀಡುವುದು.
- ಫಲಪ್ರದವಾದ ಪ್ರಿಸ್ಕೂಲ್ ವ್ಯವಸ್ಥೆ, ಫಲಪ್ರದವಾದ ಕಲಿಕೆಯ ಆಟೋಪಕರಣಗಳು ಎಂಬಿವುಗಳನ್ನು ಖಾತರಿಪಡಿಸುವುದು.
- ತಮ್ಮ ಮಕ್ಕಳ ಸಾಮರ್ಥ್ಯ ಮತ್ತು ಪರಿಮಿತಿಗಳಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಫೀಡ್ ಬ್ಯಾಕ್ ನೀಡಲು ಮತ್ತು ಬೆಂಬಲವನ್ನು ಖಾತರಿಪಡಿಸಲು.
- ಅಧ್ಯಾಪಿಕೆಗೆ ಪ್ರಿಸ್ಕೂಲ್ ಕಲಿಕಾ ಚಟುವಟಿಕೆಗಳನ್ನು ಉತ್ತಮಗೊಳಿಸಲು ಮೌಲ್ಯಮಾಪನದ ಮೂಲಕ ಸಿಗುವ ಫೀಡ್‌ಬಾಕ್ ಸಹಾಯಕವಾಗಿದೆ.

## ಮೌಲ್ಯಮಾಪನ ವಿಧಾನಗಳು

ತಮ್ಮ ಆಟ ಮತ್ತು ಚಟುವಟಿಕೆಗಳನ್ನು ಮೌಲ್ಯಮಾಪನ ಮಾಡುವುದು ಎನ್ನುವ ಅರಿವು ಮಕ್ಕಳಿಗೆ ಸ್ವಾಭಾವಿಕವಾಗಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ತಡೆ ಉಂಟುಮಾಡುತ್ತದೆ. ಚಟುವಟಿಕೆಯೊಂದಿಗೆ ಸ್ವಾಭಾವಿಕ ಸಂದರ್ಭದ ಪರಿಶೋಧನೆ ಇಲ್ಲಿ ಅಗತ್ಯವಾಗಿದೆ.

## ಮೌಲ್ಯಮಾಪನ ಹೇಗೆಲ್ಲಾ?

a. **ನಿರೀಕ್ಷಣೆ :** ಮಕ್ಕಳ ಚಟುವಟಿಕೆ (ಪಾಲ್ಗೊಳ್ಳುವಿಕೆ, ನೇತೃತ್ವ ಸಹಕಾರ ಮನೋಭಾವ, ಸಹಾಯ ಮಾಡುವುದು, ಶುಚಿತ್ವ ಅಭ್ಯಾಸ, ಆಹಾರಾಭ್ಯಾಸ, ವಿವಿಧ ಸಾಮರ್ಥ್ಯಗಳು...) ಎನ್ನುವುದೆಲ್ಲಾ ನಿರೀಕ್ಷಣೆಯ ಮೂಲಕ ಮಕ್ಕಳ ಪರಿಶೋಧನೆ ಅಧ್ಯಾಪಕರಿಗೆ ಸಾಧ್ಯವಾಗುತ್ತದೆ.

b. **ಅನೌಪಚಾರಿಕ ಸಂಭಾಷಣೆ :** ಅನೌಪಚಾರಿಕ ಸಂಭಾಷಣೆಯ ಮೂಲಕ ಮಕ್ಕಳ ಭಾಷೆ

ವಿಕಾಸ, ವೈಜ್ಞಾನಿಕ ವಿಕಾಸ, ಮೌಲ್ಯಗಳು, ಮನೋಭಾವ, ವಿಷಯ ಸಂಬಂಧಪಟ್ಟ ಆಶಯ ಗ್ರಹಣ ಎಂಬಿವುಗಳಲ್ಲಿ ಸ್ಥಾನ ನಿರ್ಣಯಿಸಲು ಸಾಧ್ಯವಾಗುತ್ತದೆ.

c. **ಪೋರ್ಟ್‌ಫೋಲಿಯೋ (ಕಲಿಕೆಯ ಉತ್ಪನ್ನಗಳು)ಮೌಲ್ಯಮಾಪನೆ** : ಪ್ರಿಸ್ಕೂಲ್ ಕಲಿಕೆಯ ಚಟುವಟಿಕೆಯ ಭಾಗವಾಗಿ ಮಕ್ಕಳು ರೂಪಿಸುವ ಕಲಿಕಾ ಉತ್ಪನ್ನಗಳು. ಮೌಲ್ಯಮಾಪನ ಮಾಡುವ ಮೂಲಕ ಭಾಷಾ ವಿಕಾಸ, ವೈಜ್ಞಾನಿಕ ವಿಕಾಸ ಸೃಜಾನಾತ್ಮಕ ಮತ್ತು ಕ್ರಿಯಾತ್ಮಕ ವಿಕಾಸ ಎನ್ನುವ ಮಂಡಲಗಳಲ್ಲಿ ಮಗುವಿನ ಗುಣಮಟ್ಟವನ್ನು ತಿಳಿಯಲು ಅಧ್ಯಾಪಕರಿಗೆ ಸಾಧ್ಯವಾಗುತ್ತದೆ. ಮಕ್ಕಳು ಸೂಕ್ಷ್ಮ ಪರಿಶೋಧನೆ ವಿಕಾಸನ ವಲಯದಲ್ಲಿ ಅವರ ಸ್ಥಾನವನ್ನು ನಿರ್ಣಯಿಸಲು ಪೋರ್ಟ್‌ಪೋಲಿಯೋ ಮೌಲ್ಯಮಾಪನ ದಿಂದ ಸಾಧ್ಯ.

d. **ಅಭಿವ್ಯಕ್ತಿಗಳ ಮೌಲ್ಯಮಾಪನ** : ಮಕ್ಕಳ ಮಂಡನೆಗಳು (ಕಥೆ, ಕವಿತೆ, ರೋಲ್ ಪ್ಲೇ, ಬೊಂಬೆನಾಟಕ ಇತ್ಯಾದಿ ಪ್ರದರ್ಶನಗಳು) ಎಂಬಿವುಗಳನ್ನು ಮೌಲ್ಯಮಾಪನ ಮಾಡುವುದರ ಮೂಲಕ ವಿವಿಧ ವಿಕಾಸ ಮಂಡಲದಲ್ಲಿ ಮಗುವಿನ ಪುರೋಗತಿ ನಿರ್ಣಯಿಸಲು ಸಾಧ್ಯ.

e. ರಕ್ಷಕರ ಜೊತೆ ಸಂಭಾಷಣೆ : ರಕ್ಷಕರ ಜೊತೆ ನಡೆಸುವ ಮಾತುಗಾರಿಕೆಯ ಮೂಲಕ ಮಕ್ಕಳ ಮನೆಯ ಚಟುವಟಿಕೆಗಳು (ಚಿತ್ರ ಬಿಡಿಸುವಿಕೆ, ನಿರ್ಮಾಣ, ಆಟ, ಟಿ.ವಿ ನೋಡುವುದು, ಆಹಾರ ಕ್ರಮ ಮೊದಲಾದುವುಗಳು) ತಿಳಿಯಲು ಮತ್ತು ಇತರ ವಿಕಾಸ ಮಂಡಲಗಳಲ್ಲಿನ ಬೆಳವಣಿಗೆಯನ್ನು ತಿಳಿಸಲು ಸಾಧ್ಯ. ಮೌಲ್ಯಮಾಪನದ ಸಮಗ್ರತೆಗೆ ರಕ್ಷಕರೊಂದಿಗಿನ ಮಾತುಕತೆಗೆ ಹಿರಿದಾದ ಪಾತ್ರವಿದೆ.

*3+, 4+ ಪ್ರಾಯದ ಮಕ್ಕಳಿಗೆ ನಿಗದಿಪಡಿಸಿದ ಆಶಯಗಳು, ವಿಕಾಸ ಮಂಡಲಗಳು, ಸಾಮರ್ಥ್ಯಗಳು ಎಂಬಿವುಗಳನ್ನು ಪರಿಗಣಿಸಿ ಮೌಲ್ಯಮಾಪನ ಪ್ರಕ್ರಿಯೆಯನ್ನು ಅಧ್ಯಾಪಕರು ಪೂರ್ತಿ ಮಾಡಬೇಕು.*

ಮೌಲ್ಯಮಾಪನದ ಹಾಗೆ, ಅಗತ್ಯವಾದ ಸಂದರ್ಭಗಳಲ್ಲಿ ಮಕ್ಕಳಿಗೆ ಫೀಡ್‌ಬ್ಯಾಕ್ ನೀಡುವುದು. ಮಕ್ಕಳಿಗೆ ಗ್ರಹಿಸಲು, ಪೂರ್ತಿಗೊಳಿಸಲು ತ್ರಾಸದಾಯಕವಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಬೇಕಾದ ಸಹಾಯವನ್ನು ನೀಡುವುದೇ ಫೀಡ್‌ಬ್ಯಾಕ್‌ನ ಗುರಿಯಾಗಿದೆ.

## ಪ್ರಿಸ್ಕೂಲ್ ಫೀಡ್‌ಬ್ಯಾಕ್ ಯಾವ ರೀತಿ ಇರಬೇಕು?

- ಸರಳವಾಗಿ ಚಿಂತನೆಗೆ ಅವಕಾಶ ಇರುವ ಪ್ರಶ್ನೆಗಳು
- ಸರಿಯಾದ ದಿಶೆಯಲ್ಲಿ ಚಿಂತಿಸುವ ರೀತಿಯಲ್ಲಿ ಸೂಚನೆಗಳು
- ಮಾದರಿಗಳನ್ನು ಮಂಡಿಸುವ ಮೂಲಕ
- ಟೀಚರು/ದೊಡ್ಡವರು ಚಟುವಟಿಕೆ ಮಾಡಿ ತೋರಿಸುವುದು
- ಚಟುವಟಿಕೆಯನ್ನು ಪೂರ್ತಿಗೊಳಿಸುವ ವೀಡಿಯೋಗಳ ಮೂಲಕ (ಬೊಂಬೆ, ಕೊಲಾಷ್ ನಿರ್ಮಾಣ)
- ಸಾದೃಶ್ಯವಿರುವ, ಇತರ ಅನುಭವಗಳನ್ನು ಹೇಳುವುದರ ಮೂಲಕ

## ದಾಖಲಿಸುವುದು

ಮಕ್ಕಳ ವಿಶೇಷತೆಗಳು, ಸಾಮರ್ಥ್ಯಗಳು, ಪರಿಮಿತಿಗಳು ಎನ್ನುವುದನ್ನೆಲ್ಲಾ ಸರಿಯಾದ ರೀತಿಯಲ್ಲಿ ದಾಖಲಿಸಬೇಕು. ವಿಕಾಸ ಮಂಡಲಗಳಲ್ಲಿ ನಿಶ್ಚಿತ ದುಶ್ಚಟದಿಂದ ಮಕ್ಕಳು ಎಷ್ಟು ಪ್ರಗತಿ ಹೊಂದಿದ್ದಾರೆ ಎಂದು ತಿಳಿಯಲು ಈ ದಾಖಲಾತಿ ಅಗತ್ಯ. ದಾಖಲಾತಿಯನ್ನು ಸರಳ ಮತ್ತು ಸುಲಭ ಸಾಧ್ಯವಾಗುವಂತೆ ಅಗತ್ಯವಾದ ಫಾರ್ಮಾಟುಗಳನ್ನು ಅಧ್ಯಾಪಕರು ತಯಾರಿಸಬಹುದಾಗಿದೆ.




# ಪ್ರೀತಿಯ ರಕ್ಷಕರಿಗೆ (Parents) ಸ್ನೇಹ ಪೂರ್ವಕ

***ಸಂತೋಷವಾದ ಬಾಲ್ಯವೂ ಅಹ್ಲಾದಕರವಾದ ಪ್ರಿಸ್ಕೂಲ್ ಶಿಕ್ಷಣವೂ ಮಗುವಿನ ಹಕ್ಕಾಗಿದೆ***

ಶಿಶುವಿಕಾಸ ಪ್ರಚೋದನಾ ಚಟುವಟಿಕೆಗಳು, ಪೋಷಣೆ, ಆರೋಗ್ಯ, ಸಂರಕ್ಷಣೆ, ಸುರಕ್ಷತೆ, ಲಾಲನೆ, ದಿನಚರಿ ನಡವಳಿಕೆ, ಮೌಲ್ಯ ಪ್ರಜ್ಞೆ ಮೊದಲಾದ ಮಕ್ಕಳ ಜೀವನಕ್ಕೆ ಸಂಬಂಧಿಸಿದ ಎಲ್ಲಾ ಘಟಕಗಳು ಸೇರಿಸುವುದು ಮತ್ತು ಮಾತಾಪಿತರು ಸ್ವೀಕರಿಸಬೇಕಾದಂತಹ ಪರಿಪಾಲನಾ ರೀತಿಯನ್ನು ರಕ್ಷಕತ್ವ(parenting) ಎಂಬುದರಿಂದ ಉದ್ದೇಶಿಸಲಾಗಿದೆ. ಬ್ರೇನ್ ಪ್ರತ್ಯೇಕತೆಗಳಂತೆ ಮಕ್ಕಳ ದೈನಂದಿನ ಬೆಳವಣಿಗೆಯಲ್ಲಿ ರಕ್ಷಕತ್ವವೂ ಪ್ರಭಾವ ಬೀರುವುದು. ರಕ್ಷಕರ ಪಟ್ಟಿಯಲ್ಲಿ ತಾಯಿ, ತಂದೆ, ಬಂಧು, ನೆರೆಕರೆ, ಸಮಾಜ ಹೀಗೆ ಮಕ್ಕಳಿಗೆ ಆರೈಕೆ ನೀಡುವವರು.

ಸಣ್ಣ ಪ್ರಾಯದಲ್ಲಿ ಮಕ್ಕಳ ವಿಕಾಸ ವಿಚಾರಗಳಲ್ಲಿ ಕಾರ್ಯದಲ್ಲಿ ರಕ್ಷಕರಿಗೆ ಎಲ್ಲರೂ ಒಳಪಡುವರು. ಪ್ರಧಾನ ಸಹಾಯಹಸ್ತವನ್ನೂ ನೀಡುವುದು. ಪ್ರಿಸ್ಕೂಲ್ ಸಂಸ್ಥೆಗಳಾಗಿವೆ. ಪ್ರಿಸ್ಕೂಲ್ ವಿದ್ಯಾಭ್ಯಾಸ ಮತ್ತು ರಕ್ಷಕರಗಳ ಗುರಿ ಮಕ್ಕಳ ಸಮಗ್ರ ವಿಕಾಸವಾಗಿದೆ. ಆದ್ದರಿಂದ ಪ್ರಿಸ್ಕೂಲ್ ಮತ್ತು ಕುಟುಂಬಗಳ ನಡುವೆ ಪರಸ್ಪರ ವಿಶ್ವಾಸ ಸಹಕಾರ ಅನಿವಾರ್ಯವಾಗಿದೆ.

ವಿದ್ಯಾಲಯ ಮಕ್ಕಳಿಗೆ ಏನೆಲ್ಲಾ ಒದಗಿಸುತ್ತದೆ ಎಂದು ರಕ್ಷಕರು ತಿಳಿದಿರಬೇಕು. ಅಧ್ಯಾಪಕರಿಗೆ ಮಕ್ಕಳಿಗೆ ಅಗತ್ಯವಾದ ವೈಯಕ್ತಿಕ ಪ್ರಚೋದನೆ ಹಾಗೂ ಚಟುವಟಿಕೆಯ ಯೋಜನೆಯನ್ನು ತಯಾರಿಸುವುದಕ್ಕೆ ಕುಟುಂಬದ ಪರಿಸ್ಥಿತಿಯ ಬಗ್ಗೆ ತಿಳುವಳಿಕೆ ಅಗತ್ಯವಾಗಿದೆ.

ಶಿಶುವಿಗೆ ಲಭಿಸುವ ಸ್ನೇಹ, ಸುರಕ್ಷೆ, ಪ್ರೋತ್ಸಾಹ ಮೊದಲಾದವುಗಳು ಮಕ್ಕಳಿಗೆ ಆತ್ಮವಿಶ್ವಾಸ ಕೊಡುವುದಲ್ಲದೆ ಸಮಾಜದಲ್ಲಿ ಯೋಗ್ಯವಾಗಿ ಬೆರೆಯಲು ಮಕ್ಕಳನ್ನು ಪ್ರಾಪ್ತರನ್ನಾಗಿಸುತ್ತದೆ. ಪ್ರಿಸ್ಕೂಲಿನಿಂದ ಲಭಿಸುವ ಅನುಭವ, ಸಂದರ್ಭಗಳ ಮುಂದುವರಿಕೆ ಮನೆಯಿಂದಲೂ ಲಭಿಸಬೇಕು. “ಪ್ರತಿಯೊಂದು ಮನೆಯು ಒಂದೊಂದು ವಿದ್ಯಾಲಯವಾಗಿದೆ. ಹೆತ್ತವರು. ಹೆತ್ತವರೂ, ಅಧ್ಯಾಪಕರೂ” ಎಂದು ಗಾಂಧೀಜಿ ಅಭಿಪ್ರಾಯ ಪಟ್ಟಿದ್ದಾರೆ. ನೋಡಿ, ಆಲಿಸಿ, ವಾಸನೆ ನೋಡಿ, ರುಚಿಸಿ ಮುಟ್ಟಿ ನೋಡಿ ತನ್ನ ಸುತ್ತಲಿರುವುದನ್ನು ಕಲಿಯುವಂತಹ ಮಕ್ಕಳ ಸಣ್ಣ ಬೇರೆ ಸಂಶಯಗಳನ್ನು ಹೋಗಲಾಡಿಸಲು ರಕ್ಷಕರಿಗಿಂತ ಮಿಗಿಲಾದ ಅಧ್ಯಾಪಕರು ಬೇರೆ ಯಾರಿದ್ದಾರೆ?

## ರಕ್ಷಕರ ಭಾಗವಹಿಸುವಿಕೆಯ ಅನಿವಾರ್ಯತೆ

1. ತಾಯಿಯ ಮಡಿಲು ಮಕ್ಕಳ ಪ್ರಥಮ ವಿದ್ಯಾಲಯ, ರಕ್ಷಕರು ಪ್ರಥಮ ಅಧ್ಯಾಪಕರೂ ಪ್ರಧಾನ ಮಾರ್ಗದರ್ಶಕರೂ ಆಗಿರುವರು. ಆದುದರಿಂದ ರಕ್ಷಕರಿಗೆ ಮಕ್ಕಳನ್ನು ಯಾವ ರೀತಿಯಲ್ಲಿ ವೈಜ್ಞಾನಿಕ ರೀತಿಯಲ್ಲಿ ಉನ್ನತಿಗೇರಿಸಲು ಸಾಧ್ಯ ಎಂಬುದರ ಕುರಿತು ಜ್ಞಾನ ಇರಬೇಕು.

2. ಮಕ್ಕಳು ಪ್ರಧಾನವಾದ ಹಕ್ಕುಗಳು ಜೀವನದ ಹಕ್ಕು ಮತ್ತು ಸಂರಕ್ಷಣೆಗಳಾಗಿವೆ. ಈ ಎರಡು ಜವಾಬ್ದಾರಿಗಳನ್ನು ರಕ್ಷಕರಿಗೆ ನಿರ್ವಹಿಸಲು ಸಾಧ್ಯವಾಗಬೇಕಾದಲ್ಲಿ ರೋಗಾವಸ್ಥೆಗೆ ಮತ್ತು ಅಪಾಯಗಳಿಗೆ ಮಕ್ಕಳು ಒಳಗಾಗದಿರಲು ಅಗತ್ಯವಾದ ಸೇವೆಗಳ ಬಗ್ಗೆ ಸರಿಯಾದ ತಿಳುವಳಿಕೆ ಇರಬೇಕು.

3. ಮಕ್ಕಳ ಸರಿಯಾದ ವಿಕಾಸ ಸಾಧ್ಯವಾಗಬೇಕಾದಲ್ಲಿ ಶಾರೀರಿಕ, ಮಾನಸಿಕ ಬೆಳವಣಿಗೆ, ಭಾವನಾತ್ಮಕ ಮತ್ತು ಬೌದ್ಧಿಕ ಬೆಳವಣಿಗೆ ಪ್ರಕ್ರಿಯೆಗಳ ಕುರಿತು ರಕ್ಷಕರಿಗೆ ಸಾಮಾನ್ಯವಾದ

ತಿಳುವಳಿಕೆ ಇರಬೇಕು.

4. ಇಂತಹ ವಿಷಯಗಳನ್ನು ಸರಿಯಾಗಿ ತಿಳಿಯಲು ಪ್ರಿಸ್ಕೂಲ್ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕ ಇರಿಸಿಕೊಳ್ಳಲು ಮತ್ತು ಮಕ್ಕಳ ಪುರೋಗತಿ, ಸಮಸ್ಯೆಗಳು ಮೊದಲಾದವುಗಳನ್ನು ತಿಳಿಯಲು ರಕ್ಷಕರಿಗೆ ಅವಕಾಶ ನೀಡಬೇಕು.

5. ಮಕ್ಕಳ ಪರಿಪಾಲನೆ ಮತ್ತು ಕಲಿಕೆಯು ನಡೆಯುವ ವಿದ್ಯಾಲಯದ ಚಟುವಟಿಕೆಗಳು ಹಾಗೂ ವಾತಾವರಣದ ಅರಿವು ಇದ್ದರೆ ಮಾತ್ರ ರಕ್ಷಕರಿಗೆ ಅವರನ್ನು ಇನ್ನಷ್ಟು ಉತ್ತಮ ಮಟ್ಟಕ್ಕೇರಿಸಲು ಸಾಧ್ಯ.

6. ಸಮಪ್ರಾಯದ ಮಕ್ಕಳಿಂದ ವ್ಯತ್ಯಸ್ತರಾದಂತಹ ಮಕ್ಕಳ ಸಮಸ್ಯೆಗಳೂ ಪರಿಮಿತಿಗಳು ಏನೆಲ್ಲಾ ಎಂದು ತಿಳಿದುಕೊಳ್ಳಲು ಮತ್ತು ಅವುಗಳನ್ನು ಮೀರಿ ನಿಲ್ಲಲು ಬೇಕಾದ ಸಹಾಯಗಳು, ಬೆಂಬಲಗಳು ಯಾವುವು ಎಂದು ತಿಳಿಯಲು ರಕ್ಷಕರಿಗೆ ಸಂದರ್ಭ ಒದಗಿಸಬೇಕು.

7. ರಕ್ಷಕರಲ್ಲಿ ಅವೈಜ್ಞಾನಿಕ ಆಚಾರಗಳು, ಆಧಾರ ರಹಿತ ನಂಬಿಕೆಗಳು ಇದ್ದರೆ ಅವುಗಳನ್ನು ಸ್ವತಃ ತಿಳಿದು ತಿದ್ದಲು ಇರುವ ಸಂದರ್ಭಗಳನ್ನು ಒದಗಿಸಬೇಕು.

ಪ್ರಿಸ್ಕೂಲ್ ಪ್ರಾಯದ ಮಕ್ಕಳು ಅತಿಯಾಗಿ ಆಶಿಸುವುದು ತಾಯಿ ತಂದೆಯರ ಸಾಮೀಪ್ಯವನ್ನಾಗಿದೆ. ಮಕ್ಕಳು ಚಿಕ್ಕ ಪ್ರಾಯದಲ್ಲಿ ಯಾವುದೆಲ್ಲಾ ವಿಚಾರಗಳನ್ನು ನಿಮ್ಮಲ್ಲಿ ಕೇಳಿದ್ದಾರೆ, ನೆನಪಿಸಿನೋಡಿ.

- ಒಟ್ಟಿಗೆ ಆಡಲು
- ಒಟ್ಟಿಗೆ ಊಟ ಮಾಡಲು
- ಒಟ್ಟಿಗೆ ಪ್ರಯಾಣಿಸಲು
- ಒಟ್ಟಿಗೆ ನಿದ್ರಿಸಲು
- ಕಥೆ ಹೇಳಲು, ಹಾಡು ಹೇಳಲು
- ಆಟಿಕೆಗಳನ್ನು ನಿರ್ಮಿಸಲು
- ಚಿತ್ರ ಬಿಡಿಸಲು, ಬಣ್ಣ ಹಚ್ಚಲು
- ಇಷ್ಟವಾದ ವಸ್ತುಗಳನ್ನು ಸಂಗ್ರಹಿಸಲು
- ಇಷ್ಟವಾದ ಚಿತ್ರ ಕತ್ತರಿಸಿ ಅಂಟಿಸಲು
- ವಸ್ತ್ರ ತೊಡಿಸಲು, ಅಲಂಕರಿಸಲು

ಇವುಗಳಲ್ಲಿ ಯಾವೆಲ್ಲಾ ವಿಷಯಗಳಲ್ಲಿ ಅವರಿಗೆ ಸಹಾಯ ಮಾಡಲು ನಿಮಗೆ ಸಾಧ್ಯವಾಗಿದೆ?

ನೀವು ತನ್ನ ಮಕ್ಕಳನ್ನು ಪ್ರೀತಿಸುವ , ಪ್ರೋತ್ಸಾಹಿಸುವಂತಹ ಹಾಗೂ ಮಕ್ಕಳ ಪ್ರೀತಿ ಬೇಕಾದಷ್ಟು ಲಭಿಸುವ ರಕ್ಷಕರಾಗಿದ್ದೀರಾ. ತನ್ನ ಮಕ್ಕಳನ್ನು ಪ್ರೋತ್ಸಾಹಿಸುವ ಉತ್ತಮ ರಕ್ಷಕರಾಗಲು ನಮಗೆ ಏನೆಲ್ಲಾ ಮಾಡಲು ಸಾಧ್ಯವಿದೆ?

## ರಕ್ಷಕರ ತರಬೇತಿಯಲ್ಲಿ ಸೇರಿಸಿಕೊಳ್ಳಬೇಕಾದ ಆಶಯಗಳು

- ಮಕ್ಕಳ ವಿಕಾಸಕ್ಕೆ ಬೇಕಾದ ವಿಷಯಗಳನ್ನು ತಿಳಿದಿರಬೇಕು.
- ಪ್ರಿಸ್ಕೂಲ್ ಹಾಗೂ ಮನೆಗಳಲ್ಲಿರಬೇಕಾದಂತಹ ಖಚಿತಪಡಿಸಬೇಕಾದ ವಾತಾವರಣದ ಬಗ್ಗೆ ತಿಳುವಳಿಕೆ ಇರಬೇಕು.
- ಪ್ರಿಸ್ಕೂಲ್ ಚಟುವಟಿಕೆಗಳು, ಮಕ್ಕಳ ಮನೋವಿಜ್ಞಾನ ಎಂಬಿವುಗಳ ಬಗ್ಗೆ ತಿಳುವಳಿಕೆ ಇರಬೇಕು.
- ಆಹಾರ, ಆರೋಗ್ಯ, ಶುಚಿತ್ವದ ಅಭ್ಯಾಸಗಳನ್ನು, ಪಾಲಿಸಲೂ ಮತ್ತು ಸಾಮಾಜೀಕರಣ ಸಾಧ್ಯತೆಗಳನ್ನು ಸಾಧ್ಯಗೊಳಿಸಲು ಬೇಕಾದ ತಂತ್ರಗಳನ್ನು ತಿಳಿದುಕೊಳ್ಳುವುದು.
- ಅಗತ್ಯವಾದ ಬೆಂಬಲಕ್ಕೆ ಸಂಬಂಧಪಟ್ಟ ತಿಳುವಳಿಕೆ ಇರಬೇಕು.
- ಮಕ್ಕಳ ಹಕ್ಕುಗಳ ಕುರಿತಾಗಿರುವ ನಿಯಮಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ವ್ಯವಸ್ಥೆಗಳ ಬಗ್ಗೆ ಇರುವ ತಿಳುವಳಿಕೆಗಳನ್ನು ಬಲಪಡಿಸುವುದು.
- ಸವಾಲಕ್ಕೆದುರಿಸುವ ಮಕ್ಕಳಿಗೆ ಪರಿಗಣನೆ ಕೊಡುವ ಕಾರ್ಯದಲ್ಲಿ ಸ್ಪಷ್ಟತೆ ಇರಬೇಕು.
- ಮಕ್ಕಳನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವುದರಲ್ಲಿ ಮತ್ತು ಫೀಡ್‌ಬ್ಯಾಕ್ ನೀಡುವ ಪ್ರಕ್ರಿಯೆಯಲ್ಲಿ ರಕ್ಷಕರು ತಮ್ಮ ಪಾತ್ರವನ್ನು ತಿಳಿದಿರಬೇಕು.
- ಮಕ್ಕಳ ರೋಲ್‌ಮೋಡೆಲ್ ಆಗಿ ರಕ್ಷಕರು ಬದಲಾಗಬೇಕಾದುದರ ಅನಿವಾರ್ಯತೆಯನ್ನು ತಿಳಿದಿರಬೇಕು.

ಮೇಲೆ ಸೂಚಿಸಿದಂತಹ ಗುರಿಗಳಲ್ಲಿ ಸಾದೃಶ್ಯವಿರುವ ಆಶಯಗಳನ್ನು ಒಟ್ಟುಗೂಡಿಸಿ ಆಶಯ ರೂಪೀಕರಣ ಫಲಪ್ರದವಾಗಿಸಲು

ಅಗತ್ಯವಾದ ತರಬೇತಿ ಮಾರ್ಗಸೂಚಿ ತಯಾರಿಸಿ ರಕ್ಷಕರ ತರಬೇತಿ ಸರಿಯಾದ ರೀತಿಯಲ್ಲಿ ನಡೆಯುತ್ತಿದೆ ಎಂದು ಅಧ್ಯಾಪಕರು ಖಾತರಿಪಡಿಸಬೇಕು.
ಕೆಲವು ವಲಯಗಳಲ್ಲಿ ಪರಿಣಿತರ ತರಗತಿಗಳನ್ನು ಒಳಪಡಿಸಲು ಸಾಧ್ಯವಾಗಬೇಕು. (ಉದಾ : ಮಕ್ಕಳ ಹಕ್ಕುಗಳು – ನಿಯಮ ವ್ಯವಸ್ಥೆ)

*"ಮಕ್ಕಳು ಜನಿಸಿದ ಕಾರಣಕ್ಕೆ ಮಾತ್ರ ಈ ಲೋಕದಲ್ಲಿ ಯಾರು ರಕ್ಷಕರಾಗಿಲ್ಲ ಮಕ್ಕಳು ಜನಿಸಿದರೆ ತಂದೆ ತಾಯಿ ಆಗಲು ನಮಗೆ ಸಾಧ್ಯ. ಆದರೆ ಒಳ್ಳೆಯ ರಕ್ಷಕರಾಗಬೇಕಾದಲ್ಲಿ ತರಬೇತಿ ಪಡೆಯಲೇ ಬೇಕು."*

ಮೈಕಲ್ ಸ್ಟೀವನ್‌ಸನ್

- ಕೊಟ್ಟಿರುವ ತರಬೇತಿ ಮೊಡ್ಯೂಲನ್ನು ನೋಡಿ.

## ರಕ್ಷಕರ ತಿಳುವಳಿಕೆಗೆ ಬೇಕಾದ ಕಾರ್ಯಕ್ರಮ

### ತರಬೇತಿ ಮೊಡ್ಯೂಲ್

**ಉದ್ದೇಶ** : ಪ್ರಿಸ್ಕೂಲ್ ಕಾಲಘಟ್ಟದಲ್ಲಿ ಶಿಶುವಿಕಾಸ, ಲಭಿಸಬೇಕಾದಂತಹ ಅನುಭವಗಳು, ರಕ್ಷಕರ ಸಂಬಂಧಿಸಿ ತಿಳುವಳಿಕೆ ಹೆಚ್ಚಿಸುವುದರ ಮೂಲಕ ಮಕ್ಕಳ ಬೆಳವಣಿಗೆಯ ಹಂತಗಳಲ್ಲಿ ಫಲಪ್ರದವಾಗಿ ಬೆಂಬಲ ನೀಡಲು ರಕ್ಷಕರಿಗೆ ಸಾಧ್ಯವಾಗುವಂತೆ ಮಾಡಬೇಕು.

**ಗುರಿಗಳು**

1. ಪ್ರಿಸ್ಕೂಲ್ ಕಾಲಘಟ್ಟದಲ್ಲಿ ವಿವಿಧ ಶಿಶುವಿಕಾಸ ಮಂಡಲಗಳಿಗೆ ಲಭಿಸಬೇಕಾದ ಅನುಭವಗಳು ಪ್ರಾಧಾನ್ಯ ಹೊಂದಿದೆ.
2. ಕ್ಷಿಪ್ರ ಗತಿಯಲ್ಲಿ ಬೌದ್ಧಿಕ ಬೆಳವಣಿಗೆ ಉಂಟಾಗುಂತಹ ಪ್ರಿಸ್ಕೂಲ್ ಕಾಲಘಟ್ಟದಲ್ಲಿ ಸರಿಯಾದ ಕಲಿಕೆ ಆಟೋಟ ಅನುಭವಗಳು ಒದಗಿಸಲು ಮನೆ ಮತ್ತು ಪ್ರಿಸ್ಕೂಲ್ ಗಮನಿಸಬೇಕು.
3. ಮಕ್ಕಳಿಗೆ ಲಭಿಸುವಂತಹ ಪೋಷಕಾಹಾರ ಮಕ್ಕಳ ಬೆಳವಣಿಗೆ ಮತ್ತು ಪ್ರಿಸ್ಕೂಲ್ ಚಟುವಟಿಕೆಗಳ ಸನ್ನದ್ಧತೆಯ ಮೇಲೆ ಪ್ರಭಾವ ಬೀರುತ್ತದೆ.
4. ಪ್ರೀತಿ, ಪ್ರೋತ್ಸಾಹ, ಅಂಗೀಕಾರ, ಬೆಂಬಲ ಮೊದಲಾದ ಅಂಶಗಳು ಮಕ್ಕಳ ಸಮಗ್ರ ವಿಕಾಸದ ಮೇಲೆ ಪ್ರಭಾವ ಬೀರುವುದು.
5. ಫಲಪ್ರದವಾದ ಪ್ರಿಸ್ಕೂಲನ್ನು ಕಟ್ಟಿ ಬೆಳೆಸಲು ಗುಣಮಟ್ಟ ಇರುವ ಪ್ರಿಸ್ಕೂಲ್ ವಿದ್ಯಾಭ್ಯಾಸ ಒದಗಿಸಲು ರಕ್ಷಕರಿಗೆ ಸಾಧ್ಯವಾಗುತ್ತದೆ.

**ಚಟುವಟಿಕೆ**

ರಿಜಿಸ್ಟ್ರೇಷನ್ ನಡೆಸುವಾಗ 5/6 ತರದ ಪೇಪರು (A4 ನ ಅರ್ಧ)ಒಬ್ಬರಿಗೆ ಒಂದು ಲಭಿಸುವಂತೆ ಇಡಬೇಕು.

ರಕ್ಷಕರು ಇಷ್ಟ ಇರುವ ಕಾಗದ ತೆಗೆದುಕೊಳ್ಳಬೇಕು.

ಎಲ್ಲರೂ ಕಾಗದ ಮಡಚಿ ಅಥವಾ ಕತ್ತರಿಸಿ ಯಾವುದಾದರೂ ಒಂದು ಆಟಿಕೆಗಳನ್ನು ತಯಾರಿಸಿರಿ. (ಪೀಪಿ, ಬುಗುರಿ, ಒರಿಗಾಮಿ ರೂಪ...)

ಆಟಿಕೆಯನ್ನು ನಿರ್ದಿಷ್ಟ ಸ್ಥಳದಲ್ಲಿ ಪ್ರದರ್ಶಿಸುವುದು.

ಹೆಚ್ಚಿನವರು ತಯಾರಿಸಿದ ಆಟಿಕೆ ಯಾವುದು?

ಹೆಚ್ಚಿನವರು ಈ ಆಟಿಕೆಯನ್ನು ಯಾಕೆ ನಿರ್ಮಿಸಿದರು?

ನೀವು ನಿರ್ದಿಷ್ಟ ಬಣ್ಣದ ಕಾಗದ ಆರಿಸಿದ್ದು ಯಾಕೆ?

ಪ್ರದರ್ಶಿಸುವುದರಲ್ಲಿ ನಿಮಗೆ ಇಷ್ಟವಾದ ಆಟಿಕೆ ಯಾವುದು?

ಇನ್ನೊಂದು ಸಂದರ್ಭ ಲಭಿಸಿದಲ್ಲಿ ನೀವು ಯಾವ ಆಟಿಕೆ ತಯಾರಿಸುತ್ತೀರಿ?

ಸದಸ್ಯರ ಪ್ರತಿಕ್ರಿಯೆ

ಚರ್ಚೆ

ಆಸಕ್ತಿಯೂ ಸಾಮರ್ಥ್ಯವೂ ಭಿನ್ನವಾಗಿರುತ್ತದೆ. ಪೂರ್ವಾನುಭವಗಳು ಅನುಭವಗಳು ನಮ್ಮ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ತನ್ನ ಮತ್ತು ಗೆಳೆಯನ ಚಟುವಟಿಕೆ ಬಗ್ಗೆ, ಉತ್ಪನ್ನಗಳ ಬಗ್ಗೆ ಮೌಲ್ಯಮಾಪನ ಮಾಡಲು ಮಕ್ಕಳಿಗೆ ಸಾಧ್ಯವಾಗುತ್ತದೆ ಎಂಬುದನ್ನು ನಾವು ಇಲ್ಲಿ ಕ್ರೋಢೀಕರಿಸಬೇಕು.

ನಾವು ಮಕ್ಕಳ ಸ್ವಭಾವವನ್ನು ಅನುಕರಿಸಿ ಅವರನ್ನು ಪ್ರೋತ್ಸಾಹಿಸುವಂತಹ ರಕ್ಷಕರಾಗಿದ್ದೀರೋ?

ಚೆಕ್‌ಲಿಸ್ಟ್ ಮಂಡಿಸುವುದು.

ಅವರವರ ತಿಳುವಳಿಕೆ, ಮನೋಭಾವ ಇತ್ಯಾದಿಗಳಿಗೆ ಹೊಂದಿಕೊಂಡು ರಕ್ಷಕರು ವ್ಯಕ್ತಿಗತವಾಗಿ ವರ್ಕ್‌ಶೀಟ್ ಪೂರ್ತಿಗೊಳಿಸುವುದು. (ವರ್ಕ್‌ಶೀಟ್ – ಅನುಬಂಧ – 1)

ಎಲ್ಲಾ ಹೌದು ಅಥವಾ ಸರಿ ಎಂದು ದಾಖಲಿಸಿದವರು ಯಾರೆಲ್ಲಾ? ಇದೆಲ್ಲಾ ಮಕ್ಕಳ ಅಪೇಕ್ಷಣೀಯ ಬೆಂಬಲದ ಘಟಕಗಳಾದರೆ ರಕ್ಷಕರು ಎನ್ನುವ ನೆಲೆಯಲ್ಲಿ ನಾವು ಇನ್ನೂ ಬೆಳೆಯುವುದು ಹೇಗೆ?

ಸದಸ್ಯರ ಪ್ರತಿಕ್ರಿಯೆ

ಚರ್ಚೆ, ಆಶಯ ರೂಪೀಕರಣ

ನಾಲ್ಕು ವರ್ಷದ ಹುಡುಗ ಬಿಡಿಸಿದ ಚಿತ್ರ ಟೀಚರ್ ಪ್ರದರ್ಶಿಸುತ್ತಾರೆ.

ಚಿತ್ರ ನೋಡಿ ಚಿತ್ರದ ಕುರಿತು ಏನೆಲ್ಲಾ ಹೇಳಬಹುದು?

ಮಕ್ಕಳನ್ನು ಚಿತ್ರಬಿಡಿಸಲು ಪ್ರೋತ್ಸಾಹಿಸುವ ರೀತಿಯಲ್ಲಿ ಏನೆನ್ನೆಲ್ಲಾ ಅವನಲ್ಲಿ ಕೇಳಲು ಸಾಧ್ಯ? (ರೂಪ, ಬಣ್ಣ, ಸೌಂದರ್ಯ, ಬಿಡಿಸಿದ ರೀತಿ)

**ಕ್ರೋಢೀಕರಣ**

ಮಕ್ಕಳಿಗೆ ಪ್ರಚೋದನೆ ನೀಡಲು ಸಾಧ್ಯವಾಗಬೇಕಾದರೆ ಅವರ ಶಾರೀರಿಕ ಅಗತ್ಯಗಳೊಂದಿಗೆ ಮಾನಸಿಕ ಅಗತ್ಯಗಳನ್ನು ಕೂಡಾ ಪರಿಗಣಿಸಬೇಕು. ವಾತ್ಸಲ್ಯ, ಅಂಗೀಕಾರ, ಗೆಲುವು ನಿಷ್ಕರ್ಷೆ ಮೊದಲಾದವು ಮಾನಸಿಕ ಅಗತ್ಯಗಳಲ್ಲಿ ಪ್ರಧಾನವಾದವುಗಳಾಗಿವೆ.

ಇದನ್ನು ಪೂರ್ತಿಗೊಳಿಸಿ, ಮಕ್ಕಳು ಸಂತೋಷವಾಗಿರಬೇಕಾದರೆ ಈ ರೀತಿಯ ಕೌಟುಂಬಿಕ ಪರಿಸ್ಥಿತಿ ಇರಬೇಕು.

**ರಕ್ಷಕರೊಂದಿಗೆ ವಿನಿಮಯ ಮಾಡಬೇಕಾದ ಕೆಲವು ಪ್ರಧಾನ ವಿಷಯಗಳು**

ತಾವು ತಿಳಿದಿರಬೇಕಾದುದೂ ಹೆತ್ತವರು ನಿರ್ವಹಿಸಲೂ ಬೇಕಾದ ಪರಿಪಾಲನಾ ರೀತಿಗಳನ್ನು ರಕ್ಷಕತ್ವ(parent) ಎಂಬ ಪದದಿಂದ ಉದ್ದೇಶಿಸಲಾಗಿದೆ. ಜೀನ್ ಪ್ರತ್ಯೇಕತೆಗಳೊಂದಿಗೆ ರಕ್ಷಕತ್ವವೂ ಮಕ್ಕಳ ಬೆಳವಣಿಗೆಯು ಪ್ರಭಾವ ಬೀರುವುದು. ಪಟ್ಟಿಯಲ್ಲಿ ತಂದೆ, ತಾಯಿ, ಬಂಧು, ನೆರೆಕರೆ, ಸಮಾಜ ಮೊದಲಾದ ಮಕ್ಕಳಿಗೆ ಆರೈಕೆ ನೀಡುವ ಎಲ್ಲರೂ ಒಳಗೊಳ್ಳುತ್ತಾರೆ. ಮಕ್ಕಳ ಬೆಳವಣಿಗೆಗೆ ಪ್ರಚೋದನೆ ನೀಡಲು ಸಾಧ್ಯವಾಗಬೇಕಾದಲ್ಲಿ ಅವರ ಶಾರೀರಿಕ ಅಗತ್ಯಗಳೊಂದಿಗೆ ಮಾನಸಿಕ ಅವಶ್ಯಕತೆಗಳನ್ನು ಪರಿಗಣಿಸಬೇಕು. ವಾತ್ಸಲ್ಯ, ಅಂಗೀಕಾರ, ಗೆಲುವು, ನಿಷ್ಕರ್ಷ, ಸಂರಕ್ಷಣೆ ಮೊದಲಾದವು ಮಾನಸಿಕ ಅಗತ್ಯಗಳಲ್ಲಿ ಪ್ರಧಾನವಾದದ್ದು. ಇದನ್ನು ಪೂರ್ತಿಗೊಳಿಸಿ, ಮಕ್ಕಳು ಸಂತೋಷವಾಗಿರಬೇಕಾದರೆ ಕೌಟುಂಬಿಕ ವಾತಾವರಣ ಕೆಳಗೆ ಹೇಳುವ ರೀತಿಯಲ್ಲಿ ದೃಢವಾಗಿರಬೇಕು.

- ಕೌಟುಂಬಿಕ ಪರಿಸರದ ಸಂತೋಷ ಮತ್ತು ಒಗ್ಗಟ್ಟು
- ಪರಸ್ಪರ ಗೌರವಭಾವನೆ
- ಸತ್ಯಸಂಧತೆ, ಪಾರದರ್ಶಕತೆ
- ಕಟ್ಟುಪಾಡುಗಳಿಲ್ಲದ ಪ್ರೀತಿ ಮತ್ತು ಆಸಕ್ತಿ
- ತಾಳ್ಮೆ ಮತ್ತು ಸಮಯ ಮೀಸಲಿಡುವುದು

**ರಕ್ಷಕರು ಮಕ್ಕಳೊಂದಿಗೆ ಹೇಗೆ ನಡೆದುಕೊಳ್ಳಬೇಕು?**

- ಮಕ್ಕಳಿಗೆ ಯೋಗ್ಯವಾದ ರೀತಿಯಲ್ಲಿ ವಾತ್ಸಲ್ಯ ಮತ್ತು ಪ್ರೀತಿ ಕೊಡುವುದು.
- ಆರೋಗ್ಯಕರವಾದ ಬೆಳವಣಿಗೆಗೆ ಬೇಕಾದ ವಾತಾವರಣವನ್ನು ಉಂಟುಮಾಡುವುದು.

- ರಕ್ಷಕರು ಮಕ್ಕಳೊಂದಿಗೆ ಹೇಗೆ ವರ್ತಿಸಬೇಕು?
- ಮಕ್ಕಳಿಗೆ ಸೂಕ್ತವಾದ ರೀತಿಯಲ್ಲಿ ವಾತ್ಸಲ್ಯ ಮತ್ತು ಪ್ರೀತಿಯನ್ನು ನೀಡಬೇಕು.
- ಆರೋಗ್ಯಕರವಾದ ಬೆಳವಣಿಗೆಗೆ ಸೂಕ್ತ ವಾತಾವರಣ ಒದಗಿಸಬೇಕು.
- ಮಕ್ಕಳನ್ನು ವಿಮರ್ಶಿಸುವುದನ್ನು ಆರೋಪಿಸುವುದನ್ನು ನಿಲ್ಲಿಸಬೇಕು.
- ಇತರ ಮಕ್ಕಳೊಂದಿಗೆ ಹೋಲಿಕೆ ಬೇಡ.
- ಮಕ್ಕಳ ಎದುರು ಜಗಳವಾಡಬಾರದು.
- ಮಕ್ಕಳ ಸೋಲಿನಲ್ಲಿ ನಿರಾಶೆ ತೋರಿಸದೆ ಬೆಳೆಯಲು ಸಹಾಯ ಮಾಡಬೇಕು.
- ಮಕ್ಕಳೊಂದಿಗೆ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಅವರ ಜೊತೆ ಸಹಕರಿಸಬೇಕು.
- ಮಕ್ಕಳ ಸಮರ್ಪಕವಾದ ಅವಶ್ಯಕತೆಗಳು ನಿರ್ವಹಿಸಬೇಕು.
- ಮಾರ್ಗದರ್ಶನ ನೀಡುವುದರೊಂದಿಗೆ ರೋಲ್ ಮೋಡೆಲ್ ಆಗಿರಬೇಕು.
- ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆಸಬೇಕು.
- ಶಾಲೆಯೊಂದಿಗೆ ಸಹಕರಿಸಬೇಕು.

**ರಕ್ಷಕರ ಗಮನಕ್ಕೆ....**

- ಮಕ್ಕಳಿಗೆ ಸ್ಪಷ್ಟವಾದ ವಿಕಾಸ ಘಟ್ಟಗಳು ಅದಕ್ಕೆ ಸಂಬಂಧಿಸಿದ ವಿಶೇಷತೆಗಳಿಂದ ಸಮಗ್ರವಾದ ವಿಕಾಸ ಸಾಧ್ಯವಾಗಬೇಕಾದಲ್ಲಿ ಬೇರೆ ಬೇರೆ ತರದ ವಿಕಾಸ ವಲಯಗಳು ಯಾವುವೆಲ್ಲಾ ಎಂದು ರಕ್ಷಕರು ತಿಳಿದಿರಬೇಕು.
- ಮಕ್ಕಳ ನೈಸರ್ಗಿಕ ವಿಕಾಸ ಹೆಚ್ಚಿಸುವುದರೊಂದಿಗೆ ವಿಕಾಸಕ್ಕೆ ತಡೆ ಉಂಟು ಮಾಡುವ ಸಂದರ್ಭಗಳನ್ನು ಇಲ್ಲದಂತೆ ಮಾಡಬೇಕು.
- ಆಟದಿಂದ ಮಕ್ಕಳಿಗೆ ಬಹಳಷ್ಟು ಕಲಿಯಲಿದೆ ಎಂದು ತಿಳಿದುಕೊಂಡು ಆಟ ಆಡಲು ಸಂದರ್ಭ ನೀಡಬೇಕು.
- ಮಕ್ಕಳ ಬೆಳವಣಿಗೆಗೆ ವಿರುದ್ಧವಾಗಿ ಹಿರಿಯರು ಪಶ್ಯರೀತಿಯನ್ನು ಹೊರಬಾರದು.
- ಬೆಳವಣಿಗೆಯಲ್ಲಿ ವ್ಯತ್ಯಾಸ ಮಕ್ಕಳಿಗೆ ಸಾಧ್ಯವಾದಷ್ಟು ಬೇಗ ಸರಿಯಾದ ಆರೈಕೆ ನೀಡಬೇಕು.
- ಅವೈಜ್ಞಾನಿಕವಾಗಿ ಅಡ್ವೈರ್ಟೈಸ್‌ಮೆಂಟ್‌ನ ಆಧಾರದಲ್ಲಿ ನಿರ್ವಹಿಸುತ್ತಿರುವ ಪ್ರಿಸ್ಕೂಲಿಗೆ/ಸಂಸ್ಥೆಗಳ ಕಡೆ ಆಸಕ್ತಿ ತೋರಿಸದಿರಿ.
- ಮಕ್ಕಳ ಉಚಿತವಲ್ಲದ ನಡವಳಿಕೆಗಳಿಗೆ ಅವರನ್ನು ಶಾರೀರಿಕವಾಗಿ ಅಥವಾ ಮಾತಿನ ಮೂಲಕ ಶಿಕ್ಷೆಗೆ ಒಳಪಡಿಸುವುದೋ ಅವಗಣಿಸುವುದೋ ಸರಿಯಲ್ಲ.
- ತಂಟೆ ಮಾಡುವ ಮಕ್ಕಳಿಗೆ ವೈಜ್ಞಾನಿಕವಾದ ವ್ಯವಹಾರ ಚಟುವಟಿಕೆಗಳ ಮೂಲಕ ಗುಣಮಟ್ಟವುಳ್ಳ ಬದಲಾವಣೆ ತರಲು ಪ್ರತ್ಯೇಕವಾಗಿ ಗಮನಿಸಬೇಕು.

**ರಕ್ಷಕರ ಬೆಂಬಲ ದೊರಕಲು ಪ್ರಿಸ್ಕೂಲಿನಲ್ಲಿ ಏನೆಲ್ಲಾ ಮಾಡಬೇಕು?**

1. ಮನೆ ಸಂದರ್ಶನ, ಮಕ್ಕಳ ಸರ್ವೆ, ಅವಸ್ಥೆ ತಿಳಿದುಕೊಳ್ಳುವುದು, ಸಂದೇಶ ಕೊಡುವುದು.
2. ಬೆಳವಣಿಗೆ ನಿರೀಕ್ಷಣೆ, ವಿಕಾಸ ಪುರೋಗತಿಗಳನ್ನು ತಾಯಿಯೊಂದಿಗೆ ಹಂಚಿಕೊಳ್ಳಬೇಕು. ಚರ್ಚೆ (Open House).
3. Mother PTA
4. ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳು, ವಾರ್ಷಿಕೋತ್ಸವಗಳು
5. ರಾಷ್ಟ್ರೀಯ ದಿನಾಚರಣೆಗಳು, ಇತರ ಕಾರ್ಯಕ್ರಮಗಳು
6. ಪ್ರವಾಸ, ಪ್ರಕೃತಿಯ ಬಗ್ಗೆ ಕಲಿಕೆಗಾಗಿ ಬಯಲು ಪ್ರವಾಸ
7. ರಕ್ಷಕರ ಸಭೆ
8. ರಕ್ಷಕರ ಸಬಲೀಕರಣ ತರಗತಿ, ಮಕ್ಕಳ ಆರೈಕೆ, ವಿದ್ಯಾಭ್ಯಾಸ (Good Parenting)
9. ಮಕ್ಕಳಿಗಿರುವ ಆರೋಗ್ಯ ತಪಾಸಣೆ
10. ರಕ್ಷಕರ Counseling
11. ಪೋಷಣೆ – ಆರೋಗ್ಯ ಕ್ಲಾಸುಗಳು



# 10 ಸಂಪನ್ಮೂಲಗಳು

## 1. ಕಥೆಗಳು



### ರಾಜನೂ.........ಜಿಂಕೆಯೂ

ಒಂದಾನೊಂದು ಕಾಲದಲ್ಲಿ ರಾಜನೊಬ್ಬ ತನ್ನ ಗೆಳೆಯರೊಂದಿಗೆ ಬೇಟೆಯಾಡಲು ಕಾಡಿಗೆ ಹೊರಟನು. ದಾರಿಯಲ್ಲಿ ಅವರಿಗೆ ಒಂದು ಜಿಂಕೆಯು ಎದುರಾಯಿತು. ರಾಜ ಜಿಂಕೆಗೆ ಬಾಣ ಬಿಡಲು ಗುರಿ ಹಿಡಿದನು. ಅದನ್ನು ನೋಡಿದ ಜಿಂಕೆಯು ಭಯದಿಂದ ಕಾಡಿನತ್ತ ಓಡಿತು. ರಾಜನು ತನ್ನ ಗೆಳೆಯರೊಡನೆ ಅಲ್ಲೇ ನಿಲ್ಲಲು ಹೇಳಿ, ಜಿಂಕೆಯ ಹಿಂದೆಯೇ ಕಾಡಿಗೆ ಓಡಿದನು. ಓಡುವ ರಭಸದಲ್ಲಿ ರಾಜನು ಒಂದು ಕೆಸರಿನ ಹೊಂಡಕ್ಕೆ ಬಿದ್ದು ಬಿಟ್ಟನು. ಅವನ ಕಾಲುಗಳು ಕೆಸರಿನಲ್ಲಿ ಮುಳುಗ ತೊಡಗಿತು. 'ಅಯ್ಯೋ ಕಾಪಾಡೀ.......' ರಾಜ ಗಟ್ಟಿಯಾಗಿ ಕೂಗಿ ಕೊಂಡನು. ಅವನ ಕೂಗು ಯಾರಿಗೆ ಕೇಳಿಸುತ್ತದೆ? ಆದರೆ ಜಿಂಕೆ ಓಡುತ್ತಾ ಬಂದು ರಾಜನಲ್ಲಿ ಹೇಳಿತು..........! "ನನ್ನ ಕೊಂಬಿನಲ್ಲಿ ಗಟ್ಟಿಯಾಗಿ ಹಿಡಿದು ಹೊಂಡದಿಂದ ಮೇಲಕ್ಕೆ ಬಾ......!" ರಾಜ ಜಿಂಕೆಯ ಕೊಂಬುಗಳನ್ನು ಹಿಡಿದು ಹೊಂಡದಿಂದ ಮೇಲಕ್ಕೇರಿ ಬಂದ. ಜಿಂಕೆ ರಾಜನನ್ನು ತನ್ನ ಬೆನ್ನ ಮೇಲೆ ಕೂರಿಸಿ ಅವನ ಗೆಳೆಯರ ಬಳಿಗೆ ತಲುಪಿಸಿತು. "ಇಷ್ಟೊಂದು ಒಳ್ಳೆಯ ಗುಣದ ಜಿಂಕೆಯನ್ನಲ್ಲವೇ ನಾನು ಕೊಲ್ಲಲು ಪ್ರಯತ್ನಿಸಿದ್ದ". ರಾಜನಿಗೆ ತುಂಬಾ ಬೇಸರವಾಯಿತು. ಮುಂದೆ ಎಂದಿಗೂ ರಾಜ ಮೃಗ ಪಕ್ಷಿಗಳನ್ನು ಬೇಟೆಯಾಡಲೇ ಇಲ್ಲ.



### ತಂತ್ರಗಾರ ನರಿ

ಒಂದು ಕಾಡಿನಲ್ಲಿ ಒಂದು ಗಂಡು ನರಿಯೂ, ಹೆಣ್ಣು ನರಿಯೂ ವಾಸಿಸುತ್ತಿತ್ತು. ಒಂದು ದಿನ ಹೆಣ್ಣು ನರಿಗೆ ಮೀನು ತಿನ್ನಬೇಕೆಂಬ ಆಸೆಯಾಯಿತು. ಗಂಡು ನರಿ ಮೀನು ತರಲು ನೀರ ಹೊಳೆಯ ಬದಿಗೆ ಹೋಯಿತು. ಅಲ್ಲಿ ಎರಡು ಬೆಕ್ಕುಗಳು ಮೀನು ಹಿಡಿಯುತ್ತಾ ಇದ್ದವು. ಗಂಡು ನರಿ ಅವರಿಗೆ ಕಾಣದಂತೆ ಅಡಗಿ ನೋಡುತ್ತಾ ಕುಳಿತಿತ್ತು. ಬೆಕ್ಕುಗಳಿಗೆ ಒಂದು ದೊಡ್ಡ ಮೀನು ಸಿಕ್ಕಿತು. "ನಾವು ಈ ಮೀನನ್ನು ಹಂಚಿ ತಿನ್ನೋಣ. ಒಂದನೇ ಬೆಕ್ಕು ಹೇಳಿತು". "ನಾನಲ್ಲವೇ ಮೀನು ಹಿಡಿದದ್ದು, ನನಗೆ ದೊಡ್ಡ ತುಂಡು ಬೇಕು ಎರಡನೇ ಬೆಕ್ಕು ಹೇಳಿತು". 'ಅದಾಗದು' ಎಂದಿತು ಒಂದನೇ ಬೆಕ್ಕು. ಹೀಗೆ ಅವರ ನಡುವೆ ಜಗಳ ಆರಂಭಗೊಂಡಿತು. ಆಗ ಅಡಗಿ ಕುಳಿತಿದ್ದ ನರಿ ಅಲ್ಲಿಗೆ ಬಂದು, 'ನಾನು ಹಂಚಿಕೊಡುತ್ತೇನೆ' ಎಂದು ಹೇಳಿತು. ಬೆಕ್ಕುಗಳು ಒಪ್ಪಿಕೊಂಡವು.

ನರಿಯು ಮೀನಿನ ಬಾಲವನ್ನು ಒಂದು ಬೆಕ್ಕಿಗೂ, ತಲೆಯನ್ನು ಇನ್ನೊಂದು ಬೆಕ್ಕಿಗೂ ತುಂಡು ಮಾಡಿ ಕೊಟ್ಟಿತು. "ಹಂಚಿಕೊಟ್ಟ ನನ್ನ ಸಂಬಳ ಈ ತುಂಡು" ಎನ್ನುತ್ತಾ ನರಿಯು ಮೀನಿನ ದೊಡ್ಡ ತುಂಡನ್ನು ಕಚ್ಚಿಕೊಂಡು ಅಲ್ಲಿಂದ ಓಡಿ ಹೋಯಿತು. ಆಗಲೇ ನರಿಯ ತಂತ್ರ ಬೆಕ್ಕುಗಳಿಗೆ ತಿಳಿಯಿತು. "ಸುಮ್ಮನೆ ಜಗಳ ಮಾಡಿದುದರಿಂದ ನಮಗೆ ನಷ್ಟವಾಯಿತು" ಎಂದು ಬೆಕ್ಕುಗಳಿಗೆ ತಿಳಿಯಿತು.

## ಶತ್ರುಗಳನ್ನು ನಂಬದಿರಿ

ಒಂದು ದಿನ ಆಡು ಮೇಯಿಸುವವನು ಆಡುಗಳನ್ನು ಮೇಯಿಸುತ್ತಾ ಬಯಲಿಗೆ ಬಂದನು. ಆಗ ಆ ದಾರಿಯಲ್ಲಿ ಒಂದು ತೋಳವು ಬಂದಿತು. ತೋಳವು ಆಡು ಕಾಯುವವನ ಮತ್ತು ಆಡುಗಳ ಮಂದೆ ಬಂದು ನಿಂತಿತು. ತುಂಬಾ ಹೊತ್ತಾದರೂ ತೋಳವು ಅವರಿಗೇನೂ ಮಾಡಲಿಲ್ಲ ಮತ್ತು ಒಬ್ಬ ಕಾವಲುಗಾರನಂತೆ ಆಡುಗಳೊಂದಿಗೆ ನಡೆಯ ತೊಡಗಿತು. ಪ್ರತಿದಿನವೂ ಆಡುಗಳೊಂದಿಗೆ ನಡೆಯುತ್ತಿದ್ದ ತೋಳವನ್ನು ಆಡು ಕಾಯುವವನು ನಂಬಿ ಬಿಟ್ಟನು. ಒಂದು ದಿನ ಆಡು ಕಾಯುವವನು ಆಡುಗಳನ್ನು ನೋಡಿಕೊಳ್ಳಲು ಹೇಳಿ ದೂರದ ಊರಿಗೆ ಹೊರಟು ಹೋದನು. ಆಡು ಕಾಯುವವ ಹೋದದ್ದೇ ತಡ ತೋಳದ ಸ್ವಭಾವ ಬದಲಾಯಿತು. ಅದು ಆಡುಗಳನ್ನು ಆಕ್ರಮಿಸಿ ತುಂಬಾ ಆಡುಗಳನ್ನು ಕೊಂದು ತಿಂದಿತು. ತೋಳವೂ ಕಾಣಿಸುತ್ತಿಲ್ಲ.'ಆಡುಗಳ ಶತ್ರುವಾದ ತೋಳನದಲ್ಲೇ ಅವುಗಳನ್ನು ನೋಡಿಕೊಳ್ಳಲು ಹೇಳಿದ ನಾನೇ ಪೆದ್ದ' ಎಂದು ಆಡು ಕಾಯುವವನಿಗೆ ತಿಳಿಯಿತು.

## ಬೆಕ್ಕು

ಒಂದು ಕಾಡಿನಲ್ಲಿ ತುಂಬಾ ಇಲಿಗಳು ವಾಸಿಸುತ್ತಿದ್ದವು. ಒಮ್ಮೆ ಒಂದು ಭಯಾನಕ ಬೆಕ್ಕು ಕಾಡಿಗೆ ಬಂದಿತು. ಅದು ಇಲಿಗಳನ್ನು ಹಿಡಿದು ತಿನ್ನ ತೊಡಗಿತು. ಕೆಲವೇ ದಿನಗಳಲ್ಲಿ ಇಲಿಗಳ ಸಂಖ್ಯೆ ಕಡಿಮೆಯಾಗ ತೊಡಗಿತು. ಆ ಸಮಯದಲ್ಲಿ ಒಂದು ಬುದ್ಧಿವಂತನಾದ ಇಲಿ ಆ ಕಾಡಿಗೆ ಬಂತು. ಅದು ಇಲಿಗಳ ನಾಯಕನಾಯಿತು. "ದುಷ್ಟನಾದ ಆ ಬೆಕ್ಕನ್ನು ನಮಗೆ ಬುದ್ಧಿವಂತಿಕೆಯಿಂದಲೇ ಸೋಲಿಸಲು ಸಾಧ್ಯ". ನಾಯಕ ಇಲಿ ಹೇಳಿತು. ಅದು ಕೆಲವೊಂದು ಉಪಾಯಗಳನ್ನು ಯೋಚಿಸಿತು. ಎಲ್ಲಾ ಇಲಿಗಳೂ ಒಂದು ಕಡೆ ಸೇರಿ ನಿಂತವು. ನಾಯಕ ಇಲಿ ಇನ್ನೊಂದು ಕಡೆಯಲ್ಲಿ ನಿಂತಿತು. ನಿಂತಲ್ಲೇ ಒಂದು ಹೊಂಡ ಮಾಡಿ ಅದರಲ್ಲಿ ಅರ್ಧದವರೆಗೆ ಕಲ್ಲು ಮುಳ್ಳು ತುಂಬಿಸಿದವು. ಗುಡ್ಡದ ಮೇಲೆ ನಿಂತಿದ್ದ ಬೆಕ್ಕು ಇಲಿಗಳು ಸೇರಿ ನಿಂತಿರುವುದನ್ನು ನೋಡಿ, ಅದು ನಾಯಕ ಇಲಿಯತ್ತ ಹಾರಿತು. ಇಲಿ ಬರುವುದನ್ನು ನೋಡಿದ ನಾಯಕ ಇಲಿ ನೆಗೆದು ತಪ್ಪಿಸಿಕೊಂಡಿತು. ದುಷ್ಟ ಬೆಕ್ಕು ಹೊಂಡದ ಒಳಗೆ ಬಿದ್ದಿತು. ಇಲಿಗಳೆಲ್ಲಾ ಕಲ್ಲು, ಮಣ್ಣುಗಳನ್ನು ಹಾಕಿ ಹೊಂಡವನ್ನು ಮುಚ್ಚಿದವು. ದುಷ್ಟ ಬೆಕ್ಕು ಸತ್ತೇ ಹೋಯಿತು.

## ಪಕ್ಷಿರಾಜ

ಒಮ್ಮೆ ಪಕ್ಷಿಗಳ ರಾಜನನ್ನು ಆಯ್ಕೆ ಮಾಡಲು 'ವನದೇವತೆ' ತೀರ್ಮಾನಿಸಿದಳು. ಎಲ್ಲರೂ ಸ್ನಾನ ಮಾಡಿ ಬನ್ನಿ, ಹೆಚ್ಚು ಸುಂದರವಾಗಿರುವವರೇ ರಾಜನಾಗುವುದು. ವನದೇವತೆ ಹೇಳಿದಳು. ಪಕ್ಷಿಗಳೆಲ್ಲಾ ಹೊಳೆಯಲ್ಲಿ ಸ್ನಾನ ಮಾಡತೊಡಗಿದವು. 'ನನಗೆ ರಾಜನಾಗಬೇಕು, ನನ್ನ ಕಪ್ಪಿನ ಗರಿಗಳನ್ನು ಕಂಡರೆ ಯಾರು ನನ್ನನ್ನು ರಾಜನಾಗಿ ಮಾಡುವುದಿಲ್ಲ ಎಂದು ಕಾಗೆಗೆ ಅನಿಸಿತು.' ಅದು ಹೊಳೆಯ ಬದಿಯಲ್ಲಿ ಬಿದ್ದಿದ್ದ ಉಳಿದ ಹಕ್ಕಿಗಳ ಗರಿಗಳನ್ನು ಹೆಕ್ಕಿ ಕೊಂಡಿತು. ಮರದ ಅಂಟು ತಂದು ತನ್ನ ಮೈಗೆಲ್ಲಾ ಅಂಟಿಸಿಕೊಂಡಿತು. ಬಳಿಕ ವನದೇವತೆಯ ಬಳಿ ಬಂದಿತು. ಕಾಗೆಯ ತಂತ್ರವನ್ನು ತಿಳಿದ ವನದೇವತೆಯೂ 'ಸರಿ ನೀನೇ ಪಕ್ಷಿಗಳ ರಾಜ ಎಂದಳು'. ಉಳಿದ ಪಕ್ಷಿಗಳಿಗೂ ಕಾಗೆಯ ಉಪಾಯ ತಿಳಿಯಿತು. ಅವುಗಳೆಲ್ಲಾ ಕಾಗೆಯನ್ನು ಒಮ್ಮೆಲೇ ಆಕ್ರಮಿಸಿ, ಅದು ಅಂಟಿಸಿದ್ದ ಗರಿಗಳನ್ನು ಕುಕ್ಕಿ ಕುಕ್ಕಿ ತೆಗೆಯತೊಡಗಿದವು. ನಾಚಿಕೆಯಿಂದ ಕಾಗೆಯು ಅಲ್ಲಿಂದ ಹಾರಿ ಹೋಯಿತು. ಯಾರನ್ನೂ ಹೆಚ್ಚು ವಂಚಿಸಲು ಸಾಧ್ಯವಿಲ್ಲವೆಂದು ಕಾಗೆಗೆ ಮನವರಿಕೆಯಾಯಿತು.

## ನ್ಯಾಯ – ಅನ್ಯಾಯ

ಒಮ್ಮೆ ಒಬ್ಬ ಮೀನು ಹಿಡಿಯುವವ ಮೀನುಗಳನ್ನು ಹಿಡಿದಯಲೆಂದು ಹೊಳೆಯಲ್ಲಿ ಗೂಡೊಂದನ್ನು ಇಟ್ಟನು. ಗೂಡಿನೊಳಗೆ ಹಲವಾರು ಮೀನುಗಳೂ, ಒಂದು ನೀರು ಹಾವು ಸಿಕ್ಕಿ ಬಿದ್ದಿತು. ಮೀನುಗಳನ್ನು ನೋಡಿದ ನೀರು ಹಾವು "ಇವರೆಲ್ಲರನ್ನೂ ತಿಂದು ಬಿಡೋಣ", ಎಂದು ಯೋಚಿಸಿತು. ಅದು ಮೀನುಗಳನ್ನು ಹಿಡಿದು ತಿನ್ನಲು ಅವುಗಳ ಹತ್ತಿರ ಬಂತು. ಆದರ ಮೀನುಗಳೆಲ್ಲಾ ನೀರು ಒಟ್ಟಾಗಿ ನೀರು ಹಾವನ್ನು ಕಚ್ಚತೊಡಗಿದವು. ಆಗ ಗೂಡಿನ ಹೊರಗಿನಿಂದ

ಒಂದು ಕಪ್ಪೆ ಹೋಗುತ್ತಿರುವುದು ನೀರು ಹಾವಿಗೆ ಕಂಡಿತು. "ನೋಡು ಗೆಳೆಯಾ, ಈ ಮೀನುಗಳೆಲ್ಲಾ ಸೇರಿ ನನ್ನನ್ನು ಕಚ್ಚುತ್ತಿವೆ. ಇದು ಸರಿಯೇ?" ನೀರು ಹಾವು ಕಪ್ಪೆಯಲ್ಲಿ ಕೇಳಿತು. "ಅದನ್ನು ಕೇಳಿದ ಕಪ್ಪೆಯು ಹೋ.... ಹೋ..... ಯಾವಾಗಿನಿಂದ ನೀನು ಸರಿ ತಪ್ಪು ನೋಡಿ ಜೀವಿಸಲು ಆರಂಭಿಸಿದ್ದು....? ಮೀನುಗಳೂ, ಕಪ್ಪೆಗಳೂ ನಿನ್ನ ಹತ್ತಿರ ಬಂದಾಗ ಹಿಡಿದು ತಿನ್ನುತ್ತಿರಲ್ಲಿಲ್ಲವೇ?" ಎಂದು ಹೇಳುತ್ತಾ ಕಪ್ಪೆ ಅಲ್ಲಿಂದ ಮುಂದಕ್ಕೆ ಹೋಯಿತು. ನೀರು ಹಾವಿಗೆ ನಾಚಿಕೆಯಾಯಿತು.

## ಮಣ್ಣಿನ ಪಾತ್ರೆಯೂ ತಾಮ್ರದ ಕೊಡವೂ

ಒಂದು ಊರಿನಲ್ಲಿ ಒಮ್ಮೆ ದೊಡ್ಡ ನೆರೆ ಬಂದಿತು. ಮನೆಗಳೆಲ್ಲಾ ನೀರಿನಲ್ಲಿ ಮುಳುಗಿ ಹೋದವು. ಮನೆಗಳಲ್ಲಿದ್ದ ಪಾತ್ರೆಗಳೆಲ್ಲವೂ ನೀರಿನಲ್ಲಿ ತೇಲತೊಡಗಿದವು. ಅವುಗಳಲ್ಲಿ ಒಂದು ಮಣ್ಣಿನ ಪಾತ್ರೆಯೂ... ತಾಮ್ರದ ಕೊಡವೂ ಇತ್ತು. "ನಾವಿಬ್ಬರೂ ನೀರಿನಲ್ಲಿ ತೇಲಿ ಹೋಗುತ್ತಿದ್ದೇವೆ. ನಾವಿಬ್ಬರೂ ಜೊತೆಯಾಗಿ ನೀರಿನಲ್ಲಿ ತೇಲುತ್ತಾ ಸಾಗೋಣ" ಎಂದಿತು ಮಣ್ಣಿನ ಕೊಡ. ಮಣ್ಣಿನ ಪಾತ್ರೆ ಏನೂ ಮಾತನಾಡದೇ ತೇಲುತ್ತಲೇ ಇತ್ತು. "ನಿನಗೆ ಯಾವುದೇ ಅಪಾಯ ಬಾರದಂತೆ ನಾನು ನೋಡಿಕೊಳ್ಳುತ್ತೇನೆ". ತಾಮ್ರದ ಕೊಡ ಮತ್ತೆ ಹೇಳಿತು. ಈಗಲೂ ಮಣ್ಣಿನ ಪಾತ್ರೆ ಏನೂ ಹೇಳದೇ ಮುಂದೆ ತೇಲುತ್ತಿತ್ತು. ನೀನ್ಯಾಕೆ ಮಾತನಾಡುತ್ತಿಲ್ಲ ತಾಮ್ರದ ಕೊಡ ಕೇಳಿತು'. "ಗೆಳೆಯಾ ನಿನ್ನ ಪ್ರೀತಿಗೆ ಧನ್ಯವಾದಗಳು ಆದರೆ ನೀನು ಹತ್ತಿರ ಬರುವುದೇ ನನಗೆ ಅಪಾಯ", ಎಂದು ಮಣ್ಣಿನ ಕೊಡ ಹೇಳಿತು. ಹೆಚ್ಚು ಹತ್ತಿರ ಹತ್ತಿರ ಬಂದರೆ ನಾವಿಬ್ಬರೂ ಪರಸ್ಪರ ತಾಗಿಕೊಳ್ಳುತ್ತೇವೆ. ಹಾಗೇನಾದರೂ ಆದರೆ ನಾನು ಒಡೆದು ಹೋದೇನು. 'ಶಕ್ತಿವಂತರಿಂದ ದೂರವಿರುವುದೇ ಲೇಸು' ಎನ್ನುತ್ತಾ ಮಣ್ಣಿನ ಕೊಡವು ದೂರಕ್ಕೆ ನೀರಿನಲ್ಲಿ ತೇಲುತ್ತಾ ಹೋಯಿತು.

## ಅತಿ ಆಸೆಯ ಆಪತ್ತು

ಒಂದು ಕಾಡಿಗೆ ಬರಗಾಲ ಬಂತು. ಮರಗಿಡಗಳೆಲ್ಲಾ ಒಣಗಿದವು. ತಿನ್ನಲು ಹಣ್ಣುಗಳು ಸಿಗದೆ ಗಿಳಿಗಳೆಲ್ಲಾ ಕಂಗಾಲಾದುವು. "ಇಲ್ಲೆ ಹತ್ತಿರದ ಊರಿನಲ್ಲಿ ತುಂಬಾ ಹಣ್ಣುಗಳಿವೆ. ನಾವೆಲ್ಲಾ ಅಲ್ಲಿಗೆ ಹೋಗೋಣ" ಎಂದು ಗಿಳಿರಾಜ ಹೇಳಿತು. ಎಲ್ಲಾ ಗಿಳಿಗಳೂ ಆ ಊರಿನ ಕಡೆಗೆ ಬಂದುವು. "ಇನ್ನು ನೀವು ಒಬ್ಬೊಬ್ಬರು ಒಂದೊಂದು ಕಡೆಗೆ ಹೋಗಿ ನೋಡಿ, ಯಾರಿಗಾದರೂ ಹಣ್ಣುಗಳಿರುವ ಮರ ಕಂಡರೆ ಉಳಿದವರಿಗೆ ತಿಳಿಸಬೇಕು", ಎಂದು ಗಿಳಿರಾಜ ಹೇಳಿತು. ಎಲ್ಲಾ ಗಿಳಿಗಳೂ ಒಪ್ಪಿಕೊಂಡು ಬೇರೆ ಬೇರೆ ಕಡೆಗೆ ಹಾರಿದವು. ಅವುಗಳಲ್ಲಿ ಒಂದು ಅತಿ ಆಸೆಯ ಗಿಳಿಯಿತ್ತು. ಅದು ಹೋದ ದಾರಿಯಲ್ಲಿ ತಂಬಾ ಧಾನ್ಯಗಳು ಬಿದ್ದಿರುವುದನ್ನು ಕಂಡಿತು. "ಈ ವಿಷಯ ಯಾರಿಗೂ ತಿಳಿಸುವುದೇ ಬೇಡ ಎಂದು ಗಿಳಿ ಯೋಚಿಸಿತು. ಆ ಗಿಳಿ ಹೊಟ್ಟೆ ತುಂಬಾ ಧಾನ್ಯಗಳನ್ನು ತಿಂದು ಗೆಳೆಯರ ಬಳಿ ಬಂತು" ಆ ದಾರಿಯಲ್ಲಿ ಯಾರೂ ಹೋಗ ಬೇಡಿ ಅಲ್ಲಿ ಏನೂ ಇಲ್ಲ ಎಂದು ಹೇಳಿತು. ಮರುದಿನವೂ ಆ ಗಿಳಿ ಧಾನ್ಯಗಳು ಬಿದ್ದಿರುವ ಸ್ಥಳಕ್ಕೆ ಬಂದಿತು. ಒಬ್ಬನೇ ಧಾನ್ಯಗಳನ್ನು ಹೆಕ್ಕಿ ತಿನ್ನುತ್ತಿರುವಾಗ ಆ ದಾರಿಯಲ್ಲಿ ಒಂದು ಎತ್ತಿನ ಗಾಡಿ ಬಂದದ್ದು ತಿಳಿಯಲೇ ಇಲ್ಲ. ಎತ್ತಿನ ಗಾಡಿಯ ಚಕ್ರಗಳೆಡೆಗೆ ಗಿಳಿಯ ರೆಕ್ಕೆ ಸಿಕ್ಕಿಕೊಂಡು ಅದಕ್ಕೆ ತುಂಬಾ ಗಾಯಗಳಾಗಿ ಕೆಳಗೆ ಬಿದ್ದು ಬಿಟ್ಟಿತು. ತುಂಬಾ ಸಮಯವಾದರೂ ಗೆಳೆಯನನ್ನು ಕಾಣದೆ ಗಿಳಿಗಳೆಲ್ಲಾ ಅದನ್ನು ಹುಡುಕಿಕೊಂಡು ಅಲ್ಲಿಗೆ ತಲಪಿದುವು. ನೆಲದ ಮೇಲೆ ಚೆಲ್ಲಿರುವ ಧಾನ್ಯಗಳ ನಡುವೆ ಗಾಯವಾಗಿ ಬಿದ್ದಿರುವ ಗಿಳಿಯನ್ನು ಕಂಡುವು. ನನ್ನನ್ನು ಸ್ವಲ್ಪ ಸಮಯ ಕಾಣದಿರುವಾಗ ಗೆಳೆಯರೆಲ್ಲಾ ಹುಡುಕಿ ಬಂದುವು. ನಾನು ಮಾತ್ರ ಧಾನ್ಯ ಸಿಕ್ಕಿರುವುದನ್ನು ಗೆಳೆಯರಿಗೆ ತಿಳಿಸದೇ ಅತಿ ಆಸೆಯಿಂದ ಒಬ್ಬನೇ ತಿನ್ನಲು ನೋಡಿದೆ ಎಂದು ಯೋಚಿಸುವಾಗ ಅದಕ್ಕೆ ದುಃಖವಾಯಿತು. ಇರುವುದನ್ನು ಎಲ್ಲರೂ ಹಂಚಿ ತಿಂದರೆ ಮಾತ್ರ ಸಂತೋಷ ಎಂದು ಅದು ತಿಳಿದುಕೊಂಡಿತು.

## ಸುಂದರಿ ಯಾರು?

ಒಂದು ದಿನ ಎರಡು ನದಿಗಳ ಮೀನುಗಳು ಪರಸ್ಪರ ಭೇಟಿಯಾದವು. ಆ ಎರಡೂ ಮೀನುಗಳು ಅಹಂಕಾರಿಗಳಾಗಿದ್ದವು. 'ನೀನೇನು ಅಂದವಿಲ್ಲ, .... ನಾನೆಷ್ಟು ಸುಂದರಿಯಾಗಿದ್ದೇನೆ...' "ಒಂದು ಮೀನು ಹೇಳಿತು". " ಅಲ್ಲ... ನೀಳವಾಗಿ ತೆಳ್ಳಗಿರುವ ನಾನೇ ತೋರವಿರುವ ನಿನಗಿಂತ ಸುಂದರಿ....". ಇನ್ನೊಂದು ಮೀನು ಹೇಳಿತು. "ಹೂಂ ಯಾರು ಹೇಳಿದರು". ಒಂದನೇ ಮೀನು ಬಿಟ್ಟುಕೊಡಲಿಲ್ಲ. ಹಾಗೆ ಅವರೊಳಗೆ ಜಗಳ ಆರಂಭವಾಯಿತು. ಆ ಸಂದರ್ಭದಲ್ಲಿ ದಡದಲ್ಲಿ ಮಲಗಿರುವ ಮೊಸಳೆಯನ್ನು ಅವರಿಬ್ಬರು ಕಂಡರು. 'ನಾವು ಆ ಮೊಸಳೆಯಲ್ಲಿ ಕೇಳೋಣ'. ಇನ್ನೊಂದು ಮೀನು ಹೇಳಿತು. ಹಾಗೆ ಅವರು ಮೊಸಳೆಯ ಬಳಿಗೆ ಬಂದು ವಿಷಯ ಹೇಳಿದರು. 'ನಿಮಗಿಂತಲೂ ನಾನಲ್ಲವೇ ಸುಂದರಿ... ನನ್ನ ಹಲ್ಲು ನೋಡಿರಿ' ಎಂದು ಹೇಳಿ ಮೊಸಳೆ ಮೀನುಗಳನ್ನು ಹಿಡಿಯಲು ನೀರಿಗೆ ಹಾರಿತು. ಹೆದರಿದ ಮೀನುಗಳು ಬೇಗನೆ ಈಜಿ ಮೊಸಳೆಯ ಕೈಯಿಂದ ತಪ್ಪಿಸಿಕೊಂಡವು. 'ಹೂಂ ಸುಮ್ಮನೇ ಜಗಳ ಮಾಡಿ ನಾವು ಅಪಾಯದಲ್ಲಿ ಸಿಕ್ಕಿಬೀಳುತ್ತಿದ್ದೆವು' – ಮೀನುಗಳಿಗೆ ತಮ್ಮ ತಪ್ಪಿನ ಅರಿವಾಯಿತು.

## ರಾಮುವಿನ ನೂಲು

ರಾಮು ಒಂದು ಹತ್ತಿ ತೋಟದ ಕಾವಲುಗಾರನಾಗಿದ್ದನು. ಒಂದು ದಿನ ರಾಮು ತುಂಬಾ ಹತ್ತಿಗಳನ್ನು ತೆಗೆದುಕೊಂಡು ನೂಲು ಮಾಡಿದನು ಮತ್ತು ಅವುಗಳನ್ನೆಲ್ಲಾ ಸುತ್ತಿ ಒಂದು ಬುಟ್ಟಿಯಲ್ಲಿ ತುಂಬಿಸಿ

ಮನೆಯ ಕಡೆಗೆ ನಡೆದನು. ನಡೆದು ನಡೆದು ರಾಮುವಿಗೆ ಆಯಾಸವಾಯಿತು. ಅವನು ಅಲ್ಲೇ ಮರದ ಅಡಿಯಲ್ಲಿ ಬುಟ್ಟಿಯನ್ನಿಟ್ಟು ಮಲಗಿದನು. ಅವನಿಗೆ ನಿದ್ದೆ ಬಂದುದೇ ತಿಳಿಯಲಿಲ್ಲ. ಆಗ ಆ ದಾರಿಯಾಗಿ ಒಬ್ಬ ಕಳ್ಳ ಬಂದನು. ಅವನು ರಾಮುವಿನ ಬುಟ್ಟಿಯನ್ನು ಯಾರೂ ಕಾಣದಂತೆ ತೆಗೆದು ನಡೆಯ ತೊಡಗಿದನು. ಪಕ್ಕನೆ ರಾಮುವಿಗೆ ಎಚ್ಚರವಾಯಿತು. ಅವನು ಓಡುತ್ತಾ ಕಳ್ಳನ ಬಳಿಗೆ ತಲಪಿದನು. "ಇದು ನನ್ನ ಬುಟ್ಟಿ ....ನನಗೆ ಕೊಡು" ರಾಮ ಹೇಳಿದ. "ಅಲ್ಲ ಅದು ನನ್ನದೇ... ನೀನು ಸುಳ್ಳು ಹೇಳುತ್ತಿರುವೆ" ಕಳ್ಳ ಹೇಳಿದ. ಕೊನೆಗೆ ಜಗಳ ಗ್ರಾಮಾಧಿಕಾರಿಯ ಬಳಿ ತಲುಪಿತು. 'ನೀನು ನೂಲನ್ನು ಯಾವುದಕ್ಕೆ ಸುತ್ತಿರುವೆ...?' ಕಳ್ಳನಲ್ಲಿ ಗ್ರಾಮಾಧಿಕಾರಿ ಕೇಳಿದರು. 'ನಾನು ಒಂದು ಮುತ್ತಿನ ಮೇಲೆ ಸುತ್ತಿದ್ದೇನೆ ಕಳ್ಳ ಹೇಳಿದ'. "ನೀನು...?" ರಾಮುವಿನಲ್ಲಿ ಗ್ರಾಮಾಧಿಕಾರಿ ಕೇಳಿದರು. "ನಾನು ಒಂದು ಹತ್ತಿ ಬೀಜದ ಮೇಲೆ ಸುತ್ತಿದ್ದೇನೆ". ರಾಮು ಹೇಳಿದ. ಗ್ರಾಮಾಧಿಕಾರಿ ನೂಲನ್ನು ಬಿಚ್ಚಿ ನೋಡಿದಾಗ ಅದರೊಳಗೆ ಒಂದು ಹತ್ತಿಯ ಬೀಜವಿತ್ತು. ಅವರಿಗೆ ಸತ್ಯ ತಿಳಿದು ನೂಲನ್ನು ರಾಮುವಿಗೆ ನೀಡಿದರು. ಕಳ್ಳನಿಗೆ ಶಿಕ್ಷೆ ಕೊಟ್ಟರು.

## ಕೋಳಿಯ ಕೃಷಿ

ಒಂದು ಕೋಳಿ ದಾರಿಯಲ್ಲಿ ನಡೆಯುತ್ತಿತ್ತು. ಅದಕ್ಕೆ ತುಂಬಾ ಹಸಿವಾಗುತ್ತಿತ್ತು. ತಿನ್ನಲು ಏನಾದರೂ ಸಿಗಬಹುದೇ? ಎಂದು ನೆಲವನ್ನು ಕೆದಕಿ ನೋಡಿತು. ಅದಕ್ಕೆ ಒಂದು ಭತ್ತದ ಕಾಳು ಸಿಕ್ಕಿತು. ಭತ್ತವನ್ನು ಕುಕ್ಕಿ ತಿನ್ನಲು ಕೋಳಿ ಓಡಿ ಬಂತು. "ಅಯ್ಯೋ ನನ್ನನ್ನು ತಿನ್ನಬೇಡ ಎಂದು ಹೊಂಡ ಮಾಡಿ ಬೀಜ ಹಾಕು. ನಾನು ನಿನಗೆ ತುಂಬಾ ಭತ್ತ ಕೊಡುತ್ತೇನೆ "ಭತ್ತ ಅಳುತ್ತಾ ಕೋಳಿಯಲ್ಲಿ ಹೇಳಿತು. ಒಂದು ಭತ್ತದಿಂದ ನನ್ನ ಹಸಿವು ನೀಗುವುದಿಲ್ಲ. ಹಾಗಾದರೆ ಇದನ್ನು ಬೀಜ ಹಾಕುವ ಎಂದು ಕೊಂಡು ಭತ್ತವನ್ನು ತೆಗೆದುಕೊಂಡು ಕೋಳಿ ಮನೆಗೆ ಬಂತು. ಕೋಳಿ ಮತ್ತು ಮರಿಗಳು ಸೇರಿ ಹೊಂಡ ಮಾಡಿದುವು. ಭತ್ತವನ್ನು ಹೊಂಡದಲ್ಲಿ ಹಾಕಿದವು.. ಅದಕ್ಕೆ ದಿನಾಲು ನೀರು ಹಾಕಿದವು. ಗಿಡ ಬೆಳೆದು ಭತ್ತದ ತೆನೆಗಳು ಬಂದುವು. ಕೋಳಿ ಮತ್ತು ಮರಿಗಳು ಭತ್ತದ ತೆನೆಗಳನ್ನು ಕೊಯ್ದು, ಅಕ್ಕಿ ಮಾಡಿ.... ತಿಂಡಿ ಮಾಡಿ ತಿಂದುವು.

## ಶುಚಿಯೇ ದಾರಿ

ರಾಜಣ್ಣ ಒಬ್ಬ ಕೃಷಿಕನಾಗಿದ್ದನು. ಒಂದು ದಿನ ಅವನು ಬಯಲಲ್ಲಿ ಬೀಜ ಬಿತ್ತುತ್ತಿದನು. ಕೆಲಸ ಮುಗಿದಾಗ ಅವನಿಗೆ ತುಂಬಾ ಆಯಾಸವಾಗಿತ್ತು. ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಮನೆಗೆ ಹೋಗೋಣ ಎಂದು ರಾಜಣ್ಣ ಯೋಚಿಸಿದನು. ಗದ್ದೆಯ ಬಳಿಯಲ್ಲಿ ಕುಳಿತನು. ಆಗ ಒಂದು ನೊಣ ಹಾರಿ ಬಂದು ಅವನ ನೆತ್ತಿಯಲ್ಲಿ ಕುಳಿತಿತು. ರಾಜಣ್ಣ ನೊಣಕ್ಕೆ ಹೊಡೆದನು. ಪೆಟ್ಟು ಬಿದ್ದದ್ದು ತಲೆಗೆ ಮಾತ್ರ.... ನೊಣ ಪುನಃ ಬಂದು ರಾಜಣ್ಣನ ತಲೆಯ ಮೇಲೆ ಕುಳಿತು ಕೊಂಡಿತು. 'ಟಪ್ಪ'.... ಈಗಲೂ.... ಪೆಟ್ಟು ರಾಜಣ್ಣನ ತಲೆಗೇ.... ನೊಣ ಹಾರಿ ತಪ್ಪಿಸಿಕೊಳ್ಳುತ್ತಿತ್ತು. ಇಷ್ಟು ಸಣ್ಣ ನೊಣ ಬಾರದಂತೆ ಮಾಡಲು ಬಲ ಪ್ರಯೋಗಿಸಿ ಸಾಧ್ಯವಿಲ್ಲ. ಶುಚಿಯಾಗಿರುವುದರಿಂದಲೇ ಸಾಧ್ಯ ಎಂದು ರಾಜಣ್ಣನಿಗೆ ತಿಳಿಯಿತು. ಅವರು ಎದ್ದು ಸ್ನಾನಕ್ಕೆ ಹೊರಟರು.

## ಆಮೆಯೂ ಮೊಲವೂ

ಒಂದು ಕಾಡಿನಲ್ಲಿ ಅಹಂಕಾರಿಯಾದ ಒಂದು ಮೊಲವು ವಾಸಿಸುತ್ತಿತ್ತು. ಎಲ್ಲಾ ಪ್ರಾಣಿಗಳನ್ನೂ ತಮಾಷೆ ಮಾಡಿ ನಗುವುದೇ ಅವರ ಅಭ್ಯಾಸವಾಗಿತ್ತು. ನಾನೇ ದೊಡ್ಡ ಓಟಗಾರನೆಂದು ಅದು ನಂಬಿತ್ತು. ಒಂದು ದಿನ ಮೊಲ ಆಮೆಯೊಂದನ್ನು ಕಂಡಿತು. "ಅಯ್ಯೋ... ನಿನಗೆ ನನ್ನಂತೆ ಓಡಲಾಗುವುದಿಲ್ಲವಲ್ಲಾ"..... ಆಮೆಯನ್ನು ತಮಾಷೆ ಮಾಡಿತು". "ನೀನೇನು ನನ್ನನ್ನು ಹೀಯಾಳಿಸಬೇಡ.... ಬೇಕಿದ್ದರೆ ನಾವೊಂದು ಓಟದ ಸ್ಪರ್ಧೆ ನಡೆಸೋಣ"..... ಎಂದು ಆಮೆ ಸಿಟ್ಟಿನಿಂದ ಹೇಳಿತು. ಆಮೆಯ ಮಾತು ಕೇಳಿ ಮೊಲಕ್ಕೆ ನಗು ತಡೆಯಲಾಗಲಿಲ್ಲ.... ಆದರೂ ಮೊಲ ಒಪ್ಪಿಕೊಂಡಿತು. 'ಸರಿ ಸರಿ ನಾಳೆ ನಾವು ಓಟದ ಸ್ಪರ್ಧೆ ನಡೆಸೋಣ' ಮೊಲ ಹೇಳಿತು.





ಮರುದಿನ ಆಮೆ ಮತ್ತು ಮೊಲ ಓಟದ ಸ್ಪರ್ಧೆ ಆರಂಭಿಸಿತು. ನರಿಯಣ್ಣ ತೀರ್ಪುಗಾರನಾಯಿತು. ಮೊಲ ವೇಗವಾಗಿ ಓಡಿ ತುಂಬಾ ಮುಂದೆ ಬಂತು. "ಆಮೆ ಬರುವವರೆಗೆ ವಿಶ್ರಾಂತಿ ಪಡೆಯೋಣ" ಎಂದು ಕೊಂಡು ಮೊಲವು ಮರದ ನೆರಳಿನಲ್ಲಿ ಕುಳಿತುಕೊಂಡಿತು. ತಂಪಾದ ಗಾಳಿ ಬೀಸಿತು. ಮೊಲಕ್ಕೆ ನಿದ್ದೆ ಬಂತು. ಸ್ವಲ್ಪ ಸಮಯದ ನಂತರ ನರಿಯಣ್ಣ ಮೊಲವನ್ನು ಮುಟ್ಟಿ ಕರೆದು 'ಓಟದ ಸ್ಪರ್ಧೆಯಲ್ಲಿ ಆಮೆ ಗೆದ್ದಿತು' ಎಂದು ಹೇಳಿತು. ಅದನ್ನು ಕೇಳಿ ಮೊಲ ನಾಚಿಕೆಯಿಂದ ತಲೆ ತಗ್ಗಿಸಿ ಕಾಡಿನ ಕಡೆ ಓಡಿ ಹೋಯಿತು.

## ಹಿರಿಯರ ಮಾತು ಕೇಳಬೇಕು

ಒಂದು ಕಾಡಿನ ದೊಡ್ಡ ಮರದಲ್ಲಿ ತುಂಬಾ ಪಕ್ಷಿಗಳು ವಾಸವಾಗಿದ್ದುವು. ಪ್ರಾಯವಾದ ಗಿಡುಗವೊಂದು ಅವುಗಳ ರಾಜನಾಗಿತ್ತು. ಗಿಡುಗನಿಗೆ ಪ್ರಾಯವಾದುದರಿಂದ ಕೆಲವು ಸಣ್ಣ ಹಕ್ಕಿಗಳು ಅದರ ಮಾತುಗಳನ್ನು ಕೇಳುತ್ತಿರಲಿಲ್ಲ. ಒಮ್ಮೆ ಕಾಡಿಗೇ ಬರಗಾಲ ಉಂಟಾಯಿತು. ಮರಗಳೆಲ್ಲಾ ಒಣಗ ತೊಡಗಿದವು. ಕೊಳಗಳೆಲ್ಲಾ ಬತ್ತಿ ಹೋದವು. 'ಯಾವಾಗ ಬೇಕಿದ್ದರೂ ಕಾಡಿಗೆ ಕಿಚ್ಚು ಹಿಡಿದುಕೊಳ್ಳಬಹುದು. ಆದುದರಿಂದ ನಾವೆಲ್ಲಾ ಆದಷ್ಟು ಬೇಗ ಈ ಮರವನ್ನು ಬಿಟ್ಟು ಬೇರೆ ಕಡೆ ವಾಸಿಸೋಣ' ಗಿಡುಗ ರಾಜ ಹೇಳಿತು. 'ನಮಗೇನು ಭಯವಿಲ್ಲ...ನಾವು ಇಲ್ಲೇ ವಾಸಿಸುತ್ತೇವೆ..... ನಿಮಗೆ ಭಯವಾಗುತ್ತಿದ್ದರೆ ನೀವು ಹೋಗಿ...' ಎಂದು ಮರಿಗಿಳಿಗಳು ಮತ್ತು ಗೆಳೆಯರು ಹೇಳಿದವು.

"ಹಾಗಾದರೆ ಸರಿ ನಾವಿಲ್ಲಿಂದ ಹೋಗುತ್ತಿದ್ದೇವೆ. ಗಿಡುಗ ರಾಜ ಮತ್ತು ಕೆಲವು ಹಕ್ಕಿಗಳು ಕಾಡಿನ ಇನ್ನೊಂದು ಭಾಗಕ್ಕೆ ಹಾರಿ ಹೋದುವು. ಗಿಳಿಮರಿ ಮತ್ತು ಗೆಳೆಯರು ಅವರನ್ನು ತಮಾಷೆ ಮಾಡಿ ನಕ್ಕುವು. ಹೆದರು ಪುಕ್ಕರು....ಹಿ...ಹಿ...ಹಿ ಆದರೆ ಮರುದಿನ ಕಾಡಿಗೆ ಬೆಂಕಿ ಹಚ್ಚಿಕೊಂಡಿತು. ಬೆಂಕಿ ಎಲ್ಲಾ ಕಡೆ ಹಬ್ಬತೊಡಗಿತು. ಅಯ್ಯೋ ... ಬೆಂಕಿ.... ಬೆಂಕಿ...ನಾವು ತಪ್ಪಿಸಿಕೊಳ್ಳೋಣ. ಗಿಳಿಮರಿಗಳು ಮತ್ತು ಗೆಳೆಯರು ಹೋಗೋಣ ಹಾರಿ ..... ಕಾಡಿನ ಮತ್ತೊಂದು ಭಾಗಕ್ಕೆ ತಲುಪಿದವು. ಗಿಡುಗರಾಜ ಅವರನ್ನು ಬರಮಾಡಿಕೊಂಡಿತು. 'ನಮ್ಮನ್ನು ಕ್ಷಮಿಸಿ ತಾತಾ. ಪ್ರಾಯದವರೂ ಅನುಭವಿಯೂ ಆದ ನಿಮ್ಮ ಮಾತುಗಳನ್ನು ಕೇಳದೆ ನಾವು ತಪ್ಪು ಮಾಡಿದೆವು.... ಎಂದು ಗಿಳಿಮರಿ ಮತ್ತು ಗೆಳೆಯರು ಕ್ಷಮೆ ಕೇಳಿದುವು'.

## ನರಿಯೂ ಕೊಕ್ಕರೆಯೂ

ಒಂದು ಊರಿನಲ್ಲಿ ಒಂದು ಕೊಕ್ಕರೆ ವಾಸವಾಗಿತ್ತು. ಅದು ಒಂಟಿ ಕಾಲಲ್ಲಿ ನಿಂತಿರುವಾಗ ಆ ದಾರಿಯಾಗಿ ಒಂದು ನರಿ ಬಂತು. "ನರಿಯಣ್ಣಾ.... ನರಿಯಣ್ಣಾ, ನಾನು ಚಳಿಯಿಂದ ನಡುಗುತ್ತಿದ್ದೇನೆ. ನಾನು ನಿನ್ನ ಮನೆಯಲ್ಲಿ ವಾಸ ಮಾಡಬಹುದೇ? ನಿನಗೆ ನಾನು ಹಾರುವುದನ್ನು ಹೇಳಿಕೊಡುತ್ತೇನೆ" ಎಂದು ಕೊಕ್ಕರೆ ಹೇಳಿತು. ನರಿ ಒಪ್ಪಿಕೊಂಡಿತು. ಅವರಿಬ್ಬರೂ ನರಿಯ ಬಿಲದಲ್ಲಿ ವಾಸಿಸತೊಡಗಿದವು.

ಒಂದು ದಿನ ಕೆಲವು ಬೇಟೆಗಾರರು ಆ ಕಾಡಿಗೆ ಬಂದರು.

ಅವರಿಗೆ ಒಂದು ನರಿ ಮತ್ತೆ ಕೊಕ್ಕರೆ ಒಟ್ಟಾಗಿ ಜೀವಿಸುತ್ತಿರುವ ವಿಷಯ ತಿಳಿಯಿತು. ಅವರು ನರಿಯ ಬಿಲವನ್ನು ಅಗೆಯ ತೊಡಗಿದರು.

ಕೊಕ್ಕರೇ........... ಕೊಕ್ಕರೇ......... ನಾವಿನ್ನು ಏನು ಮಾಡೋಣ........... ನರಿ ಕೇಳಿತು. ಹುಂ... ಇದೊಂದು ಸಮಸ್ಯೆಯೇ ಅಲ್ಲ, ತಪ್ಪಿಸಿಕೊಳ್ಳಲು ಹತ್ತು ಉಪಾಯಗಳು ನನಗೆ ಗೊತ್ತಿದೆ.

ನರಿ ಮತ್ತೆ ಮತ್ತೆ ಕೊಕ್ಕರೆಯಲ್ಲಿ ಕೇಳುತ್ತಲೇ ಇತ್ತು. ಬೇಟೆಗಾರರು ಅಗೆಯುತ್ತಾ ಹತ್ತಿರ ತಲಪುವುದರಲ್ಲಿದ್ದರು. ಆಗ ಕೊಕ್ಕರೆ "ನನಗೀಗ ಒಂದು ಉಪಾಯ ಹೊಳೆಯುತ್ತಿರುವುದು", ಹೌದೇ ಅದೇನು ಬೇಗ ಹೇಳು?" ನರಿ ಹೇಳಿತು. "ನಾನು ಬಿಲದ ಹತ್ತಿರ ಸತ್ತವನಂತೆ ಮಲಗುತ್ತೇನೆ. ಬೇಟೆಗಾರರು ನನ್ನನ್ನು ಎತ್ತಿ ಸತ್ತಿದೋ ಎಂದು ನೋಡುವುದರೆಡೆಯಲ್ಲಿ ನೀನು ಓಡಿ ತಪ್ಪಿಸಿಕೋ.......... ಅವರು ನಿನ್ನ ಹಿಂದೆ ಓಡುತ್ತಿರುವಾಗ ನಾನು ತಪ್ಪಿಸಿ ಕೊಳ್ಳುತ್ತೇನೆ. ಕೊಕ್ಕರೆ ಬಿಲದ ಬಾಗಿಲಲ್ಲಿ ಸತ್ತಂತೆ ಬಿದ್ದು ಕೊಂಡಿತು. ಬೇಟೆಗಾರರು ಬಿಲದೊಳಗೆ ಬಂದಾಗ 'ಒಂದು ಕೊಕ್ಕರೆಯು ಸತ್ತು ಬಿದ್ದಿರುವುದನ್ನು ಕಂಡು ಆಶ್ಚರ್ಯಗೊಂಡಿರು.

'ಒಂದು ನರಿಯು ಕೊಕ್ಕರೆಯನ್ನು ಕಾಪಾಡುವುದು ನಾನೆಲ್ಲೂ ನೋಡಿಲ್ಲ' ಎಂದು ಅವರು ಹೇಳುವುದರೊಳಗೆ ಬಿಲದಿಂದ ನರಿ ಒಮ್ಮೆಲೇ ಓಡಿ ತಪ್ಪಿಸಿಕೊಂಡಿತು. ಕೊಕ್ಕರೆ ರೆಕ್ಕೆ ಬಿಚ್ಚಿ ಹಾರಿ ಹೋಯಿತು'.

"ಕೂ....ಕೂ... ನರಿ  ಕೊಕ್ಕರೆಯನ್ನು ಕರೆಯಿತು...........

ಹೋ.........ಹೋ..... ಕೊಕ್ಕರೆ ಕರೆ ಕೇಳಿ  ಹಾರಿ ನರಿಯ ಬಳಿ ಬಂತು". ನೀನು ನನಗೆ ಹಾರಲು ಕಲಿಸುತ್ತೇನೆಂದು ಹೇಳಿದ್ದಿಯಾ.... ಈಗ ಕಲಿಸುತ್ತಿಯಾ ..... ನರಿ ಕೇಳಿತು.

ಸರಿ... ಸರಿ... ನನ್ನ ಬೆನ್ನ ಮೇಲೆ ಕುಳಿತುಕೊ. ಕೊಕ್ಕರೆ ಸ್ವಲ್ಪ ಮೇಲಕ್ಕೆ ಹಾರಿ ನರಿಯನ್ನು ಕೆಳಗೆ ಹಾಕಿತು. ನರಿ ಕೆಳಗೆ ಹುಲ್ಲುಗಳ ಮೇಲೆ ಬಿದ್ದಿತು. ಆದರೆ ಅದಕ್ಕೇನು ಗಾಯಗಳಾಗಲಿಲ್ಲ....

ಹೇಗಿದೆ ನರಿಯಣ್ಣಾ ಹಾರಾಟ...... ಕೊಕ್ಕರೆ ಕೇಳಿತು.

ಹಾಯ್ ತುಂಬಾ ಖುಷಿಯಾಗುತ್ತದೆ. ನರಿ ಹೇಳಿತು. ಹಾಗಾದರೆ ಇನ್ನೊಮ್ಮೆ ಬೆನ್ನ ಮೇಲೆ ಏರು.... ಕೊಕ್ಕರೆ ಹೇಳಿತು. ಅದು ನರಿಯನ್ನು ಎತ್ತಿಕೊಂಡು ಮೇಲಕ್ಕೆ ಹಾರಿತು........ ನರಿ ಕೊಕ್ಕರೆಯ ಬೆನ್ನಿನಿಂದ ಹಾರಿತು........ ಆದರೆ ನರಿಗೆ ಹಾರಲು ಸಾಧ್ಯವೇ........... ಕೈಕಾಲು ಬಡಿದು ಹಾರಲು ಪ್ರಯತ್ನಿಸಿದ ನರಿ ಡಂ......... ಎಂದು ಕೆಳಗೆ ಬಿದ್ದು ಬಿಟ್ಟಿತು..........?

ಹೇಗಿದೆ ಹಾರಾಟ ನರಿಯಣ್ಣಾ....... ಕೊಕ್ಕರೆ ಮತ್ತೆ ಕೇಳಿತು? ಅದಕ್ಕೆ ಉತ್ತರಿಸಲು ನಿಲ್ಲದೇ ನರಿ ನೋವಿನಿಂದ ಕಾಡಿನತ್ತ ಓಡಿ ಹೋಯಿತು.

## ನರಿಯೂ......... ಕರಡಿಯೂ

ಒಂದುಸಲ ಕರಡಿಯು ಕೈತೋಟದಲ್ಲಿ ಕೃಷಿ ಮಾಡುವುದನ್ನು ಕಂಡ ನರಿಯು ಅದರ ಬಳಿಗೆ ಹೋಗಿ "ಕರಡಿಯಣ್ಣಾ ನಾನು ಗದ್ದೆಯಲ್ಲಿ ಕೃಷಿ ಮಾಡಲೇ ಎಂದು ಕೇಳಿತು?"

"ನರಿಯಣ್ಣಾ ಆಗಬಹುದು. ಆದರೆ ನೀನು ಕೃಷಿ ಮಾಡುವುದರಲ್ಲಿ ಒಂದು ಭಾಗ ನನಗೆ ಕೊಡಬೇಕು".... ಕರಡಿ ಹೇಳಿತು.

"ಸರಿ...... ನನ್ನ ಕೃಷಿಯಲ್ಲಿ ಅರ್ಧ ನಿನಗೆ ಕೊಡುತ್ತೇನೆ" ಎಂದಿತು. ಕರಡಿಗೆ ಸಂತೋಷವಾಯಿತು. ಕೃಷಿ ಎಲ್ಲಾ ನರಿ ಮಾಡುತ್ತದೆ. ನಾನು ಮನೆಯಲ್ಲಿ ಹಾಯಾಗಿ ಕುಳಿತರೆ ಸಾಕು. ಆಹಾರ ಸಿಗಬಹುದು ಎಂದು ಕೊಂಡಿತು. ನರಿಯಣ್ಣಾ ಹಾರೆ ಪಿಕ್ಕಾಸು, ಬುಟ್ಟಿ ತಂದು ಕೃಷಿ ಮಾಡಲು ಪ್ರಾರಂಭಿಸಿದಾಗ ಕರಡಿಯು ಅಹಂಕಾರದಿಂದ ಬಂದು "ಇನ್ನೊಂದು ವಿಷಯ, ಕೃಷಿ ಮಾಡುವುದೆಲ್ಲಾ ಸರಿ 'ಈ ಸಲದ ಕೃಷಿಯಲ್ಲಿ ಮೇಲ್ಭಾಗ ಎಲ್ಲಾ ನನಗೆ, ಮಣ್ಣಿನ ಅಡಿಯಲ್ಲಿರುವುದು ನಿನಗೆ " ಎಂದಿತು'.

ನರಿ ಅದನ್ನು ಒಪ್ಪಿಕೊಂಡಿತು. ಹೊಂಡ ಮಾಡಿ ಗೆಣಸು ನೆಟ್ಟಿತು. ಬೆಳೆ ಕೊಯ್ಯುವ ಸಮಯವಾದಾಗ ನರಿ, ಕರಡಿ ಕೇಳಿದಂತೆ ಮಣ್ಣಿನ ಮೇಲಿರುವ ಗೆಣಸಿನ ಬಳ್ಳಿ ಮತ್ತು ಸೊಪ್ಪನ್ನು ಕರಡಿ ಹೇಳಿದಂತೆ ತಂದು ಕೊಟ್ಟಿತು. ದೊಡ್ಡ ದೊಡ್ಡ ಗೆಣಸನ್ನು ಹೊತ್ತು ಕೊಂಡು ಮನೆಗೆ ಹೋಯಿತು. ಕರಡಿಗೆ ಕೋಪ ಬಂತು. "ಕಳ್ಳ ನರಿ ನನಗೆ ಮೋಸ ಮಾಡಿತು ಎಂದು ಕೊಂಡಿತು. ಮರುದಿನವೇ ನರಿ ಪಿಕ್ಕಾಸಿನೊಂದಿಗೆ ಕೃಷಿ ಮಾಡಲು ಬಂತು. ಈಗ ಕರಡಿ ಗರ್ಜಿಸುತ್ತಾ ಹೇಳಿತು".

"ನರಿಯಣ್ಣಾ...........! ನಿನ್ನ ಬುದ್ಧಿವಂತಿಕೆ ನನ್ನಲ್ಲಿ ಬೇಡ. ಈ ಸಲ ಕೃಷಿ ಮಾಡಿದರೆ ಮಣ್ಣಿನ ಅಡಿಭಾಗದಲ್ಲಿ ಸಿಗುವುದು ನನಗೆ, ಮೇಲ್ಭಾಗದ್ದು ನಿನಗೆ ".... ಈಗಲೂ ನರಿ ಒಪ್ಪಿಕೊಂಡಿತು.

ನರಿ ದೊಡ್ಡ ಹೊಂಡಗಳನ್ನು ಮಾಡಿ ಅದರಲ್ಲಿ ಬಾಳೆಗಳನ್ನು ನೆಟ್ಟಿತು ನರಿ. ಹೊಂಡ ತೋಡುವುದನ್ನೂ, ನೀರೆರೆದು, ಗೊಬ್ಬರ ಹಾಕುವುದನ್ನೂ ಕರಡಿ ನೋಡುತ್ತಾ ನಿಂತಿರುತ್ತಿತ್ತು. ಬೆಳೆ ಕೊಯ್ಯುವಾಗ ಕರಾರಿನಂತೆ ಬಾಳೆಯ ಗೊನೆ, ಎಲೆ, ಎಲ್ಲವನ್ನೂ ನರಿ ತೆಗೆದುಕೊಂಡು ಹೋಯಿತು. ಕರಡಿಗೆ ಮಣ್ಣಿನ ಅಡಿಯಲ್ಲಿ ಏನೂ ಸಿಗಲಿಲ್ಲ. ಒಂದು ಹಣ್ಣು ಸಿಗಲಿಲ್ಲ. ಇದರಿಂದ ಕರಡಿ ಸರಿಯಾದ ಪಾಠ ಕಲಿಯಿತು.

'ಗೊತ್ತಿಲ್ಲದ ಕೆಲಸ ಮಾಡಬಾರದು

ಇನ್ನೊಬ್ಬರ ಶ್ರಮದ ಫಲ ಬಯಸಬಾರದು'

## ಗದ್ದೆ ಉಳುವ ನೊಣ

ಒಂದು ದಿವಸ ಒಬ್ಬ ತನ್ನ ಎತ್ತುಗಳ ಜತೆ ಗದ್ದೆ ಉಳಲು ಹೋದನು. ಒಂದು ಎತ್ತಿನ ಬೆನ್ನಿನ ಮೇಲೆ ಒಂದು ನೊಣ ಕುಳಿತು ಎತ್ತಿನೊಡನೆ ಕೇಳಿತು 'ನೀನು ಎಲ್ಲಿಗೆ'?

ಎತ್ತು ಹೇಳಿತು ನಾನು ಗದ್ದೆ ಉಳಲು ಹೋಗುತ್ತಿದ್ದೇನೆ?

"ಅದು ಯಾಕೆ"? – ನೊಣ ಕೇಳಿತು.

'ಬೀಜ ಬಿತ್ತಲು ಗದ್ದೆ ಉತ್ತು ಆಗಬೇಕು'. "ಬೀಜ ಬಿತ್ತಿದರೆ ಪೈರುಗಳು ಬೆಳೆಯುತ್ತವೆ. ಅವುಗಳಿಂದ ಧಾರಾಳ ಭತ್ತ ದೊರೆಯುತ್ತದೆ. ಭತ್ತವನ್ನು ತೆಗೆದುಕೊಂಡು ಹೋಗಿ ಕುಟ್ಟಿದರೆ ಅಕ್ಕಿ ಸಿಗುತ್ತದೆ, ಅನ್ನ ಸಿಗುತ್ತದೆ" ಎತ್ತು ಹೇಳಿತು.

ಆ ದಿನ ಸಂಜೆಯವರೆಗೆ ಉತ್ತು ಅವನು ಮನೆಗೆ ಮರಳಿದನು. ನೊಣ ಎತ್ತಿನ ಕೊಂಬಿನ ಮೇಲೆ ಹತ್ತಿ ಕುಳಿತಿತು. ಹಾಗೆ ಬರುತ್ತಿರುವಾಗ ಎದುರಿಗೆ ಹಾರಿ ಬಂದ ಇನ್ನೊಂದು ನೊಣ, ಕೊಂಬಿನಲ್ಲಿ ಕುಳಿತ ನೊಣದೊಡನೆ ಕೇಳಿತು. 'ನೀನು ಎಲ್ಲಿಗೆ ಹೋಗಿ ಬರುತ್ತಿದ್ದಿಯಾ'?

'ನೋಡಿದರೆ ತಿಳಿಯುವುದಿಲ್ಲವೇ? ನಾನು ಗದ್ದೆ ಉತ್ತು ಬರುತ್ತಿದ್ದೇನೆ'.

ಎರಡನೇ, ನೊಣ ಜೋರಾಗಿ ನಗಾಡಿತು. 'ನಾನು ಗದ್ದೆ ಉತ್ತಿದ್ದೇನೆ ಎಂದು ಹೇಳಬೇಡ', 'ಎತ್ತುಗಳು ಉತ್ತದ್ದು, ಅವರನ್ನು ನೋಡಿದರೆ ತಿಳಿಯುತ್ತದೆ'. ನಿನಗೆ ಕೊಚ್ಚಿಕೊಳ್ಳಲು ತಿಳಿದಿದೆ

ಎಂದು ನನಗೆ ಮೊದಲೇ ತಿಳಿದಿದೆ..... 'ನಿನಗೆ ಗದ್ದೆ ಉಳಲು ತಿಳಿದಿದೆ ಎಂಬುದನ್ನು ನಾನು ಇದುವರೆಗೆ ನೋಡಿ ತಿಳಿಯಲಿಲ್ಲ' ಎಂದು ಹೇಳಿತು.

**'ಮೊದಲ ನೊಣ ಮೂರ್ಖನಾಯಿತು'.**

## ಇರುವೆಯೂ ಪಾರಿವಾಳವೂ

ಒಂದು ಇರುವೆಯು ಜಾರಿ ನೀರಿನಲ್ಲಿ ಬಿದ್ದು ಬಿಟ್ಟಿತು. ಮರದ ಕೊಂಬೆಯ ಮೇಲೆ ಕುಳಿತಿದ್ದ ಒಂದು ಪಾರಿವಾಳವು ಇದನ್ನು ನೋಡಿತು. ಅದು ಒಂದು ಎಲೆಯನ್ನು ಮುರಿದು ಇರುವೆಗೆ ಹತ್ತಿರವಾಗಿ ನೀರಿನ ಮೇಲೆ ಹಾಕಿತು. ಇರುವೆ ಎಲೆಯ ಮೇಲೆ ಹತ್ತಿ ಕ್ಷೇಮವಾಗಿ ದಡವನ್ನು ಸೇರಿತು. ಒಂದು ದಿನ ಒಬ್ಬ ಬೇಟೆಗಾರನು ಅಲ್ಲಿಗೆ ಬಂದನು. ಮರದ ಮೇಲಿದ್ದ ಪಾರಿವಾಳವನ್ನು ನೋಡಿದನು. ಅದಕ್ಕೆ ಬಾಣವನ್ನು ಗುರಿ ಇಟ್ಟನು. ಇದನ್ನು ಇರುವೆ ನೋಡಿತು. ಅದು ಹೋಗಿ ಬೇಟೆಗಾರನ ಕಾಲನ್ನು ಕಚ್ಚಿತು. ಆತನ ಗುರಿ ತಪ್ಪಿ ಬಾಣವು ನೀರಿನಲ್ಲಿ ಬಿತ್ತು. ಪಾರಿವಾಳವು ಹಾರಿ ಹೋಯಿತು. ಹೀಗೆ ಇರುವೆಯು ತನ್ನ ಪ್ರಾಣವನ್ನು ಕಾಪಾಡಿದ್ದ ಪಾರಿವಾಳವನ್ನು ರಕ್ಷಿಸಿತು.

## ಮಾವಿನ ಮರ ಮತ್ತು ಅಳಿಲು

ಒಂದು ಊರಿನಲ್ಲಿ ಅಜ್ಜ ಮತ್ತು ಅಜ್ಜಿ ವಾಸಿಸುತ್ತಿದ್ದರು. ಅವರ ಮನೆಯ ಮುಂದೆ ಒಂದು ದೊಡ್ಡ ಮಾವಿನಮರ ಇತ್ತು. ಆ ಮರದಲ್ಲಿ ತುಂಬಾ ಮಾವಿನ ಹಣ್ಣುಗಳಿದ್ದುವು. ಅದನ್ನು ಪ್ರತಿದಿನ ಅಳಿಲು ಬಂದು ತಿನ್ನುತ್ತಿತ್ತು. ಇದನ್ನು ಗಮನಿಸಿದ ಅಜ್ಜ ಅಜ್ಜಿಯೊಂದಿಗೆ ಹೀಗೆ ಕೇಳಿದನು. 'ಈ ಮರದಿಂದ ಕೆಳಗೆ ಏನಾದರೂ ಸದ್ದು ಕೇಳಿದರೆ ಅದನ್ನು ಬಡಿದು ಸಾಯಿಸಬೇಕು.' ಹೀಗೆ ಕೇಳಿದ ಅಜ್ಜ ಅಳಿಲಿಗಾಗಿ ಕಾದು ಮರದ ಮೇಲೆ ನಿದ್ದೆ ಹೋದ. ಅಜ್ಜ ನಿದ್ರೆಯಲ್ಲಿ ಕೆಳಗೆ ಬಿದ್ದು ಬಿಟ್ಟನು. ಈ ಸದ್ದು ಕೇಳಿ ಅಜ್ಜಿ ಓಡಿ ಬಂದು ದೊಣ್ಣೆಯಲ್ಲಿ ಬಡಿದಳು. ಅಜ್ಜನಿಗೆ ನೋವಾಗಿ ಜೋರಾಗಿ ಕಿರುಚಿದಾಗ ಅಜ್ಜಿಗೆ ಅದು ಅಜ್ಜನೇ ಎಂದು ಅರಿವಾಯಿತು. ಅಜ್ಜಿಗೆ ತಾನು ಮಾಡಿದ ತಪ್ಪಿನ ಅರಿವಾಗಿ ಪಶ್ಚಾತಾಪ ಪಟ್ಟಳು.

## ನವಿಲು ಮತ್ತು ಕೊಕ್ಕರೆ

ಒಂದು ದಿನ ಒಂದು ನವಿಲು ಕಾಡಿನೊಳಗೆ ನಡೆಯುತ್ತಾ ಇತ್ತು. ಅಲ್ಲೇ ಪಕ್ಕದಲ್ಲಿ ಒಂದು ಕೊಳವಿತ್ತು. ಆ ಕೊಳದಲ್ಲಿ ತನ್ನದೇ ಆದ ಪ್ರತಿಬಿಂಬ ನೋಡಿ ತಾನೇ ಸುಂದರ ಎಂದು ಜಂಭ ಕೊಚ್ಚಿಕೊಳ್ಳುತ್ತಿತ್ತು. ಆಗ ಅಲ್ಲಿಗೆ ಒಂದು ಕೊಕ್ಕರೆ ಬಂದಿತು. ಆಗ ನವಿಲು ಕೊಕ್ಕರೆಯಲ್ಲಿ 'ನೀನು ಎಂತಹ ಗರಿಗಳನ್ನು ಹೊಂದಿರುವೆ. ನಿನ್ನ ಗರಿಗಳು ಏನು ಸುಂದರವಾಗಿಲ್ಲ. ನನ್ನ ಗರಿಗಳನ್ನು ನೋಡು. ಬಣ್ಣ ಬಣ್ಣಗಳಿಂದ ಕೂಡಿ ಎಷ್ಟು ಸುಂದರವಾಗಿವೆ. ನಾನು ನೃತ್ಯ ಮಾಡಿದರೆ ಇಡೀ ಪ್ರಪಂಚ ನನ್ನನ್ನು ನೋಡಿ ಖುಷಿ ಪಡುತ್ತದೆ. ಕೊಕ್ಕರೆಯು ಸಹನೆಯಿಂದ ಎಲ್ಲಾ ಮಾತುಗಳನ್ನು ಆಲಿಸಿತು. ಆಗ ಒಮ್ಮೆಲೇ ಬೇಟೆಗಾರ ಬಂದ. ನಿನಗೆ ಮೇಲೆ ಹಾರಲು ಸಾಧ್ಯವೇ?' ಎಂದು ಕೊಕ್ಕರೆ ಕೇಳಿತು. ಆಗ ನವಿಲು ಮಾತನಾಡದೆ ಸುಮ್ಮನೆ ನಿಂತಿತು. ಕೊಕ್ಕರೆ ಬೇಟೆಗಾರನಿಂದ ತಪ್ಪಿಸಿಕೊಳ್ಳಲು ಮೇಲೆ ಹಾರಿತು. ಕೊಕ್ಕರೆ ಎತ್ತರ ಎತ್ತರಕ್ಕೆ ಹಾರುವುದನ್ನು ನೋಡಿ ಆಶ್ಚರ್ಯದಿಂದ ನವಿಲು ಗಮನಿಸುತ್ತಾ ನಿಂತಿತು. ಆಗ ಬೇಟೆಗಾರ ಬಂದು ಬಂದು ನವಿಲನ್ನು ಬೇಟೆಯಾಡಿದ. ನವಿಲಿಗೆ ಹಾರಲು ಸಾಧ್ಯವಾಗದ ಕಾರಣ ಬೇಟೆಗಾರನ ಬೇಟೆಗೆ ಬಲಿಯಾಯಿತು.

**ನೀತಿ : ಅಹಂಕಾರವೇ ಅಪಾಯಕ್ಕೆ ಮೂಲ**

## ಎರಡು ಕಪ್ಪೆಗಳು

ಒಂದು ಮಳೆಗಾಲದ ದಿನ. ಎರಡು ಕಪ್ಪೆಗಳು ಆಟವಾಡುತ್ತಿದ್ದವು. ನಿಧಾನವಾಗಿ ಎರಡೂ ಕುಪ್ಪಳಿಸುತ್ತಾ ಕುಪ್ಪಳಿಸುತ್ತಾ ಮನೆಯೊಂದರೊಳಗೆ ಬಂದವು. ಅಲ್ಲಿ ಹಾಲು ಇರಿಸಿದ್ದ ಪಾತ್ರೆಯೊಂದಿತ್ತು. ಎರಡೂ ಕಪ್ಪೆಗಳು ಆ ಪಾತ್ರೆಯೊಳಗೆ ಬಿದ್ದವು.

ಎರಡೂ ಕಪ್ಪೆಗಳೂ ಹೊರಬರಲು ಸ್ವಲ್ಪ ಕಾಲ ಯತ್ನಿಸಿದವು. ಎಲ್ಲ ವಿಫಲವಾಯಿತು. ಒಂದು ಕಪ್ಪೆ ಭರವಸೆ ಕಳೆದುಕೊಂಡು "ನಾನಿನ್ನು ಈಜಲಾರೆ" ಎಂದು ಹೇಳಿ ಪಾತ್ರೆಯ ತಳ ಮುಟ್ಟಿತು. ಇನ್ನೊಂದು ಕಪ್ಪೆ ಭರವಸೆ ಕಳೆದುಕೊಳ್ಳಲಿಲ್ಲ.



ಅದು ಈಜುತ್ತಲೇ ಇತ್ತು. ಅದರ ಚಲನೆಯಿಂದಾಗಿ ಹಾಲು ಕಡೆಯಲ್ಪಟ್ಟು ಬೆಣ್ಣೆಯಾಯಿತು. ಕಪ್ಪೆ ಬೆಣ್ಣೆ ಮುದ್ದೆಯ ಮೇಲಕ್ಕೆ ಏರಿ ಕುಪ್ಪಳಿಸುತ್ತಾ ಹೊರಬಂದಿತು.

ಸ್ವಸಹಾಯ ಮಾಡಿಕೊಳ್ಳುವವರಿಗೆ ದೇವರು ನೆರವಾಗುತ್ತಾನೆ.

## ಕೆಟ್ಟ ಗೆಳೆಯ

ಒಂದು ದೊಡ್ಡ ಮರದ ಪೊಟರೆಯಲ್ಲಿ ಒಂದು ಕುರುಡ ಹದ್ದು ವಾಸಿಸುತ್ತಿತ್ತು. ಅದಕ್ಕೆ ಕಣ್ಣು ಕಾಣಿಸುತ್ತಿಲ್ಲವಾದ್ದರಿಂದ ಆಹಾರ ತರಲು ಸಾಧ್ಯವಾಗುತ್ತಿರಲಿಲ್ಲ. ಅದೇ ಮರದಲ್ಲಿ ಕಾಗೆಗಳ ಸಂಸಾರವೊಂದು ವಾಸಿಸುತ್ತಿತ್ತು. ಅವುಗಳು ಹದ್ದಿಗೆ ಆಹಾರ ತಂದುಕೊಡುತ್ತಿದ್ದವು. ಕಾಗೆಗಳು ಆಹಾರ ತರಲು ಹೋದಾಗ, ಹದ್ದು ಕಾಗೆಮರಿಗಳನ್ನು ನೋಡಿಕೊಳ್ಳುತ್ತಿತ್ತು. ಹೀಗೆ ಅವುಗಳು ಪರಸ್ಪರ ನೆರವಾಗುತ್ತಿದ್ದವು.

ಒಂದು ದಿನ ಒಂದು ಬೆಕ್ಕಿಗೆ ಕಾಗೆ ಮರಿಗಳು ಅಳುತ್ತಿರುವುದು ಕೇಳಿಸಿತು. ಅವುಗಳನ್ನು ತಿನ್ನಲೆಂದು ಬೆಕ್ಕು ಮರ ಹತ್ತಿತ್ತು. ಆದರೆ ಹದ್ದು ಮರಿಕಾಗೆಗಳ ಕಾವಲು ಮಾಡುತ್ತಿತ್ತು.

ಉಪಾಯದಿಂದ ಮರಿಕಾಗೆಗಳನ್ನು ತಿನ್ನಬೇಕೆಂದು ಬೆಕ್ಕು ಯೋಚಿಸಿತು.

ಹಾಗಾಗಿ, ಅದು ಹದ್ದಿನ ಬಳಿ ಗೆಳೆತನ ಬೆಳೆಸಲು ಹೋಯಿತು. "ಓ ಹದ್ದಣ್ಣಾ, ನೀನು ಒಳ್ಳೆಯವನೆಂದು ಇಡೀ ಕಾಡೇ ಹೊಗಳುತ್ತಿದೆ. ನಿನ್ನಿಂದ ಒಳ್ಳೆಯ ಬುದ್ಧಿಯನ್ನು ಉಪದೇಶವನ್ನು ಕೇಳಿ ತಿಳಿದುಕೊಳ್ಳಲು ನಾನು ಬಂದೆ. ದಯವಿಟ್ಟು ನನಗೆ ಹೇಳಿ ಕೊಡುವೆಯಾ?"

ಬೆಕ್ಕಿನ ಹೊಗಳಿಕೆಯನ್ನು ಕೇಳಿ ಹದ್ದು ಹೆಮ್ಮೆಯಿಂದ ಬೀಗಿತು. ಬಳಿಕ ಬೆಕ್ಕನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿತು. ಬೆಕ್ಕು ಕೂಡಾ ಹದ್ದಿನ ಮನೆಯಲ್ಲಿಯೇ ವಾಸಿಸತೊಡಗಿತು. ದಿನನಿತ್ಯ ಹದ್ದು ಬೆಕ್ಕಿಗೆ ಉಪದೇಶ ನೀಡುತ್ತಿತ್ತು. ಬೆಕ್ಕು ತಲೆ ಆಡಿಸುತ್ತಾ ಕೇಳಿದಂತೆ ನಟಿಸುತ್ತಿತ್ತು; ಸ್ವಲ್ಪ ಹೊತ್ತಿನ ಬಳಿಕ ಮರದ ಮೇಲೆ ಹತ್ತಿ ಹೋಗಿ ಕಾಗೆಯ ಗೂಡಿನಿಂದ ಒಂದೆರಡು ಮರಿಗಳನ್ನು ತಿನ್ನುತ್ತಿತ್ತು.

ಕಾಗೆಗಳಿಗೆ ತಮ್ಮ ಮರಿಗಳು ಕಾಣೆಯಾಗುತ್ತಿರುವುದು ತಿಳಿಯಿತು. ಅವುಗಳು ಹದ್ದಿಗೆ ದೂರು ಸಲ್ಲಿಸಿದವು. ಆದರೆ ಹದ್ದು ಇದನ್ನು ಒಪ್ಪಲಿಲ್ಲ. ಎಲ್ಲಾ ಕಾಗೆಮರಿಗಳು ಇವೆ ಎಂದೇ ವಾದಿಸಿತು. ಹದ್ದಿಗೆ ತನ್ನ ಶಿಷ್ಯನಾದ ಬೆಕ್ಕಿನ ಮೇಲೆ ಸಂಶಯ ಬರಲಿಲ್ಲ. ಬೆಕ್ಕಿನ ಹೊಗಳಿಕೆಯಿಂದ ಅದು ಉಬ್ಬಿ ಹೋಗಿತ್ತು.

ಒಂದು ದಿನ ಬೆಕ್ಕಿಗೆ ತುಂಬಾ ಹಸಿವಾಗಿತ್ತು. ಅದು ಮೆಲ್ಲನೆ ಕಾಗೆಯ ಗೂಡಿನೊಳಕ್ಕೆ ಹೋಯಿತು. ಅಲ್ಲಿ ಇರುವ ಎಲ್ಲಾ ಕಾಗೆಮರಿಗಳನ್ನೂ ತಿಂದುಬಿಟ್ಟಿತು. ತನ್ನ ಮೇಲೆ ಅನುಮಾನ ಬರದಂತೆ, ಮರಿಗಳ ಎಲುಬುಗಳನ್ನು ಹದ್ದಿನ ಗೂಡಿನಲ್ಲಿ ಇಟ್ಟಿತು.

ಸಂಜೆಯ ಹೊತ್ತಿಗೆ ಕಾಗೆಗಳು ತಮ್ಮ ಗೂಡಿಗೆ ಬಂದವು. ಗೂಡಿನಲ್ಲಿ ತಮ್ಮ ಮರಿಗಳನ್ನು ಕಾಣದೆ ಹದ್ದಿನ ಬಳಿಗೆ ಹೋದವು. ಪುನಃ ಹದ್ದು ಕಾಗೆಮರಿಗಳು ಕಾಣೆಯಾಗಿಲ್ಲವೆಂದೇ ಹೇಳಿತು. ಆದರೆ ಕಾಗೆಮರಿಗಳ ತಂದೆಯು ಹದ್ದಿನ ಗೂಡಿನಲ್ಲಿ ತನ್ನ ಮರಿಗಳ ಎಲುಬಿನ ತುಂಡನ್ನು ನೋಡಿತು. "ಮರಿಗಳನ್ನು ನೀನೇ ತಿಂದು ಸುಳ್ಳು ಹೇಳುತ್ತಿರುವೆಯಾ?" ಎಂದು ಸಿಟ್ಟಿನಿಂದ ಕೇಳಿತು.

ತಂದೆ ಕಾಗೆಯು ಉಳಿದೆಲ್ಲಾ ಕಾಗೆಗಳನ್ನು ಕೂಡಿ ಕರೆಯಿತು; ಅವುಗಳ ಬಳಿ ಮರಿಗಳನ್ನು ತಿಂದ ವಿಷಯ ತಿಳಿಸಿತು. ಎಲ್ಲಾ ಕಾಗೆಗಳೂ ಕೋಪದಿಂದ ಹದ್ದನ್ನು ಕುಕ್ಕತೊಡಗಿದವು. ಬೆಕ್ಕು ಈ ಮರಿಗಳನ್ನು ತಿಂದಿದೆ ಎಂಬ ವಿಷಯ ಆಗಷ್ಟೇ ಹದ್ದಿಗೆ ತಿಳಿಯಿತು. "ನಾನಲ್ಲ, ಬೆಕ್ಕು ಮರಿಗಳನ್ನು ತಿಂದಿತು" ಎಂದು ಅದು ಹೇಳಿತು. ಆದರೂ ಯಾರೂ ಹದ್ದಿನ ಮಾತನ್ನು ಕೇಳಲೇ ಇಲ್ಲ.

"ಛೆ! ಬೆಕ್ಕು ನನ್ನನ್ನು ಮೂರ್ಖನನ್ನಾಗಿ ಮಾಡಿತು. ಕೆಟ್ಟ ಗೆಳೆಯರ ಗೆಳೆತನ ಮಾಡಬಾರದು ಎಂದು ಈಗಷ್ಟೇ ನನಗೆ ಗೊತ್ತಾಯಿತು. ನಾನು ಮೋಸಹೋಗಿಬಿಟ್ಟೆ." ಎಂದು ಅಳುತ್ತಾ ಹದ್ದು ಯೋಚಿಸಿತು. ಕಾಗೆಗಳು ಗಾಯಮಾಡಿದ್ದರಿಂದ ಸ್ವಲ್ಪ ಹೊತ್ತಿನಲ್ಲಿ ಅದು ಸತ್ತು ಹೋಯಿತು.

**ನೀತಿ : ಕೆಟ್ಟ ಗೆಳೆಯನು ವೈರಿಗೆ ಸಮಾನ.**



# ಕುಟುಂಬ, ಮನೆ, ಪರಿಸರ

## ಡ್ಯಾಡಿ ಅನ್ನೋಲ್ಲ

ಅಪ್ಪ ಅಪ್ಪ ನಿನ್ನ ನಾನು
ಡ್ಯಾಡಿ ಅನ್ನೋಲ್ಲ,
ಅಪ್ಪ ಅಂತೇ ನಿನ್ನ ಕರೆದರೆ
ಚೆನ್ನಾಗಿರೊಲ್ವ?
ಮಮ್ಮಿ ಅಂದ್ರೆ ಏನೋ ಕಮ್ಮಿ
ಅಮ್ಮಾ ಅನ್ಲಾಮ್ಮಾ?
ಅಮ್ಮ ಅಂದ್ರೆ ಜಾಮೂನ್ ತಿಂದ್ಹಾಗ್
ಇರುತ್ತೆ ಕಣಮ್ಮಾ !
ಅಜ್ಜೀ ಅಂದ್ರೆ ಅಜ್ಜೀಗ್ ಖುಷಿ
ಪುಟ್ಟಾ! ಅಂತಾಳೆ
ಗ್ರ್ಯಾನೀ ಅಂದ್ರೆ ಸೌಟನ್ ಎತ್ಕೊಂಡ್
ಹೊಡಿಯೋಕ್ ಬರ್ತಾಳೆ
ಅಪ್ಪ ಅಮ್ಮ ಅಜ್ಜೀ ತಾತ
ಮಾಮ, ಚಿಕ್ಕಮ್ಮ
ಕನ್ನಡ ಹೆಸರು ಎಷ್ಟೊಂದು ಚಂದ!
ಎಷ್ಟೊಂದ್ ರುಚಿಯಮ್ಮ!

## ಕಂದನ ಕನಸು

ಅಂದದ ಚಂದದ
ಬಣ್ಣದ ಗೊಂಬೆಯ
ತರುವನು ನನ್ನಪ್ಪ
ಪಳಪಳ ಹೊಳೆಯುವ
ಅಂದದ ಉಡುಪನು
ತರುವಳು ನನ್ನಮ್ಮ
ಬಗೆ ಬಗೆ ಕಥೆಗಳ
ಚಂದದ ಪುಸ್ತಕ
ತರುವನು ನನ್ನಣ್ಣ
ಲಾಡು ಮಿಠಾಯಿ
ಬಣ್ಣದ ಚಾಕಲೇಟ್
ತರುವಳು ನನ್ನಕ್ಕ
ಅಂದದ ಉಡುಪನು
ಧರಿಸುತ ಗೊಂಬೆಯ
ಜೊತೆಯಲಿ ಆಡುವೆನು
ಚೆಲುವಿನ ಕಥೆಗಳ
ಓದುತ ಮಿಠಾಯಿ
ತಿನ್ನುತ ಕುಣಿಯುವೆನು



## ಉಂಡೆ ಉಂಡೆ

ಉಂಡೆ ಉಂಡೆ ಉಂಡೆ
ತನ್ನಿ ಒಂದು ಹಂಡೆ
ಒಳಕ್ಕೆ ಇಳಿದು ತಿಂದ್ಹಾಕ್ತೀವಿ
ಇಡೀ ಸಂಡೆ ಮಂಡೆ

## ಚಕ್ಲಿ ನಂಗೆ ಇಷ್ಟ

ಚಕ್ಲಿ ನಂಗೆ ಇಷ್ಟ
ಹೊರಕ್ ತರೋದೇ ಕಷ್ಟ
ರೌಡಿ ಗುಂಡ ಓಡಿ ಬಂದು
ಕಸ್ಕೊತಾನೆ ದುಷ್ಟ

## ಕಿಟ್ಟಿ ರೊಟ್ಟಿ ಕದ್ದ

ತಾತ ಬುಟ್ಟಿ
ತುಂಬ ರೊಟ್ಟಿ
ಕಟ್ಟಿ ತಂದನು
ಕಿಟ್ಟಿ ಎದ್ದು
ಎಲ್ಲ ಕದ್ದು
ತಿಂದು ಬಂದನು
ತಾತ ಕೂಗಿ
ಕಿಟ್ಟಿಗಾಗ
ಏಟು ಬಿಟ್ಟನು
ಅಳುತ ಕಿಟ್ಟಿ
ಬರಿಯ ಬುಟ್ಟಿ
ತಂದು ಕೊಟ್ಟನು

## ನಮ್ಮ ಮನೆಯ ಸಣ್ಣ ಪಾಪ

ನಮ್ಮ ಮನೆಯಲೊಂದು ಸಣ್ಣ
ಪಾಪವಿರುವುದು
ಎತ್ತಿಕೊಳದೆ ಹೋದರದಕೆ
ಕೋಪ ಬರುವುದು
ಕೋಪ ಬರಲು ಗಟ್ಟಿಯಾಗಿ
ಕಿರಿಚಿಕೊಳುವುದು ಕಿರಿಚಿಕೊಂಡು ತನ್ನ ಮೈಯ
ಪರಚಿಕೊಳುವುದು
ಮೈಯ ಪರಚಿಕೊಂಡು ಪಾಪ
ಅತ್ತು ಕರೆವುದು
ಅಳಲು ಕಣ್ಣಿನಿಂದ ಸಣ್ಣ
ಮುತ್ತು ಸುರಿವುದು
ಪಾಪ ಅತ್ತರಮ್ಮ ತಾನೂ
ಅತ್ತು ಬಿಡುವಳು
ಅಯ್ಯೋ ಪಾಪ ಎಂದುಕೊಂಡು
ಮುತ್ತು ಕೊಡುವಳು
ಪಾಪ ಪಟ್ಟು ಹಿಡಿದ ಹಠವು
ಸಾರ್ಥವಾಯಿತು
ಕಿರುಚಿ ಪರಚಿ ಅಳುವುದೆಲ್ಲ
ಅರ್ಥವಾಯಿತು.

## ಗಡಿಯಾರದ ಸಡಗರ

ಕೋಳಿ ಕೂಗಿತೇಳು ಕಂದ
ಸೂರ್ಯ ಪೂರ್ವದಲ್ಲಿ ಬಂದ
ಹೆಚ್ಚು ಮಲಗಲೇನು ಚಂದ
ಬಾ! ಕಂದ ಬಾ!
ಟಿಕ್! ಟಾಕ್!ಟಿಕ್!ಟಾಕ್
ಟಿಕ್!ಟಿಕ್!ಟಿಕ್............।।
ಹಲ್ಲನುಜ್ಜಿ ತಿಂಡಿ ತಿಂದು
ಪಾಠವ್ಹೋದಿ ಬಳಿಕ ಮಿಂದು
ಊಟಮಾಡಿ ಶಾಲೆಗೆಂದು
ಬಾ!ಕಂದ ಬಾ!
ಟಿಕ್!ಟಿಕ್!ಟಿಕ್.............।।
ಶಾಲೆ ಮುಗಿದ ಬಳಿಕ ಓಟ
ಸಂಜೆವರೆಗೆ ಆಟಪಾಠ
ಮನೆಗೆ ಬಂದು ಸ್ತೋತ್ರಪಾಠ
ಬಾ!ಕಂದ ಬಾ!
ಟಿಕ್!ಟಾಕ್!ಟಿಕ್!ಟಾಕ್
ಟಿಕ್!ಟಿಕ್!ಟಿಕ್!................।।
ರಾತ್ರೆ ದೇವಗಡ್ಡಬಿದ್ದು
ಊಟಮಾಡಿ ನಿದ್ರಿಸಿದ್ದು
ನಾಳೆ ತಿರುಗಿ ಬೇಗನೆದ್ದು
ಬಾ! ಕಂದ ಬಾ!
ಟಿಕ್!ಟಾಕ್!ಟಿಕ್!ಟಾಕ್
ಟಿಕ್!ಟಿಕ್!ಟಿಕ್..................।।

## ಸೋಪು ಹಾಕಿ ಮೈಯ ತೊಳೆ

ಮೈ ಎಲ್ಲ ಕೊಳೆ!

ಸೋಪು ಹಾಕಿ ತೊಳೆ!

ನೀರು ಎಷ್ಟು

ಬೇಕೊ ಅಷ್ಟು

ಕೊಡುವುದೂರ ಹೊಳೆ!

## ಅಡುಗೆ ಮನೆ

ಅಡುಗೆಯ ಮನೆಯಲಿ

ಗೋಡೆಯಲಿ

ತೂಗಿದ ಬಿದಿರಿನ

ಗೂಡೆಯಲಿ

ಸರಸರವಾಗಿದೆ

ಕೋಡು ಬಳೆ!

ನೋಡುತ ಕುಳಿತಿದೆ

ಗೋಡೆ ಮೊಳೆ!

## ಬೌ ಬೌ ಮಿಯ್ಯಾಂ ಮಿಯ್ಯಾಂ

ರಾಮುವಿನ ಮನೆ

ಚಂದವಿರುವ ಮನೆ

ಮನೆಯಲೊಂದು ನಾಯಿ

ಬುದ್ಧಿವಂತ ನಾಯಿ

ಅಲ್ಲಿ ನೋಡಿ ಬೌ ಬೌ

ಇಲ್ಲಿ ನೋಡಿ ಬೌ ಬೌ

ಅಲ್ಲಿ ಇಲ್ಲಿ ಎಲ್ಲ ನೋಡಿ

ಬೌ ಬೌ ಬೌ

ರಾಮುವಿನ ಮನೆ

ಚಂದವಿರುವ ಮನೆ

ಮನೆಯಲ್ಲೊಂದು ಬೆಕ್ಕು

ಅಂದವಿರುವ ಬೆಕ್ಕು

ಅಂದವಿರುವ ಬೆಕ್ಕು

ಅಲ್ಲಿ ನೋಡಿ ಮಿಯ್ಯೊಂ

ಇಲ್ಲಿ ನೋಡಿ ಮಿಯ್ಯೊಂ

ಅಲ್ಲಿ ಇಲ್ಲಿ  ಮಿಯ್ಯೊಂ

ಅಲ್ಲಿ ಇಲ್ಲಿ ಎಲ್ಲ ನೋಡಿ

ಮಿಯ್ಯಾಂ ಮಿಯ್ಯಾಂ ಮಿಯ್ಯಾಂ

ರಾಮುವಿನ ಮನೆ

ಚಂದವಿರುವ ಮನೆ

ಮನೆಯಲ್ಲೊಂದು ಕೋಳಿ

ಚಿಕ್ಕದಾದ ಕೋಳಿ

ಅಲ್ಲಿ ನೋಡಿ ಕೊಕ್ಕೋ

ಇಲ್ಲಿ ನೋಡಿ ಕೊಕ್ಕೋ

ಅಲ್ಲಿ ಇಲ್ಲಿ ಎಲ್ಲ ನೋಡಿ

ಕೊಕ್ಕೋ ಕೊಕ್ಕೋ ಕೊಕ್ಕೋ

## ಅಂದದ ಮನೆ

ಅಂದದ ಚಂದದ ಮನೆ

ನಾನು ಹುಟ್ಟಿದ ಮನೆ

ಅಪ್ಪನಿರುವ ಮನೆ

ಅಮ್ಮ ಇರುವ ಮನೆ

## ಅಮ್ಮ

ಅಮ್ಮ ನನ್ನ ಅಮ್ಮ

ತುತ್ತು ಕೊಡುವ ಅಮ್ಮ

ಮುತ್ತು ಕೊಡುವ ಅಮ್ಮ

ನನ್ನ ಮುದ್ದು ಅಮ್ಮ

## ನನ್ನಜ್ಜಿ

ಅಜ್ಜಿ ಅಜ್ಜಿ ನನ್ನಜ್ಜಿ
ಕಥೆಗಳ ಹೇಳುವ ನನ್ನಜ್ಜಿ
ಹಾಡನು ಹೇಳುವ ನನ್ನಜ್ಜಿ
ವೀಳ್ಯವ ಮೆಲ್ಲುವ ನನ್ನಜ್ಜಿ
ಬಾಗಿದ ಬೆನ್ನಿನ ನನ್ನಜ್ಜಿ

## ಪಾಪು

ಹಾಲುಗಲ್ಲದ
ಪಾಪು
ಕೆನ್ನೆ ತುಂಬಾ
ಸಾಪು
ಕೊಟ್ಟರೆ
ಗಲ್ಲಕೆ ಉಪ್ಪಾ
ತಿಂದಾಂಗ
ಬೆಲ್ಲ ತುಪ್ಪಾ

## ಪುಟ್ಟಿಯ ಆಸೆ

ಪುಟ್ಟ ಪುಟ್ಟ ಹೆಜ್ಜೆಯಿಟ್ಟು
ಪುಟ್ಟಿ ಬಂದಳು
'ರೊಟ್ಟಿ ಕೊಡು; ನನಗೆ ತುಂಬಾ
ಇಷ್ಟ' ಎಂದಳು

## ಅಮ್ಮ – ತಿಮ್ಮ

ಅಮ್ಮ : ತೋಟಕ್ಹೋಗೋ ತಿಮ್ಮ
ತಿಮ್ಮ : ತೋಳ ಬಂದೀತಮ್ಮ
ಅಮ್ಮ : ಹಸು ಮೇಯ್ಸೋ ತಿಮ್ಮ
ತಿಮ್ಮ : ಹಸು ಹಾದೀತಮ್ಮ
ಅಮ್ಮ : ಒಲೆ ಉರಿಸೋ ತಿಮ್ಮ
ತಿಮ್ಮ : ಉರಿ ಸುಟ್ಟೀತಮ್ಮ
ಅಮ್ಮ : ಪಾಠ ಬರೆಯೋ ತಿಮ್ಮ
ತಿಮ್ಮ : ಬಳಪಯಿಲ್ಲ ಅಮ್ಮ
ಅಮ್ಮ : ಹೂವು ಬಿಡಿಸೋ ತಿಮ್ಮ
ತಿಮ್ಮ : ಹಾವು ಕಚ್ಚೀತಮ್ಮ
ಅಮ್ಮ : ಕಾವಲಿ ತಾರೋ ತಿಮ್ಮ
ತಿಮ್ಮ : ಕಾಲು ನೋವು ಅಮ್ಮ
ಅಮ್ಮ : ನೀರು ಸೇದೋ ಅಮ್ಮ
ತಿಮ್ಮ : ನೀನೂ ಬಾರೆ ಅಮ್ಮ
ಅಮ್ಮ : ಊಟ ಮಾಡೋ ತಿಮ್ಮ
ತಿಮ್ಮ : ಹಾಗೇ ಆಗಲಿ ಅಮ್ಮ

## ವಾರದ ವಿಶೇಷ

ತಿಂಡಿ ಬೇಕು, ಬಲು ಸಿಹಿ ತಿಂಡಿ
ಭಾನುವಾರ್ ಬೇಕು ಬಾಸುಂದಿ
ಸೋಹನ್‌ಪಪ್ಪಡಿ ಸೋಮವಾರ
ಮಂಡಿಗೆ ಬೇಕು ಮಂಗಳವಾರ
ಬೂಂದಿ ಬೇಕು ಬುಧವಾರ
ಗುಲಾಬ್ ಜಾಮೂನ್ ಗುರುವಾರ
ಶಂಕರ ಪೋಳಿ ಶುಕ್ರವಾರ
ಶಾವಿಗೆ ಬೇಕು ಶನಿವಾರ
ತಿಂಡಿ ಬೇಕು ತಿಂಡಿ, ಬಲು ಸಿಹಿ ತಿಂಡಿ

## ದೋಸೆ

ಅಮ್ಮ ದೋಸೆಯ ಮಾಡಮ್ಮ
ಘಮ ಘಮ ದೋಸೆಯ ಮಾಡಮ್ಮ
ದುಂಡಗೆ ದೋಸೆ ಹೊಯ್ಯಮ್ಮ
ತುಪ್ಪ ಚಟ್ನಿ ಸವರಮ್ಮ
ಆಲೂ ಪಲ್ಯ ಹಾಕಮ್ಮ
ಬಿಸಿಬಿಸಿ ದೋಸೆಯ ತಾರಮ್ಮ
ಸಾದಾ ದೋಸೆಯ ತಾರಮ್ಮ
ಈರುಳ್ಳಿ ದೋಸೆಯು ರುಚಿಯಮ್ಮ
ಅಮ್ಮ ದೋಸೆಯ ಮಾಡಮ್ಮ

### ನಮ್ಮಜ್ಜಿ

ಅಜ್ಜಿ ಅಜ್ಜಿ ನಮ್ಮಜ್ಜಿ
ಮುಪ್ಪಿನ ಮುದುಕಿ ನಮ್ಮಜ್ಜಿ
ಬಾಗಿದ ಬೆನ್ನಿನ ನಮ್ಮಜ್ಜಿ
ಕೋಲನು ಹಿಡಿಯುವ ನಮ್ಮಜ್ಜಿ
ಕಥೆಯನು ಹೇಳುವ ನಮ್ಮಜ್ಜಿ
ಮೋಹದ ಮಾತಿನ ನಮ್ಮಜ್ಜಿ
ಮಕ್ಕಳ ಪ್ರೇಮಿಯು ನಮ್ಮಜ್ಜಿ

### ಕಂದ ಕಂಡ ಕನಸು

ಆಟದ ಆಸೆ ಬಲಿಯಿತು
ಗೋಪಿ ಗುಡ್ಡ ಏರಿತು
ಮಮ್ಮಿ ಮಾತು ಮರೆಯಿತು
ಹಳ್ಳ ಕೊಳ್ಳ ಹಾರಿತು
ಕಾಲು ಜಾರಿ ಬಿದ್ದಿತು
ಹಲ್ಲು ಹೊರಗೆ ಬಂದಿತು
ರಕ್ತ ಬಹಳ ಸುರಿಯಿತು
ನೊಂದ ಗೋಪಿ ಚೀರಿದ
ಕನಸು ಬೇಗ ಹರಿಯಿತು
ಕಂದ ಕಣ್ಣ ಬಿಟ್ಟಿತು
ಅಮ್ಮಾ! ಎಂದು ಕೂಗಿತು
ಬೆಚ್ಚಿ ಬಗಲು ಸೇರಿತು

### ನಮ್ಮ ಸಂಸಾರ

ಅಪ್ಪ ಯಾರು ಗೊತ್ತೇ?
ಅಮ್ಮ ಯಾರು ಗೊತ್ತೇ?
ಅಪ್ಪನ ಹೆಂಡತಿ ಅಮ್ಮ
ಅಮ್ಮನ ಗಂಡ ಅಪ್ಪ
ಅಪ್ಪನ ಅಪ್ಪ ಅಜ್ಜ
ಅಜ್ಜನ ಹೆಂಡತಿ ಅಜ್ಜಿ
ಅಜ್ಜಿಯ ಮೊಮ್ಮಗ ನಾನು
ಎಲ್ಲರ ಕಣ್ಮಣಿ ನಾನು
ನನ್ನ ಅಣ್ಣ ರಾಮಣ್ಣ
ಅವನ ತಮ್ಮ ಭೀಮಣ್ಣ
ನಮ್ಮಿಬ್ಬರ ತಂಗಿ  ರಂಗಿ
ಅವಳಿಗೆ ಬೇಕು ಕೆಂಪಂಗಿ
ಮೂರೇ ಮಕ್ಕಳು ನಾವು
ಮುದ್ದಿನ ಮಕ್ಕಳು ನಾವು

### ಅಜ್ಜಿಯ ಅವತಾರ

ಕೈಯಲೊಂದು ಕಟ್ಟಿಗೆ
ಕಾಲೆರಡು ಸೊಟ್ಟಗೆ
ಸೊಂಟವಿಲ್ಲ ನೆಟ್ಟಗೆ
ಅಜ್ಜಿ ಬರುವಳು ಹಟ್ಟಿಗೆ॥2॥
ತಲೆ ತುಂಬ ಬೆಳ್ಳಿ ಕೂದಲು
ಮೈ ತುಂಬ ಸುಕ್ಕು ತೊಗಲು
ಬಾಯಿ ತುಂಬ ನುಡಿ ತೊದಲು
ಅಜ್ಜಿ ಬರುವಳು ಹಟ್ಟಿಗೆ॥2॥
ಕಟ್ಟೆ ಮೇಲೆ ಕೂರಲು
ಎಲೆ ಅಡಿಕೆ ಕುಟ್ಟಲು
ತರುವಳೊಂದು ಬಟ್ಟಲು
ಅಜ್ಜಿ ಬರುವಳು ಹಟ್ಟಿಗೆ
ಅಜ್ಜ ಬಂದು ಕೂತರೆ
ಅಜ್ಜಿ ಮೋರೆ ಕಂಡರೆ
ಕಂಡು ಮೋರೆ ನಕ್ಕರೆ
ಅಜ್ಜಿಗೇನು ತೊಂದರೆ
ಎಲೆ ಅಡಿಕೆ ಕುಟ್ಟಲು
ಅಜ್ಜ ಅದನು ಜಗಿಯಲು
ಅಜ್ಜಿ ಸಿಟ್ಟು ಏರಲು
ನಕ್ಕನು ಫಕ್ಕನೆ ಅಜ್ಜಯ್ಯ

## ಮಳೆಯೂ, ಕಾಲಾವಸ್ಥೆಯೂ

### ಚಳಿ! ಚಳಿ!

ಚಳಿ! ಚಳಿ! ಚಳಿ!ಚಳಿ!
ಶಾಲು ಹೊದೆದೆನು
ಮಳೆ!ಮಳೆ!ಮಳೆ!ಮಳೆ!
ನೆನೆದು ಹೋಯಿತು!
ಬಲು ಸೆಕೆ! ಬಲು ಸೆಕೆ!
ಶಾಲು ತೆಗೆದೆನು!
ಸುರ್‌ಗಾಳಿ! ಭುರ್ ಗಾಳಿ
ಹಾರಿ ಹೋಯಿತು!
ಬಟ್ಟ ಬೆತ್ತಲೇ!!
ಬಟ್ಟ ಬೆತ್ತಲೇ!!

### ಮಳೆ

ಕೇಳಿರಣ್ಣ ಮಳೆಯ ಬರವು!
ಸೂರ್ಯ ತಾಪದಿಂದ ಬಿಸಿಲು
ನೀರು ಕಾಯ್ದು ಆಗಿ ಉಗಿಯು
ರೂಪಗೊಂಡು ಮೋಡಸಾಲು ।।1।।
ಸಾಲುಗಟ್ಟಿ ಮೇಘಮಾಲೆ
ಬೆಟ್ಟದಂತೆ ಏರಿ ಮೇಲೆ
ಸಾಗಿ ಸಾಗಿ ದೂರ ಎಲ್ಲೆ
ಹನಿದು ಮಳೆಯು ಭೂಮಿ ಮೇಲೆ ।।2।।
ತಣಿದು ಭೂಮಿ ತಂಪಗಾಗಿ
ಕೊನರಿ ಹಸಿರು ದಟ್ಟವಾಗಿ
ಬೆಳೆಯು ಸಿರಿಯು ತೆನೆಯು ಮಾಗಿ
ರಾಶಿ ಮತ್ತು ಹವಳವಾಗಿ ।।2।।

### ಮಳೆಯ ದೃಶ್ಯ

ತಟ ತಟ
ಸುರಿಯುವ
ಮಳೆಸದ್ದು
ಗದ್ದೆಯ
ಕೆಸರು
ಮೇಲೆದ್ದು
ನೀರಂತಾಯಿತು
ಇಳೆ ಭಾನು
ಕಾಮನ
ಬಿಲ್ಲಿನ
ಕಮಾನು

### ಮಳೆ

ಬಾರೋ ಬಾರೋ
ಮಳೆರಾಯ
ಎಲ್ಲರ ಸಲಹುವ
ಮಹಾರಾಯ
ಪಕ ಪಕ
ಮಿಂಚೋ ಮಿಂಚಣ್ಣ
ಗುಡುಗುಡು
ಮಾಡೋ ಗುಡುಗಣ್ಣ
ತುಂಬಿ ಹರಿಯಲಿ
ಕೆರೆಯಣ್ಣ
ಈಸಲು ಬೇಕು
ನೀರಣ್ಣ

## ಮಳೆರಾಯ

ಮುತ್ತಿನ ಮಳೆಹನಿ ನಭದಿಂ ಬೀರುತ
ನೆಲವನು ತಣಿಸಿ ತಂಪನು ಎರೆಯುತ
ಬಂದಾ ಬಂದ ಮಳೆರಾಯ
ಎಲೆಗಳ ತೋಯಿಸಿ ಹೂಗಳ ಚುಂಬಿಸಿ
ಓಡುವ ಜನರಿಗೆ ಜಳಕವ ಮಾಡಿಸಿ
ಕಲ್ಗಳ ಬೀಸುತ ಮಕ್ಕಳ ನಗಿಸುತ
ಬಂದಾ ಬಂದ ಮಳೆರಾಯ
ಪಟಪಟ ಸದ್ದನು ವೇಗದಿ ಮಾಡುತ
ದಪದಪ ಸೂರನು ಬಲದಿಂ ಕುಟ್ಟುತ
ಮನೆ ಮನೆ ಬಾಗಿಲ ಭರದಿಂ ತಟ್ಟುತ
ಬಂದಾ ಬಂದ ಮಳೆರಾಯ
ರಸ್ತೆಯ ಉದ್ದಕ್ಕೆ ನೀರನು ಹರಿಸುತ
ಹಳ್ಳವ ಕೊಳ್ಳವ ಭರದಲಿ ತುಂಬುತ
ಮಕ್ಕಳ ಕುಣಿತಕ್ಕೆ ತಾಳವ ಹಾಕುತ
ಬಂದಾ ಬಂದ ಮಳೆರಾಯ

## ಚಳಿ

ಬಂದಿತು ಬಂದಿತು
ಕಡು ಚಳಿಗಾಲ
ಉಣ್ಣೆಯ ಉಡುಪನು
ತೆಗೆಯಲೊ ಬಾಲ!
ಕುರುಕುಲು ತಿಂಡಿ
ಬಯಸುವ ಕಾಲ,
ಬೆಚ್ಚನೆ ಹೆಚ್ಚಿಗೆ
ಒರಗುವ ಕಾಲ

## ಮಳೆ

ಬಂದಿತು ಬಂದಿತು
ನೋಡದೊ ಮಳೆ
ಬಾನಿಂದಿಳಿಯಿತು
ನೀರಿನ ಹೊಳೆ
ರಭಸದಿ ತೊಳೆಯಿತು
ಭೂಮಿಯ ಕೊಳೆ
ಕ್ಷಣದಲಿ ತಳೆಯಿತು
ಭೂಮಿಯು ಕಳೆ

# *ನಾನು, ನನ್ನ, ಶರೀರ, ಶುಚಿತ್ವ, ಆರೋಗ್ಯ*

## 'ಅಂದಾ ಚಂದ'

ಅಂದಾ ಚಂದಾ?
ಯಾವುದು ಚಂದಾ?
ತಿಕ್ಕಿ ತಿಕ್ಕಿ ತೊಳೆದ
ಹಲ್ಲುಗಳೇ ಚಂದ
ಅಂದಾ ಚಂದಾ
ಯಾವುದು ಚಂದ?
ತಿಕ್ಕಿ ತಿಕ್ಕಿ ತೊಳೆದ
ಕಾಲುಗಳೇ ಚಂದ
ಅಂದಾ ಚಂದಾ
ಯಾವುದು ಚಂದ
ತಿಕ್ಕಿ ತಿಕ್ಕಿ ತೊಳೆದ
ಕೈಗಳೇ ಚಂದ
ಅಂದಾ ಚಂದ
ಯಾವುದು ಚಂದಾ
ತಿಕ್ಕಿ ತಿಕ್ಕಿ ತೊಳೆದ
ಮುಖವೇ ಚಂದ।।

## ಮಳೆಜ್ವರ

ಗಾಳಿ ಮಳೆಯು ಸುರಿದಾಗ
ನಾಡೆಲ್ಲ ಕಡಲಾಯ್ತು
ದೋಣಿಗಳಿಳಿಯಿತು ಆಟಕೆ
ಪುಟ್ಟನು ಇಳಿದನು ಖುಷಿಯಾಗಿ
ಖುಷಿಯು ಮಳೆಯು ನಿಂತಾಗ
ಜ್ವರವೂ ಬಂದಿತು ಖುಷಿಯಾಗಿ

## ಅಕ್ಷೀ ಅಕ್ಷೀ ಸೀನು

ಅಕ್ಷಯ ಪುಟ್ಟಗೆ ಪಾಪ, ನೆಗಡಿ
ಅಕ್ಷೀ ಅಕ್ಷೀ ಸೀನು!
ರಿಕ್ಷಾ ಹತ್ತೀ, ತಕ್ಷಣ ಹೋಗೀ
ಔಷಧಿ ತಂದೆ ನಾನು!

## ಉಂಡಾಡಿ ಗುಂಡ

ಉಂಡಾಡಿ ಗುಂಡ
ಎಂಟು ಲಾಡು ತಿಂದ
ಹೊಟ್ಟೆನೋವು ಅಂದ
ಮಮ್ಮಿ ಹತ್ತಿರ ಬಂದ
ಕಣ್ಣೀರು ತಂದ
ಎಣ್ಣೆ ಹಚ್ಚು ಅಂದ
ಅಪ್ಪ ಕೋಲು ತಂದ
ಕೈಕಟ್ಟು ಬಾಯಿ ಮುಚ್ಚು ಅಂದ

## ಬೇಟೆಗಾರ

ಅತ್ತ ಇತ್ತ ನೋಡುತ
ಸುತ್ತಮುತ್ತ ತಿರುಗುತ
ಬೇಟೆಗಾರ ಬಂದ
ಬಿಲ್ಲು ಬಾಣ ತಂದ
ಕಾಡುಹಂದಿ ಕೊಂದ
ಬೆಂದ ಹಂದಿ ತಿಂದ
ಹೊಟ್ಟೆನೋವು ಎಂದ
ಮರದ ಕೆಳಗೆ ಬಿದ್ದ
ಹುಲಿರಾಯ ಬಂದ
ಹೊಟ್ಟೆ ತುಂಬ ತಿಂದ

## ಬಾಲಾಹಾರ

ಹಾಲು ಬೆಣ್ಣೆ ನಮಗಿರಬೇಕು
ಸೊಪ್ಪಿನ ಪಲ್ಯ ತಿನ್ನಲು ಬೇಕು
ಮೀನು ಮೊಟ್ಟೆ ಬಹಳಿರಬೇಕು
ಮಿಟಮಿನ್ 'ಎ' ದೇಹಕೆ ಬೇಕು
ಹೆಸರು ಕಡಲೆ ನಮಗಿರಬೇಕು
ರಾಗಿಹಿಟ್ಟು ತಿನ್ನಲು ಬೇಕು
ಬಟಾಣಿ ಬಾದಾಮಿ ಬಹಳಿರಬೇಕು
ಮಿಟಮಿನ್ 'ಬಿ' ದೇಹಕೆ ಬೇಕು
ಮೊಳೆತ ಕಾಳು ನಮಗಿರಬೇಕು
ತಾಜಾ ಕ್ಯಾರೆಟ್ ತಿನ್ನಲು ಬೇಕು
ಕಿತ್ತಳೆ ಹಣ್ಣು ಬಹಳಿರಬೇಕು
ಮಿಟಮಿನ್ 'ಸಿ' ದೇಹಕೆ ಬೇಕು
ಬೆಣ್ಣೆ ತುಪ್ಪ ನಮಗಿರಬೇಕು
ಮೀನಿನ ಎಣ್ಣೆ ಬೇಕೇ ಬೇಕು
ಬಿಸಿಲಿನ ಶಾಖ ಚರ್ಮಕೆ ಬೇಕು
ಮಿಟಮಿನ್ 'ಡಿ' ದೇಹಕೆ ಬೇಕು
ಸಕ್ಕರೆ ಬೆಲ್ಲ ಸವಿಯಲು ಬೇಕು
ಹಾಲು ಮೊಸರು ಕುಡಿಯಲು ಬೇಕು
ಹಳದಿ ಹಣ್ಣು ತಿನ್ನಲು ಬೇಕು
ಬೆಳೆಯಲಿದೆಲ್ಲ ಬೇಕೇ ಬೇಕು

# ಸಸ್ಯಗಳು, ಮರಗಳು, ಹಣ್ಣುಗಳು

## ಬಾಳೆ ಹಣ್ಣು

ಹಣ್ಣಿದು ಬಲು ರುಚಿ ಬಾಳೆಹಣ್ಣು
ಮಕ್ಕಳು ಕೋರುವ ಬಾಳೆಹಣ್ಣು
ಅಜ್ಜನು ಬಯಸುವ ಬಾಳೆಹಣ್ಣು
ಅನುದಿನ ಸಿಕ್ಕುವ ಬಾಳೆಹಣ್ಣು
ಮಾರಲು ಬಂದಿದೆ ಬಾಳೆಹಣ್ಣು
ಅಗ್ಗದ ಬೆಲೆಯ ಬಾಳೆಹಣ್ಣು
ನಂಜನಗೂಡಿನ ಬಾಳೆಹಣ್ಣು
ನುಂಗಲು ಸುಲಭದ ಬಾಳೆಹಣ್ಣು
ಶಕ್ತಿಯ ಕೊಡುವ ಬಾಳೆಹಣ್ಣು
ಜೇನಿಗೆ ಸಮವಿದು ಬಾಳೆಹಣ್ಣು
ಜೀವಾಮೃತವೀ ಬಾಳೆಹಣ್ಣು
ಓಡಿರಿ ಕೊಳ್ಳಿರಿ ಬಾಳೇಹಣ್ಣು
ತಿನ್ನಿರಿ ಮಕ್ಕಳೇ ಬಾಳೆಹಣ್ಣು

## ಹಣ್ಣು – ಹಣ್ಣು – ಹಣ್ಣು

ಹಣ್ಣು ಹಣ್ಣು ಹಲಸಿನ ಹಣ್ಣು
ಮಕ್ಕಳ ಬಾಯಿಗೆ ಬಾಳೆಹಣ್ಣು
ಅಮ್ಮನ ಬಾಯಿಗೆ ಮಾವಿನಹಣ್ಣು
ಅಪ್ಪನ ಬಾಯಿಗೆ ಸೀಬೆ ಹಣ್ಣು
ಅಜ್ಜಿಯ ಬಾಯಿಗೆ ಕಿತ್ತಳೆ ಹಣ್ಣು
ಅಜ್ಜನ ಬಾಯಿಗೆ ದ್ರಾಕ್ಷಿ ಹಣ್ಣು
ತಿಂಬುವರಿಲ್ಲ ಬೇವಿನ ಹಣ್ಣು
ಕೊಂಬುವರಿಲ್ಲ ಅತ್ತಿ ಹಣ್ಣು
ಬೇಡುವವರಿಲ್ಲ ಬೇಲದ ಹಣ್ಣು
ಕೇಳುವವರಿಲ್ಲ ಕಾರೆ ಹಣ್ಣು

## ಈರುಳ್ಳಿ – ಬೆಳ್ಳುಳ್ಳಿ

ಸಂಬಾರದ ಈರುಳ್ಳಿ
ಕನಕಾ ಮುತ್ತಿನ ಬೆಳ್ಳುಳ್ಳಿ
ಪಾತಿಗಳಲ್ಲಿ ಹೂಣಿಸಿಕೊಂಡೆ
ಏತದ ನೀರು ಎತ್ತಿಸಿಕೊಂಡೆ
ಗುದ್ದಲಿಯಿಂದ ಕೊತ್ತಿಸಿಕೊಂಡೆ
ಉತ್ತಮಗೊಬ್ಬರ ಹಾಕಿಸಿಕೊಂಡೆ ।
ಜುಟ್ಟನು ಬಹಳ ಬೆಳೆಯಿಸಿಕೊಂಡೆ
ಬಲಿತ ಜುಟ್ಟು ಕೀಳಿಸಿಕೊಂಡೆ
ಗೋಣಿ ಚೀಲಕೆ ತುಂಬಿಸಿಕೊಂಡೆ
ಗಾಡಿಯ ಮೇಲೆ ಏರಿಸಿಕೊಂಡೆ।
ಸಂತೆ ಬಯಲಲಿ ಕಾಣಿಸಿಕೊಂಡೆ
ರೂಪಾಯಿಗೆ ಕೇಜಿ ತೂಗಿಸಿಕೊಂಡೆ
ಪುಟಾಣಿ ಬುಟ್ಟಿ ತುಂಬಿಸಿಕೊಂಡೆ
ಜೊತೆಗೆ ಮಸಾಲೆ ಸೇರಿಸಿಕೊಂಡೆ।
ಗುಂಡುಕಲ್‌ನಿಂದ ಗುದ್ದಿಸಿಕೊಂಡೆ
ಒಗ್ಗರಣೇಲಿ ಬೇಯಿಸಿಕೊಂಡೆ
ಜನರನ್ನೆಲ್ಲಾ ಬಗ್ಗಿಸಿಕೊಂಡೆ
ಸಂಬಾರದ ಈರುಳ್ಳಿ

## ಚಿಟ್ಟೆ

ಬಾ ಬಾ ಚಿಟ್ಟೆ। ಬಣ್ಣದ ಚಿಟ್ಟೆ
ಚಂದದ ಚಿಟ್ಟೆ । ಹಾರುವ ಚಿಟ್ಟೆ
ಬಾರದೆ ಬಿಟ್ಟೆ । ನೀನೇ ಕೆಟ್ಟೆ

## ।ಬಣ್ಣದ ಚಿಟ್ಟೆ।

ಬಣ್ಣದ ಚಿಟ್ಟೆ ಬಾ ಬಾ ಚಿಟ್ಟೆ
ಮಕ್ಕಳ ಕಣ್ಣು ಸೆಳೆಯುವ ಚಿಟ್ಟೆ
ಹೂವಿಂದ ಹೂವಿಗೆ ಹಾರುವ ಚಿಟ್ಟೆ
ಹೂಗಳ ರಸವ ಹೀರುವ ಚಿಟ್ಟೆ
ಬಾ ಬಾ ಚಿಟ್ಟೆ ಬಣ್ಣದ ಚಿಟ್ಟೆ ।
ನಾನಾರಂಗಿನ ಬೆಡಗಿನ ಚಿಟ್ಟೆ
ರಂಗಿನ ರೆಕ್ಕೆ ಬಡಿಯುವ ಚಿಟ್ಟೆ
ಥಂಗನೆ ಹಾರುವ ಚಿನ್ನಾರಿ ಚಿಟ್ಟೆ
ಮಕ್ಕಳ ಸಂಗ ಕುಣಿಯುವ ಚಿಟ್ಟೆ
ಬಾ ಬಾ ಚಿಟ್ಟೆ ಬಣ್ಣದ ಚಿಟ್ಟೆ

# *ದಿನಾಚರಣೆಗಳು, ಸ್ವಾತಂತ್ರ್ಯದಿನ, ಗಾಂಧೀಜಯಂತಿ, ಮಕ್ಕಳ ದಿನಾಚರಣೆ*

## ತಟ್ಟು ಚಪ್ಪಾಳೆ ಪುಟ್ಟ ಮಗು

ತಟ್ಟು ಚಪ್ಪಾಳೆ ಪುಟ್ಟ ಮಗು
ತಕ್ಕೋ ಕೈ, ಇಕ್ಕೋ ಕೈ
ಗಾಂಧಿಗಿಂದು ಜನುಮ ದಿನ
ತಟ್ಟು ಚಪ್ಪಾಳೆ ಪುಟ್ಟ ಮಗು ।
ನಾಲ್ಕು ಹತ್ತು ಕೋಟಿ ಜನರ
ನಾಡಿನಲ್ಲಿ ನುಡಿಯುತಿದೆ
ಗಾಂಧೀಜಿ, ಬಾಪೂಜಿ
ತಟ್ಟು ಚಪ್ಪಾಳೆ ಪುಟ್ಟಮಗು ।
ಮಿಂದು ಖದ್ದರಿಂದು ಉಡು
ಗಾಂಧಿಗೊಂದು ಹೂವು ಇಡು
ತಕ್ಕೋ ಕೈ, ಇಕ್ಕೋ ಕೈ
ತಟ್ಟು ಚಪ್ಪಾಳೆ ಪುಟ್ಟಮಗು ।
ಆಡು ಹಾಲು ಹೆಸರು ಖೀರ
ಬೇವು ಚಟ್ನಿ ಗೋಧಿ ರೊಟ್ಟಿ
ಅಷ್ಟು ನೀರು ಅವನಿಗಿಡು
ತಟ್ಟು ಚಪ್ಪಾಳೆ ಪುಟ್ಟಮಗು ।
ಇಂಡಿಯದ ಮಗುವು ಗಾಂಧಿ
ಇಂಡಿಯದ ದೀಪ ಗಾಂಧಿ
ಕಂಡು ಅವನ ಕುಣಿವ ಬಾರೋ
ತಟ್ಟು ಚಪ್ಪಾಳೆ ಪುಟ್ಟಮಗು

## ರಾಷ್ಟ್ರಧ್ವಜ

ಬನ್ನಿರಿ ಎಲ್ಲರು ಧ್ವಜದಡಿಗೆ
ವಂದನೆ ಸಲ್ಲಿಸುವ ಈ ಗುಡಿಗೆ
ಭಾರತಮಾತೆಯ ಲಾಂಛನ ಈ ಧ್ವಜ
ರಾಷ್ಟ್ರದ ಹಿರಿಮೆಯ ಸಂಕೇತ
ತ್ಯಾಗವ, ಸತ್ಯವ, ಶಾಂತಿಯ ತತ್ವವ
ಸಾರುವ ಗುಡಿ ಜಗವಿಖ್ಯಾತ

## ಗಾಂಧಿ ತಾತ

ಬಲಗೈಯಲ್ಲಿ ಗೀತೆ, ಎಡಗೈಯಲ್ಲಿ ರಾಟೆ
ಹಿಡಿದವರ್‍ಯಾರು ಗೊತ್ತೆ?
ಅವರೇ ನಮ್ಮ ಗಾಂಧಿ! ಶ್ರೀ ಮಹಾತ್ಮಗಾಂಧಿ ।
ಕೈಯಲ್ಲೊಂದು ಕೋಲು, ಅವರಿಗಿಲ್ಲ ಸೋಲು
ಅಂಥವರ್‍ಯಾರು ಗೊತ್ತೆ
ಅವರೇ ನಮ್ಮ ಗಾಂಧಿ!ಶ್ರೀ ಮಹಾತ್ಮಗಾಂಧಿ।।
ಮಕ್ಕಳಿಗೆಲ್ಲಾ ತಾತ, ವಿಶ್ವಕ್ಕೆಲ್ಲ ದಾತ
ಅಂಥವರ್‍ಯಾರು ಗೊತ್ತೆ
ಅವರೇ ನಮ್ಮ ಗಾಂಧಿ। ಶ್ರೀ ಮಹಾತ್ಮ ಗಾಂಧಿ

## ರಾಜ್ಯೋತ್ಸವ

ಇಂದು ನವೆಂಬರ್ ಒಂದು
ಇಂದಾದೆವು ನಾವೆಲ್ಲರು ಒಂದು
ನಮ್ಮಯ ತಾಯ್ನಾಡು ಒಂದು
ತಾಯಿಗೆ ಗೌರವ ತಂದು
ನುಡಿಯಿರಿ ಕನ್ನಡ ಎಂದು
ಬೇಡುವೆನೀಪರಿ ಇಂದು

## ಹೂಗಳು, ಹೂದೋಟ, ಚಿಟ್ಟೆಗಳು, ತರಕಾರಿಗಳು

### ಹೂವಿನ ಜೇನಿಗೆ ತುಂಬಿಯ ಆಟ

ಕಬ್ಬಿನ ರಸಕೆ
ಇರುವೆಯ ಕಾಟ
ಹೂವಿನ ಜೇನಿಗೆ
ತುಂಬಿಯ ಆಟ ॥
ಸಂಪಿಗೆ ಕಂಪಿಗೆ
ಹಾವಿನ ಕಾಟ
ಚಂದದ ಗಂಧಕೆ
ಅದರ ಆಟ ॥
ಗುಲಾಬಿ ಚಂದಕೆ
ಜನಗಳ ನೋಟ
ಮಲ್ಲಿಗೆ ಅಂದಕೆ
ಮಕ್ಕಳ ಆಟ ॥
ಹೂವಿನ ತೋಟ
ಮನೆಗೇ ಮಾಟ
ಹಣ್ಣಿನ ತೋಟ
ಊರಿಗೆ ಊಟ ॥
ಹೂವಿನ ತೋಟಕೆ
ಜನ ಕಾದಾಟ
ಹಣ್ಣಿನ ತೋಟಕೆ
ನರಿ ನುಗ್ಗಾಟ

### ಚಿಟ್ಟೆಯೊಡನೆ

ಬಣ್ಣದ ಚಿಟ್ಟೇ ತೇಲುವ ತಟ್ಟೇ
ಒಮ್ಮೆಗೆ ಇಲ್ಲಿಗೆ ಬರ್ತೀಯಾ?
ಈ ಕಡೆ ಬಂದು ಈ ದಿನವೊಂದು
ಮನೆಯಲಿ ನನ್ ಜೊತೆ ಇರ್ತೀಯಾ? ।
ಬಂದರೆ ಮನೆಗೆ ಬಂದಿದೆ ನಿನಗೆ
ಪ್ರಶ್ನೆಯು ನನ್ನದು ಕೇಳ್ತೀಯಾ?
ಹೂಗಳ ದೋಸ್ತಿ ನಿನಗಿದೆ ಜಾಸ್ತಿ
ಏನಿದು ಗುಟ್ಟು ಹೇಳ್ತೀಯಾ?
ಹೂಗಳ ಬಿಟ್ಟು ಪ್ರೀತಿಯನ್ನಿಟ್ಟು
ನನ್ನೊಡನಾಡಲು ಬರ್ತೀಯಾ? ।
ನೀ ಬರುವಂದು ನನಗೂ ಒಂದು
ರಂಗಿನ ಅಂಗಿಯ ತರ್ತೀಯಾ?
ಅಂಗಿಯ ತಂದು ನೀಡಲು ಎಂದೂ
ನಿನ್ನನು ನೆನಪಲಿ ಇಟ್ಟೇನು
ಬಿಸ್ಕತು, ಬ್ರೆಡ್ಡು, ಹೋಳಿಗೆ, ಲಡ್ಡು
ಎಲ್ಲವ ನಿನಗೂ ಕೊಟ್ಟೇನು

### ಸುಮದ ಮೇಲೆ ಹಿಮ

ಘಂ!ಘಮ!ಘಮ!
ಗಿಡದ ತುಂಬ ಸುಮ!
ಸುಮದ ಮೇಲೆ
ನಲಿದು ತೇಲಿ
ಮಣಿಗಳಂತೆ ಹಿಮ !

### ಪಾತರಗಿತ್ತಿ

ಹಾರುತ ಬಂದಿತು
ಪಾತರಗಿತ್ತಿ
ಆ ಕಡೆ ಈ ಕಡೆ
ಹೂಬನ ಸುತ್ತಿ
ಬಣ್ಣದ ರೇಶಿಮೆ
ಅಂಗಿಯ ತೊಟ್ಟು
ಅರಳಿದ ಹೂವಿಗೆ
ಮುತ್ತನು ಕೊಟ್ಟು
ಇರದೋ ಇದಕೆ
ಶಾಲೆಯ ಚಿಂತೆ?
ಹೊವದು ಪಾಟಿ
ಚೀಲದ ಕಂತೆ ?

ಸಂಜೆಯವರೆಗೆ
ಬರಿ ತಿರುಗಾಟ
ಹೂವಿನ ಬನದಲಿ
ಹಬ್ಬದ ಊಟ!
ಮೋಹಕ ರೂಪದಿ
ಮಕ್ಕಳ ಸೆಳೆದು
ಮುಟ್ಟಲು ಹೋಗ್ವದು
ನೂರಡಿ ನೆಗೆದು

## ಹೂವುಗಳು ನಾವ್ ಹೂವುಗಳು

ಹೂಗಳೆ ಎಲ್ಲರು ಇರುವೆವು ನಾವು
ಈಗಲೆ ಬನ್ನಿರಿ ನೋಡಿರಿ ನೀವು
ಹಳದಿಯು ಬಿಳುಪೂ ಕೆಂಪು ಹಸುರೂ
ಬಗೆ ಬಗೆ ಬಣ್ಣವು ಬಗೆ ಬಗೆ ಹೆಸರು
ದೊಡ್ಡವು ಸಣ್ಣವು ಗಾತ್ರವು ನೂರು
ಜಾತಿಗಳೆಷ್ಟೋ ಬಲ್ಲರು ಯಾರು?
ಪರಿಮಳದಲಿ ಮನ ಸೆಳೆವವು ಹಲವು
ಮದ್ದಿನ ಗುಣಗಳು ಇರುವವು ಕೆಲವು

## ಘಮ! ಘಮ! ಘಮ!

ಘಂ!ಘಮ!ಘಮ!
ಗಿಡದ ತುಂಬ ಸುಮ!
ಸುಮದ ಮೇಲೆ
ನಲಿದು ತೇಲಿ
ಮಣಿಗಳಂತೆ ಹಿಮ!
ತುಂಬು ನೀರಕೆರೆ!
ಸಣ್ಣ ಪುಟ್ಟ ತೆರೆ!
ತೆರೆಗಳಲಿ
ಹೊರಹೊರಳಿ
ನಮಗೆ ಈಗ ರಜ!
ಅದೇ ಬಹಳ ಮಜ!
ಬಳಪ ಬರಹ
ಅದರ ತರಹ
ಕೆಲಸ ಎಲ್ಲ ಮಜ!

## ಘಮ ಘಮ ಗುಲಾಬಿ

ಬೇಕೇ ಬೇಕೇ ಘಮಘಮ ಗುಲಾಬಿ
ಕೊಳ್ಳಿರಿ ಎನ್ನುತ ಮಸ್ತಾನ್ ಸಾಬಿ
ಕೂಗುತಲಿದ್ದನು. ಬೀದಿಯಲಿ ।
ಸೋಮನು ಸಾಬಿಯ ಬಿಳಿ ಸಾರಿ
ಗುಲಾಬಿ ಕಂಪನು ಮೂಗಲಿ ಹೀರಿ
ನಡೆಯುತಲಿದ್ದನು ಬೀದಿಯಲಿ ।
ಎಲೆ ಎಲೆ ಹುಡುಗ ಬಾಬಾ ಸಾಗಿ
ಕನಸು ಕೊಡು ನೀ ವಾಸನೆಗಾಗಿ
ಎಂದನು ಸಾಬಿ ತವಕದಲಿ ।
ಸೋಮನು ಸಾಬಿಯ ಹತ್ತಿರ ಬಂದು
ಕಾಸಿನ ಚೀಲ ಗಲಗಲ ಎಂದು
ಕುಲುಕುತ ನಿಂತನು ಅವನ ಬಳಿ ।
ಗುಲಾಬಿ ಕಂಪನು ಹೀರಿದೆ ನಾನು
ಕಾಸಿನ ಸದ್ದನು ಕೇಳಿದೆ ನೀನು
ಎನ್ನುತ ಸಾಗಿದ ಹಾದಿಯಲಿ

## ಬೇಕೇ ಬೇಕೇ ತರಕಾರಿ

ತರಹೆವಾರಿ ತರಕಾರಿ
ಬೆರಳನು ಹೋಲುವ ಬೆಂಡೆಕಾಯಿ
ಹಾವನು ಹೋಲುವ ಪಡವಲಕಾಯಿ
ಸ್ತಂಭಾಕಾರದ ನುಗ್ಗೆಕಾಯಿ
ಗೋಳಾಕಾರದ ನಿಂಬೆಕಾಯಿ ।
ಅಮ್ಮನು ಬೇಡುವ ಅವರೆಕಾಯಿ
ಅಪ್ಪನ ಆಸೆಯ ಅಮಟೆಕಾಯಿ
ಅಜ್ಜಿಯ ಕೋರುವ ಹಾಗಲಕಾಯಿ
ಅಜ್ಜನು ಮೆಚ್ಚುವ ಕುಂಬಳಕಾಯಿ

ಬಜ್ಜಿಗೆ ಬೇಕು ಬದನೆಕಾಯಿ
ತೊವ್ವೆಗೆ ಬೇಕು ಹೀರೆಕಾಯಿ
ಪಲ್ಯಕ್ಕೆ ಬೇಕು ಹುರುಳಿಕಾಯಿ
ಕೂಟಿಗೆ ಬೇಕು ಸೌತೆಕಾಯಿ ।
ಕಣ್ಣೀರಿಡಿಸುವ ನೀರುಳ್ಳಿ
ಕಂಪನು ಬೀರುವ ಕರಿಬೇವು
ಘಮಘಮ ಎನ್ನುವ ಕರಿಬೇವು
ನೀರನು ಕುಡಿಸುವ ಮೆಣಸಿನಕಾಯಿ

## ಕುಂಬಳ

ಬುಟ್ಟಿಯಲ್ಲಿ
ಕುಳಿತುಕೊಂಡು
ಸಂತೆಗ್ಹೋಯ್ತು ಕುಂಬಳ
ಹೊತ್ತು ತಂದ
ತಿಮ್ಮನೆಂದ
'ಎಲ್ಲಿ ನನ್ನ ಸಂಬಳ?'

## ಚೆಲುವಿನ ಹೂವೆ

ಚೆಲುವಿನ ಹೂವೆ, ಮಲ್ಲಿಗೆ ಹೂವೆ
ಎಲ್ಲರ ಮನವನು ನೀ ಸೆಳೆವೆ
ನಮ್ಮಯ ತೋಟದಿ ನೀ ಬೆಳೆವೆ
ಎಲ್ಲರ ಮುಡಿಯಲಿ ನೀನಿರುವೆ

# ಹಬ್ಬ

## ದೀಪಾವಳಿ

ಬಂದಿತು ಬಂದಿತು ದೀಪಾವಳಿ
ತಂದಿತು ಸಂತಸ ದೀಪಾವಳಿ
ಮಕ್ಕಳ ಬೆಡಗಿನ ದೀಪಾವಳಿ
ಮನೆ – ಮನ ಬೆಳಗುವ ದೀಪಾವಳಿ ।
ಬಂದಿತು ಬಂದಿತು ದೀಪಾವಳಿ
ಸುಟ್ಟಿತು ದುಡ್ಡನು ದೀಪಾವಳಿ
ಕಿವಿಗಡಚಿಕ್ಕುವ ದೀಪಾವಳಿ
ತಾತನು ಬೆಚ್ಚುವ ದೀಪಾವಳಿ
ಬಂದಿತು ಬಂದಿತು ದೀಪಾವಳಿ
ಮದ್ದಿನ ಗದ್ದಲ ದೀಪಾವಳಿ
ಸದ್ದಿನ ಸುರಿಮಳೆ ದೀಪಾವಳಿ
ಢಂ ಢಂ ಎಂದಿತು ದೀಪಾವಳಿ ।।
ಬಂದಿತು ಬಂದಿತು ದೀಪಾವಳಿ
ಸಡಗರ ತುಂಬಿತು ದೀಪಾವಳಿ
ಸರಿಸಿತು ಕತ್ತಲೆ ದೀಪಾವಳಿ
ಚೆಲ್ಲಿತು ಬೆಳಕನು ದೀಪಾವಳಿ

## ದಸರೆ ಹಬ್ಬ

ಹೆಜ್ಜೆಯ ಹಾಕುತ ಬನ್ನಿರಿ ಮುಂದೆ
ನೋಡಲು ದಸರೆಯ ಹಬ್ಬವನು
ಗೆಜ್ಜೆಯ ಕಟ್ಟಿ ಕುಣಿಯುವ ಬನ್ನಿ
ನಾಡಿನ ಹಾಡನು ಹಾಡುವ ಬನ್ನಿ
ಕನ್ನಡ ಕವಿಗಳ ದೇವಿಯ ನೋಡುವ ಬನ್ನಿ
ದರ್ಶನ ಮಾಡುವ ಬನ್ನಿ
ಡೊಂಬರ ಕುಣಿತ ದುರ್ಗಿಯ ಮೆರೆತ
ನೋಡುವ ಬನ್ನಿ ಗೆಳೆಯರ ಸಹಿತ
ನಗುಮುಖ ಹೊತ್ತು ಬನ್ನಿರಿ ಮುಂದೆ
ನೋಡಲು ದಸರೆಯ ಹಬ್ಬವನು

# ಜೀವಿಗಳು, ಪ್ರಾಣಿಗಳು, ಸಾಕುಪ್ರಾಣಿಗಳು, ಕಾಡುಪ್ರಾಣಿಗಳು

## ಗೋಡೆ ಮೇಲಿನ ಹಲ್ಲಿ

ಯಾಕೆ ಕುಳಿತೆ ನೀನಲ್ಲಿ?
ಆಗೀಗೊಮ್ಮೆ ಹಾಡುತ್ತೀಯಾ
'ಲೊಚ್ಚು ಲೊಚ್ಚು ಲೊಚ್ಚು'
ಕತ್ತು ಉದ್ದ ಚಾಚಿ
ಸೊಳ್ಳೆ ಜಿರಲೆ ಬಾಚಿ

ಗುಳುಂ ಮಾಡುತಿ ; ಸೇರದೆ ನಿನಗೆ

ಸಿಹಿ ಬೆಲ್ಲದಚ್ಚು

## ಸೊಕ್ಕಿನ ಬೆಕ್ಕು

ಅಕ್ಕನಿಗಿರಿಸಿದ ಸಕ್ಕರೆ ಹಾಲನು

ನಕ್ಕುತ ಕುಡಿಯಿತು ಬೆಕ್ಕು

ಬಿಕ್ಕುತ ಬಿಕ್ಕುತ ಅಕ್ಕ ಎಂದಳು

'ಬೆಕ್ಕೆ, ನಿನಗೆ ಬಲು ಸೊಕ್ಕು'

## ಗುಳ್ಳೇನರಿ

ಮರಿಯೇ ಮರಿಯೇ!

ಸಿಂಹದ ಮರಿಯೇ!

ಏನನು ತಿನ್ನುವೆ ಮುದ್ದು ಮರಿ?

'ನರಿಯೇ! ನರಿಯೇ!'

ಗುಳ್ಳೆನರಿಯೇ!

ತಿನ್ನತಲಿರುವೆನು ಕಡಲೆಪುರಿ!

'ಮರಿಯೇ!ಮರಿಯೇ!

ಸಿಂಹದ ಮರಿಯೇ!'

ನನಗೂ ಕೊಡುವೆಯ ಕಡಲೆಪುರಿ?

'ನರಿಯೇ! ನರಿಯೇ!'

ಗುಳ್ಳೆ ನರಿಯೇ

ಕೊಡುವೆನು ಕೂರೊ ಗುಳ್ಳೆನರಿ!

'ಮರಿಯೇ ಮರಿಯೇ!

ಸಿಂಹದ ಮರಿಯೇ!'

## ಢಂ ಢಂ ಡಿಗಾರಿ

ಢಂ ಢಂ ಡಿಗಾರಿ

ಹೊಡೀ ನಗಾರಿ

ಓಡಿ ಬರುತ್ತಿದೆ ಹೋರಿ!

ಶೀನು ಹುಷಾರಿ,

ನಾಣಿ ಪರಾರಿ,

ಸುಬ್ಬು ಕಿತ್ತನು ಫೇರಿ!

## ದೊಡ್ಡ ಪಟ್ಟೆ ಹುಲಿ

ಗುಡ್ಡದ ಆಚೆ ದೊಡ್ಡನೆ ಕಾಡು,

ಭಾರಿ ಪಟ್ಟೆ ಹುಲಿ!

ಅಡ್ಡ ಹರಿಯುವ ಹೊಳೆಯನು ಈಜಿ

ಬಂದಿತು ಊರ ಬಳಿ

## ನಾಯಿಮರಿ

'ನಾಯಿಮರಿ ! ನಾಯಿಮರಿ!'

ತಿಂಡಿಬೇಕೇ?

'ತಿಂಡಿ ಬೇಕು! ತೀರ್ಥಬೇಕು'

ಎಲ್ಲಬೇಕು

ನಾಯಿಮರಿ! ನಿನಗೆ ತಿಂಡಿ

ಏಕೆ ಬೇಕು

ತಿಂದು ಗಟ್ಟಿಯಾಗಿ ಮನೆಯ

ಕಾಯಬೇಕು!

ನಾಯಿಮರಿ!ಕಳ್ಳ ಬಂದರೇನು

ಮಾಡುವೆ?

ಲೊಳ್! ಲೊಳ್ !ಬೌ ಎಂದು

ಕೂಗಿಯಾಡುವೆ!

'ಜಾಣ ಮರಿ! ತಾಳು !ಹೋಗಿ

ತಿಂಡಿ ತರವೆನು

'ತಾ! ನಿನ್ನ ಮನೆಯ ನಾನು

ಕಾಯುತಿರುವೆನು'

ನಾಯಿ – ಬೆಕ್ಕು

ನಾನು ಬೆಕ್ಕು! ನೀನು ನಾಯಿ!

ಚೂಟ್ ಚೂಟ್ ಚೂಟ್

ಮೊದಲೆ ಬಂದು ಹಿಡಿಯಬೇಡ

ಹೇ !ಅಂಬಾಲ್

ತೆಂಗಿನ ಮರ ಅಜ್ಜಿಯಪ್ಪ

ಚೂಟ್ ಚೂಟ್ ಚೂಟ್

ಅಜ್ಜಿ ಮುಟ್ಟಿ ನಿಂತಿದ್ದೇನೆ

ಹೇ!ಅಂಬಾಲ್

ಚೂರು ರೊಟ್ಟಿ ನೀನು  ತಿನ್ನು !
ಚೂಟ್ ಚೂಟ್ ಚೂಟ್
ಜಾರಿಬಿದ್ದೆ! ಕೊಂಚ ತಾಳು !
ಹೇ! ಅಂಬಾಲ್!
ಟಾಮಿ ಟಾಮಿ ಮುಟ್ಟು ಬಂದು!
ಚೂಟ್ ಚೂಟ್ ಚೂಟ್
ಸಿಕ್ಕಲಿಲ್ಲ ನಾನು ನಿನಗೆ
ಹೇ!ಅಂಬಾಲ್!

## ಆನೆ

ಆನೆ ಬಂತೊಂದು ಆನೆ
ನೋಡ ಬನ್ನಿ ಆನೆ
ಗಿಡ್ಡ ಕಾಲಿನಾನೆ
ದೊಡ್ಡ ಹೊಟ್ಟೆಯಾನೆ
ಕಪ್ಪು ಬಣ್ಣದಾನೆ
ಸಣ್ಣ ಕಣ್ಣಿನಾನೆ
ಅಗಲ ಕಿವಿಯಾನೆ
ಉದ್ದ ಸೊಂಡಿಲಾನೆ
ಚೂಪು ದಂತದಾನೆ
ಶಕ್ತಿಶಾಲಿಯಾನೆ
ಆನೆ  ಬಂತೊಂದು ಆನೆ

## ಕರಡಿ ಕಥೆ

ಕರಡಿ ಬೆಟ್ಟ ಹತ್ತಿತ್ತು
ಅತ್ತ ಇತ್ತ ನೋಡಿತು
ಹಲಸಿನ ಮರ ಏರಿತು
ಹಣ್ಣುಕಿತ್ತು ತಂದಿತು
ತೊಳೆ ಬಿಡಿಸಿ ಇಟ್ಟಿತು
ಅದಕೆ ಜೇನು ಬೆರೆಸಿತು
ಹೊಟ್ಟೆ ಬಿರಿಯೆ ತಿಂದಿತು
ಮಲಗಿ ನಿದ್ದೆ ಹೊಡೆಯಿತು

## ನನ್ನ ಬೆಕ್ಕು

ಬೆಕ್ಕು ಬೆಕ್ಕು ಬೇಗ ಬಾ
ಬೆಣ್ಣೆ ಮುದ್ದೆ ತಿಂದು ಬಾ
ಕದ್ದು ಹಾಲು ಕುಡಿದು ಬಾ
ತಿಂದು ತೇಗಿ ಜಿಗಿದು ಬಾ
ಎದ್ದು ಬಿದ್ದು ಓಡಿ ಬಾ
ಇಲಿಗಳ ಸಡಗರ ನೋಡು ಬಾ
ಬಿಲಿಗಳ ಬಳಿಯಲಿ ನಿಲ್ಲು ಬಾ
ಅಪ್ಪಿಲಿ ಅಮ್ಮಿಲಿ ತೋರುವೆ ಬಾ
ಅವ್ವಿಲಿ ಅಜ್ಜಿಲಿ ಕಾಣುವೆ ಬಾ
ಸದ್ದು ಗದ್ದಲ ಮಾಡದೆ ಬಾ
ಜೋಡಿಲಿ ಹಿಡಿದು ಆಡುವ ಬಾ
ಚೆಂಡಿನಾಟವ ತೋರುವೆ ಬಾ
ಮಂಚವನೇರಿ ಮಲಗುವ ಬಾ

## ನರಿಯ ಸಾಹಸ

ನರಿಯು ಕಂಡಿತು ದ್ರಾಕ್ಷಿಹಣ್ಣನು
ಎಟುಕ ಸಿಕ್ಕದೆ  ಎಗರಿ ನೋಡಿತು
ಕಾಲು ನೋಯಿತು ಬಳಲಿ ಸೋತಿತು
ಹಣ್ಣು ಹುಳಿಯೆಂದು ಕೂಗಿ ಹೇಳಿತು
ತೋಟಗಾರನ ಧ್ವನಿಯ ಕೇಳಿತು
ಅವನ ಕಂಡೊಡೆ ಓಡಿ ಹೋಯಿತು

## ಮುದ್ದಿನ ಬೆಕ್ಕು

ಬೆಕ್ಕೆ ಬೆಕ್ಕೆ
ಮುದ್ದಿನ ಬೆಕ್ಕೆ
ಎಲ್ಲಿಗೆ ಹೋಗಿದ್ದೆ?
ಅಮ್ಮನು ಇಲ್ಲದ
ಸಮಯವ ಕಾದು
ಏನನು ಕದ್ದಿದ್ದೆ?
ಅರಮನೆಯೊಳಗಿನ
ಬೆಣ್ಣೆ ಕದ್ದು
ಎಲ್ಲಿ ಅವಿತಿದ್ದೆ?
ಹಾಲು ಮೊಸರು

ಬೆಣ್ಣೆ ತುಪ್ಪ
ಕದ್ದು ಸವಿದಿದ್ದೆ!
ಅಮ್ಮನು  ಸಿಟ್ಟಲಿ
ಬಡಿಯಲು ಬಂದಳು
ಎಲ್ಲಿಗೆ ಓಡಿದ್ದೆ?
ಅಪ್ಪನು ಬಂದು
ಸಿಟ್ಟಿಂದ್ ಹೊಡೆದಾ
ಪೆಟ್ಟಾಯಿತು ನಿಂಗೆ ?
ಕಳ್ಳತನ ಒಂದು
ತಪ್ಪು ಎಂದು
ಗೊತ್ತಿಲ್ವೆ ನಿಂಗೆ?
ನೀತಿ ಪಾಠವ
ಕಲಿಯದೆ ಹೋದರೆ
ಆಗೋದೆ ಹಿಂಗೆ
ದೊಡ್ಡ ಪಟ್ಟೆ ಹುಲಿ
ಕಾಡುದಾರಿಯಲಿ
ನಡುಗಿ ನಿಂತು
ಹೇಳಿತಿಂತು
'ಅಯ್ಯೋ! ಅಪ್ಪ!ಚಳಿ!'

## ಪುಟಾಣಿ ಗುಬ್ಬಿ

ಪುಟಾಣಿ ಗುಬ್ಬಿ
ಚಟಾಣಿ ಗುಬ್ಬಿ
ಬಾ ಬಾ ಗುಬ್ಬಿ
ಬೆಲ್ಲ ಕೊಡುವೆ ।।1।।
ಹೂವಿನ ಗುಚ್ಚ
ಬಿಳಿಯ ಪುಚ್ಚ
ಪುರ್ ಅಂತಾ
ಹಾರಿ ಬಾರಾ ।।2।।
ಬಾನಿನ ತುಂಬಾ
ಕಾಮನಬಿಲ್ಲು
ಬಣ್ಣ ಹಚ್ಚಿ
ಕುಣಿಯೋಣ ಬಾರಾ ।।2।।
ಉಂಡಿ ಬೆಲ್ಲ
ಹಂಚಿ ಎಲ್ಲಾ
ಕೂಡಿ ತಿಂದು
ನಲಿಯೋಣ ಬಾರಾ ।।4।।

## ನನ್ನ ನಾಯಿ

ನಾಯಿ ಬಂತು ನಾಯಿ
ಮನೆಯನು ಕಾಯುವ ನಾಯಿ
ಕಂದು ಬಣ್ಣದ ನಾಯಿ
ನನ್ನಯ ಮುದ್ದಿನ ನಾಯಿ
ಆಟಕೆ  ಕರೆಯಲು ನಾನು
ಜಿಗಿಯುತ ಬರುವುದು ತಾನು
ಬೌ ಬೌ ಎನ್ನುತ ಕಾಲನು  ಕುಣಿಸುತ
ನಂಬಿದ ಸ್ನೇಹಿತನಾಗುವ ನಾಯಿ

## ಬೆಕ್ಕು ನಾಯಿ ಮೊಲ

ಬೆಕ್ಕು ನಾಯಿ ಮೊಲ ಅಂದ್ರೆ
ಬಾಳ ಇಷ್ಟ ನನಗೆ
ಮುದ್ದು ಮಾಡಿ ಕರದ್ರೆ ಬಡಿ
ಬಂದೇ ಬಿಡ್ತಾವ್ ಒಳಗೆ
ಬೆನ್ನು ಸವರಿ, ಕತ್ತು ಸರಿಸಿ
ತಿಂಡಿ ತಟ್ಟೆ ಇಡಲು
ತಿಂದು ಕೈಯ ನೆಕ್ಕುತ್ತಾವೆ
ಮಾಡುತ್ತಾವೆ ಮರುಳು
ಬಾಲ ಆಡಿಸುತ್ತಾ ಬಂದು
ಮೈಗೆ ಮೈಯ ತೀಡಿ

ನೋಡುತ್ತಾವೆ ಥ್ಯಾಂಕ್ಸ್ ಅನ್ನೋ
ಹಾಗೆ ಮೂತಿ ಮಾಡಿ
ತೊಡೆ ಮೇಲೆ ಮಲಗಿಕೊಂಡು
ಏನೋ ಆಟ  ಆಡ್ತಾವೆ
ಪಾಪ!ಅವುಗಳನ್ನು ಎಲ್ಲೋ
ಕೇಳುವಂತೆ ನೋಡ್ತಾವೆ
ಇನ್ಮೇಲೆ ನಾನೇ ಅವುಗಳಿಗೆಲ್ಲ
ಅಮ್ಮ ಆಗಿಬಿಡ್ತೀನಿ
ಹಾಲು ಕೊಟ್ಟು ಚಿನ್ನ ರನ್ನ
ಅಂತ ಮುದ್ದು ಮಾಡ್ತೀವಿ

## ಹಾವು ಬಂತು ಹಾವು

'ಹಾವು ಬಂತು! ಹಾವು ಬಂತು'
ರಂಗನಾಥ!
ಹಾಸಿಕೊಂಡು ಮಲಗಿ ಬಿಟ್ಟ
ರಂಗನಾಥ!
ಹಾವು ಬಂತು! ಹಾವು ಬಂತು!
ಕೃಷ್ಣ ಮೂರುತಿ!
ಹೆಡೆಯ ಹತ್ತಿ ಧಿಮಿ ಧಿಮಿ!
ಕೃಷ್ಣ ಮೂರುತಿ!
ಹಾವು ಬಂತು! ಹಾವು ಬಂತು!
ಸದಾಶಂಕರಾ!
ಹಲ್ಲು ಮುರಿದು ತೋಳು ಬಳೆ !
ಸದಾಶಂಕರಾ!

## ಮಂಗಣ್ಣ

ಮರದ ಮೇಲಿಹ ಮಂಗಣ್ಣ
ಹಣ್ಣನು ಕೊಡುವೆನು ಬಾರಣ್ಣ
ಕಣ್ಣನು ಪಿಳಿಕಿಸಿ ನೋಡಣ್ಣ
ಪರಪರ ಮೈಯನು ಕೆರೆಯಣ್ಣ
ಚಟಪಟ ಲಾಗವ ಹಾಕಣ್ಣ
ಹಲ್ಲನು ಕಿರಿದು ಅರಚಣ್ಣ
ಚಂಗನೆ ಹಾರಿ ಕುಣಿಯಣ್ಣ
ಹಣ್ಣನು ಹಿಡಿದು ಓಡಣ್ಣ

## ನಾಯಿ ಮರಿ ಮದುವೆ

ನಾಯಿಮರಿ ಸೇರಿತು
ಮದುವೆ ಜೋರು ಆಯಿತು
ಕುದುರೆ ಕುಣಿತ ಸಾಗಿತು
ಕಾಗೆ ಕಾಕಾ ಎಂದಿತು
ಗುಬ್ಬಿ ತಾಳ ಹಾಕಿತು
ಮಂಗ ಡೋಲು ಬಡಿಯಿತು
ಕತ್ತೆ ಮೇಳ ಊದಿತು
ಮಳೆಯು ಜೋರು ಬಂದಿತು.

# ಪಕ್ಷಿಗಳು

## ಕರ್‍ರಗಿರುವ ಕಾಗೆ

ಕರ್‍ರಗಿರುವ ಕಾಗೆಯೊಂದು
ಸರ್‍ರೆಂದು ಮೇಲೆ ಹಾರಿ
ಗಿರ್‍ರೆಂದು ಸುತ್ತಿ ತಿರುಗಿ
ಕೆಳಗೆ ಜಾರಿತು
ಕರ್‍ರೆಂದು ಕೂಗಿಕೊಂಡು
ಜರ್‍ರೆಂದು ಜಾರುವಾಗ
ಸರ್‍ರೆಂದು ಅದರ ರೆಕ್ಕೆ
ಹರಿದುಹೋಯಿತು!

## ಹಕ್ಕಿ

ಬಣ್ಣದ ರೆಕ್ಕೆ –
ಬಂತು ಮರಿ ಹಕ್ಕಿ!
ಬಣ್ಣದ ಚುಕ್ಕಿ
ಬಂತು ಮಿರುಚಿಟ್ಟೆ!
ಬಂತು ನಿಂತು –
ನಿಲ್ಲದೆ ಹಾರಿಹೋಯ್ತು!

## ಗಿಳಿರಾಮ

ಬಾರೋ
ಗಿಳಿಯ ರಾಮ
ಹೆಸರು
ಬಲರಾಮ
ಹಸಿರು
ಮೈಯಬಣ್ಣ
ತಿನ್ನು
ಬಾರೋ ಹಣ್ಣ
ಕೊಕ್ಕೆ
ಪೂರಾ ಕೆಂಪು
ಶಾಲು
ಕಂದು ಗುಂಪು
ರೆಕ್ಕೆ
ಬಡಿದು ಪಟ ಪಟ
ಹಾರು
ಮುಗಿಲ ಪುಟಾಮಟಾ

## ಗುಬ್ಬಚ್ಚಿ ಗೂಡು

ನೋಡಬಾರ ಸುಬ್ಬಿ
ಹಾಡತ್ತೈತಿ ಗುಬ್ಬಿ
ಬಡಿದು ಬಿಳಿಯ ಪುಕ್ಕ
ಹಾರತ್ತೈತಿ ಅಕ್ಕ ॥
ಗರಿಯ ಬಿಚ್ಚಿ ಹಾರಿ
ಗಾಳಿಯೊಳಗೆ ತೂರಿ ।
ನಕ್ಕು ಲಾಗ ಹಾಕಿ
ತೇಲತ್ತೈತಿ ಬೆರಕಿ॥
ಗಾಳಿ ಕೂಡ ಹಗುರ
ಈಸೋದಿಲ್ಲ ಎದುರ ।
ತಂತಿಮ್ಯಾಲೆ ಕುಂತು
ನುಡಿಯ ನಾದ ತಂತು।
ಬಣ್ಣ ಬಣ್ಣದ ಹೂವ
ನೋಡಿರೇನ ಅವ್ವ।
ಗುಬ್ಬಿ ಹಾರಿ ಹೋಗಿ
ಅದರ  ತಳಗ ಬಾಗಿ॥
ಗಂಧ ಬೆಳೆದುಕೊಂಡು
ಚೆಂದ ಹಾಡಿಕೊಂಡು
ಹೂ ತೂಗಿ ಮತ್ತ
ಮಾಡತ್ತೈತಿ ಗತ್ತ॥

## ಬಣ್ಣದ ಹಕ್ಕಿ

ಬಾರೆಲೆ ಹಕ್ಕಿ ಬಣ್ಣದ ಹಕ್ಕಿ
ಬಾರೆಲೆ ಹಕ್ಕಿ ಬಣ್ಣದ ಹಕ್ಕಿ
ಗೆಳೆಯರು ಆಡಲು ಯಾರು ಇಲ್ಲ
ಕಳೆಯುವದೆಂತು ವೇಳೆಯನೆಲ್ಲ
ಬಾ ಬಾ ನನಗೂ ಹಾಡಲು ಕಲಿಸು
ಬಾ ಬಾ ನನಗೂ ಹಾರಲು ಕಲಿಸು
ಅವ್ವನು ನೀರಿಗೆ ಹೋಗಿಹಳು
ಅಪ್ಪನು ಪೇಟೆಗೆ ಹೋಗಿಹನು
ಅವ್ವನು ಬರಲಿ ಅಪ್ಪನು ಬರಲಿ
ತಿನ್ನಲು ಹಣ್ಣನು ಕೊಡಿಸುವೆನು
ನನಗೂ ಎರಡೂ ರೆಕ್ಕೆಯ ಹಚ್ಚು
ಹಿಂಗಡೆ ಬಣ್ಣದ ಪುಚ್ಚವ ಚುಚ್ಚು
ನೆತ್ತಿಯ ಮೇಲೆ ಜುಟ್ಟನು ಹಚ್ಚು
ಮೆಲ್ಲನೆ ಮೇಲೆ ಹಾರಲು ಹಚ್ಚು
ನಾನೂ ನೀನೂ ಇಬ್ಬರು ಕೂಡಿ
ಮುಗಿಲಿನ ಕಡೆಗೆ ಹಾರುವ ಬಾ
ಅಲ್ಲಿಂದಿತ್ತ ಇಲ್ಲಿಂದತ್ತ
ಹಾರುತ ಹಾಡುತ ನಲಿಯುವ ಬಾ

## ಗುಬ್ಬಿ

ಗುಬ್ಬಿ ಗುಬ್ಬಿ
ಚಿಂವ್ ಚಿಂವ್ ಎಂದು
ಕರೆಯುವೆ ಯಾರನ್ನು?
ಆಚೆ ಈಚೆ
ಹೊರಳಿಸಿ ಕಣ್ಣು
ನೋಡುವೆ ಯಾರನ್ನು?
ಮೇಲೆ ಕೆಳಗೆ
ಕೊಂಕಿಸಿ ಕೊರಳನು
ಹುಡುಕುವೆ ಏನಲ್ಲಿ?
ಕಾಳನು ಹುಡುಕುತ
ನೀರನು ನೋಡುತ
ಅಲೆಯುವೆ ಏಕಲ್ಲಿ?
ಕಾಳನು ಕೊಟ್ಟು
ನೀರನು ಕುಡಿಸುವೆ
ಆಡಲು ಬಾ ಇಲ್ಲಿ
ಹಣ್ಣನು ಕೊಟ್ಟು
ಹಾಲನು ನೀಡುವೆ
ನಲಿಯಲು ಬಾ ಇಲ್ಲಿ

## ಸುಂದರ ನವಿಲು

ಸುಂದರ ನವಿಲೆ ಚಂದದ ನವಿಲೆ
ಕೊಕ್ಕನು ಎತ್ತಿ ಪುಕ್ಕವ ಕೆದರಿ
ಮಕ್ಕಳ ಮುಂದೆ ನಿಲ್ಲುವ ಠೀವಿ
ಎಂಥಾ ಸೊಗಸು ಥಕಾಥೈ ಥಕಾಥೈ

## ಹಕ್ಕಿಯ ಹಾಡು

ಹಕ್ಕಿಯೊಂದು ಮರದ ಮೇಲೆ
ಗೂಡು ಕಟ್ಟಿತು
ಗೂಡು ಕಟ್ಟಿ ಒಳಗೆ ಕುಳಿತು
ಮೊಟ್ಟೆ ಇಟ್ಟಿತು
ಮೊಟ್ಟೆ ಒಡೆದು ಮರಿಗಳೆಲ್ಲ
ಹೊರಗೆ ಬಂದುವು
ತಾಯಿಹಕ್ಕಿ ತಂದುಕೊಟ್ಟ
ತಿನಿಸು ತಿಂದುವು
ತಿನಿಸು ತಿಂದ ಮರಿಗಳೆಲ್ಲ
ಬೆಳೆದು ಬಿಟ್ಟ ಮರಿಗಳೆಲ್ಲ
ಹಾರಕಲಿತವು
ಚಿಕ್ ಚೀವ್ ಚಿಕ್ ಚೀವ್
ಹಾಡ ಕಲಿತವು
ಹಾರ ಕಲಿತು ಹಾಡ ಕಲಿತು
ಹಾರಿಬಿಟ್ಟವು

## ಗಿಳಿಗೆ

ಗಿಳೀ ಗಿಳೀ
ಕೆಳಕ್ಕಿಳೀ
ಕೊಡುತ್ತೀನಿ ಹೋಳಿಗೆ
ಹಾಡು ಹೇಳು,
ಬೇಡವೇನು
ಬೆಳ್ಳಿ ಕಡಗ ತೋಳಿಗೇ?

## ಕಾಗೆ – ಕತ್ತೆ

ಕರ್ರಗಿರುವ ಕಾಗೆ ಊರೆ ಕೇಳೋ ಹಾಗೆ
ಅರಚುತ್ತಿತ್ತು ಒಂದೇ ಸಮನೆ ; ಕ್ರಾ ಕ್ರಾ ಕ್ರಾ!
ಭರ್ರೋ ಎಂದು ಗಾಳಿ ಬೀಸಿ, ಜಿರ್ರೋ ಎಂದು
ಮಳೆ ಸುರಿದು,
ಕತ್ತೆಯೊಂದು ಕಿರುಚುತ್ತಿತ್ತು; ಗ್ರಾ ಗ್ರಾ ಗ್ರಾ

## ಹಕ್ಕಿ ಹಾಡು

ಟಿಂವ್ ಟಿಂವ್ ಹಕ್ಕಿ
ಹಾರಿ ಲಾಗ ಹಾಕಿ
ಹುಳು ಎಲ್ಲಾ ಹೆಕ್ಕಿ
ತಿಂದೆ ಕುಕ್ಕಿ ಕುಕ್ಕಿ
ಗಾಳಿಯೊಳಗೆ ತೂರಿ

ಮುಗಿಲ ಮೇಲೆ ಹಾರಿ

ಹಿಡಿದು ಮಿಂಚು ಹುಳು

ಇಟ್ಟೆ ಗೂಡಿನೊಳು

ಗೂಡ ತುಂಬಾ ಬೆಳಕು

ಹಾರಿ ತಳಕು ಬೆಳಕು

## ನವಿಲಿನ ಕುಣಿತ

ಅತ್ತ ಇತ್ತ ತೂಗಿ ತೊನೆದು

ನವಿಲು ಕುಣಿಯಿತು!

ಮತ್ತೆ ಮತ್ತೆ ಕುಣಿದು ಅದಕೆ

ಸುಸ್ತು ಆಯಿತು

## ಬಾ ಬಾ ಗಿಣಿಯೇ

ಬಾಬಾ ಗಿಣಿಯೇ ಬಾರೆನ್ನ ಗಿಣಿಯೇ

ಹಸಿರು ಬಣ್ಣದ ಗಿಣಿಯೇ

ಹಣ್ಣು ತಿಂಬೋ ಗಿಣಿಯೇ

ಮಾವ ತಂದ ಗಿಣಿಯೇ

ಮಾತನಾಡೋ ಗಿಣಿಯೇ

ಬಾಬಾ ಗಿಣಿಯೇ ಬಾರೆನ್ನ ಗಿಣಿಯೇ

## ನಾ ಕಂಡ ಹಕ್ಕಿ

ಪುಟ್ಟ ಹ್ಕಕಿ ಗೂಡಿನಾಚೆ ಇಣಕಿ ನೋಡಿತು

ಕಾಳು ಕಂಡು ಹಾರಿಬಂದು ಮನೆಯ ಹೊಕ್ಕಿತು

ಅತ್ತ ಇತ್ತ  ಕತ್ತು ಸರಿಸಿ ಸುತ್ತ ನೋಡಿತು

ಸಣ್ಣ ಪುಟ್ಟ ಕಾಳನೆಲ್ಲ ಹೆಕ್ಕಿ ತಿಂದಿತು

ಕೂಕೂ ರಾಗ ತೆಗೆದು ನಕ್ಕು ನಲಿಯಿತು

ಪಟಪಟ ರೆಕ್ಕೆ ಬಡಿದು ಹಾರಿ ಹೋಯಿತು

ಬಾನಿನಲ್ಲಿ ಏರಿ ಏರಿ ಕಾಣದಾಯಿತು

ದೂರದೂರ ಹೋಗಿ ನನ್ನ ಮನವ ಸೆಳೆಯಿತು

# ವಾಹನಗಳು

## ಚುಕ್ ಪುಕ್ ರೈಲು

ಬನ್ನಿರಿ ಎಲ್ಲರು ಈಗಲೇ ನಾವು

ರೈಲಿನ ಆಟವ ಆಡೋಣ

ನಾನೇ ಎಂಜಿನು ನೀವೇ  ಬಂಡಿ

ರೈಲಿನ ಆಟವ ಆಡೋಣ

ಮರಿಯೂ ಆಗಲಿ ರೈಲಿನ ಗಾರ್ಡು

ಸ್ಟೇಷನ್ ಮಾಸ್ಟರ್ ರಾಮಣ್ಣ

ರಜಿಯಾ ಈಗಲೇ ಸಿಗ್ನಲ್ ಕೊಡಲಿ

ಸೀಟಿಯನೂದಲಿ ಸೋಮಣ್ಣ

ಹಸುರಿನ ಧ್ವಜವನು ತೋರಿಸಿದಾಗಲೆ

ನಮ್ಮಯ ರೈಲಿದು ಹೊರಡುವುದು

ಚುಕ್‌ಪುಕ್ ಸದ್ದನು ಮಾಡುತ ಮೆಲ್ಲಗೆ ಮುಂದಕೆ ಓಡುವುದು

## ಬಾಡಿಗೆ ಕಾರು

ಬನ್ನಿ ಓಡಿ ಉಂಟು ನೋಡಿ

ಬಂದು ಬೇಗ ಕೂಡಿ ಈಗ

ಓಡಿಸಲು ತಯಾರು

ದೂರ ಎಷ್ಟು ದುಡ್ಡು ಅಷ್ಟು

ಹೆಚ್ಚು ಕಡಿಮೆ ಇಲ್ಲ

ಧನಿಕನಿರಲಿ ಬಡವ ಬರಲಿ

ಒಂದೇ ನಮಗೆ ಎಲ್ಲ

ಪಯಣ ಮಾಡಿ ದೂರನೋಡಿ

ಕೊಟ್ಟು ಬಿಡಿರಿ ಕಾಸು

ಜಗಳಗಿಗಳ ಇಲ್ಲ ಇಲ್ಲ

ಎಲ್ಲವೂ ಸಲೀಸು

## ಬಸ್ಸಿನ ಗೋಳು

ಉಸ್ಸುಸ್ಸೆಂದು ಉಸಿರು ಬಿಟ್ಟಿತು

ಅಸ್ಸಾಮಿನ ಬಸ್ಸು!

'ಇಷ್ಟು ಜನರ ಭಾರ! ಬೆಟ್ಟವೇರಬೇಕು!

ಮುಗಿದೇ ಹೋಯಿತು ಆಯಸ್ಸು!'

ಚುಕ್ಕು ಫುಕ್ಕು ರೈಲು ಬಂತು
ಚುಕ್ಕು ಫುಕ್ಕು ರೈಲು ಬಂತು
ಸೀಟಿ ಊದುತ,
ಸಿಗರೇಟ್ ಸೇದೋ ಹಾಗೆ ಕೊಳವೀಲ್
ಹೊಗೇ ಬಿಡುಕ್ಕ!
ಎದೆ ತುಂಬ ನಿಗೀ ನಿಗೀ
ಕೆಂಡ ಇಟ್ಕೊಂಡು
ಸಾವಿರಾರು ಜನಾನ್ ತಚನ್ನ
ಹೊಟ್ಟೇಗ್ಹಾಕ್ಕೊಂಡು!
ರೈಲು ಹೋಗ್ತಾ ಇದ್ರೆ ಊರಿಗ್
ಊರೇ ಸುತ್ತುತ್ತೆ
ಮರಗಿಡ ಬೆಟ್ಟ ಎಲ್ಲ
ಓಡೋದ್ ಹೋಗತ್ವೆ
ಊರು ಬಂತೋ ರೈಲಿಗಿಷ್ಟ
ನಿಂತೇ ಬಿಡುತ್ತೆ
ನೀರು ಕುಡಿಸಿ ಮತ್ತೆ ಅದನ್
ಕಳಸ್ಬೇಕಾಗುತ್ತೆ!
ಬನ್ನಿ ಬನ್ನಿ ಎಲ್ಲಾ ಹೋಗಿ
ರೈಲಲ್ ಕೂರೋಣ
ಊರು ಬಂದ ಕೂಡ್ಲೆ ಎಲ್ಲಾ ಹೊರಕ್ ಜಿಗಿಯೋಣ

## ವಿಮಾನ

ಮುಗಿಲ ಬಯಲ
ಏರಿ ಹಾರಿ
ಸಾಗುತಿದೆ ವಿಮಾನವು
ಯಾರ ಕನಸೊ
ನನಸುಗೊಂಡು
ಹಾರುತಿದೆ ವಿಮಾನವು
ಚಿಣ್ಣರೆಲ್ಲ
ನೋಡಿ ಮೇಲೆ
ನಲಿವ ಮೋಜು ಏನದು?
ನಿಮಿಷದೊಳಗೆ
ದೂರ ಸಾಗಿ
ಹೋಗುತಿದೆ ವಿಮಾನವು
ರೈಟ್ಸ್ ಬಂದು
ಕಂಡ ಕನಸ
ಕೂಸು ಈ ವಿಮಾನವು
ವಿಶ್ವವನ್ನೇ ಸನಿಹ ತಂದು,
ಹಾರುತಿದೆ ವಿಮಾನವು

## ರೈಲು

ಗಡಗಡ ಓಡಿತು ರೈಲು
ನಿಮಿಷಕ್ಕೆ ಸಾವಿರ ಮೈಲು
ಸಾವಿರ ಮೈಲನು
ಮೀರುತ ಹೋಗಲು
ಆಗದು ರೈಲಿನ ಕೈಲು

## ಜಟಕಾಬಂಡಿ

ಬಂಡಿ ಬಂಡಿ ಜಟಕಾ ಬಂಡಿ
ಕಂದು ರಂಗಿನ ಕುದುರೆ ಬಂಡಿ
ಕುಣಿಗಲ್ ಕುದುರೆ ಕಟ್ಟಿದ ಬಂಡಿ
ವೇಗದಿ ಕುದುರೆ ಎಳೆಯುವ ಬಂಡಿ
ಬುಡೇನ್ ಸಾಬಿ ಬಿಡುವಾ ಬಂಡಿ
ಬಾಜೂ ಬಾಜೂ ಕೂಗುವ ಬಂಡಿ
ಚಾವಟಿ ಏಟಿಗೆ ಓಡುವ ಬಂಡಿ
ಚಲ್ರೆ ಬೇಟಾ ಚಲ್‌ಚಲ್ ಬಂಡಿ
ಗಾಳಿ ಪೆಟ್ರೋಲ್ ಕೇಳದ ಬಂಡಿ
ರೈಲು ಬಸ್ಸು ಕಾಯುವ ಬಂಡಿ
ನಾಲ್ವರ ಹೊತ್ತು ಸಾಗುವ ಬಂಡಿ
ನಾಗಾಲೋಟದಿ ಓಡುವ ಬಂಡಿ
ಕಟಕಟ ನಾದವ ಮಾಡುವ ಬಂಡಿ
ಶಾಲೆಗೆ ಮಕ್ಕಳ ಒಯ್ಯುವ ಬಂಡಿ
ಸಮಯಕ್ಕಾಗುವ ಸಾರೋಟ್ ಬಂಡಿ
ಸಾರಥಿ ನಡೆಸುವ ಬದುಕಿನ ಬಂಡಿ

## ರೈಲು ನಿಲ್ದಾಣ

ಗಡಗಡ ಸದ್ದನು ಮಾಡುತ ರೈಲು
ಎರೆಡೆಳೆ ದಾರಿಯ ಸೀಳುತ ಗಾಡಿ
ಉರುಳುತ ಮೆಲ್ಲನೆ ಬಂದಿತು ಗಾಡಿ
ಕಾರುತ ಹೊಗೆಯ ನಿಂದಿತು ಗಾಡಿ
ಗದ್ದಲ ಗದ್ದಲ ಎಲ್ಲೆಡೆ ಗದ್ದಲ
ಹೆಜ್ಜೆಯ ಸಪ್ಪಳ ಮಾತಿನ ಉಪಟಳ
ಬೆಟ್ಟನೆ ಚೀರುವ ಮಕ್ಕಳ ಉಪಟಳ
ಕೂಗೇ ಕೂಗು ಎಲ್ಲೆಡೆಗೂ
ಪತ್ರಿಕೆ ಮಾರುವ ಹುಡುಗರ ಕೂಗು
ಮಿಠಾಯಿ ಮಾರುವ ಮಾಣಿಯ ಕೂಗು
ಮೂಟೆ ಹೊರುವ ಮಾಲಿಯ ಕೂಗು
ಗದ್ದಲ ಗಡಿಬಿಡಿ ಎಲ್ಲೆಡೆಗೂ
ಗಾರ್ಡಿನ ಸೀಟಿ ಕೇಳಿತು ಭರದಿ
ಹಸಿರು ಪತಾಕೆ ಹಾರಿತು ದೂರದಿ
ಕೂಗನು ಹಾಕುತ ಹೊರಟಿತು ಗಾಡಿ
ಹೊಗೆಯನು ಉಗುಳುತ ಮೈಸೂರು

## ರೈಲು ಬಂಡಿ

ಚುಕ್‌ಪುಕ್ ಚುಕ್‌ಪುಕ್ ಚುಕ್‌ಪುಕ್
ಬಂದಿತು ರೈಲು
ಬಿದ್ದಿತು ಕೈಮರ
ಬಡಿಯಿತು ಗಂಟೆ
ಊದಿತು ಸೀಟಿ
ಬೀಸಿತು ಬಾವುಟ
ಹೊರಟಿತು ರೈಲು
ಚುಕ್‌ಪುಕ್ ಚುಕ್‌ಪುಕ್ ಚುಕ್‌ಪುಕ್
ಚುಕ್‌ಪುಕ್ ಚುಕ್‌ಪುಕ್ ಚುಕ್‌ಪುಕ್
ಉರುಳಿತು ಚಕ್ರ
ಹಾಕಿತು ಸಿಳ್ಳು
ಉಗುಳಿತು ಧೂಮ
ದಾಟಿತು ಹೊಲ– ಮನೆ
ಓಡಿತು ವೇಗದಿ
ಸೇರಿತು ಊರು
ಚುಕ್‌ಪುಕ್ ಚುಕ್‌ಪುಕ್ ಚುಕ್‌ಪುಕ್

# ನನ್ನ ಗ್ರಾಮ, ಸಾರ್ವಜನಿಕ ಸಂಸ್ಥೆಗಳು, ವಾರ್ತಾ ವಿನಿಮಯಗಳು

## ಪೆನ್ಸಿಲಣ್ಣನ ಮೊದಲನೆ ಶತ್ರುಗಳು

ಪೆನ್ಸಿಲಣ್ಣನ ಮೊದಲ ಶತ್ರು
ಅಳಿಸೋ ರಬ್ಬರ್ರು
ತಪ್ಪು ಬರೆದರೆ ಒಪ್ಪೋದಿಲ್ಲ
ಏನೇ ಹೇಳಿದ್ರೂ!
ಪೆನ್ಸಿಲಣ್ಣನ ಎರಡನೇ ಶತ್ರು
ಹೆರೆಯೋ ಮೆಂಡರ್ರು
ಮೊಂಡಾಗಿರಲು ಬಿಡೋದೆ ಇಲ್ಲ
ಎಷ್ಟೇ ಬಡಕೊಂಡ್ರೂ!

## ನಿದ್ದೆ ಮಾಡಿದ ಗಡಿಯಾರ

ಗೋಡೇ ಮೇಲಿನ ಗಡಿಯಾರಕ್ಕೆ
ಯಾಕೋ ತುಂಬಾ ನಿದ್ದೆ
ಟಿಕ್ ಟಿಕ್ ಎಂದು ಹಾಡಲು ಮರೆತು
ಗೊರಕೇ ಹೊಡೆದದ್ದೆ!
ಗೊರಕೇ ಹೊಡೆಯೋ ಗಡಿಯಾರದಲಿ
ಹೊಕ್ಕಿತೊಂದು ಜೇಡ
ಹೊರಕ್ಕೆ ಬರಲೇ ಆಗಲೇ ಇಲ್ಲ
ಅದರ ಪಜೀತಿ ಬೇಡ!

# ಕಲೆಗಳು, ಸ್ಥಳೀಯಜಾತ್ರೆ, ಆಟಗಳು, ವಿನೋದಗಳು

## ಶಾಲೆ

ಢಣ್ ಢಣ್ ಢಣ್ ಢಣ್

ಶಾಲೆಯಲ್ಲಿ ಘಂಟೆ

ಮಕ್ಕಳಿಲ್ಲ

ಯಾರದೂ ತಂಟೆ।

ಕೂಡಿ ಕಲಿತು

ನಲಿಯುವರು

ಓದಿ ಬರೆದು

ಕುಣಿಯುವರು

ಹೊಡೆಯೋ ಘಂಟೆ ಢಣಾ ಢಣಾ

ಜಿಗಿಯೋ ತಮ್ಮಾ ಠಣ್ ಠಣಾ

## ಅಕ್ಷರ ಮಾಲೆ

ಅ ಆ ಇ ಈ ಅಕ್ಷರಮಾಲೆ

ಕ ಕಾ ಕಿ ಕೀ  ಕನ್ನಡಶಾಲೆ

ಓದು ತಮ್ಮ ಕನ್ನಡ

ಬಾರಿಸು ಡೋಲು ಢಂ ಢಮಾ।

ನಮ್ಮ ಶಾಲೆ ಮಂದಿರ

ಹಾಕಿ ಹಸಿರು ಹಂದರ।।

ಕನ್ನಡ ದೀಪ ಹಚ್ಚೋಣ

## ಬೊಂಬೆಗಳ ಮದುವೆ

ಪುಟ್ಟ, ಕಿಟ್ಟಿ, ತಿಮ್ಮ, ತಿಪ್ಪ

ಒಟ್ಟುಗೂಡಿ ಬಂದರು

ಕಮಲೇ, ಪುಟ್ಟಿ, ವಿಮಲೆ, ಕಿಟ್ಟಿ

ಅವರ ಜೊತೆ ನಿಂದರು

ಹೆಣ್ಣು, ಗಂಡು, ಬೊಂಬೆ ತಂದು

ಮರದ ಅಡಿಗೆ ನಡೆದರು

ಇವಕೆ ಈಗ ಮದುವೆ ಬೇಗ

ನಡೆಯಲೆಂದು ನುಡಿದರು

ಇಬ್ಬರೋಡಿ ಹಾರ ಜೋಡಿ

ಹಿಡಿದುಕೊಂಡು ಬಂದರು

ಬೊಂಬೆ ನಿಲ್ಲಿಸಿ ಹಾರ ತೊಡಿಸಿ

ಮದುವೆ ಮುಗಿಯಿತೆಂದರು

## ಜಾತ್ರೆ

ಗಿರಿಗಿರಿ ತಿರುಗುವ

ಜೋಕಾಲಿ

ಗಾಳ್ಯಾಗ ತೇಲುವ

ಉಯ್ಯಾಲಿ

ಬಂದವು ಜಾತ್ರೆಗೆ

ದಿನಾ ದಿನಾ

ಡಮರು ಢಕ್ಕೆ

ಢಣಾ ಢಣಾ

ಉಂಡಿ ಕೊಳಲು

ಸವಿಗಾನ

ಕೊಂಡು

ಸವಿಯಲು

ಸಿಹಿಗಾನ

ಆಡಿಹಾಡಿ

ನಲಿಯುವೆನು

ಗಗನದಿ ತೇಲಿ

ಜಾರುವೆನು

## ಬಣ್ಣದ ಬುಗುರಿ

ಅಣ್ಣನು ತಂದ ಬಣ್ಣದ ಬುಗುರಿ
ಚಿಣ್ಣೇದಾಂಡಿನ ಜೊತೆಗೆ
ಮಣ್ಣಲಿ ಬೀಳಲು ಬಣ್ಣದ ಬುಗುರಿ
ಕಣ್ಣಲಿ ನೀರು ಅಣ್ಣನಿಗೆ

## ಬಯಲಾಟ

ಬನ್ನಿ ಬನ್ನಿ ಮಕ್ಕಳೇ
ಆಟದ ಬಯಲಿಗೆ ಹೋಗೋಣ
ಜಾರು ಬಂಡೆ ಜಾರೋಣ
ತೂಗುಯ್ಯಾಲೆ ಆಡೋಣ
ಆನೆ ಕುದುರೆ ಹತ್ತೋಣ
ಹಕ್ಕಿಯಂತೆ ಹಾರೋಣ
ಬನ್ನಿ ಬನ್ನಿ ಮಕ್ಕಳೇ
ಆಟದ ಬಯಲಿಗೆ ಹೋಗೋಣ

## ಕೋಲಾಟದ ಪದ

ಕೋಲು ಕೋಲಣ್ಣ ಕೋಲೆ
ರನ್ನದ ಚಿನ್ನದ ಕೋಲು ಕೋಲಣ್ಣ ಕೋಲೆ
ತಿರುಪತಿ ತಿಮ್ಮಪ್ಪ
ಕೈಮುಗಿವೆ ನಮ್ಮಪ್ಪ
ಖಾದ್ರಿಯ ನರಸಿಂಗ
ಕಾಪಾಡು ಉರಸಿಂಗ
ಉಡುಪಿಯ ಕೃಷ್ಣಯ್ಯ
ಉಳಿಸಲು ದಮ್ಮಯ್ಯ
ಶ್ರೀ ಶೈಲ ಶಿವಯ್ಯ
ನೀ ಕಾಯೋ ನಮ್ಮಯ್ಯ
ಸವದತ್ತಿ ಎಲ್ಲಮ್ಮ
ಸಲಹಮ್ಮ ನಮ್ಮಮ್ಮ
ಕೊಲ್ಲೂರು ಮೂಕಮ್ಮ
ದಯೆತೋರು ಬಾರಮ್ಮ
ಶೃಂಗೇರಿ ಶಾರದಮ್ಮ
ಬಲು ಜಾಣೆ ನೀನಮ್ಮ
ಬೆಂಗಳೂರು ಅಣ್ಣಮ್ಮ
ಹರಸಮ್ಮ ದೊಡ್ಡಮ್ಮ

## ಗೊಂಬೆ ಮದುವೆ

ಶಾಲಿನಿ ಮಾಲಿನಿ ಸೇರಿದರು
ಗೆಳತಿಯರೆಲ್ಲ ಕೂಡಿದರು
ಗೊಂಬೆಗಳೆರಡನು  ಹುಡುಕಿದರು
ಅಂದದ ಉಡುಗೆ ತೊಡಿಸಿದರು
ಸುಂದರ ಚಪ್ಪರ ಹಾಕಿದರು
ಗಂಡು ಹೆಣ್ಣನ್ನು ನಿಲ್ಲಿಸಿದರು
ವಸಂತ ಓಲಗ ಊದಿದಳು
ಮಾಲಿನಿ ಮಂತ್ರವ ಹೇಳಿದಳು.
ಶಾಲಿನಿ ಸಡಗರ ತೋರಿದಳು
ಪದ್ಮಿನಿ ಹಾಡನು ಹಾಡಿದಳು
ನಂದಿನಿ ಕುಂಕುಮ ನೀಡಿದಳು
ಎಲ್ಲರು ಆರತಿ ಎತ್ತಿದರು.
ಕೊಬರಿ – ಸಕ್ಕರೆ ಹಂಚಿದರು
ಪಾಯಸದೂಟವ ಮಾಡಿದರು
ಸಂತಸದಿಂದಲಿ ಹಿಗ್ಗಿದರು
ಗೊಂಬೆ ಮದುವೆ ಮುಗಿಸಿದರು

# ಆಕಾಶ

## ಕೆರೆ

ತುಂಬು ನೀರು ಕೆರೆ!
ಸಣ್ಣಪುಟ್ಟ ತೆರೆ!
ತೆರೆಗಳಲಿ
ಹೊರಹೊರಳಿ
ಹರಡಿಕೊಂಡ ಪೆರೆ!

## ಹುಣ್ಣಿಮೆ ಚಂದ್ರ

ಬೆಳಗುವ ಚಂದ್ರನ ನೋಡಣ್ಣ
ರೋಹಿಣಿ ಗಂಡನು ಅವನಣ್ಣ
ತೇಲುವ ದೀಪದ ಹಾಗಿಹನು
ಬೆಳ್ಳಿಯ ಹಾಗೆ ಇದ್ದವ ಮೊನ್ನೆ
ತಟ್ಟೆಯ ರೂಪವ ತಾಳಿಹನಿಂದು
ಈ ಪರಿ ಹಿಗ್ಗುವ ಚಂದ್ರನ ನೋಡಣ್ಣ
ಹುಣ್ಣಿಮೆ ಚಂದ್ರನ ನೋಡಣ್ಣ
ಸೋಜಿಗ ನನಗಿದು ಕಾಣಣ್ಣ
ಆಯಿತು ಹೇಗಿದು ಹೇಳಣ್ಣ

## ಚಂದಕ್ಕಿ ಮಾಮ

ನೀಲಿಯ ಬಾನಲಿ
ಮೋಡದ ಮರೆಯಲಿ
ಕಾಣುವುದೇನಮ್ಮಾ ?
ಮಿಣಿ ಮಿಣಿ ಗುಟ್ಟುವ
ತಾರಾಗಣದಲಿ
ಹೊಳೆಯುವುದೇನಮ್ಮಾ?
ತಟ್ಟೆಯ ಮಾದರಿ
ದುಂಡಗೆ ಕಾಣುತ
ಓಡುವುದೇನಮ್ಮಾ?
ಕಣ್ಣಾ ಮುಚ್ಚೇSS
ಕಾಡೇ ಗೂಡೇ SS
ಆಡುವುದೇಕಮ್ಮಾ?
ಬೆಳ್ಳಿಯ ಬೆಳಕಿನ
ಚಂದಕ್ಕಿ ಮಾಮ
ಇವನೇ ಏನಮ್ಮಾ?
ಚಂದಕ್ಕಿ ಮಾಮನ
ಚೆಲುವನು ನೋಡುತ
ನಲಿಯುವ ಬಾರಮ್ಮ

## ಚಂದಮಾಮ

ಬಾನಿನಲ್ಲಿ ಮೂಡಿಬಂದ
ಚಂದಮಾಮ
ಕತ್ತಲನು ದೂಡಿನಿಂದ
ಚಂದಮಾಮ
ಮೋಡದೊಡನೆ ಓಡಿ ಬಂದ
ಚಂದಮಾಮ
ಚಿಣ್ಣರನ್ನು ನೋಡಿನಿಂದ
ಚಂದಮಾಮ
ಮುಗಿಲ ಬೆಟ್ಟವೇರಿ ಬಂದ
ಚಂದಮಾಮ
ತಾರೆಗಳನು ಸೇರಿ ನಿಂದ
ಚಂದಮಾಮ
ತಂಪು ಬೆಳಕು ಬೀರಿ ಬಂದ
ಚಂದಮಾಮ
ಜಗದ ಚೆಲುವ ತೋರಿ ನಿಂದ
ಚಂದಮಾಮ

## ಗಣಿತ ಗೀತೆಗಳು

### ಕಾಮನಬಿಲ್ಲು

ಇಟ್ಟರಾರು ಮುಗಿಲಿಗೊಯ್ದು
ಬಿಲ್ಲನಿದುವೆ ಅಣ್ಣ?
ಬಳಿದರಾರು ಅದಕೆ ಅಂದವಾದ
ಏಳು ಬಣ್ಣ?
ಮುಗಿಲ ಮೋಜ ಮೇಲೆ ಇಟ್ಟು
ಹೂದಾನಿಯಂತೆ
ಮಳೆಯು – ಬಿಸಿಲು ದೇವಗೀವ
ಹೂ ಗುಚ್ಛದಂತೆ
ಎಳೆಯ ಮನಸ ಸೂರೆಗೊಂಬ
ಬಣ್ಣ ಬಣ್ಣ ಹಾರ
ದೇವ ನಮಗೆ ದಿನವು ಇದನು
ಬಾನಿನಲ್ಲಿ ತೋರ?

### ಚಂದಮಾಮ

ಚಂದಮಾಮ ಇತ್ತ ಬಾ
ಚಂದದಿಂದ ಆಡು ಬಾ
ತಿಂಡಿ ತಿನಿಸು ಕೊಡ್ತೀನಿ
ಗಿಂಡಿ ಹಾಲು ತರ್ತೀನಿ
ಮೊಂಡುತನ ಮಾಡ್ಬೇಡ
ಚಂಡಿಯಾಗಿ ನಿಲ್ಬೇಡ
ಓಡಿ ಓಡಿ ಕರಗ್ಬೇಡ
ಕಣ್ಣಿಗೆ ಕಾಣದೆ ಹೋಗ್ಬೇಡ
ಚಂದಮಾಮ ಇತ್ತ ಬಾ
ಚಂದದಿಂದ ಆಡು ಬಾ

### ಊಟದ ಆಟ

ಒಂದು ಎರಡು
ಬಾಳೆಲೆ ಹರಡು
ಮೂರು ನಾಲ್ಕು
ಅನ್ನಹಾಕು
ಐದು ಆರು
ಬೇಳೆಸಾರು
ಏಳು ಎಂಟು
ಪಲ್ಯಕೆ ದಂಟು
ಒಂಭತ್ತು ಹತ್ತು
ಎಲೆ ಮುದುರೆತ್ತು
ಒಂದರಿಂದ ಹತ್ತು
ಹೇಗಿತ್ತು
ಊಟದ ಆಟವು
ಮುಗಿದಿತ್ತು

### ಅಂಕಿಹಾಡು

ಒಂದು
ಎರಡು
ಅಂದ
ಗಣಿತ
ಬಹಳ
ಚಂದ
ಮೂರು
ನಾಲ್ಕು
ಅನ್ನ
ನಾಲ್ಕು
ಹಣ್ಣು
ತಿನ್ನು
ಐದು
ಆರು ಹಾರು
ಕುಣಿದು
ಜಿಗಿದು ಹಾರು
ಏಳು

ಎಂಟು
ನಂಟು
ತಿನ್ನು
ಕರದ
ಅಂಟು
ಒಂಭತ್ತು
ಹತ್ತು
ಮುತ್ತು
ದಿನಾ
ಭಾರ
ಎತ್ತು
ಸೊನ್ನೆ
ಯಿಂದ
ಒಂಭತ್ತು
ತಿಳಿಯೇ
ಗಮ್ಮತ್ತು

## ಹತ್ತು ಹತ್ತು ಇಪ್ಪತ್ತು

ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು
ಇಪ್ಪತ್ತು ಹತ್ತು ಮೂವತ್ತು
ಕೈಯಲ್ಲೊಂದು ಕಲ್ಲಿತ್ತು
ಮೂವತ್ತು ಹತ್ತು ನಲುವತ್ತು
ಎದುರಿಗೆ ಮಾವಿನ ಮರವಿತ್ತು
ನಲುವತ್ತು ಮತ್ತು ಐವತ್ತು
ಮಾವಿನ ಮರದಲಿ ಕಾಯಿತ್ತು
ಐವತ್ತು ಹತ್ತು ಅರವತ್ತು
ಕಲ್ಲನು ಬೀರಿದ ಸಂಪತ್ತು
ಅರವತ್ತು ಹತ್ತು ಎಪ್ಪತ್ತು
ಕಾಯಿಯು ತಪತಪನುದುರಿತ್ತು
ಎಪ್ಪತ್ತು ಹತ್ತು ಎಂಭತ್ತು
ಮಾಲಿಯ ಕಂಡನು ಸಂಪತ್ತು
ಎಂಬತ್ತು ಹತ್ತು ತೊಂಭತ್ತು
ಕಾಲುಗಳೆರಡೂ ಓಡಿತ್ತು
ತೊಂಭತ್ತು ಹತ್ತು ನೂರು
ಓಡಿ ಮನೆಯ ಸೇರು

## ಕುಂಬಾರ

ಹತ್ತು ಹತ್ತು ಇಪ್ಪತ್ತು
ಹತ್ತಿರ ಕುಂಬಾರನ ಮನೆಯಿತ್ತು
ಇಪ್ಪತ್ತು ಹತ್ತು ಮೂವತ್ತು
ಜೇಡಿಯ ರಾಶಿ ಅಲ್ಲಿತ್ತು
ಮೂವತ್ತು ಹತ್ತು ನಲುವತ್ತು
ನೀರಲಿ ಮಣ್ಣು ನೆನೆದಿತ್ತು
ನಲುವತ್ತು ಹತ್ತು ಐವತ್ತು
ಕುಂಬಾರನ ಚಕ್ರ ತಿರುಗಿತ್ತು
ಐವತ್ತು ಹತ್ತು ಅರವತ್ತು
ಜೇಡಿಯು ಚಕ್ರವನ್ನೇರಿತ್ತು
ಅರವತ್ತು ಹತ್ತು ಎಪ್ಪತ್ತು
ಕುಂಬಾರನ ಕೈ ಚುರುಕಿತ್ತು
ಎಪ್ಪತ್ತು ಹತ್ತು ಎಂಭತ್ತು
ಮಣ್ಣಲಿ ಮಡಕೆ ಮೂಡಿತ್ತು
ಎಂಭತ್ತು ಹತ್ತು ತೊಂಭತ್ತು
ಸುಡುಲದು ಗಟ್ಟಿ ಆಗಿತ್ತು
ತೊಂಭತ್ತು ಹತ್ತು  ನೂರು
ಮಾಡಿದ ಮಡಕೆ ಮಾರಾಯ್ತು

## ವಾರಕೆ ಏಳೇ ಏಳು ದಿನ

ವಾರಕೆ ಏಳೇ ಏಳು ದಿನ!
ಆದಿತ್ಯವಾರವೆ ರಜದ ದಿನ
ಸೋಮವಾರ ಚಿಣ್ಣಿಯಕೋಟು
ಮಂಗಳವಾರ ವಾಲಿಬಾಲು
ಬೇಟೆಯ ಆಟವು ಬುಧವಾರ!
ಗರಡಿಯ ಮನೆಯಲಿ ಗುರುವಾರ!
ಶುಕ್ರವಾರಕೆ ಬುಗುರಿ ಚೆಂಡು !
ಶನಿವಾರಕೆ ಕ್ರಿಕೆಟ್ಟು ದಾಂಡು!
ವಾರಕೆ ಏಳೇ ಏಳು ದಿನ
ಆಟಕೆ ಸಾಲದು ಏಳು ದಿನ!

## ಕಡುಬಿನ ಊಟ

ಹತ್ತೂ ಒಂದು ಹನ್ನೊಂದು
ಮೆತ್ತನೆ ಕಡುಬು ಇನ್ನೊಂದು
ಹತ್ತೂ ಎರಡು ಹನ್ನೆರಡು
ಉತ್ತಮ ತುಪ್ಪಾ ಮೇಲ್ಗರಡು
ಹತ್ತೂ ಮೂರು ಹದಿಮೂರು
ನೆತ್ತಿಗೆ ಹತ್ತಲಿ ಸುರಿಸಾರು
ಹತ್ತೂ ನಾಲ್ಕು ಹದಿನಾಲ್ಕು
ಮೆತ್ತನೆ ಕಡುಬು ಇನ್ನೂ ಬೇಕು
ಹತ್ತೂ ಐದು ಹದನೈದು
ಹೊತ್ತಾಗಿಲ್ವೆ ಹೊಡಿ ಇನ್ನೈದು
ಹತ್ತೂ ಆರು ಹದಿನಾರು
ಉತ್ತಮಳಮ್ಮ ಸರಿ ನಿನಗಾರು?
ಹತ್ತೂ ಏಳು ಹದಿನೇಳು
ಮತ್ತೂ ಬಂದರೆ ಹೊಡಿಯೇಳು
ಹತ್ತು ಎಂಟು ಹದಿನೆಂಟು
ಚಿತ್ತಕೆ ಬಂದರೆ ಇನ್ನೂ ಉಂಟು
ಹತ್ತೂ ಒಂಭತ್ತು ಹತ್ತೊಂಭತ್ತು
ಚಿಕ್ಕಪ್ಪನ ಹೊಟ್ಟೆ ತುಂಬಿತು
ಹತ್ತೂ ಹತ್ತೂ ಇಪ್ಪತ್ತು
ಹತ್ತು ಕಡುಬು ಮುಗಿದಿತ್ತು.

## 3. ವಿಜ್ಞಾನ ಚಟುವಟಿಕೆಗಳು/ಪ್ರಯೋಗಗಳು





### 1. ಸುರಿಯಲೀ ಮಳೆ/ಮಾಂತ್ರಿಕ ಮಳೆ

**ಸಾಮಗ್ರಿಗಳು** : ಹಾಲಿನ ಹುಡಿ ಟಿನ್/ಪ್ಲಾಸ್ಟಿಕ್ ಬಾಟ್ಲಿ, ಸುತ್ತಿಗೆ, ಬಕೆಟ್ , ನೀರು

**ಪ್ರಯೋಗ ವಿಧಾನ**

- ಮಕ್ಕಳು ಟಿನ್/ಪ್ಲಾಸ್ಟಿಕ್ ಬಾಟ್ಲಿಯ ಅಡಿಭಾಗದಲ್ಲಿ ಕೆಲವು ರಂಧ್ರಗಳನ್ನು ಮಾಡುವುದು.
- ಟಿನ್/ಬಾಟ್ಲಿ ಬಕೇಟಿನ ನೀರಿನಲ್ಲಿ ಮುಳುಗಿಸಿಟ್ಟು ಮುಚ್ಚಳ ಹಾಕಿ/ಮುಚ್ಚಳದ ಬದಿಯಲ್ಲಿ ಕೈಯಿಟ್ಟು ಮೇಲಕ್ಕೆತ್ತಿರಿ.
- ಮುಚ್ಚಳ/ಕೈ ತಕ್ಷಣ ತೆಗೆದು ಮತ್ತೊಮ್ಮೆ ಇಡುವಾಗ ಟಿನ್/ಬಾಟ್ಲಿಯಿಂದ ನೀರು ಹೊರಗೆ ಬರುವುದನ್ನು ಕಾಣಬಹುದು. (ಟಿನ್ನಿನ/ಬಾಟ್ಲಿಯ ಮುಕ್ಕಾಲು ಭಾಗದಷ್ಟರಲ್ಲಿ ಸಣ್ಣ ರಂಧ್ರ ತೆಗೆದು ಮುಚ್ಚಳ ಹಾಕಿದ ಬಳಿಕ ರಂಧ್ರವನ್ನು ಮುಚ್ಚಿದರೂ ಸಾಕು)

### 2. ನೀರಿನ ಕಾಮನ ಬಿಲ್ಲು

**ಸಾಮಗ್ರಿಗಳು**

- ಅಗಲವಾದ ಪಾತ್ರೆಯಲ್ಲಿ ಎಣ್ಣೆ

**ಮಾಡುವ ವಿಧಾನ**

- ಎಲ್ಲಾ ಮಕ್ಕಳು ಒಂದೊಂದು ಅಗಲವಾದ ಪಾತ್ರೆಯಲ್ಲಿ ನೀರು ತೆಗೆದುಕೊಳ್ಳುವುದು.
- ನೀರಿಗೆ ಒಂದೋ ಎರಡೋ ಬಿಂದು ಎಣ್ಣೆ ಹಾಕುವುದು
- ಬಿಸಿಲಿಗೆ ಇರಿಸಿದಾಗ ಪಾತ್ರೆಯ ನೀರಿನಲ್ಲಿ ಕಾಮನಬಿಲ್ಲು ಕಾಣುವುದು.

**ಸಾಮಗ್ರಿಗಳು** : ಪ್ಲಾಸ್ಟಿಕ್ ಮಗ್/ಮಿನರಲ್ ವಾಟರ್ ಬಾಟ್ಲಿ ತುಂಡರಿಸಿದ್ದು, ಸೋಪು ಹುಡಿ, ನೀರು

**ಮಾಡುವ ವಿಧಾನ**

- ಪ್ರತಿಯೊಂದು ಮಗುವೂ ಪ್ಲಾಸ್ಟಿಕ್ ಮಗ್‌ನಲ್ಲಿ ಅರ್ಧದಷ್ಟು ನೀರು ತೆಗೆಯುವುದು.
- ಒಂದು ಚಮಚ ಸೋಪು ಹುಡಿ ಹಾಕುವುದು
- ಕೈಯಿಂದ ಚೆನ್ನಾಗಿ ಕದಡಿ ನೊರೆಯುಂಟು ಮಾಡುವುದು.
- ಕೈಯಿಂದ ತೆಗೆದು ಕದಡಿ ನೊರೆಯುಂಟುಮಾಡಿ ನೊರೆ ತೆಗೆದೂ ಮಾಡಬಹುದು. (ಮಗ್ ಅಗತ್ಯಕ್ಕೆ ಬೇಕಾದಷ್ಟು ಸಿಗದಿದ್ದರೆ)

### 3 .ಗೋಡೆಯಲ್ಲೊಂದು ಕಾಮನಬಿಲ್ಲು

**ಸಾಮಗ್ರಿಗಳು** : ಪ್ಲೇಟು, ನೀರು, ಕನ್ನಡಿ (ಪ್ಲಾಸ್ಟಿಕ್ ಫ್ರೇಮ್ ಇರುವುದು)

**ಮಾಡುವ ವಿಧಾನ**

- ಮಕ್ಕಳನ್ನು 2/3 ಮಂದಿಯ ಗುಂಪುಗಳನ್ನಾಗಿಸುವುದು.
- ಪ್ರತಿಯೊಂದು ಗುಂಪಿಗೂ 1ಪ್ಲೇಟ್, ಸ್ವಲ್ಪ ನೀರು, ಒಂದು ತುಂಡು ಕನ್ನಡಿ ಇತ್ಯಾದಿ ನೀಡುವುದು.
- ಬಿಸಿಲಿನಲ್ಲಿ ಪ್ಲೇಟನ್ನಿರಿಸಿ ಗೋಡೆಯಲ್ಲಿ ಬೆಳಕು ಪ್ರತಿಫಲಿಸುವಂತೆ ಕನ್ನಡಿಯು ಅರ್ಧ ನೀರಿನಲ್ಲಿ ಬರುವ ರೀತಿಯಲ್ಲಿ ಒರೆಯಾಗಿರಿಸುವುದು.
- ಗೋಡೆಯಲ್ಲಿ ಪ್ರತಿಬಿಂಬ ಪತನವಾಗುವಲ್ಲಿ ಕಾಮನಬಿಲ್ಲನ್ನು ಕಾಣಬಹುದು.

### 4. ಮುಳುಗಿತೋ? ತೇಲೀತೋ?

**ಸಾಮಗ್ರಿಗಳು** : ದೊಡ್ಡ ಬೇಸಿನ್, ನೀರು, ತರಕಾರಿಗಳು, ಧಾನ್ಯಗಳು

**ಮಾಡುವ ವಿಧಾನ**

- ತರಗತಿಯ ಮಧ್ಯಭಾಗದಲ್ಲಿ ಸ್ಟೂಲಿನ ಮೇಲೆ ಬೇಸಿನ್ ತುಂಬಾ ನೀರು ತುಂಬಿಸಿ ಇಡಬೇಕು.
- ಮೇಜಿನ ಮೇಲೆ ತರಕಾರಿಗಳು, ಧಾನ್ಯಗಳು (ಒಂದೊಂದರಂತೆ) ಇಟ್ಟಿರುವವುಗಳಿಂದ ಮಕ್ಕಳು ಒಂದೊಂದರಂತೆ ತೆಗೆದುಕೊಳ್ಳುವುದು.
- ಪ್ರತಿಯೊಬ್ಬರೂ ಅವರಿಗೆ ಲಭಿಸಿದ ವಸ್ತುವಿನ ಹೆಸರು ಅದು ನೀರಿನಲ್ಲಿ ಹಾಕಿದಾಗ ಮುಳುಗಿತೋ, ತೇಲಿತೋ ಎಂಬುದನ್ನು ಊಹಿಸಿ ಹೇಳುವುದು.
- ಪ್ರತಿಯೊಬ್ಬರೂ ಮುಂದೆ ಬಂದು ಬೇಸಿನ್‌ನ ನೀರಿನಲ್ಲಿ ಹಾಕಿ ತಮ್ಮ ಊಹೆ ಸರಿಯೋ ಎಂದು ನೋಡುವುದು
- ಟೀಚರ್ ಬೇಸಿನ್‌ನಲ್ಲಿ ಮುಳುಗುವವುಗಳು, ತೇಲುವವುಗಳ ಪಟ್ಟಿಯನ್ನು ಬೋರ್ಡಿನಲ್ಲಿ ಬರೆದು ದಾಖಲಿಸುವುದು.
- ಯಾವುದು ಹೆಚ್ಚು? ಯಾವುದು ಕಡಿಮೆ ಎಂಬ ಚರ್ಚೆಯಿಂದ ಕ್ರೋಡೀಕರಿಸುವುದು.

### 5. ಸಕ್ಕರೆ ಮತ್ತು ಉಪ್ಪು ಎಲ್ಲಿ ಹೋಯಿತು?

**ಸಾಮಗ್ರಿಗಳು** : 6 ಪಾತ್ರೆ, ನೀರು, 6 ಚಮಚ, ಉಪ್ಪು, ಸಕ್ಕರೆ, ಹೊಗೆ, ಕಲ್ಲು, ಮುತ್ತು, ಹುಣಸೆಬೀಜ.

**ಮಾಡುವ ವಿಧಾನ**

- ತರಗತಿಯಲ್ಲಿ 6 ಪಾತ್ರೆಗಳಲ್ಲಿ ಅರ್ಧದಷ್ಟು ನೀರು ತುಂಬಿಸಿ ಚಮಚವನ್ನು ಹಾಕಿಡಬೇಕು.
- ಮಕ್ಕಳು ಪ್ರತಿಯೊಂದು ಪಾತ್ರೆಯಲ್ಲೂ ಒಂದೊಂದು ವಸ್ತುವನ್ನು ಹಾಕುವುದು. (ಉಪ್ಪು, ಸಕ್ಕರೆ, ಹೊಗೆ, ಕಲ್ಲು, ಮುತ್ತು, ಹುಣಸೆಬೀಜ)
- ಮಕ್ಕಳು ಚಮಚದಿಂದ ನೀರನ್ನು ಚೆನ್ನಾಗಿ ಕದಡಿಸುವುದು.
- 5 ನಿಮಿಷದ ನಂತರ ಏನಾಗುತ್ತದೆ ಎಂಬುದನ್ನು ನೋಡಿ ಹೇಳುವುದು.
- ಉಪ್ಪಿಗೂ ಸಕ್ಕರೆಗೂ ಏನಾಯಿತು?
- ಕರಗುವವುಗಳು– ಕರಗದವುಗಳು – ಕ್ರೋಡೀಕರಣ.

**ಹೊಸ ಬಣ್ಣಗಳು**

**ಸಾಮಗ್ರಿಗಳು** : ಪೋಸ್ಟರ್ ಕಲರ್/ವಾಟರ್ ಕಲರ್, ಗಾಜಿನ ತುಂಡುಗಳು/ತುಂಡರಿಸಿದ ಪ್ಲಾಸ್ಟಿಕ್ ಬಾಟ್ಲಿಗಳು, ನೀರು, 50 ಮಿ.ಲೀ, ಚಮಚ, ಸಣ್ಣ ಪಾತ್ರೆ

**ಮಾಡುವ ವಿಧಾನ**

- 3 ಪಾತ್ರೆಗಳಲ್ಲಿ ನೀರು ತೆಗೆದು ಕೆಂಪು, ನೀಲ, ಹಳದಿ ಬಣ್ಣಗಳನ್ನು ಕರಗಿಸಿಕೊಡಬೇಕು.
- ಚಮಚದಿಂದ ಒಂದು ಬಾಟಲಿಗೆ ಕೆಂಪು ಮತ್ತು ಹಳದಿ ಒಂದೊಂದು ಚಮಚದಂತೆ ಹಾಕುವುದು.
- ಬದಲಾವಣೆಯನ್ನು ನಿರೀಕ್ಷಿಸಿ ಹೇಳುವುದು
- ಇತರ ಬಣ್ಣಗಳಲ್ಲಿ ಎರಡನ್ನು ಸೇರಿಸಿದಾಗ ಬದಲಾವಣೆ ಹೇಳುವುದು.
- ಮೂರು ಬಣ್ಣಗಳನ್ನು ಒಟ್ಟಿಗೆ ಸೇರಿಸಿದಾಗ ಏನಾಗುತ್ತದೆ? ಮಾಡಿ ನೋಡಿ ಹೇಳುವುದು.

  ಕೆಂಪು + ನೀಲ = ನೇರಳೆ
  ನೀಲ + ಹಳದಿ = ಹಸಿರು
  ಹಳದಿ + ಕೆಂಪು = ಕೇಸರಿ
  (ಪಟ್ಟಿಯನ್ನು ಪೂರ್ತಿಗೊಳಿಸಿ ನೀಡಬೇಕು)

**ಸಾಮಗ್ರಿಗಳು** : ಅರಿಶಿನ ಹುಡಿ, ಸೋಪು

**ಮಾಡುವ ವಿಧಾನ**

- ಸೋಪ್ ಉಪಯೋಗಿಸಿ ಮಕ್ಕಳು ಕೈಗಳಲ್ಲಿನ ನೊರೆಯುಂಟು ಮಾಡುವುದು.

- ಎಲ್ಲರ ಕೈಯಲ್ಲೂ ಒಂದು ಚಿಟಿಕೆ ಅರಿಶಿಣ ಹುಡಿ ತೆಗೆಯಲು ಹೇಳುವುದು.
- ಮತ್ತೊಮ್ಮೆ ನೊರೆಯುಂಟು ಮಾಡುವಾಗ ಉಂಟಾಗುವ ವ್ಯತ್ಯಾಸವನ್ನು ನಿರೀಕ್ಷಿಸುವುದು ಮತ್ತು ಹೇಳುವುದು.

**ಸಾಮಗ್ರಿಗಳು** : ಸುಣ್ಣದ ನೀರು, ಅರಿಶಿಣ ಹುಡಿ, ಚಮಚ

**ಮಾಡುವ ವಿಧಾನ**
- ಮಕ್ಕಳನ್ನು ಇಬ್ಬರ ಗುಂಪುಗಳಾಗಿ ಮಾಡುವುದು
- ಒಂದೊಂದು ಗ್ಲಾಸು ಸುಣ್ಣದ ನೀರು ಒಂದು ಚಮಚ ಅರಿಶಿಣ ಹುಡಿಯನ್ನು ಪ್ರತೀ ಗುಂಪಿಗೆ ನೀಡುವುದು.
- ಅರಿಶಿಣ ಹುಡಿ ಗ್ಲಾಸಿಗೆ ಹಾಕಿ ಕದಡುವುದು.
- ಬಣ್ಣದಲ್ಲುಂಟಾಗುವ ಬದಲಾವಣೆ ನಿರೀಕ್ಷಿಸಿ ಹೇಳುವುದು

**ಸಾಮಗ್ರಿಗಳು** : ಪೇಪರ್, ಸಾಗುವಾನಿ ಮರದ ಚಿಗುರೆಲೆ, ಇತರ ಚಿಗುರೆಲೆಗಳು.

**ಮಾಡುವ ವಿಧಾನ**
- ಸಾಗುವಾನಿ ಚಿಗುರೆಲೆಯನ್ನು ಕಾಗದದಲ್ಲಿ ಉಜ್ಜಿ ಚಿತ್ರ ಬಿಡಿಸುವುದು. ಬಣ್ಣವನ್ನು ನಿರೀಕ್ಷಿಸಿ ಹೇಳುವುದು.

## 6. ಮೇಣದ ಚಿತ್ರದ ಅದ್ಭುತ

**ಸಾಮಗ್ರಿಗಳು** : ಬಿಳಿ ಚಾರ್ಟು, ಮೇಣದ ಬತ್ತಿ, ವಾಟರ್‌ಕಲರ್, ಸ್ಪಾಂಜ್ ತುಂಡುಗಳು

**ಮಾಡುವ ವಿಧಾನ**
- ಬಿಳಿ ಚಾರ್ಟನ್ನು ಗ್ರೀಟಿಂಗ್ ಕಾಗದ ರೂಪದಲ್ಲಿ ತುಂಡರಿಸಬೇಕು
- ಮೇಣದ ಬತ್ತಿಯಿಂದ ಚಾರ್ಟು ಪೇಪರಿನಲ್ಲಿ ಇಷ್ಟವಿರುವ ಚಿತ್ರ ಬಿಡಿಸುವುದು
- ಮಕ್ಕಳು ಸ್ಪೋಂಜ್‌ನಿಂದ ಕಲರ್ ಸೇರಿಸಿ ಮೇಣದ ಬತ್ತಿಯ ಚಿತ್ರದ ಮೇಲೆ ಬಣ್ಣ ಬಳಿಯುವುದು.
- ಕಾರ್ಡಿನಲ್ಲಿ ಮೇಣದ ಚಿತ್ರ ಮೂಡಿ ಬರುವುದನ್ನು ಕಾಣಬಹುದು.

- ಹೆಚ್ಚು ಹೆಚ್ಚು ಬಣ್ಣಗಳನ್ನು ಹಚ್ಚುವುದು. ಬಣ್ಣ ವ್ಯತ್ಯಾಸಗಳನ್ನು ಪರಿಚಯಿಸುವುದು/ತಿಳಿಯುವುದು

**ಸಾಮಗ್ರಿಗಳು**
- ಬಿಳಿ ಚಾರ್ಟು ಪೇಪರ್, ಮೇಣದ ಬತ್ತಿ, ದಾಸವಾಳ ಹೂ, ನಿಂಬೆಹಣ್ಣು

**ಮಾಡುವ ವಿಧಾನ**
- ಚಾರ್ಟು ಪೇಪರ್‌ನ್ನು ಶುಭಾಶಯ ಪತ್ರದ ರೂಪದಲ್ಲಿ ಕತ್ತರಿಸುವುದು.
- ಮೇಣದ ಬತ್ತಿಯಿಂದ ಚಿತ್ರಗಳನ್ನು ರಚಿಸುವುದು
- ಕಾರ್ಡಿನ ಮೇಲೆ ಮಕ್ಕಳು ದಾಸವಾಳ ಹೂವಿನಿಂದ ಉಜ್ಜಿದ ಭಾಗದಲ್ಲಿ ಉಜ್ಜುವುದು. ಬಣ್ಣ ಬದಲಾವಣೆಯನ್ನು ನಿರೀಕ್ಷಿಸುವುದು.
- ಲಿಂಬೆರಸದಲ್ಲಿ ಬೆರಳು ಮುಳುಗಿಸಿ ದಾಸವಾಳ ಹೂ ಉಜ್ಜಿದ ಭಾಗದಲ್ಲಿ ಉಜ್ಜುವುದು. ಬಣ್ಣದಲ್ಲಿ ಉಂಟಾಗುವ ವ್ಯತ್ಯಾಸ ನಿರೀಕ್ಷಿಸುವುದು.

## 7. ನೆನೆಯದ ಕರವಸ್ತ್ರ

**ಸಾಮಗ್ರಿಗಳು**
- ಗ್ಲಾಸು, ಕರವಸ್ತ್ರ, ಬಕೆಟ್, ನೀರು

**ಮಾಡುವ ವಿಧಾನ**
- ಮಕ್ಕಳು ಕರವಸ್ತ್ರವನ್ನು ಗ್ಲಾಸಿನ ಒಳಗೆ ಅಡಿಭಾಗದಲ್ಲಿ ಗಟ್ಟಿಯಾಗಿ ಒತ್ತಿ ಇರಿಸುವುದು.
- ಗ್ಲಾಸನ್ನು ಕವುಚಿ ನೀರಿನಲ್ಲಿ ಮುಳುಗಿಸುವುದು
- ಎತ್ತಿದ ಬಳಿಕ ಎಡ ಕೈಯಲ್ಲಿ ಗ್ಲಾಸಿನೊಳಗಿನ ಕರವಸ್ತ್ರವನ್ನು ಮುಟ್ಟಿ ನೋಡುವುದು.
- ಎಲ್ಲಾ ಮಕ್ಕಳು ಇದನ್ನು ಮಾಡಿನೋಡಲಿ

## 8. ವಾಯುವಿನ ಶಕ್ತಿ

**ಸಾಮಗ್ರಿಗಳು**
- ಪುಗ್ಗೆ, ನೂಲಿನ ರೀಲು, ರಬ್ಬರ್ ಬ್ಯಾಂಡ್, ಕಾಗದದ ಚೆಂಡು

**ಮಾಡುವ ವಿಧಾನ**
- ನೂಲಿನ ರೀಲಿನಲ್ಲಿ ಪುಗ್ಗೆಯನ್ನು ರಬ್ಬರ್‌ಬ್ಯಾಂಡ್ ಉಪಯೋಗಿಸಿ ಕಟ್ಟುವುದು (ಟೀಚರ್)
- ಮಕ್ಕಳು ನೂಲಿನ ರೀಲಿನಲ್ಲಿ ಊದಿ ಪುಗ್ಗೆಯನ್ನು ಊದಲು ಅಭ್ಯಾಸ ಮಾಡಿಸುವುದು.
- ನೆಲದಲ್ಲಿ ಕಾಗದದ ಚೆಂಡು ಇಡುವುದು. ಪ್ರತಿಯೊಬ್ಬ ಮಗುವು ಪುಗ್ಗೆಯನ್ನು ಒಮ್ಮೆ ಊದಿ ಕಾಗದದ ಚೆಂಡಿನ

ಬಳಿ ಇರಿಸಿದಾಗ ಚೆಂಡು ಎಷ್ಟು ದೂರ ಚಲಿಸುವುದೆಂದು ಕಂಡು ಹಿಡಿಯುವುದು.

- ಹೆಚ್ಚು ದೂರ ಕಾಗದದ ಚೆಂಡು ಚಲಿಸುವಂತೆ ಮಾಡಿದ ಮಗು ವಿಜಯಶಾಲಿಯಾಗುವನು.

## 9. ಬಾಟಲಿಯನ್ನು ನೀರಿನಲ್ಲಿ ಮುಳುಗಿಸಬಹುದೇ?

**ಸಾಮಗ್ರಿಗಳು**
- ಸಣ್ಣ ಪ್ಲಾಸ್ಟಿಕ್ ಡಬ್ಬಿ, ಸಣ್ಣ ಸಣ್ಣ ಕಲ್ಲುಗಳು, ಬಕೆಟ್, ನೀರು

**ಮಾಡುವ ವಿಧಾನ**
- ಡಬ್ಬಿಯನ್ನು ನೀರಿನಲ್ಲಿ ಹಾಕುವುದು, ತೇಲುವುದು
- ನೀರಿನಲ್ಲಿ ಮುಳುಗಿಸಲು ಏನು ಮಾಡಬಹುದು – ಚರ್ಚೆ
- ಕಲ್ಲು ಹಾಕಬೇಕು – ಪ್ರತಿಯೊಬ್ಬರಿಗೂ ಕಲ್ಲು ಒಂದೊಂದು ನೀಡಬೇಕು. ಕಲ್ಲನ್ನು ಡಬ್ಬಿಯಲ್ಲಿ ಹಾಕಿ ನೀರಿನಲ್ಲಿಟ್ಟಾಗ ಉಂಟಾಗುವ ಬದಲಾವಣೆ ನಿರೀಕ್ಷಿಸುವುದು.
- ಡಬ್ಬಿ ಪೂರ್ಣವಾಗಿಯೂ ನೀರಲ್ಲಿ .... ಯಾವಾಗ ಮುಳುಗುವುದು?

## 10. ಗ್ಲಾಸಿಗೆ ನೀರು ತುಂಬಿಸುವಾ

**ಸಾಮಗ್ರಿಗಳು**
- ಬಕೆಟ್, ನೀರು ಗ್ಲಾಸ್, ............

**ಮಾಡುವ ವಿಧಾನ**
- ಒಂದು ಸ್ಟೂಲಿನಲ್ಲಿ ಒಂದು ಬಕೆಟ್ ನೀರು ಇಡುವುದು
- 4, 5 ಗ್ಲಾಸುಗಳೊಂದಿಗೆ ಸುತ್ತಿ ನಿಲ್ಲುವುದು
- ಪ್ರತಿಯೊಂದು ಮೇಸ್ತ್ರಿಪೈಪ್ (ಬಿಳಿಯ ಸಪೂರವಾದ ಪ್ಲಾಸ್ಟಿಕ್ ಪೈಪ್) ನೀಡುವುದು.
- ಬಕೆಟಿನಲ್ಲಿ ಪೈಪ್ ಇರಿಸಿ ನೆಲದಲ್ಲಿ ಕುಳಿತು ಪೈಪಿನ ಮೂಲಕ ನೀರು ಹೀರಿ ಗ್ಲಾಸಿಗೆ ತುಂಬಿಸುವುದು.

## 11. ಕಾಗದವನ್ನು ಬಾಟ್ಲಿಯೊಳಗೆ ಹಾಕಬಹುದೇ?

**ಸಾಮಗ್ರಿಗಳು**
- ಪ್ಲಾಸ್ಟಿಕ್ ಬಾಟ್ಲಿ, ಕಾಗದ

**ಮಾಡುವ ವಿಧಾನ**
- ಪ್ಲಾಸ್ಟಿಕ್ ಬಾಟ್ಲಿಯನ್ನು ಮಲಗಿಸಿ ಇಡುವುದು
- ಬಾಯಿಯ ಭಾಗದಲ್ಲಿ ಒಂದು ತುಂಡು ಕಾಗದ ಅಂಟಿಸಿರಿ.
- ಬಾಯಿಯ ಭಾಗದಲ್ಲಿ ಊದಿ ಕಾಗದದ ತುಂಡನ್ನು ಬಾಟ್ಲಿಯೊಳಗೆ ಹಾಕಲು ಪ್ರಯತ್ನಿಸಿರಿ.

## 12. ಹಿರಿದಾಗುವ ಪುಗ್ಗೆ

**ಸಾಮಗ್ರಿಗಳು**
- ಪ್ಲಾಸ್ಟಿಕ್ ಬಾಟ್ಲಿ, ಬಲೂನ್, ರಬ್ಬರ್‌ಬ್ಯಾಂಡ್, ನೀರು, ಬಕೆಟ್

**ಉಪಕರಣ**
- ಕತ್ತಿ

**ನಿರ್ಮಾಣ ರೀತಿ**

1. ಒಂದು ಪ್ಲಾಸ್ಟಿಕ್ ಬಾಟ್ಲಿಯನ್ನು ತೆಗೆದುಕೊಳ್ಳುವುದು, ಬಾಟ್ಲಿಯ ಅಡಿಭಾಗವನ್ನು ಕತ್ತರಿಸಿ ತೆಗೆಯಿರಿ.
2. ಮುಚ್ಚಳವನ್ನು ತೆಗೆದು ಅಲ್ಲಿ ಒಂದು ಪುಗ್ಗೆಯನ್ನು ಕಟ್ಟಿರಿ.

**ಚಟುವಟಿಕಾ ರೀತಿ**

1. ಬಾಟ್ಲಿಯನ್ನು ನೀರಿನಲ್ಲಿ ಮುಳುಗಿಸಿದಾಗ ಏನು ಕಾಣುತ್ತೇವೆ? ಪುಗ್ಗೆ ದೊಡ್ಡದಾಗುವುದಿಲ್ಲವೇ?
2. ಬಲೂನಿನ ಕುತ್ತಿಗೆಗೆ (ಬಾಟ್ಲಿಯ ಕುತ್ತಿಗೆಯ ಮೇಲ್ಭಾಗದಲ್ಲಿ) ನೂಲಿನಿಂದ ಕಟ್ಟಿದ ಬಳಿಕ ಬಾಟ್ಲಿಯನ್ನು ಹೊರತೆಗೆಯಿರಿ.
3. ಮತ್ತೊಮ್ಮೆ ಬಾಟ್ಲಿಯನ್ನು ನೀರಿನಲ್ಲಿ ಮುಳುಗಿಸಿದ ಬಳಿಕ ಕಟ್ಟವನ್ನು ಬಿಚ್ಚಿದರೆ ಏನಾದೀತು?

# 4. ವಿವಿಧ ಆಟಗಳು



## 1. ಹಾಡುತ್ತಾ ಆಡುವ

ಮಕ್ಕಳೆಲ್ಲರೂ ವೃತ್ತಾಕಾರದಲ್ಲಿ ನಿಲ್ಲುವರು. ಟೀಚರೂ, ಮಕ್ಕಳೂ ಸೇರಿ ಹಾಡಿ ಆಡುವರು.

ಕೂರೋಣ ನಾವು ಕೂರೋಣ
ಕೂರೋಣ ನಾವು ಕೂರೋಣ
ಕೂರೋಣ ನಾವು ಕೂರೋಣ
ಕುಳಿತು ಕುಳಿತು ಆಡೋಣ
ನಿಲ್ಲೋಣ ನಾವು ನಿಲ್ಲೋಣ(3)
ನಿಂತಲ್ಲೇ ನಿಲ್ಲೋಣ
ನಡೆಯೋಣ ನಾವು ನಡೆಯೋಣ (3)
ದಡ ಬಡ ದಡ ಬಡ ನಡೆಯೋಣ
ಓಡೋಣ ನಾವು ಓಡೋಣ(3)
ಓಡಿ ಓಡಿ ಆಡೋಣ
ಹಾರೋಣ ನಾವು ಹಾರೋಣ (3)
ಹಾರಿ ಹಾರಿ ಆಡೋಣ

## 2. ಕೈತಟ್ಟಿ ಹಾಡುವ

ಟೀಚರ್ ಹಾಡು ಹಾಡುವುದು. ಮಕ್ಕಳು ಕೈತಟ್ಟುವುದು. ನಂತರ ಮಕ್ಕಳು ಹಾಡುತ್ತಾ ಕೈ ತಟ್ಟುವುದು.

ಗಾಳಿಯದು ಬೀಸಿ ಬಂತು
ಕೈಯೆರಡು ತಟ್ಟಿರಿ (x x - ಎರಡು ಸಲ ಕೈಚಪ್ಪಾಳೆ ತಟ್ಟುವುದು)
ಮಳೆಯೊಂದು ಬೀಸಿ ಬಂತು
ಕೈಯೆರೆಡು ತಟ್ಟಿರಿ (x x - ಎರಡು ಸಲ ಕೈಚಪ್ಪಾಳೆ ತಟ್ಟುವುದು)
ಗಾಳೀ ಮಳೆಯೂ ಒಂದಾದಾಗ
ಕೈಗಳೆಷ್ಟು ತಟ್ಟುವಿರಿ (x x x x - ನಾಲ್ಕು ಸಲ ಕೈಚಪ್ಪಾಳೆ ತಟ್ಟುವುದು)

## 3. ಗೆಳೆಯರು

ತರಗತಿಯ ಮಕ್ಕಳನ್ನು 4 ಗುಂಪುಗಳನ್ನಾಗಿಸುವುದು

1. ಕೋಳಿ ಮರಿಗಳು
2. ಕಾಗೆ ಮರಿಗಳು
3. ನಾಯಿ ಮರಿಗಳು
4. ಬೆಕ್ಕಿನ ಮರಿಗಳು

ಟೀಚರ್ ಎದುರಿನಲ್ಲಿ ಕುಳಿತುಕೊಳ್ಳುವುದು

*ಟೀಚರ್ 'ಕೋಳಿ ಮರಿಗಳು ಬರಲೀ' – ಎಂದು ಹೇಳುವುದು*
*ಆಗ 1 ನೇ ಗುಂಪು*
*ಕೀಯೋಂ ಕೀಯೋಂ ಕೀಯೋಂ ಕೀಯೋಂ ಕೋಳಿ ಮರಿಗಳು*
*ಕೀಯೋಂ ಕೀಯೋಂ ಕೀಯೋಂ ಕೀಯೋಂ ಕೋಳಿ ಮರಿಗಳು*
*ಎಂದು ಹಾಡುತ್ತಾ ಮುಂದಕ್ಕೆ ಬಂದು ಹಿಂದಕ್ಕೆ ಹಾರುವುದು*

*ಟೀಚರ್ 'ಕಾಗೆ ಮರಿಗಳು ಬರಲಿ' ಎಂದು ಹೇಳುವುದು.*
*2ನೇ ಗುಂಪು ಕಾಕಾ... ಕಾಕಾ....ಕಾಗೆ ಮರಿಗಳು*
*ಕಾಕಾ....ಕಾಕಾ.....ಕಾಗೆ ಮರಿಗಳು*
*ಎಂದು ಹಾಡುತ್ತಾ ಮುಂದಕ್ಕೆ ಬಂದು ಹಿಂದಕ್ಕೆ ಹಾರಲಿ*
*ಟೀಚರ್ ನಾಯಿ ಮರಿಗಳು ಬರಲಿ*

*3ನೇ ಗುಂಪು ಬೌ...ಬೌ....ಬೌ...ನಾಯಿ ಮರಿಗಳು*

*ಬೌ...ಬೌ...ಬೌ... ನಾಯಿ ಮರಿಗಳು(2) ಟೀಚರ್ ಬೆಕ್ಕಿನ ಮರಿಗಳು*

*4 ನೇ ಗುಂಪು ಮ್ಯಾಂ....ಮ್ಯಾಂ....ಮ್ಯಾಂ....ಮ್ಯಾಂ.... ಬೆಕ್ಕಿನ ಮರಿಗಳು*

## 4. ಜಾತ್ರೆಯ ಗೌಜಿ

**ಸಾಮಗ್ರಿಗಳು :** ಆಟದ ಚೆಂಡೆ, ಪೀಪಿಗಳು...

**ಚಟುವಟಿಕೆ**

- ಮಕ್ಕಳ ತಮ್ಮ ಕೈಯಲ್ಲಿರುವ ಚೆಂಡೆ, ಪೀಪಿ.....ಎಲ್ಲಾ ರೀತಿಯ ಶಬ್ದಗಳ ಉಪಕರಣಗಳನ್ನು ತರಗತಿಗೆ ತರುವುದು.
- ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸುವುದು. ಒಬ್ಬೊಬ್ಬ ಕೈಯಲ್ಲಿ ಒಂದೊಂದು ಉಪಕರಣಗಳೂ (ಪೀಪಿ ಇದ್ದವರೆಲ್ಲಾ ಒಟ್ಟಿಗೆ, ಚೆಂಡೆ ಇರುವವರೆಲ್ಲಾ ಒಟ್ಟಿಗೆ ಹೀಗೆ)
- ಟೀಚರ್ ಮಧ್ಯಭಾಗದಲ್ಲಿ ಕೈ ಎತ್ತುವಾಗ ಶಬ್ದಮಾಡಲು ಆರಂಭಿಸಬೇಕು. ಕೈ ಕೆಳಗೆ ಇಳಿಸಿದಾಗ ಶಬ್ದ ನಿಲ್ಲಬೇಕು.
- ಒಂದೋ ಎರಡೋ ಸಲ ಮಾಡಿದ ನಂತರ ಒಂದೇ ತಾಳದಲ್ಲಿ ಶಬ್ದ ಮಾಡಲು ಪ್ರಯತ್ನಿಸಲಿ.

**2 ನೇ ಹಂತ**

- ಒಂದೇ ರೀತಿಯ ಉಪಕರಣಗಳನ್ನು ತೆಗೆದು ಒಂದೊಂದು ಮೂಲೆಯಲ್ಲಿ ನಿಲ್ಲುವುದು.
- ಟೀಚರ್ ಒಂದು ಮೂಲೆಗೆ ಕೈ ತೋರಿಸುವಾಗ ಆ ಮೂಲೆಯ ಮಕ್ಕಳು ಮಾತ್ರ ಶಬ್ದವನ್ನುಂಟು ಮಾಡಬೇಕು.
- ಟೀಚರ್ ಒಂದು ಕೈ ಎತ್ತಿ ಇನ್ನೊಂದು ಮೂಲೆಗೆ ಬೆರಳು ತೋರಿಸಿದಾಗ ಮೊದಲಿನವರೂ ಶಬ್ದ ಮಾಡುತ್ತಾ ಇರಬೇಕು.
- ಎಲ್ಲಾ ಮೂಲೆಯಲ್ಲಿರುವವರಿಗೂ 2,3 ಸಲ ಅವಕಾಶ ನೀಡುವ ಚಟುವಟಿಕೆ ಆವರ್ತಿಸಬೇಕು.

## 5. ದೋಣಿಯೋಟ

**ಸಾಮಗ್ರಿಗಳು –** ಪಿವಿಸಿ ಪೈಪ್, ಮಧ್ಯಭಾಗದಲ್ಲಿ ಸೀಳಿದ ತುಂಡುಗಳ (ಎರಡು ಬದಿಯಲ್ಲಿ ಮುಚ್ಚಿದ್ದು), 1 ಮೀಟರ್, 2 ತುಂಡು ಥರ್ಮೋಕೋಲ್, ಕಾಗದದ ದೋಣಿ, ನೀರು

**ಚಟುವಟಿಕೆ**

- 2 ಪಿ.ವಿ.ಸಿ ಪೈಪಿನ ಅರ್ಧ ತುಂಡಿನಲ್ಲಿ ನೀರು ತುಂಬಿಸಿ ತರಗತಿಯಲ್ಲಿರಿಸಬೇಕು
- ಥರ್ಮೋಕೋಲ್ ಕತ್ತರಿಸಿ ಪೇಪರ್‌ನಿಂದ ಒಂದೇ ಗಾತ್ರದ ದೋಣಿ ಮಾಡಬೇಕು
- 2 ಮಕ್ಕಳಂತೆ ಮುಂದೆ ಒಂದು ಪೈಪಿನ ಒಂದು ಭಾಗದಲ್ಲಿ ದೋಣಿ ಇಟ್ಟು ಊದಿ ಇನ್ನೊಂದು ಭಾಗಕ್ಕೆ ದಾಟಿಸಬೇಕು.
- ಮೊದಲು ತಲುಪಿಸುವ ವ್ಯಕ್ತಿ ವಿಜಯಶಾಲಿಯಾಗುವನು. ಹೀ ಎಲ್ಲರೂ ಮಾಡಲಿ.

## 6. ಕಾಡಿನ ಗೆಳೆಯರು

**ಸಾಮಗ್ರಿಗಳು –** ಮುಖವಾಡಗಳು, ಕಾಡು/ಮರ

**ಚಟುವಟಿಕೆ**

- ತರಗತಿಯ ಒಂದು ಮೂಲೆಯಲ್ಲಿ ಮರದ ಗೆಲ್ಲುಗಳನ್ನು ಸ್ಥಾಪಿಸಿ ವಾತಾವರಣ ನಿರ್ಮಿಸುವುದು/ಅಡಗು ತಾಣ ನಿರ್ಮಿಸಬೇಕು.
- ಅಲ್ಲಿ ಮಕ್ಕಳ ಸಂಖ್ಯೆಗನುಸರಿಸಿ ಪ್ರತಿಯೊಂದು ಜೀವಿಯ ಮುಖವಾಡ ಇರಿಸಬೇಕು.
- ಮಕ್ಕಳು ಇಲ್ಲಿ ಅವಿತು ಕುಳಿತುಕೊಳ್ಳಲಿ.
- ಟೀಚರ್ ಒಂದು ಜೀವಿಯ ಶಬ್ದವನ್ನುಂಟುಮಾಡುತ್ತಾ ಹೊರಗೆ ದಾಟಿ ಬಂದು ಒಳಗೆ ಹೋಗುವುದು.

**ಆಟಗಳು/ಚಟುವಟಿಕೆಗಳು**

ಮುಖವಾಡಗಳ ವಿಭಾಗಗಳಿಗನುಸಾರವಾಗಿ ಟೀಚರ್ ಶಬ್ದವನ್ನುಂಟು ಮಾಡುವುದು. ಮಕ್ಕಳು ಮುಖವಾಡ ಧರಿಸಿ ಶಬ್ದವನ್ನುಂಟುಮಾಡುತ್ತಾ ಹೊರಗೆ ಬರುವುದು.

## 7. ಅಂಗಿಗೆ ಗುಂಡಿ ಹಾಕುವ

**ಸಾಮಗ್ರಿಗಳು** – ಹ್ಯಾಂಗರ್, 2 ಅಂಗಿ

**ಚಟುವಟಿಕೆ**

- ತರಗತಿಯ ಒಂದು ಬದಿಯಲ್ಲಿ 2 ಹ್ಯಾಂಗರ್‌ಗಳಲ್ಲಿ ಮೇಲಿನ ಒಂದು ಗುಂಡಿ ಮಾತ್ರ ಹಾಕಿ ತೂಗುಹಾಕಬೇಕು.
- ಮತ್ತೊಂದು ಭಾಗದಲ್ಲಿ 2 ಮಕ್ಕಳನ್ನು ನಿಲ್ಲಿಸುವುದು.
- ಟೀಚರ್ ಸೂಚನೆ ನೀಡುವಾಗ ಇಬ್ಬರೂ ಹ್ಯಾಂಗರ್‌ನ ಹತ್ತಿರ ಓಡಿ ಬಂದು ಗುಂಡಿ(ಬಟನ್) ಹಾಕುವುದು.
- ಮೊದಲು ಮುಗಿಸಿದವರು ವಿಜಯಶಾಲಿಯಾಗುವನು.
- ಎಲ್ಲಾ ಮಕ್ಕಳಿಗೂ ಅವಕಾಶ ಸಿಗುವವರೆಗೂ ಆಟ ಮುಂದುವರಿಸಿ ಚಟುವಟಿಕೆ ನೀಡುವುದು..

ಗುಂಡಿ (ಬಟನ್) ಹಾಕಲು ಕಷ್ಟವಿರುವ ಮಕ್ಕಳಿಗೆ ಅಕ್ಕಿಯನ್ನೂ ಪಚ್ಚೆ ಹೆಸರನ್ನೂ ಸೇರಿಸಿ ನೀಡುವುದು. ಅವುಗಳನ್ನು ಬೇರ್ಪಡಿಸಲು ಸಂದರ್ಭ ನೀಡುವುದು. ಸೂಕ್ಷ್ಮಪೇಶಿ ವಿಕಾಸಕ್ಕೆ ಅತ್ಯಂತ ಪ್ರಯೋಜನಕಾರಿಯಾದ ಚಟುವಟಿಕೆ ಇದಾಗಿದೆ.

## 8. ಕಾಗೆ ಪಟ ಪಟ

**ಸಾಮಗ್ರಿಗಳು**

**ಚಟುವಟಿಕೆ**

- ಮಕ್ಕಳು ಸಾಲಾಗಿ ನಿಲ್ಲುವರು ಟೀಚರ್ 'ಕಾಗೆ ಪಟ ಪಟ' ಎಂದು ಹೇಳುತ್ತಾರೆ.
- ಹಾರುವ ಜೀವಿಯ ಹೆಸರು ಹೇಳಿದರೆ ಹಾರಿದ ಹಾಗೆ ಅಭಿನಯಿಸುತ್ತಾ ಕೈಗಳನ್ನು ಹಾರುವ ಹಾಗೆ ಬೀಸುತ್ತಾ ಓಡಬೇಕು.
- (ದನ ಪಟ ಪಟ) ಹಾರದ ಜೀವಿಯ ಹೆಸರು ಹೇಳಿದರೆ ಹಾರಿದ ಹಾಗೆ ಅಭಿನಯಿಸಬಾರದು ಮತ್ತು ಓಡಲುಬಾರದು.
- ತಪ್ಪಾಗಿ ಅಭಿನಯಿಸುವ ಮಕ್ಕಳನ್ನು ಆಟದಿಂದ ಹೊರಗೆ ನಿಲ್ಲಿಸಬೇಕು. ಕೊನೆಗೆ ಬಾಕಿಯಾದವರನ್ನು ವಿಜಯಿಯಾಗಿ ಘೋಷಿಸಬೇಕು.
- ಆಟವನ್ನು ಹಲವಾರು ಬಾರಿ ಆಡಿಸುವುದು.

## 9. ಹಣ್ಣಿನಂಗಡಿ

**ಸಾಮಗ್ರಿಗಳು**

ಹಣ್ಣುಗಳು ಚಿತ್ರಗಳು/ಪಪೆಟ್/ಮುಖವಾಡಗಳು

**ಚಟುವಟಿಕೆ**

- ತರಗತಿಯ ಮಕ್ಕಳ ಕೈಯಲ್ಲಿ ಮಾವು, ಹಲಸು, ಕಿತ್ತಳೆ, ಸೇಬು, ಬಾಳೆಹಣ್ಣು, ಇತ್ಯಾದಿಗಳ ಚಿತ್ರವನ್ನೋ ಮುಖವಾಡವನ್ನೋ ನೀಡುವುದು. ತರಗತಿಯ ಹಿಂಬದಿಯಲ್ಲಿ ಸಾಲಾಗಿ ನಿಲ್ಲುವುದು.
- ಟೀಚರ್ 'ಸೇಬು ಬರಲಿ' ಎಂದು ಹೇಳುವುದು
- ಸೇಬು ಪಪೆಟ್ ಕೈಯಲ್ಲಿರುವ ಮಗು 'ಸೇಬು ಬರುತ್ತಿದೆ ಸೇಬು ಬರುತ್ತಿದೆ' ಎಂದು ಗಟ್ಟಿಯಾಗಿ ಹೇಳುತ್ತಾ ಹಾರಿ ಹಾರಿ ಮುಂದಕ್ಕೆ ಬಂದು ಪಪೆಟ್ ಎತ್ತಿ ಹಿಡಿದು ನಿಲ್ಲುವುದು.
- ಇತರ ಹಣ್ಣುಗಳ ಹೆಸರು ಹೇಳಿಸುತ್ತಾ ಆಟ ಮುಂದುವರಿಸಬೇಕು.
- ಒಂದೋ ಎರಡೋ ಸಲ ಆಟ ಆಡಿಸಿದ ಬಳಿಕ ಪಪೆಟ್ ಮೇಜಿನ ಮೇಲೆ ಇರಿಸುವುದು.
- ಮಕ್ಕಳು ಸುತ್ತಲೂ ನಿಲ್ಲುವುದು.
- ಟೀಚರ್ 'ಮಾವು' ನಿಂಬೆಯ ಕಿವಿ ಮುಟ್ಟಿ ಹೋಗು ಎಂದು ಹೇಳುತ್ತಾರೆ.
- 'ಮಾವು' ತೆಗೆದ ಮಗು ನಿಂಬೆಯನ್ನು ತೆಗೆದ ಮಗುವಿನ ಕಿವಿಯನ್ನು ಮುಟ್ಟಿ ಹೋಗುವುದು.
- ಇತರ ಮಕ್ಕಳು ಮಾಡಿದ್ದು ಸರಿಯೋ ಎಂದು ಹೇಳುವುದು.

## 10. ಬಲಕ್ಕೆ ಎಡಕ್ಕೆ ಆಟ

**ಸಾಮಗ್ರಿಗಳು**

**ಚಟುವಟಿಕೆ**

- ಟೀಚರೂ ಮಕ್ಕಳೂ ಸಾಲಾಗಿ ಒಂದೇ ಸಾಲಿನಲ್ಲಿ ನಿಲ್ಲುವುದು.
- ಟೀಚರ್ ಬಲಕ್ಕೆ ಚಾಚಿರಿ ಎಂದು ಹೇಳಿ ಬಲಕ್ಕೆ ಚಾಚಿ ಹಿಡಿಯುವುದು. ಅದೇ ರೀತಿ ಮಕ್ಕಳೂ ಮಾಡುವುದು.

- ಬಲಕೈ ಮಡಚುವುದು. ಬಲಕೈ ಎತ್ತಿರಿ ಎಂದು ಹೇಳುವುದು. ಮಕ್ಕಳು ಮಾಡುವುದು.
- ನಂತರ ಒಂದು ಎರಡು ಸಲ ಟೀಚರೂ ಮಕ್ಕಳೂ ಜೊತೆಯಾಗಿ ಹೇಳುತ್ತಾ ಮಾಡುತ್ತಾ ಇರಬೇಕು.
- ಹಾಡು ಹಾಡುತ್ತಾ ಆಟ ಮುಂದುವರಿಸುವುದು.
    - ಟೀಚರ್ ಹಾಡು ಹಾಡುವುದು ಮಕ್ಕಳು ಅಭಿನಯಿಸುವುದು.
    - ಟೀಚರ್ ಮಕ್ಕಳೂ ಹಾಡು ಹಾಡುತ್ತಾ ಅಭಿನಯಿಸುವುದು.

**ಹಾಡು**

ಬಲದ ಕೈ ಚಾಚಿರಿ, ಬಲದ ಕೈ ಮಡಚಿರಿ ಬಲದ ಕೈ ಎತ್ತಿರಿ
ತನ್ನನ್ನೇ ಸುತ್ತಿರಿ, ಮೇಲಕ್ಕೊಮ್ಮೆ  ಜಿಗಿಯಿರಿ
ಎಡದ ಕೈ ಚಾಚಿರಿ, ಎಡದ ಕೈ ಮಡಚಿರಿ
ತನ್ನನ್ನೇ ಸುತ್ತಿರಿ ಮೇಲಕ್ಕೊಮ್ಮೆ ಜಿಗಿಯಿರಿ

## 11. ಅಯ್ಯೋ ಹುಲಿ ಬಂತು

**ಸಾಮಗ್ರಿಗಳು**

**ಚಟುವಟಿಕೆ**

- ಮಕ್ಕಳು ತರಗತಿಯಲ್ಲಿ ಅಲ್ಲಲ್ಲಿ ನಿಲ್ಲುವುದು
- ಟೀಚರ್ ಮೇಜಿನ ಹಿಂಬದಿಯಲ್ಲೇ ನಿಂತು ಆನೆಯ (ಮಕ್ಕಳಿಗೆ ತಿಳಿದಿರುವ )ಶಬ್ದ ಮಾಡುತ್ತಾ ಬರುವುದು.
- ಮಕ್ಕಳು 'ಅಯ್ಯೋ ಆನೆ ಬಂತು' ಎಂದು ಗಟ್ಟಿಯಾಗಿ ಹೇಳುತ್ತಾ ಓಡುವುದು.



- ಟೀಚರ್ ಒಂದು ಮಗುವನ್ನು ಮುಟ್ಟುವುದು. ಆ ಮಗು ಮೇಜಿನ ಹಿಂದೆ ನಿಂತು ಇನ್ನೊಂದು ಜೀವಿಯ ಶಬ್ದ ಮಾಡುತ್ತಾ ಬರುವುದು.
- ಮಕ್ಕಳು 'ಅಯ್ಯೋ ಹುಲಿ ಬಂತು' ಎಂದು ಹೇಳುತ್ತಾ ಓಡುವುದು. ಒಬ್ಬರನ್ನು ಮುಟ್ಟುವುದು. ಅವನು ಮುಂದಿನ ಜೀವಿ(ಆಟಗಾರ).
- ಆಟ ಮುಂದವರಿಯುವುದು.

## 12. ಕೈತಟ್ಟುವಾಟ

**ಸಾಮಗ್ರಿಗಳು**

**ಚಟುವಟಿಕೆ**

- ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸುವುದು
- ಟೀಚರ್ ಹಾಡಿದ ಹಾಡಿಗೆ ಉತ್ತರ ಬರುವ ರೀತಿಯ ಹಾಡಾಗಿ ಮಕ್ಕಳು ಹಾಡಬೇಕು.

ಟೀಚರ್ – ಕಾಲನು ಮುಟ್ಟಿ ಕೈತಟ್ಟಿ
ಮಕ್ಕಳು – ಕಾಲನು ಮುಟ್ಟುವುದು. ಹಾಡುವುದು
ಕಾಲನು ಮುಟ್ಟಿ ಕೈತಟ್ಟಿ
ಟೀಚರ್ – ಮೊಣಕಾಲ್ ಮುಟ್ಟಿ ಕೈತಟ್ಟಿ
ಮಕ್ಕಳು – ಮೊಣಕಾಲ್ ಮುಟ್ಟಿ ಕೈತಟ್ಟಿ

ನಂತರ ಹೊಟ್ಟೆ, ಎದೆ, ತುಟಿ, ಗಲ್ಲ, ಮೂಗು, ಕಿವಿ, ಕಣ್ಣು, ತಲೆ ಇತ್ಯಾದಿಗಳನ್ನು ಸೇರಿಸಿ ಹಾಡುವುದು.

ನಂತರ ಒಟ್ಟಿಗೆ ಹಾರಿ ಕೈತಟ್ಟಿ



ಮಕ್ಕಳು – ಒಟ್ಟಿಗೆ ಹಾರಿ ಕೈತಟ್ಟಿ

ಟೀಚರ್ – ತಿರುಗಿ ಸುತ್ತಿ ಕೈತಟ್ಟಿ

ಮಕ್ಕಳು – ತಿರುಗಿ ಸುತ್ತಿ ಕೈ ತಟ್ಟಿ

## 13. ಉಗಿ ಬಂಡಿ ಆಟ

**ಚಟುವಟಿಕೆ**

- ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು. ಇಬ್ಬರಿಗೆ ದಾಟಿ ಹೋಗುವಂತೆ ಅಗಲ ಜಾಗ ಬಿಡಬೇಕು.
- ಒಂದು ಮಗುವೂ ಟೀಚರೂ ಮಧ್ಯಭಾಗದಲ್ಲಿ ನಿಲ್ಲಬೇಕು ಮತ್ತು ಹಾಡಬೇಕು

  ಕೂ ಕೂ ಕೂ ಕೂ ಉಗಿಬಂಡಿ

  ಕೂಗುತ ಓಡುವ ಉಗಿಬಂಡಿ

  ಚುಕುಪುಕು ಚುಕುಪುಕು ಉಗಿಬಂಡಿ

  ಚುಕುಪುಕು ಚುಕುಪುಕು ಉಗಿಬಂಡಿ
- ಹಾಡನ್ನು ಮಕ್ಕಳು ಕಲಿತ ನಂತರ ಟೀಚರೂ ಮಕ್ಕಳೂ ಉಗಿಬಂಡಿಯಾಗಿ ಹಾಡು ಹಾಡುತ್ತಾ ಮಕ್ಕಳೊಂದಿಗೆ ಒಂದು ಮಗುವಿನ ಮುಂದೆ ಬಂದು ಮುಂದಿನ ಮಗುವಿನ ಹಿಂದೆ ನಿಂತು ಹಾಡಬೇಕು. ಹಾಡುತ್ತಾ ಓಡುತ್ತಾ ಹಾಡು ನಿಲ್ಲುವಾಗ ಹತ್ತಿರದ ಒಂದು ಮಗುವನ್ನು ಮುಟ್ಟಬೇಕು.
- ಆ ಮಗು ಉಗಿ ಬಂಡಿ ಬೋಗಿಯಾಗಿ ಹಿಂದಿನಿಂದ ಸೇರಬೇಕು. ಅವರು ಮೂವರೂ ಸೇರಿ ಹಾಡು ಹಾಡುತ್ತಾ ನಿಲ್ಲಬೇಕು. ನಂತರದ ಮಗು ಎಂಬಂತೆ ಎಲ್ಲಾ ಮಕ್ಕಳನ್ನೂ ಬೋಗಿಗಳಾಗಿಸುವವರೆಗೆ ಮುಂದುವರಿಸಬೇಕು.

## 14. ಸ್ಟ್ರೋ ಬೆತ್ತ

**ಸಾಮಗ್ರಿಗಳು** – ಸ್ಟ್ರೋ ಬೆತ್ತ

**ಚಟುವಟಿಕೆ**

- ಎಲ್ಲಾ ಮಕ್ಕಳಿಗೂ 5ರಂತೆ ಸ್ಟ್ರೋ ನೀಡುವುದು
- ಮಕ್ಕಳು ಸ್ಟ್ರೋ ಒಂದರೊಳಗೊಂದರಂತೆ ಸ್ವಲ್ಪ ಒಳಗೆ ಹಾಯಿಸಿ ಬೆತ್ತದ ರೂಪದಲ್ಲಿ ಉದ್ದವಾದ ಸ್ಟ್ರೋ ಆಗಿ ಬದಲಾಯಿಸುವುದು.
- ಮೊದಲು ಪೂರ್ತಿಗೊಳಿಸಿದವರು ವಿಜಯಿಯನ್ನಾಗಿ ಘೋಷಿಸಬೇಕು.

  (ಇದರಂತೆ ಉಗಿಬಂಡಿಯನ್ನೂ ಮಾಡಬಹುದು).



## ೩/7 ಗಣಿತದ ಆಟಗಳು

ಈ ದಿನ ನಾನೊಂದು ಹಾಡು ಹೇಳಿಕೊಡುತ್ತೇನೆ. ಎಲ್ಲರು ಒಟ್ಟಿಗೆ ಹಾಡಬೇಕು. ಟೀಚರ್ ತೋರಿಸುವ ಅಭಿನಯವನ್ನು ಮಾಡಬೇಕು. ಬೀನಾ ಟೀಚರ್ ಹಾಡಲಾರಂಭಿಸಿದರು.

*ಒಂದು ಒಂದು ಒಂದು*

*ಕೊಡೆಗೆ ಕಾಲು ಒಂದು*

*ಎರಡು ಎರಡು ಎರಡು*

*ಕೋಳಿಗೆ ಕಾಲು ಎರಡು*

*ಮೂರು ಮೂರು ಮೂರು*

*ತೆಂಗಿನ ಕಾಯಿಗೆ ಕಣ್ಣುಗಳು ಮೂರು*

*ನಾಲ್ಕು ನಾಲ್ಕು ನಾಲ್ಕು*

*ಬೆಕ್ಕಿಗೆ ಕಾಲುಗಳು ನಾಲ್ಕು*

*ಐದು ಐದು ಐದು*

*ಕೈಗೆ ಬೆರಳುಗಳು ಐದು*

ಹಾಡು ಹೇಳುವುದರೊಂದಿಗೆ ಚಿತ್ರಗಳನ್ನು ಪ್ರದರ್ಶಿಸುವುದು. ಒಂದೊಂದು ಸಂಖ್ಯೆಯನ್ನು ಹೇಳುತ್ತಿರುವಾಗ ಅಷ್ಟೇ ಬೆರಳುಗಳನ್ನು ತೋರಿಸಬೇಕು. ಮಕ್ಕಳು ಅದೇ ರೀತಿ ಮಾಡುವುದು.

ಹೀಗೆ ಗಣಿತದ ವಿಚಾರಗಳಿಗೆ ಒತ್ತು ನೀಡುವ ಚಟುವಟಿಕೆಗಳನ್ನು ಪ್ರಿ ಪ್ರೈಮರಿ ತರಗತಿಗಳಲ್ಲಿ ನಡೆಸುತ್ತಿರಲ್ಲವೇ? ಪ್ರಿ ಪ್ರೈಮರಿ ವಯಸ್ಸಿನ ಮಕ್ಕಳಿಗೆ ಗಣಿತ ಪರವಾಗಿ ಏನೇನೂ ಪೂರ್ವಜ್ಞಾನಗಳಿವೆ. ದೊಡ್ಡದೂ – ಸಣ್ಣದೂ, ದೂರ– ಹತ್ತಿರ, ಹೆಚ್ಚು – ಕಡಿಮೆ ಇತ್ಯಾದಿ ಈ ಮಕ್ಕಳಿಗಿರುವ ಪೂರ್ವಜ್ಞಾನಗಳಲ್ಲವೇ? ಇದನ್ನು ಬಳಸಿಕೊಂಡು ಚಟುವಟಿಕೆಗಳನ್ನು ಆಯೋಜಿಸಬಹುದು. ಕಥೆ, ಪದ್ಯ, ನಿರ್ಮಾಣ, ಚಿತ್ರ ರಚನೆ, ಆಟಗಳು ಎಂಬಿತ್ಯಾದಿಗಳಲ್ಲಿ ಗಣಿತಪರವಾದ ಸಾಮರ್ಥ್ಯಗಳನ್ನು ಬೆಳೆಸಲು ಸಂದರ್ಭಗಳಿವೆ.

ಬಾಯಾರಿದ ಕಾಗೆ ಹೂಜಿಯಲ್ಲಿರುವ ನೀರು ಕುಡಿದು ಬಾಯಾರಿಕೆಯನ್ನು ಇಂಗಿಸಿದ ಕಥೆಯನ್ನು ಮಕ್ಕಳಿಗೆ ಹೇಳಿಕೊಟ್ಟಿರುವಿರಲ್ಲವೇ? ಈ ಕಥೆಯಲ್ಲಿ ಗಣಿತ ಸಾಮರ್ಥ್ಯಗಳನ್ನು ಬಳಸಿಕೊಂಡು ಹೇಳಬಹುದಲ್ಲವೇ? ಅದಕ್ಕಾಗಿ ಏನೇನೂ ಬದಲಾವಣೆಗಳು/ಸೇರ್ಪಡೆಗಳನ್ನು ಕಥೆಯಲ್ಲಿ ಮಾಡಬೇಕಾಗಿದೆ.

ಬಾಯಾರಿದ ಕಾಗೆ ಕೆಳಗೆ ದೊಡ್ಡದೊಂದು ಹೂಜಿಯಲ್ಲಿ.

*ಸ್ವಲ್ಪ ನೀರನ್ನು ಕಂಡಿತು........... ಕಾಗೆಗೆ ಒಂದು ಉಪಾಯ ಹೊಳೆಯಿತು. ಕಲ್ಲುಗಳನ್ನು ಹೆಕ್ಕಿ ಹಾಕೋಣ ಒಂದು.........ಎರಡು.......ಮೂರು....ನಾಲ್ಕು.,........ಐದು.....*

*ಒಂದೊಂದೆ ಕಲ್ಲುಗಳನ್ನು ಹೆಕ್ಕಿ ಹೂಜಿಗೆ ಹಾಕಿತು......... ಬಾಯಾರಿಕೆಯನ್ನು ನೀಗಿಸಿತು. ಕಾಗೆಯು ಕಾಕಾ ಎನ್ನುತ್ತಾ ಹಾರಿ ಹೋಯಿತು.*





ಇಂತಹ ಸಾಧ್ಯತೆಗಳನ್ನು ಇತರ ಕಥೆಗಳಲ್ಲೂ ಇರಬಹುದಲ್ಲವೇ? ಸಹಜವಾದ ಸನ್ನಿವೇಶಗಳಲ್ಲಿ ಮಾತ್ರ ಇಂತಹ ಸಾಧ್ಯತೆಗಳನ್ನು ಬಳಸಿಕೊಳ್ಳಲು ಸಾಧ್ಯವಾಗಬೇಕು.

ಮನೆಯೆಂಬ ವಿಷಯಕ್ಕೆ ಸಂಬಂಧಿಸಿ ಧಾರಾಳ ಚಟುವಟಿಕೆಗಳನ್ನು ಮಾಡಲು ಮಗುವಿಗೆ ಸಂದರ್ಭಗಳಿವೆ.

ಮನೆಯ ಚಿತ್ರ ಬಿಡಿಸಿ ಬಣ್ಣ ಕೊಡುವುದು. ಕಾಗದವನ್ನು ಅಂಟಿಸಿ ಮನೆಯ ಆಕೃತಿಯನ್ನು ತಯಾರಿಸುವುದು ಎಂಬೀ ಚಟುವಟಿಕೆಗಳನ್ನು ಮಾಡುವಾಗ ಗಣಿತ ಸಾಮರ್ಥ್ಯಗಳಿಗೆ ಪ್ರಾಧಾನ್ಯ ನೀಡುವ ರೀತಿಯಲ್ಲಿ ಸೂಚನೆಗಳನ್ನು ನೀಡಬಹುದು.

ಎರಡು ಕಿಟಕಿಗಳಿಗೆ ಒಂದೇ ರೀತಿಯ ಬಣ್ಣಗಳನ್ನು ಕೊಡಿರಿ. ಒಂದು ಬಾಗಿಲಿನ ಚಿತ್ರ ಮಾಡಿರಿ. ಉದ್ದವಾಗಿ ಮೆಟ್ಟಿಲುಗಳನ್ನು ರಚಿಸಿರಿ. ದೊಡ್ಡದಾದ ಮನೆ, ಸಣ್ಣಮನೆ, ಕಿಟಕಿ, ಬಾಗಿಲು ಇವುಗಳ ಆಕೃತಿ, ಎತ್ತರವಾದ ಮನೆ, ತಗ್ಗಿನ ಮನೆ ಹೀಗೆ ಏನೇನೂ ಸಾಧ್ಯತೆಗಳಿವೆ?

ಮೊದಲು ಎಲ್ಲರು ದೊಡ್ಡದಾದ ಮನೆಯನ್ನು ಬಿಡಿಸಿರಿ. ಆ ಮೇಲೆ ಅದಕ್ಕಿಂತಲೂ ಸಣ್ಣ ಮನೆಯನ್ನು ಬಿಡಿಸಿರಿ. ಅನಂತರ ಅದಕ್ಕಿಂತಲೂ ಸಣ್ಣ ಮನೆ. ಇಂತಹ ಚಟುವಟಿಕೆಗಳು ಮಕ್ಕಳಲ್ಲಿ ಸವಾಲುಗಳನ್ನು ಆಸಕ್ತಿಯನ್ನು ಉಂಟುಮಾಡಬಹುದಲ್ಲವೇ?

ತಯಾರಿಸಿಟ್ಟ ವಿವಿಧ ಆಕೃತಿಗಳಲ್ಲಿರುವ ಮನೆಗಳ ಕಟೌಟುಗಳನ್ನು ನಿರ್ದಿಷ್ಟ ಸಮಯದೊಳಗೆ ಗಾತ್ರಕ್ಕನುಸಾರವಾಗಿ ಕ್ರಮೀಕರಿಸುವ ಚಟುವಟಿಕೆಯೂ ಒಂದು ರಸವತ್ತಾದ ಆಟವೇ ಅಲ್ಲವೇ?

ಮನೆಯ ಉಪ ವಿಷಯವಾದ ಅಡುಗೆ ಕೋಣೆಯನ್ನು ಪರಿಗಣಿಸುವ. ಅಡುಗೆ ಕೋಣೆ ಎಂಬ ವಿಷಯಕ್ಕೆ ಸಂಬಂಧಿಸಿ ಗಣಿತ ಸಾಮರ್ಥ್ಯಗಳಿಗೆ ಧಾರಾಳ ಸಾಧ್ಯತೆಗಳಿವೆ. ಪಾತ್ರೆಗಳ ಸಂಖ್ಯೆ, ಅಳತೆಗಳು, ಅಡುಗೆ ತಯಾರಿ ಇತ್ಯಾದಿ.



ಒಂದು ಲೋಟ ನೀರು, ಒಂದು ಕಪ್ ನೀರು, ಎರಡು ಬಾಟ್ಲಿ ನೀರು ಎಂಬೀ ಬಳಕೆಗೆ ಸಾಧ್ಯತೆಗಳಿವೆಯಲ್ಲವೇ? ಅಡುಗೆ ತಯಾರಿ ಎನ್ನುವುದು ಮಗುವಿಗೆ ಆಸಕ್ತಿದಾಯಕವಾದ ಚಟುವಟಿಕೆಯಾಗಿದೆ.

ಸಲಾಡ್ ತಯಾರಿಸಲು ಏನೇನೂ ಬೇಕು? ನೀರುಳ್ಳಿ, ಟೋಮೆಟೋ,ಉಪ್ಪು, ಮೊಸರು ಆರಂಭದಲ್ಲಿ ಎರಡು ನೀರುಳ್ಳಿಯನ್ನು ಸಣ್ಣದಾಗಿ ಕತ್ತರಿಸಬೇಕು. ಆ ಮೇಲೆ ಮೂರು ಟೋಮೆಟೋವನ್ನು ಸಣ್ಣದಾಗಿ ಕತ್ತರಿಸಬೇಕು. ಇದಕ್ಕೆ ಒಂದು ಚಮಚ ಉಪ್ಪನ್ನು ಸೇರಿಸುವುದು.

ಒಂದು ಗ್ಲಾಸ್ ಮೊಸರು ನೀಡುತ್ತಾ ಮಕ್ಕಳಿಂದ ಸಲಾಡ್ ತಯಾರಿಸಲು ಹೇಳಬಹುದು.

ಅಳತೆಗಳು, ಸಂಖ್ಯೆಗಳು ಎಂಬಿವುಗಳನ್ನು ಸಹಜ ಸಂದರ್ಭಗಳಲ್ಲಿ ಬಳಸಿಕೊಳ್ಳಲು ಸಾಧ್ಯವಾಗುವ ಚಟುವಟಿಕೆಯಾಗಿದೆ ಅಡುಗೆ ತಯಾರಿ. ಗುಂಪುಗಳನ್ನು ಮಾಡುವುದು, ವರ್ಗೀಕರಿಸುವುದು. ಚಟುವಟಿಕೆಗಳನ್ನು ಮಾಡಬಹುದು. ನೈಜವಾದ ಹಣ್ಣುಗಳು, ತರಕಾರಿಗಳು ಅಥವಾ ಹಣ್ಣುಗಳ, ತರಕಾರಿಗಳ ಮಾದರಿಗಳು/ಚಿತ್ರಗಳು ಎಂಬಿವುಗಳನ್ನು ಗುಂಪುಗಳನ್ನಾಗಿ ಮಾಡಲು ಹೇಳಬಹುದು.

ಮಾವಿನ ಹಣ್ಣುಗಳ ಗುಂಪು, ಸೇಬುಗಳ ಗುಂಪು, ಸೌತೆಕಾಯಿಗಳ ಗುಂಪು ಇತ್ಯಾದಿಗಳನ್ನು ಹೀಗೆ ಗುಂಪು ಮಾಡಬಹುದು. ಯಾವ ಗುಂಪು ದೊಡ್ಡದು? ಯಾವ ಗುಂಪು ಸಣ್ಣದು? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಬಹುದು.

ಯಾವ ಗುಂಪು ಅತೀ ದೊಡ್ಡದು, ಅದಕ್ಕಿಂತಲೂ ಸಣ್ಣದು ಯಾವ ಗುಂಪು? ಮಕ್ಕಳಿಂದ ಉತ್ತರ ಹೇಳಿಸಬಹುದು. ಇದನ್ನೊಂದು ಆಟದ ಚಟುವಟಿಕೆಯಾಗಿಯೂ ಮಾಡಬಹುದು. ಮೇಜಿನ ಮೇಲೆ ಒಂದು ಸ್ಕೂಲ್ ಬ್ಯಾಗ್‌ನ್ನು ಇರಿಸುವುದು. ಇದಕ್ಕಿಂತ ಸಣ್ಣದಾಗಿರುವ ಒಂದು ವಸ್ತುವನ್ನು ಎಲ್ಲರೂ ತೋರಿಸಿರಿ. ಮಕ್ಕಳು ತೋರಿಸುವರು.

ಇನ್ನೂ ಅದಕ್ಕಿಂತಲೂ ಸಣ್ಣದಾಗಿರುವುದನ್ನು ತೆಗೆದು ತೋರಿಸಿರಿ. ಇನ್ನು ಅದಕ್ಕಿಂತಲೂ ಸಣ್ಣದು... ಹೀಗೆ ಸೂಕ್ಷ್ಮಮಟ್ಟದ ನಿರೀಕ್ಷಣೆಯತ್ತ ಮಕ್ಕಳನ್ನು ಮುನ್ನಡೆಸಬೇಕು.

## ಇನ್ನೂ ಏನೇನು ಸಾಧ್ಯತೆಗಳು

ಸೀಟಿ ಊದಿದಾಗ ಎಲೆಗಳನ್ನು ದೊಡ್ಡದರಿಂದ ಕ್ರಮಾನುಗತವಾಗಿ ಸಣ್ಣದರಂತೆ ಇರಿಸುವುದು.

ಒಬ್ಬರು ಒಂದು ದೊಡ್ಡ ವೃತ್ತವನ್ನು ರಚಿಸುವುದು. ಮತ್ತೊಬ್ಬರು ಅದಕ್ಕಿಂತ ಸಣ್ಣ ವೃತ್ತವನ್ನು ರಚಿಸುವುದು. ಹೀಗೆ ಅತೀ ಸಣ್ಣ ವೃತ್ತ ರಚಿಸಲು ಸಾಧ್ಯವೇ?

ಸಾಮಾನ್ಯವಾಗಿ ಗಣಿತ ಸಾಮರ್ಥ್ಯ ವಿಕಾಸಕ್ಕಾಗಿ ಸಂದರ್ಭಗಳನ್ನು ಚಟುವಟಿಕೆಯ ಭಾಗವಾಗಿ ನಡೆಸಲು ಸಾಧ್ಯವಾಗಬೇಕು. ಸ್ಥಳ ಪರವಾದ ವಿಷಯಗಳು ಮತ್ತು ಸ್ವಭಾವ ಪರವಾದ ವಿಚಾರ ಇತ್ಯಾದಿಗಳು ಗಣಿತ ಪೂರ್ವ ಸಾಮರ್ಥ್ಯಗಳಾಗಿವೆ.

ಹತ್ತಿರ – ದೂರ – ಕೆಳಗೆ – ಮೇಲೆ..............

ದೊಡ್ಡ ಗುಂಪೂ, ಸಣ್ಣ ಗುಂಪೂ, ದೊಡ್ಡ ಪೆಟ್ಟಿಗೆ, ಸಣ್ಣ ಪೆಟ್ಟಿಗೆ, ಹೆಚ್ಚು ಉದ್ದ, ಕಡಿಮೆ ಉದ್ದ – ಇತ್ಯಾದಿಗಳು ಸ್ವಭಾವ ಪರವಾದ ಸಾಮರ್ಥ್ಯಗಳಾಗಿವೆ.

ಗಣಿತ ಕಲಿಕೆಯ ಹಂತಗಳಲ್ಲಿ - ELPS ನ ಯಾವ ಯಾವ ಹಂತಗಳನ್ನು ಪರಿಗಣಿಸಬೇಕು?

E - ಎಕ್ಸ್‌ಪೀರಿಯನ್ಸ್
L - ಲಾಂಗ್ವೇಜ್
P - ಪಿಕ್ಚರ್
S - ಸಿಂಬಲ್

ಇದರಲ್ಲಿ ಮೊದಲ ಮೂರು ಹಂತಗಳು ಪ್ರಿ – ಪ್ರೈಮರಿ ತರಗತಿಯಲ್ಲಿ ಪರಿಗಣಿಸಬೇಕಾದುದು S ಈ ಹಂತದಲ್ಲಿ ಅಗತ್ಯವಿಲ್ಲ.

ಮಗುವಿನ ಪೂರ್ವಜ್ಞಾನವನ್ನು ಉಪಯೋಗಿಸಿ ಅನುಭವಗಳನ್ನು ನೀಡಬೇಕು. ಇದಕ್ಕೆ ಅಗತ್ಯವಾದ ಗಣಿತದ ಭಾಷೆ ಉಪಯೋಗಿಸಬೇಕು. ಚಿತ್ರ/ರೂಪ ಇತ್ಯಾದಿಗಳೊಂದಿಗೆ ಹೊಂದಿಕೊಳ್ಳಬೇಕು. (5 ಹೂವು – 4 ಗಿಳಿ ಇತ್ಯಾದಿ)ಗಣಿತ ಸಾಮರ್ಥ್ಯವು ಈ ಹಂತಗಳನ್ನು ಕ್ರಮಾನುಗತವಾಗಿ ವಿಕಾಸಗೊಳಿಸಬೇಕಾದುದಾಗಿದೆ.

## 5. ನಿರ್ಮಾಣ

### 1. ನವಿಲು

**ಸಾಮಗ್ರಿಗಳು** : ದಪ್ಪದ ಕಾಗದ, ಪೆನ್ಸಿಲ್, ಕ್ರಯೋನ್, ಸ್ಕೆಚ್‌ಪೆನ್

**ತಯಾರಿಸುವ ರೀತಿ**

1. ಚೌಕಾಕೃತಿಯ ಒಂದು ದಪ್ಪ ಕಾಗದವನ್ನು ತೆಗೆದುಕೊಳ್ಳಿರಿ. ಚೂಪಾದ ಭಾಗಗಳನ್ನು ಒಳಗೆ ಮಡಚಿರಿ.
2. ಚೂಪಾದ ಭಾಗಗಳನ್ನು ಒಳಗೆ ಮಡಚಿರಿ
3. ಚಿತ್ರದಲ್ಲಿ ಕಾಣಿಸಿರುವಂತೆ ಮಡಚಿರಿ
4. ಮುಂದಿನಲ್ಲಿ ಚೂಪಾದ ಭಾಗವು ತಲೆಯಾಯಿತು
5. ಬಣ್ಣ ಹಚ್ಚಿರಿ ನವಿಲು ತಯಾರು



### 2. ಕಾಗದ ತಿಮಿಂಗಿಲ

**ಸಾಮಗ್ರಿಗಳು** : ದಪ್ಪ ಕಾಗದ, ಪೆನ್ಸಿಲು, ಕ್ರಯೋನ್, ಸ್ಕೆಚ್‌ಪೆನ್,

**ಉಪಕರಣ : ಕತ್ತರಿ**

**ತಯಾರಿಸುವ ರೀತಿ**

1. ಚೌಕಾಕಾರದ ಒಂದು ದಪ್ಪ ಕಾಗದ ತೆಗೆದುಕೊಳ್ಳಿರಿ. ಚೂಪಾದ ಭಾಗದ ಮೂಲಕ ಒಳಗೆ ಮಡಚಿರಿ.
2. ಕಾಗದ ಚೂಪಾದ ಮೂಲೆಯ ಮೇಲಿನ ಭಾಗವನ್ನು ಕೆಳಭಾಗಕ್ಕೆ ಮಡಚಿರಿ.
3. ಒಳಭಾಗಕ್ಕೆ ಮಡಚಿದ ಎರಡು ಭಾಗಗಳನ್ನು ಸೇರಿಸಿ ಗೆರೆ ಇರುವ ಭಾಗದಲ್ಲಿ ಮಡಚಿರಿ. ತಿಮಿಂಗಿದ ದೇಹ ತಯಾರಾಯಿತು.
4. ಕಾಗದದ ಚೂಪಾದ ಭಾಗವನ್ನು ಹಿಂದಕ್ಕೆ ಭಾಗಿಸಿದಾಗ ಬಾಲ ತಯಾರಾಯಿತು.
5. ಪೆನ್ಸಿಲ್ ಉಪಯೋಗಿಸಿ ಕಣ್ಣು, ಬಾಯಿ ಚಿತ್ರಿಸಿ ಬಣ್ಣ ಹಚ್ಚಿರಿ. ತಿಮಿಂಗಿಲ ತಯಾರು.



## 3. ಕಾಗದ ಪೆಂಗ್ವಿನ್

**ಸಾಮಗ್ರಿಗಳು:** ಕಾಗದ, ಸ್ಕೆಚ್‌ಪೆನ್, ಅಂಟು

**ತಯಾರಿಸುವ ರೀತಿ**

1. ಚೌಕಾಕಾರದ ಕಾಗದವನ್ನು ತೆಗೆದುಕೊಳ್ಳಿರಿ. ಅದನ್ನು ಚಿತ್ರದಲ್ಲಿ ತೋರಿಸಿದಂತೆ ಮಡಚಿರಿ.
2. ಮಧ್ಯದಲ್ಲಿರುವ ಗೆರೆಯ ಮೂಲಕ ಮಡಚಿರಿ. ಮೇಲ್ಭಾಗವನ್ನ ಮಡಚಿ ಪೆಂಗ್ವಿನಿನ ಕೊಕ್ಕು ತಯಾರಿಸಿರಿ.
3. ಮಧ್ಯದಲ್ಲಿನ ಮಡಿಕೆಯನ್ನು ಬಿಡಿಸಿದ ಬಳಿಕ, ಚಿತ್ರದಲ್ಲಿ ತೋರಿಸಿದಂತೆ ಕೆಳಭಾಗವನ್ನು ಮಡಚಿ ಕಾಲುಗಳನ್ನು ತಯಾರಿಸಿ.
4. ಕಣ್ಣನ್ನು ಬಿಡಿಸಿರಿ. ಬಣ್ಣ ಹಚ್ಚಿರಿ.

## 4. ಹೊಲಿಗೆಯಂತ್ರ

**ಸಾಮಗ್ರಿಗಳು** : ಚೆಂಡುಪೊಳೆ – 1, ಎಲೆ – 1, ಮಡಲಕಡ್ಡಿ 20ಸೆಂ.ಮೀನದ್ದು – 2, 30 ಸೆಂ.ಮೀನದ್ದು – 1, 15ಸೆಂ.ಮೀನದ್ದು – 1

**ತಯಾರಿಸುವ ರೀತಿ**

1. 30ಸೆಂ.ಮೀ ಉದ್ದವಿರುವ ಮಡಲಕಡ್ಡಿಯನ್ನು ಚಿತ್ರದಲ್ಲಿ ತೋರಿಸಿದಂತೆ ಮಡಚಿ, ಚೆಂಡುಪೊಳೆಯ ಮಧ್ಯದಲ್ಲಿ ಸಿಕ್ಕಿಸಿರಿ.

2. 15ಸೆಂ.ಮೀ ಉದ್ದವಿರುವ ಮಡಲಕಡ್ಡಿಯನ್ನು ಚಿತ್ರದಲ್ಲಿ ಕಾಣುವಂತೆ ಚೆಂಡುಪೊಳೆಯ ಮಧ್ಯದಲ್ಲಿ ಸಿಕ್ಕಿಸಿರಿ.

3. ಮಡಲಕಡ್ಡಿಯ ತುದಿಯಲ್ಲಿ ಎಲೆಯನ್ನು ಹಾಕಿರಿ. ಭಾಗಿಸಿಟ್ಟ ಮಡಲಕಡ್ಡಿಯ ಎಡೆಯಲ್ಲಿ 20ಸೆಂ.ಮೀ ಉದ್ದವಿರುವ 2 ಮಡಲಕಡ್ಡಿಗಳನ್ನು ಮಧ್ಯದ ಕಡ್ಡಿಯ ಮೇಲ್ಭಾಗದಿಂದ ಸಿಕ್ಕಿಸಿ ಇಡಿ.

3. 20ಸೆಂ.ಮೀ ಉದ್ದವಿರುವ 2 ಕಡ್ಡಿಗಳನ್ನು ಹಿಡಿದುಕೊಂಡು ಚೆಂಡುಪೊಳೆಯನ್ನು ತಿರುಗಿಸಿ ಹೊಲಿಗೆ ಯಂತ್ರ ಶಬ್ದ ಮಾಡಲು ಪ್ರಾರಂಭಿಸಿದೆಯಲ್ಲವೇ? ಎಲೆಯ ಮೇಲೆ ಹೊಲಿಗೆಯ ಗುರುತಾದುದನ್ನು ನೋಡಿರಿ.



## 5. ಟೊಪ್ಪಿ

**ಸಾಮಗ್ರಿಗಳು** : ಪೇಪರ್ ರಿಬ್ಬನ್, ದಪ್ಪ ಪೇಪರ್, ಕ್ರಯೋನ್

**ಉಪಕರಣಗಳು** : ಕತ್ತರಿ, ಅಂಟು

**ತಯಾರಿಸುವ ರೀತಿ**

1. ಮಕ್ಕಳ ತಲೆಯ ಅಳತೆಯಲ್ಲಿ ಬರುವಂತೆ ರಿಬ್ಬನನ್ನು ಉರುಟಾಗಿ ಅಂಟಿಸಿ
2. ದಪ್ಪ ಪೇಪರಿನಲ್ಲಿ ಕೈಯನ್ನು ಬಿಟ್ಟು ಮಕ್ಕಳ ಹಸ್ತದ ಹೊರಭಾಗಕ್ಕೆ ಗೆರೆ ಎಳೆಯಿರಿ. ಆಭಾಗವನ್ನು ಕತ್ತರಿಸಿ ತೆಗೆಯಿರಿ.
3. ಟೊಪ್ಪಿಗೂ ಹಸ್ತದ ಚಿತ್ರಕ್ಕೂ ಬಣ್ಣ ಹಚ್ಚಿರಿ.
4. ಕತ್ತರಿಸಿದ ಹಸ್ತದ ಚಿತ್ರವನ್ನು ಟೊಪ್ಪಿಯ ಎರಡು ಭಾಗಗಳಲ್ಲಿ ಅಂಟಿಸಿರಿ.



## 6. ಆಮೆ



**ಸಾಮಗ್ರಿಗಳು** : ಕಾರ್ಡ್‌ಬೋರ್ಡ್, , ಕ್ರಯೋನ್ಸ್,

**ಉಪಕರಣಗಳು** : ಕತ್ತರಿ, ಪೇಪರ್ ಕಟ್ಟರ್, ಅಂಟು

**ತಯಾರಿಸುವ ರೀತಿ**

- ಕಾರ್ಡ್‌ಬೋರ್ಡಿನಲ್ಲಿ ಆಮೆಯ ಶರೀರ (ದೀರ್ಘ ವೃತ್ತಾಕೃತಿಯಲ್ಲಿ ) 2. ಕಾಲು – 4, ತಲೆ – 1, ಬಾಲ – 1, ಕತ್ತರಿಸಿ ತೆಗೆದು ಬಣ್ಣ ಹಚ್ಚಿರಿ. ತಲೆಯಲ್ಲಿ ಕಣ್ಣು, ಬಾಯಿ



ಬಿಡಿಸುವುದು.

- ಆಮೆಯ ಶರೀರ ಭಾಗಕ್ಕೆ, ಕಾಲು, ತಲೆ, ಬಾಲಗಳನ್ನು ಬಿಡಿಸಿ ಅಂಟಿಸಿರಿ.

## ಆಕಾಶ ಬುಗರಿ

**ಸಾಮಗ್ರಿಗಳು** : ವಾರಪತ್ರಿಕೆಯ ರಕ್ಷಾಕವಚ, ಅಂಟು, ಕತ್ತರಿ

**ಉಪಕರಣಗಳು** : ಕತ್ತರಿ

**ತಯಾರಿಸುವ ರೀತಿ**

1. 15 ಸೆಂ.ಮೀ ಉದ್ದದ ಚೌಕಾಕಾರದ ಕಾಗದವನ್ನ ಕತ್ತರಿಸಿ ತೆಗೆಯಿರಿ.
2. ಕಾಗದವನ್ನು ಶಂಕುವಿನಾಕೃತಿಯಲ್ಲಿ ಸುತ್ತಿ ಬದಿಗಳನ್ನು ಅಂಟಿಸಿರಿ. ಶಂಕುವಿನ ಅಗಲ ಹೆಚ್ಚು ಇರುವ ಮೇಲ್ಭಾಗವನ್ನು ಕತ್ತರಿಸಿ ತೆಗೆಯಿರಿ.



3. ಮೇಲ್ಭಾಗದಲ್ಲಿ 5 ಸೆಂ.ಮೀ ಉದ್ದಕ್ಕೆ, 1 ಸೆಂ.ಮೀ ಎಡೆಬಿಟ್ಟು ಸಮಾಂತರವಾಗಿ ಕತ್ತರಿಸಿ.
4. ಕತ್ತರಿಸಿದ ಭಾಗವನ್ನು ಚಿತ್ರದಲ್ಲಿ ತೋರಿಸಿದಂತೆ ಹೊರಭಾಗಕ್ಕೆ ಮಡಚಿರಿ.
5. ಆಕಾಶ ಬುಗರಿಯನ್ನು ಮೇಲಕ್ಕೆ ಎಸೆದು ನೋಡಿರಿ.

## ಕಾಗದದ ಗಿರಿಗಿಟಿ

**ಸಾಮಗ್ರಿಗಳು** : ಕಾಗದ, ಅಂಟು, ಕತ್ತರಿ

**ಉಪಕರಣಗಳು** : ಕತ್ತರಿ

**ತಯಾರಿಸುವ ರೀತಿ**

1. 15 ಸೆಂ.ಮೀ ಉದ್ದ, 1.5 ಸೆಂ.ಮೀ ಅಗಲವಿರುವ ಮೂರು ಪೇಪರ್ ರಿಬ್ಬನ್‌ಗಳನ್ನು ತೆಗೆದುಕೊಳ್ಳಿರಿ.
2. 3 ರಿಬ್ಬನ್‌ಗಳನ್ನು ಅರ್ಧದಿಂದ ಮಡಚಿರಿ
3. ಪ್ರತಿಯೊಂದು ರಿಬ್ಬನಿನ ಎದುರು ಭಾಗವನ್ನು ಹತ್ತಿರದ ರಿಬ್ಬನಿನ ಮಡಚಿದ ಭಾಗದ ಮೂಲಕ ಒಳಭಾಗಕ್ಕೆ ಎಳೆಯಿರಿ.



4. ಮಧ್ಯಭಾಗದಲ್ಲಿ ತ್ರಿಕೋನಾಕಾರದ ಶಂಕುವಿನಾಕಾರದ ಆಗುವರೆಗೂ ನಿಧಾನವಾಗಿ ಎಳೆದು ಗಟ್ಟಿಗೊಳಿಸಿರಿ.
5. ಇನ್ನೊಂದು ಕಾಗದದ ತುಂಡು ತೆಗೆದುಕೊಂಡು ಬೆರಳು ಹೋಗುವ ರೀತಿಯ ಶಂಕುವಿನಾಕಾರ ತಯಾರಿಸಿ ಅಂಟಿಸಿರಿ.
6. ಶಂಕುವಿನಾಕಾರದಲ್ಲಿ ಬೆರಳು ಹಾಕಿ ಅದರಲ್ಲಿ ಕಾಗದದ ಗಿರಿಗಿಟಿಯನ್ನು ಇಟ್ಟು ಓಡಿನೋಡಿರಿ.

## ಕಾಗದಿಂದ ಒಂದು ಗಿರಿಗಿಟಿ

**ಸಾಮಗ್ರಿಗಳು** : ಬೇಕಾದ ಸಾಮಾಗ್ರಿಗಳು : ಚೌಕಾಕಾರದ ಕಾಗದ, ಗುಂಡುಸೂಜಿ, ರಬ್ಬರಿರುವ ಪೆನ್ಸಿಲು, ಅಂಟು.

**ಉಪಕರಣಗಳು** : ಕತ್ತರಿ

**ತಯಾರಿಸುವ ರೀತಿ** :

1. ಚೌಕಾಕಾರದ ಕಾಗದವನ್ನು ಮೂಲೆಯಿಂದ ಮೂಲೆಗೆ ಮಡಚಿರಿ.
2. ಮೂಲೆಭಾಗದಿಂದ ಕಾಗದದ ಮಧ್ಯಬಿಂದುವಿನ ಕಡೆ ಅರ್ಧದವರೆಗೆ ಕತ್ತರಿಸಿರಿ.



3. ಪ್ರತಿಯೊಂದು ತ್ರಿಕೋನದ ಮೂಲೆಭಾಗದಿಂದ ಹಿಡಿದು ಮಧ್ಯಬಿಂದುವಿನವರೆಗೆ ಮಡಚಿ ಪರಸ್ಪರ ಅಂಟಿಸಿರಿ.
4. ಗುಂಡುಸೂಜಿಯನ್ನು ಮುಂದಿನಿಂದ ಹಿಂಬದಿಗೆ ಮಧ್ಯಬಿಂದುವಿನ ಮೂಲಕ ಚುಚ್ಚಿರಿ.
5. ಗುಂಡುಸೂಜಿಯ ಚೂಪಾದ ಭಾಗವನ್ನು ಪೆನ್ಸಿಲಿನ ರಬ್ಬರಿಗೆ ಚುಚ್ಚಿ ಇಡಿರಿ.

ಪೆನ್ಸಿಲನ್ನು ಹಿಡಿದು ಓಡಿನೋಡಿರಿ.

## ಗಾಳಿಯಲ್ಲಿ ತಿರುಗುವ ಮೀನು

**ಸಾಮಗ್ರಿಗಳು** : 20 ಸೆಂ.ಮೀ ಉದ್ದ ಕಾಗದ ರಿಬ್ಬನ್, ಸ್ಕೆಚ್‌ಪೆನ್ – 1

**ಉಪಕರಣಗಳು** : ಕತ್ತರಿ

**ತಯಾರಿಸುವ ರೀತಿ**

1. 20 ಸೆಂ.ಮೀ ಉದ್ದವೂ, 3 ಸೆಂ.ಮೀ ಅಗಲವೂ ಇರುವ ಕಾಗದದ ರಿಬ್ಬನ್ ತೆಗೆದುಕೊಳ್ಳಿರಿ.



2. ಕಾಗದದ ರಿಬ್ಬನಿನ ಪ್ರತಿಯೊಂದು ಭಾಗದಲ್ಲಿ ಚಿತ್ರದಲ್ಲಿ ತೋರಿಸಿದಂತೆ 5 ಸೆಂ.ಮೀ ದೂರದಲ್ಲಿ 2 ಕಡೆಗಳಲ್ಲಿ ಹರಿಯಿರಿ.

3. ಹರಿದ ಕಾಗದವನ್ನು ಮಡಚಿ ಒಂದು ಹರಿದ ಭಾಗದ ಒಳಗೆ ಇನ್ನೊಂದನ್ನು ಜೋಡಿಸಿ ಇಡಿರಿ.

4. ಬಾಯಿ, ಕಣ್ಣುಗಳನ್ನು ಸ್ಕೆಚ್‌ಪೆನ್ನಿನಿಂದ ಚಿತ್ರಿಸಿ ಮೀನು ತಯಾರಾಯಿತು.

5. ಮೀನನ್ನು ಕೈಯಲ್ಲಿ ತಲೆಯ ಮೇಲೆ ಎತ್ತರಕ್ಕೆ ಕೆಳಕ್ಕೆ ಬಿಡಿರಿ.

## ಹೆಲಿಕಾಫ್ಟರ್

**ಸಾಮಾಗ್ರಿಗಳು** : 10 x 3 ಸೆಂ.ಮೀ ಕಾಗದ ರಿಬ್ಬನ್, ಕತ್ತರಿ

**ಉಪಕರಣಗಳು** : ಕತ್ತರಿ

**ತಯಾರಿಸುವ ರೀತಿ**

1. 10 ಸೆಂ.ಮೀ ಉದ್ದವೂ, 3 ಸೆಂ.ಮೀ ಅಗಲವೂ ಇರುವ ಒಂದು ಕಾಗದದ ರಿಬ್ಬನ್ ತೆಗೆದುಕೊಳ್ಳಿರಿ.

2 ರಿಬ್ಬನನ್ನು ಮಧ್ಯದಿಂದ ಮಡಚಿರಿ.

3. ಮಧ್ಯಭಾಗದಲ್ಲಿ ಉದ್ದಕ್ಕೆ ಬಿಡಿಸಿದ ಭಾಗದ ಮೂಲಕ ಕತ್ತರಿಯಿಂದ ಅರ್ಧದವರೆಗೆ ಕತ್ತರಿಸಿರಿ.

4. ಕಾಗದವನ್ನು ಬಿಡಿಸಿ ನೇರಕ್ಕೆ ಬಿಟ್ಟಾಗ, ಕೆಳಗಿನ ಭಾಗದಲ್ಲಿ ಎರಡು ಬದಿಗಳೂ ಒಳಗೆ ಬರುವ ರೀತಿಯಲ್ಲಿ ಮಡಚಿರಿ. ಕಾಗದವು ಒಂದು ಕ್ರಿಕೆಟ್ ಬ್ಯಾಟಿನ ರೀತಿಯಲ್ಲಾಗುವುದು.

5. ಮಡಚಿದ ಕೆಳಗಿನ ಬದಿಗಳನ್ನು ಸೇರಿಸಿ ಸಣ್ಣ ಸಣ್ಣ ಎರಡು ಮೂರು ಮಡಚುವಿಕೆಗಳನ್ನು ಮೇಲ್ಭಾಗದತ್ತ ಮಡಚಿರಿ. ಕತ್ತರಿಯಿಂದ ಅಗಲವಿರುವ ಭಾಗದ ಮೂಲಕ ಮಡಚಿರುವ ಭಾಗದವರೆಗೆ ಕತ್ತರಿಸಿರಿ. ಬ್ಯಾಟಿನ ಕೈಯಿಂದ 1 ಸೆಂ.ಮೀ ಮೇಲಿನವರೆಗೆ ಕತ್ತರಿಸಿರಿ.

6. ಕತ್ತರಿಸಿದ ಭಾಗವನ್ನು ಎರಡು ಭಾಗಗಳಲ್ಲಿಯೂ ಮಡಚಿ "T" ಆಕೃತಿ ತಯಾರಿಸಿರಿ. ಹೆಲಿಕಾಫ್ಟರ್ ತಯಾರಾಯಿತು.

## ಕಾಗದದ ಪೀಪಿ

**ಸಾಮಾಗ್ರಿಗಳು** : 10x5 ಸೆಂ.ಮೀ. ರಿನ ಕಾಗದ

**ಉಪಕರಣಗಳು** : ಕತ್ತರಿ

**ತಯಾರಿಸುವ ರೀತಿ**

1. ಸೆಂ.ಮೀ. ಉದ್ದವೂ, 5 ಸೆಂಟಿಮೀಟರ್ ಅಗಲವೂ ಇರುವ ಒಂದು ಕಾಗದವನ್ನು ಅರ್ಧಕ್ಕೆ ಮಡಚಿರಿ.

2. ಮಡಚಿದ ಕಾಗದದ ಮಧ್ಯದಲ್ಲಿ ಕತ್ತರಿಯಿಂದ ಒಂದು ವೃತ್ತಾಕಾರದಲ್ಲಿ ಕತ್ತರಿಸಿ ತೆಗೆಯಿರಿ.

3. ಕಾಗದದ ತೆರೆದ ಎರಡು ಭಾಗಗಳನ್ನು ಹೊರಕ್ಕೆ ಮಡಚಿರಿ.

4. ಕಾಗದದ ಪೀಪಿಯನ್ನು ಕೈಬೆರಳುಗಳ ಎಡೆಯಲ್ಲಿ ಹಿಡಿದು ಬಾಯಿಯಿಂದ ಗಟ್ಟಿಯಾಗಿ ಊದಿರಿ.

## ಹಾರುವ ಮಿಡತೆ

**ಸಾಮಾಗ್ರಿಗಳು** : 10x5 ಸೆಂ.ಮೀ.ನ ಕಾಗದ, ಕತ್ತರಿ





**ಉಪಕರಣಗಳು** : ಕತ್ತರಿ

**ತಯಾರಿಸುವ ರೀತಿ**

1. 10 ಸೆಂ.ಮೀ ಉದ್ದವಿರುವ ಚೌಕಾಕಾರದ ಕಾಗದವನ್ನು ಮೂಲೆಯಿಂದ ಮಡಚಿರಿ.
2. ಕಾಗದದ ಹೊರಭಾಗದಲ್ಲಿ ಮಿಡತೆಯ ಚಿತ್ರ ಬಿಡಿಸಿರಿ.
3. ಕಾಗದದ ಮಿಡತೆಯನ್ನು ನೆಲದಲ್ಲಿ ಇಡಿರಿ. ನೆಲಕ್ಕೆ ತಾಗುವ ಮೂಲೆಯನ್ನು ಸ್ವಲ್ಪ ಎತ್ತಿ ಇಡಿರಿ. ಹಿಂದಿನಿಂದ ಮೆಲ್ಲಗೆ ಗಾಳಿ ಊದಿರಿ. ಮಿಡತೆ ಹಾರಿ ಮುಂದುವರಿಯುವುದನ್ನು ಕಾಣಬಹುದಲ್ಲವೇ?

## ಪೇಪರ್ ಪಟಾಕಿ

**ಸಾಮಗ್ರಿಗಳು** : 20 x 30 ಸೆಂ.ಮೀ ಕಾಗದ, ಸ್ಕೇಲ್, ಪೆನ್ಸಿಲ್

**ತಯಾರಿಸುವ ರೀತಿ**

1. 20 ಸೆಂ.ಮೀ ಉದ್ದವೂ 30 ಸೆಂ.ಮೀ ಅಗಲವೂ ಇರುವ ಕಾಗದವನ್ನು ತೆಗೆದುಕೊಳ್ಳಿರಿ. ಅದರ ಅಗಲವಿರುವ ಭಾಗದಲ್ಲಿ 6 ಸಮಭಾಗಗಳನ್ನು ಎಳೆಯಿರಿ. ಅದರಲ್ಲಿ 4 ಭಾಗಗಳನ್ನು ಒಂದರ ಮೇಲೆ ಒಂದರಂತೆ ಮಡಚಿರಿ.
2. ಮಡಚಿರಿ ಭಾಗ ಹೊರಗೆ ಬರುವಂತೆ ಕಾಗದವನ್ನು ಅರ್ಧಕ್ಕೆ ಮಡಚಿರಿ.
3. ಬಲಭಾಗದ ಕೆಳ ಮೂಲೆಯನ್ನು ಒಳಗೆ ತೆಗೆದುಕೊಂಡು ಹೋಗಿರಿ. ಆಗ ಎರಡು ಶಂಕುವಿನಾಕಾರಗಳು ಕಾಣುವುವು.
4. ಎಡಭಾಗದ ಕೆಳಗೆ ಇರುವ ಮೂಲೆಗಳನ್ನು ಹೆಬ್ಬೆರಳು ಮತ್ತು ತೋರುಬೆರಳುಗಳ ಎಡೆಯಲ್ಲಿ ಹಿಡಿದು ಗಟ್ಟಿಯಾಗಿ ಬೀಸಿರಿ.
5. ಟಪ್ ಶಬ್ದದೊಂದಿಗೆ ಮೂಲೆಗಳು ಮಾಯ ವಾಗುವುವು.



## ಹಾಸಿಗೆ

**ಸಾಮಾಗ್ರಿಗಳು** : ಚೌಕಾಕಾರದ ಕಾಗದ, ಕತ್ತರಿ

**ಉಪಕರಣಗಳು** : ಕತ್ತರಿ

**ತಯಾರಿಸುವ ವಿಧಾನ**

1. ಚೌಕಾಕಾರದ ಕಾಗದದ ಎರಡು ಭಾಗಗಳನ್ನು ಸಮಾನವಾಗಿ ಒಳಭಾಗಕ್ಕೆ ಮಡಚಿರಿ.
2. ಮೇಲ್ಭಾಗದಿಂದ 2/3 ಸೆಂ.ಮೀ ಅಳತೆಯಲ್ಲಿ ಕೆಳಗೆ ಮುಖವಾಗಿ ಮಡಚಿ ಬಳಿಕ ಬಿಡಿಸಿರಿ.
3. ಮೇಲಿನ ಎರಡು ಭಾಗಗಳಲ್ಲಿಯೂ ಉಂಟಾದ ಚೌಕಗಳ ಪ್ರತಿಯೊಂದು ಭಾಗವನ್ನು ಮೇಲಿನಿಂದ ಕೆಳಕ್ಕೆ ಕತ್ತರಿಸಿರಿ.
4. ಕತ್ತರಿಸಿದ ಭಾಗವನ್ನು ಹಿಂಭಾಗಕ್ಕೆ ಮಡಚಿರಿ.
5. ಚಿತ್ರದಲ್ಲಿ ತೋರಿಸಿದಂತೆ ಎರಡು ಭಾಗಗಳ ಹಿಂದಕ್ಕೆ ಮಡಚಿರಿ.
6. ಮಡಚಿದ ಭಾಗಗಳನ್ನು ಕೆಳಗೆಯೂ, ಮೇಲಿನ ಭಾಗಗಳನ್ನು ಮೇಲಕ್ಕೆತ್ತಿಯೂ ಮಡಚಿ ಇಡಿರಿ. ಹಾಸಿಗೆ ತಯಾರಾಯಿತು.

## ಕಿರೀಟ

**ಸಾಮಾಗ್ರಿಗಳು** : ಚೌಕಾಕಾರದ ಕಾಗದ, ಅಂಟು

**ತಯಾರಿಸುವ ವಿಧಾನ**

1. ಚೌಕಾಕಾರದ ಕಾಗದವನ್ನು ಮೂಲೆಯಿಂದ ಮೂಲೆಗೆ ಅರ್ಧಕ್ಕೆ ಮಡಚಿರಿ.
2. ಪುನಃ ಅರ್ಧದವರೆಗೆ ಮಡಚಿ ಮಧ್ಯಭಾಗದಲ್ಲಿ ಗೆರೆ ಬರುವಂತೆ ಮಾಡಿರಿ.

3 ಎರಡೂ ಭಾಗಗಳಲ್ಲಿ ಮಧ್ಯಭಾಗದ ಗೆರೆ ದಾಟುವವರೆಗೆ ಮಡಚಿರಿ

4. ಹಿಂಭಾಗದ ಎರಡು ಮೂಲೆಗಳನ್ನು ಮೇಲಕ್ಕೆ ಬರುವಮತೆ ಮಡಚಿರಿ. (ಬೇಕಿದ್ದರೆ ಅಂಟು ಹಾಕಿ ಅಂಟಿಸಬಹುದು)

5. ಹಿಂಭಾಗ ಬಿಡಿಸಿದರೆ ಕಿರೀಟ ತಯಾರು

## ನಾಯಿಮರಿ

**ಸಾಮಗ್ರಿಗಳು** : ಚೌಕಾಕಾರದ ಕಾಗದ

**ತಯಾರಿಸುವ ವಿಧಾನ**

1. ಚೌಕಾಕಾರದ ಕಾಗದವನ್ನು ಮೂಲೆಯಿಂದ ಮೂಲೆಗೆ ಮಡಚಿರಿ.
2. ಕೆಳಗೆ ತೆರೆದಿರುವ ಭಾಗದಿಂದ ಒಂದು ಕಾಗದವನ್ನು ಮೇಲಕ್ಕೆ ಮಡಚಿ ಅದರ ಅರ್ಧ ಮುಂದಕ್ಕೆ ಮಡಚಿಡಿರಿ.
3. ಕೆಳಗಿನ ಭಾಗದಲ್ಲಿರುವ ಕಾಗದವನ್ನು ಹಿಂಭಾಗಕ್ಕೆ ಮಡಚಿ ಇಡಿ.
4. ಚೌಕಾಕಾರದ ಕಾಗದವನ್ನು ಮೂಲೆಗಳಿಂದ ಅರ್ಧಕ್ಕೆ ಮಡಚಿ.
5. ಮುಖದಲ್ಲಿ ಕಣ್ಣನ್ನು ಚಿತ್ರಿಸಿದರೆ ನಾಯಿ ಮರಿ ತಯಾರಾಯಿತು.

## ದೋಣಿ

**ಸಾಮಗ್ರಿಗಳು** : ಚೌಕಾಕಾರದ ಕಾಗದ, ಅಂಚು, ಕಾಗದ

**ಉಪಕರಣಗಳು** : ಕತ್ತರಿ/ಪೇಪರ್ ಕಟ್ಟರ್

**ತಯಾರಿಸವ ವಿಧಾನ**

1. ಚೌಕಾಕಾರದ ಕಾಗದವನ್ನು ಮೂಲೆಯಿಂದ ಮೂಲೆಗೆ ಅರ್ಧದವರಿಗೆ ಮಡಚಿರಿ. ಎರಡಾಗಿ ತುಂಡರಿಸಿರಿ.
2. ಒಂದು ಕಾಗದ ತೆಗೆದುಕೊಂಡು ಮೂಲೆಗಳಿಂದ ಸ್ವಲ್ಪ ಹೊರಗೆ ಬರುವ ರೀತಿಯಲ್ಲಿ ಮೇಲಕ್ಕೆ ಮಡಚಿರಿ.
3. ಕವಚಿ ಹಾಕಿದ ರೀತಿಯಲ್ಲಿ ಒಂದು ಕಾಗದದ ಮೇಲೆ ಅಂಟಿಸಿರಿ. ದೋಣಿಗೆ ಬಣ್ಣ ಹಚ್ಚಿರಿ.

## ಮೀನು

**ಸಾಮಗ್ರಿಗಳು** : 3 ಚೌಕಾಕಾರದ ಕಾಗದ, ಅಂಟು ಕಾಗದ

**ಉಪಕರಣಗಳು** : ಕತ್ತರಿ/ಪೇಪರ್ ಕಟ್ಟರ್

**ತಯಾರಿಸವ ವಿಧಾನ**

1. ಚೌಕಾಕಾರದ ಕಾಗದವನ್ನು ಮೂಲೆಯಿಂದ ಮೂಲೆಗೆ ಮಡಚಿ ಅದನ್ನು ಅರ್ಧದಿಂದ ಕತ್ತರಿಸಿರಿ.
2. ಅದರಿಂದ ಒಂದು ತ್ರಿಕೋನವನ್ನು ತೆಗೆದುಕೊಂಡು ತ್ರಿಕೋನಗಳನ್ನು ಅರ್ಧವಾಗಿ ಕತ್ತರಿಸಿ ತೆಗೆಯಿರಿ.
3. ದೊಡ್ಡ ತ್ರಿಕೋನದ ಹಿಂಭಾಗದಲ್ಲಿ ಸಣ್ಣ ತ್ರಿಕೋನವನ್ನಿಟ್ಟು ಅಂಟಿಸಿರಿ.
4. ಕಣ್ಣು, ಶರೀರ ಬಾಲಗಳನ್ನು ಚಿತ್ರಿಸಿ ಸೇರಿಸಿ ಬಣ್ಣ ಹಚ್ಚಿರಿ.
5. ಸಣ್ಣ ತ್ರಿಕೋನವನ್ನು ಅರ್ಧಕ್ಕೆ ಮಡಚಿ ಸಣ್ಣ ತುಂಡನ್ನು ಕತ್ತರಿಸಿ ತೆಗೆಯಿರಿ.

## ಸುಂದರಿ ಮೀನು

**ಸಾಮಗ್ರಿಗಳು** : ಕಾಗದ/ಸಣ್ಣ ಪೇಪರ್ ಪ್ಲೇಟ್ ಅಂಟು

**ಉಪಕರಣಗಳು** : ಬಣ್ಣ, ಕತ್ತರಿ

**ತಯಾರಿಸವ ವಿಧಾನ**



1. ವತ್ತಾಕಾರದ ಒಂದು ಕಾಗದದಿಂದ ತ್ರಿಕೋನಕಾರದ ಸಣ್ಣ ಭಾಗವನ್ನು ಕತ್ತರಿಸಿ ತೆಗೆಯಿರಿ.
2. ಕತ್ತರಿಸಿ ತೆಗೆದ ಭಾಗವನ್ನು ನೇರ ಹಿಂಭಾಗಕ್ಕೆ ಅಂಟಿಸಿರಿ.
3. ಕಣ್ಣು, ಶರೀರವನ್ನು ಚಿತ್ರಿಸಿರಿ. ಮೀನು ತಯಾರು

## ಮೊಲದ ಮುಖವಾಡ

**ಸಾಮಗ್ರಿಗಳು** : ಕಾಗದ/ಸಣ್ಣ ಪೇಪರ್ ಪ್ಲೇಟ್, ಹಗ್ಗ, ಬಣ್ಣ

**ಉಪಕರಣಗಳು** : ಕತ್ತರಿ



**ತಯಾರಿಸವ ವಿಧಾನ**

1. ಕಾಗದದ ಎರಡು ವೃತ್ತಗಳನ್ನು ತೆಗೆದುಕೊಂಡು ಒಂದನ್ನು ಕತ್ತರಿಸಿ ತೆಗೆಯುವುದು.
2 ಎರಡನೆಯ ವೃತ್ತವನ್ನು ನೇರ ಅರ್ಧಕ್ಕೆ ಕತ್ತರಿಸುವುದು.
3. ವೃತ್ತದ ಮೇಲ್ಭಾಗದಲ್ಲಿ ಅರ್ಧವೃತ್ತಗಳನ್ನು ಕಿವಿಗಳಂತೆ ಅಂಟಿಸುವುದು.
3. ಎರಡು ಭಾಗಗಳಲ್ಲಿ ತೂತುಗಳನ್ನು ಮಾಡುವುದು.
4. ಕಣ್ಣು ಮೂಗುಗಳನ್ನು ಚಿತ್ರಿಸಿ ಸೇರಿಸುವುದು.

## ಬೀಸಣಿಗೆ

**ಸಾಮಗ್ರಿಗಳು** : ಕಾಗದ, ಅಂಟು, ಅಗಲವಾದ ಕಡ್ಡಿ

**ಉಪಕರಣ** : ಕತ್ತರಿ

1. ದೊಡ್ಡ ಹಾಗೂ ಚೌಕಾಕಾರದ ಕಾಗದವನ್ನು ಒಂದು ಸೆ. ಮೀ. ಅಳತೆಯಲ್ಲಿ ಹಿಂದೆ ಮುಂದಾಗಿ Zig Zag ಮಡಚಿರಿ.
2 ಮಡಚಿದ ಭಾಗವನ್ನು ಸೇರಿಸಿ ಇಟ್ಟು ಅರ್ಧದಿಂದ ಪುನಃ ಮಡಚಿರಿ.
3. ಮಡಚಿದ ಭಾಗಕ್ಕೆ ಅಂಟು ಹಾಕಿ ಅಂಟಿಸಿರಿ.
4. ಹೊರಭಾಗವನ್ನು ಬಿಡಿಸಿಟ್ಟು ಎಡೆಯಲ್ಲಿ ಕಡ್ಡಿ ಇಟ್ಟು ಎರಡು ಬದಿಗಳಲ್ಲೂ ಅಂಟಿಸಿರಿ. ಬೀಸಣಿಗೆ ತಯಾರಾಯಿತು.



## ಕಾಗದದ ಹೂವು

**ಸಾಮಗ್ರಿಗಳು** : ವಾರಪತ್ರಿಕೆಯ ಕಾಗದ, ಅಂಟು, ಪೆನ್ಸಿಲ್/ಕೋಲು

**ಉಪಕರಣಗಳು** : ಕತ್ತರಿ

**ತಯಾರಿಸುವ ವಿಧಾನ** :

1. ವಾರ ಪತ್ರಿಕೆಯ ಬಣ್ಣದ ಪುಟವನ್ನು ಅರ್ಧಕ್ಕೆ ಕತ್ತರಿಸಿರಿ.
2. ಒಂದು ಭಾಗದಲ್ಲಿ ನೇರಕ್ಕೆ ಗೆರೆಗಳಾಗಿ ಕತ್ತರಿಸಿರಿ.
3 ಕಾಗದದ ಅಡಿಭಾಗದಲ್ಲಿ ಅಂಟು ಹಾಕಿರಿ. ಪೆನ್ಸಿಲ್ ಅಥವಾ ಕಡ್ಡಿಯನ್ನಿಟ್ಟು ಸುರುಳಿಯಂತೆ ಸುತ್ತಿರಿ.
4. ಹೂವಿನ ಎಸಲುಗಳಂತೆ ಪೇಪರನ್ನು ಬಿಡಿಸಿರಿ.



## ಕೈಪಿಡಿಗಾಗಿ ಉಪಯೋಗಿಸಿದ ಆಕರ ಸಾಮಗ್ರಿಗಳು

- ಪ್ರೀಸ್ಕೂಲ್ ಪಠ್ಯಕ್ರಮ
- ಪ್ರೀಪ್ರೈಮರಿ ಮಾರ್ಗರೇಖೆ
- ತಜ್ಞ ಸಮಿತಿಗಳ ವರದಿ
- NCF 2005
- ರಾಷ್ಟ್ರೀಯ ECCE Policy 2013
- ವಿಷಯ ಪಟ್ಟಿ ICDS
- ಕಾಮನಬಿಲ್ಲು (SSA KASARAGOD)
- ಶೈಶವ, ಕೌಮಾರ್ಯ, ಮಾನಸಿಕ, ಆರೋಗ್ಯ ಸಮಸ್ಯೆಗಳು ಮತ್ತು ಸಮೀಪನಗಳು – ಡಾ. ಸಯಪ್ರಕಾಶ್ ಆರ್. (ಚಿಂತ ಪ್ರಕಾಶನ)
- ಚೈಲ್ ಡೆವಲಪ್‌ಮೆಂಟ್ – LAURA E Bert
- ಮೊದಲ ಶಿಶು ವಿದ್ಯಾಭ್ಯಾಸ ಚಟುವಟಿಕಾ ಸಹಾಯಿ (DPEP)
- ಆಟವೂ ಕೆಲಸವೂ (ಕೇರಳ ವಿಜ್ಞಾನ ಸಾಹಿತ್ಯ ಪರಿಷತ್ತು)
- ಕಲಿಬಂಡಿ
- ತಾಲೋಲ
- ಅಂಗಣ ಪೂ ಮಯ (ಅಂಗನವಾಡಿ ಮಕ್ಕಳ ಚಟುವಟಿಕಾ ಪುಸ್ತಕ)
- ಬಾಲಮಾನಪತ್ರಿಕೆಗಳು / ಪ್ರಕಟಣೆಗಳು

## ಅಧ್ಯಾಪಕರಿಗೆ ಪ್ರಯೋಜನಕಾರಿಯಾದ ಆಕರ ಗ್ರಂಥಗಳು (4+)

1. ಕಾಡಿನ ಕಥೆಗಳು - ನವಕರ್ನಾಟಕ ಕಿರಿಯರ ಕಥಾಮಾಲೆ
2. ಜನಪ್ರಿಯ ಶಿಶುಗೀತೆಗಳು - ವೈ.ಎಸ್. ಕೃಷ್ಣಮೂರ್ತಿ
3. ಮುದ್ದು ಮಕ್ಕಳ ಕಥೆಗಳು - ಬಸವ ಪ್ರಕಾಶನ ಗದಗ
4. ಮಕ್ಕಳ ನೀತಿಕಥೆಗಳು - ನವಭಾರತ್ ಪಬ್ಲಿಕೇಷನ್, ಬೆಂಗಳೂರು
5. ನಾನಿಂದು ಯಾವ ಬಟ್ಟೆ ಧರಿಸಲಿ - ನತಾಶ ಶರ್ಮ
6. ನಾವೆಲ್ಲರೂ ಪ್ರಾಣಿಗಳು - ಮಾಧವ ಚವಾಣ್, ಮೀರಾ ತೆಂಡೂಲ್ಕರ್
7. ಆಹಾ! ಎಷ್ಟೊಂದು ಬಾಳೆಹಣ್ಣುಗಳು - ನೋನಿ
8. ಒಂದು ಸುಂದರ ಮರ - ಉಷಾರಾಣಿ
9. ಗುಬ್ಬಿ ಮತ್ತು ಹಣ್ಣು - ವೆಂಕಟ್ರಮಣ ಗೌಡ
10. ಬಿದರು ಗೊಂಬೆಗಳ ಮೆರವಣಿಗೆ - ಶಮೀಮ್ ಪದಮ್ ಸಿ.
11. ಬಣ್ಣದ ಮೀನು - ಜಯಶ್ರೀ ದೇಶಪಾಂಡೆ
12. ದೊಡ್ಡಮ ಹೇಳಿದ ಕಥೆಗಳು - ಸಿ. ಮಹೇಶ
13. ಚಂದಿರ ಮತ್ತು ಟೋಪಿ - ನೋನಿ
14. ಕುಹೂ ಕುಹೂ ಕೋಗಿಲೆ - ಜಯಶ್ರೀ ದೇಶಪಾಂಡೆ
15. ಈಸೋಪನ ಕಥೆಗಳು - ನಾರಾಯಣ ಅಯ್ಯಂಗಾರ್
16. ಮೊಲ ಮತ್ತು ಆಮೆ - ವೆಂಕಟ್ರಮಣ ಗೌಡ
17. ಕಾಗೆ ಬಳಗವೆ ಕರೆಯಿತು - ವೆಂಕಟ್ರಮಣ ಗೌಡ
18. ಮಕ್ಕಳ ನೀತಿಕಥೆಗಳು - ನಾರಾಯಣ ಅಯ್ಯಂಗಾರ್
19. ಶಾಲೆಗೆ ಬಂದ ತರಕಾರಿಗಳು - ವೆಂಕಟ್ರಮಣ ಗೌಡ
20. ವಿಕ್ರಮಾ ಬೇತಾಳ ಕತೆಗಳು - ಅಕ್ಷತ ಅಮೃತ

## ಅಧ್ಯಾಪಕರಿಗೆ ಪ್ರಯೋಜನಕಾರಿಯಾದ ಆಕರ ಗ್ರಂಥಗಳು (3+)

21. ಕಿರಿಯರ ಕಣಜ - ಸರೋಜಿನಿ ಆರ್. ಭಟ್
22. ಶಿಶುಗೀತೆಗಳು (ಚಂದಕ್ಕಿ ಮಾಮ) - ವೈ.ಎಸ್. ಕೃಷ್ಣಮೂರ್ತಿ
23. ಮಕ್ಕಳೊಡನೆ ಆಟಪಾಠ ಒಡನಾಟ - ಗಿರಿಮನೆ ಶಾಮರಾವ್
24. ಚಿಣ್ಣರ ಚಿಲುಮೆ - ಮಿತ್ರ ಕಲಾವೃಂದ ಮುಳಿಯಾರು
25. ಆನೆ ಬಂತು ಆನೆ – ಆರ್.ಪಿ. ಹೆಗ್ಗಡೆ - ತುಂತುರು (ವಾರಪತ್ರಿಕೆ)
26. ಗಿಳಿವಿಂಡು - ಬಾಲಮಂಗಳ
26. ಕಥೆ ಹೇಳುವೇ ಬಾ ಕಂದ - ಜಿ.ಆರ್. ಪರಿಮಳರಾವ್
28. ಪುಟಾಣಿ ಕಥೆಗಳು - ವಾಸನ್
29. ತುಂತುರು - ಮಧುರೆಕಾನನ ಗೋಪಾಲಕೃಷ್ಣ ಭಟ್
30. ಗುಬ್ಬಿಯ ಹಾಡು - ಮಧುರಕಾನನ ಗೋಪಾಲಕೃಷ್ಣ ಭಟ್
31. ತಟ್ಟು ಚಪ್ಪಾಳೆ ಪುಟ್ಟ ಮಗು - ಬೊಳುವಾರ್ ಅಹಮ್ಮದ್ ಕುಂಞ
32. ಕಾಡಿನ ಕಥೆಗಳು - ಸಹನಾ
33. ಕಂದ ಓದುವೆಯಾ – ಭಾಗ 2 - ಬಿ.ಕೆ. ತಿರುಮಲಮ್ಮ
34. ಮಜಾ ಗಣಿತ - ಅಳತೆಗಳು<br>ಮಾಲಾ ಕುಮಾರ್
35. ಮೋಜಿನ ಗಣಿತ -
36. ಮಜಾ ಗಣಿತ ಸಂಖ್ಯೆಗಳು - ಮಾಲಾ ಕುಮಾರ್
37. ಅಪ್ಪನ ಮೀಸೆ
38. ಬಣ್ಣ ಮತ್ತು ಆಕಾರ

## ಪುಸ್ತಕ – ಲೇಖಕರು

| | |
|---|---|
| ಬಾಲ (ಚಿತ್ರಕಥೆ) | – ದೀಪಾ ಬಲ್ಸಾವರ್ |
| ಕನ್ನಡಿ (ಚಿತ್ರಕಥೆ) | – ಸಂಧ್ಯಾರಾವ್ |
| 9 ರಿಂದ (ಚಿತ್ರಕಥೆ) | – ನಿವೇದಿತಾ ಸುಬ್ರಹ್ಮಣ್ಯನ್ |
| ಶ್‌ಶ್‌ಶ್ (ಚಿತ್ರಕಥೆ) | – ಸಂಧ್ಯಾರಾವ್ |
| ಉಪವಿಶತ್ ಕಥೆಗಳು | – ಸ್ವಾಮಿ ತತ್ವಾನಂದ |
| ಕಾಕ ನನಗೊಂದು ಕಥೆ ಹೇಳು | – ಆರ್.ವಿ. ಜೋಕೆರೆ |
| ಗಿಲಿ ಗಿಲಿ ಹೆಜ್ಜೆ (ಪದ್ಯ) | – ಹಾಲಾಡಿ ಮಾರುತಿರಾವ್ |
| ಹೇಳು ಪುಟ್ಟ ಹೇಳು (ಪದ್ಯ) | – ಜೀನಹಳ್ಳಿ ಸಿದ್ಧಲಿಂಗ ಪ್ರ.ಸಾ.ದಿ. |
| ನಾಟ್ಯ ಮಯೂರಿ (ಮಕ್ಕಳ ನೀತಿ ಕಥೆಗಳು) | – ಕೋವರ್ ಕೊಲ್ಲ ಕರುಣಾಕರ, ಎಂ.ಎ. |
| ಜಾತಕದ ಕತೆಗಳು | – ಕೆ. ಚಂದ್ರಶೇಖರ್ |
| ಪಂಚತಂತ್ರದ ಕಥೆಗಳು | – ಶರಣ್ಯ |
| ಎಲ್ಲಿ ಆ ಬೆಕ್ಕು | – ಮಂಜುಳ ಪದ್ಮನಾಭನ್ |
| ಆನೆ ಮತ್ತು ನಾಯಿ | – ಬದರಿ ನಾರಾಯಣ್ |
| ಅಕ್ಷರ ಕಜ್ಜಾಯ (ಪದ್ಯ) | – ಗಣಪತಿ ದಿವಾಣ. |
| ಸಕಲ | – SSA ಕಾಸರಗೋಡು |